ದಕ್ಷಿಣ ಕರ್ನಾಟಕದ

ಮಂಟೇಸ್ವಾಮಿ ಕಾವ್ಯ ಪರಂಪರೆ

ಪ್ರೊ. ಅಂಬಳಿಕೆ ಹಿರಿಯಣ್ಣ



ದಕ್ಷಿಣ ಕರ್ನಾಟಕದ ಮಂಟೇಸ್ವಾಮಿ ಕಾವ್ಯ ಪರಂಪರೆ

ಪ್ರೊ. ಅಂಬಳಿಕೆ ಹಿರಿಯಣ್ಣ

ವಿಸ್ತರಣೆ ಹಾಗೂ ಸಲಹಾ ಕೇಂದ್ರ

ಕರ್ನಾಟಕ ಜಾನಪದ ವಿಶ್ವವಿದ್ಯಾಲಯ

ಗೊಟಗೋಡಿ - ೫೮೧ ೧೯೭, ಶಿಗ್ಗಾವಿ ತಾಲೂಕು, ಹಾವೇರಿ ಜಿಲ್ಲೆ

ಚಲನಶೀಲವಾದುದು, ಗಾಳಿಯಂತೆ ನಮ್ಮ ಉಸಿರು ಎಂಬುದು ನಮ್ಮ ಅರಿವಿಗೆ ಬರಬೇಕಾಗಿದೆ. ಒಟ್ಟಿನಲ್ಲಿ ಜಾನಪದ ಎಂದರೆ ಎಲ್ಲವನ್ನೂ ಅಖಂಡವಾಗಿ ಅನುಸರಿಸಿದ ಒಂದು ಜೀವನ ವಿಧಾನ; ಜ್ಞಾನವನ್ನು ವಿಶೇಷ ರೀತಿಯಲ್ಲಿ ಹಂಚಿಕೊಂಡಿರುವ ಒಂದು ತವನಿಧಿಯಾಗಿದೆ. ಹಾಗಾಗಿ 'ಹೊನ್ನ ಬಿತ್ತೇವು ಹೊಲಕೆಲ್ಲ' ಎಂಬ ಧ್ಯೇಯ ವಾಕ್ಯವನ್ನು ತನ್ನ ಮೂಲಮಂತ್ರವಾಗಿಸಿಕೊಂಡು ವಿಶ್ವವಿದ್ಯಾಲಯ ಕಾರ್ಯೋನ್ಮುಖವಾಗಿದೆ. ಈವರೆಗೆ ಗುಪ್ತನಿಧಿಯಾಗಿದ್ದ ತವನಿಧಿ ಹೊನ್ನು ಈಗ ಜಗತ್ಪ್ರಕಟವಾಗಬೇಕಿದೆ. ವಿದ್ಯೆಯನ್ನು ಬೋಧಿಸುವುದು, ಸಂರಕ್ಷಿಸುವುದು ಅಷ್ಟೇ ಅಲ್ಲ ಹಂಚುವುದು–ಪ್ರಸರಣ ಮಾಡುವುದು ಜ್ಞಾನ ಕೇಂದ್ರವಾದ ವಿಶ್ವವಿದ್ಯಾಲಯದ ಮೂಲ ಗುರಿಯಾಗಿರಬೇಕು. ಈ ನಾಡು ಮೊದಲ ಬಾರಿಗೆ ವಿಶ್ವವಿದ್ಯಾಲಯದ ಮೂಲಕ ದೇಸೀ ಜ್ಞಾನಸಂಪತ್ತನ್ನು ಜಾಗತಿಕ ಪರಿಸರದಲ್ಲಿ ಬಿತ್ತುವ ಕಾರ್ಯಕ್ಕೆ ಕಂಕಣಬದ್ಧವಾಗಿದೆ. ಬಿತ್ತುವ, ಬೆಳೆಯುವ ಪ್ರಕ್ರಿಯೆ ಹೊಸಹುಟ್ಟಿಗೆ ನಾಂದಿ ಹಾಡುವುದಲ್ಲದೆ ಜ್ಞಾನಪರಂಪರೆಯ ಸತತ ಮುಂದುವರಿಕೆ ಸಂರಕ್ಷಣೆ, ಅಭಿವೃದ್ಧಿಯ ರೂಪವೂ ಆಗಿದೆ.

ಪಾರಂಪರಿಕ ಜ್ಞಾನ/ಸಮುದಾಯ ಜ್ಞಾನ ಮತ್ತು ಆಚರಣೆಯ ಮೂಲ ನೆಲೆಯಿಂದಲೇ ಈ ಹೊತ್ತಿನ ಜ್ಞಾನಪದ್ಧತಿ ಬೆಳೆದು ಬಂದಿದೆ. ಸಮುದಾಯ ಜ್ಞಾನದಿಂದ ತಂತ್ರಜ್ಞಾನ ಕೌಶಲಗಳ ಬಳಕೆಯನ್ವಯ ನಮ್ಮ ಗ್ರಾಮ ವ್ಯವಸ್ಥೆಯನ್ನು ಹೆಚ್ಚು ಉತ್ಪಾದಕವಾಗಿಯೂ, ಪ್ರಾಯೋಜಕವಾಗಿಯೂ, ದೃಢವಾಗಿಯೂ ರೂಢಿಸಬೇಕಾಗಿದೆ. ಆದರೆ ಇವೊತ್ತಿನ ಜಾಗತೀಕರಣ, ಉದಾರೀಕರಣ, ಖಾಸಗೀಕರಣಗಳ ಪ್ರಭಾವದಿಂದಾಗಿ ಜಾನಪದದಲ್ಲಿ ತೀವ್ರ ಸ್ವರೂಪದ ಬದಲಾವಣೆಗಳು ಆಗಿವೆ. ಅದರಲ್ಲೂ ಉದ್ಯಮಪತಿತ್ವ ತನಗೆ ಬೇಕಾದ ಜ್ಞಾನವನ್ನು ಮಾತ್ರ ಸೆಳೆದುಕೊಂಡು ಲಾಭದಾಯಕವಲ್ಲದ್ದನ್ನು ಹಿಂದಕ್ಕೆ ತಳ್ಳುತ್ತಲೇ ಬರುತ್ತಿದೆ. ಪಾರಂಪರಿಕ ಜ್ಞಾನ –ವಿಜ್ಞಾನ ಕುರಿತು ಅತ್ಯಂತ ವೈಜ್ಞಾನಿಕ ತಳಹದಿಯ ಮೇಲೆ ಹಾಗೂ ವರ್ತಮಾನಕ್ಕೆ ಹೊಂದಿಕೆಯಾಗುವ ಅಧ್ಯಯನ ಮಾದರಿಗಳನ್ನು ರೂಪಿಸಿಕೊಳ್ಳುವುದು ಆವಶ್ಯಕವಾಗಿದೆ. ಬದಲಾದ ಸನ್ನಿವೇಶದಲ್ಲಿ ಜಾನಪದ ಎನ್ನುವುದು ನಿತ್ಯದ ಬದುಕಿನ ಒಡಲಾಳದಿಂದಲೇ ರೂಪಾಂತರವನ್ನು ಹೊಂದುತ್ತಿರುವುದರಿಂದ ಜಾನಪದದಲ್ಲಿಯೇ ಅದಕ್ಕೆ ಪರ್ಯಾಯವಾಗಿ, ಪ್ರತಿರೋಧ ಒಡ್ಡುವ ಶಕ್ತಿ ಇರುವುದನ್ನು ಗುರುತಿಸಬೇಕಾಗಿದೆ. ಈ ನಿಟ್ಟಿನಲ್ಲಿ ನಮ್ಮದೇ ಜ್ಞಾನ, ಸಂಸ್ಕೃತಿಯನ್ನು ಆಧುನಿಕ ಸಂದರ್ಭಕ್ಕೆ ಅನ್ವಯಿಸಿಕೊಂಡು ನೋಡಲು ಯತ್ನಿಸಬೇಕಾಗಿದೆ. ಜನಪದರ ನಾಣ್ಣುಡಿಯಂತೆ, ಜ್ಞಾನ ಸಂಪಾದನೆಗೆ ಸಾಮಾನ್ಯವಾಗಿ ಅನುಸರಿಸುವ ಮಾರ್ಗಗಳು ಎರಡೇ; ಅವುಗಳಲ್ಲಿ ಒಂದು ದೇಶ ಸುತ್ತುವುದು, ಮತ್ತೊಂದು ಕೋಶ ಓದುವುದು. ಮನುಷ್ಯ ತನ್ನ ಜ್ಞಾನದಾಹವನ್ನು ನೀಗಿಸಿಕೊಳ್ಳಲು ಎರಡೂ ಮಾರ್ಗಗಳನ್ನು ಅನುಸರಿಸುವುದು ಅಗತ್ಯ. ಆದರೆ ಜ್ಞಾನ ಸಂಪಾದನೆಗೆ ಅವೆರೆಡರಲ್ಲಿ ಒಂದನ್ನಾದರೂ ಮಾಡಲೇಬೇಕು. ವಿಶ್ವವಿದ್ಯಾಲಯವು ಮೌಲಿಕವಾದ ಕೋಶಗಳನ್ನು ಪ್ರಕಟಿಸಿ ಓದುವಂತೆ ಪ್ರೇರೇಪಿಸುವ ಮೂಲಕ ಮಹತ್ವದ ಪ್ರಯತ್ನವನ್ನು ಮಾಡುತ್ತಿದೆ. ವಿಶ್ವವಿದ್ಯಾಲಯ ನೆಲಮೂಲವಾದ ಜನಪದ ಕಲೆ, ಸಾಹಿತ್ಯ, ಸಂಸ್ಕೃತಿ ಪರಂಪರೆಗಳ ಕುರಿತು ವಿಶೇಷ

ಅಧ್ಯಯನ, ಅಧ್ಯಾಪನ, ಸಂಶೋಧನೆ ಸೇರಿದಂತೆ ಹತ್ತು ಹಲವು ಕಾರ್ಯಯೋಜನೆಗಳನ್ನು ರೂಪಿಸಿಕೊಂಡು ತನ್ನ ಕಾರ್ಯಕ್ಷೇತ್ರವನ್ನು ವಿಸ್ತರಿಸಿಕೊಳ್ಳುತ್ತಲಿದೆ. ದೇಶೀ ಎನ್ನಬಹುದಾದ ಎಲ್ಲ ಜ್ಞಾನವನ್ನು ಸಂಗ್ರಹಿಸುವ, ನಿರಂತರವಾಗಿ ಚಲನಶೀಲಗೊಳ್ಳುವ ಜಾನಪದವನ್ನು ಅದೇ ನೆಲೆಯಿಂದಲೇ ಗ್ರಹಿಸಿ, ಹೊಸ ಹೊಸ ಜ್ಞಾನ ಶೋಧದೊಂದಿಗೆ ಜಾನಪದವನ್ನು ಇಟ್ಟು ನೋಡುವ ಮತ್ತೆ ಹೊಸದಾಗಿ ಕಟ್ಟಿಕೊಳ್ಳುವ ಕಾರ್ಯವನ್ನು ನೋಂಪಿಯಂತೆ ಮುನ್ನಡೆಸಿಕೊಂಡು ಹೋಗುವುದೇ ಜಾನಪದ ವಿಶ್ವವಿದ್ಯಾಲಯದ ಮೂಲ ಆಶಯವಾಗಿದೆ. ಅದರ ಭಾಗವಾಗಿ ವಿಶ್ವವಿದ್ಯಾಲಯವು ವಿಸ್ತರಣೆ ಹಾಗೂ ಸಲಹಾ ಕೇಂದ್ರದ ಮೂಲಕ ಜ್ಞಾನ ಪ್ರಸರಣಕ್ಕೆ ಟೊಂಕಕಟ್ಟಿ ನಿಂತಿದ್ದು, ಪುಸ್ತಕ ಪ್ರಕಟಣೆಗೆ ಮುಂದಾಗಿದೆ. ಈ ಮೂಲಕ ಅಂತರ್‌ಶಿಸ್ತೀಯ ಜ್ಞಾನಶೋಧದ ವಿನೂತನ ಮಾರ್ಗಗಳು ತೆರೆದುಕೊಳ್ಳಲು ವಿಶ್ವವಿದ್ಯಾಲಯ ನಾಂದಿ ಹಾಡಿದೆ.

ಒಂದು ದೇಶದ ಸಂಸ್ಕೃತಿಯನ್ನು ಸಮಗ್ರವಾಗಿ ಅರ್ಥಮಾಡಿಕೊಳ್ಳಬೇಕೆಂದರೆ ಪ್ರತಿಸಂಸ್ಕೃತಿ ಮತ್ತು ಪರ್ಯಾಯ ಸಂಸ್ಕೃತಿ ನೆಲೆಯ ಅಧ್ಯಯನ, ಸಂಶೋಧನೆಗಳು ಅಗತ್ಯವಾಗಿ ನಡೆಯಬೇಕಾಗಿದೆ. ಸಾಹಿತ್ಯದ ಅಧ್ಯಯನ ಕ್ಷೇತ್ರದಲ್ಲಿ ಶಿಷ್ಟ ಮಹಾಕಾವ್ಯಗಳನ್ನು ಮಾತ್ರ ಲಕ್ಷಿಸಿ ಅಧ್ಯಯನಗಳನ್ನು ನಡೆಸಿರುವುದು ಏಕಮುಖಿ ಕ್ರಮ ಎಂಬುದು ಈಗ ಸರ್ವರಿಗೂ ಮನವರಿಕೆ ಆಗಿದೆ. ಆದರೆ ಪ್ರಸಕ್ತ ದಿನಗಳಲ್ಲಿ ಈ ಏಕಮುಖಿ ಅಧ್ಯಯನದ ಪರಿಕಲ್ಪನೆಯು ಹಿಂದೆ ಸರಿದು, ಪ್ರಯೋಜನಾತ್ಮಕವಾಗಿರುವ ಸಂಸ್ಕೃತಿ ಅಧ್ಯಯನದ ಮಾದರಿಗಳು ಮುನ್ನೆಲೆಗೆ ಬಂದಿವೆ. ಈ ಹಿನ್ನೆಲೆಯಲ್ಲಿ ನೆಲಮೂಲಜ್ಞಾನ, ಪರಂಪರೆ, ಅನನ್ಯತೆಗಳನ್ನು ತನ್ನ ಒಡಲಲ್ಲಿರಿಸಿಕೊಂಡಿರುವ ಜನಪದ ಮಹಾಕಾವ್ಯಗಳು ಸಂಸ್ಕೃತಿಯ ಸಮಗ್ರತೆಯನ್ನು ಅರಿತುಕೊಳ್ಳಲು ಇರುವ ಮೂಲ ಆಕರಗಳು ಎಂಬ ನಿಲುವಿಗೆ ಬರಲಾಗಿದೆ. ಸಂಸ್ಕೃತಿಯನ್ನು ಶೋಧಿಸುವ ಮಾರ್ಗಕೃತಿಗಳಾಗಿ ಜನಪದ ಮಹಾಕಾವ್ಯಗಳು ಮುಖ್ಯವೆನಿಸುತ್ತವೆ. ಇವುಗಳ ಸಾಲಿನಲ್ಲಿ ಮಂಟೇಸ್ವಾಮಿ ಕಾವ್ಯ ಮಹತ್ವದ್ದು ಎನಿಸುತ್ತದೆ. ಮಂಟೇಸ್ವಾಮಿ ಕಾವ್ಯದ ವಿಶಿಷ್ಟತೆಯನ್ನು, ಸಾಂಸ್ಕೃತಿಕ ಅನನ್ಯತೆಯನ್ನು ಗುರುತಿಸುವ, ಶೋಧಿಸುವ ಅಧ್ಯಯನಗಳು ಕರ್ನಾಟಕದಲ್ಲಿ ಈವರೆಗೆ ಸಾಕಷ್ಟು ನಡೆದಿವೆ. ಆದರೂ ಮಂಟೇಸ್ವಾಮಿ ಪರಂಪರೆಯನ್ನು ಆಮೂಲಾಗ್ರವಾಗಿ ಕಂಡರಿಸುವ ಪ್ರಯತ್ನಗಳು ನಡೆದಿರುವುದು ವಿರಳ. ಈ ಕಾವ್ಯಪರಂಪರೆಯನ್ನು ಬಹುಮುಖೀ ದಾಖಲೀಕರಣ, ಪಠ್ಯೀಕರಣ ಮತ್ತು ವಿಶ್ಲೇಷಣೆಗೆ ಒಳಪಡಿಸುವ ಹಾಗೂ ಭಾಷಾಂತರಿಸುವ ಮಾದರಿ ಅಧ್ಯಯನಗಳು ಈವರೆವಿಗೂ ನಡೆಯದಿರುವುದು ಜಾನಪದ ಕ್ಷೇತ್ರದ ಬಹುದೊಡ್ಡ ಕೊರತೆಯೇ ಆಗಿದೆ. ಈ ನಿಟ್ಟಿನಲ್ಲಿ ಮಂಟೇಸ್ವಾಮಿ ಕಾವ್ಯ ಸಂಪ್ರದಾಯದ ಪಠ್ಯಗಳು, ಶಬ್ದರೂಪ, ಶಬ್ದಸೂಚಿ, ಅರ್ಥಸೂಚಿ ಮುಂತಾದ ಕವಲುಗಳಲ್ಲಿ ಹರಡಿಕೊಂಡಿರುವ ಇಲ್ಲಿಯ ಬರವಣಿಗೆ ಈ ಕೊರತೆಯನ್ನು ತುಂಬಿಕೊಡುವ ಪ್ರಯತ್ನ ಮಾಡಿದೆ. ಆ ಮೂಲಕ ಮಂಟೇಸ್ವಾಮಿ ಪರಂಪರೆಯನ್ನು ಜೊತೆಗೆ ಕನ್ನಡದ ಸಾಂಸ್ಕೃತಿಕ ಅನನ್ಯತೆಯನ್ನೂ ದಾಖಲಿಸುವ ಮಹತ್ವದ ಪ್ರಯತ್ನ ಇಲ್ಲಿ ಯಶಕಂಡಿದೆ. ಅಲ್ಲದೆ, ನಮ್ಮ ನಾಡಿನ ಜನಪದ

ನಿರ್ದೇಶಕರ ಮಾತು

ಕರ್ನಾಟಕ ಜಾನಪದ ವಿಶ್ವವಿದ್ಯಾಲಯವು ಸಮಾಜದ ಸಮಸ್ತ ಸಮುದಾಯಗಳ ಜ್ಞಾನ ಸಂಗ್ರಹಣೆ, ಅಧ್ಯಯನ, ಅಧ್ಯಾಪನ, ಸಂಶೋಧನೆಯಂತಹ ಶೈಕ್ಷಣಿಕ ಕಾರ್ಯಚಟುವಟಿಕೆಗಳನ್ನು ರೂಪಿಸಿಕೊಂಡು ಕಾರ್ಯ ಪ್ರವೃತ್ತವಾಗಿದೆ. ವಿಶ್ವವಿದ್ಯಾಲಯವು ಇನ್ನೊಂದು ಹೆಜ್ಜೆ ಮುಂದೆ ಹೋಗಿ ತನ್ನ ಕಾರ್ಯಕ್ಷೇತ್ರಗಳನ್ನು ವಿಸ್ತರಿಸಿಕೊಳ್ಳುವ ಭಾಗವಾಗಿ 'ವಿಸ್ತರಣೆ ಹಾಗೂ ಸಲಹಾ ಕೇಂದ್ರ' ವನ್ನು ಆರಂಭಿಸಿದೆ. ವಿಶ್ವವಿದ್ಯಾಲಯಗಳು ನಿಜವಾದ ಅರ್ಥದಲ್ಲಿ ಜ್ಞಾನದ ಪುನರುತ್ಪಾದನೆಯಲ್ಲಿ ತೊಡಗಿಕೊಳ್ಳಬೇಕು. ಸ್ಥಾಪಿತ ಸಿದ್ಧ ಜ್ಞಾನದ ಸಂಗ್ರಹದ ಜೊತೆಗೆ ನಿತ್ಯನೂತನವಾದ ಜನಪದ ಸಂಸ್ಕೃತಿಯನ್ನು ಪುನರ್‌ನಿರ್ಮಿಸುವ, ಹೊಸ ರೀತಿಯಲ್ಲಿ ಸ್ಥಾಪಿತಗೊಳಿಸುವ ಕೈಂಕರ್ಯಕ್ಕೆ ಕೈ ಹಾಕಬೇಕು. ಋತುಮಾನಗಳು ಬದಲಾದಂತೆ ಮನುಷ್ಯ ಬದುಕು ಬದಲಾಗುತ್ತಲೇ ಸಂವೇದನಾಶೀಲಗೊಳ್ಳುತ್ತ ಹೋಗುತ್ತದೆ. ನಮ್ಮ ಜನಪದ ಕಲೆ, ಸಾಹಿತ್ಯ, ಸಂಸ್ಕೃತಿಗಳು ತನ್ನತನದ ಛಾಯೆಯನ್ನು ಕಳೆದುಕೊಳ್ಳುತ್ತ ನಡೆದ ಇವೊತ್ತಿನ ಸಂದಿಗ್ಧತೆಯಲ್ಲಿ ನಾವು ಮಾಡುವ ವಿನೂತನ ಜ್ಞಾನಶೋಧಗಳು, ಪ್ರಯೋಗಗಳು ಕಳೆಗುಂದುತ್ತಿರುವ ಜನಪದ ಸಂಸ್ಕೃತಿಯನ್ನು ಕಳೆಗಟ್ಟುವಂತೆ ಮಾಡದೇ ಹೋದರೆ ನಮ್ಮ ಪ್ರಯತ್ನಗಳು ನಿರರ್ಥಕ. ಆ ಎಚ್ಚರಿಕೆಯನ್ನು ಇಟ್ಟುಕೊಂಡೇ ಜಾನಪದ ವಿಶ್ವವಿದ್ಯಾಲಯವು ವಿಸ್ತರಣೆ ಹಾಗೂ ಸಲಹಾ ಕೇಂದ್ರದ ಮೂಲಕ ಅತ್ಯುಪಯುಕ್ತ ಕಾರ್ಯಯೋಜನೆಗಳನ್ನು ರೂಪಿಸಿದೆ.

ಅಂತರ್‌ಶಿಸ್ತೀಯ ಜ್ಞಾನ ಶಾಖೆಗಳಲ್ಲಿ ಜಾನಪದವೂ ಒಂದು. ನೆಲಮೂಲ ಜೀವನ, ಕಲೆ, ಸಾಹಿತ್ಯ, ಸಂಸ್ಕೃತಿಗೆ ಸಂಬಂಧಿಸಿದ ಹೊಸ ಹೊಸ ಜ್ಞಾನವನ್ನು ಶೋಧಿಸಿ, ಜಗತ್ತಿನ ಮೂಲೆ ಮೂಲೆಗೆ ತಲುಪಿಸುವ ಗುರುತರ ಜವಾಬ್ದಾರಿ ವಿಶ್ವವಿದ್ಯಾಲಯದ ಮೇಲಿದೆ. ಅದನ್ನು ಸಾಧ್ಯವಾಗಿಸುವ ಉದ್ದೇಶ ಇಟ್ಟುಕೊಂಡೇ ಆರಂಭವಾದ ವಿಶ್ವವಿದ್ಯಾಲಯದ ವಿಸ್ತರಣೆ ಹಾಗೂ ಸಲಹಾ ಕೇಂದ್ರವು ಜಾನಪದ ಕ್ಷೇತ್ರದ ಬಾಹುಳ್ಯತೆ, ವಿಶ್ವವ್ಯಾಪಕತೆ, ಅದರ ಮೂಲ–ಚೂಲಗಳನ್ನು ಕಂಡರಿಸುವ ಪ್ರಯತ್ನ ಮಾಡುವ ಮಹದಾಸೆ ಹೊಂದಿದೆ. ಜೊತೆಗೆ ಹೊಸ ಅಧ್ಯಯನಗಳು, ನೂತನ ಮಾದರಿಯ ಸಂಶೋಧನೆಗಳು, ನಾಡಿನ ಶ್ರೇಷ್ಠ ವಿದ್ವಾಂಸರ ಕೃತಿಗಳನ್ನು ಪ್ರಕಟಿಸುವ ಮೂಲಕ ಜ್ಞಾನ ಪ್ರಸಾರದ ಉದ್ದೇಶಕ್ಕೆ ಒತ್ತಾಸೆಯಾಗಿ ನಿಲ್ಲಲಿದೆ. ಕೇಂದ್ರವು ಜ್ಞಾನ ಪ್ರಸರಣಕ್ಕೆ ಟೊಂಕಕಟ್ಟಿ ನಿಂತಿದ್ದು, ಮೌಲಿಕವಾದ ಪುಸ್ತಕಗಳ ಪ್ರಕಟಣೆಗೆ ಮುಂದಾಗಿದೆ. ನಾವು ಪ್ರಕಟಮಾಡುವ ವೈವಿಧ್ಯಪೂರ್ಣವಾದ ಮೌಲಿಕ ಕೃತಿಗಳು ನಾಡಿನ ಓದುಗರಿಗೆ ತಲುಪಿ, ಅವು ಸದುಪಯೋಗವಾದರೆ ಮಾತ್ರ ನಮ್ಮ ಶ್ರಮ ಸಾರ್ಥಕ ಎಂದು ಭಾವಿಸುತ್ತೇನೆ.

ಭಾರತೀಯ ಸಂಸ್ಕೃತಿಯನ್ನು ತಿಳಿಯುವ ಪ್ರಯತ್ನದ ಭಾಗವಾಗಿ ಅನೇಕ ಬಗೆಯ ಅಧ್ಯಯನಗಳು ಈ ಹಿಂದೆ ನಡೆದಿವೆ ಈಗಲೂ ನಡೆಯುತ್ತಿವೆ. ಶಿಷ್ಟಸಾಹಿತ್ಯ ಪ್ರಣೀತ ಅಧ್ಯಯನಗಳು, ಸಂಶೋಧನೆಗಳು ಜನಪದ ಮಹಾಕಾವ್ಯಗಳನ್ನು ಕಡೆಗಣಿಸಿವೆ. ರಾಮಾಯಣ, ಮಹಾಭಾರತ ಮಹಾಕಾವ್ಯಗಳ ಮೂಲಕ ನಾಡಿನ ಸಾಂಸ್ಕೃತಿಕ ಚರಿತ್ರೆಯನ್ನು ಕಟ್ಟಿಕೊಳ್ಳಲು ನಡೆಸಿದ ಪ್ರಯತ್ನ ಅಷ್ಟೇನೂ ಫಲಕಾರಿಯಾಗಿಲ್ಲ. ಕಾಲಾನಂತರದಲ್ಲಿ ಸ್ಥಳೀಯ ಸಂಸ್ಕೃತಿ ಧಾರೆಗಳು ನಮ್ಮ ನಾಡಿನ ಚರಿತ್ರೆಯನ್ನು ಪುನರ್‌ರೂಪಿಸುವಲ್ಲಿ ಮಹತ್ವದ ಆಕರಗಳು ಆಗುತ್ತವೆ ಎಂಬ ವಿವೇಕ ಜಾಗೃತವಾಗುತ್ತ ಬಂತು. ಈ ಹಿನ್ನೆಲೆಯಲ್ಲಿ ಜನಪದ ಕಾವ್ಯಗಳ ಬಹುಮುಖೀ ಅಧ್ಯಯನಗಳು ನಾಡಿನಲ್ಲಿ ಪ್ರಾರಂಭವಾದವು. ಜನಪದ ಮಹಾಕಾವ್ಯಗಳ ಕಥಾನಾಯಕರು ಸಾಮಾನ್ಯವಾಗಿ ಕೆಳವರ್ಗದ ಪ್ರತಿನಿಧಿಗಳಾಗಿರುತ್ತಾರೆ. ವೀರಪುರುಷರ ಜೀವನ ಕಥಾನಕಗಳ ಮೂಲಕ ನೆಲಮೂಲ ಸಂಸ್ಕೃತಿ ಮೌಲ್ಯಗಳನ್ನು ಪ್ರತಿಪಾದನೆ ಮಾಡುವ ಜನಪದ ಮಾಹಾಕಾವ್ಯಗಳು ಅಧ್ಯಯನಯೋಗ್ಯವಾದವು. ಮಂಟೇಸ್ವಾಮಿ, ಜುಂಜಪ್ಪ, ಮೈಲಾರಲಿಂಗ ಮುಂತಾದ ವೀರರ ಕಥಾನಕಗಳ ಬಗೆಗೆ ಸಾಕಷ್ಟು ಅಧ್ಯಯನಗಳು, ಸಂಶೋಧನೆಗಳು ಆಗಿವೆ. ಅದರಲ್ಲೂ ಮಂಟೇಸ್ವಾಮಿ ಪರಂಪರೆಯ ಬಹುತ್ವವನ್ನು ದಾಖಲಿಸುವ ಕಾರ್ಯ ತಕ್ಕಮಟ್ಟಿಗೆ ನಡೆದಿದೆ. ಆದರೆ ಆ ಬಗೆಯ ಕೆಲಸಗಳು ಪೂರ್ಣಪ್ರಮಾಣದಲ್ಲಿ ಆಗಿಲ್ಲ ಎಂಬುದು ಕೂಡ ಇಲ್ಲಿ ಗಮನಿಸಬೇಕಾದ ಅಂಶವಾಗಿದೆ. ಆದ್ದರಿಂದ ಮಂಟೇಸ್ವಾಮಿ ಪರಂಪರೆಯ ಬಹುಮುಖೀ ದಾಖಲೀಕರಣ, ಪಠ್ಯೀಕರಣ ಹಾಗೂ ಭಾಷಾಂತರ ಕಾರ್ಯಗಳು ಆಗಬೇಕಾದ ಅಗತ್ಯತೆ ಇತ್ತು. ಈ ಅಗತ್ಯತೆಯನ್ನು ಪೂರೈಸುವ ಮಹತ್ವದ ಭಾಗವಾಗಿ ಮಾನ್ಯ ಕುಲಪತಿ ಪ್ರೊ. ಅಂಬಳಿಕೆ ಹಿರಿಯಣ್ಣ ಅವರು ಮಾಡಿರುವ ಈ ಕಾರ್ಯ ಶ್ಲಾಘ್ಯ. ಲೋಕಸತ್ಯ ಮತ್ತು ಜೀವನ ಸತ್ಯಗಳನ್ನು ಪ್ರತಿಪಾದಿಸುವ ಪ್ರಧಾನ ಉದ್ದೇಶ ಹೊಂದಿರುವ ಪ್ರಕೃತ ಮಂಟೇಸ್ವಾಮಿ ಮಹಾಕಾವ್ಯದ ಕುರಿತು ಇನ್ನೂ ಹೆಚ್ಚಿನ ರೀತಿಯ ಅಧ್ಯಯನದ ಸಾಧ್ಯತೆಗಳನ್ನು ಈ ಕೃತಿ ಒಳಗೊಂಡಿದೆ. ಸಂಶೋಧಕರಿಗೆ, ಅಧ್ಯಯನಾಸಕ್ತರಿಗೆ ಅತ್ಯುತ್ತಮ ಆಕರ ಗ್ರಂಥವಾಗಲಿದೆ. ಇಂತಹ ಅಮೂಲ್ಯವಾದ ಗ್ರಂಥವನ್ನು ರಚಿಸಿಕೊಟ್ಟ ಹಿರಿಯ ವಿದ್ವಾಂಸರಾದ ಪ್ರೊ. ಅಂಬಳಿಕೆ ಹಿರಿಯಣ್ಣ ಅವರು ವಿಶೇಷವಾಗಿ ಅಭಿನಂದನಾರ್ಹರು.

ಈ ಗ್ರಂಥವು ಅಚ್ಚುಕಟ್ಟಾಗಿ ಪ್ರಕಟಗೊಳ್ಳಲು ಸರ್ವ ರೀತಿಯಲ್ಲೂ ಸಹಕಾರ ನೀಡಿದ ವಿಶ್ವವಿದ್ಯಾಲಯದ ಮಾನ್ಯ ಕುಲಪತಿಯವರಾದ ಪ್ರೊ. ಅಂಬಳಿಕೆ ಹಿರಿಯಣ್ಣ ಅವರಿಗೆ, ಕುಲಸಚಿವರಾದ ಪ್ರೊ. ಡಿ.ಬಿ. ನಾಯಕ, ನಿರ್ದೇಶಕ ಹಾಗೂ ಪ್ರಾಧ್ಯಾಪಕ ಡಾ. ಕೆ. ಪ್ರೇಮಕುಮಾರ, ಆನ್ವಯಿಕ ಜಾನಪದ ನಿಕಾಯದ ಡೀನ್ ಪ್ರೊ. ಎಂ. ಚಂದ್ರಪೂಜಾರಿ ಅವರಿಗೆ ಕೃತಜ್ಞತೆಗಳು. ತಾಂತ್ರಿಕ ಪುಟಗಳ ಸಿದ್ಧತೆ ಹಾಗೂ ಮುದ್ರಣಪೂರ್ವ ಕಾರ್ಯದಲ್ಲಿ ಸಹಕರಿಸಿದ ಶ್ರೀ ಸಂಗಮೇಶ ಎಸ್. ಗಣಿ, ಶ್ರೀ ವಿಶ್ವ ಗುಜ್ಜರ್, ಅಂದವಾದ ಮುಖಪುಟ ವಿನ್ಯಾಸ ಮಾಡಿಕೊಟ್ಟ ಕಲಾವಿದರಾದ

ಶ್ರೀ ಕೆ.ಕೆ. ಮಕಾಳಿ, ಕಚೇರಿ ಸಹಾಯಕ ಶ್ರೀ ಕೆ.ಎಲ್. ಲಕ್ಷ್ಮಣ, ಅಂದವಾಗಿ ಮುದ್ರಿಸಿದ ರಾಜಾ ಪ್ರಿಂಟರ್ಸ್, ಬೆಂಗಳೂರು ಇವರಿಗೆ ಹಾಗೂ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಶ್ರಮಿಸಿದ ಎಲ್ಲರಿಗೂ ಕೃತಜ್ಞತೆಗಳು.

ಪ್ರೊ. ಸ.ಚಿ. ರಮೇಶ
ನಿರ್ದೇಶಕ
ವಿಸ್ತರಣೆ ಹಾಗೂ ಸಲಹಾ ಕೇಂದ್ರ

ಪರಿವಿಡಿ

ಮೊದಲ ಮಾತು

ಸುದೀರ್ಘ ಇತಿಹಾಸ ಮತ್ತು ಪರಂಪರೆಯನ್ನು ಹೊಂದಿರುವ ಕರ್ನಾಟಕವು ಮೌಖಿಕ ಸಂಸ್ಕೃತಿ ಹಾಗೂ ಸಾಹಿತ್ಯಕ್ಕೂ ಶ್ರೀಮಂತವಾದ ನಾಡು. ರಾಜ್ಯದ ಉದ್ದಕ್ಕೂ ಬೇರುಬಿಟ್ಟಿರುವ ಇಲ್ಲಿಯ ಮೌಖಿಕ ಪರಂಪರೆಯ ಅಧ್ಯಯನ ತಕ್ಕಮಟ್ಟಿಗೆ ನಡೆದಿದ್ದರೂ ಅದು ಮೇಲ್ಪದರದಲ್ಲಷ್ಟೇ ನಡೆದಿದೆ. ಅಂತಃಶಿಸ್ತೀಯ, ಬಹುಶಿಸ್ತೀಯ ನೆಲೆಗಳಲ್ಲಿ ಈ ಸಾಮಗ್ರಿಯನ್ನು ಅಭ್ಯಸಿಸುವ ಯತ್ನ ಇನ್ನೂ ಆರಂಭವಾಗಿಲ್ಲ. ಬಹುಮುಖೀ ದಾಖಲೀಕರಣದ ಕಲ್ಪನೆಯಂತೂ ಎಲ್ಲಿಯೂ ಗೋಚರಿಸುವುದಿಲ್ಲ. ಕಲೆ, ಕರಕುಶಲ ಕಲೆ, ವಾಸ್ತು, ಶಿಲ್ಪ, ಸಂಗೀತ ಹಾಗೂ ಭೌತಿಕ ಸಂಸ್ಕೃತಿಯ ಅಧ್ಯಯನ ಪಾರ್ಶ್ವಿಕರೂಪದಲ್ಲಷ್ಟೇ ನಡೆದಿರುವುದನ್ನು ಕಾಣುತ್ತೇವೆ. ರಂಗಭೂಮಿ, ಸಾಹಿತ್ಯ ಮತ್ತು ಸಾಮಾಜಿಕ ಸಂಪ್ರದಾಯಗಳ ಕ್ಷೇತ್ರದಲ್ಲಿ ಸ್ವಲ್ಪಮಟ್ಟಿಗೆ ದೊಡ್ಡ ಪ್ರಮಾಣದ ಅಧ್ಯಯನ ನಡೆದಿದೆ.

ಸ್ಥಳೀಯ ಜ್ಞಾನ ಪರಂಪರೆಯಲ್ಲಿ ಮೌಖಿಕ ಕಾವ್ಯ ಸಂಪ್ರದಾಯಗಳಿಗೆ ವಿಶೇಷ ಮಹತ್ವವಿದೆ. ಕರ್ನಾಟಕದ ಎಲ್ಲ ಭೂಪ್ರದೇಶಗಳಲ್ಲೂ ಕಾವ್ಯ ಸಂಪ್ರದಾಯಗಳು ವ್ಯಾಪಕವಾಗಿ ಪ್ರಚಲಿತದಲ್ಲಿವೆ. ವಿಶೇಷವಾಗಿ ದಕ್ಷಿಣ ಕರ್ನಾಟಕದಲ್ಲಿ ಅವು ಹೆಚ್ಚು ಜನಪ್ರಿಯವಾಗಿವೆ. ಪ್ರಚಲಿತವಿರುವ ಮೌಖಿಕ ಕಾವ್ಯಗಳ ಪೈಕಿ ಮಂಟೇಸ್ವಾಮಿ ಕಾವ್ಯ ದಕ್ಷಿಣಕರ್ನಾಟಕದ ಚಾಮರಾಜನಗರ, ಮೈಸೂರು, ಮಂಡ್ಯ, ರಾಮನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಯಾದ್ಯಂತ ಇಂದಿಗೂ ಪ್ರಚುರವಾಗಿರುವುದನ್ನು ಕಾಣಬಹುದು.

ದಕ್ಷಿಣಕರ್ನಾಟಕದ ಇತರ ಕಾವ್ಯ ಸಂಪ್ರದಾಯಗಳೊಂದಿಗೆ ಈ ಮಂಟೇಸ್ವಾಮಿ ಕಾವ್ಯವನ್ನು ಕೂಡ ಸುಮಾರು ನಾಲ್ಕು ದಶಕಗಳಷ್ಟು ಹಿಂದೆಯೇ ಅಧ್ಯಯನ ಮಾಡಲಾಗಿದೆ. ಆದರೆ ಯಾವ ಅಧ್ಯಯನಗಳೂ ಸಮಗ್ರವಾಗಿಲ್ಲ; ಬಹುಮುಖೀ ಅಧ್ಯಯನಕ್ಕೆ ಗುರಿಯಾಗಿಲ್ಲ. ಈ ಹಿನ್ನೆಲೆಯಲ್ಲಿ ಈ ಮೌಖಿಕ ಮಹಾಕಾವ್ಯ ಸಂಪ್ರದಾಯವನ್ನು ಬುಹುಮುಖೀ ದಾಖಲೀಕರಣಕ್ಕೆ ಒಳಪಡಿಸಿ ಪಠ್ಯೀಕರಣಗೊಳಿಸಿ ಆಂಗ್ಲ ಭಾಷೆಗೆ ತರ್ಜುಮೆ ಮಾಡಲಾಗಿದೆ.

ಇಂಥ ಒಂದು ಮಹತ್ವಪೂರ್ಣವಾದ ಯೋಜನೆಗೆ ಅನುದಾನ ಒದಗಿಸಿ ಮೂರು ಹಂತಗಳಲ್ಲಿ ಈ ಯೋಜನೆ ಈ ರೂಪ ಮತ್ತು ಪ್ರಮಾಣದಲ್ಲಿ ಯಶಸ್ವಿಯಾಗಿ ಪೂರ್ಣಗೊಳ್ಳಲು ಅನುವು ಮಾಡಿಕೊಟ್ಟ ಯು.ಜಿ.ಸಿ.ಗೆ ಹಾಗೂ ಪ್ರಕೃತ ಯೋಜನೆ ಸುಗಮವಾಗಿ ಸಾಗಲು ಸಹಕರಿಸಿ ಪ್ರೋತ್ಸಾಹಿಸಿದ ಮೈಸೂರು ವಿಶ್ವವಿದ್ಯಾನಿಲಯಕ್ಕೂ ನನ್ನ ಕೃತಜ್ಞತೆಗಳು ಸಲ್ಲುತ್ತವೆ.

ಈ ಯೋಜನೆಯ ಶೀರ್ಷಿಕೆ, ರೂಪುರೇಷೆ ಹಾಗೂ ಮೂರೂ ಹಂತದ ಕಾರ್ಯದಲ್ಲಿ ನನಗೆ ನೆರವಾದ ನನ್ನ ಪ್ರಿಯ ಗುರುಗಳಾದ ಡಾ.ಲಕ್ಷ್ಮೀನಾರಾಯಣ ಅರೋರಾ ಅವರಿಗೆ ಹಾಗೂ ಬಹುಮುಖೀ ದಾಖಲೀಕರಣ, ಪಠ್ಯೀಕರಣ ಕಾರ್ಯದಲ್ಲಿ ಮೂರು ವರ್ಷಗಳ ಅವಧಿಗೆ ತುಂಬು ಮನಸ್ಸಿನಿಂದ ಕೆಲಸ ಮಾಡಿದ ಯೋಜನಾ ಸಹಾಯಕ ಶ್ರೀ ಪಿ. ಮಣಿ ಅವರಿಗೂ, ಭಾಷಾಂತರ ಕಾರ್ಯದಲ್ಲಿ ನೆರವಾದ ಪ್ರೊ. ಎನ್.ಟಿ.ಭಟ್ ಅವರಿಗೂ ಮಂಟೇಸ್ವಾಮಿ ಕಾವ್ಯ ಪ್ರಸ್ತುತಿ ಹಾಗೂ ದಾಖಲೀಕರಣ ಕಾರ್ಯದಲ್ಲಿ ಸಹಕರಿಸಿದ ಎಲ್ಲ ಕಲಾತಂಡಗಳಿಗೂ ಈ ಯೋಜನಾ ವರದಿಯ ಬೈಂಡಿಂಗ್ ಕಾರ್ಯವನ್ನು ಮಾಡಿಕೊಟ್ಟ ಎಂ.ಎಸ್. ಪಾಯಿಂಟ್ ಅವರಿಗೂ ಕೃತಜ್ಞತೆಗಳು

ಅಂಬಳಿಕೆ ಹಿರಿಯಣ್ಣ

ಪ್ರಸ್ತಾವನೆ

ಜನಪದ ಮಹಾಕಾವ್ಯಗಳು ಜಗತ್ತಿನಾದ್ಯಂತ ಇಂದು ಅಧ್ಯಯನಕ್ಕೆ ಒಳಪಡಲು ವಿಶೇಷ ಕಾರಣಗಳಿವೆ. ತಮ್ಮ ದೇಶಾಭಿಮಾನವನ್ನು ಎತ್ತಿಹಿಡಿಯಲು, ತಮ್ಮವರನ್ನು ಒಗ್ಗೂಡಿಸಲು ತಮ್ಮ ಪರಂಪರೆಯ ಭವ್ಯತೆಯನ್ನು ನಿಚ್ಚಳವಾಗಿ ಎತ್ತಿ ತೋರಿಸಲು ಜನಪದ ಮಹಾಕಾವ್ಯಗಳನ್ನು ಬಳಸಿಕೊಳ್ಳಲಾಗುತ್ತಿದೆ. ಜನಪದ ಮಹಾಕಾವ್ಯಗಳಿಗೆ ಪ್ರಾಮುಖ್ಯತೆ ಬಂದುದು ಈ ಕಾರಣಕ್ಕಾಗಿಯೆ. ಹಾಗೆಯೇ ಅವುಗಳ ದಾಖಲೀಕರಣ ಹಾಗೂ ಈ ರೀತಿಯಲ್ಲಿ ಅವನ್ನು ಬಳಸಿಕೊಳ್ಳಲು ಪ್ರಯತ್ನಪಟ್ಟದ್ದು ಜನಪದ ಮಹಾಕಾವ್ಯಗಳ ಕುರಿತ ಅಧ್ಯಯನಕ್ಕೆ ನಾಂದಿ ಹಾಡಿದಂತಾಗಿದೆ. ಸಾಹಿತ್ಯಾಧ್ಯಯನ ಕ್ಷೇತ್ರದಲ್ಲಿ ಬಹಳ ಕಾಲ ಶಿಷ್ಟ ಮಹಾಕಾವ್ಯಗಳನ್ನು ಮಾತ್ರ ಪರಿಗಣಿಸಿ ಜನಪದ ಮಹಾಕಾವ್ಯಗಳನ್ನು ಕಡೆಗಣಿಸಲಾಗಿತ್ತು. ಆದರೆ ಸಂಸ್ಕೃತಿಯನ್ನು ಅರ್ಥಮಾಡಿಕೊಳ್ಳಲು ಶಿಷ್ಟ ಮಹಾಕಾವ್ಯಗಳಂತೆಯೇ ಜನಪದ ಮಹಾಕಾವ್ಯಗಳ ಅಧ್ಯಯನವೂ ಅಗತ್ಯ ಎಂಬ ತಿಳಿವಳಿಕೆ ಇದೀಗ ಮೂಡಿದೆ.

ಜನಪದ ಮಹಾಕಾವ್ಯದ ಸ್ವರೂಪವನ್ನು ಸ್ಥೂಲವಾಗಿ ಈ ರೀತಿ ವಿವರಿಸಬಹುದು: ಸಾಮಾನ್ಯವಾಗಿ ಜನಪದ ಮಹಾಕಾವ್ಯಗಳು ವೀರರ ಸಾಹಸಗಳನ್ನೂ ಧಾರ್ಮಿಕ ವ್ಯಕ್ತಿಗಳ ಸಾಧನೆಗಳನ್ನೂ ವಿವರಿಸುತ್ತವೆ. ಗಾತ್ರದಲ್ಲಿ ದೊಡ್ಡದಾಗಿರುತ್ತವೆ. ನಿರ್ದಿಷ್ಟ ವೀರ ಆಯಾ ಸಾಂಸ್ಕೃತಿಕ ಗುಂಪಿನ ಹಿತರಕ್ಷಣೆಗಾಗಿ ವಿರೋಧಿಗಳೊಡನೆ ಸೆಣಸಿ ಪ್ರಾಣತ್ಯಾಗ ಮಾಡುತ್ತಾನೆ. ಅವನು ಸತ್ತ ನಂತರ ಅವನನ್ನು ದೇವತೆಯೆಂದು ಜನರು ಪೂಜೆ ಮಾಡುತ್ತಾರೆ. ಈ ದೇವತೆಗೆ ಹೊಂದಿಕೊಂಡಂತೆ ಕಾವ್ಯ ರೂಪುಗೊಳ್ಳುತ್ತದೆ. ಹಾಡುಗಾರನಿಂದ ಹಾಡುಗಾರನಿಗೆ ಈ ಕಾವ್ಯ ಬೆಳೆಯುತ್ತಾ ಬದಲಾಗುತ್ತಾ ಹೋಗುತ್ತದೆ. ಕಾವ್ಯ ದೀರ್ಘವಾಗಿದ್ದರೆ ಮಹಾಕಾವ್ಯದ ವ್ಯಾಪ್ತಿಯನ್ನು ಪಡೆದುಕೊಳ್ಳುತ್ತದೆ. ಈ ದೇವತೆಯ ಪ್ರೀತ್ಯರ್ಥವಾಗಿ ಜಾತ್ರೆಗಳು ನಡೆಯುತ್ತವೆ. ಜಾತ್ರೆಗಳಲ್ಲಿ ನಡೆಯುವ ಆಚರಣೆಗಳಲ್ಲಿ ಈ ಕಾವ್ಯದ ಕೆಲವು ಭಾಗಗಳನ್ನು ಹಾಡುಗಾರರು ಹಾಡುತ್ತಾರೆ. ಇಲ್ಲವೆ ನಾಟಕೀಯ ರೀತಿಯಲ್ಲಿ ಈ ಪುರಾಣದ ಕಥೆಯನ್ನು ಪುನರಭಿನಯ ಮಾಡುತ್ತಾರೆ. ಹೀಗಾಗಿ ಜನಪದ ಮಹಾಕಾವ್ಯ ಆಯಾ ಸಾಂಸ್ಕೃತಿಕ ವರ್ಗ ಅಥವಾ ದೇಶದ ಪುರಾಣವೇ ಆಗಿರುತ್ತದೆ. ಪರಂಪರಾಗತ ಜ್ಞಾನದ ಯಾವುದೇ ಬಗೆಗಿಂತ ಜನರು ಇದಕ್ಕೆ ಹೆಚ್ಚಿನ ಮಹತ್ವ ನೀಡುತ್ತಾರೆ. ವಾಸ್ತವವಾಗಿ ಜನಪದ ಮಹಾಕಾವ್ಯದ ಎಲ್ಲ ಭಾಗಗಳನ್ನು ಜಾತ್ರೆಗಳಲ್ಲಿ ಸಮಗ್ರವಾಗಿ ಹಾಡುವುದಿಲ್ಲ. ಇವುಗಳ ಸುದೀರ್ಘ ವ್ಯಾಪ್ತಿಯ ಕಲ್ಪನೆಯುಂಟಾಗುವುದು ಇವುಗಳನ್ನು ಸಂಗ್ರಹಕಾರ ದಾಖಲು ಮಾಡಿಕೊಂಡು ಘಟನೆಗಳನ್ನು ಪ್ರಸಂಗಗಳನ್ನು ಕಾಲಾನುಕ್ರಮವಾಗಿ ಜೋಡಿಸಿ ಅವುಗಳಿಗೆ ಒಂದು ರೂಪವನ್ನು ಕೊಟ್ಟಾಗ ಮಾತ್ರ.

ಎರಡನೆಯ ಬಗೆಯ ಜನಪದ ಮಹಾಕಾವ್ಯ ಎಂದರೆ ಒಬ್ಬನೇ ಹಾಡುಗಾರ ಒಬ್ಬ ವೀರನಿಗೆ ಸಂಬಂಧಿಸಿದಂತೆ ಹಾಡುವ ಸಹಜ ರಚನೆ. ಇದರಲ್ಲಿ ಬರುವ ಎಲ್ಲ ಪ್ರಸಂಗಗಳನ್ನು ಹಾಡುಗಾರ ಒಂದೇ ನಿಟ್ಟಿನಲ್ಲಿ ಒಂದೇ ಸಂದರ್ಭದಲ್ಲಿ ಹಾಡದಿದ್ದರೂ ಅವನಿಗೆ ಅವು ತಿಳಿದಿರುತ್ತವೆ. ಕನ್ನಡದ ಮಂಟೇಸ್ವಾಮಿ ಮಹಾಕಾವ್ಯ, ಮಲೆಯಮಾದೇಶ್ವರ ಕಾವ್ಯ, ಜುಂಜಪ್ಪ ಕಾವ್ಯ, ಮೈಲಾರಲಿಂಗ ಕಾವ್ಯ ಈ ಬಗೆಯ ಸಹಜ ಜನಪದ ಮಹಾಕಾವ್ಯಗಳು. ೧೦,೦೦೦ ಸಾಲುಗಳಿಂದ ೨೦,೦೦೦ ಅಥವಾ ಅದಕ್ಕೂ ಹೆಚ್ಚಿನ ಸಂಖ್ಯೆಯ ಸಾಲುಗಳಿರುವ ಜನಪದ ಮಹಾಕಾವ್ಯಗಳು ಕನ್ನಡದಲ್ಲಿ ಲಭ್ಯವಿವೆ. ಕರ್ನಾಟಕದಲ್ಲಿ ಇಂದಿಗೂ ಜನಪದ ಮಹಾಕಾವ್ಯಗಳನ್ನು ಹಾಡುವ ಅನೇಕ ಹಾಡುಗಾರ ಹಾಡುಗಾರ್ತಿಯರಿದ್ದಾರೆ. ಇವುಗಳನ್ನು ಸಮಗ್ರವಾಗಿ ದಾಖಲೀಕರಿಸಿ ಪ್ರಕಟಿಸುವ ಕಾರ್ಯ ತೀವ್ರಗತಿಯಲ್ಲಿ ನಡೆಯುವುದು ಅಗತ್ಯವಾಗಿದೆ. ಹಾಗೆಯೇ ವಿಭಿನ್ನ ದೃಷ್ಟಿಗಳಿಂದ ಇವುಗಳ ಅಧ್ಯಯನವೂ ನಡೆಯಬೇಕಾಗಿದೆ.

ನಿರ್ಲಕ್ಷ್ಯಕ್ಕೆ ಒಳಗಾದ ಜ್ಞಾನಪರಂಪರೆಗಳತ್ತ ಗಮನಹರಿಸಿ ಅವುಗಳ ಮಹತ್ವವನ್ನು ಮನಗಾಣಿಸುವ ಉದ್ದೇಶದಿಂದ ಈ ಸಂಶೋಧನಾ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿದೆ. ನಮ್ಮ ನಾಡಿನ ಸಾಂಸ್ಕೃತಿಕ ಪುರಾಣ ಎಂದರೆ ಅದು ಕೇವಲ ರಾಮಾಯಣ ಮಹಾಭಾರತಗಳ ಪುರಾಣ ಎಂಬ ಸಾರ್ವತ್ರಿಕ ಅಭಿಪ್ರಾಯವಿರುವ ಈ ಸನ್ನಿವೇಶದಲ್ಲಿ ಜನಪದ ಮಹಾಕಾವ್ಯಗಳ ಮೂಲಕ ಕನ್ನಡ ಸಂಸ್ಕೃತಿಯನ್ನು ಹುಡುಕುವ ಕಾರ್ಯ ಇದು. 'ಭಾರತೀಯ ಸಂಸ್ಕೃತಿ' ಎಂಬ ಏಕಮುಖೀ ಚಿಂತನೆಯಿಂದ ಹೊರಬಂದು ಪ್ರತಿಯೊಂದು ಭಾಷೆಯ ನೆಲಕ್ಕೂ ತನ್ನದೇ ಆದ ವೈಶಿಷ್ಟ್ಯತೆ ಇದೆ; ತನ್ನದೇ ಆದ ಸಂಸ್ಕೃತಿ ಇದೆ ಎಂಬ ವಾಸ್ತವದ ನೆಲೆಯಲ್ಲಿ ನೆಲದ ಗುಣ ಹುಡುಕುವ ಕಾರ್ಯಕ್ಕೆ ನಾವೀಗ ಮುಂದಾಗಬೇಕಿದೆ. ಅಖಿಲ ಭಾರತ ಮಟ್ಟದ ರಾಮ, ಕೃಷ್ಣ, ಶಿವ ಅಥವಾ ಇತರೆ ದಶಾವತಾರದ ದೈವಗಳಂತಲ್ಲದೆ ಒಂದು ವಿಶಿಷ್ಟ ಭೂಪ್ರದೇಶದ ಅಥವಾ ಒಂದು ಜನಪದ ಗುಂಪಿನ ಪರಂಪರೆಯಲ್ಲಿ ಸೃಷ್ಟಿಯಾಗಿರುವ ದೈವಪುರುಷರು ಇವತ್ತಿನ ಸಂಸ್ಕೃತಿ ಚಿಂತಕರಿಗೆ ಮುಖ್ಯವಾಗಬೇಕಿದೆ. ಕಾಡು ಮತ್ತು ನಾಡಿನ ಹತ್ತಾರು ಜನವರ್ಗಗಳು ಪೂಜಿಸುವ ದೈವಗಳು ಮತ್ತು ಆ ದೈವಗಳ ಬಗೆಗೆ ಅವರು ಕಟ್ಟಿಕೊಂಡ ಕಥಾನಕಗಳು ನೂರಾರು ಇವೆ. ಈ ಕಥಾನಕಗಳೇ ನಿಜವಾದ ಅರ್ಥದಲ್ಲಿ ನಮ್ಮ ಸಂಸ್ಕೃತಿಯ ಇತಿಹಾಸವನ್ನು ನಿರೂಪಿಸಬಲ್ಲ ಮುಖ್ಯ ಸಂಗತಿಗಳು. ಈ ಕಥಾನಕಗಳನ್ನು ಅಭ್ಯಸಿಸುವುದರಿಂದ ಭಾರತದ ಇದುವರೆಗಿನ ವ್ಯವಸ್ಥೆಯಲ್ಲಿ ನಿರ್ಲಕ್ಷಿಸಲ್ಪಟ್ಟ ಜನವರ್ಗಗಳಿಗೆ ಕೂಡ ಒಂದು ಶ್ರೀಮಂತ ಸಂಸ್ಕೃತಿ ಇದೆ ಎಂಬುದನ್ನೂ ಆ ಸಂಸ್ಕೃತಿಗೆ ಒಂದು ಪರಂಪರೆ ಇದೆ ಎಂಬುದನ್ನೂ ಆ ಪರಂಪರೆಯೇ ಒಂದು ನಾಡಿನ ವಿವೇಕ ಮತ್ತು ಜ್ಞಾನವನ್ನು ಕಾಪಾಡಿಕೊಂಡು ಬಂದಿದೆ ಎಂಬುದನ್ನೂ ನಾವು ತಿಳಿಯುವುದು ಸಾಧ್ಯವಾಗುತ್ತದೆ.

ಅಖಿಲ ಭಾರತ ಪರಂಪರೆಯಲ್ಲಿ ಹರಿದು ಬಂದ ರಾಮಾಯಣ ಮಹಾಭಾರತ ಪುರಾಣಗಳು ಆಳುವ ವರ್ಗಗಳ ನಡುವಿನ ದ್ವೇಷ ವೈಷಮ್ಯಗಳನ್ನು ಪ್ರೀತಿ ಪ್ರೇಮಗಳನ್ನು

ಆ ಮೂಲಕ ಸಾಮ್ರಾಜ್ಯಶಾಹಿ ವಿಸ್ತರಣೆಯನ್ನು ಕೇಂದ್ರವಾಗಿ ಇಟ್ಟುಕೊಂಡವುಗಳು. ಆದರೆ ಇವಕ್ಕೆ ಪ್ರತಿಯಾಗಿ ಸ್ಥಳೀಯ ಸಾಂಸ್ಕೃತಿಕ ವೀರರ ಕಥನಗಳನ್ನು ಪವಾಡಪುರುಷರು, ಬೈರಾಗಿಗಳು, ಸಾಧಕರ ಮಹಿಮೆಗಳನ್ನು, ಅವರ ಜೀವನ ಪ್ರೀತಿಯ ವಿಶೇಷಗಳೆನಿಸಿದ ಮದ್ಯ ಮಾಂಸ ಮೈಥುನ, ಭಂಗಿ ಸೇವನೆಯಂಥ ನಿರಾಕರಿಸಲಾಗದ ವಿಚಾರಗಳನ್ನು ಸ್ತ್ರೀ ಪ್ರಧಾನವಾದ ದ್ರಾವಿಡ ಮೂಲ ಮೌಲ್ಯಗಳನ್ನು ಹಾಗೂ ಆ ಮೂಲಕ ತಮ್ಮದೇ ನೆಲದ ಗುಣವನ್ನು ಸಹಜವಾಗಿ ಹೊರಸೂಸುವ ದೀರ್ಘ ಕಥಾನಕಗಳು ಕನ್ನಡದಲ್ಲಿವೆ. ಈ ಕಥನಗಳೇ ನಿಜವಾದ ಅರ್ಥದಲ್ಲಿ ಕನ್ನಡ ಸಂಸ್ಕೃತಿಯ ಇತಿಹಾಸವನ್ನು ನಿರೂಪಿಸಬಲ್ಲಂಥ ಶಕ್ತಿ ಪಡೆದವುಗಳು. ಪರಂಪರಾಗತವಾದ ಶಿಷ್ಟ ಮನಸ್ಸಿನ ನಂಬಿಕೆಗಳಿಗೆ ತದ್ವಿರುದ್ಧವಾದ ಈ ಕಥನಗಳು ತಮ್ಮದೇ ಆದ ಮೌಲ್ಯಗಳನ್ನು ಜೀವನ ದೃಷ್ಟಿಯನ್ನು ಆ ಮೂಲಕ ಒಂದು ನಿರ್ದಿಷ್ಟ ನೆಲದ ಲೋಕದೃಷ್ಟಿಯನ್ನು ಹಾಗೂ ಅವರ ವಿವೇಕವನ್ನು ಬಿಂಬಿಸುತ್ತವೆ.

ಇಡೀ ರಾಮಾಯಣ ಒಂದು ಸಾಮ್ರಾಜ್ಯ ವಿಸ್ತರಣೆಗೆ ಸಂಬಂಧಿಸಿದ್ದು. ರಾಮನ ಪಯಣವೇ ಸಾಮ್ರಾಜ್ಯ ವಿಸ್ತರಣೆಯ ತವಕದಿಂದ ಕೂಡಿದ್ದು. ಮಹಾಭಾರತ ಅಂಥ ಒಂದು ಸಾಮ್ರಾಜ್ಯವನ್ನು ಹಂಚಿಕೊಳ್ಳುವ ತವಕಕ್ಕೆ ಸಂಬಂಧಿಸುತ್ತದೆ. ಒಂದು ಕಡೆ ನೆಲೆಗೊಂಡು ಒಂದು ನಾಗರಿಕತೆಯನ್ನು ಕಟ್ಟಿದ ನಂತರದ ಸ್ಥಿತಿಯನ್ನು ರಾಮಾಯಣ ಮಹಾಭಾರತಗಳು ಹೇಳುತ್ತವೆ. ಆದರೆ ಈ ಮೌಖಿಕ ಮಹಾಕಾವ್ಯಗಳಲ್ಲಿನ ನಾಯಕರು ಮೂಲತಃ ಅಲೆಮಾರಿಗಳೂ ಬೈರಾಗಿಗಳೂ ಆದ ಮಂಟೇಸ್ವಾಮಿ, ಮಾದೇಶ್ವರ, ಜುಂಜಪ್ಪ, ಮೈಲಾರರು; ಒಂದು ಕಡೆ ನೆಲೆಗೊಳ್ಳುವ ತವಕದಲ್ಲಿರುವವರು. ಹೀಗಾಗಿ ಈ ಮಹಾಕಾವ್ಯಗಳ ವಸ್ತುವೇ ಒಂದು ಕಡೆ ನೆಲೆಗೊಳ್ಳುವ ಪೂರ್ವದ ಸ್ಥಿತಿಯನ್ನೂ ಮತ್ತು ಆ ಸಂದರ್ಭದ ಘರ್ಷಣೆಗಳನ್ನೂ ಹೇಳುವಂಥದ್ದು. ಇರುವುದನ್ನು ವೈಭವಿಸುವ ಲಿಖಿತ ಮಹಾಕಾವ್ಯಗಳು ಕಾವ್ಯಸತ್ಯದ ಕಡೆಗೆ ಹೆಚ್ಚು ಒಲಿದರೆ ಇಲ್ಲದಿರುವುದಕ್ಕೆ ತುಡಿಯುವ ಜನಪದ ಮಹಾಕಾವ್ಯಗಳು ಜೀವನ ಸತ್ಯಕ್ಕೆ ಹೆಚ್ಚು ಒತ್ತುಕೊಟ್ಟಿವೆ ಎನಿಸುತ್ತದೆ.

ಹನ್ನೆರಡನೆಯ ಶತಮಾನದ ಕಾಲಕ್ಕೆ ಅತ್ಯಂತ ಪ್ರಗತಿಪರವಾಗಿದ್ದ ಶರಣರ ಗುಂಪು ಕ್ರಮೇಣ ಒಂದು ಜಾತಿಯಾಗಿ ಮಾರ್ಪಟ್ಟು, ಕೆಲವು ಕಟ್ಟುಪಾಡುಗಳನ್ನು ವಿಧಿಸಿಕೊಂಡು, ತನ್ನ ಕಂದಕವನ್ನು ತಾನೇ ತೋಡಿಕೊಳ್ಳತೊಡಗಿದಾಗ, ಇದರಿಂದ ಬೇಸತ್ತ ಕೆಳವರ್ಗದ ಕೆಲವು ನಾಯಕರು ಆ ಒಕ್ಕೂಟದಿಂದ ಸಿಡಿದು ನಿಂತಿರಬೇಕು. ಶರಣರ ಜನಪರ ಚಳವಳಿಯ ಮೂಲಕ ಚರಿತ್ರೆಯಲ್ಲಿಯೇ ಮೊದಲ ಬಾರಿಗೆ ಬೀದಿಗೆ ಬಂದ ಕೆಳವರ್ಗದ ಜನ ನಂತರದ ಅನಿರೀಕ್ಷಿತ ಸೋಲಿನಿಂದ ಹತಾಶರಾಗಿ ತಂತಮ್ಮ ದಾರಿಗಳನ್ನು ತಾವು ಹಿಡಿದಂತೆ ಕಾಣುತ್ತದೆ. ಈ ಹಿನ್ನೆಲೆಯಲ್ಲಿ 'ಮಂಟೇಸ್ವಾಮಿ ಮಹಾಕಾವ್ಯ'ದ ನಾಯಕ 'ಮಂಟೇಸ್ವಾಮಿ'ಯನ್ನು ನಾವು ನೋಡಬೇಕಾಗಿದೆ. ಈತ 'ಉತ್ತರದೇಸ'ದಿಂದ ಬಂದವರು ಎಂಬ ಮಾತು ಈ ಮಹಾಕಾವ್ಯದ ಅನೇಕ ಕಡೆ ಉಲ್ಲೇಖಿತವಾಗುತ್ತದೆ. ಅಲ್ಲದೆ ಬಸವಣ್ಣನವರ ಜೊತೆಗೂ ಸಂಬಂಧ ಕಲ್ಪಿಸುವ ಕಥಾಭಾಗಗಳೂ ಸಿಗುತ್ತವೆ. ಆದರೆ ಮಂಟೇಸ್ವಾಮಿ ಆ ಚಳವಳಿಯ ಒಂದು ಭಾಗವಾಗಿದ್ದರು ಎಂಬುದಕ್ಕಾಗಲೀ ಅಥವಾ

ಈತ ಬಸವಣ್ಣ ಅಲ್ಲಮಾದಿಗಳ ಸಮಕಾಲೀನನಾಗಿದ್ದ ಎಂಬುದಕ್ಕಾಗಲೀ ಯಾವುದೇ ಆಧಾರಗಳು ಸಿಕ್ಕುವುದಿಲ್ಲ. ಆದರೆ ಈತ ಆ ಮಹಾನ್ ಚಳವಳಿಯ ನಂತರದ ಘಟ್ಟದಲ್ಲಿ ಇದ್ದ ಎಂಬುದಕ್ಕೆ ಸಾಕಷ್ಟು ಆಧಾರಗಳಿವೆ. ಮಂಟೇಸ್ವಾಮಿ ಕೆಳವರ್ಗಕ್ಕೆ ಸೇರಿದ್ದವನು ಎಂಬುದರಲ್ಲಿ ಯಾವುದೇ ಅನುಮಾನವೂ ಇರುವಂತಿಲ್ಲ. ಇಂದಿಗೂ ಅಸ್ತಿತ್ವದಲ್ಲಿರುವ ಈ ಪಂಥದ ಗುಡ್ಡರ ಸಂಪ್ರದಾಯಗಳು ಮತ್ತು ಅವರ ಆಚರಣೆಗಳು ಈ ವಾದಕ್ಕೆ ಪುಷ್ಟಿ ನೀಡುತ್ತವೆ. ಮಂಟೇಸ್ವಾಮಿ ಕೇವಲ ಹೊಟ್ಟೆಹೊರೆಯುವ ಸಂತನಾಗಿರಲಿಲ್ಲ. ಪಟ್ಟಭದ್ರ ಸಂಸ್ಕೃತಿಗೆ ವಿರುದ್ಧವಾದ ಕೆಳವರ್ಗಗಳ ಅಸ್ತಿತ್ವವನ್ನು ಪುನರ್‌ಸ್ಥಾಪಿಸುವ ಪ್ರತಿ ಸಂಸ್ಕೃತಿಯೊಂದರ ನಿರ್ಮಾಣ ಆತನ ಉದ್ದೇಶವಾಗಿದ್ದಂತೆ ತೋರುತ್ತದೆ. ಇದರ ಒಂದು ಗಂಭೀರ, ವಸ್ತುನಿಷ್ಠ ಅಧ್ಯಯನ ಈ ಸಂಶೋಧನಾ ಯೋಜನೆಗೆ ಕಾರಣವಾಗಿದೆ.

ಮಂಟೇಸ್ವಾಮಿ ಭಕ್ತರಾದ 'ನೀಲಗಾರರು' ಮೈಸೂರು, ಚಾಮರಾಜನಗರ, ಮಂಡ್ಯ, ರಾಮನಗರ ಹಾಗೂ ಬೆಂಗಳೂರು(ಗ್ರಾಮಾಂತರ) ಜಿಲ್ಲೆಗಳಲ್ಲಿ ಕಂಡುಬರುತ್ತಾರೆ. ಇವರನ್ನು ಮಂಟೇದಯ್ಯ, ಮಂಟೇದವರು ಎಂದು ಕರೆಯುವುದು ವಾಡಿಕೆ. ಮಳವಳ್ಳಿ, ಬೊಪ್ಪೇಗೌಡನಪುರ ಹಾಗೂ ಚಿಕ್ಕಲ್ಲೂರಿನಲ್ಲಿ ಇವರ ಮಠಗಳಿವೆ. ನೀಲಗಾರರಲ್ಲಿ ಪ್ರಧಾನವಾಗಿ ಹರಿಜನರೇ ಕಂಡು ಬರುತ್ತಾರೆ. ಉಳಿದಂತೆ ಕುರುಬರು, ಉಪ್ಪಲಿಗಶೆಟ್ಟರು, ಮಡಿವಾಳರು, ಅಕ್ಕಸಾಲಿಗರು, ಪರಿವಾರದವರು, ಕುಂಬಾರರೂ ನೀಲಗಾರರಾಗಿರುವುದುಂಟು. ಇವರು ತಮ್ಮನ್ನು ಸಿದ್ದಪ್ಪಾಜಿಯ ಗುಡ್ಡಗಳು ಎಂದು ಕರೆದುಕೊಳ್ಳುತ್ತಾರೆ.

ನೀಲಗಾರರ ಹಾಡಿನ ರೀತಿ ಇತರೆ ವೃತ್ತಿಗಾಯಕರಿಗಿಂತ ತುಂಬ ಭಿನ್ನ. ಅಬ್ಬರವಿಲ್ಲದ ಆದರೆ ಸುಕೋಮಲ ರಾಗದ ಹಾಡುಗಾರಿಕೆ ಕೇಳುಗರನ್ನು ಬೇರೊಂದು ಜಗತ್ತಿಗೆ ಕರೆದೊಯ್ಯುವ ಶಕ್ತಿ ಪಡೆದಿವೆ. ಆರಂಭದ ಪಲ್ಲವಿಗಳು, ಕಥೆಯ ನಿರೂಪಣೆಯ ಸಂದರ್ಭದಲ್ಲಿ ಪಾತ್ರ ಮತ್ತು ಸನ್ನಿವೇಶಗಳಿಗೆ ಅನುಗುಣವಾಗಿ ಬಳಸುವ ವಿವಿಧ ರಾಗಗಳು, ಆ ಸಂದರ್ಭದಲ್ಲಿ ಏರಿಳಿತ ಪಡೆಯುವ ಹಲವು ಗತಿಗಳು ಮಹತ್ವದ ಸಂಗೀತಗಾರರನ್ನು ನೆನಪಿಸುತ್ತವೆ. ನೀಲಗಾರರಿಗೆ ಇರುವ ಸುಕೋಮಲಕಂಠ ಮತ್ತು ಆ ಕಂಠದ ಸಿರಿಯನ್ನು ಅವರು ಕಾಪಾಡಿಕೊಂಡಿರುವ ರೀತಿ ಅದ್ಭುತವಾದದ್ದು. ಹೀಗೆ ಅವರ ಹಾಡುಗಾರಿಕೆ ಮತ್ತು ಹಾಡುವ ಕಥಾನಕಗಳ ಅಧ್ಯಯನ ಕುತೂಹಲಕಾರಿಯಾದುದು.

ನಡೆಸಬೇಕಾದ ಶೋಧ (The Problem to be investigated) :

ಈ ಮಹಾಕಾವ್ಯದ ಹಾಡುಗಾರ ಹೇಗೆ ಸುದೀರ್ಘ ವ್ಯಾಪ್ತಿಯ ಇಂಥ ರಚನೆಗಳನ್ನು ಸಂಯೋಜಿಸುತ್ತಾನೆ ? ಪ್ರದರ್ಶನ ಸಂದರ್ಭದಲ್ಲಷ್ಟೇ ಕಾಣಿಸಿಕೊಂಡು ಮಾಯವಾಗಿ ಬಿಡುವ ಹಾಡುಗಾರರ 'ಪಠ್ಯ'ದ ಮೂಲ ಯಾವುದು ? ಹೇಗೆ ಒಂದು ಸುದೀರ್ಘ ಮೌಖಿಕ ಮಹಾಕಾವ್ಯದ ಪ್ರದರ್ಶನವನ್ನು ಪಠ್ಯೀಕರಿಸುವುದು (textualised) ಹಾಗೂ ಮುದ್ರಣ ರೂಪಕ್ಕೆ ಪರಿವರ್ತಿಸುವುದು ಹೇಗೆ ? ಬಹುಮುಖೀ ದಾಖಲೀಕರಣವನ್ನು (Multifacial documentation – audio, video, photography) ಕೈಗೊಳ್ಳುವುದರ

ಮೂಲಕ ಈ ಮೌಖಿಕ ಮಹಾಕಾವ್ಯವನ್ನು ಸಮಗ್ರ ರೂಪದಲ್ಲಿ ದೊರಕಿಸಿಕೊಳ್ಳುವುದು ಹೇಗೆ?

ಈ ಮೌಖಿಕ ಮಹಾಕಾವ್ಯದ ಪರಿಶೀಲನೆಯ ಸಂದರ್ಭದಲ್ಲಿ ಇನ್ನೂ ಹಲವು ಸಂಗತಿಗಳನ್ನು ಲಕ್ಷಿಸಲಾಗಿದೆ. ಜನಪದ ಮಹಾಕಾವ್ಯ ಎಂದರೇನು ? ಅದರ ಮೌಖಿಕ ಪ್ರಸರಣ, ಮೌಖಿಕ ಸಂಯೋಜನಾ ವಿಧಾನ, ಪಠ್ಯವ್ಯತ್ಯಯ (textual variations) ಅಂತರ್‌ಪಠ್ಯ ಪ್ರದರ್ಶನ ತಂತ್ರಗಳು (Inter text performance techniques) ದಾಖಲೀಕರಣ ವಿಧಾನಗಳು, ಮೌಖಿಕ ಸಾಹಿತ್ಯದ ವಿಶ್ಲೇಷಣೆ, ಪಠ್ಯಗಳ ವಸ್ತುವಿನಲ್ಲಿ ಕಂಡುಬರುವ ವ್ಯತ್ಯಯ, ಪ್ರದರ್ಶನದಲ್ಲಿ ಕಂಡು ಬರುವ ವ್ಯತ್ಯಯ, ಸೂತ್ರಾತ್ಮಕ ಅಭಿವ್ಯಕ್ತಿಗಳು, ನುಡಿಗಟ್ಟುಗಳು, ಸಾಂಸ್ಕೃತಿಕ ವಿಶಿಷ್ಟಾಂಶಗಳು, ಹಾಡುಗಾರರ ಸಾಮಾಜಿಕ ಆರ್ಥಿಕ ಸ್ಥಿತಿಗತಿಗಳು ಹಾಗೂ ಅವರ ಲೋಕದೃಷ್ಟಿಯನ್ನು ಅಭ್ಯಸಿಸಲಾಗಿದೆ.

ಯೋಜನೆಯ ಗೊತ್ತುಗುರಿ (Objectives of the project) :

೧. ವಿವಿಧ ಸಂದರ್ಭಗಳಲ್ಲಿ ಮಹಾಕಾವ್ಯದ ವಿವಿಧ ಪಠ್ಯಗಳನ್ನು ದಾಖಲೀಕರಿಸಿಕೊಳ್ಳುವುದರ ಮೂಲಕ ಆ ಪಠ್ಯಗಳನ್ನು ಪ್ರಸ್ತುತಪಡಿಸುವ ವಿಧಾನ ಹಾಗೂ ಮೌಖಿಕ ಮಹಾಕಾವ್ಯದ ಪಠ್ಯದ ರೂಪವನ್ನು ಅಭ್ಯಸಿಸುವುದು.

೨. ಅಕ್ಷರಯುಗದ ಪೂರ್ವದಲ್ಲೇ ಸಂರಚನೆಗೊಂಡಿರುವ ಸುದೀರ್ಘ ಮಹಾಕಾವ್ಯಗಳ ಸೂತ್ರಾತ್ಮಕ ಶೈಲಿಯ ಸ್ವರೂಪಕ್ಕೂ ಅವುಗಳ ಮೌಖಿಕ ಸಂರಚನೆಗೂ ಇರಬಹುದಾದ ಸಂಬಂಧವನ್ನು ಕುರಿತು ಅಭ್ಯಸಿಸುವುದು.

೩. ಪುನರಾವೃತ್ತಿತ ಪದಗುಂಫನ ಹಾಗೂ ದೃಶ್ಯಾವಳಿಗಳನ್ನು 'ಸೂತ್ರದ' ಚೌಕಟ್ಟಿನೊಳಗೆ ಅಳವಡಿಸಿ, ಈ ಸೂತ್ರಗಳನ್ನು ಮಹಾಕಾವ್ಯದ ವಿಶ್ಲೇಷಣೆಯ ಬಾಹ್ಯಾಂಗವಾಗಿ ಪರಿಗಣಿಸದೆ ಕತೆಯನ್ನು ನಿರ್ವಹಿಸುವ ಹಾಡುಗಾರನೊಬ್ಬನ ದೃಷ್ಟಿಕೋನದಿಂದ ಹಾಗೂ ಅವನ ಅಭಿವ್ಯಕ್ತಿ ಪರಂಪರೆಯ ಹಿನ್ನೆಲೆಯಲ್ಲಿ ವಿಚಾರಮಾಡಿ ಅರ್ಥೈಸಲು ಯತ್ನಿಸುವುದು.

೪. ನುಡಿಗಟ್ಟುಗಳ ಪುನರುಕ್ತಿ, ಸೂತ್ರರೂಪದ ಪುನರುಕ್ತಿ ಹಾಡುಗಾರನಿಗೆ ಆಶುಸ್ಥಿತಿಯಲ್ಲಿ ಕತೆಯನ್ನು ಹಾಡಾಗಿ ಹೆಣೆಯಲು ಎಷ್ಟು ಸಹಾಯಕಾರಿ ಎಂಬುದನ್ನು ಪರೀಕ್ಷಿಸುವುದು. ಶ್ರೋತೃವೃಂದದಿಂದ ಹಾಡುಗಾರರ ಕಡೆಗೆ ದೃಷ್ಟಿಹರಿಸುವ ಕತೆಯನ್ನು ಹಾಡಾಗಿ ಹೆಣೆಯುವ ಪ್ರಕ್ರಿಯೆಗೆ ಹೆಚ್ಚು ಒತ್ತುಕೊಡುವುದು.

೫. ಕತೆಯು ಏಕೆ ಹಾಡಿನೊಂದಿಗೆ ಸಂಲಗ್ನಗೊಳ್ಳುತ್ತದೆ ಹಾಗೂ ಯಾವ ಬಗೆಯ ಕತೆಯು ಈ ಬಗೆಯ ವಿಶಿಷ್ಟ ಸೂತ್ರಾತ್ಮಕ ನಿರೂಪಣಾ ವಿಧಾನಕ್ಕೆ ಒಳಗಾಗುತ್ತದೆ ಎನ್ನುವುದು ಇಲ್ಲಿಯ ಮುಖ್ಯ ಪ್ರಶ್ನೆಯಾಗುತ್ತದೆ.

೬. ಶ್ರೋತೃಗಳನ್ನು ಛೇಡಿಸುವುದಕ್ಕಾಗಿ, ಅಭಿವ್ಯಕ್ತಿಯನ್ನು ವಿಳಂಬಿಸುವ ಮೂಲಕ ಭಾವೋದ್ರೇಕವನ್ನು ಹೆಚ್ಚಿಸುವುದಕ್ಕಾಗಿ ಮೌಖಿಕ ಮಹಾಕಾವ್ಯ ನಿರೂಪಣೆಯಲ್ಲಿ ಹಾಡುಗಾರ ಅಲ್ಲಲ್ಲಿ ಅನುಪ್ರಾಸ, ಅನುರೂಪತೆ ಹಾಗೂ ಇನ್ನಿತರ ಪುನರಾವರ್ತನ ತಂತ್ರವನ್ನು ಬಳಸಿಕೊಳ್ಳುವ ಬಗೆಯನ್ನು ಅರಿಯುವ ಪ್ರಯತ್ನ ಮಾಡುವುದು.

೭. ಸಾಂದ್ರರೂಪದ ಬಹುಮುಖೀ ದಾಖಲೀಕರಣ ಮತ್ತು ವಿಶ್ಲೇಷಣಾಕಾರ್ಯ ಪೂರ್ಣಗೊಂಡ ಮೇಲೆ ಸಂಸ್ಕೃತಿಯಿಂದ ಸಂಸ್ಕೃತಿಗೆ ಬೇರೆಯಾಗುವ ನಿರ್ಬಂಧಗಳಿಗನುಸಾರವಾಗಿ ಗಾಯಕರ ಆಲೋಚನೆಯ ಸ್ವರೂಪವೂ ಭಿನ್ನವಾಗುವುದನ್ನು ಲಕ್ಷಿಸುವುದು. ಮಾತನಾಡುವವನ ವ್ಯಕ್ತಿತ್ವದ ಛಾಪು ಅವನು ಬಳಸುವ ಭಾಷೆಯ ಮೇಲೆ ಕಾಣಿಸಿಕೊಳ್ಳುವಂತೆ ಗಾಯಕನ ಕಾವ್ಯಪರಂಪರೆಯ ಮೇಲೆ ಅವನ 'ಸೂತ್ರಭಂಡಾರ'ದ ಪ್ರಭಾವ ಆಗಿಯೇ ತೀರುತ್ತದೆ. ಒಂದು ಮಹಾಕಾವ್ಯವನ್ನು ಬೇರೆ ಬೇರೆ ಗಾಯಕರು ಮೌಖಿಕವಾಗಿ ಪ್ರಸ್ತುತಪಡಿಸಿದಾಗ ಸೂತ್ರದ ಬಳಕೆಯಲ್ಲಿನ ಈ ವ್ಯತ್ಯಾಸವನ್ನು ವ್ಯಕ್ತಿ ವ್ಯಕ್ತಿಯ ನಡುವಣ ಶೈಲಿಕ ವ್ಯತ್ಯಾಸದೊಡನೆ ಹೋಲಿಸುವುದೇ ಬೇಡವೇ ಹೇಗೆ ? ಎಂಬುದನ್ನು ಪರೀಕ್ಷಿಸುವುದು.

೮. ಹಾಡುವ ಸಂದರ್ಭದ ಅನಿವಾರ್ಯತೆ ಏರ್ಪಟ್ಟಾಗಲೇ ಒಂದು ಪೂರ್ಣ ಸ್ವರೂಪದ ಸೂತ್ರದ ಆವಿಷ್ಕಾರವಾಗುತ್ತದೆ. ಎಂದರೆ ಪ್ರದರ್ಶನದ ಜರೂರಿನಿಂದಲೇ ಸೂತ್ರವೊಂದು ಅಭಿವ್ಯಕ್ತಿ ಪಡೆಯುತ್ತದೆ ಎಂದರ್ಥ. ಪ್ರದರ್ಶನ ಸಂದರ್ಭದಲ್ಲಿ ಮಾತ್ರ ಅದು ಕಾಣಿಸಿಕೊಳ್ಳಬಲ್ಲದು.

೯. ಹಾಡುಗಾರಿಕೆಯನ್ನು ಪ್ರಸ್ತುತಪಡಿಸುವ ಸಂದರ್ಭದಲ್ಲಿ ಒಂದರ ಸ್ಥಾನದಲ್ಲಿ ಇನ್ನೊಂದನ್ನು ಬೆಸೆಯುವ ಬದಲಿಗೆ ಸೂತ್ರಗಳ ಬಳಕೆ ಹಾಗೂ ಸೂತ್ರಗಳ ನಡುವಣ ಸಂಬಂಧವನ್ನು ಪ್ರದರ್ಶನ ಹೇಗೆ ಹೊಂದಿಸಿಕೊಳ್ಳುತ್ತದೆ ಎಂಬುದನ್ನು ಪರಿಶೀಲಿಸುವುದು.

೧೦. ಒಟ್ಟಿನಲ್ಲಿ ಕನ್ನಡ ಸಂಸ್ಕೃತಿಯನ್ನು ಅರ್ಥೈಸಲು ಕನ್ನಡ ಜನಪದ ಮಹಾಕಾವ್ಯಗಳ ಗಂಭೀರ ಅಧ್ಯಯನದ ಜರೂರು ಇದೆ ಎಂಬುದನ್ನು ಸಾಧಿಸಿ ತೋರಿಸುವುದು.

ಪ್ರಮೇಯಗಳು (Hypothesis) :

೧. ಸುದೀರ್ಘ ಮೌಖಿಕ ಮಹಾಕಾವ್ಯಗಳು ಸ್ಮೃತಿಯಲ್ಲಿ ಉಳಿದು ಬಂದಂತಹವಲ್ಲ. ಪ್ರದರ್ಶನದ ಸಂದರ್ಭದಲ್ಲಿ ಪುನರ್‌ಸೃಷ್ಟಿಗೊಂಡಂತಹವು.

೨. ಹಾಡುಗಾರಿಕೆಯಲ್ಲಿ ಬಳಕೆಗೊಳ್ಳುವ ಸೂತ್ರಗಳು, ಬಹುರೂಪದ ಪಠ್ಯಗಳು **(multiforms)** – ಜನಪದ ಮಹಾಕಾವ್ಯವನ್ನು ಪುನರ್‌ಸೃಷ್ಟಿಸಲು ಹಾಡುಗಾರರು ಅಳವಡಿಸಿಕೊಳ್ಳುವ ತಂತ್ರ ಸಾಧನಗಳು.

೩. ಜನಪದ ಮಹಾಕಾವ್ಯ ಪ್ರದರ್ಶನಗೊಳ್ಳುವ ಸಂದರ್ಭವೇ ಅದರ ವಸ್ತು ಮತ್ತು ರೂಪವನ್ನು ನಿರ್ಧರಿಸುತ್ತದೆ. ಸಂದರ್ಭವು ಮಹಾಕಾವ್ಯದ ವಿಕಾಸದ ಮೇಲೂ ಪ್ರಭಾವ ಬೀರುತ್ತದೆ.

೪. ಪುರುಷಗಾಯಕರು ಮತ್ತು ಸ್ತ್ರೀಗಾಯಕರು ಪ್ರಸ್ತುತಪಡಿಸುವ ಪಠ್ಯಗಳು ಸಾಮಾನ್ಯವಾಗಿ ಲಿಂಗಭೇದ ನೀತಿ (gender bias) ಯಿಂದ ಕೂಡಿರುವುದನ್ನು ಗುರುತಿಸಬಹುದು.

೫. ವಸ್ತುವಿನ ಅಧ್ಯಯನ ಮುಗಿದ ಅನಂತರ ದಲಿತ ಸಂಸ್ಕೃತಿಯ ಅನನ್ಯತೆಯನ್ನು ನಿರ್ವಚಿಸಬಹುದು.

೬. ಬಹುಮುಖೀ ದಾಖಲೀಕರಣಕ್ಕೆ ಗುರಿಯಾದ ಪಠ್ಯವನ್ನು ಪ್ರಮಾಣೀಕರಿಸಿದ ಅನಂತರ ಲಿಂಗಭೇದ ನೀತಿಯನ್ನು ಬಿಂಬಿಸುವ ಪ್ರಸಂಗಗಳನ್ನು ವಿಶೇಷ ಪರಿಶೀಲನೆಗೆ ಒಡ್ಡಬಹುದು.

ಸಂಶೋಧನ ವಿನ್ಯಾಸ ಮತ್ತು ವಿಧಾನ (Research design and methodology):

ಜಾನಪದ ವಿಜ್ಞಾನ (Folkloristics) ಕ್ಷೇತ್ರದಲ್ಲಿ ಮಾಹಿತಿ ಸಂಗ್ರಹದ ವಿಧಾನ ಮತ್ತು ಆ ಮೂಲಕ ನಡೆಸುವ ಅಧ್ಯಯನಗಳಿಗೆ ಈಗ ವಿಶೇಷ ಮಹತ್ವ ಪ್ರಾಪ್ತವಾಗಿದೆ. ಜಾನಪದದ ಎಲ್ಲ ಮುಖಗಳ ಅಧ್ಯಯನವು ಮೂಲಭೂತವಾಗಿ ಕ್ಷೇತ್ರಕಾರ್ಯವನ್ನು ಅವಲಂಬಿಸಿದೆ. ನಿಖರವೂ ವ್ಯಾಪಕವೂ ವೈಜ್ಞಾನಿಕವೂ ಆದ ಕ್ಷೇತ್ರಕಾರ್ಯದಿಂದ ಮಾತ್ರವಷ್ಟೇ 'ಬೃಹತ್ ರೂಪ'ದಲ್ಲಿ ಮಾಹಿತಿಗಳನ್ನು ಸಂಗ್ರಹಿಸಬಹುದು. ಇಂತಹ 'ಬೃಹತ್‌ರೂಪ'ದ ಮಾಹಿತಿಯನ್ನು ವಿಶ್ಲೇಷಿಸಿ ಅಧಿಕೃತ ನಿರ್ಣಯಗಳಿಗೆ ತಲುಪಬಹುದು. ಹಾಗಾಗಿ ಕ್ಷೇತ್ರಕಾರ್ಯ ವಿಧಾನವೇ ಅಂತಿಮವಾಗಿ ಅಧ್ಯಯನವನ್ನು ರೂಪಿಸುತ್ತದೆ ಮತ್ತು ನಿಯಂತ್ರಿಸುತ್ತದೆ. ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಮಾಹಿತಿಗಳನ್ನು ಅವುಗಳ ನೈಜ ಮತ್ತು ಪೂರ್ಣ ಪ್ರಮಾಣದಲ್ಲಿ ದಾಖಲು ಮಾಡಿಕೊಳ್ಳುವ ಉದ್ದೇಶವನ್ನು ಮತ್ತು ಹಾಗೆ ಮಾಡಿಕೊಳ್ಳುವ ದಾಖಲೆಯು ಮೌಲ್ಯಾತ್ಮಕವಾಗಿರಬೇಕೆಂಬ ಸಂಕಲ್ಪವನ್ನು ಈ ದಾಖಲಾತಿ ಯೋಜನೆಯು ಇಟ್ಟುಕೊಂಡಿದೆ. ಈ ಉದ್ದೇಶದಿಂದ ಹಾಗೂ ಮಂಟೇಸ್ವಾಮಿ ಮಹಾಕಾವ್ಯದ ಉತ್ತಮ, ಪರಿಪೂರ್ಣ ಹಾಗೂ ಸಾಂದ್ರ ದಾಖಲೀಕರಣಕ್ಕಾಗಿ ಟೇಪ್‌ರೆಕಾರ್ಡರ್ಸ್, ಕೆಮರಾ ಇತ್ಯಾದಿ ತಾಂತ್ರಿಕ ಸಲಕರಣೆಗಳನ್ನು ದೊರಕಿಸಿಕೊಳ್ಳಲಾಗಿದೆ.

ಈ ಮೇಲಿನ ವಿವರಗಳನ್ನು ದಾಖಲಿಸಿರುವುದು ಯೋಜನೆಯನ್ನು ವೈಭವೀಕರಿಸುವ ಉದ್ದೇಶದಿಂದಲ್ಲ. ಕೈಗೆತ್ತಿಕೊಂಡ ಯೋಜನೆಯನ್ನು ನಮ್ಮ ಕನಸು, ಆಲೋಚನೆ ಮತ್ತು ನಿರ್ಧಾರಗಳಿಗನುಸಾರವಾಗಿ ಕಾರ್ಯಗತಗೊಳಿಸುವ ಬದ್ಧತೆಯನ್ನು ಸ್ಪಷ್ಟಪಡಿಸುವ ಉದ್ದೇಶದಿಂದ. ಅಧ್ಯಯನಕ್ಕೆ ಅವಶ್ಯ ಬೇಕಾಗುವ ಆಕರ ಸಾಮಗ್ರಿಗಳನ್ನು ಪರಿಣಾಮಕಾರಿಯಾಗಿ ಸಂಗ್ರಹಿಸುವ ವಿಧಾನವನ್ನು ಈ ಯೋಜನೆಯ ಮೂಲಕ ಪ್ರಸ್ತುತಪಡಿಸಲಾಗಿದೆ.

ಯೋಜನೆಯ ಮಾನವ ಸಂಪತ್ತು :

ಕ್ಷೇತ್ರಕಾರ್ಯ, ದಾಖಲಾತಿ ಯೋಜನೆ ಹಾಗೂ ಭಾಷಾಂತರ ಕಾರ್ಯದಲ್ಲಿ ನೇರವಾಗಿ ತೊಡಗಿಸಿಕೊಂಡವರು ಇಪ್ಪತ್ತು ಮಂದಿ. ಪರಿಣಾಮಕಾರಿ ಹಾಗೂ ವ್ಯಾಪಕ ಕ್ಷೇತ್ರಕಾರ್ಯಕ್ಕಾಗಿ ಎರಡು ತಂಡಗಳಾಗಿ ವಿಭಾಗಿಸಿಕೊಳ್ಳಲಾಗಿತ್ತು. ಗುಂಪಿನ ಹೆಸರು, ಸದಸ್ಯರ ಹೆಸರು, ವಿಳಾಸಗಳ ಯಾದಿಯನ್ನು ಸಿದ್ಧಪಡಿಸಿಕೊಳ್ಳಲಾಗಿತ್ತು. ಈ ಎರಡೂ ತಂಡಗಳ ಸದಸ್ಯರ ಶೈಕ್ಷಣಿಕ ಅರ್ಹತೆ, ತಜ್ಞತೆ, ಕ್ಷೇತ್ರಕಾರ್ಯದ ಅನುಭವ – ಈ ಅಂಶಗಳು ತಂಡಗಳ ವರ್ಗೀಕರಣದ ಹಿಂದಿರುವ ಮಾನದಂಡಗಳು. ಅನುಭವ, ತಿಳಿವಳಿಕೆ, ಭಾಷೆ, ಸ್ಥಳ, ವಯಸ್ಸು – ಇವನ್ನು ಆಧರಿಸಿ ತಂಡಗಳನ್ನು ಮಾಡಿಕೊಳ್ಳಲಾಗಿತ್ತು. ದಾಖಲಾತಿ ಯೋಜನೆಯ ಉದ್ದೇಶಕ್ಕನುಸಾರವಾಗಿ ತಂಡಗಳ ರಚನೆ, ಸದಸ್ಯರ ಆಯ್ಕೆ ಮಾಡಿಕೊಳ್ಳಲಾಗಿತ್ತು.

ಮೊದಲನೆಯ ಹಂತ

೧. ಅತ್ಯುತ್ತಮ ಗುಣಮಟ್ಟದ ಕ್ಷೇತ್ರಕಾರ್ಯವನ್ನು ಸಂಯೋಜಿಸಲಾಗಿತ್ತು.

೨. ಈ ಜನಪದ ಮಹಾಕಾವ್ಯದ ಹಾಡುಗಾರರ ಸಮಗ್ರಪಟ್ಟಿ ತಯಾರಿಕೆಗಾಗಿ ವ್ಯಾಪಕ ಸರ್ವೇಕ್ಷಣೆ ಕೈಗೊಂಡು ಹಾಡುಗಾರಿಕೆಯ ವಿವಿಧ ಸಂಪ್ರದಾಯಗಳನ್ನೂ ಹಾಡುಗಾರರನ್ನೂ ಲಕ್ಷಿಸಲಾಗಿದೆ.

೩. ಮಹಾಕಾವ್ಯದ ಪಠ್ಯಗಳ ಬಹುಮುಖೀ ದಾಖಲೀಕರಣಕ್ಕೆ ಮೊದಲು ಪ್ರತಿಯೊಬ್ಬ ಹಾಡುಗಾರನ ಸಾಮಾಜಿಕ, ಸಾಂಸ್ಕೃತಿಕ ಹಾಗೂ ಕೌಟುಂಬಿಕ ವಿವರಗಳನ್ನು ಸಂಗ್ರಹಿಸಿ ದಾಖಲೀಕರಿಸಿಕೊಳ್ಳಲಾಗಿದೆ. ಕೇವಲ ಮಹಾಕಾವ್ಯದ ಹಾಡುಗಾರಿಕೆಗಷ್ಟೇ ಸೀಮಿತಗೊಳಿಸಿಕೊಳ್ಳದೆ ಆ ಹಾಡುಗಾರರ ಬಹುಮುಖ ಪ್ರತಿಭೆ / ಕೌಶಲಗಳನ್ನು ಕೂಡ ಪರಿಗಣನೆಗೆ ತೆಗೆದುಕೊಳ್ಳಲಾಗಿದೆ. ಆ ಅಂಶಗಳನ್ನು ಹೇಗೆ ಅವರ ಹಾಡುಗಾರಿಕೆಗೆ ಪೂರಕವಾಗಿ ಬಂದಿವೆ ಎಂಬುದನ್ನು ಕೂಡ ನೋಡಲಾಗಿದೆ.

೪. ಅತ್ಯುತ್ತಮ ದಾಖಲಾತಿ ಮಾದರಿಯನ್ನು ತಾಂತ್ರಿಕವಾಗಿ ಸಾಧಿಸಲಾಗಿದೆ. (Technical standard of documentation)

೫. ಸಾಧ್ಯವಾದಮಟ್ಟಿಗೂ ದಾಖಲೀಕರಣ ಕಾರ್ಯವನ್ನು ಸಹಜ ಸಂದರ್ಭದಲ್ಲೇ (Natural Context) ನಿರ್ವಹಿಸಲು ಯತ್ನಿಸಲಾಗಿದೆ. ಪೂರ್ಣಪಠ್ಯವನ್ನು ದೊರಕಿಸಿಕೊಳ್ಳಲು ಪ್ರತಿಯೊಂದು ಹಾಡುಗಾರಿಕೆಯ ಸಂಪ್ರದಾಯಕ್ಕೆ ಪ್ರೇರಣ ಸಂದರ್ಭವನ್ನು ನಿರ್ಮಿಸಿಕೊಳ್ಳಲಾಗಿದೆ.

೬ ಧ್ವನಿಮುದ್ರಣದ ಸಂದರ್ಭದಲ್ಲೇ ಇಡೀ ಸನ್ನಿವೇಶದ ವೀಡಿಯೋವನ್ನು ಕ್ಲಿಪ್ಪಿಂಗ್‌ಗಳ ರೂಪದಲ್ಲಿ ಹಿಡಿದಿಡಲಾಗಿದೆ. ಅದೇ ಸಂದರ್ಭದಲ್ಲಿ ಬಣ್ಣದ ಛಾಯಾಚಿತ್ರಗಳನ್ನು ತೆಗೆದಿಟ್ಟುಕೊಳ್ಳಲಾಗಿದೆ.

ಲಿಂಗ ವ್ಯವಸ್ಥೆ ದೃಷ್ಟಿ (gender perspectives) ಹಾಗೂ ಭಾಷಾವೈಜ್ಞಾನಿಕ ಅಂಶಗಳ ಹಿನ್ನೆಲೆಯಲ್ಲಿ ಪರಿಶೀಲಿಸಲಾಗಿದೆ.

೪. ಮಂಟೇಸ್ವಾಮಿ ಮಹಾಕಾವ್ಯದ ಹಾಡುಗಾರರ ಸಾಮಾಜಿಕ, ಆರ್ಥಿಕ ಹಾಗೂ ಸಾಂಸ್ಕೃತಿಕ ಹಿನ್ನೆಲೆಯನ್ನು ಅಭ್ಯಸಿಸಲಾಗಿದೆ.

೫. ಈ ಮೌಖಿಕ ಮಹಾಕಾವ್ಯದ ಪಠ್ಯಗಳನ್ನು ಪಠ್ಯೀಕರಣ ಹಾಗೂ ದಾಖಲೀಕರಣ ಮಾಡಿಕೊಳ್ಳುವುದರ ಮೂಲಕ ಕಾಲ, ದೇಶ, ಹುಟ್ಟು ಮುಂತಾದವುಗಳ ಹಿನ್ನೆಲೆಯಲ್ಲಿ ಹಾಡುಗಾರನ ಪರಿಕಲ್ಪನೆಯನ್ನು ಮಾರ್ಗಸಾಹಿತ್ಯದ ಪರಿಕಲ್ಪನೆಯೊಡನೆ ಹೋಲಿಸಿ ನೋಡಲಾಗಿದೆ.

೬ ಹಾಡುಗಾರರನ್ನು ಕೇವಲ ನಿರೂಪಕರೆಂದು ಪರಿಗಣಿಸದೆ ಸಹಸಂಶೋಧಕರಾಗಿ (Co- researchers) ಪರಿಗಣಿಸಲಾಗಿದೆ. ಅವರ ಲೋಕದೃಷ್ಟಿ, ಪ್ರತಿಕ್ರಿಯೆಗಳು, ಮಹಾಕಾವ್ಯದ ಅರ್ಥ ಎಲ್ಲವನ್ನೂ ಧ್ವನಿಮುದ್ರಿಸಿಕೊಳ್ಳಲಾಗಿದೆ ಮತ್ತು ಪಠ್ಯೀಕರಣ ಮಾಡಿಕೊಳ್ಳಲಾಗಿದೆ.

೭ ಈ ಮಹಾಕಾವ್ಯದ ದಾಖಲೀಕರಣ ಮತ್ತು ಪಠ್ಯೀಕರಣದಿಂದ ದೊರಕಿಸಿಕೊಂಡ ಆಕರ ಸಾಮಗ್ರಿಯನ್ನಾಧರಿಸಿ ಕನ್ನಡ ಸಂಸ್ಕೃತಿ ಸಂವಾದಕ್ಕೆ ಅವಕಾಶವನ್ನು ಕಲ್ಪಿಸಿಕೊಡಲಾಗಿದೆ.

ಅಧ್ಯಯನದ ಮಹತ್ವ :

೧. ಕರ್ನಾಟಕದ ಇತಿಹಾಸದಲ್ಲೇ ಮೊಟ್ಟಮೊದಲ ಬಾರಿಗೆ ಮಂಟೇಸ್ವಾಮಿ ಮಹಾಕಾವ್ಯವನ್ನು ಪ್ರಥಮ ಬಾರಿಗೆ ಉತ್ತಮ ಗುಣಮಟ್ಟದ ದಾಖಲೀಕರಣಕ್ಕೆ ಗುರಿಪಡಿಸಿ ಮಹಾಕಾವ್ಯದ ಸಾಂಸ್ಕೃತಿಕ ಅನನ್ಯತೆಯನ್ನು ಶೋಧಿಸಲಾಗಿದೆ.

೨. ಈ ಮಹಾಕಾವ್ಯದ ಆಡಿಯೋ, ವೀಡಿಯೋ, ಛಾಯಾಚಿತ್ರೀಕರಣ – ಬಹುಮುಖೀಯ ದಾಖಲೀಕರಣ ಸಮಗ್ರವಾಗಿರುವಂತೆ ಕಾರ್ಯನಿರ್ವಹಿಸಲಾಗಿದೆ.

೩. ವಿಭಿನ್ನ ದೃಷ್ಟಿಕೋನಗಳಿಂದ ಈ ಮಹಾಕಾವ್ಯವನ್ನು ಪರಿಶೀಲನೆ ಮಾಡುವುದರಿಂದ ಭಾರತೀಯ ಸಂಸ್ಕೃತಿಯ ಬಹುತ್ವವನ್ನು ವಿಭಿನ್ನ ರೀತಿಯಲ್ಲಿ ನಿರ್ವಚಿಸಬಹುದು.

ಇದರ ಪ್ರಸ್ತುತತೆ (It's relevance to the present day problems and needs of the society and the country) :

ಭಾರತದ ಬಹುಮುಖ್ಯ ಕಾವ್ಯಗಳೆಂದು ಗಣಿಸಲ್ಪಟ್ಟ ರಾಮಾಯಣ ಮಹಾಭಾರತಗಳು ಒಬ್ಬ ಕರ್ತೃವಿನಿಂದ ರಚಿತವಾದ ಕಾವ್ಯಗಳಾದರೂ ಜನಸಾಮಾನ್ಯರ ನಡುವೆ ಅವು ವಿಸ್ತಾರಗೊಂಡ ರೀತಿ ವಿಸ್ಮಯ ಹುಟ್ಟಿಸುವಂಥದು. ಸಂಸ್ಕೃತ ಮೂಲದ ಈ ಕಾವ್ಯಗಳನ್ನು ವಿವಿಧ ದೇಶ ಭಾಷೆಗಳು ಪುನರ್‌ಸೃಷ್ಟಿ ಮಾಡಿಕೊಂಡವು. ಆಯಾ

ನೆಲದ ಗುಣ ಸ್ವಭಾವಗಳನ್ನು ತಂತಮ್ಮ ಶಕ್ತ್ಯಾನುಸಾರ ಕವಿಗಳು ಈ ಕಾವ್ಯಗಳಲ್ಲಿಯೇ ಬಿಂಬಿಸಿದರಾದರೂ ತಮ್ಮದಲ್ಲದ, ಆರ್ಯ ಸಂಸ್ಕೃತಿಯ ಗುಣವಿಶೇಷಗಳನ್ನಾಗಲೀ ಅಥವಾ ಅವರ ಸ್ಥಾಪಿತ ಮೌಲ್ಯಗಳನ್ನಾಗಲೀ ಬದಲಿಸಲು ಸಾಧ್ಯವಾಗಲಿಲ್ಲ. ಅವು ಆಳುವ ವರ್ಗಗಳ ನಡುವಿನ ದ್ವೇಷ ವೈಷಮ್ಯಗಳನ್ನು ಪ್ರೀತಿ ಪ್ರೇಮಗಳನ್ನು ಆ ಮೂಲಕ ಸಾಮ್ರಾಜ್ಯಶಾಹಿ ವಿಸ್ತರಣೆಯನ್ನು ಕೇಂದ್ರವಾಗಿ ಇಟ್ಟುಕೊಂಡವುಗಳು. ಇವುಗಳನ್ನೇ ಮೌಲ್ಯಗಳೆಂದು ಒಪ್ಪಿದ ನಮ್ಮ ದೇಶಭಾಷಾ ಕಾವ್ಯಗಳೂ ಪೋಷಿಸಿಕೊಂಡು ಬಂದವು.

ಆದರೆ ಇದಕ್ಕೆ ಪ್ರತಿಯಾಗಿ ಸ್ಥಳೀಯ ಸಾಂಸ್ಕೃತಿಕ ವೀರರ ಕಥನಗಳನ್ನು ಸ್ತ್ರೀ ಪ್ರಧಾನವಾದ ದ್ರಾವಿಡ ಮೂಲ ಮೌಲ್ಯಗಳನ್ನು ಹಾಗೂ ಈ ಮೂಲಕ ತಮ್ಮದೇ ನೆಲದ ಗುಣವನ್ನು ಸಹಜವಾಗಿ ಹೊರಸೂಸುವ ದೀರ್ಘ ಕಥಾನಕಗಳು ಕನ್ನಡದಲ್ಲಿ ಲಭ್ಯವಿವೆ. ಈ ಕಥನಗಳೇ ನಿಜವಾದ ಅರ್ಥದಲ್ಲಿ ಕನ್ನಡ ಸಂಸ್ಕೃತಿಯ ಇತಿಹಾಸವನ್ನು ನಿರೂಪಿಸಬಲ್ಲಂಥ ಶಕ್ತಿ ಪಡೆದವುಗಳು. ರಾಜಮಹಾರಾಜರ ಆಳ್ವಿಕೆಯ ವಿಧಾನಗಳೇ ನಮ್ಮ ಭವ್ಯ ಇತಿಹಾಸ ಎಂದು ಸಾರುತ್ತ ಬಂದಿರುವ ನಮ್ಮ ಬಹುಪಾಲು ಇತಿಹಾಸಕಾರರ ಕಣ್ಣು ತೆರೆಸಿ ಜನಸಾಮಾನ್ಯರ ಇತಿಹಾಸಕ್ಕಾಗಿ ಒತ್ತಾಯಿಸಬಲ್ಲ, ಆ ಬಗೆಗಿನ ಅರಿವು ಮೂಡಿಸಬಲ್ಲ ಶಕ್ತಿ ಮಂಟೇಸ್ವಾಮಿ ಮಹಾಕಾವ್ಯಕ್ಕುಂಟು.

ಬುಡಕಟ್ಟು ಮತ್ತು ಹಿಂದುಳಿದ ಸಮುದಾಯಗಳ ಪ್ರವೃತ್ತಿ ಸಾಂಸ್ಕೃತಿಕ ಅನನ್ಯತೆಯನ್ನು ಕಾಯ್ದುಕೊಳ್ಳುವುದು ಹಾಗೂ ಅದೇ ವೇಳೆಯಲ್ಲಿ ಸಂಸ್ಕೃತೀಕರಣ ಪ್ರಕ್ರಿಯೆಗೆ ತಮ್ಮನ್ನು ತಾವು ಒಡ್ಡಿಕೊಳ್ಳುವ ಹಂತದಲ್ಲಿ ಮೌಖಿಕ ಮಹಾಕಾವ್ಯಗಳು ಆವಿಷ್ಕಾರ ಹೊಂದುತ್ತವೆ. ಭಾರತೀಯ ಸಮಾಜವು ಜಾತ್ಯಾಧಾರಿತವಾದುದರಿಂದ ಭಾರತೀಯ ಸಮಾಜದ ಮೌಖಿಕ ಮಹಾಕಾವ್ಯಗಳು ವಿಶೇಷ ಮಹತ್ವ ಪಡೆದಿವೆ. ಜನಪದ ಮಹಾಕಾವ್ಯಗಳು ಯಾವತ್ತೂ ಜಾತಿ ಸಮಾಜಗಳ ಸ್ಥಾಪಿತ ಮೌಲ್ಯಗಳ ವಿರುದ್ಧ ಪ್ರತಿರೋಧವನ್ನು ತೋರಿಸುತ್ತಾ ಬಂದಿವೆ. ವಿವಿಧ ಜಾತಿ ಮತ್ತು ಗುಂಪುಗಳ ನಡುವೆ ಸಾಮರಸ್ಯವನ್ನು ಸ್ಥಾಪಿಸಲು ಅವು ಹೆಣಗಿವೆ.

ಜ್ಞಾನ ಪ್ರಸಾರಕ್ಕೆ ಇದರ ಕೊಡುಗೆ (It's likely contribution to the knowledge):

ಮಂಟೇಸ್ವಾಮಿ ಮಹಾಕಾವ್ಯ ಪ್ರಚಲಿತವಿರುವ ಭೂಭಾಗ ದಕ್ಷಿಣಕರ್ನಾಟಕದ ಬಯಲುಸೀಮೆಯೇ ಆಗಿದ್ದರೂ ಚಾಮರಾಜನಗರ, ಮೈಸೂರು, ಮಂಡ್ಯ, ಬೆಂಗಳೂರು ಗ್ರಾಮಾಂತರ, ರಾಮನಗರ ಈ ಐದೂ ಜಿಲ್ಲೆಗಳ ಆಡುಮಾತು ಪ್ರಾಂತೀಯ ಭೇದಗಳಿಂದ ಕೂಡಿದ್ದು ಯಾವ ವಿದ್ವಾಂಸರೂ ಈ ತನಕ ಈ ಕಥಾನಕದ ಸಾಂದರ್ಭಿಕ ವ್ಯತ್ಯಯಗಳನ್ನು ಸಾಹಿತ್ಯಕ ಹಿನ್ನೆಲೆಯಲ್ಲಿ ಪರಿಶೀಲನೆಗೆ ಎತ್ತಿಕೊಂಡಿಲ್ಲ. ಮೌಖಿಕ ಪರಂಪರೆಯ ಈ ಮಹಾಕಾವ್ಯವನ್ನು ಶಿಷ್ಟ ಕಾವ್ಯಗಳ ರೀತಿಯಲ್ಲೇ ಸಂಪಾದನೆಗೆ ಗುರಿಪಡಿಸಿ ಅಧ್ಯಯನ ಮಾಡಲಾಗಿದೆ. ಮೌಖಿಕ ಮಹಾಕಾವ್ಯದ ಸ್ವಭಾವವನ್ನು ಸರಿಯಾಗಿ ಗ್ರಹಿಸದೆ ಅಧ್ಯಯನ ನಡೆಸಿರುವುದರಿಂದ ಅದರ ಗುರಿತಪ್ಪಿದ್ದು ನಿರೀಕ್ಷಿತ ಫಲಗಳನ್ನು ಅದು ತಂದುಕೊಟ್ಟಿಲ್ಲ.

ಕಿಡುಗಣ್ಣ ರೇಚಪ್ಪಾಜಿ
ಹಿರೀ ಚೆನ್ನಾಜಮ್ಮ
ಮಳವಳ್ಳಿ ಸ್ವಾಮ್ಗೊಳು
ಬೊಪ್ಪಣಪುರದ ಬುದ್ಧಿಯವರೇ
ನಾವು ಕೂಗುವ ಕೂಗು
ನಿಮ್ಮ ಪಾದಕ್ಕರುವಾಗಲಪ್ಪ
ಸಿದ್ದಯ್ಯ ಸ್ವಾಮಿ ಬನ್ನಿ
ಅಯ್ಯಯ್ಯೋ ಗುರುವೆ ..ಆ .....
ಲಿಂಗಯ್ಯ ದಯ ಮಾಡೋ
ಸ್ವಾಮಿ ನಾವು ಕೂಗುದ ಕೂಗು
ಕೊಯಮ್ಮತ್ತೂರು ಜಿಲ್ಲೆ
ಕಿರುದಾಳ ಬಾಳ್ಗುಣ್ಸೆ
ಕೊತ್ತನ್ನೂರು ತೆಲ್ಲೂರು
ಬಾಣೂರು ಸೊಂಡ್ರಳ್ಳಿ
ಅಂಕಣಪುರದ ಮಧ್ಯ
ಚಿಕ್ಕಯ್ಯನ ದೊಡ್ಡಿ
ಚಿಕ್ಕಲ್ಲೂರು ಕ್ಷೇತ್ರ ..
ಕುರುಬನಕಟ್ಟೆ ಲಿಂಗು
ಫಲಾರದ ಜ್ಯೋತಿ
ಮಡುವಾಳ ಮಾಚಯ್ಯ
ಪರಂಜ್ಯೋತಿ ನನ್ನಪ್ಪ
ನಾವು ಕೂಗುದ ಕೂಗು
ಭಕ್ತರು ಮಾಡಿದ ಭಕುತಿ
ನೀಲಿ ಸಿದ್ದಪ್ಪಾಜಿ
ಗುರುವೇ ಅವರು ಮಾಡಿದ
ಭಕುತಿ ನಿಮ್ಮ ಪಾದಕ್ಕರುವಾಲಪ್ಪ
ಸಿದ್ದಯ್ಯ ಸ್ವಾಮಿ ಬನ್ನಿ
ಕಂಡಾಯದ ಒಡಯ ... ಆ ..
ಆ ಲಿಂಗಯ್ಯ ದಯ ಮಾಡೋ

ಪರಾತ್ಪರ ವಸ್ತು ಪಾವನಮೂರ್ತಿ ಅಖಂಡ ಸ್ವರೂಪ ಅಲ್ಲಮಾಪ್ರಭು ಧರೆತಂದವರು ಧರೆಗೆದೊಡ್ಡವರು. ಸ್ವಾಮಿಯವರು ಕೈಲಾಸವನ್ನು ಬಿಟ್ಟು ಉಕ್ಕಿ ಹರಿಯುವ ಸಮುದ್ರವನ್ನು ಕೆಂದಾವ್ರೆ ಕೊಳದಲ್ಲಿ ಉದ್ಭವವಾಗಿ ಸ್ವಾಮಿಯವರು ಪರಂಜ್ಯೋತಿ ಅಂತ ಸ್ವಾಮಿ ಧರೆಗೆದೊಡ್ಡವರು.

ಹಾದಿಗೆ ಹಲವಾರವಂತೆ
ಪೂಜೆಗೆ ಬೊಪ್ಪಣಪುರ
ಸಿದ್ದಯ್ಯ ಸ್ವಾಮಿ ಬನ್ನಿ
ಪವಾಡ ....
ಲಿಂಗಯ್ಯ ನೀವೇ ಬನ್ನಿ
ಕಂಡಾಯದ ಒಡೆಯ .. ಆ ..
ಆ ಲಿಂಗಯ್ಯ ದಯ ಮಾಡೋ
ಗುರುಗೆ ಕಪ್ಪಡಿ ಕೈಲಾಸವಂತೆ
ಚಿಕ್ಕಲ್ಲೂರು ಗುರು ಮಠ
ಸಿದ್ದಯ್ಯ ಸ್ವಾಮಿ ಬನ್ನಿ
ಪವಾಡ .... ಆ ....
ಜ್ಯೋತಿಲಿಂಗಯ್ಯ ಬನ್ನಿ

ಸ್ವಾಮಿ, ಹರಿಯೋ ಸಮುದ್ರವನ್ನು ತಡೆಗಟ್ಟಿ ಜಲಕ್ಕೆ ಜಾಂಬವನ್ನಾಗಿ ಕೊಂದು ಧರೆ ತಿಷ್ಟೆಯನ್ನು ಮಾಡಿ ಧರೆಗೆದೊಡ್ಡವರು ಅಂತ್ಹೇಳಿ ನಾಮಾಂಕಿತವನ್ನು ಪಡ್ಕೊಂಡು ಪರಂಜ್ಯೋತಿ. ಧರೆ ಉತ್ಪತ್ತಿ ಮಾಡಿದಂತಹ ಧರೆಗೆದೊಡ್ಡವರು ಪರಮೇಶ್ವರ ಉಳುಮೆ ಮನೆ ಒಳಗೆ ಕೂತ್ಕೊಂಡು ಉಳುಮೆಸಂಗಪ್ಪನಾದರಂತೆ. ನಾಳೆ ಜಗತ್ತು ಉತ್ತರ ದಕ್ಷಿಣ ಪೂರ್ವ ಪಶ್ಚಿಮ ನಾಲ್ಕು ಮೂಲೆ ಎಂಟು ದಿಕ್ಕಿನ ರಾಜ್ಯವನ್ನು ದಿಷ್ಟಾಯಿಸಿ ನೋಡಿದರಂತೆ.

ಆದಿಯ ಕಲ್ಯಾಣಕ್ಕೆ ನಮ್ಮ ದೇವರು
ದಯಮಾಡುತ್ತಾರೆ
ಸಿದ್ದಯ್ಯ ಸ್ವಾಮಿ ಬನ್ನಿ
ಕಂಡಾಯದ ಒಡೆಯ
ಲಿಂಗಯ್ಯ ನೀವೇ ಬನ್ನೋ
ಆದಿಯ ಕಲ್ಯಾಣ
ತೊಂಭತ್ತೇಳು ಬೀದಿ
ಪರಂಜ್ಯೋತಿ ನಮ್ಮಪ್ಪ
ತನ್ನ ಕಲ್ಯಾಣ ನೋಡಿ ಅವರು
ದಿಷ್ಟಾಯಿಸಿ ನೋಡುತ್ತಾರೆ
ಸಿದ್ದಯ್ಯ ಸ್ವಾಮಿ ಬನ್ನಿ
ಪರಂಜ್ಯೋತಿ ಲಿಂಗಯ್ಯ
ನೀವೇ ಬನ್ನೋ ....

ಆದಿಕಲ್ಯಾಣಪಟ್ಟಣಕ್ಕೆ ಯಾವಾಗ ದೃಷ್ಟಿ ಮಡಗಿ ನೋಡಿದರಂತೆ. ಆದಿ ಕಲ್ಯಾಣಪಟ್ಟಣ ಎಂದರೆ ಬಿಜ್ಜಾಳನ ದೊರೆತಾನ, ಕೊಂಡಕಾರ ಮಂಚಣ್ಣ ಬಸವಣ್ಣನವರು ಮಂತ್ರತ್ವವನ್ನು

4

ನಿಜ ಸುವ್ವೀ ಹೇಳಮ್ಮ
ದೇವಾರು ದೇವ ....ಆ

ಬಸವಣ್ಣನವರು ಲಕ್ಷದ ಮೇಲೆ ತೊಂಭತ್ತಾರು ಸಾವಿರ ಶರಣರಿಗೂ ನಿತ್ಯ ಭೋಜನವನ್ನು ಮಾಡುತ್ತಾ ಇದ್ದರಂತೆ. ಕಲ್ಯಾಣದಲ್ಲಿ ಮಿಕ್ಕನಾದ ಪ್ರಸಾದವನ್ನು ಬಸವಣ್ಣನವರ ಮಡದಿಯಾದಂತಹ ತಾಯಿ ನೀಲಮ್ಮನವರು ಒಕ್ಕಲಕ್ಕಿ ಹಾಕಿ, ಒಂದು ಬದನೆಕಾಯಿ ಕೂದು ಲಕ್ಷದ ಮೇಲೆ ತೊಂಭತ್ತಾರು ಸಾವಿರ ಶರಣರಿಗೂ ನಿತ್ಯ ಭೋಜನ ಮಾಡಿ ಮಿಕ್ಕಿದ ಪ್ರಸಾದವನ್ನ ಕಲ್ಲುಬಂಡಿಕಟ್ಟಿ ಕೈಲಾಸಕ್ಕೆ ಹೂಡುತ್ತಾ ಇದ್ದರು. ಕೈಲಾಸ ಎಂದರೆ ಆ ತಾಯವರ ಕೈಲಾಸಕ್ಕೆ ಕಲ್ಲುಬಂಡಿಕಟ್ಟಿ ಆ ಕೈಲಾಸಕ್ಕೆ ಕೂಡುತ್ತಾ ಇರಲಿಲ್ಲ ಶ್ರೀಶೈಲ್ಯದಲ್ಲಿ ಇರತಕ್ಕಂತ ಮಲ್ಲಿಕಾರ್ಜುನಗಿರಿ ಒಳಗೆ ಬಂಗಲೆಯಲ್ಲಿ ಮಿಕ್ಕಿದ ಪ್ರಸಾದವನ್ನು ಹೂಡುತ್ತಾ ಇದ್ದರಂತೆ. ಆವಾಗ ನೀಲೋಚನೆ ಲಕ್ಷದ ಮೇಲೆ ತೊಂಭತ್ತಾರು ಸಾವಿರ ಶಿವಶರಣರಿಗೆ ನಿತ್ಯ ಭೋಜನ ಮಾಡುತ್ತಿರುವ ನೀವು "ನಿಜವಾದ ಗುರುಗಳಲ್ಲವೇ ? ಹೌದು ನೀಲೋಚನೆ. ನನ್ನ ಮಡದಿಯಾದ ನೀಲೋಚನೆ ಯಾತಕ್ಕೋಸ್ಕರ ಕೇಳುತ್ತಾ ಇದ್ದಾಳೆ ಎಂಬುದು ಅರಿವಾಗಲಿಲ್ಲ. ೭೦೦ ಮಠಕ್ಕೂ ನೀವು ಹೆಚ್ಚಿನ ಗುರುಗಳು ಮಾಡಿದ್ದಾರಲ್ಲವೇ ? ಹೌದು ನೀಲೋಚನೆ ಹಾಗಾದರೆ ಸ್ವಾಮಿ. ನಾನು ಒಂದು ಮಾತು ನಿಮಗೆ ಕೇಳಬೇಕಲ್ಲ ಕೇಳು ನೀಲೋಚನೆ. ಲಕ್ಷದ ಮೇಲೆ ತೊಂಭತ್ತಾರು ಸಾವಿರ ಶರಣರಿಗೂ ಗುರುಗಳಲ್ಲವೇ ? ಹಾಗಾದರೆ ಹುಳಿ ಉಪ್ಪು ತಿಂದವರು ಕಲ್ಯಾಣದಲ್ಲಿ ನೀಸೋದಿಲ್ಲ. ಮೇಲೆ ಕೆಳಗೆ ಹಲ್ಲು ಹುಟ್ಟುವ ನರಮಾನವರು ಆಡಿದ ಮಾತು ಇನ್ನಷ್ಟು ಹೊತ್ತಿಗೆ ಬರೋದಿಲ್ಲ ಅಂತ್ಹೇಳಿ ಎಲ್ಲರಿಗು ಲಿಂಗಧಾರಣೆ ಮಾಡ್ಕೊಂಡು ಇದ್ದಿರಲ ಬಸವಣ್ಣ. "ನೀವು ನಮಗೆ ಪತಿ ಆದ ಮೇಲೆ ನಿಮಗೆ ಗುರುಗಳು ಯಾರು ? ಎಂದು ಕೇಳಿದಾಗ ಎಲ್ಲೂ ಇಲ್ಲದ ಚಿಂತೆ ಬಂದುಬಿಡ್ತು ಬಸವಣ್ಣನವರಿಗೆ. ಒಂದು ಲಕ್ಷದ ಮೇಲೆ ತೊಂಭತ್ತಾರು ಸಾವಿರ ಶರಣರಿಗೆ ನಿಜವಾದ ಗುರುಗಳು ಹಾಗಾದಾರೆ ನನಗೆ ಗುರು ಯಾರು ?

ಅಯ್ಯ ಮಡದಿ ಆಡಿದ ಮಾತ
ಕೇಳಿಕೊಂಡು ಬಸವಣ್ಣ
ಒಕ್ಕ ಒಕ್ಕಲ ನೀರು ಕಣ್ಣಲ್ಲಿ
ತುಂಬ್ಕೊಂಡು
ದುಃಖ ಮಾಡವ್ರೆ ಬಸವಣ್ಣ
ಸುವ್ವಾ ಬಾ ಚನ್ನ ಬಸವಣ್ಣ
ಅವರು ಕಾವಿ ಕೂಟವನ್ನು
ಕಳೆದರು ಬಸವಣ್ಣ
ಅವರು ಚಿಂತೆ ಪಟ್ಟರು
ತಮ್ಮ ಮನದಲ್ಲಿ
ಆ ಸುವ್ವಾ ಬಾ ಚೆನ್ನ ಬಸವಣ್ಣ

ಪರಮಾತ್ಮ ಬಸವಣ್ಣ ಎರಡು ಕಣ್ಣಲ್ಲಿಯೂ ಧಾರಾವತಿಯಾಗಿ ನೀರು ಸುರಿಯುತ್ತಾ ಇತ್ತಂತೆ. ಮಡದಿ ನೀಲೋಚನೆ ನೋಡಿದಳಂತೆ. ಆಹಾ ! ನಾನಾಗಿ ನನ್ನ ಪತಿಯಾದ ಬಸವಣ್ಣನವರನ್ನು ಸಂತೋಷ ಕೆಡಿಸಿದೆನಲ್ಲ. ಸಂಗಮೇಶ್ವರ ಗದ್ದಿಗೆ ಮೇಲೆ ನಿದ್ರೆ ಮಾಡುವಾಗ ಶರಣೆಯಾದ ನೀಲೋಚನೆ ಗಂಡನ ಪಾದ ಹಿಡ್ಕೊಂಡು ಮಲಗಿದಳಂತೆ. "ಸತಿಗೆ ಪತಿ ದೇವರಂತೆ ಪತಿಗೆ ಸತಿ ದೇವರಂತೆ" ಹೀಗೆ ಇವರಿಬ್ಬರೂ ಚಿಂತೆ ಮಾಡುತ್ತಿರುವುದು ಉಳಮೆ ಕಾಡಿನಲ್ಲಿ ಕೂತಿದರಲ್ಲ ಧರೆಯನ್ನ ಉತ್ಪತ್ತಿ ಮಾಡಿದ ಧರೆಗೆದೊಡ್ಡವರು ಅಂತ ನಾಮಾಂಕಿತವನ್ನು ಪಡೆದು ಹರಿ ಸಮುದ್ರವನ್ನು ತಡೆಗಟ್ಟಿ ಭೂಮಿ ಹದಗೂಡಿ ಜಲಕ್ಕೆ ಜಾಂಬವನನ್ನು ಕೊಂದು ಮೂರು ಜಾತಿ ಮಣ್ಣನ್ನು ಭೂಮಿ ಮೇಲೆ ಬೀಸಾಕಿ ಅರಳಿಗಿಡವನ್ನು ಬೆಳಸಿ ಆ ಅರಳಕಾಯಿಯನ್ನು ಕಿತ್ತಿ ಅಂಗೈಯಲ್ಲಿ ಮಡಗಿ ಗಸಾಗಸನೇ ತಿಕ್ಕಿ ಎಣ್ಣೆಯನ್ನು ಮಾಡಿ ಆ ಮಣ್ಣಿನ ಸೊಲ್ಲಿಗೆ ಮಡಗಿ ಕಾವಿಯನ್ನು ಹರಿದು ಬತ್ತಿ ಮಾಡಿ ಚಕಮುಕಿಯನ್ನು ಹೊಡೆದು ಸರ್ವೇಕೆಂಡವನ್ನು ಮಾಡಿ ಕಸ್ಸಿ ಈ ಜಗತ್ತನ್ನೇ ಬೆಳಕು ಮಾಡಿ ಪರಂಜ್ಯೋತಿ ಅಂತ ನಾಮಕರಣ ಪಡೆದಂತಹ ಗುರುಗಳ ಪಾದಕ್ಕೆ ಅರುವಾಗ್ಬುಡ್ತಂತೆ.

ನೀಲೋಚನೆ ಆಡಿದ ಮಾತುಗಳ ಕೇಳಿ
ಗುರುಗಳ ಪಾದಕ್ಕರುವಾಗಿ
ನೀಲೋಚನೆ ಕನಸಿನಲ್ಲಿ ಮಾತಾಡುತ್ತಿದ್ದಾರೆ
ಗುರುದೇವ ....
ಗುರುವೇ .... ಆ .....

ನೀಲೋಚನೆಯ ಕನಸಿನಲ್ಲಿ ಮಾತಾಡಿದ್ದಾರೆ ಸ್ವಾಮಿಯವರು. ನೀಲೋಚನೆ ಯಾರು ? ನಾನು ತಾಯಿ. ನಾಳೆ ನನ್ನ ಗಂಡನಿಗೆ ಗುರು ಇಲ್ಲ ಎಂದು ಚಿಂತೆ ಮಾಡಬೇಕಾದಿಲ್ಲ. ನಿಮಗೆ, ನಿಮ್ಮ ಗಂಡನಿಗೆ, ಸರ್ವರಿಗೂ ಆದಿಕಲ್ಯಾಣಕ್ಕೂ ಈ ಜಗತ್ತಿಗೆ ಗುರುಗಳಾಗಿ ಬರುತ್ತಾ ಇದ್ದೀನಿ ಎಂದರಂತೆ ಪರಮಾತ್ಮ. ನಮ್ಮ ಕಲ್ಯಾಣಕ್ಕೆ ಬರುವಾಗ ನಮಗೆ ಈ ಕಲ್ಯಾಣವೇ ಒಂದು ಪವಿತ್ರ ಆಗುತ್ತದೆ ಅಲ್ಲ ? ಗುರುಗಳು ಯಾವ ಟೈಮಿಗೆ ನಮ್ಮ ಕಲ್ಯಾಣಪಟ್ಟಣಕ್ಕೆ ಬರುತ್ತೀರಿ ಎಂಬುದು ಗೊತ್ತಾಗಬೇಕು ಅಂದರಂತೆ. ನೀಲೋಚನೆ ಕಲ್ಯಾಣದ ಕಡೇ ಬಾಗಿಲಿನಲ್ಲಿ ಹರಳಯ್ಯನ ಮನೆಯ ನಾಲಿಗೆ ಇಲ್ಲದಂತ ಗಂಟೆ ಮೂರು ಸಾರಿ ದನೀರ್ ದನೀರ್ ಅಂತ ಹೊಡ್ಕೊಂಡರೆ ಆವಾಗ ಗುರುಗಳು ಬರುತ್ತಿದ್ದಾರೆ ಎಂಬುದಾಗಿ ತಿಳ್ಕೋಬಿಡಿ. ಆಗ್ಲಿ ಸ್ವಾಮಿ ಅಂದರಂತೆ. ಪಕ್ಕನೆ ಕಣ್ಣು ಬಿಟ್ಟು ನೋಡಿದರಂತೆ. ಕಲ್ಯಾಣದಲ್ಲಿ ಯಾರೂ ಇಲ್ಲ ಗಂಡನ ಪಾದದ ಮೇಲೆ ಮಲಗಿದರಂತೆ. ಬಸವಣ್ಣನವರನ್ನ ನಿದ್ರೆ ಭಂಗಪಡಿಸಬಾರದು ಅಂತ್ಹೇಳಿ ಅವರನ್ನು ತಟ್ಟಿ ಸ್ವಾಮಿ ಎದ್ದೋಳಿ ಎಂದರಂತೆ. ಏನು ನೀಲೋಚನೆ ಇನ್ನು ನೀವು ಗುರುಗಳು ಇಲ್ಲ ಅಂತ ಚಿಂತೆ ಮಾಡಬೇಡಿ. ನಮಗೆ ನಿಮಗೆ ಸರ್ವರಿಗೂ ಲಕ್ಷದ ಮೇಲೆ ತೊಂಭತ್ತಾರು ಸಾವಿರ ಶರಣರಿಗೂ ಮತ್ತು ಈ ಕಲ್ಯಾಣಕ್ಕೂ ಗುರುಗಳು ಬರುತ್ತಿದ್ದಾರೆ ನಾಳೆ ತುಂಬ್ದ ಸೋಮವಾರ ಮಾಪುಣ್ಯ ಕಾಲದಲ್ಲಿ ನಮ್ಮ ಕಲ್ಯಾಣಕ್ಕೆ ಆಗಮಿಸುತ್ತಿದ್ದಾರೆ

ಎಂದರು. ನೀಲೋಚನೆ ಬಾಗಲಕೋಟೆಯಿಂದ ನಾನು ಇಲ್ಲಿಗೆ ಮಂತ್ರತ್ವವನ್ನು ಆಳಿ ನಿನ್ನ ಲಗ್ನ ಮಾಡ್ಕೊಂಡೆ ನನಗೆ ಗೊತ್ತಿರದ ಗುರುಗಳು ಈ ಕಲ್ಯಾಣಕ್ಕೆ ಬರುವುದು ನಿನಗೆ ಹೇಗೆ ಗೊತ್ತು ? ಸ್ವಾಮಿ ಆ ಗುರುಗಳು ನನ್ನ ಕನಸಿನಲ್ಲಿ ಬಂದು ಹೇಳಿದ್ದಾರೆ. ಏನಂತ ಹೇಳಿದರು ನೀಲೋಚನೆ ನಾಳೆ ತುಂಬ್ದ ಸೋಮವಾರ ನಾನು ನಿಮ್ಮ ಕಲ್ಯಾಣಕ್ಕೆ ಬರುತ್ತೀನಿ. ಕಡೇ ಬಾಗಿಲಲ್ಲಿ ಇರುವಂತ ಹರಳಯ್ಯನ ಮನೆ ಮುಂದಿರುವ ನಾಲಿಗೆ ಇಲ್ಲದ ಚರ್ಮದ ಗಂಟೆ ಡನೀರ್ ಡನೀರ್ ಅಂತ ಮೂರು ಸಾರಿ ಹೊಡೆಯುತ್ತದೆ. ಆಗ ಗುರುಗಳು ಬರುತ್ತಿದ್ದಾರೆ ಎಂದು ತಿಳ್ಕೊಳ್ಳಿ ಎಂದು ಹೇಳಿದ್ದಾರೆ. ಬಸವಣ್ಣನವರು ತಲೆತೂಗಿ ಚಿಂತೆ ಮಾಡಿದರಂತೆ. ಶಿವ ಮೊದಲೇ ನೀಲೋಚನೆ ನಿಮ್ಮ ಗುರುಗಳು ಯಾರು ಅಂತ ಕೇಳಿದರು. ಈಗ ಗುರುಗಳು ಬರುತ್ತಿದ್ದಾರೆ ಅಂತ ಹೇಳುತ್ತಿದ್ದಾಳೆ. ನನ್ನ ಕೈಹಿಡಿದ ಪತ್ನಿಯ ಕನಸಿನಲ್ಲಿ ಕಂಡಂತ ಗುರುಗಳು ನನ್ನ ಕನಸಿನಲ್ಲಿ ಯಾಕೆ ? ಕಾಣಬಾರದು. "ನಾನು ಎಂಥಾ ಕರ್ಮಗೇಡಿ ಬಸವಣ್ಣನಾದೆ ಈ ಕಲ್ಯಾಣಕ್ಕೆ" ಆ ಜಾತಿ ಈ ಜಾತಿಯವರನ್ನೆಲ್ಲ ಒಗ್ಗೂಡಲು ಕ್ರಾಂತಿಯನ್ನು ಮಾಡಿ ಲಿಂಗವಂತರನ್ನಾಗಿಮಾಡಬೇಕು ಅನ್ನುವಾಗ ನನ್ನ ಕನಸಿನಲ್ಲಿ ಕಾಣದೇ ಹೋದ ಮೇಲೆ "ನಾನು ಈ ಕಲ್ಯಾಣಕ್ಕೆ ತರವಲ್ಲ" ಸ್ವಾಮಿ ಚಿಂತೆ ಮಾಡಬೇಡಿ. "ಆ ಸ್ವಾಮಿ ನಮಗೆ ಕಂಡರೇನು ? ನಿಮಗೆ ಕಂಡರೇನು ? ಕಲ್ಯಾಣಕ್ಕೆ ಬರಬೇಕಾದರೆ ಈ ಜಗತ್ತಿಗೇ ಗುರುಗಳಾಗಬೇಕು –

ಮಡದಿ ಆಡಿದ ಮಾತು
ನಮ್ಮ ಬಸವಣ್ಣನವರು
ಕೇಳುತ್ತಾರೆ...................
ಸಿದ್ದಯ್ಯ ಸ್ವಾಮಿ ಬನ್ನಿ
ಪವಾಡ ಲಿಂಗಯ್ಯ ನೀವೇ ಬನ್ನೋ
ಅಯ್ಯ ಬಸವಣ್ಣನವರು ಗುರುವೆ
ಮಡದಿ ಆಡಿದ ಮಾತು
ಕೇಳ್ಕೊಂಡು ಅವರ ಕಡೇಯಬಾಗಿಲಿಗೆ
ನಮ್ಮ ಬಸವಣ್ಣ ಬರುತ್ತಾರೆ
ಗಂಗಾಧರ ಲಿಂಗಯ್ಯ ಬನ್ನಿ
ಕಡೇಯ ಬಾಗಿಲ ಒಳಗೆ
ನಿಂತಿರುವಂತ ಕಡಕರಸಂಗಣ್ಣ
ಬಾರಪ್ಪ ....
ಏನು ಗುರುವೇ ?
ಏನು ಬಸವಣ್ಣನವರೆ ....
ನಾನು ಹೇಳಿದ ಮಾತು ನೀನು
ಲಾಳಾಯಿಸಿ ಕೇಳಪ್ಪ
ಸಿದ್ದಯ್ಯ ಸ್ವಾಮಿ ಬನ್ನಿ

ಪವಾಡ ....

ಪರಮಾತ್ಮ, ಸಂಗಪ್ಪ ಏನು ಗುರುವೇ ? ನಾಳೆ ನಮ್ಮ ಕಲ್ಯಾಣಕ್ಕೆ ನಮಗೂ ನಿಮಗೂ ಗುರುವಾಗಿ ಬರುತ್ತಿದ್ದಾರಪ್ಪ ಸ್ವಲ್ಪ ಗ್ಯಾನವಾಗಿ ಕೇಳು. ಕಾವಿ ಉಟ್ಟವರು ಕಾಮಂಡಲ ಧರಿಸಿದವರು, ಲಿಂಗವಂತರು, ಜಂಗಮರನ್ನು ಮಾತ್ರ ಈ ಕಲ್ಯಾಣದ ಒಳಗೆ ಬುಟ್ಬಿಡಿ. ಪೈಲ್ಗಳನ್ನು ಮಾತ್ರ ಒಳಕ್ಕೆ ಬುಡ್ಬೇಡಿ ಅಂದರು. ಯಾಕೆಂದರೆ ಕಲ್ಯಾಣ ಬೃತ್ ಕೆಟ್ಹೋಗುತ್ತದೆ ಕಾಣೋ. ಆಯ್ತು ಗುರುದೇವ. ನೀಲೋಚನೆ ನಾವು ರೇಚಪ್ಪಾಜಿಯನ್ನು ಕರ್ಕೊಂಡು ಸ್ನಾನಕ್ಕೆ ಹೋಗಿ ಬರುತ್ತೀವಿ. ನೀನು ಕಲ್ಯಾಣವನ್ನು ಶೃಂಗಾರವನ್ನು ಮಾಡಬೇಕಾದರೆ ಸಂಗಮೇಶ್ವರ ಗದ್ದಿಗೆ ಒಳಗೆ ಆ ನಾದನಿ ಆದಂತ ನಾಗಮ್ಮನವರನ್ನು ಕರ್ಕೊಂಡು ಆ ಗದ್ದಿಗೆಯನ್ನು ಶೃಂಗಾರ ಮಾಡುತ್ತಾ ಇದ್ದಾರೆ.

ಅವರು ಬಿಳಿಯ ಕುದುರೆ ಏರಿ
ಏರಿ .... ಬಸವಣ್ಣ
ನಮ್ಮ ಕಿಡುಗಣ್ಣ ರೇಚಪ್ಪಾಜಿ
ಕೋರಾ ರುಮಾಲು
ಕಟ್ಕೊಂಡು ರೇಚಣ್ಣ
ಅವರು ನಡುವಿಗೆ ಡೋಲು
ಕಟ್ಕೊಂಡು ರೇಚಣ್ಣ
ಅವರು ಬಿಳಿಯ ಕುದುರೆ ಏರಿ
ಬರುತ್ತಾವರಲ್ಲೋ ಬಸವಣ್ಣ
ಸಿದ್ದಯ್ಯ ಸ್ವಾಮಿ ಬನ್ನಿ
ಅಪ್ಪ ಇವರು ಆಡಿದ ಮಾತು
ಉಳುಮೆ ಮನೆಯ ಒಳಗೆ
ಕೂತಿರುವ ನಮ್ಮ ಗುರು
ಧರೆಯ ತಂದವರು
ಧರೆಗೆದೊಡ್ಡವರು
ಹೆಣ್ಣನ್ನೇ ಪಡೆದವರು
ಗಂಡನ್ನೇ ಪಡೆದವರು
ಭೂಮಿಯ ತಂದವರು
ಭೂಲೋಕವ ಪಡೆದವರು
ಆದಿ ಒಳಗೆ ಬಂದಾರಂತೆ
ಆದಿಶಕ್ತಿ ಪಡೆದಾರಂತೆ
ಸಿದ್ದಯ್ಯ ಸ್ವಾಮಿ ಬನ್ನಿ
ಕಲಿಯುಗದಲ್ಲಿ ಲಿಂಗಪ್ಪ
ನೀವೇ ಬನ್ನೋ ....

ಇವರು ಕಲ್ಯಾಣದ ಕಲ್ಯಾಣಿಕೊಳಕ್ಕೆ ಸ್ನಾನಕ್ಕೆ ಹೊರಟಾರಂತೆ. ನೀಲೋಚನೆ ನಾಗಮ್ಮನವರು ಈ ಕಲ್ಯಾಣದ ಸಂಗಮೇಶ್ವರ ಗದ್ದಿಗೆಯ ಗುರುಮಠವನ್ನ ತೊಳೆದು ಶೃಂಗಾರ ಮಾಡುತ್ತಿದ್ದಾರೆ. ಇವರು ಕಟುಕರಸಂಗಯ್ಯನಿಗೆ ಆಡತಕ್ಕಂತ ಮಾತು. ಉಳುಮೆ ಮನೆಯೊಳಗಿರುವ ಸ್ವಾಮಿಯವರಿಗೆ ಅರಿವಾಯ್ತು. ಆಹಾ ! ಬಸವಣ್ಣ – ನಾಳೆ ಆದಿಕಲ್ಯಾಣ ಕಟುಕರ ಅಂಗಡಿ ಆಗುತ್ತದೆ. ಹೌದು ಎಲ್ಲ ಜಾತಿಯನ್ನು ಒಂದು ಜಾತಿ ಮಾಡಲು ಕ್ರಾಂತಿಮಾಡಬೇಕು ಅಂಥ ಕೂತಿದ್ದೇ ಅಲ್ಲ ಬಸವಣ್ಣ. ಈ ಲಿಂಗವಂತರ ಸತ್ಯವನ್ನು ನೋಡಬೇಕಂತ್ಹೇಳಿ ನಾಳೆನೇ ಬರುತ್ತಾ ಇದ್ದೀನಿ ನಿನ್ನ ಕಲ್ಯಾಣಕ್ಕೆ. ಸ್ವಾಮಿ ಕಲ್ಯಾಣಕ್ಕೆ ಯಾವ ರೀತಿಯಾಗಿ ಆಗಮಿಸುತ್ತಿದ್ದಾರೆಂದರೆ ತಮ್ಮ ಚಕ್ಕಳವನ್ನು

ಉಳುಮೆ ಮನೆಯಾ ಬಿಟ್ಟಾರಂತೆ
ಕಲ್ಯಾಣಕ್ಕೆ ಬರುತ್ತಾರೆ
ಸಿದ್ದಯ್ಯ ಸ್ವಾಮಿ ಬನ್ನಿ
ಆಹಾ ! ಗುರುವೇ
ಲಿಂಗಪ್ಪ ನೀವೇ ಬನ್ನೋ
ಆ .... ಆದಿಕಲ್ಯಾಣಕ್ಕೆ
ಬರುತ್ತಾವ್ರೆ ನನ್ನಪ್ಪ
ತುಂಬ್ದ ಕೋಟೆ
ಕಳ್ಳಿಗಾಲ ನನ್ನಪ್ಪ
ಬರುವಾಗ ಒಳಗೆ
ಬರುವಂತ ಗುರುಗಳ
ನಮ್ಮ ಸಂಗಪ್ಪ ನೋಡುತ್ತಾರೆ
ಸಿದ್ದಯ್ಯ ಸ್ವಾಮಿ ಬನ್ನಿ
ಅಂಯ್ಯಯ್ಯೋ ಗುರುವೇ
ಲಿಂಗಪ್ಪ ನೀವೇ ಬನ್ನೋ
ಕಲ್ಯಾಣದ ಬಾಗಿಲ ಒಳಗೆ
ನಿಂತ್ಕೊಂಡು ನನ್ನ ಗುರುವೆ
ನೋಡುದರು ನನ್ನಪ್ಪ
ಧರೆಗೆದೊಡ್ಡವರು ಕಲ್ಯಾಣಕ್ಕೆ
ಅವರು ಮೆಲ್ಲ ಮೆಲ್ಲನೆ ಬರುತ್ತಾರೆ
ಸಿದ್ದಯ್ಯ ಸ್ವಾಮಿ ಬನ್ನಿ
ಕಂಡಾಯದ ಒಡೆಯ
ಲಿಂಗಪ್ಪ ನೀವೇ ಬನ್ನಿ

ಕಾಣದಿದ್ದವರಾಗಿ ಕಲ್ಯಾಣಕ್ಕೆ ತಲೆಬೊಕ್ಕೊಂಡು ಹೋಗುತ್ತಾ ಇದ್ದರಂತೆ. ಆ ಕಡೆ ನಿಂತಿದನಲ್ಲ ಸಂಗಪ್ಪ ದೊನ್ನೆಯನ್ನು ಹಿಡ್ಕೊಂಡು ಹೇ .... ಕೊಳಕ ಜಂಗಮ,

ಗ್ಯಾನಗೆಟ್ಟ ಜಂಗಮ ನಿನಗೆ ಬುದ್ಧಿ ಇಲ್ಲವೇ ? ಯಾಕಪ್ಪ ? ಅವತ್ತು ಬಸವಣ್ಣ ನೀಲಮ್ಮನವರ ಮನೆಯ ಅಡಿಗೆಯಂತೆ. ದಿನಕ್ಕೊಂದು ಮನೆ ಅಡಿಗೆ ಆಗುತ್ತಿತ್ತು. ಆವತ್ತು ತುಂಬ್ದ ಸೋಮವಾರ ವಾರಕ್ಕೊಂದು ಸಾರಿ ಬಸವಣ್ಣನವರ ಮನೆ ಅಡಿಗೆ ಆಗುತ್ತಿತ್ತು. ಆದಿಕಲ್ಯಾಣ ಹುಟ್ದ ಕಾಲಕ್ಕೂ ಕಟ್ಟಿದ ಕಾಲಕ್ಕೂ ನಿನ್ನಂಥ ಕೊಳಕು ಜಂಗಮಕಲ್ಯಾಣದಲ್ಲಿ ನಾವು ಕಂಡಿಲ್ಲ. ಕಲ್ಯಾಣಕ್ಕೆ ಹೋಗುತಾ ಇದ್ದೀಯಲ್ಲ ನೀನು ಯಾರನ್ನು ಕೇಳ್ಕೊಂಡು ಹೋಗುತ್ತಿದ್ದೀಯಾ ? ಅಪ್ಪ .... ಬಸವಣ್ಣನವರ ಮನೆ ಪ್ರಸಾದದ ಊಟಕ್ಕೆ ಯಾರನ್ನ ಕೇಳಬೇಕಪ್ಪ. ಈ ಜಗತ್ತೆ ಕೊಡುತ್ತದೆ. ಹಸ್ದು ಬಂದವರಿಗೆ ಹಾದಿ ಒಳಗೆ ಇರುತಕ್ಕಂತ ಸಾಧು ಸತ್ಪುರಷರಿಗೆಲ್ಲ ಬಸವಣ್ಣನವರ ಮನೆ ಊಟ ಆಗುತ್ತದೆ. ನಾನು ಯಾರನ್ನು ಕೇಳಬೇಕಪ್ಪ. ನಾನು ಊಟ ಮಾಡಿ ಭಾಳ ಮೂರುದಿವಸ ಆಗ್ಬಿಟ್ಟಿದೆ. ನೆಡ್ದು ನೆಡ್ದು ಕೈಕಾಲೆಲ್ಲ ಸುಸ್ತಾಗಿದೆ. ಊಟ ಮಾಡಬೇಕು ಬಸವಣ್ಣನವರ ದರ್ಶನ ಮಾಡ್ಕೊಂಡು ಸ್ವಲ್ಪ ಪ್ರಸಾದ ಊಟ ಮಾಡ್ಕೊಂಡು ಮುಂದಕ್ಕೆ ಹೋಗುತ್ತೀನಿ ಅಂದರಂತೆ. ಧರೆಗೆದೊಡ್ಡವರು ಆಡಿದ ಮಾತು ಕೇಳ್ಕೊಂಡು ಸಂಗಪ್ಪನಿಗೆ ಕ್ವಾಪ ತಟ್ಟಿ ನೋಡಿದರಂತೆ ದುರುದುರುನೇ ಕೊಳಕು ಜಂಗಮ ನಿನ್ನನ್ನು ಕಲ್ಯಾಣದ ಒಳಗೆ ಬಿಟ್ಟುಬಿಟ್ಟರೆ ಕಲ್ಯಾಣದ ಭಕ್ತರೆಲ್ಲ ಹದಗೆಟ್ಹೋಗುತ್ತಾರೆ ಹೋರಟ್ಹೋಗು ಕಲ್ಯಾಣ ಬಿಟ್ಟು ಆಚೆಗೆ. ಅಪ್ಪ ಹಂಗನ್ನಬೇಡಕಾಣಪ್ಪ. ನಿನಗಾದರೂ ಸ್ವಲ್ಪ ಒಳ್ಳೆದಾಗಲಿ ಕಡೆ ಒಳಗೆ ಕೂತ್ಕೊಂಡು ಊಟ ಮಾಡ್ಕೊಳ್ತೀನಿ ಬಿಡಪ್ಪ. ಹೇ ... ಕೊಳಕು ಜಂಗಮ ಈ ಕಲ್ಯಾಣದ ನಿಯಮ ನಿನಗೇನಾರು ಗೊತ್ತಾ ? ಇಲ್ಲಿ ಕಾವಿ ಉಟ್ಟವರು, ಕಾಮಂಡಲ ಧರಸ್ದವರು ಲಿಂಗವಂತರು ಜಂಗಮರು ವಿಭೂತಿಗಿಭೂತಿ ಧರಿಸಿದವರಿಗೆ ಮಾತ್ರ ಈ ಕಲ್ಯಾಣದಲ್ಲಿ ಸ್ಥಳವುಂಟು ಯಾರೋ ನಿನ್ನ ಕಡೇ ಬಾಗಿಲಿನಲ್ಲಿ ಬಿಟ್ಟಿರಬಹುದು ಅಷ್ಟೇ. ಏನಪ್ಪ ನಿಮ್ಮ ಕಲ್ಯಾಣದಲ್ಲಿ ಲಿಂಗವಂತರು, ಜಂಗಮರು, ಐಗಳು, ಸ್ವಾಮಿಗಳು ಇವರುಗಳಿಗೆ ಮಾತ್ರ ಕಲ್ಯಾಣದಲ್ಲಿ ಸ್ಥಳನಾ ? ಹಾಗಾದ ಮೇಲೆ ನೋಡಪ್ಪ ಅಂತ್ಹೇಳಿ ಈ ಕಿರುಬೆರಲನ್ನ ತೆಗೆದು ತಮ್ಮ ದೇಹವನ್ನು ನೆಟ್ಟಗೆ ಸೀಳಿ ಎರಡು ಭಾಗವನ್ನು ಮಾಡಿ ತೋರಿದರಂತೆ. ನಿಮ್ಮ ಲಿಂಗವೆಲ್ಲ ಈ ಕಲ್ಯಾಣದಲ್ಲಿರುವ ಒಂದು ಲಕ್ಷದ ಮೇಲೆ ತೊಂಭತ್ತಾರು ಸಾವಿರ ಶರಣರು ಕಟ್ಟಿರುವಂತ ಲಿಂಗಾನು ನನಗೆ ಒಪ್ಪನಿಲ್ಲ. ಈ ಲಿಂಗ ನೋಡ್ರೋ –

ಈ ಲಿಂಗನಾದರೂ ನೋಡಿ
ನನ್ನ ಕಲ್ಯಾಣಕ್ಕೆ ಬಿಡೋ ಶರಣ
ಸಿದ್ದಯ್ಯ ಸ್ವಾಮಿ ಬನ್ನಿ
ಅಯ್ಯಯ್ಯೋ ಗುರುವೆ
ಲಿಂಗಪ್ಪ ನೀವೇ ಬನ್ನೋ
ನಮ್ಮ ದೇವರು ಲಿಂಗವನ್ನ
ತೋರಿಸಿದರು ಸಂಗಪ್ಪನಿಗೆ
ಪೂರ್ತಿಯಾದರು ನೋಡು
ಕಟುಕರ ಸಂಗಪ್ಪ

ಮಂತ್ರಗಾರನು ಕಾಣೆ
ಅಂತ್ರಗಾರನೂ ಕಾಣೆ
ಇವನನ್ನು ಕಲ್ಯಾಣಕ್ಕೆ
ಬಿಡೋ ಕೂಡದು
ಲೇ ....ಜಂಗಮ
ನೀನು ಒಳ್ಳೆ ಮಾತಿನಿಂದ
ನಮ್ಮ ಕಲ್ಯಾಣ ಬಿಟ್ಟು ಹೋಗು
ಸಿದ್ದಯ್ಯ ಸ್ವಾಮಿ ಬನ್ನಿ
ಹಾಳಾದ ತಿರುಕ ....
ಲಿಂಗಪ್ಪ ನೀವೇ ಬನ್ನ್ಯೋ

ಅಯ್ಯ ಬಾರದ ಪವಾಡಕ್ಕೆ
ನೀವು ಒದಗ ಬನ್ನಿ ಮಾಯ್ಕಾರ
ಸಿದ್ದಯ್ಯ ಸ್ವಾಮಿ ಬನ್ನಿ
ದೇವಾ .... ಆ ....
ಲಿಂಗಯ್ಯ ದಯ ಮಾಡೋ

ಸಿದ್ದು ಸಿದ್ದುರಿಗೆಲ್ಲ ಅತೀ
ಮುದ್ದು ಘನನೀಲಿ
ಸಿದ್ದಯ್ಯ ಸ್ವಾಮಿ ಬನ್ನಿ
ನನ್ನ ಗುರುವೆ ಲಿಂಗಪ್ಪ
ನೀವೇ ಬನ್ನ್ಯೋ ....

ಆದಿದೇವರು ಗುರುವೇ
ಮಂಟೇದ ಲಿಂಗಪ್ಪ
ನಿನ್ನ ಹೊಟ್ಟೆ ಒಳಗಿನ ಮರ್ಮ
ನಾನು ಏನು ತಾನೇ ಹೇಳಲಪ್ಪ
ಸಿದ್ದಯ್ಯ ಸ್ವಾಮಿ ಬನ್ನಿ
ಅಯ್ಯಯ್ಯೋ ಗುರುವೇ
ಅಪ್ಪ ದೇವರ ನೆಂಬಬಹುದು
ದೇವಮಾನವರ ನೆಂಬಬಹುದು
ಮಾರಿಯರ ನೆಂಬಬಹುದು
ಮಸಣಿಯರ ನೆಂಬಬಹುದು

ನಿಮ್ಮ ಜಡೆಮುಡಿ ಬುಟ್ಟವರ
ನೆಂಬಬಹುದು ಧರೆಯ ಮೇಲೆ
ಸಿದ್ದಯ್ಯ ಸ್ವಾಮಿ ಬನ್ನಿ
ನನ್ನ ಗುರುವೇ ಲಿಂಗಪ್ಪ
ನೀವೇ ಬನ್ನಿ

ಹೇ ನಿಂತ್ಕೋ ಕಲ್ಯಾಣದಿಂದ ಆಚೆ ಬಸವಣ್ಣನವರು ಇಲ್ಲದಿದ್ದ ಟೈಮಿನಲ್ಲಿ ನೀನು ಬಂದು ನಮಗೆ ಮೋಡಿಗಾರನೋ ಅಂತ್ರಗಾರನೋ ಮಂತ್ರಗಾರನೋ ಗೊತ್ತಿಲ್ಲ. ಒಳ್ಳೆ ಮಾತಿನಿಂದ ಕಲ್ಯಾಣ ಬಿಟ್ಟು ಆಚೆ ಹೋಗುತ್ತೀಯೋ ಇಲ್ಲ ನಿನ್ನ ಕೈ ಹಿಡಿದು ಹೆಕ್ಕತ್ತನ್ನು ಗುದ್ದಿ ಆಚೆ ತಲ್ಲನೋ. ಏನಪ್ಪ. ನನಗೆ ಹೆಕ್ಕತ್ತಿನ ಮೇಲೆ ಗುದ್ದಿ ಕಲ್ಯಾಣಬಿಟ್ಟು ಆಚೆಗೆ ತಲ್ಲುತ್ತಾ ಇದ್ದೀಯಾ ? ಮತ್ತೆ ? ಎಷ್ಟು ಸಾರಿ ಹೇಳಬೇಕು ಕೊಳಕು ಜಂಗಮ ಕಲ್ಯಾಣದಲ್ಲಿ ನಾವು ಬಿಡೋದಿಲ್ಲ ಅಂದ ಮೇಲೆ ಹೊರಟು ಹೋಗಬೇಕು. ಅಪ್ಪ ನಾನು ಹೋಗಲೇ ಬೇಕಲ್ಲ, ಆಗೋದಿಲ್ಲ. ನಾನು ಹೋಗಲೇ ಬೇಕು ಎಂದು ಸ್ವಾಮಿಯವರು ಮುಂದಕ್ಕೆ ಮೂರು ಹೆಜ್ಜೆ ಕಿತ್ತರಂತೆ. ಕಟುಕರಸಂಗಯ್ಯನಿಗೆ ಜಗತ್ತುಗುರುಗಳ ಮಹಿಮೆ ಅಂತಕ್ಕಂತದ್ದು ತಿಳಿನಿಲ್ಲ. ಹಿಡಿದಿರುವಂತ ಕೋಲಲ್ಲಿ ಧರೆಗೆದೊಡ್ಡವರ ಕತ್ತನ್ನ ಬಗ್ಗಿಸಿಕೊಂಡು ಮೂರು ಏಟು ತಾರಮಾರನೇ ಹೊಡೆದರಂತೆ ಕಟುಕರಸಂಗಯ್ಯ ನೀನು ಹೊಡೆದಿರುವಂತ ಏಟು ನನಗಲ್ಲಪ್ಪ. ಕಲ್ಯಾಣಿಕೊಳದಲ್ಲಿ ಸ್ನಾನ ಮಾಡತಕ್ಕಂತ ನಿಮ್ಮ ಬಸವಣ್ಣನವರಿಗೆ ಆರೇಟು. ಅವರ ಮಡದಿಯಾದ ನೀಲೋಚನೆ ಕಲ್ಯಾಣವನ್ನು ಬೆಳಗುತ್ತಿದ್ದಾಳಲ್ಲ ಅವಳಿಗೆ ಮೂರೇಟು ಆಗಲಿ ಅಂತ ತಮ್ಮ ಮೈಮೇಲಿದ್ದ ಎಮ್ಮೆ ಚಕ್ಕಳವನ್ನು ತೂದಿಟ್ಟರೋ ಅದು ಕ್ವಾಣಮರಿಯಾಗಿ ಕಲ್ಯಾಣದ ಬಾಗಿಲಲ್ಲಿ ಮೇಯುತ್ತಿತ್ತು ಇವರು ಹೆಂಡದ ಗಡಿಗೆ ಹೊತ್ಕೊಂಡು

ಕಲ್ಯಾಣ ಬಿಟ್ಟಾರಂತೆ ..
ಅವರು ಕಡೆಯ ಬೀದಿಗೆ ಬರುತ್ತಾರೆ
ಸಿದ್ದಯ್ಯ ಸ್ವಾಮಿ ಬನ್ನಿ
ನನ್ನ ಗುರುವೇ ....
ಲಿಂಗಯ್ಯ ನೀವೇ ಬನ್ನೋ
ಅಯ್ಯ ಕಲ್ಯಾಣದ ಒಳಗೆ
ಶರಣರ ಬೀದಿ ನೋಡ್ಕೊಂಡು ನನ್ನಪ್ಪ
ಅಕ್ಕಯ್ಯ ಚಿಕ್ಕಯ್ಯ ಶರಣ
ಒಕ್ಕಲು ಮುದ್ದಯ್ಯ ಶರಣ
ಹೊಲಾರದ ಹೊನ್ನಯ್ಯ ಶರಣ
ಮಾದಿಗರ ಚೆನ್ನಯ್ಯ ಶರಣ
ಅಯ್ಯ ತುಮಕೂರು ಬೀರಯ್ಯ

ಒಬ್ಬ ಘನ ಶರಣ ಅಂದಾರಂತೆ
ಸಿದ್ದಯ್ಯ ಸ್ವಾಮಿ ಬನ್ನಿ
ಕಲ್ಯಾಣದೊಳಗೆ ಲಿಂಗಯ್ಯ
ನೀವೇ ಬನ್ನೋ ....
ಅಯ್ಯ ತುರ್ಕರ ಬೀರಯ್ಯ ಶರಣ
ಒಕ್ಕಲು ಮುದ್ದಯ್ಯ ಶರಣ
ಕುಂಬಾರ ಗುಂಡಯ್ಯ ಶರಣ
ಅಮೃದ ಚೌಡಯ್ಯ ಶರಣ
ಮಡುವಾಳ ಮಾಚಯ್ಯ ಶರಣ
ಏಲಕ್ಕಿ ಮಾರಯ್ಯ
ಹಾಲರ ಗೋರಮ್ಮ ಘನ ಶರಣ
ಶರಣ ಶರಣ ಬೀದಿನೆಲ್ಲ
ಹುಡಿಕೊಂಡು ಬರುತ್ತಾರೆ
ಸಿದ್ದಯ್ಯ ಸ್ವಾಮಿ ಬನ್ನಿ
ನನ್ನ ಗುರುವೇ ....
ಲಿಂಗಯ್ಯ ನೀವೇ ಬನ್ನೋ
ಅಯ್ಯ ಒಡ್ಡರ ಕ್ಯಾತಯ್ಯ ಶರಣ
ತುರ್ಕರ ಬೀರಯ್ಯ ಶರಣ
ಇವರು ಶರಣ ಬೀದಿಯ ಹುಡುಕಿ
ಕಡೆಯ ಬೀದಿಗೆ ಬರುತ್ತಾರೆ
ಸಿದ್ದಯ್ಯ ಸ್ವಾಮಿ ಬನ್ನಿ
ಅವರು ಕಡೆಯ ಬೀದಿ ಒಳಗೆ
ಹರಳಯ್ಯನವರ ಮನೆಯ
ಬೂದಿಗುಂಡಿಯ ಒಳಗೆ
ಅವರು ಹಾಸುತ್ತಾರೆ ಹುಲಿ ಚರ್ಮ
ಹರಡುತ್ತಾರೆ ವಿಭೂತಿಗಟ್ಟಿ
ಸಿದ್ದಯ್ಯ ಸ್ವಾಮಿ ಬನ್ನಿ
ಧರೆಯ ಮೇಲೆ ಲಿಂಗಪ್ಪ
ನೀವೇ ಬನ್ನಿ ....

ಎಲ್ಲ ಶರಣರ ಮನೆಯ ಬೀದಿಯನ್ನ ಹುಡಿಕಿಕೊಂಡು ಬಂದಾಗ ಸ್ವಾಮಿಗಳಿಗೆ ಯಾವ ಶರಣ ಮನೆಯೂ ಹಿಡ್ಸಿಲ್ಲವಂತೆ. ಹರಳಯ್ಯ ಶರಣ ಹೊನ್ನಯ್ಯ ಶರಣ ಚನ್ನಯ್ಯ ಶರಣ. ಸ್ವಾಮಿಯವರಿಗೆ ನಿಜವಾಗಿರುವವರು ಯಾರು ಎಂದರೆ ಹರಳಯ್ಯನವರು ಮಾದಿಗರ ಮನೆ. ಮಾದಿಗರ ಮನೆಯ ಬೂದಿಗುಂಡಿ ಒಳಗೆ ಸ್ವಾಮಿಯವರು ಹುಲಿ

ಚರ್ಮ ಹಾಸ್ಕೊಂಡು ಮಲಗಿದ್ದರು. ರೇಚಪ್ಪಾಜಿಯವರು ಸ್ನಾನವನ್ನು ಮಾಡ್ಕೊಂಡು ಕಲ್ಯಾಣಕ್ಕೆ ಬಂದರಂತೆ. ಕಲ್ಯಾಣದೊಳಗೆ ನೀಲೋಚನೆಯವರು ಆ ಗದ್ದಿಗೆಯನ್ನು ತಾರಿಸುತ್ತಿರಬೇಕಾದರೆ ಮೂರೇಟು ಬಿದ್ದೇಟಿಗೆ ನರ ಹಿಡ್ಕೊಂಡು ಹಂಗೆ ಕೂತಿದ್ದರಂತೆ. ಆಗ ನಾಗಮ್ಮ ಅತ್ತಿಗೆ ಅತ್ತಿಗೆ ಎಂದು ಕರೆದರೂ ಮಾತಾಡದೇ ಕೂತಿದ್ದರಂತೆ. ಅಲ್ಲಿ ಬಸವಣ್ಣನವರು ಬಂದರಂತೆ. ನೀಲೋಚನೆ ಏನು ಸ್ವಾಮಿ. ನಾನು ಸ್ನಾನ ಮಾಡುತ್ತಿದ್ದ ಕಲ್ಯಾಣಿಕೊಳದಲ್ಲಿ ಯಾರೋ ಆರೇಟು ನನ್ನ ಬೆನ್ನಿನ ಮೇಲೆ ದುಬ್ಬ ದುಬ್ಬನೇ ಗುದ್ದಂಗೆ ಆಗ್ಬುಡ್ತು ಕಾಣೆ. ಹಾ ! ನಿಮ್ಗೆ ಆರೇಟು ಬಿತ್ತೇ ಸ್ವಾಮಿ ? ನನಗೆ ಕಲ್ಯಾಣದ ಸಂಗಮೇಶ್ವರನ ಗದ್ದಿಗೆ ಕೈ ಮಡಗಿದಾಗ ನನ್ನ ಬೆನ್ನಿಗೆ ಮೂರೇಟು ದುಬ್ಬನೇ ಬಿತ್ತಲ್ಲ ಸ್ವಾಮಿ. ಏನು ವಿಚಿತ್ರ ಈ ಕಲ್ಯಾಣದಲ್ಲಿ ನಡೀರಿ ಕಡೇ ಬಾಗಿಲಿನಲ್ಲಿ ನೋಡ್ಕೊಂಡು ಬರೋಣ ಎಂದರು ಬಸವಣ್ಣ–

ತಂಗಿ ನಾಗಮ್ಮಳನ್ನು ಕರ್ಕೊಂಡು
ಮಡದಿ ನೀಲೋಚನೆ ಕರ್ಕೊಂಡು
ರಾಚಪ್ಪಾಜಿಯನ್ನು ಕರ್ಕೊಂಡು
ಅವರು ಕಡೆಯ ಬಾಗಿಲಿಗೆ
ಬರುತ್ತಾವರೆಲ್ಲೋ ಬಸವಣ್ಣ
ಬಸವಣ್ಣ .... ತಂದೆ .. ಆ ..

ಕಡೇ ಬಾಗಿಲಿಗೆ ಬಂದರಂತೆ ಸಂಗಪ್ಪಣ್ಣನು ಕೇಳಿದರಂತೆ. ಸಂಗಪ್ಪ ನಾವು ಹೇಳ್ಬುಟ್ಟು ಹೋದ ಮೇಲೆ ಈ ಕಲ್ಯಾಣಕ್ಕೆ ಯಾರಾದರೂ ಬಂದಿದ್ರಾ ? ಸ್ವಾಮಿಯವರು ಬರುತ್ತಾ ಇರುವ ಕುರುಹುಗೆ ಮೂರು ಸಾರಿ ಚಕ್ಕಳದ ಗಂಟೆ ಹೊಡ್ತಿತ್ತಂತೆ ಕಟುಕರಸಂಗಪ್ಪನಿಗೂ ಕೇಳಿಲ್ಲವಂತೆ. ಯಾರೋ ಒಬ್ಬರು ಕೊಳಕು ಜಂಗಮರು ಕಲ್ಯಾಣಕ್ಕೆ ಎಮ್ಮೆ ಚಕ್ಕಳ ಹೊತ್ಕೊಂಡು ಹೆಂಡದಗಡಿಗೆ ಹೊತ್ಕೊಂಡು ಸೂರಿಪಾನಿ ಗಡಿಗೆ ಹಿಡ್ಕೊಂಡು ನಾನು ಕಲ್ಯಾಣಕ್ಕೆ ಹೋಗಬೇಕು ಬಿಡು ಎಂದು ಕೇಳಿದ ನಾನು ಮಾತ್ರ ಬಿಡನಿಲ್ಲ. ನೀವು ಹೇಳಿದಂಗೆ ಕಾವಿ ಉಟ್ಟೋರು ಕಾಮಂಡಲ ಧರಿಸದವರು ಎಷ್ಟು ಕೈ ಮುಗಿದು ಕೇಳ್ಕೊಂಡರು ನಾನು ಕಲ್ಯಾಣಕ್ಕೆ ಬಿಡಲಿಲ್ಲ. ಆದರೆ ಬಂದ ಒಬ್ಬ ಸನ್ಯಾಸಿ ಮಾತ್ರ ನಾನು ಕಲ್ಯಾಣಕ್ಕೆ ಹೋಗಲೇ ಬೇಕು ಅಂದರು. ಒಳ್ಳ ಮಾತಿನಲ್ಲಿ ಹೋಗುತ್ತೀಯೋ ಇಲ್ಲ ದೊಣ್ಣೇಲಿ ಹೊಡೆಯಲೋ ಎಂದೆ. ನಾನು ಎಷ್ಟು ಹೇಳಿದರು ಕೇಳದೆ ಇದ್ದಾಗ ಅವರ ಜುಟ್ಟು ಹಿಡ್ಕೊಂಡು ಮೂರೇಟು ಹೊಡೆದೆ. ಅವರ ಮೈಮೇಲಿದ್ದ ಎಮ್ಮೆ ಚಕ್ಕಳ ತೂದಿಟ್ಟು ನೀನು ಹೊಡೆದಂತ ಏಟು ನನಗಲ್ಲ ಬಸವಣ್ಣನವರಿಗೆ ಆರೇಟು ಅವರ ಮಡದಿಯಾದ ನೀಲೋಚನೆ ಮೂರೇಟು ಅಂತ್ಹೇಳಿ ಈಕಡೆ ಹೊರಟು ಹೋದರು ಎಂದನು.

ಸಿಕ್ಕಿದ ಗುರುಗಳನ್ನು ಬಿಟ್ಟು ನಾವು
ಎಂಥಾ ಕರ್ಮಕ್ಕೆ ಗುರಿಯಾದೋ

ಎಂದು ಬಸವಣ್ಣ ..
ಧರೆಗೆದೊಡ್ಡವರ ಹುಡಿಕೊಂಡು
ಬತ್ತಾವ್ರೆರಲ್ಲೋ ಬಸವ ತಂದೆ ..

ಬಸವಣ್ಣ ಎಲ್ಲಿಗೆ ಬರುತ್ತಾ ಇದ್ದಾರೆ ಎಂದರೆ –

ಅವರು ಕಲ್ಯಾಣ ಬಿಟ್ಟು
ಬತ್ತಾವ್ರೆ ಬಸವಣ್ಣ
ಒಂದನೆಯ ಬೀದಿ ಬಿಟ್ಟು
ಎರಡನೆಯ ಬೀದಿ ಬಿಟ್ಟು
ಮೂರನೆಯ ಬೀದಿ ಬಿಟ್ಟು
ನಾಲ್ಕನೆಯ ಬೀದಿ ಬಿಟ್ಟು
ಅಯ್ಯ ತೊಂಭತ್ತೇಳನೆಯ ಕೊನೆಯ
ಬೀದಿಯೊಳಗೆ ಬರುತ್ತಾವ್ರೆ ಬಸವಣ್ಣ
ಸಿದ್ದಯ್ಯ ಸ್ವಾಮಿ ಬನ್ನಿ
ಬಸವಣ್ಣ ಲಿಂಗಯ್ಯ ನೀವೇ ಬನ್ನೋ

ಕಡೇಯ ಬೀದಿಯ ಒಳಗೆ
ಬರುವಾಗ ಬಸವಣ್ಣನವರು
ಹರಳಯ್ಯನವರ ಮನೆಯ
ಬೂದಿಗುಂಡಿ ನೋಡಿದರು
ಆಳುದ್ದಕ್ಕೆ ನೋಡು ..
ಸುರಿದಿರುವಂತ ಬೂದಿ
ಬೂದಿ ಒಳಗೆ ನನ್ನಪ್ಪ
ಉತ್ತರಕ್ಕೆ ಪಾದ
ದಕ್ಷಿಣಕ್ಕೆ ಮಂಡೆ
ಅವರು ಆರು ಮೂರು
ಒಂಭತ್ತು ಗಳಿಗೆ ಜೋಲು
ನಿದ್ರೆ ಮಾಡುತ್ತಾವ್ರೆ
ಸಿದ್ದಯ್ಯ ಸ್ವಾಮಿ ಬನ್ನಿ
ಅಯ್ಯಯ್ಯೋ ಗುರುವೇ ..
ಲಿಂಗಪ್ಪ ನೀವೇ ಬನ್ನಿ
ಅಪ್ಪ ಮನಗಿರುವ ಗುರುಗಳನ್ನೇ

ನೋಡಿದರು ಬಸವಣ್ಣ
ಕಾಲದೆಸ ನಿಂತ್ಕೊಂಡು
ಮಾನುಭಾವ ಇಂಥ ಗುರು
ಅಂಥ ..
ಹಿನ್ನು ಮುನ್ನು ತಿಳಿಯಲಿಲ್ಲ
ಸಿದ್ದಯ್ಯ ಸ್ವಾಮಿ ಬನ್ನಿ

ಗಂಡ ಹೆಂಡ್ತಿಯರು ಇಬ್ಬರು ಭಕ್ತಯಿಂದ ನೀವು ಇಂಥ ಗುರುಗಳಂತ ನಮಗೆ ಗೊತ್ತಿಲ್ಲವಲ್ಲಪ್ಪ. ಬನ್ನಿ ಸ್ವಾಮಿ. ನಾವು ಮಾಡಿದಂತಹ ಕರ್ಮಕ್ಕೆ ನಾವು ಶಾಪ ಕೊಟ್ಟುಕೋತ್ತೀವಿ. ಅಹಂಕಾರ ಎಂಬುದು ನಮ್ಮನ್ನು ಅಡಗಿಸಿಬಿಡ್ತು. ನಾನು ಅನ್ತಕ್ಕಂತ ಭಾವ ನಮ್ಮಲ್ಲಿ ಉತ್ಪತ್ತಿ ಆಗ್ಬುಡ್ತು. ಇಂಥ ಗುರುಗಳು ನಮ್ಮ ಕಲ್ಯಾಣಕ್ಕೆ ಬರುತ್ತಿದ್ದಾರೆಂದು ಗೊತ್ತಿರಲಿಲ್ಲವಲ್ಲ. ಬನ್ನಿ ಅಂತ್ಹೇಳಿ ಗಂಡ ಬಲಗಡೆ ಹೆಡ್ತಿ ಎಡಗಡೆ ನಿಂತ್ಕೊಂಡು ಎರಡು ಪಾದವನ್ನು ಹಿಡಿದು ಎಳೆದಾಗ ನಡಿನ ಪಾದ ಹಂಗೆ ಕಳ್ಕೊಂಡು ಬಂದ್ಬುಟ್ಟವಂತೆ. ಆಹಾ ! ಗುರುದೇವ ನಾವು ಮಾಡಿರುವಂತ ಕರ್ಮಗಳನ್ನು ಕೇಳ್ಕೊಂಡು ನಿಮ್ಮ ದರ್ಶನ ಮಾಡಬೇಕು ಅಂದರೆ ಎರಡು ತೊಡೆಗಳು ಬಂದ್ಬುಟ್ಟವಲ್ಲ. ಆವಾಗ ಗಂಡ ಒಂದು ಕಡೆ ಹೆಡ್ತಿ ಒಂದು ಕಡೆ ತೋಳು ಹಿಡ್ಕೊಂಡು ಎತ್ತಿದಾಗ ತೋಳು ಹಂಗೆಯೇ ಬಂದ್ಬುಟ್ಟವಂತೆ. ಅಪ್ಪ ಮೇಲಕ್ಕೇಳಿ ಎಂದು ಕತ್ತು ಹಿಡಿದಾಗ ಆ ಕತ್ತಿನ ಶಿರವೇ ಕಳ್ಕೊಂಡು ಬಂದ್ಬಿಡ್ತಂತೆ. ಓ ನೀಲೋಚನೆ ಈ ಸ್ವಾಮ್ಗೊಳನ್ನು ಬಿಟ್ಟು ಹೋದರೆ ನಮಗೆ ಮುಕ್ತಿ ಸಿಕ್ಕೋದಿಲ್ಲ. ಈ ಸ್ವಾಮ್ಗೊಳ ಪಾದದರ್ಶನ ಆಗುವವರೆಗೂ ಅನ್ನ ಆಹಾರ ಕಣ್ಣಿಗೆ ನಿದ್ರೆ ಕಾಮ ಕ್ರೋಧ ಮದ ಮತ್ಸರಗಳನ್ನೆಲ್ಲ ತೊರೆದು ಪರಮಾತ್ಮನ ಪಾದ ಕಾಣೋವರೆಗೂ ನಾವು ಇವರನ್ನು ಬಿಡಬಾರದು ಅಂತ್ಹೇಳಿ ತಮ್ಮ ಮುಕುಟವನ್ನು ಕಳೆದು ಹಾಸಿದರಂತೆ. ತಾಯಿ ಮುಕುಟಕ್ಕೆ ಈ ಸೌದೆ ಜೋಡಿಸಿದಂಗೆ ಸ್ವಾಮ್ಗೊಳನ್ನೆಲ್ಲ ಜೋಡಿಸಿ ಪೊಟ್ಟಣವನ್ನು ಕಟ್ಟಿ ಆ ಬಸವಣ್ಣನವರು ತಲೆಯ ಮೇಲೆ ಹೊತ್ಕೊಂಡರಂತೆ. ಅವರು ಹೊತ್ತಿದಂತ ಹೆಂಡದ ಗಡಿಗೆ ಸೂರಿಪಾನದ ಮಡಿಕೆಯನ್ನ ಆ ನೀಲಮ್ಮನವರು ಹೊತ್ಕೊಂಡರಂತೆ. ಬಸವಣ್ಣನವರು ಮುಂದು ಮುಂದೆ ನೀಲಮ್ಮನವರು ಹಿಂದ್ಹಿಂದೆ.

ಹರಳಯ್ಯನವರ ಮನೆಯ ಬಿಟ್ಟು
ಗುರುಮಠಕ್ಕೆ ಬರುತ್ತಾರೆ
ಸಿದ್ದಯ್ಯ ಸ್ವಾಮಿ ಬನ್ನಿ
ಬಸವಣ್ಣ .. ಆ ..
ಲಿಂಗಯ್ಯ ದಯ ಮಾಡೋ
ಅಯ್ಯ ಕಲ್ಯಾಣಕ್ಕೆ ಬರುವಾಗ
ಬಸವಣ್ಣ ಒಂದು ಲಕ್ಷದ ಮೇಲೆ
ತೊಂಭತ್ತಾರು ಸಾವಿರ ಶರಣರೆಲ್ಲರು
ಯಾರೋ ಒಬ್ಬ ಕೊಳಕು

ಜಂಗಮನನ್ನು ತರುತ್ತಿದ್ದಾರೆ
ಅಂತ ನೋಡುತ್ತಿದ್ದಾರೆ
ಅಯ್ಯ ಜಂಗಮರು ಆಡಿದ
ಮಾತು ನಮ್ಮ ಗುರುಗಳಿಗೆ
ಅರುವಾಯ್ತಲ್ಲ ..
ಸಿದ್ದಯ್ಯ ಸ್ವಾಮಿ ಬನ್ನಿ
ಲಿಂಗಪ್ಪ ನೀವೇ ಬನ್ನೋ

ಸ್ವಾಮಿಯವರು ಕಲ್ಯಾಣಕ್ಕೆ ಬರುತ್ತಿದ್ದಾರೆ, ಕಲ್ಯಾಣದ ಬಾಗಿಲಿಗೆ ಬರುವಾಗ ತಲೆ ಮೇಲೆ ಮನಿಗಿದ್ದ ಸ್ವಾಮ್ಗೋಳು ಬಸವಣ್ಣನವರ ಶಿರದಿಂದ ಹಿಡಿದು ಪಾದದ ಕಾವಿವರೆಗೂ ಆ ಕೀವು ಅಂತಕ್ಕಂತದ್ದು ಗದಗದನೆ ಹರಿಯುತ್ತಾ ಇತ್ತಂತೆ. ದಂಡೆಯಲ್ಲಿ ಯಾರಾದರೂ ನಿಂತ್ಕೊಂಡಿದ್ದರೆ ಬಗ್ಗನೇ ಮೂಗು ಮುಚ್ಕೋಬೇಕಾಗಿತ್ತು. ಇಲ್ಲಿ ನಿಂತಿದ್ದರಲ್ಲ ದಿನಕ್ಕೆ ಒಳ್ಳೆ ಊಟ ಮಾಡ್ಕೊಂಡುವ್ರರಲ್ಲ ಶರಣ್ರುಗಳು ಏನ್ರಣ್ಣ ಬಸವಣ್ಣನವರು ಗುರುಗಳು ಅವರ ಮಡದಿ ಸತ್ಯವಂತೆ ಅವರ ಕೈ ಮೇಲೆ ಕೂತ್ಕೊಂಡು ಊಟ ಮಾಡುತ್ತಿದ್ದವಲ್ಲ ನಾವು ಎಂಥಾ ಪರಮ ಪಾಪಿಗಳು ಥೇ ಚಾಂಡಾಳ ಬಸವಣ್ಣನವರಿಗೆ ಬಿಜ್ಜಳನ ದೊರೆತನ ಮಂತ್ರತ್ವವನ್ನು ಕೊಟ್ಟಿದ್ದಾರಲ್ಲ ಈ ಬಸವಣ್ಣನವರಿಗೆ ಆದಿಕಲ್ಯಾಣದಲ್ಲಿ ನಮ್ಮಂತ ಲಿಂಗೋತ್ತಮರಿರುವಾಗ ಮಾಂಸಾಹಾರಿಯನ್ನು ಹೊತ್ಕೊಂಡು ಬರುತ್ತಾರಲ್ಲ ಈ ಬಸವಣ್ಣ. (ಕಲ್ಯಾಣದಲ್ಲೆಲ್ಲ ಬೋಯ್ತಿದ್ದರಂತೆ. ಕುಲಗೆಟ್ಟ ಬಸವಣ್ಣ ಅಂತ ಕಲ್ಯಾಣವನ್ನೇ ಕುಲಗೆಡ್ಸುಬಿಟ್ಟನಂತ) ಆಗ ಬಸವಣ್ಣನವರು ಒಂದೂ ಮಾತಾಡದೇ ಮೌನವಾಗಿ ತಾನೇ ಬಕ್ಕೊಂಡು ಬಸವಣ್ಣ, ತಾವು ಕೂತ್ಕೊಳ್ಳುವಂತ ಸಿಂಹಾಸನದ ಮೇಲೆ ತಕ್ಕೊಂಡು ಹೋಗಿ ಹೊತ್ತಿರುವ ಪೊಟ್ಟಣವನ್ನು ಮಡ್ಗಿ, ಬಿಚ್ಚಿದ್ರಂತೆ. ಬಿಚ್ಚಿ ಸ್ವಾಮಿಯವರು ಧೂಪ ದೀಪಾದಿಗಳಿಂದ ಗಂಡ ಎಡಗಡೆ ಹೆಂಡ್ತಿ ಬಲಗಡೆ ನಿಂತ್ಕೊಂಡು

ಕಲ್ಯಾಣಕ್ಕೆ ಶರಣು
ಕೈಲಾಸಕ್ಕೆ ಶರಣು
ಕಲ್ಯಾಣವನ್ನು ಕಟ್ಟಾಳುವಂತ
ಜಗಜ್ಯೋತಿ ಬಸವೇಶ್ವರನ
ವಿರೂಪಾಕ್ಷ ಲಿಂಗಕ್ಕೆ
ಮೊದಲು ಶರಣಯ್ಯ ..
ಶರಣು ಶರಣಯ್ಯ ..
ಶಂಕರ ....

ಸ್ವಾಮಿಯವರು ಆವಾಗ ಅನ್ನ ಆಹಾರ ನಿದ್ದೆಯನ್ನು ಬಿಟ್ಟು ಕಾಮ ಕ್ರೋಧ ಮದ ಮತ್ಸರಗಳನ್ನು ಬಿಟ್ಟು ಬಸವಣ್ಣ ಮತ್ತು ನೀಲೋಚನೆಯವರು ಒಂಭತ್ತು ರಾತ್ರಿ, ಒಂಭತ್ತು ಹಗಲು–

ಸ್ವಾಮಿಯವರ ಪೂಜೆ ಮಾಡಿ
ಮಂಗಳಾರತಿ ಮಾಡುತ್ತಾರೆ
ಸಿದ್ದಯ್ಯ ಸ್ವಾಮಿ ಬನ್ನಿ
ಅಯ್ಯಯ್ಯೋ ಗುರುವೇ
ಲಿಂಗಪ್ಪ ನೀವೇ ಬನ್ನೋ
ನಾವು ಇಂಥ ದೇವರು ಅಂತ
ಘಳಿನಿಲ್ಲ ನನ್ನಪ್ಪ ಮಂಟೇದಲಿಂಗಯ್ಯ
ಅಯ್ಯ ಧರೆಗೆದೊಡ್ಡವರ
ಮಹಿಮೆಯನ್ನು ಏನು ತಾನೇ
ಹೇಳಲಪ್ಪ ....
ಸಿದ್ದಯ್ಯ ಸ್ವಾಮಿ ಬನ್ನಿ
ಕಂಡಾಯದ ಒಡೆಯ..
ಲಿಂಗಯ್ಯ ದಯಮಾಡೋ
ಪರಾತ್ಪರವಸ್ತು ಪಾವನಮೂರುತಿ
ಅಖಂಡ ಸ್ವರೂಪ ಅಲ್ಲಮಾಪ್ರಭು
ಧರೆಯ ತಂದವರು ಧರೆಗೆದೊಡ್ಡವರು
ಪರಂಜ್ಯೋತಿ ....

ಬಸವಣ್ಣನವರ ಭಕ್ತಿಗೆ ಮೆಚ್ಚಿ ಸ್ವಾಮಿಯವರು ಪ್ರತ್ಯಕ್ಷವಾದರಂತೆ. ಬಸವಣ್ಣ ಲಕ್ಷದ ಮೇಲೆ ತೊಂಭತ್ತಾರು ಸಾವಿರ ಕೋಟಿ ಶರಣರಿಗೆಲ್ಲರಿಗೂ ಲಿಂಗಧಾರಣೆಯನ್ನು ಕಟ್ಟಿ ಎಲ್ಲ ಜಾತಿಯನ್ನೆಲ್ಲ ಒಂದುಗೂಡಿ ಕ್ರಾಂತಿ ಮಾಡಬೇಕೆಂದು ಕೂತಿದೆಯಲ್ಲ ಬಸವಣ್ಣ. ತ್ರುಕ, ತ್ರೇತ, ದ್ವಾಪರ ನಾಳೆ ಬರುವಂತ ಕಲಿಯುಗದಲ್ಲಿ ನಿನ್ನ ಕಲ್ಯಾಣವೇ ಕಟುಕರ ಅಂಗಡಿ ಆಗುತ್ತದಲ್ಲೋ. ಕಲ್ಯಾಣದಲ್ಲಿ ಇರಬೇಡಪ್ಪ ನಿನ್ನ ಮಡದಿಯಾದ ನೀಲೋಚನೆಯನ್ನು ಕರ್‍ಕೊಂಡು ಕೂಡಲ ಸಂಗಮಕ್ಕೆ ಹೋಗಿ ನೀನು ಐಕ್ಯವಾಗ್ಬುಡು ಅಂದರು. ಐಕ್ಯವಾಗು ಅಂದ್ರೆ ಈಗ ಸಂದೋದ ಮಾರಾಜರಿಗೆ ಮುಳುಗೂಡು ಮಹದೇವಪ್ಪನವರು ದಿವಾನರಾಗಿದ್ದರಂತೆ. ಈಗ ಜಗತ್ತಿನಲ್ಲಿ ಕಪ್ಪಡಿ ಒಳಗೆ ಇರುವ ರೇಚಪ್ಪಾಜಿಯವರು ಬಸವಣ್ಣನವರಿಗೆ ದಿವಾನರಾಗಿದ್ದರಂತೆ. ಇನ್ನೂ ಇವರನ್ನು ಬಿಟ್ಹೋಗಬೇಕಲ್ಲ ಅಂತ್ಹೇಳಿ ರೇಚಪ್ಪಾಜಿ ಮಡುವಾಳ ಮಾಚಪ್ಪ ಕರೆದು ಆ ಕಲ್ಯಾಣದಲ್ಲಿ ಕಡುಕಳಕಟ್ಟೆ ಹತ್ತಿರ ವಿಭೂತಿಗಟ್ಟಿ ಇಟ್ಟಿದ್ದೀನಿ ತಕ್ಕೊಂಡು ಬಂದುಬಿಡು ಎಂದರು. ಆಗ ಇಬ್ಬರೂ ವಿಭೂತಿಗಟ್ಟಿ ತರಕ್ಕೆ ಹೋದರು. ಸ್ವಾಮಿಯವರು ಕೂತ್ಕೊಂಡು ಹೇಳಿದರಂತೆ ಇದೇ ಒಳ್ಳೆ ಸಮಯ ನೀವು ಹೊಂಟ್ಹೋಗಿ ಸಂಗಮಕ್ಕೆ ಅಂದರು. ಇವರು ಸಂಗಮಕ್ಕೆ ಹೋಗಿ ಯಾವಾಗ ಬಾಗಿಲು ಹಾಕ್ಕೊಂಡ್ರೋ ರೇಚಪ್ಪಾಜಿ ಬಂದು ನೋಡ್ದರಂತೆ. ಬಸವಣ್ಣ ನಿನ್ನಲ್ಲಿ ಎಂಥಾ ಮೋಸವಿದೆ ನಾವು ನಿಮ್ಮನ್ನ ಪರಮಭಕ್ತರಾಗಿ ನೆಂಬಿದುದಕ್ಕೆ ನಮ್ಮನ್ನು ನಿಮ್ಮ ಜೊತೆಗೆ ಬಿಟ್ಬುಟ್ಟು ಒಬ್ಬನೇ ಸಂಗಮಕ್ಕೆ ಹೋಗುತ್ತಾ ಇದ್ದೀಯಲ್ಲ

ನಾಳೆ ಕಲಿಯುಗದಲ್ಲಿ ಎಲ್ಲ ಜಾತಿ ಜನಗಳಿಗೂ ಲಿಂಗವನ್ನು ಕಟ್ಟಿ ಜಾತಿ ಕೆಡಸ್ತುತ್ತೀನಿ ಎಂದರು ರೇಚಪ್ಪಾಜಿಯವರು. ಅವರು ಒಳಗಡೆ ಮಾತಾಡುದರಂತೆ ಬಸವಣ್ಣ ನಾಳೆ ಕಲಿಯುಗದಲ್ಲಿ ಲಿಂಗ ಕಟ್ಟುಟ್ಟು ಎಲ್ಲಾರನ್ನು ಬ್ರತ್ಗೆಡ್ತುಡ್ತೀನಿ ಎಂದರು "ಯಾರು ಕ್ರಿಯಾಗಿರುತ್ತಾರೋ ಅವರು ಶಿವಾಚಾರರು. ಕ್ರಿಯಾ ತಪ್ಪಿದರೆ ಅನಾಚಾರರು. ಮೂರೂ ತಪ್ಪಿದರೆ ಅವರು ಊರೂರ ಮೇಲೆ ಕುಲಾಚಾರರಾಗುತ್ತಾರೆ ಅಂದರಂತೆ." ನೀವು ಕಟ್ಟಿದ ಲಿಂಗವೆಲ್ಲ ವಿರೂಪಾಕ್ಷಲಿಂಗವಾಗಲಿ. ಆ ವಿರೂಪಾಕ್ಷಲಿಂಗ ಅಂತದ್ದೆ ನೋಡಿ ಜಂಕ್ಕಟ್ಟುತ್ತಾರಲ್ಲ ಅವರಿಗೆ ಮಾತ್ರ ಕೊಟ್ಟಿರೋದು ಸ್ವಾಮಿಯವರು ಹೇಳಿದರಂತೆ ದುಃಖ ಮಾಡಬೇಡಿ ರೇಚಣ್ಣ, ಮಾಚಯ್ಯ ನಾಳೆ ನರಮಾನವ ಕಲಿಯುಗದಲ್ಲಿ ಇಬ್ರಿಗೂ ಮುಕ್ತಿ ಕೊಡುತ್ತೀನಿ ಬನ್ರಪ್ಪ ಅಂತ್ಹೇಳಿ ಅವರ ಜೊತೆಯಲ್ಲಿ ಕರ್ಕೊಂಡು ಬರುವಾಗ ಲಕ್ಷದ ಮೇಲೆ ತೊಂಭತ್ತಾರು ಸಾವಿರ ಶರಣ್ರು ಮೂವತ್ಮೂರು ಮಂದಿ ಪುರೋಹಿತರು ಅರವತ್ತಾರು ಮಂದಿ ಸ್ವಾಮ್ಗೊಳು " ಕೋಟಿಗೊಬ್ಬ ಭಕುತ ಕುಲಕ್ಕೊಬ್ಬ ಶರಣ" ಇವರೆಲ್ಲರೂ ಊಟ ಮಾಡಿ ಬೀಸಾಕಿದಂತಹ ಎಲೆ ಕುಂದೂರು ಬೆಟ್ಟದಂತೆ ಬೆಳೆಯುತ್ತಿತ್ತಂತೆ. ನಾಳೆ ಕಲಿಯುಗದಲ್ಲಿ ಮೇಲೆಕೆಳಗೆ ಹಲ್ಲು ಹುಟ್ಟುವಂತ ನರಮಾನವರಿಗೆ ನಂಬುವುದಕ್ಕೆ ಸಾಧ್ಯವಿಲ್ಲ. ಇದು ನಾಳೆ ಜಗತ್ತಿಗೆ ಮೊದಲನೆಯ ಔಷಧಿ ಆಗಬೇಕು ಅಂತ್ಹೇಳಿ ನಮ್ಮ ರೇಚಪ್ಪಾಜಿಯವರು ಚಕಮಕಿಯನ್ನು ಹೊಡೆದು ಆ ಬೆಟ್ಟವನ್ನು ಕಸ್ಸಿ ಎಲ್ಲವನ್ನು ಬೂದಿ ಮಾಡಿ ಜೋಳಿಗೆ ಒಳಗೆ ತುಂಬ್ಕೊಂಡರಂತೆ. ಇದು ಯಾತಕ್ಕೆ ತುಂಬ್ಕೋತ್ತಿದ್ದಾರೆ ಎಂದು ನಮ್ಮ ಧರೆಗೆದೊಡ್ಡವರಿಗೆ ಕೂಡ ಗೊತ್ತಿಲ್ಲವಂತೆ. ಆವಾಗ ಅವರು ಕೂತಿರತಕ್ಕಂತದ್ದು ಕಲ್ಯಾಣದಲ್ಲಿ ಅವರಿಗೆ ಸಂಗಮೇಶ್ವರ ಅಂತ ನಾಮಕರಣವಾಯ್ತು. ರೇಚಪ್ಪಾಜಿ ಏನು ಗುರುದೇವ ? ಈ ಇಸ್ತ್ರಿನೆಲ್ಲ ಬೂದಿ ಮಾಡಿ ತುಂಬ್ಕೊಂಡೆಯಲ್ಲ ಯಾತಕ್ಕೋಸ್ಕರ ಅಂದ್ರು. ಸ್ವಾಮಿ ನಾಳೆ ನಿಮ್ಮ ಜೊತೆಯಲ್ಲಿ ಬರುತ್ತಾ ಇದ್ದೀವಿ ಕಲಿಯುಗದಲ್ಲಿ ಯಾರನ್ನು ನಂಬುವುದಕ್ಕೆ ಸಾಧ್ಯವಿಲ್ಲ. ಈ ಜಗತ್ತಿಗೆ ನೆಂಬಿ ನೆಂಬಿ ಕರವೆತ್ತಿ ಕೈಮುಗಿದವರಿಗೆ ಮಾತ್ರ ಅವರ ಮನೆಯಲ್ಲಿ ಮಾತ್ರ ಒಡೆದು ಹೊಂಬಾಳೆಯಾಗಿ ವಾಲಾಡಬೇಕು. ಭಕ್ತರ ಉದ್ಧಾರ ಮಾಡಬೇಕು. ನೆಂಬ್ದವರಿಗೆ ನಾವು ಗುರು ಆಗಬೇಕು. ನಮ್ಮನ್ನು ನೆಂಬದ ಮುಂಡೇ ಮಕ್ಕಳಿಗೆ ಆರೋಗ ಕೊಡಬೇಕು. ಹಿರಿಮಕ್ಕಳಿಗೆ ಮೊಲಾಗ್ರ ಕೊಡಬೇಕು. ಹಿರಿ ಸೊಸೆಗೆ ಇಂಡುಗಾಳಿ ಕೊಡಬೇಕು. ಇದು ಮೊದಲನೆಯ ಔಷ್ಧಿ. ಯಾವಾಗ ನಡೆಯಪ್ಪ ಎಂದು ಕರ್ಕೊಂಡು ಬರಬೇಕಾದರೆ ಕಲ್ಯಾಣವನ್ನು ಬಿಟ್ಟು ಮೂರನೆಯ ಬಾಗಿಲಿಗೆ ಬರಬೇಕಾದರೆ ಹೊಲೆಯ ಮಾದಿಗರು ಕೂತಿದ್ದರಂತೆ. ಸ್ವಾಮಿ ಕಲ್ಯಾಣವನ್ನೇ ಹಾಳು ಮಾಡಿ ಇವರನ್ನು ಕರ್ಕೊಂಡು ಹೋಗುತ್ತಾ ಇದ್ದೀರಲ್ಲ ನಮಗೊಂದು ಮುಕ್ತಿ ಕೊಟ್ಟು ಕರ್ಕೊಂಡು ಹೋಗಿ ಅಂದರು. ನಾವು ನಿಮ್ಮ ಜೊತೆ ಒಳಗೆ ಸೇರ್ಕೊಳ್ಳುತ್ತೀನಿ. ನಿಮ್ಮ ಜೊತೆ ಕಂತೆ ಬೊಂತೆ ಹೊತ್ಕೋತ್ತೀವಿ ಎಂದರು. ಆ ಕಂತೆ ಬೊಂತೆ ಹೊತ್ಕೋತಿರಪ್ಪ. ಬನ್ನಿ ಅಂತ ಅವರನ್ನು ಕರ್ಕೊಂಡು ಕಡೇ ಬಾಗಿಲಿಗೆ ಬಂದರಂತೆ. ಕಡೇ ಬಾಗಿಲ ಒಳಗೆ ಈರಭದ್ರನಹಲಗೆ ಗೋಪುರವನ್ನು ಗೇಯ್ತಾ ಇದ್ದನಂತೆ ಆದಿಬ್ರಹ್ಮಚಾರಿ. ಆ ಬ್ರಹ್ಮಚಾರಿ ಇಳಿದು ಬಂದನಂತೆ ಕೆಳಗೆ ಓಡಿ ಬಂದುದೆ ಧರೆಗೆದೊಡ್ಡವರ ಪಾದ ಹಿಡ್ಕೊಂಡರಂತೆ.

ಮಾಡಿದವರ ಮನವ ಬಲ್ಲೋ
ನೀಡಿದವರ ನಿಜವ ಬಲ್ಲೋ
ಸಿದ್ದಯ್ಯ ಸ್ವಾಮಿ ಬನ್ನಿ
ಲಿಂಗಯ್ಯ ದಯ ಮಾಡೋ
ಅಯ್ಯ ದುರುಳರಿಗೆ ವೈರಿಯಾದೆ
ಭಕ್ತರಿಗೆ ಪ್ರೇಮಿಯಾದೆ
ಸಿದ್ದಯ್ಯ ಸ್ವಾಮಿ ಬನ್ನಿ
ಕಂಡಾಯದ ಒಡೆಯ
ಲಿಂಗಯ್ಯ ದಯ ಮಾಡೋ
ಸ್ವಾಮಿ ....
ಮಾಡಿದವರ ಮನವ ಬಲ್ಲೇ
ನೀಡಿದವರ ನಿಜವ ಬಲ್ಲೇ
ಸಿದ್ದಯ್ಯ ಸ್ವಾಮಿ ಬನ್ನಿ
ನಾನು ಮತ್ತವರ ಮನೆಯ ಒಳಗೆ
ಮಾರಿಯಾಗಿ ವಾಲಾಡ ಬಲ್ಲೇ
ಸಿದ್ದಯ್ಯ ಸ್ವಾಮಿ ಬನ್ನಿ
ನಾ ನೆಂಬ್ದವರ ಮನೆಯ ಒಳಗೆ
ಹೂ ಹೊಂಬಾಳೆಯಾಗಿ ವಾಲಾಡ ಬಲ್ಲೇ
ಸಿದ್ದಯ್ಯ ಸ್ವಾಮಿ ಬನ್ನಿ
ಕಂಡಾಯದ ಒಡೆಯ
ಲಿಂಗಯ್ಯ ದಯ ಮಾಡೋ

ಸ್ವಾಮಿ ನನ್ಗೊಂದು ಮುಕ್ತಿಯನ್ನು ಕೊಟ್ಟುಬಟ್ಟು ಹೋಗಿ ಎಂದು ಎರಡು ಪಾದವನ್ನು ಬಾಚಿ ತಬ್ಕೊಂಡರಂತೆ. ನಿನಗೆ ಯಾವ ಜನ್ಮದಲ್ಲಿ ಮುಕ್ತಿಯನ್ನು ಕೊಡಬೇಕು. ಹುಟ್ಟಬೇಕು ಹುಟ್ಟಿದ ಮೇಲೆ ಸಾಯಲೇ ಬೇಕು. ಸತ್ತ ಮೇಲೆ ಇನ್ನೊಂದು ಜನ್ಮದಲ್ಲಿ ಹುಟ್ಟಲೇ ಬೇಕು. ಇದು ಬೇಡ ನನ್ನಪ್ಪ. ನನ್ಗೊಂದು ನಿಜವಾದ ಮುಕ್ತಿ ಕೊಡಪ್ಪ ಅಂತ ಕೇಳ್ಕೊಂಡಾಗ ಸ್ವಾಮಿ ಹೇಳಿದರಂತೆ. ನೋಡಪ್ಪ ನಾನು ಎಷ್ಟು ಕಷ್ಟಬಿದ್ದಿದ್ದೇನೋ ? ಆ ಕಷ್ಟ ನೀನು ಬೀಳಬೇಕು. ಆವಾಗ ನಾನು ನಿನಗೆ ಮುಕ್ತಿ ಕೊಡುತ್ತೀನಿ ಎಂದರಂತೆ. ಆಗಲಿ ಸ್ವಾಮಿ. ನಿಮ್ಮ ಪಾದ ಸತ್ಯವಾಗಿ ನೀವು ಹೇಳಿದ ಕಷ್ಟ ನಾನು ಬೀಳುತ್ತೀನಿ. ನನಗೆ ಮುಕ್ತಿ ಕೊಟ್ಬುಡಿ ನಿಮ್ಮ ಪಾದ ಅಂದಾಗ ಎರಡು ನೇತ್ರವನ್ನು ಬಿಟ್ಕೊಂಡು ಹೊರಗಣ್ಣನ್ನು ಮುಚ್ಚಿ ಒಳಗಣ್ಣನ್ನು ತೆರೆದು ನೋಡಿದರಂತೆ, ಯಾರ ಹೊಟ್ಟೆ ಒಳಗೆ ಹಾಕಲಿ ಇವನನ್ನು ಎಂದು ನೋಡುವಾಗ –

ನಿಡುಘಟ್ಟ ಎಂಬ ಗ್ರಾಮ

ಈ ನಿಡುಘಟ್ಟ ಗ್ರಾಮದಲ್ಲಿ
ಅನ್ನೋಜಿ ಮಗನಾದ
ಬಾಚಿಬಸವಾಚಾರಿ
ಮಡದಿಯಾದಂತ ಮುದ್ದಮ್ಮ
ಆ ಮುದ್ದಮ್ಮನ ಗರ್ಭದಲ್ಲಿ
ಆರು ಜನ ಗಂಡು ಮಕ್ಕಳು
ಹುಟ್ಟಿದ್ದಾರಂತೆ..................
ಆರು ಜನ ಗಂಡು ಮಕ್ಕ ಹುಟ್ಟಿದರೂ
ಗಂಡ ಹೆಂಡ್ತಿ ಇಬ್ಬರಿಗೂ
ಉಡೋಕ್ಕೆ ಒಂದು ಬಟ್ಟೆಯಾಗಿ
ತಿನ್ನೋ ಅನ್ನ ಬೆಲ್ಲವಾಗಿ
ಕುಡಿಯೋ ಅಂಬಲಿ ಪಾಯಸವಾಗಿ
ಮಕ್ಕಳಿಗೆ ಒಂದು ಬಟ್ಟೆ ಇಲ್ಲದೆ
ದುಃಖವನ್ನು ಮಾಡಿ
ಶೋಕಾಡುತ್ತಿದ್ದರಂತೆ ಪರಮಾತ್ಮ
ನನ್ನ ಹೊಟ್ಟೆ ತುಂಬ ಮಕ್ಕಳು
ಕೊಟ್ಟೆಯಲ್ಲಪ್ಪ ....
ಮಕ್ಕಳಿಗೆ ಒಂದು ತುತ್ತು ಅನ್ನವಿಲ್ಲಪ್ಪ
ಭಗವಂತ ....
ಏಳೂರು ಉದ್ಯೋಗ ಮಾಡಿದರೂ
ಕೂಡ ಒಂದು ತುತ್ತು ಅನ್ನ
ತಿನ್ನಕ್ಕೆ ಕೂಡ ಗತಿ ಇಲ್ಲವಪ್ಪ
ಈಕಡೆ ಪರಮಾತ್ಮ
ಹಗಲು ರಾತ್ರಿ ಕುಂತಾಗ
ನಿಂತಾಗೆಲ್ಲ ಬರೀ ಭಗವಂತ
ಗ್ಯಾನವಂತೆ ....
ಅವನು ಅಲ್ಲಿ ಮುಕ್ತಿ ಕೇಳೋದಕ್ಕು
ಈವಮ್ಮ ಭಗವಂತನಿಗೆ ಕೇಳಕ್ಕೂ
ಇವಳು ಅತ್ತಂತ ಕಣ್ಣೀರು
ಆ ಸ್ವಾಮ್ಗೊಳ ಕಲ್ಯಾಣ ಪಾದ ಕೇಳಕ್ಕೂ
ಅವನು ಪಾದ ಹಿಡ್ಕೊಂಡಿರುವುದಕ್ಕೂ
ಒಂದೇ ಆಯ್ತಂತೆ
ಬ್ರಹ್ಮಚಾರಿ ....

ನಿನಗೆ ನಾನು ಮುಕ್ತಿ ಕೊಡುತ್ತೀನಿ
ಬಿಡು ನನ್ನ ಪಾದ
ಕೊಡುತ್ತೀಯಪ್ಪ ನಿಜವಾಗಲೂ
ಕೊಡುತ್ತೀನಿ ಬಿಡು
ನೋಡು ನಿಡುಘಟ್ಟ ಎಂಬ ಗ್ರಾಮದಲ್ಲಿ
ಅನ್ನೋಜಿಯವರ ಸೊಸೆಯಾಗಿರತಕ್ಕಂತ
ಬಾಚಿಬಸವಾಚಾರಿಯ ಮಡದಿಯಾದ
ಮುದ್ದೋಜಿ ಆರು ಜನ ಗಂಡು ಮಕ್ಕಳು
ಹೆತ್ತಿ ಕೇಳಿತ್ರವಾಗಿ ಮಾರಾಪುರಿಪಟ್ಟಣ
ಅಂತಹ ಮಾರೇಹಳ್ಳಿಗೆ ಬಂದು
ನೆಲೆಯಾಗಿ ಸೇರುತ್ತಾರೆ ಅವರಿಗೆ ನೀನು
ಏಳನೇಯ ಮಗನಾಗಿ ಹುಟ್ಟು

ನಿನ್ನನ್ನು ಅಂದ ಚಂದ ರೂಪ ಲಾವಣ್ಯವನ್ನು ನೋಡಿ ಕೆಂಪಾಚಾರಿ ಅಂತ ನಾಮಕರಣ ಮಾಡಿದ ಮೇಲೆ ಅವರ ಬಡತನ ಬಯಲಾಗಿ ದುರ್ತಾನ ದೂರವಾಗಿ ಅವರಿಗೆ ಸಿರಿ ಸಂಪತ್ತು ಬರಲಿ. ನಾನು ಕಲ್ಯಾಣವನ್ನು ಬಿಟ್ಟು ಜಗತ್ತನ್ನೆಲ್ಲ ಸುತ್ತಿ ಕೊನೆಯಲ್ಲಿ ನಿಂತ್ಕೊಳ್ಳುವ ಸ್ಥಳ ಯಾವುದು ಗೊತ್ತಪ್ಪ ? ಹಾಲುಮತದ ಬೊಪ್ಪೇಗೌಡನ ಮನೆಯ ಕುರುಬೇಗೌಡನ ಕುರಿಹುಂಡಿ ಒಳಗೆ ನಾನು ಬಂದು ನೆಲೆಗೊಳ್ಳುತ್ತೀನಿ. ಏಳು ವರ್ಷಕ್ಕೆ ನೀನು ಕುಲುಮೆ ಕಚ್ಚೇರಿ ಒಳಗೆ ದರ್ಬಾರಾಗಿ ಉದ್ಯೋಗ ಮಾಡುತ್ತಿರು. ನಿನ್ನ ದಾನ ತಕ್ಕೊಂಡು ನಿನ್ನ ಕಾಮ ಕ್ರೋಧ ಮದ ಮತ್ಸರವನೆಲ್ಲ ಅಡಗಿಸಿ ನಿನ್ನ ಹನ್ನೆರಡು ವರ್ಷ ಹಾವು ಚೇಳಿನ ಒತ್ತೆ ಒಳಗೆ ಕೂಡಿ ಏಳು ಹನ್ನೆರಡು ಹತ್ತೊಂಭತ್ತು ವರ್ಷ ಮಾಡಿ ನಿನ್ನ ನೀಲಗಾರನ ಬಿಟ್ಟು ನಿನ್ನನ್ನು ಸಿದ್ದಪ್ಪಾಜಿಯನ್ನಾಗಿ ಮಾಡಿ, ನಾಳೆ ಜಗತ್ತಿಗೆ ಮುಕ್ತಿಯನ್ನು ಕೊಟ್ಟು ನಿನ್ನ ಶಾಶ್ವತವಾಗಿ ದೇವರು ಮಾಡಿಬಿಡುತ್ತಾನೆ ಎಂದರಂತೆ. ಆಗಲಿ ಅಪ್ಪ ಅಂದೇಟಿಗೆ ಕಂಡಾಯದಿಂದ ಆಶೀರ್ವಾದ ಮಾಡಿದೇಟಿಗೆ ಅಲ್ಲೇ ಪಕ್ಕಂತ ಪ್ರಾಣವನ್ನು ಬಿಟ್ಟನಂತೆ. ದೇಹ ಬಿದ್ದೋಯ್ತು. ಆತ್ಮ ಅಂತಕ್ಕಂತದ್ದು ಸರ್‍ರನೇ ಬಂದು ಮುದ್ದಮ್ಮನ ಗರ್ಭ ಸೇರ್‍ಕೋತು. ಅವರು ಕಲ್ಯಾಣವನ್ನು ಬಿಟ್ಟು ಮಡಿವಾಳ ಮಾಚಯ್ಯ ರಾಚಪ್ಪಾಜಿ ಹೊಲೆಯ ಮಾದಿಗ ಚೆನ್ನಯ್ಯಲಿಂಗಯ್ಯನವರನ್ನು ಕರ್‍ಕೊಂಡು

ತುರ್ಕರಕಾಂಡಕ್ಕೆ

ವಿಜಯನಗರ ಬಿಟ್ಟಾರಂತೆ
ತುರ್ಕರ ಕಾಂಡಕ್ಕೆ ಬರುತ್ತಾರೆ
ಸಿದ್ದಯ್ಯ ಸ್ವಾಮಿ ಬನ್ನಿ

ತುರ್ಕರ ಕಾಂಡದೊಳಗೆ
ಮುಸ್ಲಿಮ್ಮರು ಕೂತ್ಕೊಂಡು ಇದ್ದರಂತೆ
ದೇವರು ನೋಡಿದಾಗಲೇ
ಅಲ್ಲಾ ಅಕ್ಬರ್ ಥೂ ತರಿಕೆ.
ಅಯ್ಯೋ ಬೊಡ್ಡಿಮಕ್ಕಳೇ
ನಮ್ಮ ಗುರುಗಳಿಗೆ ಸ್ವಲ್ಪ ಜಾಗ ಕೊಡಿರಪ್ಪ
ಸಿದ್ದಯ್ಯ ಸ್ವಾಮಿ ಬನ್ನಿ

ಹೇ ಬೋಸಡಿಕೆ ಹಮಾರ .... ನಿನಗೆ ಜಾಗ ಕೇಳುತ್ತಾ ಇದ್ದೀಯಲ್ಲ ಬೊಡ್ಡಿಮಗನೆ. ಎಲ್ಲರನ್ನೋ ಯಾರ್‍ಯಾರನ್ನೋ ಕರ್‍ಕೋಂಬುಟ್ಟು ನಿನಗೆ ಇಷ್ಟಗಲ ಜಾಗ ಬೇಕಾದರೆ ನೋಡು ಈ ಕುದುರೆ ಕೆನೆಯಾಗಿದೆ (ತಮಿಳಿನಲ್ಲಿ ಸೆನೆಯಾಗಿವುಳ್ಳದು) ಅಂದರೆ ಬಸುರಾಗ್ಬುಟ್ಟದೆ. ಈ ಕುದುರೆ ಒಳಗೆ ಯಾವ ತರ ಮರಿ ಹುಟ್ಟುತ್ತದೆ ಹೇಳ್ಬುಡು ನಿಮಗೆ ನಾವು ಜಾಗ ಕೊಡುತ್ತೀವಿ ಅಂದರಂತೆ. ಸ್ವಾಮಿಯವರು ಹೇಳಿದರಂತೆ, ಸಾಬರೇ ಇದರಲ್ಲಿ ಪಂಚವರ್ಣದ ಗಂಡು ಕುದುರೆ ಉದುರುತ್ತದೆ ಎಂದರಂತೆ. ಸಾಬರು ಕೇಳ್ದರು ಇದು ನಿಜವೇನೋ ಸನ್ಯಾಸಿ. ನೋಡಿ ನಾವು ದಾನಕೊಡುವವರಲ್ಲ ನಾವು ಶಿವನಿಗೆ ಭಕ್ತರು ಎಂದರು. ಇದನ್ನು ಕೇಳಿದ ಸಾಬರು ಆಳುಗಳನ್ನು ಕರೆ ಎಂದರು. ನಿಜವಾದ ಮಾತು ಆಡಿದರೆ ಸರಿಯಾಗಿ ನಾನು ನಿನಗೆ ಭಕ್ತನಾಗುತೇನೆ ಎಂದರಂತೆ. ಆಗ ಆಳುಗಳಿಂದ ಅಲ್ಲಿಯೇ ಕುದುರೆಯ ಹೊಟ್ಟೆ ಕುಯ್ಸಿದರಂತೆ. ಹೊಟ್ಟೆ ಒಳಗೆ ಮಿನಮಿನನೇ ಕಣ್ಣು ಕಣ್ಣು ಬಿಡುತ್ತಿತ್ತಂತೆ ಪಂಚವರ್ಣದ ಪಟ್ಟೆ ಕುದುರೆ.

ಕೊಡೆಕಲ್ಲಿಗೆ – ೨

ಆದಿಕಲ್ಯಾಣವನ್ನು ಬಿಟ್ಟು ನಮ್ಮಪ್ಪ
ಕೊಡೆಕಲ್ಲಿಗೆ ಬತ್ತಾವರಲ್ಲೋ
ಸಿದ್ದಯ್ಯ ಸ್ವಾಮಿ ಬನ್ನೋ
ಬ್ಯಾಸಿಗೆ ಬಿಸಿಲಿನಲ್ಲಿ ಅರೆಕಲ್ಲ ಮೇಲೆ
ಸ್ವಾಮಿಯವರು ನೆಲೆಮೂರ್ತ ಮಾಡಿ
ಹುಲಿ ಧರ್ಮ ಹಾಸುತ್ತಾರೆ
ವಿಭೂತಿಗಟ್ಟಿ ಹರಡಿದರಂತೆ
ಬಲಮೊಗ್ಗಲಾಗಿ ಪವಾಡಿಸಿದರಂತೆ
ರಾಚಪ್ಪಾಜಿ ಮಡಿವಾಳ ಮಾಚಯ್ಯ
ಹೊನ್ನಯ್ಯ ಚೆನ್ನಯ್ಯ ಪವಡಿಸಿದರಂತೆ
ಕಿಡಗಣ್ಣರೇಚಪ್ಪಾಜಿಗೆ ನಿದ್ರೆ ಏನು

ಬರನಿಲ್ಲವಂತೆ
ಸಿದ್ದಯ್ಯ ಸ್ವಾಮಿ ಬನ್ನೋ

ವಿಜಯನಗರಕ್ಕೆ – ೩

ಕೊಡೆಕಲ್ಲನ್ನು ಬಿಟ್ಟಾರಂತೆ ನಮ್ಮಪ್ಪ
ವಿಜಯನಗರಕ್ಕೆ ಬರುತ್ತಾಬರಲ್ಲೋ
ಸಿದ್ದಯ್ಯ ಸ್ವಾಮಿ ಬನ್ನೋ
ತೆಂಕ್ಲರಾಜ್ಯಕ್ಕೆ ಮಾತ್ರ ಹೋಗಬೇಡ ಕಾಣೋ
ಮದ್ದಿಕ್ಕುತ್ತಾರೆ ಮಧ್ಯಾಹ್ನಕ್ಕೆ ಮರಣ ಮಾಡುತ್ತಾರೆ
ಮಂತ್ರ ಮಾಟ್ನಾ ಮಾಡುತ್ತಾರೆ ಕಾಣೊ
ಸಿದ್ದಯ್ಯ ಸ್ವಾಮಿ ಬನ್ನಿ

ಸ್ವಾಮಿಯವರು ವಿಜಯನಗರದಲ್ಲಿ ಹಾಸಿದರು ಹುಲಿಚರ್ಮ ಹರಡಿದರು ವಿಭೂತಿಗಟ್ಟಿ ಕಕ್ಕೆಮರದ ಕಂಡಾಯವನ್ನ ಜಡಿದು ಭೂಮಿಗೆ ನೆಟ್ಟುಬಿಟ್ಟು ನೆಲಮೂರ್ತ ಮಾಡಿಕುಳಿತರು. ಶುದ್ಧ ಮೂಡಮೊಕನಾಗಿ ಕೂತ್ಕೊಂಡರು ಧರೆಗೆದೊಡ್ಡವರು. ರೇಚಪ್ಪಾಜಿಯವರೆ ? ಏನು ಗುರುದೇವ. ಉತ್ತರದೇಶದಿಂದ ನಾವು ದಕ್ಷಿಣರಾಜ್ಯಕ್ಕೆ ಬರಬೇಕಾದರೆ ನಮ್ಮ ಕಂಡಾಯಕ್ಕೆ ಪೂಜೆ ಮಾಡಿ ಸುಮಾರು ದಿನಗಳಾಗಿದೆ. ಈಗ ಪೂಜೆ ಮಾಡಬೇಕು ಶರಣ. ಪೂಜೆ ಮಾಡಬೇಕಾದರೆ ಕಂಡಾಯಕ್ಕೆ ಹೂವಾಗಬೇಕು ಎಂದರು ಸ್ವಾಮಿಯವರು. ಆಗಲಿ ಗುರುದೇವ. ನೋಡಪ್ಪ ಮೂಡ್ಲಾಗಿ ಹೋಗು ಪಡುವಲಾಗಿ ಹೋಗು ತೆಂಕ್ಲಾಗಿ ಮಾತ್ರ ಹೋಗಬೇಡಕಾಣಪ್ಪ. ಯಾಕಪ್ಪ ಗುರುದೇವ ? ಯಾಕೂ ಇಲ್ಲ ಕಾಣೋ ರಾಚಪ್ಪಾಜಿ ಮದ್ದಿಕ್ಕುತ್ತಾರೆ ಮಧ್ಯಾಹ್ನಕ್ಕೆ ಮರಣ ಮಾಡುತ್ತಾರೆ. ಆದ್ದರಿಂದ ತೆಂಕ್ಲಾಗಿ ಹೋಗಬೇಡ ಕಾಣೋ ಅಂದ್ರು. ಏನು ಕರಾಮತ್ತಿರಬೇಕೆಂದು ಮೂಡ್ಲಾಗಿ ಹೋಗುತ್ತಿದ್ದ ರೇಚಪ್ಪಾಜಿ ತೆಂಕ್ಲಾಗಿ ಹೋದರಂತೆ.

ವಿಜಯನಗರದಲ್ಲಿ ಏಳುನೂರು
ಗಾರುಡಿಗರ ಮಕ್ಕಳು ದನಕುರಿ
ಬಿಟ್ಕೊಂಡು ಬಳೆಗೆರೆಗೆ ಬಂದು
ಚಿನ್ನಿಕೋಲ ಆಡುತ್ತಾವ್ರೆ
ಇರಳೆಗೋಲಿ ಆಡುತ್ತಾವ್ರೆ
ಲಗ್ಗೆ ಚೆಂಡ ಆಡುತ್ತಾವ್ರೆ . .. .
ಗಾರುಡಿಗರ ಮಕ್ಕಳ ಬಳಿಗೆ
ಬಂದರಂತೆ ಮಾಯ್ಕಾರ ..
ಸಿದ್ದಯ್ಯ ಸ್ವಮಿ ಬನ್ನಿ

ಮರಿಗಾರುಡಿಗರ ಇರಳೆಗೋಲಿ
ಲಗ್ಗೆ ಚೆಂಡೆ ಗೆದ್ದುಕಂಡ್ರು
ರಾಚರಾಯ್ರು ಆಗ ಗಾರುಡಿಗರ
ಮಕ್ಕಳಿಗೆ ಬಹಳ ಕೋಪ ಬಂದಿತಂತೆ
ಸಿದ್ದಯ್ಯ ಸ್ವಾಮಿ ಬನ್ನೋ
ಮರಿಗಾರುಡಿಗರಲ್ಲಿ ಒಬ್ಬ ಹುಡುಗ
ಹೆತ್ತಯ್ಯ ಮುತ್ತಯ್ಯನಿಗೆ ಬಂದು
ಶುದ್ದಿಯನ್ನು ಮುಟ್ಟಿಸಾವ್ರೆ
ಸಿದ್ದಯ್ಯ ಸ್ವಾಮಿ ಬನ್ನೋ
ಹಿರಿಗಾರುಡಿಗರೆಲ್ಲ ಸೇರ್ಕೊಂಡು
ಯಾವನೋ ಪರದೇಸಿ ಹುಡುಗ
ಬಂದು ನಮ್ಮ ಮಕ್ಕಳತಾವ
ಗೋಲಿಗೆಜ್ಜಿಗ ಗೆದ್ದಿಕೊಂಡಿದ್ದಾನೆ
ಅವನಿಗೆ ಘನ ಮೋಡಿ ಹಾಕಬೇಕು
ಎಂದು ಏಳುನೂರು ಗಾರುಡಿಗರು
ಊರ ಅಂಕಕ್ಕೆ ಬಂದರಂತೆ
ಸಿದ್ದಯ್ಯ ಸ್ವಾಮಿ ಬನ್ನೋ
ನಾವು ಹೇಳುವ ಮೋಡಿ ಎತ್ತಿದರೆ
ನಮ್ಮತಾವಿರುವ ಬಿಂಕಬಿರುದ ನಿಮಗೆ
ಕೊಟ್ಟುಬಿಡುತ್ತೀವಿ ಪರದೇಸಿ ಅಂದರಂತೆ
ಸಿದ್ದಯ್ಯ ಸ್ವಾಮಿ ಬನ್ನೋ

ಸ್ವಾಮಿಪರಂಜ್ಯೋತಿ ನನ್ನಪ್ಪಾಜಿ ಕಿಡುಗಣ್ಣರೇಚಪ್ಪಾಜಿಯವರು ಘನಗಾರುಡಿಗರ ಮಕ್ಕಳು ರಣಚೆಂಡು, ಚಿಣ್ಣಿಕೋಲು ಆಡುತ್ತಿರಬೇಕಾದರೆ ಅವರ ಬಳಿಗೆ ಬಂದರಂತೆ ಸ್ವಾಮಿ ರೇಚಪ್ಪಾಜಿಯವರು. ಏನಪ್ಪ ಮಕ್ಕಳೇ ಆಟ ಆಡುತ್ತಿದ್ದೀರ ಎಂದು ಕೇಳಿದರು. ಹೌದು ಕಾಣಪ್ಪ ಎಂದರು. ಅಪ್ಪ ನನಗೊಂದು ಆಟ ಕೊಡುತ್ತೀರಪ್ಪ ನಾನು ಬರುತ್ತೀನಿ ಆಟಕ್ಕೆ ಎಂದರು ರಾಚಪ್ಪಾಜಿಯವರು. ನೀವೆಲ್ಲ ಒಂದು ಕಡೆ ಸೇರ್ಕೊಳ್ಳಿ ನಾನು ಒಬ್ಬನೇ ಒಂದು ಕಡೆ ನನಗೆ ಒಂದು ಹೊಟ್ಟೆ ಚಿಣ್ಣಿ ಕೊಡಿ ಸಾಕು (ಒಂದು ಕುಟುಕು). ಮೊದಲಿಗೆ ಆಟ ಯಾರದು ಘನಗಾರುಡಿಗರ ಮಕ್ಕಳದು. ಮಕ್ಕಳು ಹೊಡೆದಂತಹ ಚಿಣ್ಣಿಕೋಲನ್ನೆಲ್ಲ ಹಾಗೆಯೇ ಆತ್ಕೊಂಡರಂತೆ. ಸ್ವಾಮಿಯವರಿಗೆ ಒಂದೇ ಒಂದು ಹೊಟ್ಟೆ ಚಿಣ್ಣಿಕೋಲು ಕೊಟ್ಟಿದ್ದಾರೆ. ಹೊಡೆದಂತಹ ರಭಸಕ್ಕೆ ಬೆಟ್ಟ ಏರ್ಬುಡ್ತಂತೆ ಚಿಣ್ಣಿಕೋಲು. ಅಳಿ... ಅಂತ ಕೂಗುತ್ತಾ ಇದ್ದಾರೆ ಮಕ್ಕಳು. ಕೂಗಿ ಕೂಗಿ ಹೊಟ್ಟೆ ಊದೋಗಿ ಗಣಗಾಡಿಗರ ಮಕ್ಕಳು ಸತ್ತು ಮನಗಿದ್ದಾರೆ. ಒಬ್ಬನೇ ಒಬ್ಬ ಉಳ್ಕೊಂಡನಂತೆ. ಯಾವನೋ ಒಬ್ಬ ಪಡ್ಡೆ ಹುಡುಗ ಬಂದು ನಮ್ಮನ್ನೆಲ್ಲ ಸೋಲಿಸಿ ಮಕ್ಕಳನೆಲ್ಲ ಸಾಯಿಸಿದ್ದಾನೆ. ನಾನು

ಅಲ್ಲಿಂದ ತಪ್ಪಿಸ್ಕೊಂಡು ಬಂದೆ ಎಂದು ಹೇಳಿದನು ಮರಿಗಾರುಡಿಗ. ಗಾರುಡಿಗರು ನಮ್ಮ ಮಕ್ಕಳ ಜೊತೆ ಏನು ಆಟ ನಮ್ಮ ಜೊತೆ ಆಡಬೇಕು ಅಂತ ರಾಚಪ್ಪಾಜಿಯವರ ಸ್ಥಳಕ್ಕೆ ಬಂದರಂತೆ. ನಮ್ಮ ಜೊತೆ ಗೆದ್ದರೆ ನಿನಗೆ ಬೆಲೆ. ನೋಡ್ರಪ್ಪ ಘನಗಾರುಡಿಗರೇ ನಾನು ಗೆದ್ದರೆ ನನಗೇನು ಕೊಡುತ್ತೀರಪ್ಪ ಎಂದು ಕೇಳಿದರು. ಗಾರುಡಿಗರು ನೀನು ನಾವು ಹಾಕುವ ಮೋಡಿ ಆಟದಲ್ಲಿ ಗೆದ್ದರೆ ನಮ್ಮ ಮಗಳಾದ ಚೆನ್ನಾಜಮ್ಮನನ್ನು (ಚಿನ್ನಮಣಿ) ಕೊಡುತ್ತೀವೆ ಎಂದರು. ರಾಜಮೋಡಿ ರಣಮೋಡಿ ಆಟ ಅಂತಂದ್ರೆ ನಿಂಬೆ ಹಣ್ಣನ್ನು ಮಂತ್ರಿಸಿ ಇಟ್ಬಿಟ್ಟರೆ ಒಂದು ಗುಳಿಯನ್ನು ತೋಡ್ಬುಟ್ಟು ಅದರೊಳಗೆ ಮಂತ್ರಿಸಿ ಇಟ್ಬುಟ್ಟರೆ ಆ ನಿಂಬೆ ಹಣ್ಣನ್ನು ಬಾಯಿಗೆ ಕಚ್ಕೊಂಡು ಎಸೆಯಬೇಕು. ರಂಗವನ್ನು ಬರೆದು ಆ ರಂಗಕ್ಕೆ ಒಂದು ಗುಳಿಯನ್ನು ತೋಡಿ. ಗುಳಿಯೊಳಗೆ ಒಂದು ನಿಂಬೆ ಹಣ್ಣು ಇಟ್ಟು ಮೋಡಿ ಆಟವನ್ನು ಇಟ್ಟಿದ್ದಾರೆ. ಆ ಆಟದಲ್ಲಿ ಗೆಲ್ಲಲಾರದೇ ಪ್ರಾಣ ಬಿಟ್ಟರು ಗಾರುಡಿಗರು. ಆಗ ಗಾರುಡಿಗರ ಹೆಂಗಸರು ಅಕ್ಕಿ ಕಾಳು ಇಟ್ಟರೆ ಬದಿಕೋತ್ತಾರೆ ಆ ಹೆಂಗಸರ ಹತ್ತಿರ ಇರುವ ಸತ್ಯ. ಗಾರುಡಿಗರ ಮೋಡಿ ಆಟದಲ್ಲಿ ಬೇವಿನ ಸೊಪ್ಪು ಉರುಹಾಕದರೆ ಚೇಳುಗಳು ಪೊತಪೊತನೇ ಕಡದುಬುಡುತ್ತವೆ.

ಧರೆಗೆದೊಡ್ಡವರ ನೆನೆದಾವ್ರೆ
ಕಿಡುಗಣ್ಣ ರಾಚಪ್ಪಾಜಿ
ನಿಮ್ಮ ಪಾದವೇ ಗತಿ
ನಮ್ಮ ತಂದೆ ಕೂಡಲಸಂಗಮದೇವರೇ
ನಿಮ್ಮ ಪಾದವೇ ಗತಿ
ನನ್ನ ಸಾಕಿದಂತಹ ನೀಲಮ್ಮನವರೇ
ನಿಮ್ಮ ಪಾದವೇ ಗತಿ
ಸಿದ್ದಯ್ಯ ಸ್ವಾಮಿ ಬನ್ನೋ

ಗಾರುಡಿಗರೆಲ್ಲರೂ ಸೇರ್ಕೊಂಡು
ಅಂತ್ರಗಾರನೋ ಮಂತ್ರಗಾರನೋ
ಮಾಟ್ನಗಾರನೋ ಮೋಡಿಗಾರನೋ
ನಾವು ಹಾಕಿದಂತ ಮೋಡಿಯ
ಎತ್ತುವಂತ ಯಾವನೋ ಮಾಯಾವಿ
ಕೋಣನ ತಲೆಯ ಮೇಲೆ ಜ್ಯೋತಿ
ಕಸ್ಸಿ ಮಡಗುತ್ತೀವಿ
ಕೋಣನ ತಲೆಯ ಮೇಲೆ ಜ್ಯೋತಿ
ಕಸ್ಸಿ ಮಡಗಾವ್ರೆ
ಘನಗಾರುಡಿಗರ ಗಂಡ ಭೂಮಿಯೊಳಗೆ
ಉದ್ದಂಡ ರಾಚಪ್ಪಾಜಿ ಧರೆಯದೊಡ್ಡವರ

ನೆನೆದು
ಈರಮಂಡಿಯ ಊರಿ ಸ್ವಾಮಿ ಪರಂಜ್ಯೋತಿ
ಕೋಣನ ತಲೆಯ ಮೇಲೆ ಜ್ಯೋತಿಯ
ಎತ್ತಿದರಲ್ಲೋ ಗುರುದೇವಾ ....
ಸಿದ್ದಯ್ಯ ಸ್ವಾಮಿ ಬನ್ನಿ

ಏನಣ್ಣ ಅಂತ್ರಗಾರನೋ ಮಾಟ್ನಗಾರನೋ ಮೋಡಿಕಾರನೋ ನಾವು ಹಾಕಿದಂತಹ ಮೋಡಿಯನ್ನೆಲ್ಲ ಎತ್ತುತ್ತಾವ್ನೆ ಯಾವನೋ ಎಂಬುದು ಅರಿಯೇ.

ತೆಂಗಿನಕಾಯಿಯ ಮೋಡಿಯ
ತೆಂಗಿನ ಕಾಯಿಗೆ ಸೂಜಿದಬ್ಬ ಚುಚ್ಚಿ
ಹಳ್ಳ ತೋಡಿ ಗುರುವೇ ಹೂತಾಕ್ಕಾವ್ರೆ.
ಮೊನಕಾಲ ಎತ್ತಿದ್ದರಂತೆ
ಜಾಡಿಸಿ ನಿಂಬೆಯನ್ನ ಒದ್ದರಂತೆ
ಮೂರು ಜನ ಗಾರುಡಿಗರು
ರಕ್ತವ ಕಕ್ಕಿ ಸತ್ತಾವ್ರೆ
ಗಾರುಡಿಗರ ಮಡದೀರು ಬಂದು
ದುಃಖವನ್ನು ಮಾಡುತ್ತಾರೆ
ಅವರ ಗಂಡಂದಿರ ತೊಡದಾವ್ರೆ
ಧರೆಗೆದೊಡ್ಡವರ ನೆನೆದು ಕಪ್ಪುಧೂಳ್ತ
ತೆಗೆದು ಮೋಡಿ ಮೇಲೆ ಎಸೆದಾವ್ರೆ
ಸಿದ್ದಯ್ಯ ಸ್ವಾಮಿ ಬನ್ನಿ

ಸ್ವಾಮಿ ತೆಂಗಿನ ಕಾಯಿಯನ್ನು ಜಾಡಿಸಿ ಒದ್ದ ತಕ್ಷಣ ಅವರ ಮನೆದೇವತೆಯ ಮೇಲೆ ಬಂದು ಬಿದ್ಬುಡ್ತಂತೆ. ಆ ಮನೆದೇವರು ಮಲೆಯಾಳಗಿತ್ತಿ. ಗಾಡಿಗರಲ್ಲಿ ಮೋಡಿ ಆಟವನ್ನು ಗೆದ್ದು ಘನಗಾರುಡಿಗರ ಗಂಡ ಅಂತ ನಾಮಾಂಕಿತವನ್ನು ಪಡೆದರಂತೆ. ಆಡಿದ ಮಾತಿಗೋಸ್ಕರವಾಗಿ ಚಂದಕ್ಕೆ ಚೆನ್ನಾಜಮ್ಮನ್ನ ದಾನವಾಗಿ ಕೊಟ್ಟರು. ನಾಳೆ ಚೆನ್ನಾಜಮ್ಮನನ್ನು ಚೆನ್ನಾಜಮ್ಮ ಅಂತ ಮಾಡಕೊಂಡು ಅದೂ ಅಲ್ಲದೇ

ಪಂಚಾಳ ಪರವಾರದವರಿಗೆ ನೀವು
ಹಳಮಕ್ಕಳು ಆಗಿ ಅಂದಾರಂತೆ
ಸಿದ್ದಯ್ಯ ಸ್ವಾಮಿ ಬನ್ನಿ
ಪಂಚಾಳ ಪರವಾರದವರಿಗೆ
ಹಳಮಕ್ಕಳು ಆಗೋದ್ರೆ ....
ಅವರ ಊರ ಮುಂದೆ ಇರುವಂತ
ಚೌಡಿಯೊಳಗೆ ಕೂತ್ಕೊಂಡ್ರೆ

ನಮ್ಮ ಹಳಮಕ್ಕಳು ಬಂದರು ಅಂತ್ಹೇಳಿ
ಅಕ್ಕಿ ಅಸಿಟ್ಟು ಖಾರದಪುಡಿ ತಂದು
ಕೊಡಲ್ಯಪ್ಪ ....
ಪಂಚಾಳ ಪರವಾರದವರಿಗೆ ನೀವು

ಹಳಮಕ್ಕಳಾಗಿ ಅಂದಾರಂತೆ
ಸಿದ್ದಯ್ಯ ಸ್ವಾಮಿ ಬನ್ನಿ
ಕಂಡಾಯದ ಒಡೆಯ ಆ ....
ಲಿಂಗಯ್ಯ ದಯ ಮಾಡೋ ....

ಪಾಂಚಾಳ ಪರವಾರದವರಿಗೆ ಹಳಮಕ್ಕಳಾಗಿ ಅಂತಂದ್ರೆ ಈಗಲೂ ಕೂಡ ಅವರಿಗೆ ಅಕ್ಕಿ ಅಸಿಟ್ಟು ಖಾರದಪುಡಿಯನ್ನು ಕೊಟ್ಟು ಮಕ್ಕಳಿಗಿಂತ ಹೆಚ್ಚಾಗಿ ನೋಡುತ್ತಾರೆ. ಕೈಗೆ ದುಡ್ಡು ಕಾಸು ಕೊಟ್ಟು ತಲೆಗೂ ಎಣ್ಣೆನೂ ಒತ್ತಿ ಕಳುಗಿಸುತ್ತಾರೆ. ಧರೆಗೆದೊಡ್ಡವರ ಆಶೀರ್ವಾದ ಈಗಲೂ ಕೂಡ ಸತ್ಯ ಇದೆ.

ಗಾರುಡಿಗರ ಜೊತೆ ಮೋಡಿ ಆಟವನ್ನು ಗೆದ್ದು ಘನಗಾರೂಡಿಗರ ಗಂಡ ರೂಢಿ ಒಳಗೆ ಉದ್ಧಂಡ ಎಂದು ನಾಮಾಂಕಿತವನ್ನು ಪಡ್ಕೊಂಡು ಸ್ವಾಮಿಯವರು

ವಿಜಯ ನಗರ ಬಿಟ್ಟಾರಂತೆ
ಶೀಲವಂತಪುರಕ್ಕೆ ಬಂದಾರಂತೆ
ಸಿದ್ದಯ್ಯ ಸ್ವಾಮಿ ಬನ್ನೋ
ಪವಾಡ ಲಿಂಗಯ್ಯ ನೀವೇ ಬನ್ನೋ
ಮಾಟ್ನ ಮಾಡುವರ ಮನೆಯ
ಮಾಳ ಮಾಡಲು ಬಲ್ಲೆ
ಭಿಕ್ಷೆ ಕೊಟ್ಟವರ ಮನೆಯ
ಲಕ್ಷಿಕರ ಮಾಡಬಲ್ಲೆ
ಹಾಲು ಕೊಟ್ಟವರ ಮನೆಯ
ಹಾಲು ಸಾಗರ ಮಾಡಬಲ್ಲೆ

ಕಪ್ಪಡಿಗೆ ಶರಣು ಕೈಲಾಸಕ್ಕೆ ಶರಣು
ಚಿಕ್ಕಲ್ಲೂರು ಗುರುಮಠಕ್ಕೆ ಶರಣು
ಹನ್ನೆರಡು ಆಳುದ್ದ ಜಲಪಾತಾಳದಲ್ಲಿ
ಕಲಿಯನ್ನು ಕಣ್ಣಿಂದ ನೋಡಬಾರದು
ಅಂತ್ಹೇಳಿ ಭಾರಿಯ ಗುಂಡನ್ನು ಬಾಗಿಲಿಗೆ
ಚಾಚ್ಕೊಂಡು ಪಾತಾಳಲೋಕದಲ್ಲಿ
ಮರೆಯಾಗಿ ಮಲಗಿರುವ ಮಂಟೇದಲಿಂಗಯ್ಯ

ನಿಮ್ಮ ಪಾದಚರಣಗಳಿಗೆ ಮೊದಲು ಶರಣಯ್ಯ
ಜಗನಜ್ಯೋತಿ ಲಿಂಗಯ್ಯ ಬನ್ನಿ ....

ದಾನ ಸಾರುದರೂ ಧರ್ಮ ಸಾರುದರೂ ನಮ್ಮ ಪರಂಜ್ಯೋತಿ ನಮ್ಮಪ್ಪಾಜಿ ಆವಾಗ ಶೀಲವಂತಪುರದಲ್ಲಿದ್ದಾರೆ ಬ್ರಾಹ್ಮಣರು ತುಂಬು ಮರ್ಯಾದೆಯಿಂದ ಪಾದಪೂಜೆಯನ್ನು ಮಾಡಿದಾಗ ಸ್ವಾಮಿ ಧರೆಗೆದೊಡ್ಡವರು ಉತ್ತರದೇಶದಿಂದ ದಕ್ಷಿಣಕ್ಕೆ ಬರಬೇಕಾದರೆ ಅವರಿಗೆ ಆಶೀರ್ವಾದವನ್ನು ಮಾಡಿದ್ದಾರೆ. ನಾಳೆ ನೀವು ಮಣ್ಣು ಮುಟ್ಟಿ ಕೆಲಸ ಮಾಡಬೇಡಿ. ಪಂಚಾಂಗವನ್ನು ಹೇಳ್ಕೊಂಡು ನೀವು ಜೀವನಾಂಶವನ್ನು ಕಳಿಯಿರಿ. ತುಪ್ಪ ಅನ್ನದಲ್ಲಿ ಊಟ ಮಾಡಿ ಎಂದು ಆಶೀರ್ವಾದವನ್ನು ಮಾಡಿದ್ದಾರೆ. ಶೀಲವಂತಪುರದ ಜನರೆಲ್ಲ ಶೀಲವಂತಯ್ಯ ಎಂದು ನಾಮಕರಣ ಮಾಡಿದ್ದಾರೆ.

ಶೀಲವಂತಪರಕ್ಕೆ – ೪

ಶೀಲವಂತಯ್ಯ ಅಂತ ನಾಮಕರಣ
ಪಡ್ಕೊಂಡು ಶೀಲವಂತಪುರ ಬಿಟ್ಟಾರಂತೆ
ದೇವರು ತುರ್ಕರಕಾಂಡಕ್ಕೆ ಬರುತ್ತಾರೆ
ಸಿದ್ದಯ್ಯ ಸ್ವಾಮಿ ಬನ್ನಿ ಶೀಲವಂತಪುರಕ್ಕೆ ಬಂದವರಲ್ಲೋ
ಸಿದ್ದಯ್ಯ ಸ್ವಾಮಿ ಬನ್ನಿ
ಕಂಡಾಯ ಹೊತ್ಕೊಂಡು
ತಂಬೂರಿ ಹೊತ್ಕೊಂಡು
ದಾನ ಧರ್ಮವ ಸಾರುತ್ತಾರೆ
ಧರ್ಮಗುರು ಪರಂಜ್ಯೋತಿ
ಸಿದ್ದಯ್ಯ ಸ್ವಾಮಿ ಬನ್ನಿ
ಹರದೇವರ ಭಿಕ್ಷಾ
ಗುರುದೇವರ ಭಿಕ್ಷಾ
ಸಾಧು ಸಂಗಯ್ಯನ ಭಿಕ್ಷಾ
ಜ್ಯೋತಿಲಿಂಗಯ್ಯನ ಭಿಕ್ಷಾ
ಕಲ್ಯಾಣದೇವರ ಭಿಕ್ಷಾ
ಮುಮ್ಮೂರ್ತಿಗಳ ಭಿಕ್ಷಾ
ಮುಕ್ಕಣ್ಣಯ್ಯನ ಭಿಕ್ಷಾ
ಜೋಳಿದಾತನ ಭಿಕ್ಷಾ
ಜ್ಯೋತಿಲಿಂಗಯ್ಯನ ಭಿಕ್ಷಾ

ಶೀಲವಂತಜನರ ಬೀದಿ ಒಳಗೆ
ಮೊದಲ ಭಿಕ್ಷಾ ಅಂದಾರಂತೆ
ಸಿದ್ದಯ್ಯ ಸ್ವಾಮಿ ಬನ್ನಿ

ಸ್ವಾಮಿ ಪರಂಜ್ಯೋತಿ ನನ್ನಪ್ಪಾಜಿ ತುರ್ಕಕಾಂಡದ ಒಳಗೆ ದಾನ ಧರ್ಮವನ್ನು ಸಾರುತ್ತಾ ಹೋಗುತ್ತಿರಬೇಕಾದರೆ ತುರ್ಕರು ಅಂದ್ರೆ ಮುಸ್ಲಮಾನರು ಇವನಿಗೆ ಕೈ ಇದ್ದರೆ ತಾನೇ ದಾನ ಸಾರೋದು ಅಂತ್ಹೇಳಿ ಹಸ್ತ ಕತ್ತರಿಸಿಬಿಟ್ಟರಂತೆ. ಆಗ ಸ್ವಾಮಿಯವರು ಅವರಿಗೊಂದು ಆಶೀರ್ವಾದ ಮಾಡಿದರಂತೆ. ನೋಡಪ್ಪ ನಾಳೆ ಗಗನಚುಕ್ಕಿ ಭರಚುಕ್ಕಿಯಲ್ಲಿ ದರ್ಗವನ್ನು ಗೇಯ್ಕೊಂಡು ಅಲ್ಲಾ ಓ ಅಕ್ಬರ್ ಅಂತ್ಹೇಳಿ ದಿನಕ್ಕೆ ಮೂರು ಸಾರ್ತಿ ಶಿವನ ಸೋತ್ರವನ್ನು ಮಾಡ್ರಿಯಪ್ಪ. ನಾಳೆಯಿಂದ ನಿಮ್ಮ ಹಸ್ತವೇ ದೇವರಾಗಲಿ.

ತುರುಕರಕಾರಣ್ಯಕ್ಕೆ – ೫

ತುರ್ಕರಕಾಂಡ್ಯವನ್ನು ಬಿಟ್ಟಾರಂತೆ
ಬೊಮ್ಮನತಿಟ್ಟಿಗೆ ನಮ್ಮ ದೇವರು
ದಯಮಾಡುತ್ತಾರೆ
ಸಿದ್ದಯ್ಯ ಸ್ವಾಮಿ ಬನ್ನಿ
ಕಂಡಾಯದ ಒಡೆಯ
ತುರ್ಕರಕಾಂಡದ ಒಳಗೆ ....
ಪರಂಜ್ಯೋತಿ ನನ್ನಪ್ಪ ....
ಮುಸ್ಲಮಾನರು ಇದ್ದಾರೆ
ಮುಸ್ಲಮಾನರ ಬೀದಿ ಒಳಗೆ
ದಾನ ಧರ್ಮ ಸಾರುತ್ತಾರೆ
ಸಿದ್ದಯ್ಯ ಸ್ವಾಮಿ ಬನ್ನಿ
ಪರಂಜ್ಯೋತಿ ....
ಲಿಂಗಯ್ಯ ನೀವೇ ಬನ್ನೋ

ಬೊಮ್ಮನತಿಟ್ಟಿನೊಳಗೆ – ೬

ಬೊಮ್ಮನತಿಟ್ಟಿನ ಒಳಗೆ ....
ಕುಂತವ್ರೆ ನನ್ನಪ್ಪ ....
ಧರೆಯ ತಂದವರು ಧರೆಗೆದೊಡ್ಡವರು

ಬೊಮ್ಮನತಿಟ್ಟಿನಮೇಲೆ ಗುರುವೇ
ಹಾಸಿದರಂತೆ ಹುಲಿಚರ್ಮ
ಹರಡಿದರಂತೆ ವಿಭೂತಿಗಟ್ಟಿ
ಸಿದ್ದಯ್ಯ ಸ್ವಾಮಿ ಬನ್ನೋ
ಕಕ್ಕೆಮರದ ಕಂಡಾಯ ಭೂಮಿಗೆ ನೆಟ್ಟು
ಬೊಮ್ಮನತಿಟ್ಟಿನ ಮೇಲೆ ಶುದ್ಧ ಮೂಡು
ಮೊಕನಾಗಿ ಗುರುವೇ ....
ನೆಲಮೂರ್ತಮಾಡುತ್ತಾವ್ರೆ
ಧರೆಗೆದೊಡ್ಡಯ್ಯನವರು
ಸಿದ್ದಯ್ಯ ಸ್ವಾಮಿ ಬನ್ನಿ

ಕುಂಬ್ಲಾಪುರಕ್ಕೆ – ೭

ಬೊಮ್ಮನತಿಟ್ಟಿಗೆ ಬಂದಾರಂತೆ
ಕುಂಬ್ಲಾಪುರಕ್ಕೆ ಬಂದಾರಂತೆ
ಸಿದ್ದಯ್ಯ ಸ್ವಾಮಿ ಬನ್ನಿ
ಕುಂಬ್ಲಾಪುರದ ಒಳಗೆ ....
ಕುಂಬ್ಲದಯ್ಯ ಅಂತ್ಹೇಳಿ
ನಾಮಕರಣ ಪಡ್ಕೊಂಡು
ಧರೆಯತಂದವರು ಧರೆಗೆದೊಡ್ಡವರು
ಕುಂಬ್ಲಾಪುರವ ಬಿಟ್ಟಾರಂತೆ
ಚೊಟ್ನಳ್ಳಿಗೆ ನಮ್ಮ ದೇವರೆ
ದಯ ಮಾಡುತ್ತಾರೆ
ಸಿದ್ದಯ್ಯ ಸ್ವಾಮಿ ಬನ್ನಿ
ಕಂಡಾಯದ ಒಡೆಯ ..
ಜ್ಯೋತಿಲಿಂಗಯ್ಯ ಬನ್ನಿ

ಚೊಟ್ನಳ್ಳಿಗೆ ಸ್ವಾಮಿ ದಯಮಾಡಿ ಪಾದ ಊರಿದರಂತೆ. ಐದು ಜನ ಶಿಸುಮಕ್ಕಳನ್ನು ಕರ್‍ಕೊಂಡು ಮಾಗುರು ಧರೆಗೆದೊಡ್ಡವರು ಮೈಸೂರು ಚೊಟ್ನಳ್ಳಿ ಒಳಗೆ ಎಡಮೂರ್ತ ಮಾಡಿ ಕುಳಿತುಕೊಂಡ್ರು. ಚೊಟ್ನಳ್ಳಿಯಯ್ಯ ಅಂತ್ಹೇಳಿ ನಾಮಕರಣ ಪಡೆದರು.

ಸಖ್ರಾಯಪಟ್ಟಣಕ್ಕೆ – ೮

ವಿಜಯನಗರವನ್ನು ಬಿಟ್ಟು ನಮ್ಮಪ್ಪ
ಸಖ್ರಾಯಪಟ್ಟಣಕ್ಕೆ ದಯಮಾಡುತ್ತಾರೆ
ಸಿದ್ದಯ್ಯ ಸ್ವಾಮಿ ಬನ್ನಿ
ಕಂಡಾಯದೊಡೆಯ ....
ಲಿಂಗಯ್ಯ ದಯಮಾಡೋ ....
ಪರಂಜ್ಯೋತಿ ನನ್ನಪ್ಪ ......
ಮಾಯ್ಕಾರರ ಮೈಮೆಯ
ಏನು ತಾನೇ ಹೇಳಲಪ್ಪ
ಸಿದ್ದಯ್ಯ ಸ್ವಾಮಿ ಬನ್ನಿ

ಭೂಮಿ ತಂದವರು ಭೂಲೋಕವನ್ನು ಪಡೆದಂತಹ ಮಾಗುರು ಧರೆಗೆದೊಡ್ಡವರು ಆದಿಕಲ್ಯಾಣವನ್ನು ಬಿಟ್ಟು ಸಖ್ರಾಯಪಟ್ಟಣಕ್ಕೆ ದಯಮಾಡಿದ್ದರು. ಸಖ್ರಾಯಪಟ್ಟಣದಲ್ಲಿ ವೀರಗುರುಬಸಪ್ಪಾಜಿ ಮಕ್ಕಳಿಗೆ ನಾಮಕರಣವನ್ನು ಮಾಡುತ್ತಿದ್ದಾರೆ. ಹಿರಿಯನಿಗೆ ಹಿರಿಗುರುಬಸವರಾಜೇಂದ್ರ ಸ್ವಾಮಿಗಳು ಕಿರಿಯನಿಗೆ ಕಿರಿಗುರು ರಾಜಪಟ್ಟ ಈರಭದ್ರಸ್ವಾಮಿಗಳು ಅಂತ.

ರಾಜನಿಗೆ ಸುಮಾರು ವರ್ಷಗಳಿಂದ ಮಕ್ಕಳು ಇಲ್ಲದೆ ಅವಳಿ ಜವಳಿ ಮಕ್ಕಳು ಹುಟ್ಟಿದರು. ಆಗ ಅರಸುಗಳು ಆರು ಮೈಲಿ ಚದುರ ಮೂರು ಮೈಲಿ ಪಾರ್ಶ್ವದವರೆಗೂ ಯಾರೂ ಹಸ್ದಿರಬಾರದು ಅನ್ನದಾನ ಗೋದಾನ ವಸ್ತ್ರದಾನ ಹೀಗೆ ಅನೇಕ ದಾನಗಳನ್ನು ಮಾಡಬೇಕೆಂದು ಡಂಗೂರ ಸಾರಿಸುತ್ತಿದ್ದಾರೆ. ಅರಸುಗಳ ಮನೆಯ ಊಟ ಅಂದರೆ ಭಾರಿ ಆನಂದ. ಈಗಲೂ ಮದುವೆ ಮಾಡಿದರೆ ವಸ್ತ್ರದಾನ ಮಾಡದೆ ಮದುವೆ ಮಾಡೋದಿಲ್ಲ. ಪರಂಜ್ಯೋತಿ ಪಾಳುಮಂಟಪದಲ್ಲಿ ಕೂತಿರಬೇಕಾದರೆ ರೇಚಪ್ಪಾಜಿಯವರನ್ನು ಕರೆದು ಊಟಕ್ಕೆ ನಡೀರಪ್ಪ ಅಂತ್ಹೇಳಿ ರಾಚಪ್ಪಾಜಿ ಮತ್ತು ಮಡುವಾಳ ಮಾಚಪ್ಪನವರು ಆದಿಕಲ್ಯಾಣದಿಂದ ಪಡ್ಕೊಂಡು ಬಂದರು ಅವರನ್ನು ಜೊತೆಯಲ್ಲಿ ಕರ್ಕೊಂಡು ಅರಸರ ಮನೆಗೆ ಊಟಕ್ಕೆ ಬಂದರು.

ಆಗ ಅಲ್ಲಿ ಧರೆಗೆದೊಡ್ಡವರ ಪಾದಪೂಜೆಯನ್ನು ಮಾಡಿ ಮೂವರನ್ನು ಊಟಕ್ಕೆ ಪಡಿಸಿದರಂತೆ. ರಾಜರ ಸತ್ಯ ನೋಡುವುದಕ್ಕಾಗಿ ಸ್ವಾಮಿಯವರು ಶಿವಪೂಜೆ ಮಾಡಲ್ಲ ಹಾಗೆಯೇ ಊಟಮಾಡಿ ಎಂಜಲು ಕೈಯನ್ನು ತೊಳೆಯದೆ ಕಾವಿಬಟ್ಟೆಗೆ ಸೀಟ್ಕೊಂಡು ಉತ್ತರದೇಶದ ಕಂಡಾಯ ಹೊತ್ಕೊಂಡು ಬಂದ್ಬಿಟರು. ಎಂಥಾ ಕೊಳಕುಜಂಗಮ ಅಂತ್ಹೇಳಿ ಉಳಿದವರೆಲ್ಲ ರಾಜರಿಗೆ ದೂರು ಒಪ್ಪಿಸಿದರಂತೆ. ಆಗ ಮಾರಾಜರು ಕೆಟ್ಟ ನಿರ್ಧಾರ ತಕ್ಕೊಂಡ್ರು. ನೋಡ್ರಪ್ಪ ನಿಮಗೆ ಆದ ಅಪಮಾನ ನನಗೂ ಆದಂಗೆ. ನಿನ್ನೆ

ದಿಸ ಹಿರಿಮಗನಿಗೆ ನಾಮಕರಣ ಆಯ್ತು. ರಾಜ ನಾಳೆದಿಸ ಕಿರಿಮಗನಿಗೆ ನಾಮಕರಣ ಮಾಡಬೇಕು ಅದಕ್ಕೆ ಡಂಗೂರದ ಮೂಲಕ ಸಾರಿಸ್ಬಿಡಿ ಎಂದರು. ಆ ಮೂರುಜನರಿಗೂ ವಿಶದ ಕಜ್ಜಾಯವನ್ನು ಇಕ್ಬಿಡಿ ಎಂದು ಮಂತ್ರಿಗಳಿಗೆ ಆಜ್ಞೆ ಮಾಡಿದ್ದಾರೆ. ಆದ್ದರಿಂದ ಮಂತ್ರಿಗಳು ಕಜ್ಜಾಯ ತುಪ್ಪದ ಊಟ ಎಂದು ಡಂಗೂರ ಸಾರಿಸುತ್ತಿದ್ದಾರೆ. ಎಲ್ಲಾರು ಊಟಮಾಡಕ್ಕೆ ಬರಬೇಕು ಅಂತ್ಹೇಳಿ

ಮಾರಾಜರ ಮನೆಗೆ ಸ್ವಾಮಿಯವರು
ದಯಮಾಡುತ್ತಿದ್ದಾರೆ
ಸಿದ್ದಯ್ಯ ಸ್ವಾಮಿ ಬನ್ನಿ
ಅರವತ್ತಾರು ಕಾಸು ಮೂವತ್ಮೂರು ಬಿರುದು
ಸುತ್ತ ಸರ್ಪದಾ ಕಟ್ಟು ಅಷ್ಟಲಾಂಗದ ತಾಯತ
ತಾಮ್ರದ ಮೈಜ್ವಾಲೆ ಬುಟ್ಮಂಡೆ ಬುಟ್ಕೀರ್ತಿ
ಮುಕ್ಕಣ್ಣಾಕುಲಾಬಿ ನೆತ್ತಿಮ್ಯಾಲೆ ಧರಸ್ಕೊಂಡು
ಎಡದ ಹೊನ್ನ ಪಾದಕ್ಕೆ ಕಬ್ಬಿಣದ ಎಳಭಾರಿ
ಬಲದಹೊನ್ನಪಾದಕ್ಕೆ ಮಂಡೇ ಉರಿಯ ಬಿರುದು
ಅವರ ಪಾದ ಪಾದದೊಳಗೆ ಕಬ್ಬಿಣದ ಎಳಭಾರಿ
ಸಿದ್ದಯ್ಯ ಸ್ವಾಮಿ ಬನ್ನಿ ....
ಎರಡು ಪಾದದೊಳಗೆ ಮುಳ್ಳಿನ ಪಾವಾಡ
ಉತ್ತರದೇಶದ ಕಂಡಾಯ ಹೆಗಲ ಮೇಲೆ
ಹೊತ್ಕೊಂಡು ಭಾರಿಯ ತಂಬೂರಿ ಪಕ್ಕದಲ್ಲಿ
ಧರಸಾವ್ರೆ ಮಾರಾಜರ ಮನೆಗೆ ನಮ್ಮ ಮಾಯ್ಕಾರ
ದಯಮಾಡುತ್ತಾರೆ
ಸಿದ್ದಯ್ಯ ಸ್ವಾಮಿ ಬನ್ನಿ

ಎಲ್ಲರಿಗೂ ಊಟದ ಎಲೆ ಪಡಿಸುತ್ತಿದ್ದಾರೆ. ಈ ಮೂರುಜನಕ್ಕೆ ಮಾತ್ರ ಎಲೆಪಡಿಸುತ್ತಿಲ್ಲ. ಅಣ್ಣಂಗಳಿರಾ ನಮಗೂ ಎಲೆ ಪಡಿಸಿ ಎಂದು ಕೇಳಿದರು ಸ್ವಾಮಿಯವರು. ನಿಮಗೆ ಮಾರಾಜರು ಮತ್ತು ಮಾರಾಣಿಯರು ಎಲೆ ಪಡಿಸುತ್ತಾರೆ ಎಂದು ಮಂತ್ರಿಗಳು ಹೇಳುತ್ತಾರೆ. ಓ ನಾವು ಹೆಚ್ಚಿನ ಗುರುಗಳು ಅಂತ್ಹೇಳಿ ಬಹಳ ಮೌನವಾಗಿ ಕೂತ್ಕೊಂಡಿದ್ದಾರೆ. ಮಾರಾಜ ಮಾರಾಣಿಯರು ಒಂಬತ್ತು ವಿಷದ ಕಜ್ಜಾಯವನ್ನ ಸುಟ್ಕೊಂಡು ಒಬ್ಬೊಬ್ಬರಿಗೆ ಮೂರು ಮೂರು ವಿಷದ ಕಜ್ಜಾಯವನ್ನು ಇಕ್ಕಿದರು. ಸ್ವಾಮಿಯವರು ಎರಡು ಕಜ್ಜಾಯವನ್ನು ಎತ್ತಿ ತಮ್ಮ ಮುತ್ತಿನ ಜೋಳಿಗೆಯಲ್ಲಿ ಮಡಗಿಕೊಂಡರಂತೆ. ಸ್ವಾಮಿಯವರು ಅನ್ನ ಇಕ್ಕಿದ ಮನೆ ಹಾಲುಸಾಗರವಾಗಲಿ ಎಂದು ಹರಸಿ ಪಾಳುಮಂಟಪಕ್ಕೆ ದಯಮಾಡಿದರು.

ಈಕಡೆ ಮಾರಾಜರು ತಮ್ಮ ಆಳುಗಳನ್ನು ಕರೆದು ವಿಶದ ಕಜ್ಜಾಯವನ್ನು ತಿಂದವರು ಬದುಕುತ್ತಾರಾ ಸತ್ತೋಗುತ್ತಾರೆ. ಆದ್ದರಿಂದ ಅರಮನೆಯ ಹಿಂಭಾಗದಲ್ಲಿ ಮೂರು ಗುಂಡಿ ತೋಡ್ಬಿಡಿ ಎಂದರಂತೆ. ಮೂರು ಹಳ್ಳವನ್ನು ತೋಡ್ಬಿಟ್ಟು ಸತ್ತೋದರೆ ತಂದು ಹಳ್ಳಕ್ಕೆ ಹಾಕೋಣ ಎಂದಿದ್ದರಿಂದ ಆಳುಗಳು ಕಾಯುತ್ತಿದ್ದರಂತೆ. ಪಾಳುಮಂಟಪದಲ್ಲಿ ರಾಚಪ್ಪಾಜಿಯವರು ಭಂಗಿಮಿಟ್ಟ ಮಾಡಿಕೊಡುವುದಂತೆ, ಮಡುವಾಳ ಮಾಚಯ್ಯ ಬೆಂಕಿಕೆಂಡ ಮಾಡಿಕೊಡುವುದಂತೆ ಧರೆಗೆದೊಡ್ಡವರು ಭಂಗಿ ಸೇಯೋದಂತೆ.

ಮಾರನೆಯ ದಿನ ಕುದುರೆ ಸವಾರಿಯಲ್ಲಿ ಮಕ್ಕಳನ್ನು ತಂದು ಪಾಠಶಾಲೆಗೆ ಬಿಟ್ಟು ಹೋಗುತ್ತಿದ್ದಾರೆ ಆಳುಗಳು. ಇದನ್ನು ನೋಡಿದ ಸ್ವಾಮಿಯವರು ವಿಷದ ಕಜ್ಜಾಯ ಇಕ್ಕಿದವರ ಮಕ್ಕಳು ಪಾಠಶಾಲೆ ಹೋಗುತ್ತಾ ಇದ್ದಾರೆ ನೋಡ್ರಪ್ಪ ಎಂದು ಹೇಳುತ್ತಾರೆ ಶಿಸುಮಕ್ಕಳಿಗೆ. ಪಾಠಶಾಲೆ ಮುಗಿದು ಮನೆಗೆ ನಡ್ಕೊಂಡು ಬರುತ್ತಿರಬೇಕಾದರೆ ರಾಜರ ಮಕ್ಕಳು ಸ್ವಾಮಿ ಮಳೆ ಕಡದ್ಬುಟ್ಟರಂತೆ. ಮಳೆಯನ್ನು ತಾಳಲಾರದೆ ಮಕ್ಕಳು ಆ ಪಾಳುಮಂಟಪಕ್ಕೆ ಓಡೋಡಿ ಬರುತ್ತಾರೆ. ಹಸಿವು ಆಗುತ್ತಾ ಇದೆ ನಾವು ಹೇಗೆ ಅರಮನೆಗೆ ಹೋಗುವುದು ಅಂತ ಮಕ್ಕಳು ಚಿಂತೆ ಮಾಡುತ್ತಿರಬೇಕಾದರೆ. ನೋಡ್ರಪ್ಪ ನಿನ್ನೆ ನಿಮ್ಮ ಅರಮನೆಗೆ ಬಂದಿದ್ದೋ ಕಾಣ್ರಪ್ಪ ಕಜ್ಜಾಯ ಇಕ್ಕಿ ಈ ಮುತ್ತಿನ ಜೋಳಿಗೆಗೂ ಹಾಕಿದ್ದಾರೆ ಕಾಣಪ್ಪ. ಆ ವಿಷದ ಕಜ್ಜಾಯವನ್ನು ಮಕ್ಕಳಿಗೆ ಕೊಟ್ಟುಬಿಟ್ಟರಂತೆ. ವಿಷದ ಕಜ್ಜಾಯವನ್ನು ತಿನ್ನುತ್ತಾ ತಿನ್ನುತ್ತಾ ಅರಮನೆಯ ಮುಂಭಾಗಕ್ಕೆ ಬಂದು ಪ್ರಾಣವನ್ನು ಬಿಟ್ಟಿದ್ದಾರೆ. ಮಕ್ಕಳು ಅರ್ಧ ಕಜ್ಜಾಯ ಕೈಯಲ್ಲಿ ಹಿಡಿದಿದ್ದಾರೆ ಅರ್ಧ ಕಜ್ಜಾಯ ತಿಂದಿದ್ದಾರೆ ಓಹೋ ನಾವು ಯಾರಿಗೇನು ಅನ್ಯಾಯ ಮಾಡಿದ್ದೋ ನಮ್ಮ ಮಕ್ಕಳು ಇವತ್ತು ಪ್ರಾಣವನ್ನು ಬಿಟ್ಟು ಮನಗಿದ್ದಾರಲ್ಲ ಅಂತ್ಹೇಳಿ ಮಾರಾಜರು ಚಿಂತೆ ಮಾಡುತ್ತಿರಬೇಕಾದರೆ

ಶಿವನೇ ದೇವಾ ....

ಅನೇಕ ವರ್ಷಗಳಿಂದ ಮಕ್ಕಳು ಇಲ್ಲ ಅಂತ ಚಿಂತೆ ಮಾಡುತ್ತಿದ್ದೋ ಈಗ ಆ ಮಕ್ಕಳು ಸತ್ತೋಗಿದ್ದಾರೆ ಅಂತ ಭಾರಿ ಶೋಕ ಮಾಡುತ್ತಾ ಇದ್ದಾರೆ. ಶರಣರೇ ನಿಮ್ಮ ಮಾತು ಕೇಳಿ ನನ್ನ ಮಕ್ಕಳನ್ನು ಸಾಯಿಸಿಬಿಟ್ಟರಲ್ಲಪ್ಪ ನಮ್ಮ ಮಕ್ಕಳನ್ನು ಬದುಕಿಸಿ ಕೊಡಿ ಎಂದಾಗ ಒಬ್ಬೊಬ್ಬರಾಗಿ ಶರಣರು ಕಳದು ಕಳದು ಹೋದರು. ಆಗ ಅಲ್ಲಿಗೆ ಬಂದ ಧರೆಗೆದೊಡ್ಡವರು ನಿನ್ನ ಮಕ್ಕಳನ್ನು ನಮಗೆ ದಾನ ಕೊಟ್ಟರೆ ನಾವು ಬದುಕಿಸಿಕೋತ್ತೀವಿ ಎಂದರು. ನೀವು ಬದುಕಿಸಿ ಕೊಡದೇ ಹೋದರೆ ನಿಮ್ಮ ಹೂಳುವುದಕ್ಕೆ ಅಂತ ಮೂರು ಗುಂಡಿ ತೋಡಿಸಿದ್ದೆ ಆ ಎಡ ಬಲದಲ್ಲಿ ಮಕ್ಕಳನ್ನು ಹಾಕಿ ಮಧ್ಯದ ಗುಂಡಿಯಲ್ಲಿ ನಮ್ಮನ್ನು ಹೂಳಿ ಎಂದರಂತೆ. ಅದಕ್ಕೆ ಸ್ವಾಮಿಯವರು ಸಾಯುವುದು ಬೇಡ ಈ ಮಕ್ಕಳನ್ನು ನನಗೆ ದಾನವಾಗಿ ಕೊಟ್ಟರೆ ಬದುಕಿಸಿ ಕೊಡುತ್ತೀನಿ. ನಾಳೆ ಸಖ್ರಾಯಪಟ್ಟಣ ಒಂದು ರಾಜ್ಯವನ್ನು ಎರಡು ಭಾಗ ಮಾಡಿಕೊಡಬೇಕಾಗುತ್ತದೆ. ನನಗೆ ದಾನಕೊಟ್ಟರೆ ಈ ಮಕ್ಕಳ ಕೈಯಲ್ಲಿ ಈ ಪ್ರಪಂಚವನ್ನು ಆಳುಸುತ್ತೀನಿ ಎಂದರಂತೆ.

ಆ ಅವಳಿ ಜವಳಿ ಮಕ್ಕಳನ್ನ ಆ ಸಖ್ರೆಪಟ್ಟಣದ ಮಾರಾಜರು ಧರೆಗೆದೊಡ್ಡವರಿಗೆ ಕೊಡುತ್ತೀವಿ ಎಂದು ಒಪ್ಕೊಂಡರಂತೆ. ಸತ್ತೋದ ಮಕ್ಕಳನ್ನು ಮಣ್ಣು ಮಾಡುವುದಕ್ಕಿಂತ ಇವರು ತಕ್ಕೊಂಡು ಹೋಗಿ ಪಟ್ಟಕಟ್ಟುತ್ತಾರಲ್ಲ ಎಲ್ಲಾದರೂ ನಮ್ಮ ಮಕ್ಕಳು ಬದುಕುತ್ತಿದ್ದಾರೆ ಎಂದರೆ ಸಾಕು ನಾವು ಸಂತೋಷಪಡಬಹುದು ಆನಂದಪಡಬಹುದು ಅಂತ್ಹೇಳಿ ಕೊಟ್ಟಿದ್ದಾರೆ.

ಕಪ್ಪು ಧೂಳ್ತವಾ ತೆಗೆದಾರಂತೆ
ಮಕ್ಕಳ ಮೇಲೆ ಪಿಡಿದಾರಂತೆ
ಸಿದ್ದಯ್ಯ ಸ್ವಾಮಿ ಬನ್ನಿ
ಕಂಡಾಯದ ಒಡೆಯ ...ಆ..
ಲಿಂಗಯ್ಯ ದಯಮಾಡೋ
ಕಪ್ಪು ಧೂಳ್ತವಾ ತೆಗೆದೂ ..
ಮಕ್ಕಳ ಮೇಲೆ ಪಿಡಿದಾಗ
ಸತ್ತೋದಂತ ಮಕ್ಕಳು
ಎದ್ದಾರಲ್ಲೋ ಮಾಯ್ಕಾರ
ಸಿದ್ದಯ್ಯ ಸ್ವಾಮಿ ಬನ್ನಿ
ಕಂಡಾಯದ ಒಡೆಯ ಆ ..
ಗುರುಲಿಂಗಯ್ಯ ದಯಮಾಡೋ
ಗುರುವೇ ದುರುಳರಿಗೆ ವೈರಿಯಾದೆ
ಗುರುವೇ ಭಕ್ತರಿಗೆ ಪ್ರೇಮಿಯಾದೆ
ಸಿದ್ದಯ್ಯ ಸ್ವಾಮಿ ಬನ್ನಿ ....

ಸ್ವಾಮಿ ಪರಂಜ್ಯೋತಿ ನಮ್ಮಪ್ಪಾಜಿ ಧರೆತಂದ ಮಾಗುರು ಧರೆಗೆದೊಡ್ಡವರು ಸತ್ತಂತ ಮಕ್ಕಳನ್ನು ಪಡೆದರು. ಕೊನೆಯಲ್ಲಿ ಮಾರಾಜರಿಗೆ ಒಂದು ಶಾಪವನ್ನು ಕೊಟ್ಟರಂತೆ. ನಾವು ಅನ್ನ ಉಣ್ಣ ಬೇಕು ಅಂತ ನಿಮ್ಮ ಮನೆಗೆ ಬಂದದಕ್ಕೆ ನೀವು ವಿಷದ ಕಜ್ಜಾಯವನ್ನು ತಂದು ಪಿಡಿಸಿದ್ದೀರಲ್ಲ.

ಅರಸುಗಳಿಗೆ ನಾಳೆ ....
ಅರಾಯಸ್ಸ ಆಗಲಪ್ಪ ....
ಜ್ಯೋತಿಲಿಂಗಯ್ಯ ಬನ್ನಿ ಆ ..
ಅನ್ನ ಉಣ್ಣಬೇಕು ಅಂತ
ನಿಮ್ಮ ಮನೆಗೆ ಬಂದುದಕ್ಕೆ
ವಿಷದ ಕಜ್ಜಾಯ ತಂದು
ಇಕ್ಕಿದೀರಲ್ಲಪ್ಪ ಆದ್ದರಿಂದ
ಅರಸುಗಳಿಗೆ ನಾಳೆ ಅರಾಯಸ್ಸು

ಆಗಲಪ್ಪ ....
ಜ್ಯೋತಿಲಿಂಗಯ್ಯ ಬನ್ನಿ

ಅರಸುಗಳಿಗೆ ನಾಳೆ ಅರಾಯಸ್ಸು ಆಗಲಿಯಪ್ಪ ಎಂದು ಸ್ವಾಮಿ ಧರೆಗೆದೊಡ್ಡವರು ಶಾಪವನ್ನು ಕೊಟ್ಟು ಮಕ್ಕಳನ್ನು ಪಡ್ಕೊಂಡು ಚಿಂತೆ ಮಾಡಬೇಡಿ ಅಂತ್ಹೇಳಿ ನಾಳೆ ಮಕ್ಕಳನ್ನ ದೇವರು ಮಾಡುತ್ತೀನಿ ಎಂದು ಹೇಳಿ ಹೊರಟರು.

ಸ್ವಾಮಿ ಭೂಮಿ ತಂದವರು ಭೂಲೋಕವನ್ನು ಪಡೆದವರು ಮಾಗುರು ಕಂಡಾಯದ ಒಡೆಯ ಹೆಣ್ಣನ್ನ ಪಡೆದು ಗಂಡನ್ನ ಪಡೆದಂತಹ ಮಹಾಸ್ವಾಮಿ ಮೈಸೂರು ಕಾರಂಜಿಕರೆ ಒಳಗೆ ಸ್ವಾಮಿ ಕೆಂಪೀನ ಡೇರೆ ಹೊಡ್ಕೊಂಡು ಕೂತ್ಕೊಂಡ್ರು. ಆ ಕಾರಂಜಿಕರೆ ಒಳಗೆ ಕೂತಿರುವ ರಾಜರ ಮಕ್ಕಳಿಗೆ ಹಸಿವು ಆಗಿದೆ. ಆದ್ದರಿಂದ ಮೈಸೂರು ಅರಮನೆಗೆ ಭಿಕ್ಷೆಗೆ ಹೋಗುತ್ತಾರೆ. ಮಾರಾಣಿ ಕಮಲಾಕ್ಷಿ ಬಾಯಿ ನಾಲ್ವಡಿ ಕೃಷ್ಣರಾಜೇಂದ್ರ ಒಡೆಯರ ಅರಮನೆಗೆ ಹೋಗುತ್ತಾರೆ ಭಿಕ್ಷೆಗೆ. ಯಾವ ರೀತಿ ಬರುತ್ತಿದ್ದಾರೆ ಕಂಡಾಯ ತಂಬೂರಿ ಹೊತ್ಕೊಂಡು ಬಿರುದು ಲಾಂಛಾನವನ್ನು ಧರಸ್ಕೊಂಡು ಮೈಸೂರು ಅರಮನೆಗೆ ದಯಮಾಡುತ್ತಿದ್ದಾರೆ.

ಮೈಸೂರಿಗೆ – ೯

ಮೈಸೂರರಮನೆಗೆ ನಮ್ಮ
ದೇವರೆ ದಯಮಾಡುತ್ತಾರೆ
ಸಿದ್ದಯ್ಯ ಸ್ವಾಮಿ ಬನ್ನಿ
ಪರಂಜ್ಯೋತಿ ಲಿಂಗಯ್ಯೋ
ನೀವೇ ಬನ್ನಿ ....
ಮೈಸೂರರಮನೆಗೆ ....
ಬಂದರು ನನ್ನಪ್ಪ ....
ಕಂಡಾಯದ ಒಡೆಯ ....
ಮಂಟೇದ ಲಿಂಗಯ್ಯ ....
ಅರಮನೆ ಮುಂಭಾಗದಲ್ಲಿ ..
ನಿಂತ್ಕೊಂಡು ಧರೆಗೆದೊಡ್ಡವರು
ದಾನ ಧರ್ಮವ ಸಾರುತ್ತಾರೆ
ಧರ್ಮಗುರು ಮಂಟೇದಲಿಂಗಯ್ಯ
ಸಿದ್ದಯ್ಯ ಸ್ವಾಮಿ ಬನ್ನಿ
ಗುರುವೇ ದಾನಧರ್ಮ ಸಾರುತ್ತಾವ್ರೆ
ದಾನವೋ ದಾನ. ....

ಧರ್ಮವೋ ಧರ್ಮ ....
ಭಿಕ್ಷವೋ ಭಿಕ್ಷಾ
ಮಹದೇವರ ಭಿಕ್ಷಾ ..
ಗುರುದೇವ ಭಿಕ್ಷಾ
ಕಲ್ಯಾಣದ ಭಿಕ್ಷಾ
ಮುಕ್ಕಣ್ಣಯ್ಯನ ಭಿಕ್ಷಾ
ಸಾದುಸಂಗಯ್ಯನ ಭಿಕ್ಷಾ
ಜ್ಯೋತಿಲಿಂಗಯ್ಯನ ಭಿಕ್ಷಾ ....
ಮಾರಾಜರ ಅರಮನೆಯ ಒಳಗೆ ..
ಮೊದಲ ಭಿಕ್ಷಾ ಎಂದಾರಂತೆ
ಸಿದ್ದಯ್ಯ ಸ್ವಾಮಿ ಬನ್ನಿ

ಮಾರಾಜರ ಮನೆಯ ಒಳಗೆ ಮೊದಲು ದಾನಸಾರುದರು ಪರಂಜ್ಯೋತಿ ನನ್ನಪ್ಪಾಜಿ. ದಾನ ಸಾರಿದಾಗ ಕಮಲಾಕ್ಷಿ ಬಾಯಿಯವರು ಯಾರೋ ಯತಿಗಳೋ ಸಾದು ಸತ್ಪುರುಷರೋ ಬಂದಿದ್ದಾರೆ ನಮ್ಮ ಅರಮನೆ ಒಳಗಡೆ ದಾನ ಸಾರ್ಕೊಂಡು ಅಂತ್ಹೇಳಿ ಮುತ್ತು ರತ್ನ ಬೆರಳಿ ಬಂಗಾರ ವಜ್ರ ವೈಡೂರ್ಯಗಳನ್ನು ತುಂಬಿ, ಗೆಜ್ಜಲ ಕೆಂಡವನ್ನು ತುಂಬಿ ಮಡ್ಡಿಸಾಂಬ್ರಾಣಿ ಹಾಕ್ಕೊಂಡು ತಾಯಿ ತಲೆ ತುಂಬ ಶಿವ ಸೆರಗನ್ನು ಹಾಕ್ಕೊಂಡು ಆ ಬಂದಿರುವಂತ ಮಾಮುನಿಗಳಿಗೆ ದಾನ ತರುತ್ತಿದ್ದಾರೆ. ಭಾಳ ಮೌನದಿಂದ ದಾನ ತಕ್ಕೊಳ್ಳಿ ಸ್ವಾಮಿ ಅಂತ್ಹೇಳಿ ಕೊಟ್ಟಾಗ ಏಕಮ್ಮ ಮೌನ ? ಮಾರಾಣಿಯಾಗಿರುವಂತವರು ನೀವು ? ನಿಮ್ಮ ಮುಖದಲ್ಲಿ ಮೌನ ಏಕೆ ತಾಯಿ ಎಂದು ಧರೆಗೆದೊಡ್ಡವರು ಕೇಳಿದಾಗ ಅದಕ್ಕೊಂದು ಕಾರಣ ಇದೆ. ಸ್ವಾಮಿ ನೀವು ಯತಿಗಳೋ ಮುನಿಗಳೋ ನಾವು ಏನೂ ಕಾಣೆ. ಆದರೆ ನಮ್ಮ ಅಂತರಾಳವನ್ನು ನೋಡಿರುವ ನೀವು ಮಾಗುರುವೇ ಇರಬೇಕು ಎಂದರು.

ಕಾರಗಳ್ಳಿ ಆಳುತ್ತಿದ್ದಾರೆ ಸ್ವಾಮಿ
ಆರುಸಾವಿರ ಕುಲ ಮಾರನಾಯಕರು
ಮೈಸೂರು ರಾಜ್ಯದಲ್ಲಿ ಮಾರಾಜರದು
ಒಂದು ಕುಲ ಆ ಕಾರಗಳ್ಳಿ ಮಾರನಾಯಕರು
ನಮ್ಮ ರಾಜ್ಯಕ್ಕೆ ದುರ್ರಾಜ್ಯ ಹಾಕಿದ್ದಾರೆ ಸ್ವಾಮಿ

ನಮ್ಮ ಮನೆ ಒಳಗೆ ಹೆಣ್ಣಿಲ್ಲ ಸ್ವಾಮಿ ಆದರೂ ದುರ್ರಾಜ್ಯ ಹಾಕಿದ್ದಾರೆ. ಏನಂದರೆ ನಮಗೆ ಹೆಣ್ಣು ಹುಟ್ಟಿದರೆ ಆ ಹೆಣ್ಣನ್ನು ಮಾರನಾಯಕನ ಮಗನಿಗೆ ಕೊಡಬೇಕು ಎಂದು ದುರ್ರಾಜ್ಯ ಹಾಕಿದ್ದಾರೆ ಸ್ವಾಮಿ. ಅದಕ್ಕೆ ಸ್ವಾಮಿಯವರು ನೀವು ಚಿಂತೆ ಮಾಡಬೇಡಿ ಎಂದು ಸಮಾಧಾನಪಡಿಸಿ ಮಾರಾಣಿಯನ್ನು ಕುರಿತು ಮಕ್ಕಳು ಇಲ್ಲವ್ವ ತಾಯಿ ಎಂದು ಕೇಳಿದಾಗ ಮಾರಾಣಿಯವರು ಇಲ್ಲ ಸ್ವಾಮಿ ಎಂದಾಗ ಪುತ್ರಿ ಸಂತಾನವನ್ನು

ದಯಪಾಲಿಸಿದ್ದಾರೆ. ಆಗ ಮಾರಾಣಿಯವರು ಸಂತಾನ ಕೊಡಬೇಕಾದರೆ ಗಂಡು ಸಂತಾನವೇ ಕೊಡಿ ಎಂದರು. ಹೆಣ್ಣು ಸಂತಾನ ಕೊಟ್ಬಿಟ್ರೆ ಮಾರನಾಯಕರ ಸಂಬಂಧ ಬೆಳೆಸಬೇಕಾಗುತ್ತದೆ. ತಾಯಿ ನಮ್ಮ ಹತ್ತಿರ ಹೆಣ್ಣು ಸಂತಾನ ಫಲ ಇದೆ. ಹುಟ್ಟುವಂತ ಮಗುವನ್ನು ನಮ್ಮ ಮುತ್ತಿನ ಜೋಳಿಗೆಗೆ ದಾನ ಕೊಟ್ಬಿಟ್ರೆ ಹೆಣ್ಣು ಮಗಳ ಸಂತಾನ ಫಲವನ್ನು ಕೊಡುತ್ತೀನಿ ಎಂದ್ರು. ಸ್ವಾಮಿ ನೀವು ತಕ್ಕೋತ್ತೀವಿ ಅಂದ್ರೆ ನಾನು ಕೊಟ್ಬಿಡ್ತೀನಿ ಎಂದರು. ಆವಾಗ ಭೂಮಿಯ ತಂದವರು ಭೂಲೋಕವ ತಂದವರು ಧರೆಗೆದೊಡ್ಡವರು ಹೆಣ್ಣನ್ನ ಪಡೆದವರು ಗಂಡನ್ನ ಪಡೆದವರು ಪರಂಜ್ಯೋತಿ ನನ್ನಪ್ಪಾಜಿ. ಲೋಕಕ್ಕೆ ದೊಡ್ಡವಳು ಮಾರಾಣಿಯವರ ಗರ್ಭದಲ್ಲಿ ಜನಿಸಿದ್ದಾಳೆ. ತಾಯಿ ಒಂಬತ್ತು ರಾತ್ರಿ ಒಂಬತ್ತು ಹಗಲು ಭೂಮಿಗೆ ಜನನವಾಗಿದ್ದಾಳೆ.

ಕೇಳವ್ವ ಮಾರಾಜರೇ ಮಾರಾಣಿಯರೇ
ಇಬ್ರೂ ಕೂಡ ಕಾರುಗಳ್ಳಿ ಮಾರನಾಯಕನಿಗೆ
ಓಲೆ ಕೊಟ್ಟು ಕಳುಗಿಸಬಿಡ್ರಪ್ಪ ....

ಆ ಓಲೆ ಒಳಗೆ ಏನಂತ ಬರೆಯಿರಿ ಗೊತ್ತಾ ? ಹಣ್ಣು ಹಣ್ಣು ಮುದುಕೀರೆಲ್ಲ ಹೆಣ್ಣಿನ ಒಪ್ಪಂದಕ್ಕೆ ಬನ್ನಿ ಅಂತ್ಹೇಳಿ ಓಲೆ ಬರೆದು ಕಳುಹಿಸಿ ಎಂದರು. ಆ ಪತ್ರಕ್ಕೆ ಪ್ರತ್ಯುತ್ತರವಾಗಿ ಮಾರನಾಯಕ ಬರುತ್ತೀವಿ ಎಂದು ಮರು ಓಲೆ ಬರೆದು ಕಳುಹಿಸಿದ. ಆ ಕರಿಕಲ್ಲು ತೊಟ್ಟಿ ಹಿಂಭಾಗದಲ್ಲಿ ತೆಂಕಾ ಬಡಗಲಾಗಿ ಕಂದಕವನ್ನು ತೋಡಿಸಿ ಎಂದಾಗ ದೊಡ್ಡಮ್ಮತಾಯಿಯನ್ನು ಬಾಳೆ ಎಲೆಯ ಮೇಲೆ ಮಲಗುಸ್ಬುಟ್ಟು ಸ್ವಾಮಿಯವರು ಪುರೋಹಿತರ ವೇಷವನ್ನು ತಾಳ್ಕೊಂಡು ಮುಂದಗಡೆ ಬಾಗಿಲಲ್ಲಿ ನಿಂತ್ಕೊಂಡು ಕಾರಗಳ್ಳಿ ಮಾರನಾಯಕನು ನಾವು ಆರುಸಾವಿರ ಕುಲ ರಾಜರದು ಒಂದು ಕುಲ. ನಾವು ಅವರ ಮನೆಗೆ ಹೆಣ್ಣು ಕೇಳಕ್ಕೆ ಬರಬೇಕಾದರೆ ಸುಮ್ ಸುಮ್ಮನೇ ಬರೋಕ್ಕೆ ಆಗುತ್ತದಾ ? ಅರಮನೆಯಲ್ಲಿರುವ ದಂಡು ದಾಳಿಗಳನ್ನು ಕೊಟ್ಟು ಕಳುಹಿಸಿದರೆ ಹಿಂದ್ಗುಂಟ ಬರುತ್ತೀವಿ ಅಂತ ಪತ್ರ ಕಳುಹಿಸಿದರಂತೆ. ರಾಜ ಆನೆ ಸಾಲು ಕುದುರೆ ಸಾಲಲ್ಲಿ ಅರಮನೆಗೆ ಬಂದರಂತೆ. ಹಸುಮಗಳನ್ನು ನೋಡುವುದಕ್ಕೆ ಒಬ್ಬೊಬ್ಬರಾಗಿ ಕಳುಹಿಸಿ ನೋಡಿಸಿದರಂತೆ. ಈಕಡೆಯಿಂದ ಹೋದವರು ಎಲ್ಲ ಕರಿಕಲ್ಲಿನ ತೊಟ್ಟಿಯ ಕಂದಕದೊಳಗೆ ಬಿದ್ದು ಸತ್ತು ಹೋದರು. ಅದಕ್ಕೆ ಹೇಳುವುದು ಹೆಣ್ಣಿಂತ ಆಸೆ ಪಟ್ಟವರೆಲ್ಲ ಮಣ್ಣು ಪಾಲಾದರು.

ಅರಮನೆಯಲ್ಲಿ ಹೆಣ್ಣು ಕೇಳಕ್ಕೆ ಬಂದುದಕ್ಕೆ
ಮಾರನಾಯಕ ಪುಟ್ನಾಯಕ ಅಂತ
ನಾಮಕರಣ ಆಗಲಪ್ಪ
ಸಿದ್ದಯ್ಯ ಸ್ವಾಮಿ ಬನ್ನಿ
ಕಂಡಾಯದಾ ಒಡೆಯ ....
ಲಿಂಗಯ್ಯ ದಯಮಾಡೋ ..
ಉಡುಪಂಚೆ ಉಟ್ಕೊಂಡು

ಪೊಣಕ ಪೊಣಕನೇ ತಿರುಗಾಡಿರಪ್ಪ
ಸಿದ್ದಯ್ಯ ಸ್ವಾಮಿ ಬನ್ನಿ
ರಾಜಪರವಾರದವರು ಅಂತ ನಿಮಗೆ
ನಾಮಕರಣವಾಗಲಪ್ಪ
ಸಿದ್ದಯ್ಯ ಸ್ವಾಮಿ ಬನ್ನಿ

ರಾಜಪರವಾರದವರು ಅಂತ್ಹೇಳಿ ನಿಮಗೆ ನಾಮಕರಣ ಆಗಲಿಯಪ್ಪ. ಅದಕ್ಕೆ ಅವರನ್ನು ನಾಯಕರು ಪರವಾರದವರು ಬೆಸ್ತರು ರಾಜಪರವಾರದವರು ಅಂತ್ಹೇಳಿ ನಾಮಕರಣ ಆಗುತ್ತದೆ. ಕಾರಗಳ್ಳಿಯ ಹಾಳು ಮಾಡಿ ಮೈಸೂರನ್ನು ಊರುಮಾಡಿ ಅರಸು ಮನೆಗೆ ಹರಸಿ ಕಂಡಾಯವನ್ನು ಕೊಟ್ಟರಂತೆ ಪರಂಜ್ಯೋತಿಯವರು. ಕಂಡಾಯದ ಒಡೆಯ ಅಂತ ನಾಮಕರಣ ಆಯ್ತು. ದೊಡ್ಡಮ್ಮತಾಯಿಯನ್ನು ದಾನಪಡೆದು ರಾಜರ ಮನೆಯಲ್ಲಿಯೇ ಊಟ ಮಾಡಿಕೊಂಡು ನಾಳೆ ರಾಚಪ್ಪಾಜಿಯವರು ಕಪ್ಪಡಿ ತಿಪ್ಪೂರಿಗೆ ಹೋಗಿದ್ದು ಬಂದು ಇಲ್ಲಿನ ಕಾರಂಜಿ ಕೆರೆಯಲ್ಲಿ ಡೇರೆ ಹೊಡೆದು ಕುತ್ಕೊಂಡ್ರೆ ಅರಮನೆಯಿಂದ ಊಟ ಸೌಲಭ್ಯ ಮಾಡಿಕೊಡಿ ಎಂದರಂತೆ. ರಾಜರು ಆಗಲಿ ಸ್ವಾಮಿ ಎಂದರಂತೆ. ಇಲ್ಲಿಗೆ ಒಟ್ಟು ಆರು ಜನ ಶಿಸುಮಕ್ಕಳನ್ನು ಪಡ್ಕೊಂಡು ಪರಂಜ್ಯೋತಿಯವರು ಮುಂದಕ್ಕೆ ಪ್ರಯಾಣ ಬೆಳಸಿದರು. ಹೋಗುತ್ತಾ ಶಿಸುಮಕ್ಕಳನ್ನು ಪಡೆದುದಾಯ್ತು. ಈ ಮಕ್ಕಳಿಗೆ ಮಠಮನೆ ಬೇಕಲ್ಲ ಎಂದು –

ಎಳೆಯಕುಂದೂರುಬೆಟ್ಟಕ್ಕೆ – ೧೦

ಮೈಸೂರ ಬಿಟ್ಟಾರಂತೆ
ಪರಂಜ್ಯೋತಿ ನನ್ನಪ್ಪ
ಮಂಟೇದಾಲಿಂಗಯ್ಯ
ಪಟ್ನಪಾಲಳ್ಳಿ ....
ತೆಂಕಲ ಮಾರ್ಗವಾಗಿ
ಅರಕೆರೆ ಬನ್ನೂರು
ಮಾರ್ಗವಾಗಿ ಗುರುವೇ
ಹಾದಿ ಹಲವಾರಕ್ಕೆ
ದೇವರೇ ದಯಮಾಡುತ್ತಾರೆ
ಸಿದ್ದಯ್ಯ ಸ್ವಾಮಿ ಬನ್ನಿ

ಸ್ವಾಮಿ ಭೂಮಿ ತಂದವರು ಭೂಲೋಕವನ್ನು ಪಡೆದಂತಹ ಪರಂಜ್ಯೋತಿಯವರು ಆರು ಜನ ಶಿಸುಮಕ್ಕಳನ್ನು ಕರ್ಕೊಂಡು ಮೈಸೂರನ್ನು ಬಿಟ್ಟು ಪಟ್ನ ಪಾಲಳ್ಳಿಯನ್ನು ಬಿಟ್ಟು ಅರಕೆರೆ ಬನ್ನೂರು ಮಾರ್ಗವಾಗಿ ಸ್ವಾಮಿ ಧರೆಗೆದೊಡ್ಡವರು ಹಾದಿಹಲವಾರಕ್ಕೆ

ಬಂದಿದ್ದಾರೆ. ಹಾದಿ ಹಲವಾರದಲ್ಲಿ ಉಪ್ಪಲಿಗಶೆಟ್ಟರ ಮನೆ ಅಲ್ಲಿ ಜಾಗ ಒಳ್ಳೆದು ನೆಲಮೂರ್ತಮಾಡಬೇಕು ಅಂತ್ಹೇಳಿ ಪಾದ ಊರಿದರಂತೆ. ಒಂದು ಕಡೆ ವಿಭೂತಿಗಟ್ಟಿ ಇನ್ನೊಂದುಕಡೆ ಬೆಲ್ಪತ್ರ ಮುತ್ತಿನಜೋಳಿಗೆಯನ್ನು ಮಡಗಿದರಂತೆ. ಸಮತೂಕ ಇದೆಯಾ ಎಂದು ನೋಡಿದರಂತೆ ಒಂದು ಗುಲುಗಂಜಿ ಗಾತ್ರದಷ್ಟು ಕಡಿಮೆ ಆಗಿತ್ತಂತೆ. ಸಮತೂಕಕ್ಕೆ ಬರನಿಲ್ಲ ಹಾದಿಹಲವಾರವನ್ನು ಬಿಟ್ಟು ಮುಂದಕ್ಕೆ ಹೆಜ್ಜೆ ಕಿತ್ತರಂತೆ ಉಪ್ಪಲಿಗೆಶೆಟ್ಟರುಗಳು ಸ್ವಾಮಿಯವರ ಪಾದವನ್ನು ಹಿಡ್ಕೊಂಡಾದ ಸ್ವಾಮಿಯವರು ಆಶೀರ್ವಾದ ಮಾಡಿದರಂತೆ. ನಾನು ಪಾದ ಊರಿದ ಸ್ಥಳದಲ್ಲಿ ಗದ್ದಿಗೆಯನ್ನು ಕಟ್ಕೊಂಡು ಮಠಮನೆಯನ್ನು ಮಾಡ್ಕೊಳ್ರಪ್ಪ ಎಂದರು.

ಹಲವಾರವ ಬಿಟ್ಟು ಕುರುಬೂರ
ಮಾರ್ಗವಾಗಿ ಪರಂಜ್ಯೋತಿ ನನ್ನಪ್ಪ
ಆರು ಜನ ಶಿಸುಮಕ್ಕಳ ಕರ್ಕೊಂಡು ಗುರುವೇ
ಮಂಟೇದಲಿಂಗಯ್ಯ
ಹೆಣ್ಣ ನ್ನ ಪಡೆದವರು ಗಂಡನ್ನ ಪಡೆದವರು
ಭೂಮಿಪಡೆದವರು ಭೂಲೋಕಪಡೆದವರು
ಗುರವೇ ಮಾಯ್ಕಾರರ ಮಹಿಮೆಯ
ಏನು ತಾನೇ ಹೇಳಲಪ್ಪ ....
ಸಿದ್ದಯ್ಯ ಸ್ವಾಮಿ ಬನ್ನಿ

ಸ್ವಾಮಿ ಹಲವಾರವನ್ನು ಬಿಟ್ಟು ಯಾವ ಮಾರ್ಗವಾಗಿ ಬರುತ್ತಿದ್ದಾರೆ ಧರೆಗೆದೊಡ್ಡವರು ಬೊಮ್ಮನಳ್ಳಿ ಮಾರ್ಗವಾಗಿ ಬರುತ್ತಿದ್ದಾರೆ.

ಎಳೆಯ ಕುಂದೂರು ಬೆಟ್ಟಕ್ಕೆ
ನಮ್ಮ ಸ್ವಾಮಿಯವರು ದಯ
ಮಾಡುತ್ತಾರೆ
ಸಿದ್ದಯ್ಯ ಸ್ವಾಮಿ ಬನ್ನಿ

ಎಳೆಯ ಕುಂದೂರು ಬೆಟ್ಟದ ಕೊಂಬೆ ಮೇಲೆ ಕುಳಿತು ನಮ್ಮಪ್ಪಾಜಿ .. ಆರುಜನ ಶಿಸುಮಕ್ಕಳನ್ನು ಕುಂದೂರು ಬೆಟ್ಟದ ಗವಿ ಒಳಗೆ ಕುಂಡ್ಸಿ. ಅಲ್ಲಿ ಕುಂದೂರುಬುಡದಯ್ಯ ಅಂತ ನಾಮಕರಣವಾಯ್ತು ಸ್ವಾಮಿಯವರಿಗೆ ಎಳೆಕುಂದೂರು ಬೆಟ್ಟವನ್ನು ಸಮತೂಕ ಮಾಡಿದಾಗ ಒಂದು ಕಿಂಚತ್ತು ಮಾತ್ರ ಹೆಚ್ಚು ಕಡಿಮೆ ಬಂತು. ಇದು ಕೂಡ ಸಮತೂಕ ಬರನಿಲ್ಲ ಅಂತ್ಹೇಳಿ ಸ್ವಾಮಿಯವರು ರಾಚಪ್ಪಾಜಿಯನ್ನು ಕರೆದು ಸಖ್ರೆಪಟ್ಟಣದ ರಾಜ ಏನಂತ ಹೇಳಿದರು ಮನೆ ಮನೆ ಭಿಕ್ಷೆ ಮಾಡತಕ್ಕಂತ ಭಿಕ್ಷುಕರು ನೀವು ರಾಜ್ಯ ಆಳುವಂತ ಮಕ್ಕಳನ್ನು ತಕ್ಕೊಂಡು ಹೋಗಿ ಯಾವ ಪಟ್ಟಕಟ್ಟುತ್ತೀರಿ ಅಂತ ಅಂದರು. ಸಖ್ರೆಪಟ್ಟಣದ ರಾಜನಿಗೆ ಒಂದು ರಾಜ್ಯದಲ್ಲಿ ಎರಡು ಭಾಗ ಮಾಡಬೇಕಾಗುತ್ತಿತ್ತು ಆದರೆ ರಾಚಪ್ಪಾಜಿ ಇವರ ಕೈಯಲ್ಲಿ ಇಡೀ ಪ್ರಪಂಚ ಆಳಿಸುತ್ತೀನಿ ಎಂದರು. ಈ ಮಕ್ಕಳಿಗೆ ನಾಳೆ ಪಟ್ಟವನ್ನು

ಕಟ್ಟಬೇಕಾಗಿದೆ ಕಾಣಪ್ಪ ಅದಕ್ಕೆ ನಾನು ಮಠಮನೆ ಪಡೆದು ಬರುವತನಕ ನೀವೆಲ್ಲರೂ ಇಲ್ಲಿಯೇ ಇರಿಯಪ್ಪ ಎಂದು ಆಶೀರ್ವಾದ ಮಾಡಿದರು ಪರಂಜ್ಯೋತಿ.

ಮಾಡಿದವರ ಮನವ ಬಲ್ಲೆ
ನೀಡಿದವರ ನಿಜವ ಬಲ್ಲೆ
ಸಿದ್ದಯ್ಯ ಸ್ವಾಮಿ ಬನ್ನಿ
ಕಂಡಾಯದ ಒಡೆಯಾ ..
ಗುರುಲಿಂಗಯ್ಯ ದಯಮಾಡೋ
ಅರವತ್ತಾರು ಕಾಸು ....
ಮೂವತ್ಮೂರು ಬಿರುದು ..
ಭಾರೀಯ ಕಂಡಾಯ ಹೆಗಲ
ಮೇಲೆ ಹೊತ್ಕೊಂಡು ಮಂಟೇದಲಿಂಗಯ್ಯ
ಬಿರುದು ಬಿಂಕು ಲಾಂಛಾನ
ಶಿರದ ಮೇಲೆ ಹೊತ್ಕೊಂಡು
ರಾಜ ಒಡೆಯ ಮಕ್ಕಳಿಗೆ
ಮಠಮನೆ ಮಾಡಬೇಕು
ಅನ್ನುತ ಹೇಳಿ ನನ್ನಪ್ಪ
ಮಂಟೇದಲಿಂಗಪ್ಪ
ಎಳೆಯ ಕುಂದೂರು ಬೆಟ್ಟದ
ಕೊಂಬೆ ಮೇಲೆ ನಿಂತ್ಕೊಂಡು
ಉತ್ತರ ದಕ್ಷಿಣ ಪೂರ್ವ ಪಶ್ಚಿಮ
ಆಗ್ನೇಯ ನೈರಯತ್ಯ ಈಶಾನ್ಯ
ವಾಯುವ್ಯ ನಾಲ್ಕು ದಿಕ್ಕು
ಎಂಟು ಮೂಲೆಯ ರಾಜ್ಯವನ್ನು
ಲಾಳಾಯಿಸಿ ನೋಡಾವ್ರೆ ...
ಆದಿಹೊನ್ನಾಯಕನ ಹಳ್ಳಿ ..
ಸ್ವಾಮಿ ಕಣ್ಣಿಗೆ ಬಿತ್ತು ಪರಂಜ್ಯೋತಿ

ಬೊಪ್ಪೇಗೌಡನಪುರಕ್ಕೆ – ೧೧

ಗುರುವೇ ....
ಮೊದಲನೆಯದಾಗಿ ಆದಿಹೊನ್ನಾಯಕನ
ಹಳ್ಳಿ ಕಾಣಿಸಿತ್ತು ಎರಡನೆಯದು ಗುರುವೇ

ಮಳವಳ್ಳಿ ಕಂಡಿತ್ತು ಧರೆಗೆದೊಡ್ಡವರಿಗೆ
ಮೂರನೆಯದಾಗಿ ಕಂಡಿತ್ತು ....
ಹಾಲುಮತದ ಕುರುಬೇಗೌಡರ ಹಟ್ಟಿ
ನಾಲ್ಕನೆಯದಾಗಿ ಮಡುವಾಳನ ಮನೆ
ಸ್ವಾಮಿ ಕಣ್ಣಿಗೆ ಕಂಡಿತ್ತು ......
ಹೆತ್ತದವರು ಮಕ್ಕಳು ಕೊಡಲ್ಲ
ಕಟ್ಟಿದವರು ಹಟ್ಟಿ ಕೊಡಲ್ಲ ....
ರಾಜ ಒಡೆಯ ಮಕ್ಕಳಿಗೆ ಮಠಮನೆ
ಮಾಡಬೇಕು ಅಂತ ನನ್ನಪ್ಪ
ನಾಲ್ಕು ಮೂಲೆ ಎಂಟು ದಿಕ್ಕಿನ ರಾಜ್ಯ
ಲಾಳಾಯಿಸಿ ನೋಡುತ್ತಾರೆ ...
ಸಿದ್ದಯ್ಯ ಸ್ವಾಮಿ ಬನ್ನಿ
ಮಾಯ್ಕಾರರ ಮಹಿಮೆಯ
ಏನು ತಾನೇ ಹೇಳಲಪ್ಪ
ಸಿದ್ದಯ್ಯ ಸ್ವಾಮಿ ಬನ್ನಿ ..
ಎಳೆಯ ಕುಂದೂರುಬೆಟ್ಟ ಬಿಟ್ಟಾವರೆ
ನನ್ನಪ್ಪ ಮಂಟೇದಲಿಂಗಯ್ಯ.
ಎಳೆಯ ಕುಂದೂರು ಎಡಗಡೆಗೆ ಬಿಟ್ಕೊಂಡು
ಅಂಚಿಪುರದ ಮಳಕಾಣೇ ಕಂಚಗಳ್ಳಿ ಬೋರಗಾಣೇ
ದೇವಪಟ್ಟಣದ ಮಾರ್ಗವಾಗಿ
ದೊಡ್ಡವರೇ ದಯ ಮಾಡುತ್ತಾರೆ
ಸಿದ್ದಯ್ಯ ಸ್ವಾಮಿ ಬನ್ನಿ

ಹಾಲುಮತದ ಕುರುಬೇಗೌಡ ಒಕ್ರಳ್ಳಿ, ಒಣಗಳ್ಳಿ, ಹಳ್ಳದಾಸಳ್ಳಿ, ಮುಟ್ನಳ್ಳಿ, ದ್ಯಾವಪಟ್ನ ಕಂಚಗಳ್ಳಿ ಏಳೂರಿಗೂ ಅಧಿಪತಿಯಾಗಿ ಬಾಳುತ್ತಿದ್ದಾನೆ ಕುರುಬೇಗೌಡ. ಅಂದ್ರೆ ಏಳುಂಡಿ ಎಮ್ಮೆಗಳು ಏಳುಂಡಿ ದನಗಳು ಏಳುಂಡಿ ಕುರಿಗಳು ಆರು ಮಂದಿ ಗಂಡು ಮಕ್ಕ ಆರು ಮಂದಿ ಸೊಸೆಯರು ಮೂವತ್ತಮೂರು ಮೊಮ್ಮಕ್ಕಳನ್ನು ಕಟ್ಕೊಂಡು ಐಭೋಗವಾಗಿ ಬಾಳುತ್ತಿದ್ದಾನೆ. ಅಧಿಪತಿಯಾಗಿ ಬಾಳುತ್ತಿರಬೇಕಾದರೆ ಹೆತ್ತವರು ಮಕ್ಕಳು ಕೊಡೋಲ್ಲ ಕಟ್ಟಿದವರು ಹಟ್ಟಿ ಬಿಟ್ಟು ಕೊಡೋದಿಲ್ಲ. ಧರೆಗೆದೊಡ್ಡವರು ಪಡೆಯುವದಕ್ಕೂ ಮೊದಲು ಆ ಗ್ರಾಮಕ್ಕೆ ಕಾಡಂಕಳ್ಳಿಗ್ರಾಮವಂತೆ. ಆ ಕಾಡಂಕಳ್ಳಿ ಗ್ರಾಮಕ್ಕೆ ನಮ್ಮ ಸ್ವಾಮಿಯವರು ದಯಮಾಡಿದರು. ಮೊಕ್ಕತ್ತಲೆ ಟೈಮಿನಲ್ಲಿ ಧರೆಗೆದೊಡ್ಡವರು ಆ ಹಾಲುಮತದಕುರುಬೇಗೌಡನ ಮನೆ ಮುಂಭಾಗದಲ್ಲಿ ನಿಂತ್ಕೊಂಡು ದಾನ ಧರ್ಮ ಭಿಕ್ಷೆಯನ್ನು ಸಾರುತ್ತಿದ್ದಾರೆ ಧರೆಗೆದೊಡ್ಡವರು. ಕುರುಬೇಗೌಡ ಕುರಿಗಳನ್ನು ಮೇಯಿಸ್ಕೊಂಡು

ಕುರಿ ಉಂಡಿಗೆ ಕೂಡಿಹಾಕ್ಬುಟ್ಟು ಹಗ್ಗದ ಮಂಚದಮೇಲೆ ಕುರಿಕೋಲು ತಲೆಗೆ ಹಾಕ್ಕೊಂಡು ಕರಿ ಕಂಬ್ಳಿ ಹೊದ್ಕೊಂಡು ಸುಖನಿದ್ರೆ ಮಾಡುತ್ತಿದ್ದಾನೆ.

ದಾನ ಧರ್ಮ ಸಾರುತ್ತಾರೆ
ಧರ್ಮಗುರು ಮಂಟೇದ ಸ್ವಾಮಿ
ಸಿದ್ದಯ್ಯ ಸ್ವಾಮಿ ಬನ್ನಿ
ಆ.... ಆ.... ಆ.....
ಹರದೇವರ ಭಿಕ್ಷಾ
ಗುರುದೇವರ ಭಿಕ್ಷಾ
ಸಾಧು ಸಂಗಯ್ಯನ ಭಿಕ್ಷಾ
ಮೂರ್ಮೂರ್ತಿಗಳ ಭಿಕ್ಷಾ
ಮುಕ್ಕಣ್ಣಯ್ಯನ ಭಿಕ್ಷಾ
ಹಾಲುಮತದವರ ಹಟ್ಟಿ ಒಳಗೆ
ಮೊದಲ ಭಿಕ್ಷಾ ಅಂದಾರಂತೆ
ಸಿದ್ದಯ್ಯ ಸ್ವಾಮಿ ಬನ್ನಿ
ಹಾಲುಮತದ ಕುರುಬೇಗೌಡರ
ಮನೆಯ ಒಳಗೆ ದಾನಸಾರದರೂ
ಧರ್ಮ ಸಾರಿದರೂ
ಭೀಕ್ಷಾ ಸಾರಿದರೂ
ದಾನವೆಂದರೂ ಗ್ಯಾನವಿಲ್ಲ
ಭಿಕ್ಷೆ ಎಂದ್ರು ಲಕ್ಷ್ಯವಿಲ್ಲ
ಸಿದ್ದಯ್ಯ ಸ್ವಾಮಿ ಬನ್ನಿ
ನೀಡಿದ ಕಾಲ ತೆಗೆಯಲಿಲ್ಲ
ನಿಜಭಕ್ತಿ ನೋಡಲಿಲ್ಲ
ಸಿದ್ದಯ್ಯ ಸ್ವಾಮಿ ಬನ್ನಿ

ಸ್ವಾಮಿಯವರು ಬಾಗಿಲ ಮುಂದೆ ಬಂದು ದಾನ ಸಾರಿದರೂ ಧರ್ಮ ಸಾರಿದರೂ ಲಕ್ಷ್ಯವಿಲ್ಲದೆ ಹಗ್ಗದ ಮಂಚದ ಮೇಲೆ ಮಲಗಿದ್ದಾನೆ ಕುರುಬೇಗೌಡ. ಸುಖ ನಿದ್ರೆ ಮಾಡುತ್ತಾ ಇದ್ದಾನಲ್ಲ ಎಂದು ಧರೆಗೆದೊಡ್ಡವರು ನಾ ಬಂದಿರುವುದು ಮೇಲೆ ಕೆಳೆಗೂ ಹಲ್ಲು ಹುಟ್ಟುವ ನರಮಾನವರಿಗೆ ಗೊತ್ತಾದರೂ ಈ ಕುರುಗಳಿಗಾದರೂ ಗೊತ್ತಾಗಬೇಡವೇ ? ತಂಬೂರಿ ನಾದಕ್ಕೂ ಕಂಡಾಯದ ಸದ್ದಿಗೂ ಏಳುಸಾವಿರ ಕುರುಗಳು ಬೆದರಿದ್ದವಂತೆ. ಇದನ್ನು ಕಂಡು ಕುರುಬೇಗೌಡನಿಗೆ ಎಚ್ಚರವಾಯ್ತಂತೆ. ಏಕಂದರೆ ಕುರುಬೇಗೌಡ ಪ್ರಾಣ ಕುರುಗಳ ಮೇಲೆ ಇತ್ತು. ಕುರಿಗಳು ಕೂಡುವ ಟೈಮಿಗೆ ಬಂದಿದ್ದರೆ ಮುದ್ದೆ ಸಾರು ಕೊಟ್ಟು ಹೊಟ್ಟೆತುಂಬ ಊಟ ಇಕ್ಕಿ ಕಳುಹಿಸಬಹುದಾಗಿತ್ತು. ಈ ಮುಸ್ಸಂಜೆ ಟೈಮಿನಲ್ಲಿ

ಬಾಳುವವರ ಮನೆಯ ಮುಂದೆ ಭಿಕ್ಷೆ ಸಾರುತ್ತಾ ಇದ್ದಾನಲ್ಲ ಇವನಿಗೆ ಏನು ದಾನಕೊಡಬೇಕು ಎಂದನು ಕುರುಬೇಗೌಡ ಕುರಿ ಕೋಲನ್ನು ಹಿಡ್ಕೊಂಡು

ಧರಗೆದೊಡ್ಡವರ ಬಳಿಗೆ
ಬತ್ತವನಲ್ಲೋ ಕುರುಬೇಗೌಡ
ಸಿದ್ದಯ್ಯ ಸ್ವಾಮಿ ಬನ್ನಿ
ಮಂಟೇದಾ ....
ಗುರುಲಿಂಗಯ್ಯ ದಯಮಾಡೋ
ನಮ್ಮ ಧರೆಗೆದೊಡ್ಡವರ ಮುಖವ
ದುರುದುರುನೇ ನೋಡುತ್ತಾನೆ
ಸಿದ್ದಯ್ಯ ಸ್ವಾಮಿ ಬನ್ನಿ

ಭಿಕ್ಷೆ ಮಾಡುವ ಜಂಗಮರೇ ನಿಮಗೆ ಹೊತ್ತುಗೊತ್ತು ಏನು ಇಲ್ಲವೇ ? ಕುರಿ ಕೂಡುವ ಟೈಮಿನಲ್ಲಿ ಬಂದಿದ್ದರೆ ಹೊಟ್ಟೆ ತುಂಬ ಊಟ ಹಾಕಿ ಕಳುಗಿಸಬಹುದಾಗಿತ್ತು. ಮುಸ್ಸಂಜೆ ಹೊತ್ತಿನಲ್ಲಿ ಬಾಳೋವರ ಮನೆಯ ಮುಂದೆ ದಾನಸಾರುತ್ತಿದ್ದೀಯಲ್ಲ ಜಂಗುಮ ಮೊಕ್ಕತ್ತಲೆ ಆಗೋಯ್ತು. ಕಣ್ಣೆರಡು ಕಾಣನಲ್ಲ ಕಿವಿ ಎರಡು ಕೇಳಲ್ಲ ನಡಕೊಂಡು ಹೋಯ್ತಿನಿ ಎಂದರೆ ಕಾಲೆರಡು ಬರಲ್ಲ ಕಾಣಪ್ಪ. ನಿನ್ನ ಇಪ್ಪತ್ನಾಲ್ಕು ತೊಟ್ಟಿ ಹಟ್ಟಿ ಒಳಗೆ ಯಾವುದೋ ಒಂದು ಮೂಲೆಯಲ್ಲಿ ಜಾಗಕೊಟ್ಟಿಡಪ್ಪ ಈ ರಾತ್ರಿ ಬಿದ್ಕೊಂಡು ಬೆಳಿಗ್ಗೆ ಎದ್ದು ಹೋಗುತ್ತೀನಿ ಎಂದರು. ಏನೋ ಜಂಗುಮ ನಿನಗೆ ಜಾಗಕೊಡಬೇಕಾ ? ಇಪ್ಪತ್ನಾಲ್ಕು ತೊಟ್ಟಿ ಹಟ್ಟಿ ಒಳಗೆ ಒಂದು ಸ್ವಲ್ಪ ಕೂಡ ಜಾಗವಿಲ್ಲ. ನಿನಗೆ ಎಲ್ಲಿ ಜಾಗಕೊಡಬೇಕು. ಒಂದು ಕಡೆ ದನಕಟ್ತಾಕಿದೆ ಒಂದುಕಡೆ ಎಮ್ಮೆ ಕಟ್ತಾಕುವ ಕೊಟ್ಟಿಗೆ ಇನ್ನೊಂದು ಕಡೆ ಹಿಟ್ಟುಣ್ಣುವ ಮನೆ. ಇನ್ನೊಂದು ಕಡೆ ನಾವು ಮಲಗುವಂತ ಸ್ಥಳ ಎಂದು ಹೇಳಿ ಮುಂದಕ್ಕೆ ಕಳುಹಿಸುತ್ತಾರೆ. ನಿಮ್ಮಂತ ತಿರುಕರು ಜಂಗಮರು ಬಂದರೆ ಉಳಿಯುವುದಕ್ಕೆ ಒಂದು ಪಾಳುಚಾವಡಿ ಕಟ್ಟಿಸಿದ್ದೀವಿ ಎಂದರು.

ಆ ಪಾಳು ಚಾವಡಿ ಒಳಗೆ
ಬಿದ್ದಿದ್ದು ಕೆಡೆದು ಹೋಗಯ್ಯ
ಸಿದ್ದಯ್ಯ ಸ್ವಾಮಿ ಬನ್ನಿ

ನಮ್ಮಂತವರಿಗೆ ಪಾಳು ಚಾವುಡಿ ಸಾಕಪ್ಪ ನಿಮ್ಮಂತವರಿಗೆ ಅರಮನೆಯಪ್ಪ ನಾನು ಅಲ್ಲಿಗಂಟ ನಡಕೊಂಡು ಹೋಗಬೇಕಾದರೆ ಕಣ್ಣು ಕಾಣುವುದಿಲ್ಲ ಕಾಲು ನಡೆಯುವುದಕ್ಕೆ ಆಗುತ್ತಿಲ್ಲ. ನನ್ನ ನೋಡಿ ಆದರೂ ಜಾಗಕೊಡದಿದ್ದರೂ ಪರವಾಗಿಲ್ಲ ನನ್ನ ಈ ಕಂಡಾಯ ತಂಬೂರಿಗಾದರೂ ಸ್ವಲ್ಪ ಜಾಗಕೊಡಪ್ಪ ನಿನಗೆ ಭಾಳ ಪುಣ್ಯ ಬರುತ್ತದೆ ಎಂದ್ರು ಧರೆಗೆದೊಡ್ಡವರು. ನಿನ್ನಂತವನಿಗೆ ಜಾಗ ಕೊಟ್ಟರೆ ನನ್ನ ಸೋಸೆಯರಿಗೆ ಮೂರು ಕೆಲಸ ಆಗುತ್ತದೆ. ನೀನು ಕೂತಂತ ಜಾಗವನ್ನು ಗುಡಿಸಬೇಕು ತಾರಿಸಬೇಕು ರಂಗೋಲಿ

ಬಿಡಬೇಕು. ನಿನ್ನ ಕೆಲಸ ಮಾಡುತ್ತಾರೋ ಅಥವಾ ಏಳು ಹಟ್ಟಿಯನ್ನು ಗುಡಿಸಿ ಹೊರಗೆ ಹಾಕುತ್ತಾರೋ ? ಆದ್ದರಿಂದ ೨ಳ ತೊಟ್ಟಿ ಹಟ್ಟಿ ಒಳಗೆ ಒಂದು ಸ್ವಲ್ಪನೂ ಜಾಗವಿಲ್ಲ ಕಾಣೋ ? ಕುರುಬೇಗೌಡ ನೀನು ಕೊಡುವುದಿಲ್ಲ ಎಂದರೆ ಬಿಡತಕ್ಕಂತ ದೇವರಲ್ಲ. ಸ್ವಾಮಿಯವರು ಅಂತ ಗೊತ್ತಿಲ್ಲ ಕುರುಬೇಗೌಡರಿಗೆ ಏನೋ ಜಂಗುಮ ಎಂದು ಕುರಿ ಕೋಲಿನಿಂದ ನಾಕ್ ಬಿಗಿಯಬೇಕು ಅಂತ ತಮ್ಮ ಕೈಗಳನ್ನು ಮೇಲಕ್ಕೆ ತೆಗೆದಾಗ ಮಟ್ಟಿಕಪ್ಪು ತೆಗೆದು ಗೌಡರ ಮೇಲೆ ಉರುಬಿದರಂತೆ.

ಅಪ್ಪನ ಮನೆಯ ಧೂಳ್ತ ಪಿಡಿದಾಗ
ಎತ್ತಿದ ಕೋಲು ಎತ್ತಿದಾಗೆ
ಮಟಮಟನೆ ನಿಂತಿರುವ
ಕುರುಬೇಗೌಡರ ನೋಡಿ
ಬೊಪ್ಪೇಗೌಡನ ಮಡದಿ
ಕಾಳಮ್ಮ ಓಡಿ ಓಡಿ ಬಂದಾರಂತೆ
ಸಿದ್ದಯ್ಯ ಸ್ವಾಮಿ ಬನ್ನಿ

ಬೊಪ್ಪೇಗೌಡನ ಮಡದಿ ಕಾಳಮ್ಮ ಗಂಡನ ಬಳಿಗೆ ಓಡೋಡಿ ಬಂದಿದ್ದಾಳೆ. ಸ್ವಾಮಿಗಳೇ ನಮ್ಮ ಪತಿದೇವರು ಈ ರೀತಿ ನಿಂತಿರಬೇಕಾದರೆ ಕಾರಣವೇನು ಎಂದು ಕೇಳಿದಳು. ತಾಯಿ ನಿಮ್ಮ ಮನೆಯ ಒಳಗೆ ಸ್ವಲ್ಪ ಜಾಗಕೊಡು ಎಂದು ಕೇಳಿದುದಕ್ಕೆ ನಿಮ್ಮ ಪತಿದೇವರು ನಮಗೆ ಗಿಟ್ಟಲ್ಲ ನಿನಗೆ ಎಲ್ಲಿಂದ ಕೊಡಲಿ ಎಂದು ಹೊಡೆಯುವುದಕ್ಕೆ ಬಂದರು ಅದಕ್ಕೆ ಹಾಗೆ ನಿಂತ್ಕೊಂಡಿದ್ದಾರೆ ಎಂದರು. ಸ್ವಾಮಿ ನಾನು ಹೇಳಿ ಕೊಡುಸ್ತೀನಿ ಎಂದಾಗ ಸ್ವಾಮಿಯವರು ಕಪ್ಪುಧೂಳ್ತವನ್ನು ಪಿಡಿದಾಗ ಉಸ್ಸೋ ಅಂತ ಗ್ಯಾನ ಬಂದ್ಬುಡ್ತು. ಬೊಪ್ಪೇಗೌಡ ಮಡದಿ ಹೇಳುತ್ತಾಳೆ.

ಸಾವಿರಾರು ರೂಪಾಯಿ ಖರ್ಚುಮಾಡಿ
ದೇವರು ನೋಡಬೇಕೆಂದರೆ ನಮ್ಮ
ಕಣ್ಣಿಗೆ ಕಾಣಲಪ್ಪ ....

ಅಯ್ಯೋ ಸ್ವಾಮಿ ಜಾಗ ಕೊಟ್ಟರೆ ಜಾಗ ಹೊತ್ಕೊಂಡು ಹೋಗುತ್ತಾರಾ ? ಅದಕ್ಕೆ ಬಂದಿರುವಂತ ಮಹಾಮುನಿಗೆ ಜಾಗ ಕೊಟ್ಟುಬಿಡಿ ಎಂದಳು ತಮ್ಮ ಪತಿಗೆ ಕಾಳಮ್ಮ. ಎಲ್ಲಿದೆ ಜಾಗ ಅಂದಾಗ ಕುರಿ ಕೊಟ್ಟಿಗೆ ಒಳಗೆ ಮುರುಕಲು ಮಂಚ ಇದೆ. ಅದರಲ್ಲಿ ಮನಿಕೊಂಡು ಹೋಗಲಿ ಎಂದಳು. ಆಗ ಕುರುಬೇಗೌಡ ಓಹೋ ಏಳುಸಾವಿರ ಕುರಿಗಳನ್ನು ಕಾಯ್ಕೊಂಡ ಹಾಗೆಯೂ ಆಗುತ್ತದೆ. ಕುರುಬೇಗೌಡರು ತೋರಿಸಿದ್ದು ಕುರಿಹುಂಡಿ ನಮ್ಮ ಸ್ವಾಮಿಗಳು ಬಯಸಿದ್ದು ಕುರಿಹುಂಡಿ ಅಂದರೆ ರೋಗಿ ಬಯಸಿದ್ದು ಹಾಲು ಅನ್ನ ವೈದ್ಯರು ಹೇಳಿದ್ದು ಹಾಲು ಅನ್ನ. ಹಟ್ಟಿಗೆ ಮುಂಗಡವಾಗಿ ಒಂದು ನಾಣ್ಯವನ್ನು ಕೊಟ್ಟರಂತೆ ಅದಕ್ಕೆ ಕುರುಬೇಗೌಡ ಕೈ ಒಡ್ಡಿದ್ದನಂತೆ. ಯಾವಾಗ ಕೈ ಒಡ್ಡಿದ ಕುರುಬೇಗೌಡ ಕೆಟ್ಟ.

ಕುರುಬೇಗೌಡನ ಮನೆಗೆ
ಒಪ್ಪಣವ ಕೊಟ್ಟಾರಂತೆ
ಸಿದ್ದಯ್ಯ ಸ್ವಾಮಿ ಬನ್ನಿ
ಮಂಟೇದಲಿಂಗಯ್ಯನವರೆ
ಮನೆ ಮನೆಗೂ ದೇವರಾದೆ
ಸಿದ್ದಯ್ಯ ಸ್ವಾಮಿ ಬನ್ನಿ
ಪರಂಜ್ಯೋತಿ ನನ್ನಪ್ಪ
ಮಾಯ್ಕಾರರ ಮಹಿಮೆಯ
ಏನು ತಾನೇ ಹೇಳಲಪ್ಪ
ಸಿದ್ದಯ್ಯ ಸ್ವಾಮಿ ಬನ್ನಿ

ಕುರುಬೇಗೌಡರ ಮನೆಗೆ ಅಡ್ವಾನ್ಸ್ ಕೊಟ್ಟರಂತೆ ಸ್ವಾಮಿಯವರು. ಕುರುಬೇಗೌಡ ಮುಂದು ಮುಂದೆ ಸ್ವಾಮಿಗಳು ಹಿಂದ ಹಿಂದೆ ಹಾಲುಮತದ ಕುರುಬೇಗೌಡರ ಮನೆಗೆ ಸ್ವಾಮಿಯವರು ಕಂಡಾಯ ಹೊತ್ಕೊಂಡು ದಯಮಾಡಿದರು. ಆಗ ಕುರಿ ಹಟ್ಟಿಯ ಮುರುಕಲು ಮಂಚ ಆರು ತಿಂಗಳಿಂದ ದುಂಬು ಧೂಳು ತುಂಬಿರುವುದನ್ನು ನೋಡಿದರು ದೊಡ್ಡವರು. ತನ್ನಲ್ಲಿದ್ದ ನವಿಲುಗರಿ ದೊಂದೆ ಒಳಗೆ ದುಂಬು ಧೂಳು ಹೊಡೆದು ಹಾಸಿದರು ಹುಲಿ ಚರ್ಮ ಹರಡಿದರು ವಿಭೂತಿಗಟ್ಟಿ ಕಂತೆ ಬೊಂತೆ ಮುಂದಗಡೆ ಮಡಿಕೊಂಡು ಕಕ್ಕೆಮರದ ಕಂಡಾಯವನ್ನ ಕುರಿ ಹುಂಡಿ ಒಳಗೆ ಜಡಿದು ನೆಟ್ಟು ನೆಲಮೂರ್ತ ಮಾಡಿ ಕುಳಿತ್ಕೊಂಡರು. ಕುರುಬೇಗೌಡ ಹೇಳುತ್ತಿದ್ದಾನೆ ಈ ಭಿಕ್ಷುಕರನ್ನ ನಂಬುವುದು ಬಲು ಕಷ್ಟ. ಮಲಗಿರುವಾಗ ಒಂದು ನಾಲ್ಕು ಕುರಿ ಹೊಡ್ಕೊಂಡು ಹೋದರೆ ಒಂದು ಒಕ್ಕಲುತನ ಬದುಕಿದಂತೆ ಆಗುತ್ತದೆ. ಭಿಕ್ಷುಕರಿಗೆ ಮನೆ ಮನೆ ಭಿಕ್ಷೆ ಮಾರಿಗುಡಿ ನಿದ್ರೆ, ಆದ್ದರಿಂದ ಬೆಳಕರಿಯುವ ಹೊತ್ತಿಗೆ ಹೋಗ್ಬಿಡಬೇಕು. ಬೆಳ್ ಮೂಡಿ ಬೆಳಕು ಹರಿದು ಬರುವತನಕ ನಿನ್ನ ಹಟ್ಟಿ ಬಿಟ್ಟು ಖಾಲಿ ಮಾಡುತ್ತೀನಿ ಎಂದರು ಸ್ವಾಮಿಯವರು. ಕುರುಬೇಗೌಡ ಕುರಿಹುಂಡಿ ಬಾಕಲಿಗೆ ಬೀಗವನ್ನು ಜಡಿದನಂತೆ.

ಇವತ್ತು ಸೋಮವಾರ
ನಾಳೆ ಮಂಗಳವಾರ
ಮಟಮಟ ಮಧ್ಯಾಹ್ನ
ಕುರುಬೇಗೌಡ ಬಾಳಿದಂತ
ಬಾಳಾಟವ ಅರಗಳಿಗೆ ನೋಡುತ್ತೀನಿ
ಸಿದ್ದಯ್ಯ ಸ್ವಾಮಿ ಬನ್ನಿ
ಕುರುಬೇಗೌಡ ....
ಲಿಂಗಯ್ಯ ದಯ ಮಾಡೋ

ನೀನು ಬಾಳಿದಂತಹ ಬಾಳಾಟವನ್ನು ಅರಗಳಿಗೆ ನೋಡುತ್ತೀನಿ ಎಂದ್ರು ಸ್ವಾಮಿಯವರು. ಉತ್ತರಕ್ಕೆ ಪಾದ ದಕ್ಷಿಣಕ್ಕೆ ಮಂಡೆ ಹಾಕ್ಕೊಂಡು ಆರು ಮೂರು ಒಂಬತ್ತು ಘಳಿಗೆ ಜೋಲು ನಿದ್ರೆ ಮಾಡ್ಕೊಂಡು ಬಲದ ಮೊಗ್ಗಲಾಗಿ ಎದ್ದು ಕೂತ್ಕೊಂಡ್ರು ಧರೆಗೆದೊಡ್ಡವರು. ಕುರುಬೇಗೌಡನಿಗೆ ಜಾಗ ಕೊಡಬೇಕಾದರೇ ಇಷ್ಟು ಹೊತ್ತಾಯಿತು. ಈ 24 ಕಂಬದ ತೊಟ್ಟಿ ಹಟ್ಟಿಯನ್ನು ಬಿಟ್ಟು ಕೊಡು ಎಂದರೆ ಬಿಟ್ಟು ಕೊಟ್ಟಾನಾ ? ಕುರುಬೇಗೌಡರ ಸತ್ಯ ನೋಡಬೇಕು ಎಂದು ಧರೆಗೆದೊಡ್ಡವರು ಚಿಂತೆ ಮಾಡುತ್ತಿರುವಾಗ ಏಳುಸಾವಿರ ಕುರಿಗಳು ಮಲಕ್ಕಾಕುತ್ತಾ ಮಲಗಿದ್ದವಂತೆ. ಕುರುಬೇಗೌಡನ ಪ್ರಾಣ ಕುರಿಗಳ ಮೇಲೆ. ಹಾಲುಮತದ ಕುರುಬೇಗೌಡ ಬಲಮೊಗ್ಗಲಾಗಿ ಎದ್ದರೂ ಕೂಡ ತನ್ನ ಮಡದಿಯ ಮೊಕವನ್ನು ನೋಡಿದವನಲ್ಲ. ಮೊದಲು ಕುರಿಗಳ ಮೊಕವನ್ನು ನೋಡಿದ ಮೇಲೆ ಆಮೇಲೆ ಮಡದಿಯ ಮೊಕವನ್ನು ನೋಡುತ್ತಿದ್ದನಂತೆ.

ರೇಚಪ್ಪಾಜಿಯ ಮನೆಯ
ಮುತ್ತಿನ ಜೋಳಿಗೆ ತೆಗೆದು
ಮುಂದುಗಡೆ ಮಡಿಕೊಂಡು
ಆರು ಕಟ್ಟು ಗುರುವೇ
ಹುಡಿಯ ಭಂಗಿಯ ಸೊಪ್ಪು
ಎಕ್ಕದಾಲು ಆರು ಖಂಡುಗ
ಕರಳಿ ಹಾಲು ಮೂರು ಖಂಡುಗ
ಹರಳೆಣ್ಣೆ ಪಚ್ಚಪತ್ರೆ ಎಳೆಯ ನಾಗರದಾವಿನ
ವಿಷ ಬೆರೆಸಾವ್ರೆ ನನ್ನಪ್ಪ
ಸುಣ್ಣದ ತಿಳಿಯ ಒಳಗೆ ಸಂದಾಗಿ
ತೊಳದಾವ್ರೆ ಗಸಗಸನೇ ತಿಕ್ಕಿ
ಗಾಂಜಮಿಟ್ಟ ಮಾಡಿ
ಚಿಲುಮೆಗೆ ಜಡದು ಜಡದು
ತುಂಬುತ್ತಾರೆ ....
ಸಿದ್ದಯ್ಯ ಸ್ವಾಮಿ ಬನ್ನಿ

ಬಂಗಾರದ ಚಿಲುಮೆಯ ಒಳಗೆ ಜಡದು ಜಡದು ತುಂಬಿ ಚಕಮುಕಿಯನ್ನು ಹೊಡೆದು ಸರ್ವೇಕೆಂಡವನ್ನು ಮಾಡಿ ಚಿಲುಮೆ ಮೇಲೆ ಇಟ್ಟು ಭಂಗಿಯನ್ನು ಸೇದಾವ್ರೆ. ಹನ್ನೆರಡು ಕಟ್ಟು ಭಂಗಿ ಸೊಪ್ಪು ಎರಡು ದಮ್ಮಿಗೆ ಮುಗಿಯನಿಲ್ಲ ಮೂರು ದಮ್ಮಿಗೆ ಸಾಲಲಿಲ್ಲ. ಕುಡುಕುಡಿದ ಹೊಗೆಯನ್ನ ಹೊಟ್ಟೆ ಒಳಗೆ ತುಂಬ್ಕೊಂಡು ಭಂಗಿ ಕುಡಿದ ಚಿಲುಮೆಯನ್ನು ತಳತಳಕ ಮಾಡಿದಾಗ ಮೂರು ಖಂಡುಗ ಬೂದಿ ಕುರಿ ಹುಂಡಿ ಒಳಗೆ ಸುರುದು ಹೋಯ್ತಂತೆ. ಆ ಭಂಗಿ ಕುಡಿದಂತಹ ಗ್ಯಾನದಲ್ಲಿ ಆಲುತ್ತಾರೆ ಜೋಲುತ್ತಾರೆ ಜೋಲುನಿದ್ರೆ ಮಾಡುತ್ತಾವ್ರೆ. ಕುರುಬೇಗೌಡ ಬೆಳ್ಳಿ ಮೂಡಿ ಬೆಳಕು

ಹರಿಯುವ ತನಕ ಹಟ್ಟಿ ಖಾಲಿ ಮಾಡಬೇಕು ಅಂದಿದ್ದಾನೆ. ಹೊಟ್ಟೆಯಲ್ಲಿ ತುಂಬಿಕೊಂಡ ಹೊಗೆನೆಲ್ಲ ಕುರಿಗಳ ಮೇಲೆ ಉಘೋ ಅಂತ ಉರುಬ್‌ಬಿಟ್ಟರು. ಭಂಗಿ ಹೊಗೆಯನ್ನು ಕುಡುದು ನಾಲ್ಕು ಕಾಲು ಪಸರ್‍ಕೊಂಡು ಏಳು ಸಾವಿರ ಕುರಿಗಳು ಒಟ್ಟಿಗೆ ಅಡಗೋದವಂತೆ.

ಮುಂಗೋಳಿ ಕೂಗಿತ್ತು
ಮೂಡಲ ಕೆಂಪೇರಿತು
ಕಾಕೋಳಿ ಕೂಗಿ ಲೋಕ ಬೆಳಗಾಗಿತ್ತು
ಹಾಲುಮತದ ಕುರುಬೇಗೌಡರಿಗೆ ಎಚ್ಚರವಾಯ್ತು

ಕೊ ಕ್ಕೊ ಕ್ಕೋ ಎಂದು ಕೋಳಿ ಕೂಗಿದ ಸಬ್ದ ಕೇಳಿ ಕುರುಬೇಗೌಡರಿಗೆ ನಿದ್ರೆಯಿಂದ ಎಚ್ಚರವಾಯ್ತು. ಕುರಿ ಹುಂಡಿಯನ್ನು ನೋಡಿದಾಗ ಏಳುಸಾವಿರ ಕುರಿಗಳೆಲ್ಲ ಸತ್ತು ಸತ್ತು ಮನಗಿದಾವೆ. ಸತ್ತೋಗಿರುವ ಕುರಿಗಳನ್ನು ನೋಡ್ಬುಟ್ಟು ಕುರುಬೇಗೌಡ ರಪ್ನೇ ಮನಗೋದನಂತೆ. ಓಹೋ ನಾನು ಬಾಳಿದಂತಹ ಬಾಳಾಟ ಇಲ್ಲಿಗೆ ಹಾಳಾಗಿ ಹೋಯ್ತು. ಏಳೂರು ಗ್ರಾಮಕ್ಕೆ ಅಧಿಪತಿಯಾಗಿ ಬಾಳುತ್ತಿದ್ದ ಬಾಳಾಟ ಇಂದಿಗೆ ಬತ್ಗೆಟ್ಹೋಯ್ತು. ಕುರುಬೇಗೌಡ ಯಜಮಾನ್ರು ಆಗಿದ್ದರು. ಈಗಲೂ ಕೂಡ ಏನೇ ತಪ್ಪು ನಡೆಯಲಿ ಬುದ್ದಿಯವರಿಗೆ ತಂದು ವರದಿ ಒಪ್ಪಿಸುತ್ತಾರೆ ಬುದ್ದಿಯವರೇ ತೀರ್ಮಾನ ಮಾಡುತ್ತಾರೆ. ಸ್ವಾಮಿಯವರು ಮೌನವಾಗಿ ಹಗ್ಗದ ಮಂಚದ ಮೇಲೆ ಕೂತಿದ್ದಾರೆ. ಹೆಚ್ಚಿನ ಮಾತು ಎಡತಲೆಗೆ ಮೃತ್ಯು. ಮಡದಿ ಮಾತು ಕೇಳಿ ಜಂಗಮನಿಗೆ ಜಾಗ ಕೊಟ್ಟಿಟ್ಟೆ. ಕಾಳಿ ಕಾಳಿ ಕಾಳಿ ಎಂದು ಮೂರು ಸರತಿ ಕರೆದಾಗ ಗಂಡನು ಕೂಗಿದ ಕೂಗನ್ನು ಕೇಳಿ ಮಲಗಿದ್ದ ಕಾಳಮ್ಮ ದಡದಡನೇ ಎದ್ದು ಓಡಿ ಬಂದಿದ್ದಾಳೆ ಗಂಡನ ಬಳಿಗೆ. ಯಾಕೆ ಸ್ವಾಮಿ ? ಲೇ ನಿನ್ನ ಮಾತನ್ನು ಕೇಳಿ ನನ್ನ ಮನೆ ಮುರ್ಕೊಬಿಟ್ಟೆ ಹಾದಿಯಲ್ಲಿ ಹೋಗುತ್ತಿದ್ದ ಸ್ವಾಮಿಗಳಿಗೆ ಜಾಗ ಕೊಡು ಎಂದು ನೀನು ಹೇಳಿದೆ. ಜಾಗ ಕೊಟ್ಟಿದ್ದಕ್ಕೆ ನನ್ನ ಏಳುಸಾವಿರ ಕುರಿಗಳು ಸತ್ತೋಗಿದ್ದಾವೆ ಕಾಣೆ. ಗಂಡ ದಡ್ಡನಾದರೂ ಹೆಡ್ತಿಯಾದರೂ ಜಾಣೆ ಆಗಿರಬೇಕಂತೆ ಅಥವಾ ಹೆಡ್ತಿ ಪೆದ್ದಿ ಆದಾಗ ಗಂಡನಾದರೂ ಜಾಣನಾಗಿರಬೇಕಂತೆ. ಆಗ ಸ್ವಲ್ಪ ಮನೆತನ ಮುಂದುವರೆಯುತ್ತದೆ. ಇಬ್ಬರೂ ದಡ್ಡರಾದರೆ ದಬ್ಬಿ ಹೊರಕ್ಕೆ ಬೀಸಾಕಿದಾಗೆ. ಗಂಡನ ಮಾತ ಹೆಡ್ತಿ ಕೇಳಬೇಕು ಇಲ್ಲ ಹೆಡ್ತಿ ಮಾತ ಗಂಡ ಕೇಳಬೇಕು. ಅಂಗಿದ್ದರೆ ಮಾತ್ರ ಸಂಸಾರದಲ್ಲಿ ಒಂದು ಜೊತೆ ಎತ್ತು ಇದ್ದ ಹಾಗೆ ಸಮತೂಕದ ಭಾರವನ್ನು ಹೊರುತ್ತದಲ್ಲ ಎತ್ತುಗಳು ಹಾಗೇ ಸಮತೂಕದ ಭಾರ ಯಾರು ಹೊರುತ್ತಾರೋ ಅವರೇ ಸಂಸಾರವನ್ನ ನೀಸತಕ್ಕಂತವರು.

ಗಂಡನಿಗಿಂತ ಹೆಚ್ಚಿನ ಬುದ್ಧಿಶಾಲಿ ಕಾಳಮ್ಮ. ನನಗೇಕೆ ಸ್ವಾಮಿ ಬೈಯುತ್ತೀರಾ ? ನಮ್ಮ ಮನೆಗೆ ಬಂದಿರುವಂತ ಸ್ವಾಮಿಗಳು ಹಾಳು ಮಾಡಕ್ಕೆ ಬಂದಿದ್ದರೆ ಹಾಳೇ ಮಾಡ್ಲಿಬಿಡಿ. ಉದ್ಧಾರಮಾಡಕ್ಕೆ ಬಂದಿದ್ದರೆ ಉದ್ಧಾರ ಮಾಡಲಿ ಬಿಡಿ. ಇಲ್ಲ ನಮ್ಮ ದೃಢಮನಗಳನ್ನ ಪರಶೋಧನೆ ಮಾಡಕ್ಕೆ ಬಂದಿದ್ದಾರೋ ಗೊತ್ತಿಲ್ಲ. ಗಂಡ ಹೆಂಡ್ತಿಯರು ಧರೆಗೆದೊಡ್ಡವರ ಪಾದವನ್ನು ಬಾಚಿ ತಬ್‌ಕೊಂಡರಂತೆ. ಆಗ ಧರೆಗೆದೊಡ್ಡವರು

ಕುರುಬೇಗೌಡರಿಗೆ ಹೇಳುತ್ತಾರೆ ಈ ತಿರುಕನ ಪಾದ ಯಾಕಪ್ಪ ಮುಟ್ಟುತ್ತೀಯಾ ? ಎಂದರಂತೆ. ಸ್ವಾಮಿ ನೀವು ಹೋದ ಮೇಲೆ ಏಳುಸಾವಿರ ಕುರಿಗಳು ಸತ್ ಸತ್ತು ಮನಗಿದ್ದಾವೆಯಲ್ಲಪ್ಪ ಏನು ಕಾರಣ ಎಂದು ಕೇಳಿದರು ಕುರುಬೇಗೌಡ. ಕೇಳಪ್ಪ ಹಾಲುಮತದ ಕುರುಬೇಗೌಡ ಕುರಿ ಸತ್ತೋಯ್ತು ಅಂತ್ಹೇಳಿ ಚಿಂತೆ ಮಾಡಬೇಡ ಕುರುಬೇಗೌಡ. ಏನು ಮಾಡಲಿ ಸ್ವಾಮಿ. ಏಳು ಸಾವಿರಕ್ಕೆ ಏಳುಸಾವಿರ ಹದಿನಾಲ್ಕುಸಾವಿರ ಕುರಿ ಕೊಡುತ್ತೀನಿ ಒಂದೇ ಒಂದು ಮಾತು ನೆರವೇರಿಸಿ ಕೊಡುತ್ತೀಯಪ್ಪ ಎಂದರು ಧರೆಗೆದೊಡ್ಡವರು ಕುರುಬೇಗೌಡರಿಗೆ ಆಸೆ ಆಗೋಯ್ತು. ಬುದ್ಧಿ ಏನು ಹೇಳಿ ನೆರವೇರಿಸಿ ಕೊಡುತ್ತೀನಿ ಅಂದ. ಕುರುಬೇಗೌಡ ನಾನು ಏಳು ಸಾವಿರಕ್ಕೆ ಏಳುಸಾವಿರ ಹದಿನಾಲ್ಕು ಸಾವಿರ ಕುರಿಗಳನ್ನು ಕೊಡುತ್ತೀನಿ ನಿಮ್ಮ ಅಪ್ಪ ಕಟ್ಟಿಸಿರುವ ಇಪ್ಪತ್ನಾಲ್ಕು ತೊಟ್ಟಿ ಹಟ್ಟಿಯನ್ನ ನಮಗೆ ಧಾರೆಯೆರೆದು ಕೊಡುತ್ತೀಯೇನಪ್ಪ ಕುರುಬೇಗೌಡ ಎಂದು ಕೇಳಿದರು. ಹಾಗಂದಾಗ ಕುರುಬೇಗೌಡರು ಚಿಂತೆ ಮಾಡಿದರು ಏಳುಸಾವಿರಕ್ಕೆ ಏಳುಸಾವಿರ ಕುರಿಗಳು ಬರಬೇಕಾದರೆ ಇದರ ರೀತಿ ಏಳು ಹಟ್ಟಿ ಕಟ್ಟಬಹುದು ಅಂತ್ಹೇಳಿ ನನಗೆ ಕುರಿಗಳನ್ನೇ ಕೊಟ್ಬುಡಿ ಸ್ವಾಮಿ ನನ್ನ ಅಪ್ಪ ಕಟ್ಟಿರುವಂತ 24 ತೊಟ್ಟಿಹಟ್ಟಿಯನ್ನ ಬಿಟ್ಕೊಟ್ಬಿಡುತ್ತೀವಿ ಎಂದರು.

ಕುರುಬೇಗೌಡರ ಮಾತುಗಳ ಕೇಳಿದರು
ಗುರುವೇ ಆಹಾ... ಶಂಕರಾ..
ಕುರುಬೇಗೌಡರ ಮಾತುಗಳನ್ನು ಕೇಳಿ
ನಮ್ಮ ಪರಂಜ್ಯೋತಿ ನಮ್ಮಪ್ಪಾಜಿ..

ಕುರುಬೇಗೌಡ ಕಟ್ಟಿದಂತಹ ಹಟ್ಟಿ ಬಿಟ್ಕೊಟ್ಟ ಮೇಲೆ ಕುರಿ ಕೋಲನ್ನ ಹಿಡ್ಕೊಂಡು ಲೆಕ್ಕ ಮಾಡಿ ಆಚೆಗೆ ಅಟ್ಕೋ ಕುರುಬೇಗೌಡ ಅಂತ್ಹೇಳಿ ಕಳಿಸಿದರಂತೆ. ಸ್ವಾಮಿ ಕಪ್ಪುಧೂಳ್ತವನ್ನು ಅಂಗೈಯಲ್ಲಿ ಮಡಿಕೊಂಡು ಅರವತ್ತಾರು ಕಾಸು ಮೂವತ್ಮೂರು ಬಿರುದು ಹದಿನೆಂಟು ಪುರಾಣ ನಾಲ್ಕು ವೇದ ಜಪತಪ ಹೋಮಾದಿಗಳನ್ನು ಮಾಡಿ ಷಡಕ್ಷರಿ ಮಂತ್ರವನ್ನು ಜಪಿಸಿದರು.

ಓಂ ನಮ ಶಿವಾಯ ನಮಃ
ಸಕಲ ಕಂಟಿಗ ವಿಮೋಚನವಾಗಲಿ
ಸಾಕ್ಷಾತ್ ಗುರುವೇ ನಮಃ
ಓಂ ಶಾಂತಿ ಓಂ ಶಾಂತಿ ಓಂ ಶಾಂತಿಃ
ಎಂದೆನುತ ಧರೆಗೆದೊಡ್ಡವರು ಕಪ್ಪು
ಧೂಳ್ತವನ್ನು ತೆಗೆದು ಆ ಸತ್ತೋಗಿರುವಂತ
ಕುರಿಗಳ ಮೇಲೆ ಉಪೋ ಅಂತ ಉರುಬಿದರಂತೆ
ಧರೆಗೆದೊಡ್ಡವರು ಏಳು ಸಾವಿರಕ್ಕೆ ಏಳುಸಾವಿರ
ಕುರಿಗಳು ಹೆಚ್ಬುಡ್ತು ಕುರಿಹುಂಡಿ ಒಳಗೆ

ಸಿದ್ದಯ್ಯ ಸ್ವಾಮಿ ಬನ್ಯೋ
ಗುರುವೇ ಸತ್ತೋದಂತ ಕುರಿಗಳ
ಪಡೆದರಲ್ಲ ಮಾಯ್ಕಾರ
ಕಂಡಾಯದ ಒಡೆಯ ....
ಲಿಂಗಯ್ಯ ದಯ ಮಾಡೋ ..
ನಿನ್ನ ಮಾಯೇ ಕಂಡವರಿಲ್ಲ ....
ನಿನ್ನ ಸತ್ಯ ತಿಳಿದವರಿಲ್ಲ ....
ಪರಂಜ್ಯೋತಿ ನನ್ನಪ್ಪ ....
ಮಂಟೇದಲಿಂಗಯ್ಯ ....

ಏಳುಸಾವಿರಕ್ಕೆ ಏಳುಸಾವಿರ ಒಟ್ಟು ಹದಿನಾಲ್ಕು ಸಾವಿರ ಕುರಿಗಳನ್ನು ಸ್ವಾಮಿಯವರು ಕೊಟ್ಟಿದ್ದನ್ನು ಕುರುಬೇಗೌಡ ಲೆಕ್ಕ ಮಾಡಿ ಲೆಕ್ಕ ಮಾಡಿ ಆಚೆಗೆ ಅಟ್ಟೋದು ಒಪ್ಪೋತ್ ಆಗ್ಹೋಯ್ತು. ಸ್ವಾಮಿಯವರು ಏಳುಸಾವಿರಕ್ಕೆ ಏಳುಸಾವಿರ ಹದಿನಾಲ್ಕು ಸಾವಿರ ಕುರಿಗಳನ್ನು ಕೊಟ್ಟಿರುವ ಸ್ವಾಮಿಗಳಿಗೆ ಕುರಿ ಹಾಲನ್ನು ಕರ್ಕೊಂಡು ಬಂದು ಕೊಂಡಮಾವಿನ ಪತ್ರೆಯನ್ನು ಕಿತ್ಕೊಂಡು ಬಂದು ಹಾಲುಮತದ ಕುರುಬೇಗೌಡ ನಡುಮನೆಯ ಹಸೆಮಣೆಯಲ್ಲಿ ಇಟ್ಬುಟ್ಟು ಕುಣ್ಣಿ –ಚೆಂಬಲ್ಲಿ ಪಣ್ಣೀರನ್ನು ತಂದು ಸ್ವಾಮಿಯವರ ಪಾದವನ್ನು ಚನ್ನಾಗಿ ತೊಳೆದು ಮಂಗಳಾರತಿ ಬೆಳಗುತ್ತಾ ಹಟ್ಟಿಯನ್ನ ಬಿಟ್ಕೊಡುತ್ತಿದ್ದಾರೆ.

ಬೆಜ್ಜಲುಕೆಂಡವ ತುಂಬಿ . . .
ಮಡ್ಡಿ ಸಾಂಬ್ರಾಣಿ ಹಾಕಿ . ..
ಅವರ ಪಾದಕ್ಕೆ ಮಂಗಳಾರುತಿ
ಬೆಳಗುತ್ತಾರೆ ಬಾಳೆ ಬಾಗಿದವೋ
ಓ ಹೋ . . ..
ಪಾದಕ್ಕೆ ಮಂಗಳಾರುತಿ ಬೆಳಗುತ್ತಾರೆ
ಬಾಳೆ ಬಾಗಿದವೋ .. . .
ತಿಂಗಳು ಮುಳುಗಿದವೋ . . ..
ರಂಗೋಲಿ ಬೆಳಗಿದವೋ . . ..
ನಮ್ಮ ಧರೆಗೆದೊಡ್ಡವರ ಪೂಜೆಗೆಂದು
ಬಾಳೆ ಬಾಗಿದವೋ 2
ಇನ್ನೂರು ಇಡುಗಾಯಿ . . . .
ಮುನ್ನೂರು ಒಡಗಾಯಿ .. . . . .
ಎಳನೀರ ಕೋಡಿ ಹರಿದಾವೋ
ಬಾಳೆ ಬಾಗಿದವೋ .. . .
ತಿಂಗಳು ಮುಳುಗಿದವೋ .. . . .

ರಂಗೋಲೆ ಬೆಳಗಿದವ್ರೋ 2
ನಮ್ಮ ಧರೆಗೆದೊಡ್ಡವರ ಪೂಜೆಗೆಂದು
ಬಾಳೆ ಬಾಗಿದವ್ರೋ ....
ಯಾಕಪ್ಪ ಮಾಯ್ಕಾರ . . . .
ನಿಮ್ಮ ಮುಕವೆಲ್ಲ ಸಪ್ಪಿಗೆ . . .. .
ನೋಡಿದರೆಲ್ಲ ನಗುತ್ತಾರೆ . . . ..
ಬಾಳೆ ಬಾಗಿದವ್ರೋ . . . .
ಓ ಹೋ ನೋಡಿದರೆಲ್ಲ ನಗುತ್ತಾರೆ
ಬಾಳೆ ಬಾಗಿದವ್ರೋ . . . .
ತಿಂಗಳು ಮುಳುಗಿದವ್ರೋ .. . . .
ಓ ಹೋ ರಂಗೋಲೆ ಬೆಳಿಗಿದವ್ರೋ . .
ಓ ಹೋ ಬಾಳೆ ಬಾಗಿದವ್ರೋ .. . .

ಧರೆಗದದೊಡ್ಡವರ ಪಾದಚರಣಗಳಿಗೆ ಮಂಗಳಾರತಿಯನ್ನು ಬೆಳಗಿ ಕಟ್ಟಿದಂತಹ ಹಟ್ಟಿಯನ್ನ ಬಿಟ್ಕೊಟ್ಟಿದ್ದಾರೆ ನಮ್ಮ ಹಾಲುಮತದ ಕುರುಬೇಗೌಡರು. ಏಳು ಕೋಣೇರಿಗೆ ಸಾಮಾನುಗಳನ್ನು ತುಂಬ್ಕೊಂಡು ಆರು ಜನ ಗಂಡು ಮಕ್ಕ ಆರು ಜನ ಸೊಸೆಯಂದಿರು ಮೂವತ್ಮೂರು ಮೊಮ್ಮಕ್ಕಳನ್ನು ಕರ್ಕೊಂಡು ಏಳುಂಡಿ ಎಮ್ಮೆಗಳು ಏಳುಂಡಿ ದನಗಳು ಹದಿನಾಲ್ಕು ಸಾವಿರ ಕುರಿಗಳನ್ನು ಹೊಡ್ಕೊಂಡು ಹಾಲುಮತದ ಕುರುಬೇಗೌಡ ಮಡದಿ ಕಾಳಮ್ಮನನ್ನು ಕರ್ಕೊಂಡು ಆರು ಹೆಜ್ಜೆ ಮೂರು ಗೇಣು ಇಟ್ಟರಂತೆ ಚಿಂತೆ ಬಂದ್ಬುಡ್ತು ಕುರುಬೇಗೌಡರಿಗೆ. ಏಕೆಂದರೆ ಕಾಡಲ್ಲಿರುವ ಅಕ್ಷಿಪಕ್ಷಿಗಳಿಗೆಲ್ಲ ದಿನ ಆಹಾರ ಹೂಡ್ಕೊಂಡು ಸಂಜೆಯಾದರೆ ಅವರ ಗೂಡು ಸೇರ್ಕೊಳ್ಳುತ್ತವೆ. ನಾನು ಕಟ್ಟಿದಂತಹ ಹಟ್ಟಿಯನ್ನು ಬಿಟ್ಕೊಟ್ಟಿಟ್ಟು ಈ ತುಂಬಿದಂತಹ ಸಂಸಾರವನ್ನು ಕರ್ಕೊಂಡು ನಾನು ಎಲ್ಲಿಗೆ ಹೋಗಿ ಬಾಳಲಿ ಎಂದು ಚಿಂತೆ ಮಾಡಿದ ಕುರುಬೇಗೌಡ. ಪುನಃ ಧರೆಗೆಬೊಡ್ಡವರ ಬಳಿಗೆ ಓಡೋಡಿ ಬಂದರಂತೆ. ಸ್ವಾಮಿ ಕಟ್ಟಿದಂತಹ ಹಟ್ಟಿ ನಿಮಗೆ ಬಿಟ್ಕೊಟ್ಟುಬಿಟ್ಟೇವಿ ನಾಮು ಎಲ್ಲಪ್ಪ ಬಾಳಬೇಕು ಎಂದು ಕೇಳಿದ ಕುರುಬೇಗೌಡ. ಹಟ್ಟಿ ಬಿಟ್ಕೊಟ್ಟಿಟ್ಟೆಯಂತ ಚಿಂತೆ ಮಾಡಬೇಡ ಕುರುಬೇಗೌಡ. ಜಾಗಕೊಟ್ಟವರಿಗೆ ಜಾಗೇರಿ ತೋರದಿರುವ ದೇವರಿಲ್ಲ, ನಾನು ಆದಿ ಹೊನ್ನಾಯ್ಕನ ಹಳ್ಳಿ ಒಳಗೆ ಒಕ್ಕಲೆತ್ತಿ ಬಾಳಪ್ಪ ಎಂದ್ರು ಧರೆಗೆದೊಡ್ಡವರು. ಸ್ವಾಮಿ ಆದಿ ಹೊನ್ನಾಯ್ಕನ ಹಳ್ಳಿ ಒಳಗೆ ಆರುಸಾವಿರ ಗಂಗಡಕಾರರ ಕುಲ ಇದೆ. ಒಕ್ಲ ರಾಗಿಕೊಟ್ಟರೂ ಬೇಡಪ್ಪ ಒಕ್ಕಲಿಗರ ಸಾವಾಸ. ಗಂಗಡಕಾರರು ಸರಿಯಾಗಿದ್ದರೆ ಹೊಟ್ಟೆ ಒಳಗೆ ಹುಟ್ಟಿರುವಂತ ಮಗುವಿಗಿಂತ ಹೆಚ್ಚಾಗಿ ನೋಡುತ್ತಾರೆ. ಮೊಗ್ಗಲ್ಲಿ ಮನಿಕ್ಕೋಪ್ಪ ಅನ್ನುತ್ತಾರೆ. ಏನಾರ ಸರಿತಪ್ಪೋಯ್ತೋ ?

ಒಕ್ಲ ರಾಗಿ ಕೊಟ್ಟರೂ ಒಕ್ಲರ ಸಾವಾಸ ಬೇಡ
ಗಂಗಮ್ಮನ ಸಂತೆ ಮಾಡಿದರು ಬೇಡಕಾಣಪ್ಪ

ಗಂಗಡಕಾರರ ಸಾವಾಸ ಎಂದ ಹಾಲುಮತದ
ಕುರುಬೇಗೌಡ .. ..

ಕುರುಬೇಗೌಡ ಆಡಿದಂತಹ ಮಾತನ್ನು ಕೇಳಿ ನಮ್ಮ ಪರಂಜ್ಯೋತಿ ನನ್ನಪ್ಪಾಜಿ. ಧರೆಗೆದೊಡ್ಡವರು, ಕುರುಬೇಗೌಡ ಬೇರೆ ಜನಾಂಗ ಹೊಟ್ಟೆಕಿಚ್ಚು ಪಡುತ್ತಾವ್ರೆ. "ಸಿದ್ದಣ್ಣ ಬಾಳುತ್ತಾನೆಂದ್ರೆ ಲಿಂಗಣ್ಣನಿಗೆ ಹೊಟ್ಟೆಕಿಚ್ಚು. ಏನಪ್ಪ ಗಾಡಿ ತಕ್ಕೋಬಿಟ್ನಂತೆ. ಏನಪ್ಪ ಮೂರು ಏಕರೆ ಜಮೀನು ತಕ್ಕೋಬಿಟ್ನಂತೆ ಅಂತ್ಹೇಳಿ ಏನಪ್ಪ ಅವ್ನಿಗೆ ವರ್ಷಕ್ಕೊಂದೊಂದು ತಕ್ಕೋತ್ತಾವ್ನೆ ಅಂತ ಹೊಟ್ಟೆಕಿಚ್ಚು ಪಡುತ್ತಾರೆ. ಆದರೆ ಗಂಗಡಕಾರರು ಆ ರೀತಿ ಹೊಟ್ಟೆಕಿಚ್ಚು ಪಡುವವರಲ್ಲ. ಬಾಳುತ್ತಾವ್ರೆ ಅಂದ್ರೆ ಭಾಳ ಪ್ರೀತಿ ಅವರಿಗೆ. ಲಿಂಗಣ್ಣ ಬಾಳುತ್ತಾನೆ ಎಂದರೆ ಭಾಳ ಪ್ರೀತಿ. ಏಕೆ ? ಬಾಳೋರ ಮನೆಯ ಪಕ್ಕದಲ್ಲಿದ್ದರೇ ನಮ್ಮ ಮಕ್ಕಳಿಗೂ ಬಾಳೋ ಬುದ್ದಿ ಬರುತ್ತದೆ ಅಂತ. ಕುರುಬೇಗೌಡ ಆದಿಹೊನ್ನಾಯ್ಕನ ಹಳ್ಳಿ ಒಳಗೆ ನೀನು ಒಪ್ಪಿದಂತಹ ಜಾಗದಲ್ಲಿ ನಾಲ್ಕು ಕಲ್ಲು ಮಡಗಿಬಿಡಪ್ಪ ಅಷ್ಟೇ ಸಾಕು ಒಪ್ಪಿದಂತಹ ಜಾಗವನ್ನ ಅವರ ಕೈಯಲ್ಲಿ ಜಾಗೇರಿ ಬರೆಸಿಕೊಡುತ್ತೀನಿ. ಆರುಸಾವಿರ ಕುಲ ನೀನು ಹೇಳಿದಂತೆ ಕೇಳಬೇಕು ಕಾಣ್ಲೋ. ಆ ಆರುಸಾವಿರ ಕುಲಕ್ಕೆ ನಿನ್ನ ದೊಡ್ಡ ಯಜಮಾನ ಮಾಡಿಸುತ್ತೀನಿ ಕಾಣ್ಲೋ ಎಂದರು ಸ್ವಾಮಿ ಧರೆಗೆದೊಡ್ಡವರು. ಆರುಸಾವಿರ ಕುಲವೇ ನಾನು ಹೇಳಿದಂತೆ ಕೇಳುತ್ತಾರೆ ಎಂದು ಅಹಂಕಾರ ಮಡಬೇಡ ಕಾಣ್ಲೋ.

ದಡ್ಡನಾಗಿ ಬದುಕಿದರೆ ನಾ ನಿನ್ನ
ದೊಡ್ಡ ಒಕ್ಕಲು ಮಾಡುತ್ತೀನಿ
ಸಿದ್ದಯ್ಯ ಸ್ವಾಮಿ ಬನ್ನಿ
ಜಗಳ ಆಡುವರ ಮನೆಗೆ ಹೋಗಿ
ಬಿಡಿಸಬೇಡ ಕಾಣದೆ ಹೋಗು
ಸಿದ್ದಯ್ಯ ಸ್ವಾಮಿ ಬನ್ನಿ
ಊಟಕ್ಕೆ ಮುಂದಾಗಿರು
ಕೂಟಕ್ಕೆ ಹಿಂದಾಗಿರು
ಸಿದ್ದಯ್ಯ ಸ್ವಾಮಿ ಬನ್ನಿ
ಕಂಡಂತ ನ್ಯಾಯ ಖಂಡಿತವಾಗಲೂ
ಬೇಡ ಹೋಗು ಎನ್ನಬೇಡ
ನ್ಯಾಯ ಮಾತ್ರ ಬಿಡಬೇಡ
ಸಿದ್ದಯ್ಯ ಸ್ವಾಮಿ ಬನ್ನಿ

ಕೇಳಪ್ಪ ಹಾಲುಮತದ ಕುರುಬೇಗೌಡ ಊಟಕ್ಕೆ ಮುಂದಾಗಿರು ಕೂಟಕ್ಕೆ ಸ್ವಲ್ಪ ಹಿಂದಾಗಿರು ಜನರ ಜಗಳವನ್ನು ಬಿಡಿಸಬೇಡ ಕಾಣಪ್ಪ. ಕಂಡರೂ ಕಾಣದಂತೆ ಹೋಗಿಬಿಡಪ್ಪ. ಕಂಡಂತ ನ್ಯಾಯವನ್ನು ಪ್ರಾಣ ಹೋದರೂ ಬಿಡಬೇಡಕಾಣಪ್ಪ ಕುರುಬೇಗೌಡ ಅಂತ್ಹೇಳಿ ದಡ್ಡನಾಗಿ ಬಾಳಿದರೆ ನಿನ್ನ ದೊಡ್ಡ ಒಕ್ಕಲು ಮಾಡುತ್ತೀನಿ

ಯುಕ್ತಿ ಜಾಣತನದಿಂದ ಬಾಳಪ್ಪ ಎಂದರು. ಧರೆಗೆದೊಡ್ಡವರ ಮಾತನ್ನು ಕೇಳಿ ಕುರುಬೇಗೌಡ ಆಗಲಿಯಪ್ಪ ಅಂದ್ರು, ನಾನು ಸತ್ತರೆ ಆರು ಸಾವಿರ ಕುಲ ನನ್ನ ಮುಟ್ಟಿ ಒಪ್ಪಮಾಡುವರಪ್ಪ. ಕುರುಬೇಗೌಡ ನೀನು ಚಿಂತೆ ಮಾಡಬೇಡ ನಿನ್ನ ಭೂಮಿಗೂ ಹೂಳಲ್ಲ ನಿನ್ನ ಬೀರದೇವರ ಮಾಡುತ್ತೀನಿ.

ನಿನ್ನ ಬೀರದೇವರ ಮಾಡುತ್ತೀನಿ
ಸಿದ್ದಯ್ಯ ಸ್ವಾಮಿ ಬನ್ನಿ
ಹಾಲುಮತದ ಗೌಡ . . ..ಆ . .
ಲಿಂಗಯ್ಯ ದಯ ಮಾಡೋ . .

ಕೇಳಪ್ಪ ಹಾಲುಮತದ ಕುರುಬೇಗೌಡ ನಿನ್ನ ಕುರುಬರ ಜಾತಿಗೆಲ್ಲ ಬೀರುದೇವರು ಮಾಡುತ್ತೀನಿ ಕಾಣಪ್ಪ.

ಮಾರಳ್ಳಿ ಬೀರದೇವರಾಗಿ ನೀ
ಒಡೆದು ಮೂಡುಕೋಪ್ಪ
ಕುರುಬೇಗೌಡ . . . . .
ಸಿದ್ದಯ್ಯ ಸ್ವಾಮಿ ಬನ್ನಿ
ಪರಂಜ್ಯೋತಿ . . .ಆ . .ಆ
ಲಿಂಗಯ್ಯ ದಯಮಾಡೋ
ಸೊಪ್ಪು ತರಿವ ಮಚ್ಚು
ನಾಳೆ ಗಂಡುಗತ್ತರಿ ಆಗಲಪ್ಪ
ಕುರಿ ಕೋಲೇ ನಾಳೆ
ನಂದಿಕಂಬ ಆಗಲಪ್ಪ
ಮುಡುಕುತೊರೆ ಒಳಗೆ
ಅಲಂಕಾರ ದೇವರ ಮಾಡುತ್ತೀನಿ
ಕುರುಬೇಗೌಡ . . . .

ಕುರುಬೇಗೌಡ ವೀರಭದ್ರ ಹಲಗೆಯ ನಿನ್ನ ಎದೆ ಮೇಲೆ ಹೊರಿಸುತ್ತೀನಿ. ಕೂಟ ಕೂಟಕ್ಕೆಲ್ಲ ನಿಮ್ಮ ಕುರುಬರ ಕೂಟ ದೊಡ್ಡದಾಗಲಿಯಪ್ಪ. ಸ್ವಾಮಿ ನನಗೆ ಬಹಳ ಐಭೋಗದಲ್ಲಿ ಆಶೀರ್ವಾದ ಮಾಡಿದ್ದೀರಿ. ಕುರುಬೇಗೌಡ ಹಸ್ದು ಬಂದವನಿಗೆ ಅನ್ನ ಇಲ್ಲ ಎಂದು ಮಾತ್ರ ನಿನ್ನ ಬಾಯಿಂದ ಹೇಳಬೇಡ ಕಾಣೋ ಹಾಲುಮತದ ಹಟ್ಟಿ ಒಳಗೆ ಅನ್ನದಾನ ನಡೆಯಲಿಯಪ್ಪ. ಅದೂ ಅಲ್ಲದೆ ನೀನು ಹಟ್ಟಿ ಕಟ್ಟ ಬೇಕಾದರೆ ಮೂರು ಮೊಳ ಪಡಸಾಲೆಗೆ ಬಿಟ್ಟು ಹಟ್ಟಿ ಕಟ್ಟಪ್ಪ ಎಂದ್ರು ಧರೆಗೆದೊಡ್ಡವರು. ಏಕೆಂತೆಂದ್ರೆ ಪಡಸಾಲೆ ಪರವರಚಾವಡಿ. ಎಲ್ಲರೂ ಬಿಡಲ್ಲ ಕುರುಬೇಗೌಡರು ಮಾತ್ರ ಪಡಸಾಲೆ ಬಿಟ್ಟೇ ಹಟ್ಟಿ ಕಟ್ಟುವುದು. ಆ ಪಡಸಾಲೆಯ ಮೇಲೆ ನನ್ನಂತ ತಿರುಕರು ಎರಕರು ಬಂದು ಕೂತ್ಕೋತ್ತಾರಲ್ಲಪ್ಪ ಅಂತೆಯವರಿಗೆ ಕಾಣಪ್ಪ ಪಡಸಾಲೆ.

ರಾಜರ ಮಕ್ಕಳು ತಿರುಗಾಡುವಂತ ಸ್ಥಳ
ರಾಜಬೊಪ್ಪೇಗೌಡನ ಪುರ ಅಂತ
ನಾಮಕರಣವಾಗಲ್ಯಪ್ಪ .. . . ..
ಜ್ಯೋತಿಲಿಂಗಯ್ಯ ಬನ್ನಿ ಆ . . .

ಕುರುಬೇಗೌಡ ರಾಜರಮಕ್ಕಳು ತಿರುಗಾಡುವಂತಹ ಸ್ಥಳ ರಾಜಬೊಪ್ಪೇಗೌಡನಪುರ ಅಂತ ನಾಮಕರಣ ಆಗಲಪ್ಪ. ನೀನು ನಮಗೆ ಹಟ್ಟಿಕೊಟ್ಟಿದ್ದಕ್ಕೆ ನಿನ್ನ ಹೆಸರು ಹಾಕಿಸುತ್ತೀನಿ. ಚಿಂತೆ ಮಾಡಬೇಡ ಕುರುಬೇಗೌಡ ಹೆಸರು ನಿನ್ನದಾಗಲಿ ಮಠ ಮಾತ್ರ ನಮ್ಮದಾಗಲಿಯಪ್ಪ. ಅದಕ್ಕೆ ಈಗಲೂ ಬೊಪ್ಪೇಗೌಡನ ಪುರ ಅಂತ್ಹೇಳಿ ಹೆಸರಿನಿಂದ ಕರೆಯುತ್ತಾರೆ.

ಬೊಪ್ಪೇಗೌಡನ ಪುರವನ್ನು ಬಿಟ್ಟು
ಹಾಲುಮತದ ಕುರುಬೇಗೌಡ ..
ಅಂಚೆದೊಡ್ಡಿ ಮಾರ್ಗವಾಗಿ
ಕಂದಗಾಳದ ಊರೊಳಗೆ
ಕರುಬಿನಳ್ಳಿ ಗ್ರಾಮವನ್ನ
ಎಡಗಡೆ ಬಿಟ್ಕೊಂಡು
ಮತ್ತಿತಳಪ್ಪ ದೇವಸ್ತನವನ್ನ
ಬಲಗಡೆ ಬಿಟ್ಕೊಂಡು
ಆದಿಹೊನ್ನಾಯ್ಕನ ಹಳ್ಳಿಗೆ
ದಯಮಾಡಿದರಂತೆ
ಸಿದ್ದಯ್ಯ ಸ್ವಾಮಿ ಬನ್ಯೋ

ಯಾವನಪ್ಪ ಈ ರೀತಿ ತುಂಬಿದ ಸಂಸಾರವನ್ನು ಕರ್ಕೊಂಡು ಏಳು ಕೋಣೇರಿಗೆ ಸಾಮಾನನ್ನು ತುಂಬ್ಕೊಂಡು ಹೋಗುತ್ತಾನಲ್ಲ ಇವ್ನನ್ನು ತಡೆಯೋಣ ಬನ್ನಿ ನಮ್ಮೂರಲ್ಲಿ ಇರಸ್ಕೊಳ್ಳೋಣ ಅವನ ಬಾಳೋ ಬುದ್ಧಿ ನಮಗೂ ನಮ್ಮ ಮಕ್ಕಳಿಗೂ ಬರುತ್ತದೆ ಅಂತ್ಹೇಳಿ .ಗಂಗಡಕಾರರು ಎಲ್ಲರೂ ಸ್ವಾಮಿಯವರ ಸುತ್ತ ನಿಂತ್ಕೊಂಡ್ರಂತೆ. ಯಾರು ಸ್ವಾಮ್ಗಳೇ ನೀವು ಯಾವ ಊರು ಎಂದು ಕೇಳಿದರಂತೆ. ನೋಡ್ರಪ್ಪ ನಾವು ರಾಜಬೊಪ್ಪಣಪುರದಲ್ಲಿ ಇದ್ದೋ ಅಲ್ಲಿ ನಮ್ಮ ಗುರುಗಳು ಬಂದು ನಮ್ಮ ಮನೆಯನ್ನ ಬಿಡಸ್ಕೊಂಡ್ರು. ಆದ್ದರಿಂದ ನಿಮ್ಮ ಊರಲ್ಲಿ ಬದುಕೋಣ ಎಂದು ಬಂದೀವಿ. ಆಗ ಗಂಗಡಕಾರರು ನೀವು ಮುಂದೆ ಹೋಗಬೇಡಿ ನಿಮಗೆ ಒಪ್ಪಿಗೆ ಆದ ಸ್ಥಳದಲ್ಲಿಯೇ ನೆಲೆಸಿ ಅಂತ್ಹೇಳಿ ಜಾಗಬಿಟ್ಟುಕೊಟ್ಟರಂತೆ. ಆದಿಹೊನ್ನಾಯಕನ ಹಳ್ಳಿ ಒಳಗೆ ಕುರುಬೇಗೌಡ ಒಕ್ಕಲೆತ್ತಿ ಬಾಳುತ್ತಿದ್ದಾನೆ. ಧರೆಗೆದೊಡ್ಡವರು ಈಕಡೆ ಹಾಲುಮತದ ಕುರುಬೇಗೌಡರ ಮನೆಯ ಒಳಗೆ 24 ಕಂಬ ತೊಟ್ಟಿ ಹಟ್ಟಿ ಒಳಗೆ ಪರಂಜ್ಯೋತಿ ನೆಲಮೂರ್ತಿ ಮಾಡಿಕೂತ್ಕೊಂಡ್ರು.

ಮಡುವಾಳ ಮಾಚಯ್ಯನ ಮನೆಗೆ – ೧೨

ರಾಜ ಒಡೆಯ ಮಕ್ಕಳಿಗೆ
ಮಠಮನೆ ಮಾಡಿದ್ದಾಯ್ತು
ಸಿದ್ದಯ್ಯ ಸ್ವಾಮಿ ಬನ್ನ್ಯೋ

ರಾಜ ಒಡೆಯರ ಮಕ್ಕಳಿಗೆ ಮಠಮನೆ ಮಾಡಿದ್ದಾಯ್ತು. ಇನ್ನೂ ಏಳುಸಾವಿರ ಮಾರಿಯರಿಗೆ ಯಜಮಾನಗಿತ್ತಿಯಾದ ಜಗನ್ಮಾತೆ ದೊಡ್ಡಮ್ಮತಾಯಿಗೆ ಮಠಮನೆ ಮಾಡಬೇಕು ಅಂತ್ಹೇಳಿ ಸ್ವಾಮಿ ಧರೆಗೆದೊಡ್ಡವರು ಮನೆಯ ಒಳಗೆ ಕುಳಿತುಕೊಂಡು ಚಿಂತೆ ಮಾಡುವಾಗ ಶುದ್ಧ ಈಶಾನ್ಯ ದಿಕ್ಕಿಗೆ ನೋಡಿದರಂತೆ. ಮಡುವಾಳ ಮಾಚಪ್ಪನ ಮನೆ.

ಮಡುವಾಳ ಮಾಚಪ್ಪನ ಮನೆ
ಸ್ವಾಮಿಯವರ ಕಣ್ಣಿಗೆ ಕಂಡಾಗ
ಧರೆಗೆದೊಡ್ಡವರ ಮಾಮೂರ್ತಿ
ಕಂಡಾಯದ ಒಡೆಯ ಲಾಳಾಯಿಸಿ
ನೋಡುದರು ಮಡುವಾಳ ಮಾಚಪ್ಪ
ಮನೆಯ ಒಕ್ರಳ್ಳಿ ಒನಗಳ್ಳಿ ಹಳ್ಳದಾಸನಳ್ಳಿ
ಮುಟ್ನಳ್ಳಿ ಕೊಡಗಳ್ಳಿ ದ್ಯಾವಪಟ್ಟಣ ಕಂಚಗಳ್ಳಿ
ಆ ಏಳುಗ್ರಾಮದಲ್ಲಿ ಒಕ್ಕಲೆತ್ತಿ ಬಾಳುತ್ತಾವ್ನೆ

ಒಕ್ಕಲೆತ್ತಿ ಬಾಳುತ್ತಾವ್ನೆ ಎಂದರೆ ಮಡಿ ಬಟ್ಟೆಯನ್ನು ಕೊಟ್ಟು ಮೈಲಿಗೆ ಬಟ್ಟೆಯನ್ನು ತಕ್ಕೊಂಡು ಬಂದು ಕೊತ್ತಿಮುಳ್ಳು ಕಾರೇಮುಳ್ಳನ ಒಟ್ಕೊಂಡು ಉಬ್ಬೇ ಕಸ್ಕೊಂಡು ಬುಗ್ಗಬುಗ್ಗನೇ ಊದುತ್ತಿದ್ದಾನೆ ಮಡುವಾಳ ಮಾಚಪ್ಪ. ಚೆಪ್ಪುಮಣ್ಣು ಕೆಮ್ಮಣ್ಣು ಎರೆಮಣ್ಣು ಬಟ್ಟೆಗೆ ಹಾಕ್ಕೊಂಡು ಉಬ್ಬೆಯಲ್ಲಿ ಬೇಯಿಸಿ ಒಗದ್ಬಿಟ್ಟರೆ ಘಮಘಮ ಅನ್ನುವುದಂತೆ.

ಮಾಚದೇವರ ಮನೆಗೆ ನಮ್ಮ
ಮಾಯ್ಕಾರ ದಯಮಾಡುತ್ತಾವ್ರೆ
ಸಿದ್ದಯ್ಯ ಸ್ವಾಮಿ ಬನ್ನಿ
ಕಂಡಾಯದ ಒಡೆಯ . . . .
ಲಿಂಗಯ್ಯ ದಯ ಮಾಡೋ . .
ಕುರುಬೇಗೌಡರ ಮನೆಯ ಬಿಟ್ಟು
ನಮ್ಮ ಮಾಚದೇವರ ಮನೆಗೆ
ನಮ್ಮ ಮಾಯ್ಕಾರ ದಯಮಾಡುತ್ತಾರೆ
ಸಿದ್ದಯ್ಯ ಸ್ವಾಮಿ ಬನ್ನಿ

ಪರಂಜ್ಯೋತಿ ಲಿಂಗಯ್ಯೋ
ನೀವೇ ಬನ್ನಿ . . . .
ಕಂಡಾಯ ಹೊತ್ಕೊಂಡು . . .
ತಂಬೂರಿ ಹೊತ್ಕೊಂಡು . .. ..
ಮಾಚಪ್ಪನ ಮನೆಯ ಮುಂದೆ
ದಾನ ಧರ್ಮ ಸಾರುತ್ತಾರೆ . . .
ಲಿಂಗಪ್ಪ ನೀವೇ ಬನ್ನಿ . . ..
ಹರನದೇವರ ಭಿಕ್ಷಾ .. . .
ಗುರುದೇವರ ಭಿಕ್ಷಾ ,, . .
ಸಾಧು ಸಂಗಯ್ಯನ ಭಿಕ್ಷಾ . .
ಜ್ಯೋತಿಲಿಂಗಯ್ಯನ ಭಿಕ್ಷಾ ..
ಕಲ್ಯಾಣದೇವರ ಭಿಕ್ಷಾ . . .
ಕೈಲಾಸದೇವರ ಭಿಕ್ಷಾ .. ..
ಮುಮ್ಮೂರ್ತಿಗಳ ಭಿಕ್ಷಾ . .
ಮುಕ್ಕಣ್ಣಯ್ಯನ ಭಿಕ್ಷಾ .. . .
ಮಾಚಯ್ಯನ ಮನೆಯಲ್ಲಿ ..
ಮೊದಲ ಭಿಕ್ಷಾ ಅಂದಾರಂತೆ
ಸಿದ್ದಯ್ಯ ಸ್ವಾಮಿ ಬನ್ನಿ

ಮಾಚಪ್ಪನ ಮನೆಯ ಒಳಗೆ ಮೊದಲು ದಾನ ಅಂತ್ಹೇಳಿ ದಾನ ಸಾರಿದರು ಪರಂಜ್ಯೋತಿ ನನ್ನಪ್ಪ .. . . ದಾನಸಾರಿದರೂ ಮಡುವಾಳ ಮಾಚಪ್ಪನಿಗೆ ಗ್ಯಾನವಿಲ್ಲ ಮಾಚಯ್ಯನು ಉಬ್ಬೆ ಕಸ್ಕೊಂಡು ಕೊತ್ತಿಮುಳ್ಳು ಕಾರೇಮುಳ್ಳಿನ ಸೌದೆಯನ್ನು ಹಾಕಿ ಬುಗ್ಗಾಬುಗ್ಗನೇ ಊದುತ್ತಿದ್ದಾನೆ ಶರಣ. ಅಷ್ಟೋತ್ತು ನೋಡಿದರೂ ಇಷ್ಟೋತ್ತು ನೋಡಿದರು ಸ್ವಾಮಿ ಪರಂಜ್ಯೋತಿಯವರು. ಕಪ್ಪುಧೂಳ್ತವನ್ನು ತೆಗೆದು ಅಂಗೈ ಮೇಲೆ ಮಾಡಿಕೊಂಡು ಸ್ವಾಮಿಯವರು ಉಬ್ಬೆ ಒಲೆಗೆ ಉಘೋ ಅಂತ ಉರುಬಿದರು. ಅಪ್ಪನ ಮನೆಯ ಧೂಳ್ತ ಉಬ್ಬೆ ಒಲೆಯ ಮೇಲೆ ಬಿದ್ದೇಟಿಗೆ

ದಗದಗನೇ ಕತ್ತಿತ್ತಲ್ಲೋ
ದಿಗದಿಗನೇ ಉರಿಯಿತಲ್ಲೋ
ಸಿದ್ದಯ್ಯ ಸ್ವಾಮಿ ಬನ್ನಿ . ..
ಕತ್ತಿದಂತಹ ಒಲೆಯ ನೋಡಿ
ಆ . .. ಆ. . .ಆ. . . ..ಆ
ಉಬ್ಬೆ ಒಲೆಯ ನೋಡಿ ರಪ್ಪನೆ
ಮನಗೋದರಂತೆ ಮಾಚಪ್ಪ

ಸಿದ್ದಯ್ಯ ಸ್ವಾಮಿ ಬನ್ನಿ. . . .
ಮಾಚಯ್ಯ ಶರಣ . . . .ಆ ..
ಗುರುಲಿಂಗಯ್ಯ ದಯಮಾಡೋ

ಕತ್ತಂತ ಉಬ್ಬೆ ಒಲೆ ನೋಡಿ ರಪ್ಪನೇ ಮನಗೋದ್ನ ಮಡಿವಾಳ ಮಾಚಪ್ಪ. ಉಬ್ಬೆ ಒಲೆ ದಗದಗನೇ ಕತ್ತಿ ದಿಗದಿಗನೇ ಉರುದೋದವಂತೆ. ಒಳಗೆ ಇದ್ದ ಬಟ್ಟೆ ಎಲ್ಲ ಸುಟ್ಟು ಬೂದಿ ಆಗೋಯ್ತು ಅಂತ ಮಡಿವಾಳ ಮಾಚಯ್ಯನಿಗೆ ಚಿಂತೆ ಬಂದ್ಬುಡ್ತು. ನಾನು ಏಳು ಹಳ್ಳಿಗಳಿಂದ ಮುಟ್ಟುತಟ್ಟಿನ ಬಟ್ಟೆಯನ್ನು ಹೊತ್ಕೊಂಡು ತರಬೇಕಾದರೆ ಯಾವ ಮರದ ಮೇಲೆ ಕಳಿತ್ತದ್ದೋ ಕಾಣೆ ಹುಣಸೆಮರದ ಮೇಲೆ ಕುಳಿತ್ತಿದ್ದೋ ಕಾಣೆ. ಒಂಬತ್ತು ಗಾಳಿಗಳು ಉಬ್ಬೆ ಒಲೆ ಒಳಗಡೆ ಸೇರ್ಕೊಂಡು ಒಂದು ಹತ್ತದೆ ಒಂದು ಕೆಡುಸುತ್ತದೆ ಒಂದು ನೊರ ನೊರನೇ ಹಲ್ಲು ಕಡಿಯುತ್ತದೆ. ನಾಳೆ ಶರಣರು ಬಟ್ಟೆ ತಂದು ಕೊಡು ಅಂತ ಕೇಳಿದರೆ ಯಾವ ಬಟ್ಟೆ ಕೊಡಲಿ ಎಂದು ಚಿಂತೆ ಮಾಡುತ್ತಿದ್ದಾನೆ ಮಾಚಯ್ಯ. ಬಟ್ಟೆ ಮಾತು ಹಾಗಿರಲಿ ನನ್ನ ಮಾತು ಹಾಗಿರಲಿ. ಗಾಳಿಗಳಿಗೆ ಹೆಂಗಸರನ್ನು ಕಂಡರೆ ಭಾಳ ಪ್ರೀತಿ. ನನ್ನ ಮಡದಿಗೆ ಸೇರ್ಕೋಬಿಟ್ಟರೆ ಗತಿ ಏನು.

ಉಬ್ಬೆ ಒಲೆ ಬಿಟ್ಟು ಮಡುವಾಳ ಮಾಚಯ್ಯ
ಓಡೋಡಿ ಬಂದು ಮಾದೇವಿ ಅಂತ
ಕೂಗ್ಕೊಂಡು ಬಂದನಂತೆ ಮಾಚಯ್ಯ

ಗಂಡ ಕೂಗಿದ ಕೂಗನ್ನು ಕೇಳಿ ಮಡುವಾಳ ಮಾಚಯ್ಯನ ಹೆಂಡ್ತಿ ಯಾಕ ಸ್ವಾಮಿ ಬಟ್ಟೆಯನ್ನೆಲ್ಲ ಬೇಯಿಸಿದರಾ ಸ್ವಾಮಿ. ಶರಣರ ಬಟ್ಟೆಗಳನ್ನು ಉಬ್ಬೆ ಒಲೆಯಲ್ಲಿ ಹಾಕ್ಕೊಂಡು ಊದುತ್ತಿರಬೇಕಾದರೆ ಒಂಬತ್ತು ಗಾಳಿಗಳು ಬಂದು ಕುಣಿದಾವೆ. ಒಂದು ಹತ್ತುತ್ತೆ ಒಂದು ಕೆಡಿಸುತ್ತದೆ ಒಂದು ನೊರನೊನೇ ಹಲ್ಲು ಕಡಿಯುತ್ತವೆ. ಗಂಡನ ಮಾತನ್ನು ಕೇಳಿ ಮಲ್ಲಗ ಮಾದೇವಿ ಸ್ವಾಮಿ ಗಾಳಿಗಳು ಒಳ್ಳೆ ಘಳಿಗೆಯಲ್ಲಿ ಮನೆಗೆ ಬಂದರೆ ಹಾಲುಸಾಗರ ಮಾಡುತ್ತದೆ. ಕೆಟ್ಟಘಳಿಗೆಯಲ್ಲಿ ಬಂದರೆ ಮನೆಯನ್ನು ಹಾಳು ಮಾಡುತ್ತದೆ. ಅದಕ್ಕೆ ಹೇಳೋದು "ಕಳ್ಳ ನುಗ್ಗಿದ ಮನೆಯಲ್ಲಿ ಸೊಲ್ಲನ್ನಾದರೂ ಉಳಿಯುತ್ತದೆ ಗಾಳಿ ನುಗ್ಗಿದ ಮನೆಯಲ್ಲಿ ಸೊಲ್ಲು ಉಳಿಯಲ್ಲವಂತೆ" ಅದಕ್ಕೆ ಒಳ್ಳೆ ಘಳಿಗೆ ಕೆಟ್ಟಘಳಿಗೆ ಅಂತಿದೆ. ಒಕ್ರಳ್ಳಿ ಗ್ರಾಮದಲ್ಲಿ ಶಾಸ್ತ್ರ ಹೇಳುವ ಜ್ಯೋಯಿಸರು ಇದ್ದಾರೆ ಹೋಗಿ ಕೇಳ್ಕೊಂಡು ಬನ್ನಿ ಸ್ವಾಮಿ ಎಂದರು.

ಸ್ವಾಮಿಯವರು ಮಾಚಯ್ಯನಿಗೆ ಅಡ್ಡಾಗಿ ದಾರಿಯಲ್ಲಿ ನಿಂತ್ಕೊಂಡರಂತೆ. ಬುದ್ಧಿ ತಾವು ಎಂದು ಕೇಳಿದಕ್ಕೆ ಮಾಚಯ್ಯ ಬುದ್ದಿ ಒಕ್ರಳ್ಳಿ ಗ್ರಾಮಕ್ಕೆ ಶಾಸ್ತ್ರ ಕೇಳಕ್ಕೆ ಹೋಗುತ್ತಿದ್ದೀನಿ ಸ್ವಾಮಿ. ಯಾಕೋ ಮಾಚಯ್ಯ. ಬುದ್ದಿ ನಮ್ಮ ಮನೆಯಲ್ಲಿ ಏನೋ ತೊಂದರೆ ಆಗಿದೆ ಅದಕ್ಕೆ ಸಾಸ್ತ್ರ ಕೇಳಕ್ಕೆ ಹೋಗುತ್ತಾ ಇದ್ದೀನಿ. ಅಯ್ಯೋ ಮಾಚಯ್ಯ ಶಾಸ್ತ್ರ ಸೂಸ್ತ್ರ ಎಂದರೆ ಅರ್ಥವೇನು ಮಾಚಯ್ಯ. ನಿಮ್ಮ ಮನೆಗೆ ಬಂದಿರುವಂತ ಶೂನ್ಯವನ್ನು ನಾವು ಕಳಿತ್ತೀವಿ ಬಾರಪ್ಪ. ನಮ್ಮ ಮನೆಯ ಶೂನ್ಯವನ್ನು ಕಳಿಯುತ್ತೀರಾ ಸ್ವಾಮಿ. ಕಳಿತ್ತೀವಿ

ಬಾರೋ. ನೋಡಪ್ಪ ಉತ್ತರದೇಶದಿಂದ ಬಂದಿರುವ ಕಂಡಾಯಕ್ಕೂ ತಂಬೂರಿಗೂ ಸ್ವಲ್ಪ ಜಾಗ ಕೊಟ್ಟುಬಿಡಪ್ಪ ನಿಮ್ಮ ಮನೆಯ ಶೂನ್ಯ ಕಳಿಯುತ್ತೀವಿ ಎಂದರು ಸ್ವಾಮಿಯವರು. ಅದಕ್ಕೆ ಮಡುವಾಳ ಮಾಚಯ್ಯ ಹೇಳುತ್ತಾವ್ನೆ ಬುದ್ಧಿ ನಮ್ಮ ಮನೆಯಲ್ಲಿ ಜಾಗ ಕೊಡು ಅಂತ ಕೇಳುತ್ತಾ ಇದ್ದೀಯಲ್ಲ ಬುದ್ಧಿ. ನೀವು ನೋಡಿದರೆ ಕಾವಿ ಕಾಮಂಡಲ ರುದ್ರಾಕ್ಷಿ ಬದ್ರಾಕ್ಷಿ ಲಿಂಗ ಧರಿಸಿರುವ ಸ್ವಾಮಿಗಳು ನೀವು.

ನಾನು ನೋಡಿದರೆ ಮುಟ್ಟುತಟ್ಟಿನ
ಬಟ್ಟೆ ಒಗೆಯು ಶರಣ ಬುದ್ಧಿ
ಆ . . . . .ಆ .. . . ಆ. . .
ಲಿಂಗಾಯಿತರ ಮನೆಗೆ ಹೋದರೆ
ಲಿಂಗ ಪೂಜೆ ಆಗುತ್ತದೆ
ಸಿದ್ದಯ್ಯ ಸ್ವಾಮಿ ಬನ್ನಿ . . . .
ಶಿವ ಭಕ್ತರ ಮನೆಗೆ ಹೋದರೆ
ಶಿವ ಪೂಜೆ ಆಗುತ್ತದೆ
ಸಿದ್ದಯ್ಯ ಸ್ವಾಮಿ ಬನ್ನಿ
ಕಂಡಾಯದ ಒಡೆಯ
ಮುಟ್ಟು ತಟ್ಟಿನ ಮನೆಯ
ಒಳಗೆ ನೀವು ಬರಬಹುದಾ
ಸಿದ್ದಯ್ಯ ಸ್ವಾಮಿ ಬನ್ನಿ
ಗುರುದೇವಾ .. . .ಆ . ..
ಓಹೂ . .. .
ಲಿಂಗಯ್ಯ ದಯ ಮಾಡೋ

ಮುಟ್ಟು ತಟ್ಟಿನ ಬಟ್ಟೆಯವರ ಮನೆಗೆ ನಿಮ್ಮಂತ ದೇವರು ಬರಬಹುದಾ ? ಅಯ್ಯೋ ಮಾಚಯ್ಯ ಉತ್ತರದೇಶದಿಂದ ನಾವು ದಕ್ಷಿಣ ರಾಜ್ಯಕ್ಕೆ ನಾವು ಬರುತ್ತಿರಬೇಕಾದರೆ ಕುರುಬರ ಮನೆ, ಕುಂಬಾರರ ಮನೆ, ಅರಸುಗಳ ಮನೆ, ಬ್ರಾಹ್ಮಣರ ಮನೆ, ಲಿಂಗಾಯಿತರ ಮನೆ ಕುಲ ಹದಿನೆಂಟು ಜಾತಿ ಒಳಗೆ ಲಿಂಗಭೇದವಿಲ್ಲದೆ ಊಟ ಮಾಡುವವರು. ಮುಟ್ಟಿನ ಬಟ್ಟೆ ಒಗೆಯು ಮಡಿವಾಳಿಗೆ ಈ ಮುಟ್ಟಿನ ಗುಟ್ಟು ಗೊತ್ತಾಗಿಲ್ಲವಲ್ಲೋ ? ಮಾಚಯ್ಯ ಮುಟ್ಟಿಂದಲೇ ಮರಣ, ಮುಟ್ಟಿಂದಲೇ ಜನನ, ಇರೆಂಬತ್ತು ಕೋಟಿ ಜೀವ ರಾಶಿಗಳು ಮುಟ್ಟಿಂದಲೇ ಹುಟ್ಟುತ್ತದೆ ಮುಟ್ಟಿಂದಲೇ ಸಾಯುತ್ತದೆ. ಹೆತ್ತರು ಮುಟ್ಟು ಅಂತಾವ್ರೆ. ಸತ್ರು ಮುಟ್ಟು ಅನ್ನುತ್ತಾವ್ರೆ. ಮಾಚಯ್ಯ ನೀ ಮುಟ್ಟಿಲ್ಲದ ಸ್ಥಳ ಸ್ವಲ್ಪ ಬುಡಿಸಿ ಹೇಳು ಎಂದರು ಸ್ವಾಮಿಯವರು. ಆಗಂದ ಮೇಲೆ ನಮ್ಮ ಮನೆಗೆ ಬರುತ್ತೀರಾ ಬುದ್ಧಿ. ಹೌದು ಮಾಚಯ್ಯ. ಬುದ್ಧಿ ಮನೆ ಕಟ್ಟಿರಬಹುದು ನಾನು ? ಮನೆಗೆ ಯಜಮಾನನು ಆಗಿರಬಹುದು ನಾನು ? ನನ್ನ ಮನೆಯ ಒಳಗೆ ಸೂತ್ರದ ಗೊಂಬೆ ಮಾದೇವಿ

ಇದ್ದಾಳೆ. ನನ್ನ ಮಡದಿ ಕೇಳ್ಕೊಂಡು ಬತ್ತೀನಿ ಅವಳು ಕೊಡಿ ಎಂದರೆ ಕೊಡುತ್ತೀನಿ ಇಲ್ಲ ಎಂದರೆ ಕೊಡುವುದಿಲ್ಲ ಬುದ್ಧಿ ಎಂದರು.

ಈ ಮಡದಿ ಮಾತ ಕೇಳುವನ
ಸತ್ಯ ಈಗತಾನೇ ನೋಡಬೇಕು
ಸಿದ್ದಯ್ಯ ಸ್ವಾಮಿ ಬನ್ನಿ

ಬಾಳೋದಕ್ಕೆ ಬದುಕುವುದಕ್ಕೆ ಹೆಂಗಸರ ಕೈಯಲ್ಲಿ ಬೀಗ ಕೊಡುವುದು ಜಾಸ್ತಿ. ಮಾದೇವಿ ಎಂದು ಮೂರು ಸರತಿ ಕೂಗುತ್ತಾರೆ ಮಲ್ಲಿಗಮಾದೇವಿ ಓಡೋಡಿ ಬಂದು ಸ್ವಾಮಿ ಒಕ್ಕಲ್ಲಿಗೆ ಸಾಸ್ತ್ರ ಕೇಳಕ್ಕೆ ಹೋಗನಿಲ್ಲವೇ ಎಂದು ಕೇಳಿದರಂತೆ. ಅಯ್ಯೋ ಮಾದೇವಿ ನಮ್ಮ ಮನೆಯ ಮುಂದುಗಡೆ ಒಬ್ಬ ಸನ್ಯಾಸಿ ನಿಂತಿದ್ದಾರೆ ಅವರು ನಮ್ಮ ಮನೆಯಲ್ಲಿ ಜಾಗ ಕೇಳುತ್ತಾವ್ರೆ. ಜಾಗಕೊಡೋದೋ ಬೇಡವೋ ಮಾದೇವಿ ಎಂದು ಕೇಳಿದರು ಮಡುವಾಳ ಮಾಚಯ್ಯ. ಸ್ವಾಮಿ ಅವರು ನಮ್ಮ ಮನೆಗೆ ಬರೋದು ಹೆಚ್ಚೋ ನಾವು ಜಾಗ ಕೊಡೋದು ಹೆಚ್ಚೋ ಎಂದರು ಮಲ್ಲಿಗೆಮಾದೇವಿ. ಒಂದೇ ದುಡದಲ್ಲಿ ಜಾಗ ಕೊಡಿ ಎಂದು ಹೇಳಿದ್ದಾಳೆ ಮಾದೇವಮ್ಮ. ಮುಟ್ಟು ತಟ್ಟಿನ ಬಟ್ಟೆಯನ್ನೆಲ್ಲ ಒಂದೆಡೆ ಗುಡ್ಡೆ ಹಾಕಿ ಮನೆಯನ್ನು ಗೂಡಿಸಿ ರಂಗೋಲಿಯನ್ನು ಹಾಕಿ ಉಬ್ಬೆ ಒಲೆಯನ್ನು ಶೃಂಗರಿಸಿದ್ದಾಳೆ ತಾಯಿ.

ಬಡವರ ಮನೆಗೆ ನಿಮ್ಮ
ಬಲದ ಪಾದ ಬರಲಪ್ಪ
ಸಿದ್ದಯ್ಯ ಸ್ವಾಮಿ ಬನ್ನಿ
ಮಾಚಯ್ಯ ಮುಂದ್ ಮುಂದೆ
ಸ್ವಾಮ್ಗೊಳು ಹಿಂದ್ ಹಿಂದೆ
ನಮ್ಮ ಮಾಚದೇವರ ಮನೆಗೆ
ನಮ್ಮ ಮಾಯ್ಕಾರ ದಯಮಾಡುತ್ತಾರೆ
ಸಿದ್ದಯ್ಯ ಸ್ವಾಮಿ ಬನ್ನಿ
ಮಂಟೇದಾ ಲಿಂಗಯ್ಯ . .. .
ನೀವೇ ಬನ್ನಿ . . . .
ಮಾಚದೇವರ ಮನೆಗೆ . . . . . .
ಮಾಯ್ಕಾರ ಭಮದಾವ್ರೆ . . . . .
ಕಂಡಾಯ ಹೊತ್ಕೊಂಡು . . . ..
ತಂಬೂರಿ ಹೊತ್ಕೊಂಡು. . . . .
ಕಂಡಾಯದ ಒಡೆಯ . . . .
ಮಂಟೇದಲಿಂಗಯ್ಯ . . . .
ಉಬ್ಬೆ ಒಲೆಗೆ ನಮ್ಮ ದೇವರೆ

ದಯಮಾಡುತ್ತಾರೆ .. . .
ಸಿದ್ದಯ್ಯ ಸ್ವಾಮಿ ಬನ್ನಿ . . .. .
ಉಬ್ಬೆ ಒಲೆಯ ನೋಡಿ
ಹಾಸಿದರು ಹುಲಿ ಚರ್ಮ
ಹರಡಿದರು ವಿಭೂತಿ
ಕಂತೆ ಬೊಂತೆಯ ತೆಗೆದು
ಮುಂದಗಡೆ ಮಡಿಕೊಂಡು
ಉಬ್ಬೆ ಒಲೆಯ ಮೇಲೆ
ಕಂಡಾಯ ನೆಟ್ಟು .. ..
ಧರೆಗೆದೊಡ್ಡವರು . . . .
ಉಬ್ಬೆ ಒಲೆಯ ಮೇಲೆ ಘನಮೂರ್ತ
ಮಾಡುತ್ತಾವ್ರೆ .. . .
ಸಿದ್ದಯ್ಯ ಸ್ವಾಮಿ ಬನ್ನಿ .. . .

ಉಬ್ಬೆ ಒಲೆಯ ಮೇಲೆ ನೆಲ ಮೂರ್ತ ಮಾಡುದರು ಕಂಡಾಯದ ಮೂರ್ತಿ ಧರೆಗೆದೊಡ್ಡವರು. ಬುದ್ದಿ ನಮ್ಮ ಮನೆಗೆ ಬಂದಿದ್ದೀರಿ ನಿಮ್ಮ ಕಂಡಾಯ ತಂಬೂರಿಗೆ ಪೂಜೆ ಮಾಡಿಬಿಡುತ್ತೀನಿ ಎಂದ ಮಾಚಪ್ಪ. ಏನು ಪೂಜೆ ಮಾಡುತ್ತೀಯಪ್ಪ ಶರಣ. ನೇಲಕ್ಕಿ ನೆಲಗಡಲೆ ಜೇನುತುಪ್ಪ ಕಳ್ಳೇಪುರಿ ಫಲಾರ ಮಾಡುಬುಡುತ್ತೀನಿ ಬುದ್ದಿ ಎಂದ ಮಾಚಪ್ಪ. ಅಯ್ಯೋ ಮಾಚಯ್ಯ ಕಂಡಾಯಕ್ಕೆ ಕಳ್ಳೇಪುರಿ ಫಲಾರ ಮಾಡುವುದು ಯಾವಾಗ ಗೊತ್ತಾ ? ಸಂಜೆನಾಗ ಪೂಜೆ ಆದ ಮೇಲೆ ಬೆಳಿಗ್ಗೆನಾಗ ಮನೆಯಿಂದ ಹೋಗುತ್ತದೆಯಲ್ಲಪ್ಪ ಕಂಡಾಯ ಶುಸ್ತು ಆಗಬಾರದು ಅಂತ್ಹೇಳಿ ಫಲಾರ ಮಾಡುತ್ತಾರೆ ಕಾಣೋ. ಮಾಚಯ್ಯ ನಿಮ್ಮ ಮನೆಯಲ್ಲಿ ಊಟ ರೆಡಿಮಾಡ್ಬುಡಿ ಎಂದಾಗ ಮಾಚಯ್ಯ ಬುದ್ದಿ ನಮ್ಮ ಮನೆಯಲ್ಲಿ ಊಟ ಮಡುತ್ತೀರಾ ಬುದ್ದಿ. ಹೌದು ಮಾಚಪ್ಪ. ಕುಲ ಹದಿನೆಂಟು ಜಾತಿ ಒಳಗೆ ಭೇದಭಾವವಿಲ್ಲದೆ ಊಟ ಮಾಡುವ ಸ್ವಾಮಿಗಳು ನಾವು ಎಂದರು. ಅದಕ್ಕೆ ಬೊಪ್ಪೇಗೌಡಪುರದಲ್ಲಿ ಭಿನ್ನಭೇದವಿಲ್ಲದ ಮಠ ಅಂತ ಬೋರ್ಡ್ ಹಾಕಿದ್ದಾರೆ. ಬುದ್ದಿ ಅನ್ನ ಸಾರು ಪಾಯಸ ಮಾಡ್ಬುಡ್ತೀನಿ ಹಪ್ಪಳ ಸಂಡಿಗೆ ಉಪ್ಪಿನಕಾಯಿ ಗೊಜ್ಜು ಮಾಡಬುಡುತ್ತೀನಿ ಸ್ವಾಮಿ. ಅಯ್ಯೋ ಮಾಚಯ್ಯ ಉತ್ತರದೇಶದಿಂದ ನಾವು ದಕ್ಷಿಣ ರಾಜ್ಯಕ್ಕೆ ಬರುವಾಗ ಕುರುಬರ ಮನೆ, ಕುಂಬಾರರ ಮನೆ, ಬ್ರಾಹ್ಮಣರ ಮನೆ, ಲಿಂಗಾಯತರ ಮನೆ, ಅರಸುಗಳ ಮನೆ ಕಜ್ಜಾಯ ತುಪ್ಪದ ಊಟ ಮಾಡಿ ನಮ್ಮ ನಾಲಿಗೆ ಸಪ್ಪೇಹಿಡಿದೋಗ್ಬಿಟ್ಟಿದೆ. ಅದಕ್ಕೆ ಮಾದಯ್ಯ ನಿನ್ನ ಮನೆಯ ಒಳಗೆ ಖಾರದ ಅಡಿಗೆ ಆಗಬೇಕು ಅಂದರಂತೆ. ಬುದ್ದಿ ಖಾರದಡಿಗೆ ಅಂದ್ರೆ ಏನು ಎಂದು ಕೇಳಾವ್ನೆ ಮಾಚಪ್ಪ. ಖಾರದಡಿಗೆ ಎಂದ್ರೆ ಮಾಂಸದ ಅಡಿಗೆ ಕಾಣೋ. ಬುದ್ದಿ ಮಾಂಸ ತಿನ್ನುತ್ತೀರಾ ? ಹೌದು ಕಾಣೋ. ಮಾಂಸ ಮಾಂಸಕ್ಕೆಲ್ಲ ಯಾವ ಮಾಂಸ ರುಚಿ ಎಂದು ಕೇಳಿದರು ಧರೆಗೆದೊಡ್ಡವರು.

ಕೋಳಿ ಮಾಂಸ ತಿನ್ನುತ್ತಾವ್ರೆ
ಕೊತ್ತಿ ಮಾಂಸ ತಿನ್ನುತ್ತಾವ್ರೆ
ಕಾಡಿನ ಪ್ರಾಣಿಗಳನ್ನು ಬೇಟೆ
ಯಾಡಿ ತಿನ್ನುತ್ತಾವ್ರೆ
ಆಡಿನ ಮಾಂಸ ರುಚಿ ಅನ್ನುವುದಕ್ಕೆ
ಹೋಗಿ ನಾಲಿಗೆ ಹೊರಳಿಲ್ಲ
ಈ ಮಾಂಸ ಮಾಂಸಕ್ಕೆಲ್ಲ
ಈ ಮನುಷ್ಯನ ಮಾಂಸ ರುಚಿಯಪ್ಪ
ಸಿದ್ದಯ್ಯ ಸ್ವಾಮಿ ಬನ್ನಿ
ಮನುಷ್ಯರ ಮಾಂಸ ರುಚಿ ಅಂದಮೇಲೆ
ಏಳು ವರ್ಷ ಮೇಲ್ಪಟ್ಟಿರಬಾರದು
ಏಳು ವರ್ಷ ಕೀಳ್ಪಟ್ಟಿರಬಾರದು
ಒಬ್ಬತಾಯಿಗೆ ಒಬ್ಬನೇ ಮಗನಾಗಿರಬೇಕು
ಅಂತ ಮಗನ ಕೂಯ್ಯಬೇಕು
ನಮ್ಮ ಕಂಡಾಯಕ್ಕೆ ಎಡೆಯ ಮಾಡಬೇಕು
ಸಿದ್ದಯ್ಯ ಸ್ವಾಮಿ ಬನ್ನಿ

ಮಾಚಪ್ಪ ಏಳು ವರ್ಷ ಮೇಲ್ಪಟ್ಟಿರಬಾರದು ಏಳು ವರ್ಷ ಕೀಳ್ಪಟ್ಟಿರಬಾರದು ಒಬ್ಬ ತಾಯಿಗೆ ಒಬ್ಬ ಮಗನಾಗಿರಬೇಕು ಅಂತ ಮಗನನ್ನು ಕೂದು ನಮ್ಮ ಕಂಡಾಯಕ್ಕೆ ಎಡೆ ಮಾಡಬೇಕು. ಆಗ ಮಡುವಾಳ ಮಾಚಯ್ಯನಿಗೆ ಎಲ್ಲೂ ಇಲ್ಲದ ಚಿಂತೆ ಮೂಡಿತು.

ಹಾದಿಯಲ್ಲಿ ಹೋಗುವ ಮಾರವ್ವ
ಮನೆತನಕ್ಕೆ ಬಂದು ಹೋಗವ್ವ
ಅಂದಂಗೆ ಆಯ್ತು . . . .

ಕಂಡವರ ಮಕ್ಕಳ ಕೂದು
ಕಂಡಾಯಕ್ಕೆ ಎಡೆ ಮಾಡಿದರೆ
ಕಂಡವರು ನಮ್ಮನ್ನ ಸುಮ್ಮನೆ
ಬಿಟ್ಟಾರಪ್ಪೋ. . . . .
ಸಿದ್ದಯ್ಯ ಸ್ವಾಮಿ ಬನ್ನಿ . . .

ಮಾದೇವಿ ಸ್ವಾಮ್ಗೋಳು ನನ್ನನ್ನು ಕುರಿತು ಮಾಂಸ ಮಾಂಸಕ್ಕೆಲ್ಲ ಯಾವ ಮಾಂಸ ರುಚಿ ಎಂದು ಕೇಳಿದರು. ನನಗೆ ನಾಲಿಗೆ ಹೊರಳಲಿಲ್ಲ ಮಾಂಸ ಮಾಂಸಕ್ಕೆಲ್ಲ ಮರಿಮಾಂಸ ರುಚಿ ಅನ್ನೋಕ್ಕೆ ಹೋಗಿ ಮನುಷ್ಯನ ಮಾಂಸ ರುಚಿ ಅಂತ ಹೇಳ್ಬಿಟ್ಟೆ ಮಾದೇವಿ. ಅದಕ್ಕೆ ಆ ಸ್ವಾಮಿಗಳು ಹೇಳುತ್ತಿದ್ದಾರೆ ಏಳು ವರ್ಷ ಮೇಲ್ಪಟ್ಟಿರಬಾರದು ಏಳು ವರ್ಷ

ಕೀಳ್ಪಟ್ಟಿರಬಾರದು ಒಬ್ಬ ತಾಯಿಗೆ ಒಬ್ಬ ಮಗನಾಗಿರಬೇಕು ಅಂತ ಮಗನನ್ನು ಕೂದು ಕಂಡಾಯಕ್ಕೆ ಎಡೆಮಾಡಬೇಕಂತೆ ಮಾದೇವಿ.

ಯಾರ ಮಕ್ಕಳ ಕೂದು ನಾವು
ಕಂಡಾಯಕ್ಕೆ ಎಡೆಯ ಮಾಡಬೇಕು
ಸುವ್ವಾ ಬಾ ಚೆನ್ನಾ .. . .
ಅಯ್ಯೋ ಶಿವ್ನೆ . . . .
ಕಂಡವರ ಮಕ್ಕಳ ಕೂದು .. . .
ಕಂಡಾಯಕ್ಕೆ ಎಡೆಯ ಮಾಡಿದರೆ
ಕಂಡವರು ನಮ್ಮ . . . .
ಸುಮ್ಮನೆ ಬಿಡುವರಾ . . ..
ಸುವ್ವಾ ಬಾ ಚೆನ್ನಾ ಅಯ್ಯೋ ಶಿವನೇ

ಕಂಡವರ ಮಕ್ಕಳ ಕೂದು ಕಂಡಾಯಕ್ಕೆ ಎಡೆಮಾಡಿದರೆ ಕಂಡವರು ನಮ್ಮ ಸುಮ್ಮನೇ ಬಿಟ್ಟಾರಾ ? ಸ್ವಾಮಿ. ಪತಿದೇವ ನನ್ನ ಕಂದ ಏಳುವರ್ಷದವನು ಎಳೆಯ ವೀರಣ್ಣ ಪಾಠಶಾಲೆಗೆ ಹೋಗುತ್ತಿದ್ದಾನೆ. ಆ ಮಗನನ್ನು ಕೂದು ಅವರ ಕಂಡಾಯಕ್ಕೆ ಎಡೆ ಮಾಡಿಬಿಡೋಣ ಎಂದಳು ಮಾದೇವಿ.

ಮುತ್ತಿಕ್ಕಿ ಮುದ್ದಾಡಿ . . . . .
ಎತ್ತಿ ಸಾಕಿ ಸಲುಗಿದಂತಹ ಮಗನ
ಕುತ್ತಿಗೆ ಕುಯ್ಯುವಂತ ವಿಧಿವಾಸ
ಕೊಟ್ಟೆಯಪ್ಪ ಗುರುವೇ . .. . .
ಮಂಟೇದಲಿಂಗಯ್ಯ ಆ . .ಆ.
ಶಿವನೆ ಶಂಕರಾ . . . . .

ಮಾಚಪ್ಪ ಮತ್ತು ಮಾದೇವಮ್ಮ ಯಾವ ರೀತಿ ಚಿಂತೆ ಮಾಡುತ್ತಿದ್ದಾಳೆ ಎಂದರೆ

ಒಬ್ಬ ಮಗ ಮಗನಲ್ಲ .. . .
ಒಂದು ಕಣ್ಣು ಕಣ್ಣಲ್ಲ
ಸುವ್ವಾ ಬಾ ಚೆನ್ನಾ . .
ಅಯ್ಯೋ ಶಿವನೇ . . .
ಬಾಳೆಗೆ ಒಂದು ಗೊನೆ . .
ಬಾಳವರಿಗೆ ಒಬ್ಬ ಮಗ
ಸುವ್ವಾ ಬಾ ಚೆನ್ನಾ .. .
ಅಯ್ಯೋ ಶಿವನೇ . . . .
ಹಣೆಯಲ್ಲಿ ಬರೆದ ಬ್ರಹ್ಮ .. . .

ಎಂಥಾ ಬರೆಯ ಬರೆದನಪ್ಪ. . .
ಸುವ್ವಾ ಬಾ ಚೆನ್ನಾ . . . .
ಅಯ್ಯೋ ಶಿವನೇ. . . . .

ಗುರು ಪರಮಾತ್ಮ ಬಾಳೆಗೆ ಒಂದು ಗೊನೆ ಬಾಳುವ ಮನೆಗೆ ಒಂದು ಮಗ ಇಟ್ಕೊಂಡಿದನಲ್ಲ ಶಿವನೇ ಅಂತ್ಹೇಳಿ ಒಬ್ಬ ಮಗ ಮಗನಲ್ಲ ಒಂದು ಕಣ್ಣು ಕಣ್ಣಲ್ಲ ಹಣೆಯಲ್ಲಿ ಬ್ರಹ್ಮದೇವ ಬರೆದಂತಹ ಬರೆ ಎಂದು ಮಾದೇವಮ್ಮ ಮತ್ತು ಮಾಚಯ್ಯ ಇಬ್ಬರೂ ಚಿಂತೆ ಮಾಡುತ್ತಿದ್ದಾರೆ

ಧರೆಗೆದೊಡ್ಡವರು ಈಕಡೆ ತಂದೆ ತಾಯಿಯ ಸತ್ಯವನ್ನು ನೋಡಿದ್ದಾಯ್ತು. ಕಂಡಾಯಕ್ಕೆ ಎಡೆ ಆಗುವ ಮಗನ ಸತ್ಯವನ್ನು ನೋಡಬೇಕು ಅಂತ್ಹೇಳಿ ಸ್ವಾಮಿಯವರು ಉಬ್ಬೆ ಒಲೆಯಿಂದು ಕ್ಷಣದಲ್ಲಿ ಮಾಯವಾದರು ಬೊಮ್ಮಳಾಪುರದ ಪಾಠಶಾಲೆಗೆ. ಪಾಠ ಶಾಲೆಯಿಂದ ಮಕ್ಕಳು ಬರುತ್ತಿರುವ ದೃಶ್ಯವನ್ನು ನೋಡಿ ಧರೆಗೆದೊಡ್ಡವರು.

ಇಷ್ಟು ಮಕ್ಕಳ ಒಳಗೆ .. . ..
ಮಾಚಪ್ಪನ ಮಗನು ಯಾರೋ
ಸಿದ್ದಯ್ಯ ಸ್ವಾಮಿ ಬನ್ನಿ
ತಾತಪ್ಪ ನಾನು ತಾತಪ್ಪ .. . .
ಧರೆಗೆದೊಡ್ಡವರು ಬಳಿಗೆ ಓಡೋಡಿ
ಬರುವುತ್ತಾನೆ .. . .
ಸಿದ್ದಯ್ಯ ಸ್ವಾಮಿ ಬನ್ನಿ

ಮಾಚಪ್ಪನ ಮಗನು ನೀನೇನಪ್ಪ. ನಾನೇ ತಾತಪ್ಪ ವೀರಣ್ಣ. ನಿಮ್ಮ ಮನೆಗಾಣೆ ನಾವು ಬರಬೇಕಾದರೆ ಯಾರೋ ಸ್ವಾಮಿಗಳು ಗಡ್ಡ ಮೀಸೆ ಬುಟ್ಕೊಂಡು ಕಾವಿ ಕಾಮಂಡಲವನ್ನು ಧರಸ್ಕೊಂಡು ರುದ್ರಾಕ್ಷಿ ಬದ್ರಾಕ್ಷಿ ಹೊತ್ಕೊಂಡು ನಿಮ್ಮ ಮನೆ ಮುಂದೆ ನಿಂತಿದ್ದರಪ್ಪ. ಆಗ ನಿನ್ನ ಕೂದು ಆ ಸ್ವಾಮಿಯವರ ಕಂಡಾಯಕ್ಕೆ ಎಡೆ ಪಡಿಸಬೇಕು ಎಂದು ನಿಮ್ಮ ತಂದೆ ತಾಯಿಗಳು ಮಾತಾಡಿಕೊಳ್ಳುತ್ತಿದ್ದರು. ಅದಕ್ಕೆ ಇವತ್ತು ಒಂದು ದಿನ ನಿಮ್ಮ ಮಾವನ ಮನೆಗಾದರೋ ಗುರುಗಳ ಮನೆಗಾದರೋ ಹೊರಟು ಹೋಗಪ್ಪ. ಅದಕ್ಕೆ ಏಳು ವರ್ಷದ ಕಂದ ಎಳೆಯ ವೀರಣ್ಣ ಹೇಳುತ್ತಿದ್ದಾನೆ.

ಒಂಬತ್ತು ತಿಂಗಳು ಹೊತ್ತು ಹೆತ್ತು
ಸಾಕು ಸಲುಹಿರುವ ತಂದೆ ತಾಯಿಗಳ
ಕೈಯಲ್ಲಿ ಪ್ರಾಣ ಹೋದರೆ ತಾತಪ್ಪ
ನನಗೆ ಇದುವೇ ಸ್ವರ್ಗ ಅನ್ನುತ್ತಾವನ್ನಲ್ಲ
ಕಂದ ವೀರಣ್ಣ .. . .

ಈಗಿನ ಮಕ್ಕಳು ಹಂಗಿದ್ದಾರಾ ? ಸ್ಕೂಲಿಗೆ ಫೀಸ್ ಕೊಟ್ಟಿಲ್ಲ ಅಂತಂದ್ರೆ ನಿನ್ನನ್ನೇ ಕೊಂದು ಹಾಕುತ್ತೀನಿ ಎಂದು ಹೇಳುತ್ತಾರೆ. ನಮ್ಮನ್ನು ಹೊತ್ತು ಹೆತ್ತು ಸಾಕಿ ಸಲುಹಿ ಇಷ್ಟು ದೊಡ್ಡವರು ಮಾಡಿದ ಮೇಲೆ ಅಂತವರ ಕೈಲಿ ಪ್ರಾಣ ಹೋದರೆ ಸ್ವರ್ಗ ಅಂದ್ನ ವೀರಣ್ಣ. ಆಗ ಸ್ವಾಮಿಯವರು ಅಲ್ಲಿ ತಂದೆ ತಾಯಿಗಳಲ್ಲಿ ವೈಮನಸ್ಸು ಇಲ್ಲ. ಇಲ್ಲಿ ಮಗನಲ್ಲೂ ವೈಮನಸ್ಸು ಇಲ್ಲ. ನಡೆಯಪ್ಪ ವೀರಣ್ಣ ಅಂತ ಕಳುಗಿದ ಮೇಲೆ ಅಲ್ಲಿಂದ ಮಾಯವಾಗಿ ಉಬ್ಬೆ ಒಲೆಯ ಮೇಲೆ ಕೂತಿದ್ದಾರೆ ಧರೆಗೆದೊಡ್ಡವರು. ಎಡಗೈಲಿ ಸಿಲೇಟು ಬಲಗೈಲಿ ಬಳಪ ಹಿಡ್ಕೊಂಡು ಪಾಠ ಶಾಲೆಯಿಂದ ಬರಬೇಕಾದರೆ ವೀರಣ್ಣ. ಮಗನ ಮಮಕಾರದಲ್ಲಿ ಕತ್ತನ್ನು ಕುಯ್ಯುವುದು ಆಗುವುದಿಲ್ಲವೆಂದು ಬಾಗಿಲ ಮರೆಯಲ್ಲಿ ನಿಂತ್ಕೊಂಡಿದ್ದಾನೆ ಮಾಚಯ್ಯ. ಮಗ ಹೊಸ್ತಿಲಿಗೆ ಬಂದ ತಕ್ಷಣ ಕತ್ತಿಯ ತೆಗೆದು ಮಗನ ಕುತ್ತಿಗೆಯ ಗರಿಗರಿ ಕುಯ್ದುಬಿಡು ಎಂದಾವ್ಳೆ ಮಾದೇವಿ. ಮಡದಿಯ ಮಾತನ್ನು ಕೇಳಿ ಕತ್ತಿಯನ್ನು ಹಿಡ್ಕೊಂಡು ಬಾಗಿಲ ಬಳಿಯಲ್ಲಿ ನಿಂತಿದ್ದಾನೆ ಮಾಚಪ್ಪ.

ಅವ್ವ ಅವ್ವ ಅಂದಾನಂತೆ
ಮೂರುಸಾರಿ ಕೂಗುತ್ತಾನೆ
ಸಿದ್ದಯ್ಯ ಸ್ವಾಮಿ ಬನ್ನಿ
ಅವ್ವ ಅವ್ವ ಅಂತ . . .
ಮೂರುಸಾರಿ ಕೂಗಿದಾಗ
ಹೆತ್ತಂತತಾಯಿ ಮಾದೇವಮ್ಮ
ಅಯ್ಯೋ ಕಂದ ವೀರಣ್ಣ
ನಾಳೆ ಅವ್ವ ಅಂತ
ಕೂಗುವವರು ಯಾರೋ
ಸಿದ್ದಯ್ಯ ಸ್ವಾಮಿ ಬನ್ನಿ
ಅಯ್ಯೋಯ್ಯೋ ಮಗನೇ
ಲಿಂಗಯ್ಯ ದಯಮಾಡೋ
ಅವ್ವ ಅವ್ವ ಅಂತ
ಮೂರು ಸಾರಿ ಕೂಗಿದರೂ
ಮಾತಾಡನಿಲ್ಲ ಅವ್ವ . . .
ಅಪ್ಪ ಅಪ್ಪ ಅಂತ
ಮೂರು ಸಾರಿ ಕೂಗುತ್ತಾನೆ
ಸಿದ್ದಯ್ಯ ಸ್ವಾಮಿ ಬನ್ನಿ
ಅಪ್ಪ ಅಂತ ಕೂಗಿದಾಗ
ಬಾಗಿಲ ಮರೆಯ ಒಳಗೆ
ನಿಂತಿರುವ ಮಾಚಯ್ಯ
ಅಯ್ಯೋ ಕಂದ ವೀರಣ್ಣ

ಅಪ್ಪ ಅಂತ ಬಾಯಿತುಂಬ
ಕೂಗುತ್ತೀಯಲ್ಲೋ ಮಗನೇ
ನಾಳೆ ನನ್ನ ಕಂದ ಅಪ್ಪ
ಅಂತ ಕೂಗವರಾರು
ಸಿದ್ದಯ್ಯ ಸ್ವಾಮಿ ಬನ್ನಿ
ಯಾರ ಮಕ್ಕಳು ಎತ್ತಿ
ಮುತ್ತಿಕ್ಕಿ ಮುದ್ದಾಡಲಪ್ಪ
ಸಿದ್ದಯ್ಯ ಸ್ವಾಮಿ ಬನ್ನಿ
ಅಯ್ಯೋಯ್ಯೋ ಮಗನೇ
ಗುರುಲಿಂಗಯ್ಯ ದಯಮಾಡೋ

ವೀರಣ್ಣ ಅವ್ವ ಅಪ್ಪ ಅಂದರೂ ಯಾರೂ ಮಾತಾಡಲಿಲ್ಲವಂತೆ.ಆಗ ವೀರಣ್ಣ ಅಪ್ಪ ಅಮ್ಮ ಬಟ್ಟೆ ಒಗೆಯುವುದಕ್ಕೆ ಹೋಗಿರಬೇಕು ಎಂದ್ಕೊಂಡನು.

ಬಲದ ಪಾದ ಎತ್ತಿದರಂತೆ
ಹೊಸ್ತಿಲ ಮೇಲೆ ಇಟ್ಟರಂತೆ
ಸಿದ್ದಯ್ಯ ಸ್ವಾಮಿ ಬನ್ನಿ
ಮಗನ ಮುಂದಲೆಯ ಎಡಗೈಲಿ
ಹಿಡ್ಕೊಂಡು ಮಂಡಿ ಮೇಲೆ
ಮಡಿಕೊಂಡು ಮಡುವಾಳ ಮಾಚಯ್ಯ
ಕತ್ತಿಯ ತೆಗೆದಾನಂತೆ ಮಗನ ಕುತ್ತಿಗೆ
ಕೂದಾನಂತೆ . .. .
ಸಿದ್ದಯ್ಯ ಸ್ವಾಮಿ ಬನ್ನಿ .. . . .

ಮಡುವಾಳ ಮಾಚಯ್ಯ ಕತ್ತಿಯ ತೆಗೆದು ಮಗನ ಕುತ್ತಿಗೆಯ ಕೂದಾಗ ರುಂಡ ಬೇರೆ ಮುಂಡ ಬೇರೆ ಆಗ್ಹೋಯ್ತು. ಪ್ರಾಣ ಹೋಗಬೇಕಾದರೆ ಮಗನು ಬಾಯಿಯನ್ನು ಪಕ್ಕಪಕ್ಕನೇ ಬಿಡುತ್ತಿದ್ದಾ. ಅಯ್ಯೊಯ್ಯೋ ಕಂದ ವೀರಣ್ಣ ಎಂದು ಮಗನ ಬಾಯಿಗೆ ಮೂರು ತೊಟ್ಟು ನೀರು ಹಾಕಿದ್ದಾಳೆ ಮಾದೇವಿ. ಮಗನ ಜೊತೆ ಮಾತಾಡುವುದಕ್ಕಾಗದಾಗಲೂ ಕೂಡ ಮಗನ ಮುಕವನ್ನು ನೋಡಿಯಾದರೂ ಕಿಚ್ಚನ್ನು ಕಡಿಮೆ ಮಡಿಕೊಳ್ಳಬೇಕು ಅಂತ್ಹೇಳಿ ತಲೆ ಬುರುಡೆಯನ್ನ ಒಂದು ವಸ್ತ್ರದಲ್ಲಿ ಕಟ್ಟಿ ನೆಲ್ಲಿದಕಾಲಲ್ಲಿ(ಹಗ್ಗದಲ್ಲಿ ಮಾಡಿ ಮೊಸರು ಮಡಕೆ ಇಡುತ್ತಾರೆ ಹಳ್ಳಿ ಕಡೆ) ಇಟ್ಟಿದ್ದಾಳೆ. ಮಗನ ಮಾಂಸವನ್ನು ತುಂಡು ತುಂಡಾಗಿ ಕತ್ತರಿಸಿ ಚನ್ನಾಗಿ ತೊಳೆದು ಮಾದೇವಿಯ ಕೈಗೆ ಕೊಟ್ಟಾಗ, ಮಾದೇವಮ್ಮ ಸ್ನಾನ ಮಡಿಗಳನ್ನು ಮಾಡ್ಕೊಂಡು ಕುಂಬಾರರ ಮನೆಯಿಂದ ಹೊಸ ಮಡಿಕೆಯನ್ನು ತಂದು ಒಲೆಯ ಮೇಲೆ ಮಡಿಗ್ಬಿಟ್ಟು ತಾಯಿ –

ಈರುಳ್ಳಿ ಗುದ್ದಾಕಿ

ಬೆಳ್ಳುಳ್ಳಿ ಚಚ್ಚಾಕಿ
ಮಗನ ಮಾಂಸವನ್ನು
ತಿರುದು ತಿರುದು
ಬೇಯಿಸುತ್ತಾಳೆ
ಮಾದೇವಮ್ಮ ಆಹಾ . . . .
ಲಿಂಗಯ್ಯ ದಯಮಾಡೋ

ತಾಯಿ ಮಾದೇವಮ್ಮ ಮಗನ ಮಾಂಸವನ್ನು ಉಪ್ಪು ಖಾರವನ್ನು ಹಾಕಿ ಹದಗೂಡಿ ಕುಂಬಾರನ ಮನೆಯಿಂದ ಹೊಸ ಮಡಿಕೆಯನ್ನು ತಂದು ಹಾಲಲ್ಲಿ ಅಕ್ಕಿ ಹಾಕಿ ನೀರಲ್ಲಿ ಬೇಳೆ ಸುರ್ರೂ ಹದಗೂಡಿ ಅಡಿಗೆಯನ್ನು ಮಾಡಿ ಅಟ್ಲಮೇಲಿರುವ ಪುಟ್ಟ ಗುಂಬ್ಲವನ್ನು ತೆಗೆದು ತೊಟ್ಟಲ್ಲಿ ನೀರಾಡಿ ಚಿತ್ರಿಸಿ ಪಲ್ಯವನ್ನು ಮಾಡಿ ಹೀಗೆ ತಾಯಿ ಒಂಬತ್ತು ಬಗೆಯ ಅಡಿಗೆಯನ್ನು ಮಾಡಾವ್ಳೆ. ಒಂಬತ್ತು ಬಗೆಯ ಅಡಿಗೆ ರೆಡಿಯಾಗಿದೆ ಇದನ್ನು ನೋಡಿ ಮಾಚಯ್ಯ ಬನ್ನಿ ಸ್ವಾಮಿ ಊಟ ಮಾಡಿ ಎಂದು ಕರೆದಾಗ ಸ್ವಾಮಿಯವರು ಪಂತಿಯಲ್ಲಿ ವಂಚನೆ ಇಲ್ಲದೆ ಊಟ ಬಡಿಸಿದ್ದೀ ಎಂದು ಕೇಳಿದರು ಧರೆಗೆದೊಡ್ಡವರು. ಪಂತಿಯೊಳಗೆ ವಂಚನೆ ಮಾಡಿದವನ ಕೊಂಚ ಕರಣಕ್ಕೆ ಹಾಕಿ ತಿವಿದರೂ ಪಾಪ ವಿಮೋಚನೆ ಆಗುವುದಿಲ್ಲ ಸರ್ವಜ್ಞ ಎಂದು ಹೇಳಿದ್ದಾನೆ. ಇಕ್ಕುವಾಗ ಒಂದೇ ತರ ಇಕ್ಕಬೇಕಂತೆ ಅವರು ಚಿಕ್ಕವರು ದೊಡ್ಡವರು ಅಂತ ಇಲ್ಲ. ಕಂಡಾಯದ ಪಕ್ಕ ನಿಂತ್ಕೊಂಡು ಸ್ವಾಮಿಯವರು ಈ ಮಾಂಸದ ಅಡಿಗೆಯೊಳಗೆ ವಂಚನೆ ಇದೆ ಕಾಣಪ್ಪ ಎಂದರು. ಅಂತ ವಂಚನೆ ಏನು ಬುದ್ದಿ. ಮನುಷ್ಯನ ತಲೆಮಿದುಳಿಗೆ ಹಿಡಿಯುವಂತ ಮಾಂಸ ಯಾವುದು ? ತಲೆ ಮಾಂಸ. ನೀನು ಮಾಡಿರುವ ಅಡಿಗೆ ಒಳಗೆ ಇಲ್ಲವಲ್ಲೋ ಶರಣ ಎಂದು ಕೇಳಿದರು ಧರೆಗೆದೊಡ್ಡವರು. ಅದಕ್ಕೆ ಮಾಚಪ್ಪ ಹೇಳುತ್ತಾವ್ನೆ. ಬುದ್ದಿ ಮಾಂಸ ಕುಯ್ದು ಕೊಟ್ಟವನು ನಾನು ತೊಳೆದು ಕೊಟ್ಟವನು ನಾನು. ಅಡಿಗೆ ಮಾಡಿದವಳು ನನ್ನ ಮಡದಿ ಸ್ವಾಮಿ. ಅದರಿಂದ ನನ್ನ ಮಡದಿಯನ್ನು ಕೇಳ್ಕೊಂಡು ಬರುತ್ತೀನಿ ಎಂದ ಮಾಚಯ್ಯ. ಮಾತು ಮಾತಿಗೂ ಮಡದಿಯನ್ನು ಕೇಳ ಬೇಕು ಅನ್ನುತ್ತಾನಲ್ಲ.

ಈ ಮಡದಿ ಮಾತ ಕೇಳುವನ
ಸತ್ಯ ಈಗ ತಾನೇ ನೋಡಲು ಬೇಕು
ಸಿದ್ದಯ್ಯ ಸ್ವಾಮಿ ಬನ್ನಿ
ಕಂಡಾಯದ ಒಡೆಯ . . . . ಆ ..
ಗುರುಲಿಂಗಯ್ಯ ದಯಮಾಡೋ

ಮಡದಿ ಮಾತ ಕೇಳುವವನ ಸತ್ಯವನ್ನು ಈಗ ಪರಿಸೋಧನೆಯ ಮಾಡಬೇಕು ಅಂತ್ಹೇಳಿ ಧರೆಗೆದೊಡ್ಡವರು ಮೌನವಾಗಿ ಕುಳಿತ್ತಿದ್ದಾರೆ ಉಬ್ಬೆ ಒಲೆಯ ಮೇಲೆ. ಮಾಡುವಾಳ ಮಾಚಯ್ಯ ಓಡೋಡಿ ಬಂದ ಮಡದಿಯ ದಂಡಕ್ಕೆ ಆಗ ಮಾದೇವಮ್ಮ ಸ್ವಾಮಿ ಬಂದವರು ಊಟ ಮಾಡಿದರಾ ? ಛೇ ಮಾದೇವಿ ನಿಮ್ಮ ಸ್ವಾಮಿಗಳ ಮನೆ

ಮಾರೊತ್ತಾಯ್ತು ನಿನ್ನ ಊಟ ಮನೆ ಮಾರೊತ್ತಾಯ್ತು. ಮಗನ ತಲೆಯ ಮಾಂಸ ಏನು ಮಾಡಿದೆ ಮಾದೇವಿ ಎಂದು ಕೇಳಿದನು ಮಾಚಯ್ಯ. ಮಗನ ತಲೆಮಾಂಸವಿಲ್ಲದೆ ಬಂದಿರುವಂತ ಮಾಮುನಿಗಳು ಊಟ ಮಾಡುವುದಿಲ್ಲವಂತೆ ಮಾದೇವಿ. ಮಗನ ತಲೆಯನ್ನ ದಿನ ದರ್ಶನ ಮಾಡಲು ಅಟ್ಲಮೇಲೆ ಮಡಗಿದ್ದೀನಿ ಎಂದಳು ಮಾದೇವಮ್ಮ.

ಆ ಮಗನ ತಲೆಗೂ ಬಂದಿತ್ತಲ್ಲ
ವಿಧಿವಾಸ ಎಂದಳಲ್ಲ ಮಾದೇವಮ್ಮ
ಆ.. . . . .ಆ. . . . . . .
ಪರಶಿವನ ನೆನೆದರಂತೆ ಒಂದೇಟ
ಹೊಡೆದರಂತೆ
ಸಿದ್ದಯ್ಯ ಸ್ವಾಮಿ ಬನ್ನಿ
ಪರಶಿವನ ನೆನೆದು ಒಂದೇಟು
ಹೊಡೆದಾಗ ಸತ್ತೋಗಿದಂತ ಬುರುಡೆ
ಅಮ್ಮ ಅಂತ ಕೂಗಿತಂತೆ
ಸಿದ್ದಯ್ಯ ಸ್ವಾಮಿ ಬನ್ನಿ
ಎರಡು ಏಟು ಹೊಡೆದಾಗ
ಅಪ್ಪ ಅಂತ ಕೂಗಿತ್ತು
ಗುರುವೇ ಮೂರೇಟು ಹೊಡೆದಾಗ
ಪರಂಜ್ಯೋತಿ ಎಂದಿತ್ತಲ್ಲೋ
ಸಿದ್ದಯ್ಯ ಸ್ವಾಮಿ ಬನ್ನಿ
ತಾಯಿ ಮಗನ ತಲೆ ಮಾಂಸವನ್ನ
ನಲ್ಲೆ ಮಾಂಸ ಮಾಡುತ್ತಾಳೆ
ಸಿದ್ದಯ್ಯ ಸ್ವಾಮಿ ಬನ್ನಿ
ಮಗನ ತಲೆಯ ಮಾಂಸವನ್ನು
ಭಂಗಿಯ ಮಾಂಸ ಮಾಡುತ್ತಾಳೆ
ಸಿದ್ದಯ್ಯ ಸ್ವಾಮಿ ಬನ್ನಿ

ಮಗನ ತಲೆ ಮಾಂಸವನ್ನು ಭಂಗಿ ಮಾಂಸವಾಗಿ ಮಾಡಿ ತಂದು ಎಡೆಪಡಿಸಿದಾಗ ಸ್ವಾಮಿಯವರು ಅಪ್ಪ ನಾವು ಊಟ ಮಾಡಬೇಕಾದರೆ ಮೊದಲಿಗೆ ಶಿವಪೂಜೆ ಮಾಡಬೇಕು. ಅನಂತರ ಊಟ ಮಾಡುವುದು. ಶಿವಪೂಜೆ ಮಾಡುವಾಗ ಆಡುವಂತ ಮಕ್ಕ ಓಡೋಡಿ ಬಂದರೆ ಕಪ್ಪುಧೂಳ್ತ ಇಕ್ಕಿ ಆಶೀರ್ವಾದ ಮಾಡಬೇಕು ಕಾಣೋ. ನಿನ್ನ ಮನೆಯ ಒಳಗೆ ಮಕ್ಕಳಿದ್ದರೆ ಬರಮಾಡಪ್ಪ ಎಂದರು ಸ್ವಾಮಿಯವರು. ಅಯ್ಯೋ ನನ್ನಪ್ಪ

ಇರುವ ಒಬ್ಬ ಮಗನ ಕೂದು
ನಿಮ್ಮ ಕಂಡಾಯಕ್ಕೆ ಎಡೆ ಮಾಡಿದಿನಲ್ಲಪ್ಪ

ಇನ್ನೂ ಯಾರ ಮಕ್ಕ ಕರೆದು ಬಾಳಲಿ
ಬದುಕಲಿ ಅಂತ ನಿಮ್ಮ ಕೈಯಾರ
ಕಪ್ಪದೂಳ್ತ ಇಕ್ಕಿಸಲಿ ಗುರುವೇ
ಪರಂಜ್ಯೋತಿ ಆ .. . .ಆ .. . .

ಅಯ್ಯೋ ಮಾಚಯ್ಯ ಮಕ್ಕಳು ಇಲ್ಲದ ಮನೆಯಲ್ಲಿ ನಾವು ಊಟ ಮಡುವುದಿಲ್ಲ ಎಂದು ಎದ್ದು ನಿಂತ್ಕೊಂಡ್ರು ಸ್ವಾಮಿಯವರು. ಹುಟ್ಟಿದ ಕಾಲದಿಂದಲೂ ಸುಳ್ಳು ಹೇಳಿದವನಲ್ಲ ಅಸತ್ಯದ ಕಾಲ ಹೋಗಿದವನಲ್ಲ ಮಾಚಪ್ಪ. ಸ್ವಾಮಿಯವರು ಊಟ ಮಾಡಲಿ ಅನ್ನುವುದಕೋಸ್ಕರವಾಗಿ ಸ್ವಾಮಿ ನಿನ್ನೆ ಬಟ್ಟೆ ಒಗೆಯುತ್ತಿರಬೇಕಾದರೆ ಒಂದೇಟು ಹೊಡೆದುದಕ್ಕೆ ಮುನಿಸ್ಕೊಂಡು ಅವರ ಮಾವನ ಮನೆಗೆ ಹೋಗಿದ್ದಾನೆ ಅವನು ಬರುವುದಕ್ಕೆ ಭಾಳ ಹೊತ್ತು ಆಗುತ್ತದೆ ನೀವು ಊಟ ಮಾಡಿ ಸ್ವಾಮಿ. ಮಾಚಯ್ಯ ಯಾಕೆ ಸುಳ್ಳು ಹೇಳುತ್ತೀಯಾ ? ಆ ಕಡೇಬಾಗಿಲಿನಲ್ಲಿ ನಿಂತ್ಕೊಂಡು ಗಂಡ ಹೆಂಡ್ತಿಯಿಬ್ಬರೂ ಕೂಗರಪ್ಪ. ಅಯ್ಯೋ ಸ್ವಾಮಿ ಸತ್ತೋದಂತ ಮಗ ಕೂಗುದರೆ ಎದ್ದುಬರುತ್ತಾನಾ ? ಇಬ್ರೂ ವೀರಣ್ಣ ವೀರಣ್ಣ ಎಂದು ಕೂಗುತ್ತಿದ್ದಾರೆ ಈಕಡೆ ಧರೆಗೆದೊಡ್ಡವರು ಕಪ್ಪುಧೂಳ್ತವನ್ನು ಮಾಂಸದ ಅಡಿಗೆಯ ಮೇಲೆ ಪಿಡಿದಾಗ ಸತ್ತೋದಂತಹ ಮಗನನ್ನು ಪಡೆದರಂತೆ ಧರೆಗೆದೊಡ್ಡವರು.

ಎದ್ದಂತಹ ವೀರಣ್ಣ ಧರೆಗೆದೊಡ್ಡವರ ಪಾದಕ್ಕೆ ನಮಸ್ಕಾರ ಮಾಡುತ್ತಿದ್ದಾನೆ ಆಗ ಗಂಡ ಹೆಂಡ್ತಿಯರಿಬ್ಬರೂ ಸತ್ತೋದ ಮಗನನ್ನು ಪಡೆದು ಕೊಟ್ಟಿದ್ದಕ್ಕೆ ನಿಮಗೆ ಎಂದು ದಯಪಾಲಿಸಿದ್ದಾರೆ.

ನಾಳೆ ಶಿವರಾತ್ರಿ ಬಾಗಿಲಿನಿಂದ
ಯುಗಾದಿ ಬಾಗಿಲವರೆಗೂ
ಕಪ್ಪಡಿ ಕೈಲಾಸದಲ್ಲಿ ತಿಂಗಳ
ಜಾತ್ರೆ ಆಯ್ತದೆ ನಮ್ಮ ರಾಚಪ್ಪಾಜಿಗೆ
ಆ ತಿಂಗಳ ಜಾತ್ರೆಯನ್ನು ತೀರಸ್ಕೊಂಡು
ಮಾಗಳಿ ಪ್ರಸಾದವನ್ನು ಪರಸೆಗೆ ಕೊಟ್ಟು
ಬೆಳ್ಳಿ ಕುದುರೆಯ ಮೇಲೆ ಕೂತ್ಕೊಂಡು
ರಾಚಪ್ಪಾಜಿಯವರು ಮಠಮನೆ ನುಗ್ಗಕ್ಕೆ
ಬರುತ್ತಾರೆ ಬೊಪ್ಪೇಗೌಡನಪುರದ ಮಠಕ್ಕೆ

ಮುಟ್ನಳ್ಳಿ ತೋಪಿನಲ್ಲಿ ಬಂದು ಕೆಂಪಿನ ಡೇರೆ ಹಾಕ್ಕೊಂಡು ಕೂತ್ಕೋತ್ತಾರೆ ಆ ರಾಚಪ್ಪಾಜಿಯವರಿಗೆ ಮೇನಿಯ ಮಾಡ್ಬುಡುತ್ತೀನಿ (ಲಂಬಾಣಿ ಸಂಪ್ರದಾಯದಲ್ಲಿ ಗಂಡನ ಜೊತೆಯಲ್ಲಿರುವವನನ್ನು ನಾರಿಯ ಎಂದು ಈಗಲೂ ಕರೆಯುತ್ತಾರೆ) ಹಿಂದಿನ ಸಂಪ್ರದಾಯದಲ್ಲಿ ಮದುವೆ ಮಾಡ್ಕೊಂಡ್ರೆ ಗಂಡಿನ ಜೊತೆಗೆ ಗಂಡಿನ ಹಾಗೆಯೇ ಶೃಂಗರಿಸಿ ಕಳುಹಿಸುತ್ತೀನಿ. ಮುಟ್ನಳ್ಳಿ ಫಲಾರದಯ್ಯನಾಗಿ ಮಾಡುತ್ತೀನಿ ಎಂದು ಹೇಳಿ

ಮೊದಲ ಪೂಜೆ ನಿಮಗಾಗಲಿಯಪ್ಪ
ಕಡೆಯ ಪೂಜೆ ನಮಗಾಗಲಿಯಪ್ಪ
ಸಿದ್ದಯ್ಯ ಸ್ವಾಮಿ ಬನ್ನಿ
ಮುಡಿಮುದ್ರೆ ಆಯ್ತದೆ ಫಲಾರದ
ಸೇವೆ ಆಯ್ತದೆ ಅದೆಲ್ಲ ನಿನ್ನ ಮಗನಿಗೆ
ಆಗಲಿಯಪ್ಪ ಕಂದ ಭಂಗಿಸೇವೆ ನಮಗಾಗಲಿ
ಕಾಣಪ್ಪ
ಸಿದ್ದಯ್ಯ ಸ್ವಾಮಿ ಬನ್ನಿ

ಮಡುವಾಳ ಮಾಚಯ್ಯ ನೀನು ಕಟ್ಟಿದಂತಹ ಹಟ್ಟಿಯನ್ನು ಬಿಟ್ಕೊಡಪ್ಪ ನಮ್ಮ ದೊಡ್ಡಮ್ಮತಾಯಿಗೆ ಮಠಮನೆ ಆಗಬೇಕು ಎಂದರಂತೆ. ಹೆತ್ತಂತ ಮಗನನ್ನು ಕೊಟ್ಟು ಕಟ್ಟಿದಂತಹ ಹಟ್ಟಿಯನ್ನು ಕೊಟ್ಟು ನಾವೆಲ್ಲಿಯಪ್ಪ ಒಕ್ಕಲು ಎತ್ತಿ ಬಾಳುವುದು ಎಂದು ಕೇಳುತ್ತಿದ್ದಾರೆ. ನಿನಗೆ ಜಾಗವನ್ನು ತೋರಿಸುತ್ತೀನಿ ಆದರೆ ಮಾಚಯ್ಯ

ಹಟ್ಟಿ ಬಿಟ್ಟೆಯಂತ್ಹೇಳಿ
ಮಗನ ಕೊಟ್ಟೆಯಂತ್ಹೇಳಿ
ಚಿಂತೆ ಮಾಡಬೇಡ ಕಾಣಪ್ಪ
ಉಬ್ಬಾ ಒಲೆಯೇ ನಾಳೆ
ಉರಿಗದ್ದಿಗೆ ಆಗಲಪ್ಪ
ಬಟ್ಟೆ ಒಗೆತ್ತಿದ್ದ ಕರೆ
ನಾಳೆ ದೊಡ್ಡಮ್ಮತಾಯಿ
ಕರೆಯಾಗಲಪ್ಪ
ಸಿದ್ದಯ್ಯ ಸ್ವಾಮಿ ಬನ್ನಿ
ನೀನು ಬಟ್ಟೆ ಒಗೆದ ಸ್ಥಳ
ನಾಳೆ ತೋಪಿನ ಕಪ್ಪಡಿ ಆಗಲಪ್ಪ
ಸಿದ್ದಯ್ಯ ಸ್ವಾಮಿ ಬನ್ನಿ

ನಿನ್ನ ಹಿಟ್ಟುಣ್ಣುವಂತ ಮನೆ ಗುರುಮಠ ಆಗಲಪ್ಪ ನಿನ್ನ ಉಬ್ಬೆ ಒಲೆ ನಾಳೆ ಉರಿಗದ್ದಿಗೆ ಆಗಲಪ್ಪ. ನಿನ್ನ ಕತ್ತೆ ಕಟ್ಹಾಕುವಂತ ಗೂಟ ನಾಳೆ ಕಾಳಗ ಗೂಟ ಆಗಲಿ ಮಾಚಪ್ಪ ನೀನು ಬಟ್ಟೆ ಒಗೆಯುತ್ತಿದ್ದ ಕೆರೆ ನಾಳೆ ದೊಡ್ಡಮ್ಮತಾಯಿ ಕೆರೆಯಾಗಲಿ ನೀನು ಬಟ್ಟೆ ಒಣ ಹಾಕುತ್ತಿದ್ದ ಸ್ಥಳ ನಾಳೆ ತೋಪಿನ ಕಪ್ಪಡಿಯಾಗಲಿ. ಎಂದು ಸ್ವಾಮಿಯವರು ಆಶೀರ್ವಾದವನ್ನು ಮಾಡಿದರು. ಅದೂವಲ್ಲದೇ ಮಾಚಪ್ಪನಿಗೆ ಒಂದು ಸಾಪವನ್ನೂ ಕೊಟ್ಟರಂತೆ. ಒಂದೇ ಒಂದು ಸುಳ್ಳು ಹೇಳಿದನಲ್ಲ ನನ್ನ ಮಗ ಅವರ ಮಾವನ ಮನೆಗೆ ಹೋಗಿದ್ದಾನಂತ ಅದಕ್ಕೆ ಮಾಚಪ್ಪ

ಮುಟ್ಟು ತಟ್ಟಿನ ಬಟ್ಟೆ . . . . ..
ನಿನ್ನ ಹೆಗಲಿಗೆ ಹೊರೆಯಾಗಲಪ್ಪ
ಅರಸುಗಳ ಮನೆಯ ಬಟ್ಟೆಯಾದರೂ
ಅರಗಳಿಯಾದರೂ ನಿನ್ನ ಮೈಮೇಲಿರಲಿ
ನೀನು ಬಲಮೊಗ್ಗಲಾಗಿ ಎದ್ದು
ನಿನ್ನ ಕಂತೆ ಬೊಂತೆ ಕಾಣಲಪ್ಪ
ಸಿದ್ದಯ್ಯ ಸ್ವಾಮಿ ಬನ್ನಿ
ಒಕ್ಕಳ್ಳಿ ಒಕ್ಕಲೊಳಗೆ ನೀನು ಒಕ್ಕಲೆತ್ತಿ
ಬಾಳೋಪ್ಪ
ಸಿದ್ದಯ್ಯ ಸ್ವಾಮಿ ಬನ್ನಿ
ಕಟ್ಟಿದ ಹಟ್ಟಿಯನ್ನು ಮಗನನ್ನು
ಧಾರೆಯೆರೆದು ಕೊಡುವುತ್ತಾನೆ
ಸಿದ್ದಯ್ಯ ಸ್ವಾಮಿ ಬನ್ನಿ

ಕಟ್ಟಿದ ಹಟ್ಟಿಯನ್ನು ಮಗನನ್ನು ಸ್ವಾಮಿಯವರಿಗೆ ಧಾರೆಯೆರೆದು ಕೊಡುತ್ತಿದ್ದಾರೆ.

ಆಡಿರಿ ರಾಗಗಳ
ನುಡಿಸಿರಿ ತಾಳಗಳ
ಹಚ್ಚಿರಿ ಜ್ಯೋತಿಗಳ
ಹಾಕಿರಿ ಧೂಪಗಳ

ಯಾರಿಗೆ ಒಲಿದೆಯೋ ಸ್ವಾಮಿ
ಯಾರಲ್ಲಿ ನೆಲೆಸಿದೆಯೋ
ರಾಜುಬೊಪ್ಪಣಪುರ ಒಳಗೆ
ನೆಲಸಿದ್ದೀಯೋ . . . ..

ಆಡಿರಿ . .. .
.. . .

ಬೆಜ್ಜಲಕೆಂಡವ ತುಂಬಿ
ಮಡ್ಡಿ ಸಾಂಬ್ರಾಣಿ ಹಾಕಿ
ಪಾದಕ್ಕೆ ಮಂಗಳಾರುತಿ

ಆಡಿರಿ. . . . .
.. . .

ಮಡಿದಿಯಾದ ಮಾದೇವಮ್ಮನನ್ನು ಕರ್‍ಕೊಂಡು ಕತ್ತೆಯನ್ನು ಹೊಡ್ಕೊಂಡು ಒಕ್ರಳ್ಳಿಗ್ರಾಮಕ್ಕೆ ಒಕ್ಕಲು ಎತ್ತಿ ಹೋಗುತ್ತಿದ್ದಾನೆ.

ಧರ್ಮ ಗುರು ಪರಂಜ್ಯೋತಿ
ಆ ಆ . . . .
ನಂಬಿದವರ ಮನೆಯ ಒಳಗೆ
ತುಂಬಿ ತುಳುಕಾಡು ಬಾಪ್ಪ
ಸಿದ್ದಯ್ಯ ಸ್ವಾಮಿ ಬನ್ನಿ
ಕಂಡಾಯದ ಒಡೆಯಾ . . .
ಲಿಂಗಯ್ಯ ದಯ ಮಾಡೋ
ಭೂಮಿಯ ತಂದವರು . . .
ಭೂಲೋಕ ಪಡೆದವರು . .
ಹಾಲುಮತದವರ ಹಟ್ಟಿ ......
ರಾಯರ ಚಂದ್ರಸಾಲೆ. . .
ರಾಜರತ್ನ ಭೂಮಿ . . . .
ಕರಳೆಕೆಂಪನ ದೊಡ್ಡಿ . . .
ಕುರುಬೇಗೌಡರ ಮನೆಯ. .
ನಡಟ್ಟಿಯ ಒಳಗೆ ಕುಳಿತು
ಕೊಂಡು ನನ್ನಪ್ಪ .. . . . .
ಗುರುವೇ ಮಾಯ್ಕಾರರ ಮೈಮೆಯ
ಏನು ತಾನೇ ಹೇಳಲಪ್ಪ
ಸಿದ್ದಯ್ಯ ಸ್ವಾಮಿ ಬನ್ನಿ

ಸ್ವಾಮಿ ಹಾಲುಮತದವರ ೨೪ ಕಂಬದ ತೊಟ್ಟಿ ಹಟ್ಟಿ ಒಳಗೆ ನೆಲಮೂರ್ತ ಮಾಡಿ ಕುಳಿತುಕೊಂಡ್ರು. ಪ್ರಪಂಚ ನಡುರಾಜ್ಯ. ಒಂದನೆಯ ಕೈಲಾಸ ರಾಜಬೊಪ್ಪಣಪುರ ಕರಳೆಕೆಂಪನ ದೊಡ್ಡಿ ಕುರುಬೇಗೌಡರ ಮನೆ. ಮುಟ್ನಳ್ಳಿ ಫಲಾರದಯ್ಯನನ್ನು ಮಾಡಿ ಸ್ವಾಮಿ. ಮಡುವಾಳ ಮಾಚಯ್ಯನ ಮನೆ ದೊಡ್ಡಮ್ಮತಾಯಿಗೆ ಮಠಮನೆ ಆಯ್ತು. ರಾಜಮಕ್ಕ ತಿರುಗಾಡುವಂತ ಸ್ಥಳ ಇದು ರಾಜಬೊಪ್ಪೇಗೌಡನ ಪುರವಾಯ್ತು ಅಂತ್ಹೇಳಿ ಸ್ವಾಮಿ ಧರೆಗೆದೊಡ್ಡವರು ಇದು ಸಕ್ರೆಪಟ್ಟಣದ ಮಾರಾಜರ ಮಕ್ಕಳಿಗೆ ಹಿರಿಯವನಿಗೆ ಮಠ ಮನೆ ಪಡೆದುದ್ದಾಯ್ತು ಕಿರಿಯವನಾದ ಚೆನ್ನರಾಜ ಅರಸುಗೆ ಮಠಮನೆ ಪಡೆಯಬೇಕು ಅಂತ್ಹೇಳಿ ಸ್ವಾಮಿಯವರು

ರಾಜಬೊಪ್ಪಣಪುರವ ಪ್ರೇಮದಲ್ಲಿ
ಬಿಟ್ಟಾರಂತೆ
ಸಿದ್ದಯ್ಯ ಸ್ವಾಮಿ ಬನ್ನಿ

ಒಕ್ರಳ್ಳಿ ಒನಗಳ್ಳಿ ಹಳ್ಳದಾಸಳ್ಳಿ
ಬಲಗಡೆಗೆ ಬಿಟ್ಕೊಂಡು. . .
ನಂಜನಾಯಕನ ದೊಡ್ಡಿ
ದೇವಪಟ್ಟಣದ ಮಾರ್ಗವಾಗಿ
ನಮ್ಮ ದೇವರು ದಯಮಾಡುತ್ತಾರೆ
ಸಿದ್ದಯ್ಯ ಸ್ವಾಮಿ ಬನ್ನಿ
ಪರಂಜ್ಯೋತಿ ನನ್ನಪ್ಪ ಎಳೆಯ
ಕುಂದೂರು ಎಡಗಡೆ ಬಿಟ್ಕೊಂಡು
ಗುರುವೇ ಮಾರಳ್ಳಿ ಬಿಟ್ಟಾರಂತೆ
ಮಳವಳ್ಳಿಗೆ ಬರುವುತ್ತಾರೆ
ಸಿದ್ದಯ್ಯ ಸ್ವಾಮಿ ಬನ್ನಿ
ಮಳವಳ್ಳಿಯ ಒಳಗೆ ಮಾಚಯ್ಯನ
ಮನೆ ಪಡೆಯಬೇಕು ಚೆನ್ನರಾಜ
ಅರಸುಗಳಿಗೆ ಮಠಮನೆ ಮಾಡಬೇಕು
ಅಂತ್ಹೇಳಿ ನನ್ನಪ್ಪ . . . .
ಮಾನ್ಯರ ಮನೆಯ ಮುಂದೆ ನಿಂತು
ದಾನ ಧರ್ಮ ಸಾರುತ್ತಾರೆ
ಸಿದ್ದಯ್ಯ ಸ್ವಾಮಿ ಬನ್ನಿ
ಸೋಮವಾರ ಶುಕ್ರವಾರ ಮಾಪುಣ್ಯ
ಕಾಲದೊಳಗೆ . . . .
ಕಂಡಾಯದ ಒಡೆಯ ಕಂಡಾಯ
ಹೊತ್ಕೊಂಡು ತಂಬೂರಿ ಹೊತ್ಕೊಂಡು
ದಾನ ಧರ್ಮವ ಸಾರುತ್ತಾರೆ ಧರ್ಮಗುರು
ನನ್ನಪ್ಪ ಮಂಟೇದ ಸ್ವಾಮಿ . . . . . .
ಸಿದ್ದಯ್ಯ ಸ್ವಾಮಿ ಬನ್ನಿ

ಆ ಮಡುವಾಳ ಗಣಶರಣನಿಗೆ ಮಕ್ಕಳಿಲ್ಲದಕ್ಕಾಗಿ ಮೂರು ಹೊತ್ತು ಶಿವನ ಗ್ಯಾನವನ್ನು ಮಾಡ್ಕೊಂಡು ಕಾಲಾಳುಗಳನ್ನು ಕಟ್ಕೊಂಡು ಕಾಲ ಕಳೆಯುತ್ತಿದ್ದಾರೆ ಗಂಡ ಹೆಂಡ್ತಿಯರು ಇಬ್ಬರೂ ಕೂಡ. ಆಗ ಪರಂಜ್ಯೋತಿಯವರು ಮನೆಯ ಮುಂದುಗಡೆ ನಿಂತ್ಕೊಂಡು ದಾನ ಧರ್ಮ ಸಾರುದರು. ಮಡುವಾಳ ಸ್ವಾಮಿ ಯತಿಗಳೋ ಮುನಿಗಳೋ ಸಾದು ಸತ್ಪುರುಷರೋ ನಾ ಕಾಣೆ. ನಮ್ಮ ಮನೆಯ ಒಳಗೆ ಪಾದ ಊರಿ ಸ್ವಾಮಿ ನಿಮ್ಮ ದರ್ಶನ ಭಾಗ್ಯ ನಮಗೆ ದೊರಕಲಿ ನಿಮಗೆ ನಾವು ಒಕ್ಕಲು ಆಗುತ್ತೀವಿ ಎಂದು ಕೇಳ್ಕೊಂಡಾಗ ನೋಡಪ್ಪ ಒಕ್ಕಲಾಗುತ್ತೀನಿ ಎಂದು ನಿನ್ನ ಬಾಯಲ್ಲಿ ಬಂದಿದೆ. ಈ ಕಟ್ಟಿದಂತಹ ಹಟ್ಟಿ ನಮಗೆ ಬಿಟ್ಕೊಟ್ರೆ ಗಣಶರಣ ನಮ್ಮ ರಾಜ ಒಡೆಯ ಮಕ್ಕಳಿಗೆ

ಮಠಮನೆ ಮಾಡುತ್ತೀ ಎಂದರು ಸ್ವಾಮಿಯವರು. ಸಣ್ಣ ಹಂಚಿನ ಮನೆಯಲ್ಲಿ ಸ್ವಾಮಿಯವರು ಪಾದ ಊರಿದಾಗ ಆಗಲಿ ನನ್ನಪ್ಪ ಈ ಕಟ್ಟಿದಂತಹ ಹಟ್ಟಿ ಬಿಟ್ಕೊಡುತ್ತೀವಿ ನಮಗೆ ಮಕ್ಕಳು ಯಾರೂ ಇಲ್ಲ ನಿಮ್ಮ ಗ್ಯಾನ ಮಾಡ್ಕೊಂಡು ಕಾಲಹರಣ ಮಾಡುತ್ತೀವಿ ಅಂತ್ಹೇಳಿ ಮಠಮನೆಯನ್ನು ಧಾರೆ ಎರೆದು ಕೊಟ್ಟಿದ್ದಾರೆ ಮಳವಳ್ಳಿ ಒಳಗೆ. ಸ್ವಾಮಿ ಪರಂಜ್ಯೋತಿ ಅಣ್ಣನಿಗೆ ತೆಂಕಲ ರಾಜ್ಯ ತಮ್ಮನಿಗೆ ಬಡಗಲ ರಾಜ್ಯ ಪಟ್ಟವನ್ನು ಕಟ್ಟಿ ಮುಂದಕ್ಕೆ ದಯಮಾಡಿದರಂತೆ ಸ್ವಾಮಿಯವರು. ತಮ್ಮರಲ್ಲಿ ಗ್ರಾಮ ಮುಂದುಗಡೆ ಬಿಟ್ಕೊಂಡು ಮುಂದಕ್ಕೆ ಪಾದ ಊರುದಾಗ ಲಿಂಗೇಗೌಡ ಭೂಮಿಯನ್ನು ಉಳುಮೆ ಮಾಡಿ ಮಟ್ಟ ಮಾಡುತ್ತಿದ್ದನಂತೆ. ಸ್ವಾಮಿಯವರು ಉಳುತ್ತಿದ್ದಂತಹ ಲಿಂಗೇಗೌಡನನ್ನು ಕರೆದು ಸ್ವಲ್ಪ ಭಂಗಿ ಸೇಯಿಬೇಕು ಬೆಂಕಿಕೆಂಡ ಇಸ್ಕೊಂಡು ಬಂದು ಕೊಡುತ್ತೀ ಏನಪ್ಪ. ನಾನು ಬೆಂಕಿಕೆಂಡಕ್ಕೆ ಹೋದರೆ ಈ ಭೂಮಿಯನ್ನು ಉಳುವವರು ಯಾರು ಮಟ್ಟ ಹೊಡೆಯುವವರು ಯಾರು ? ನಿನ್ನ ಕೆಲಸವನ್ನು ನಾನು ಮಾಡುತ್ತೀನಿ ಎಂದರು. ಆಗ ಲಿಂಗೇಗೌಡ ತಮ್ಮರಲ್ಲಿ ಗ್ರಾಮಕ್ಕೆ ಬಂದಿದ್ದಾರೆ. ಈಕಡೆ ಸ್ವಾಮಿಯವರು ಒಂದು ಸಲ ತಿರುಶೂಲವನ್ನು ಬಿಟ್ಟಾಗ ಮಳವಳ್ಳಿಯಿಂದ ತಮ್ಮರಳ್ಳಿವರೆಗೆ ಒಂದೇ ರಸಮಟ್ಟ ಆಗಿದೆ. ಲಿಂಗೇಗೌಡರು ಬೆಂಕಿಕೆಂಡವನ್ನು ಕೊಟ್ಟು ತನ್ನ ಭೂಮಿಯನ್ನು ನೋಡಿದಾಗ ಓಹೋ ಯಾವ ಸ್ವಾಮಿಗಳಪ್ಪ ಇವರು ಎಂಥಾ ಸತ್ಯವಂತರಪ್ಪ ಇವರು ನಾವು ತಿಂಗಳಾನು ಗಟ್ಟಲೆ ಮಾಡುವ ಕೆಲಸವನ್ನು ಇವರು ಒಂದೇ ದಿನಕ್ಕೆ ಮಾಡಿ ಮುಗಿಸಿದ್ದಾರೆ. ಒಂದು ದಿನವೂ ಇಲ್ಲ ಒಂದು ಗಂಟೆ ಒಳಗೆ ಮುಗಿಸಿದ್ದಾರಲ್ಲ ಬಹಳ ಸಂತೋಷವನ್ನು ಪಟ್ಟು ಧರೆಗೆದೊಡ್ಡವರ ಪಾದ ಪೂಜೆಯನ್ನು ಮಾಡಿ ಇಲ್ಲಿ ಒಂದು ಗದ್ದಿಗೆ ಕಟ್ಕೊಂಡು ನನ್ನ ಹೆಸರಲ್ಲಿ ಭೂಮಿಯನ್ನು ಮಾಡಿ ಫಲ ಕೊಡುತ್ತದೆ ಎಂದು ಆಶೀರ್ವಾದವನ್ನು ಮಾಡಿ –

ಅಂಚೆದೊಡ್ಡಿ ಗ್ರಾಮಕ್ಕಾಣೆ . . . .
ಕಂಡಗಾಲದ ಊರೊಳಗೆ . . .. .
ಮಂದಲಗಳ್ಳಿ ಮಠ ಎಡಗಡೆ ಬಿಟ್ಕೊಂಡು
ಗುರುವೇ ನಡೆದು ಸಾಕಾಗಿ ಕೆಮ್ಮತ್ತಿ ಮರದಡಿ
ತಲೆಯ ಹಾಕ್ಕೊಂಡು ಮಲಗಾವ್ರೆ ಸ್ವಾಮಿ
ಗುರುವೇ ಮಾಯ್ಕಾರರ ಮೈಮೆಯ
ಏನು ತಾನೇ ಹೇಳಲಪ್ಪ
ಸಿದ್ದಯ್ಯ ಸ್ವಾಮಿ ಬನ್ನಿ

ಸ್ವಾಮಿಯವರು ಮತ್ತಿಮರದಡಿ ಒಳಗೆ ಹೊನ್ನುತ್ತಕ್ಕೆ ತಲೆ ಹಾಕ್ಕೊಂಡು ಮನಗಿದ್ದಾಗ ಅಲ್ಲಿ ಕಾಳಿಂಗ ಸರ್ಪ ನರಳುತ್ತಾ ಮನಗಿದೆ ಹೊನ್ನುತ್ತದೊಳಗೆ. ಇವರದು ಎಪ್ಪತ್ತೇಳು ಕುರುಜಡೆ ಮರುಜಡೆಯಲ್ಲಿ ಒಂದು ಜಡೆ ಹುತ್ತದ ಕೋಮಿನೊಳಗಿರುವ ಆದಿಶೇಷನ ಕಪಾಲಕ್ಕೆ ಸೋಕಿದಾಗ ಕಪಾಲ ಹೊಡೆದು ಹೋಗಿದೆ ಕಪಾಲದ ಬಾಧೆಯೆಲ್ಲ ಕಮ್ಮಿಯಾಗಿದೆ. ಎಂಥಾ ಮಾನುಭಾವನಪ್ಪ ನನ್ನ ನೋವಿನ ಬಾಧೆಯನ್ನೆಲ್ಲ ಕಡೆಮೆ

ಮಾಡಿದ್ದಾರೆ ಎಂದು ಆ ಕಾಳಿಂಗ ಸರ್ಪ ಮೇಲ್ಗಡೆ ಬಂದು ನೋಡಿದಾಗ ಸ್ವಾಮಿಯವರು ನಿದ್ದೆ ಮಾಡುತ್ತಾ ಮನಗಿದ್ದಾರೆ. ಬಿಸಿಲು ರಾಚುತ್ತಾ ಇದೆ ಆ ಬಿಸಿಲಿಗೆ ತಮ್ಮ ಎಡೆಯನ್ನು ಬಿಟ್ಕೊಂಡು ನೆರಳು ಮಾಡ್ಕೊಂಡು ಧರೆಗೆದೊಡ್ಡವರನ್ನು ಕಾಯ್ಕೊಂಡು ಕೂತಿದೆ. ಸ್ವಾಮಿಯವರು ನಿದ್ರೆಯಿಂದ ಮೇಲೆದ್ದು ಆದಿಶೇಷ ನನ್ನ ಮೊಕಕ್ಕೆ ಬಿಸಿಲು ಬೀಳುತ್ತೆ ಅಂತ್ಹೇಳಿ ನೆರಳು ಮಾಡುತ್ತಾ ಇದ್ದೀಯ ಎಂದು ನೀನು ಇದೇ ಜಾಗದಲ್ಲಿ ನೆಲಗೊಳ್ಳಪ್ಪ. ಇಲ್ಲಿ ಮತ್ತಿತಾಳಯ್ಯನ ದೇವಸ್ಥಾನ ಅಂತ್ಹೇಳಿ ನಾಮಕರಣವಾಗಲಪ್ಪ. ಹಸುಮಕ್ಕಳಿಗೆ, ಶಿಸು ಬಾಲಕರಿಗೆ ದೊಡ್ಡವರಿಗೆ ಚಿಕ್ಕವರಿಗೆ ಎಂಬ ಭೇದಭಾವನೆ ಇಲ್ಲದೆ ಏನಾದರೂ ನಾಗರ ಆಗಿಬಿಟ್ಟರೆ ನಿಮ್ಮ ಬಳಿಗೆ ಬಂದು ಮತ್ತಿಚಕ್ಕೆ ತಕ್ಕೊಂಡು ಹೋಗಿ ಕೊಬ್ಬರಿ ಎಣ್ಣೆ ಒಳಗೆ ಹಾಕಿ ಸವರಿಬಿಟ್ಟರೆ ಅವರ ನೋವಿನ ಬಾಧೆಯೆಲ್ಲ ಕಡಿಮೆ ಆಗಲಪ್ಪ ಎಂದು ಆಶೀರ್ವಾದ ಮಾಡಿದರಂತೆ. ಪೂಜೆ ಮಾಡುವರು ಯಾರು ಎಂದು ಕೇಳಿದಾಗ ಕಂದೇಗಾಲ ಗ್ರಾಮದಲ್ಲಿ ಒಂದು ಮಗು ಇದೆ ಅದನ್ನು ಮುಟ್ಟಿ ನೀನು ಸಾಯಿಸಿದರೆ ನಾನು ಬಂದು ಬದುಕಿಸುತ್ತೀನಿ ಎಂದರು. ಆ ಕಾಳಿಂಗ ಸರ್ಪ ಆಗಲಿ ನನ್ನೊಡೆಯ ಅಂತ್ಹೇಳಿ ಕಂದೇಗಾಲ ಗ್ರಾಮಕ್ಕೆ ಹೋಗಿ ಆ ಮಗುವನ್ನು ಕಚ್ಚಿ ಸಾಯಿಸಿದೆ. ಅಪರೂಪಕ್ಕೆ ಆದ ಮಗ ನಮಗೆ ಉಳುಕೊಳ್ಳಲಿಲ್ಲ ಅಂತ್ಹೇಳಿ ಚಿಂತೆ ಮಾಡುತ್ತಿರಬೇಕಾದರೆ ಅಲ್ಲಿ ಕಂಡಾಯದ ಒಡೆಯ ಕಂಡಾಯವನ್ನು ಹೊತ್ಕೊಂಡು ಬಂದರಂತೆ. ಮಗು ಸತ್ತೋಯ್ತು ಎಂದು ಚಿಂತೆ ಮಾಡಬೇಡಿ. ಈ ಮಗುವನ್ನು ಬದುಕಿಸಿ ಕೊಟ್ಟರೆ ಆ ಮತ್ತಿತಾಳೇಶ್ವರನ ದೇವಾಲಯಕ್ಕೆ ನೀವು ಒಕ್ಕಲಾಗುತ್ತೀರಪ್ಪ ಎಂದು ಕೇಳಿದರಂತೆ. ಆಗಲಿ ನನ್ನಪ್ಪ ಎಂದರಂತೆ. ಸತ್ತೋಗಿರುವ ಮಗುವಿನ ಮೇಲೆ ಕಪ್ಪುಧೂಳ್ತ ಪಿಡಿದಾಗ ಮಗು ಆಡುತ್ತಾ ಇದೆ. ಕಂದೇಗಾಲದಲ್ಲಿ ಆ ಕಂದನನ್ನು ಪಡೆದುದಕ್ಕೆ "ಕಂದೇಗಾಲದಯ್ಯ ಅಂತ್ಹೇಳಿ ನಾಮಕರಣವನ್ನು ಪಡ್ಕೊಂಡು ಸ್ವಾಮಿ ಧರೆಗೆದೊಡ್ಡವರು –

ಮತ್ತಿತ್ತಾಳೇಶ್ವರ ದೇವಸ್ಥಾನ ಬಿಟ್ಟಾರು ನನ್ನಪ್ಪ
ಆದಿ ಹೊನ್ನಾಯಕನ ಹಳ್ಳಿಗೆ ಸ್ವಾಮಿಯವರು
ದಯಮಾಡುತ್ತಾರೆ . . . .
ಸಿದ್ದಯ್ಯ ಸ್ವಾಮಿ ಬನ್ನಿ . . . .
ಆದಿಹೊನ್ನಾಯಕನ ಹಳ್ಳಿ ಒಳಗೆ . . . . . .
ಒಕ್ಕಲಗರ ಮನೆ ಬಳೆಯ ಲಿಂಗಮ್ಮ
ದಾನ ಧರ್ಮ ಸಾರುತ್ತಾರೆ . . . .
ಬಡಗಲ ಬಾಗಿಲ ಮನೆ
ಒಕ್ಕಲಗರ ಮನೆ . . . .. .
ಒಪ್ಪಿದಂತಹ ಸ್ಥಳ ಧರೆಗೆದೊಡ್ಡವರಿಗೆ
ದಾನ ಧರ್ಮವ ಸಾರುತ್ತಾರೆ
ಮಂಟೇದ ಲಿಂಗಯ್ಯ ಸ್ವಾಮಿ ಬನ್ನಿ
ಹರದೇವರ ಭಿಕ್ಷಾ

ಗುರುದೇವರ ಭಿಕ್ಷಾ
ಸಾಧು ಸಂಗಯ್ಯನ ಭಿಕ್ಷಾ
ಜ್ಯೋತಿಲಿಂಗಯ್ಯನ ಭಿಕ್ಷಾ
ಕಲ್ಯಾಣದೇವರ ಭಿಕ್ಷಾ
ಕೈಲಾಸದವರ ಭಿಕ್ಷಾ
ಒಕ್ಕಲಿಗರ ಲಿಂಗಮ್ಮನ ಮನೆಯ ಒಳಗೆ
ಮೊದಲ ಭಿಕ್ಷಾ ಅಂದಾರಂತೆ
ಸಿದ್ದಯ್ಯ ಸ್ವಾಮಿ ಬನ್ನಿ
ಮಂಟೇದಾ . . . .
ಲಿಂಗಯ್ಯ ದಯಮಾಡೋ. . .

ಒಕ್ಕಲಿಗರ ಮನೆಯ ಒಳಗೆ ಮೊದಲ ಭಿಕ್ಷಾ ಎಂದು ಸಾರಿದರು ಸ್ವಾಮಿಯವರು. ಬೆತ್ತದ ಮೊರದಲ್ಲಿ ಬೆಳ್ಳಿ ಬಂಗಾರ ಮುತ್ತು ರತ್ನ ತರುತ್ತಾ ಜಂಗಮರೆ ಭಿಕ್ಷಾ ತಕ್ಕೊಳ್ಳಿ ಸ್ವಾಮಿ ಎಂದರು. ಹೊಟ್ಟೆ ಹಸಿತಾ ಉಂಟು ತಾಯಿ ಊಟ ಕೊಡಿಯಮ್ಮ. ಲಿಂಗಮ್ಮ ಯತಿಗಳೋ ಗುರುಗಳೋ ಕಾಣೆ ಎಂದು ಸ್ವಾಮಿಯವರಿಗೆ ಊಟ ಬಡಿಸುತ್ತಾಳೆ. ಲಿಂಗಮ್ಮನ ಮನೆಯ ಒಳಗೆ ಒಂದು ಹಸ ಒದ್ದಿಬಿಡುತ್ತಿತ್ತು. ಆಗ ಮಂಟೇಸ್ವಾಮಿ ಕಪ್ಪುಧೂಳ್ತವನ್ನು ಕೊಟ್ಟು ಈಗ ಕರಿಯವ್ವ ಎಂದು ಹೇಳಿದರು. ಹಂಡೆಯನ್ನು ಇಟ್ಟು ಹಾಲು ಕರೆದಾಗ ಹಸ ಹಾಗೆ ನಿಂತ್ಕೋತಂತೆ. ಹಸು ಕೊಟಿಗೆ ಒಳಗೆ ಕರಿದುದಕ್ಕೆ ಸ್ವಾಮಿ ದನಿನ ಚಿರಿಣಿ ಒಳಗೆ ಹುಟ್ಟಿ ಲಿಂಗವಾಗಿ ಪಾದ ಊರಿ ಒಡೆದು ಮೂಡಿದರು ಸ್ವಾಮಿ. ಚಂದಾಗಿ ಹೊಡೆದು ಮೂಡಿದುದಕ್ಕೆ ಚೆನ್ನಮಂಟೇದಸ್ವಾಮಿ ಅಂತ್ಹೇಳಿ ನಾಮಕರಣವನ್ನು ಕೊಟ್ಟಳಂತೆ ಲಿಂಗಮ್ಮ. ಬಡಗಲ ಬಾಗಿಲ ಮನೆಯನ್ನು ಪಡ್ಕೊಂಡು ಸ್ವಾಮಿಯವರು ಬಳೆಯ ಲಿಂಗಮ್ಮ ಇದು ಮಠಮನೆ ಆಗಲಿ ತಾಯಿ ಕರಿತಿದ್ದಂತಹ ಹಸ ನಾಳೆ ಕಾಮಧೇನು ಕಲ್ಪವೃಕ್ಷವಾಗಲಿ ಕರೆಯದಿದ್ದ ಹಸುಗಳೆಲ್ಲ ಇಲ್ಲಿನ ಧೂಳ್ತ ತಕ್ಕೊಂಡು ಹೋಗಿ ಸವರದರೆ ಹಸುಗಳೆಲ್ಲ ಕರಿಯಲಿ ಕಾಣೋ ಒಳ್ಳೆದು ಆಗಲಿ ಅಂತ್ಹೇಳಿ ಧರೆಗೆದೊಡ್ಡವರು ಅವರಿಗೆ ಆಶೀರ್ವಾದ ಮಾಡಿ ಆದಿಹೊನ್ನಾಯಕನ ಹಳ್ಳಿ ಒಳಗೆ ಚನ್ನಮಂಟೇದಸ್ವಾಮಿ ಅಂತ ನಾಮಕರಣವನ್ನು ಪಡ್ಕೊಂಡು ಧರೆಗೆದೊಡ್ಡವರು.

ಆದಿಹೊನ್ನಾಯಕನ ಹಳ್ಳಿ ಬಿಟ್ಟು
ಕುಂದೂರು ಬೆಟ್ಟಕ್ಕೆ ಬಂದವರಲ್ಲೋ
ಮಾಯ್ಕಾರ . .. .
ಸಿದ್ದಯ್ಯ ಸ್ವಾಮಿ ಬನ್ನಿ .. . . .

ಎಳೆಕುಂದೂರುಬೆಟ್ಟದ ಗವಿ ಒಳಗೆ ಆರು ಜನ ಶಿಸುಮಕ್ಕಳನ್ನು ಬಿಟ್ಟು ಹೋಗಿದರಲ್ಲ ಧರೆಗೆದೊಡ್ಡವರು ನಿಮಗೆಲ್ಲ ಮಠಮನೆ ಮಾಡಿ ಬಂದಿದ್ದೀನಿ ಕಾಣಪ್ಪ ಅಂತ್ಹೇಳಿ ಸ್ವಾಮಿ. ಎಲ್ಲ ಶಿಸುಮಕ್ಕಳನ್ನು ಕರ್ಕೊಂಡು ಆ ಎಳೆಕುಂದೂರು ಬೆಟ್ಟವನ್ನು ಬಿಟ್ಟು

ರಾಜಬೊಪ್ಪಣಪುರಕ್ಕೆ ಬಂದರಂತೆ. ರಾಜಬೊಪ್ಪಣಪುರ ಕರಳಕೆಂಪಣ್ಣದೊಡ್ಡಿ ಕುರುಬೇಗೌಡರ ಮನೆಯ ಒಳಗೆ ಸಖ್ರೆಪಟ್ಟಣದ ರಾಜರ ಮಕ್ಕಳನ್ನು ಮೊದಲು ಕರೆದು ನೀವು ಮನೆ ಮನೆ ಭಿಕ್ಷೆ ಮಾಡುವವರು ನೀವು ಯಾವ ರಾಜ್ಯಕ್ಕೆ ಪಟ್ಟ ಕಟ್ಟುತ್ತೀರಿ ಕಂದ ಎಂದು ಕೇಳಿದರಲ್ಲ ಕಂದ. ನಿಮಗೆ ಮಠ ಮನೆ ಮಾಡಿದ್ದೀನಿ ಅಣ್ಣನಿಗೆ ತೆಂಕಲರಾಜ್ಯ ತಮ್ಮನಿಗೆ ಬಡಗಲ ರಾಜ್ಯ. ಕೇಳಪ್ಪ ಕಪ್ಪಡಿ ಕೈಲಾಸ ಅಣ್ಣ ತಮ್ಮರಿಗೆ ವರ್ಷಕ್ಕೊಂದು ಭಾಗ ಆಗಲಿ ಅಂತ ಪಟ್ಟಕಟ್ಟಿದರಂತೆ. ಬೊಪ್ಪೇಗೌಡನ ಪುರದ ಮಠಕ್ಕೊಬ್ಬನನ್ನ ಮಳವಳ್ಳಿ ಮಠಕ್ಕೆ ಒಬ್ಬನನ್ನ ಪಟ್ಟ ಕಟ್ಟಿದರಂತೆ. ದೊಡ್ಡಮ್ಮತಾಯಿ ನಿಮಗೆ ಮಡುವಾಳ ಮಾಚಪ್ಪನ ಮನೆ ಮಠಮನೆ ಮಾಡಿದ್ದೀನಿ ತಾಯಿ. ನೀನು ಹೋಗಿ ಅಲ್ಲಿ ನೆಲಸವ್ವ ಎಂದಾಗ ಆಗಲಿ ಸ್ವಾಮಿ ಎಂದು ನೆಲೆಸಿದ್ದಾಳೆ. ಸ್ವಾಮಿಯವರು ಹಾಲುಮತದವರ ಹಟ್ಟಿಯಲ್ಲಿ ಉತ್ತರಕ್ಕೆ ಪಾದ ದಕ್ಷಿಣಕ್ಕೆ ಮಂಡೆ ಊರಿ ಆರು ಮೂರು ಒಂಭತ್ತು ಘಳಿಗೆ ಜೋಲು ನಿದ್ರೆ ಮಾಡುತ್ತಾರೆ ಸೂತ್ರಧಾರಿ ಜಡೆಲಿಂಗಪ್ಪನವರು. ನಿದ್ರೆ ಮಾಡಿ ಸ್ವಾಮಿಯವರು ಬಲಮೊಗ್ಗಲಾಗಿ ಎದ್ದು ಕೂತ್ಕೊಂಡು ಭಂಗಿ ಬೋಧನೆ ಮಾಡಬೇಕು ಅಂತ್ಹೇಳಿ ಮುತ್ತಿನ ಜೋಳಿಗೆ ಒಳಗೆ ಬಲದ ಹಸ್ತವನ್ನು ಊರಿದಾಗ ಸ್ವಾಮಿಗಳ ಕೈಗೆ ಭಂಗಿ ಸೊಪ್ಪು ಸಿಕ್ಕಿಲ್ಲವಂತೆ. ರುದ್ರಮುನಿ ಸ್ವಾಮಿಗಳು ಬರೆದ ಕಲಿಪ್ರಮಾಣದ ಕಟ್ಟು ನಮ್ಮ ಸ್ವಾಮಿಗಳ ಕೈಗೆ ಸಿಕ್ಬಿಡ್ತು. ಓಹೋ ಕೃತಾ ತ್ರೇತ್ರಾ ದ್ವಾಪರ ನಾಳೆ ಬರುತ್ತದೆ ನರಮಾನವರ ಕಲಿಯುಗ. ಈ ಕಲಿಯನ್ನ ಕಣ್ಣಿಂದ ನೋಡುವುದಕ್ಕೆ ಸಾಲುವುದಿಲ್ಲ. ಕಲಿ ಬರುವುದಕ್ಕೂ ಕಣ್ಣಿಗೆ ಮರೆಯಾಗಬೇಕು. ನಮ್ಮ ಹಂಗು ನರರಿಗೆ ಉಂಟಾಗಲಿ ನರರ ಹಂಗು ನಮಗೆ ಬೇಕಿಲ್ಲ ಅಂತ್ಹೇಳಿ ಸ್ವಾಮಿ ಧರೆಗೆದೊಡ್ಡವರು. “ಆಕಾಶದಲ್ಲಿ ಶಿರಸ ಪೂಜೆ ಪಾತಾಳದಲ್ಲಿ ಪಾದಪೂಜೆ ಈ ಮಧ್ಯಲೋಕದಲ್ಲಿ ಇರುತಕ್ಕಂತ ನರಮಾನವರಿಗೆ ಲಿಂಗಪೂಜೆ ಅಂದ್ರು ಸ್ವಾಮಿ ಧರೆಗೆದೊಡ್ಡವರು. ಅದಕ್ಕೆ ಹೇಳುತ್ತಾರೆ ಎಲ್ಲ ರೂಪು ತಾನಂತೆ ಎಲ್ಲರೊಳಗೆ ಶಿವನಂತೆ ಅಲ್ಲಲ್ಲಿ ಹರಸುತ್ತಾ ಗುಡಿಗಳ ತಿರುಗುತ್ತಾ ನರರ ಕಣ್ಣಿಗೆ ಮಾತ್ರ ಕಾಣುವುದೆಲ್ಲ ಕಲ್ಲಂತೆ. ಕಾಶಿಗೆ ಹೋದರೂ ಕಲ್ಲೆ, ರಾಮೇಶ್ವರಕ್ಕೆ ಹೋದರೂ ಕಲ್ಲೆ, ಶ್ರಾವಣ ಬೆಳಗೋಳಕ್ಕೆ ಹೋದರೂ ಕಲ್ಲೆ. ಎಲ್ಲೆಲ್ಲೂ ಬರಿ ಕಲ್ಲು ಅವನು ಇಲ್ಲದೆ ಇರುವ ಜಾಗವಿಲ್ಲ. ರಾಜ ಒಡೆಯರ ಮಕ್ಕಳಿಗೆ ನಾವು ಪಟ್ಟ ಕಟ್ಟಿದ್ದು ಆಯ್ತು. ನಾವು ಈಗ ಪಾತಾಳಲೋಕಕ್ಕೆ ಮರೆಯಾಗಿಬಿಟ್ಟರೆ ಈ ಕಂಡಾಯ ತಂಬೂರಿ ಹೊರುವುದಕ್ಕೆ ಜೀವದ ದೇವರು ಮಾಡಬೇಕು. ಶಿಸುಮಗನ ಪಡೆಯಬೇಕು ಅಂತ್ಹೇಳಿ ನನ್ನಪ್ಪಾಜಿ ಏಳು ಸಾವಿರ ಮಾರಿಯರ ಯಜಮಾನಗಿತ್ತಿ ಯಾದಂತಹ ತೋಪಿನ ದೊಡ್ಡಮ್ಮನನ್ನು ಕೂಗಿದರು –

ಶಿಸುಮಗನಾದ ಸಿದ್ದಪ್ಪಾಜಿಯನ್ನು ದಾನಪಡೆಯುವುದು – ೧೩

ಸೋಮವಾರ ಶುಕ್ರವಾರ ಪೂಜೆ
ಮಾಡುವವರಿಲ್ಲ ಪುಷ್ಪ ತರುವರಿಲ್ಲ
ತಟ್ಟಿ ಮನಿಗೋಸವರು ಇಲ್ಲ
ಮುಟ್ಟಿ ಪೂಜೆ ಮಾಡುವಂತ
ಶಿಸುಮಕ್ಕಳು ನನಗಿಲ್ಲ . . . .
ಭಂಗಿ ಊಟ ಮಾಡುವಾಗ
ಬೆಂಕಿಕೆಂಡ ಕೊಡೋವರಿಲ್ಲ
ಸಿದ್ದಯ್ಯ ಸ್ವಾಮಿ ಬನ್ನಿ
ನಮ್ಮ ಪಾದಕ್ಕೆ ತಕ್ಕ ಶಿಸುಮಗನ
ಪಡೆಯಬೇಕು ಅಂದಾರಂತೆ
ಸಿದ್ದಯ್ಯ ಸ್ವಾಮಿ ಬನ್ನಿ

ದೊಡ್ಡಮ್ಮ ಸೋಮವಾರ ಶುಕ್ರವಾರ ಪೂಜೆ ಮಾಡುವವರಿಲ್ಲ ಪುಷ್ಪ ತರುವವರಿಲ್ಲ ತಟ್ಟಿ ಮನಿಗೋಸವರಿಲ್ಲ ಮುಟ್ಟಿ ಪೂಜೆ ಮಾಡುವರಿಲ್ಲ. ನಾನು ಭಂಗಿ ಊಟ ಮಾಡಬೇಕಾದರೆ ಬೆಂಕಿಕೆಂಡ ಕೊಡೋವರಿಲ್ಲ. ನಮ್ಮ ಪಾದಕ್ಕೆ ತಕ್ಕ ಶಿಸುಮಗನನ್ನು ಪಡೆಯ ಬೇಕು ತಾಯಿ. ಅದೂ ಅಲ್ಲದೇ ನಾವು ಪಾತಾಳಲೋಕಕ್ಕೆ ಮರೆಯಾಗಿಬಿಟ್ಟರೆ ನಮ್ಮ ಕಂಡಾಯ ತಂಬೂರಿ ಹೊರುವುದಕ್ಕೆ ಜೀವದ ದೇವರು ಮಾಡಬೇಕು ಅಂದ್ರು ಸ್ವಾಮಿಯವರು. ಅಣ್ಣಯ್ಯ ಉತ್ತರ ದಕ್ಷಿಣ ಪೂರ್ವ ಪಶ್ಚಿಮ ಅಗ್ನೇಯ ನೈರುತ್ಯ ವಾಯುವ್ಯ ಈಶಾನ್ಯಾ ನಾಲ್ಕು ಮೂಲೆ ಎಂಟು ದಿಕ್ಕಿನ ರಾಜ್ಯದಲ್ಲಿ ನಲವತ್ತೆಂಟು ಜನ ಕ್ಷತ್ರಿಯ ಕುಲದ ರಾಜಕುಮಾರರು ರಾಜ್ಯಭಾರ ಮಾಡುತ್ತಿದ್ದಾರೆ. ಇವರಲ್ಲಿ ಯಾವ ರಾಜನ ಮಗನನ್ನು ದತ್ತು ಮಗನನ್ನು ಪಡ್ಕೊಂಡು ಬಂದು ಈ ಹಾಲುಮತದವರ ಹಟ್ಟಿಗೆ ನೀಲಗಾರರ ಮಾಡುತ್ತೀ ಅಣ್ಣಯ್ಯ. ಆಗ ಸ್ವಾಮಿಯವರು ಕೇಳಮ್ಮ ದೊಡ್ಡಮ್ಮ ರಾಜರಮಕ್ಕಳು ತಂದು ಈ ರಾಜ್ಯಕ್ಕೆ ಪಟ್ಟಕಟ್ಟಿದ್ದು ಆಯ್ತು. ಈ ಕಂಡಾಯ ತಂಬೂರಿ ಹೊರುವುದಕ್ಕೆ ರಾಜರ ಮಕ್ಕಳಿಂದ ಸಾಧ್ಯವಿಲ್ಲ ತಾಯಿ. ಆದ್ದರಿಂದ ಎಲ್ಲಿ ಪಡೆಯುತ್ತೀರಿ ಎಂದಾಗ ಮಳವಳ್ಳಿ ಕಂದ ಮಾರಳ್ಳಿ ಗ್ರಾಮ. ಮಾರಳ್ಳಿ ಒಳಗೆ ಅನ್ನೋಜಿ ಮಗನಾಗಿರತಕ್ಕಂತ ಬಾಚಿಬಸವಾಚ್ಚಾರಿಯ ಮಡದಿ ಶರಣೆ ಮುದ್ದೋಜಿ ಇವರ ಗರ್ಭದಲ್ಲಿ ಹುಟ್ಟಿದ್ದಾರೆ ಏಳು ಮಂದಿ ಗಂಡು ಮಕ್ಕಳು ಹುಟ್ಟುದ್ದಾರೆ. ಆ ಕಡೆಯಲ್ಲಿ ಹುಟ್ಟಿರುವಂತ ಭಾಗ್ಯದ ಬಂಗಾರದ ಗೊಂಬೆ ಕೆಂಬಣ್ಣನ್ನು ಹೋಗಿ ದಾನವಾಗಿ ಪಡ್ಕೊಂಡು ಬರುತ್ತೀನಿ ಎಂದರು. ಅದಕ್ಕೆ ದೊಡ್ಡಮ್ಮತಾಯಿ ಹೇಳುತ್ತಿದ್ದಾರೆ ಅಣ್ಣಯ್ಯ ಲಕ್ಷಿಕರು ಅವರು ಮನೆ ಮನೆ ಭಿಕ್ಷೆ ಮಾಡುವವರು ನಾವು ಅಂತಹ ಲಕ್ಷಿಕರ ಮಕ್ಕಳನ್ನು ನಮ್ಮಂತಹ ಭಿಕ್ಷುಕರಿಗೆ ದಾನವಾಗಿ ಕೊಟ್ಟಾರಾ ಅಣ್ಣಯ್ಯ. ಅದಕ್ಕೆ ಧರೆಗೆದೊಡ್ಡವರು ಹೇಳುತ್ತಿದ್ದಾರೆ ದೊಡ್ಡಮ್ಮ ಯಾರು

ಲಕ್ಷಿಕರು ಯಾರು ಪುಣ್ಯವಂತರು ಯಾರು ಭಿಕ್ಷುಕರು. ಹುಟ್ಟದಂತ ಗ್ರಾಮ ನಿಡುಘಟ್ಟದಲ್ಲಿ ಇದ್ದಾಗ ಉಣ್ಣೋ ಅನ್ನ ಚಿನ್ನವಾಗಿತ್ತು ಕುಡಿಯೋ ಅಂಬಲಿ ಪಾಯಸವಾಗಿತ್ತು. ಗಂಡ ಹೆಂಡ್ತಿಗೆ ಒಂದು ಬಟ್ಟೆ ಆಗಿತ್ತು. ಆರು ಜನ ಗಂಡುಮಕ್ಕಳನ್ನು ಕರ್ಕೊಂಡು ಆರು ಉದ್ಯೋಗವನ್ನು ಸಾರಿದರೂ ಕೂಡ ಒಪ್ಪತ್ತಿನ ಗಂಜಿಗೆ ಸಾಲುತ್ತಿರಲಿಲ್ಲ. ಯಾವ ದಿನದಲ್ಲಿ ಬಡತನ ಇದ್ದ ಕಾಲದಲ್ಲಿ ಅದಕ್ಕೆ ಹೇಳುವುದು "ಬಡತನವೇ ಜಗತ್ತಿನಲ್ಲಿ ದೊಡ್ಡದಂತೆ". ಚಿರಸ್ಥಾನ ಜಗತ್ತಿನಲ್ಲಿ ಸ್ಥಿರವಿಲ್ಲವಂತೆ. ಆರು ಜನ ಗಂಡುಮಕ್ಕಳನ್ನು ಕರ್ಕೊಂಡು ಯಾವ ರೀತಿಯಲ್ಲಿ ಉದ್ಯೋಗ ಸಾರುತ್ತಿದ್ದರೆಂದರೆ ದೊಡ್ಡಮ್ಮ.

ಆರು ಜನ ಗಂಡು ಮಕ್ಕ . . . .
ಗಂಡ ಬಸವಾಚಾರಿ .. . . . .
ಸುವ್ವಾ ಬಾ ಚೆನ್ನಾ .. . .
ಅಯ್ಯೋ ಶಿವನೇ .. . .
ಊರೂರಿನ ಮೇಲೆ ಅವರು . . . .
ಉದ್ಯೋಗ ಸಾರುತ್ತಾರೆ .. . . . .
ಸುವ್ವಾ ಬಾ ಚೆನ್ನಾ . .. .
ಅಯ್ಯೋ ಶಿವನೇ . .. .
ಮನೆಯ ಕಟ್ಟುತ್ತೀವಿ . . . .
ದೊಡ್ಡಿಯ ಕೀಳುತ್ತೀವಿ .. . .
ನೇಗಲ ಕೆತ್ತುತ್ತೀವಿ .. . .
ತಡಿಯನ್ನೆ ಹಾಯಿಸುತ್ತೀವಿ .. . .
ಸುವ್ವಾ ಬಾ ಚೆನ್ನಾ .. . .
ಅಯ್ಯೋ ಶಿವನೇ .. . .

ಹಟ್ಟಿ ಕಟ್ಟುತ್ತೀವಿ ತೊಟ್ಟಿ ತಿರುಗುತ್ತೀವಿ ಕಿಟಿಕಿ ಕೂಡುತ್ತೀವಿ ನೇಗಿಲು ಮಾಡುತ್ತೀವಿ ತಡಿ ಹಾಯಿಸುತ್ತೀವಿ ಕೊಟ್ಟಷ್ಟು ಕೊಡ್ರವ್ವ ನೀವು ಹೇಳಿದಷ್ಟು ಕೆಲಸ ಮಾಡುತ್ತೀವಿ ಎಂದ್ರು ಕೂಡು ಮೂರು ಹೊತ್ತಿನ ಗಂಜಿಗೂ ಸಾಲುತ್ತಿಲ್ಲ. ಆವಾಗ ಮುದ್ದಮ್ಮ ಕೂತಾಗಲೂ ಶಿವ ನಿಂತಾಗಲೂ ಶಿವ ಮಂಟೇದಲಿಂಗಯ್ಯ ನನ್ನ ಬಡತಾನ ಯಾವಾಗ ಬಯಲು ಮಾಡಿಯಪ್ಪ ಸಿರಿತಾನ ಯಾವಾಗ ಕೊಡುವೆಯಪ್ಪ ಎಂದು ಕಂಡ ಕಂಡ ಕಲ್ಲುದೇವರಿಗೆಲ್ಲ ಕೈಯೆತ್ತಿ ಮುಗಿಯುತ್ತಿದ್ದಳಂತೆ ಬಡತನವಿದ್ದಾಗ ಮುದ್ದಮ್ಮ. ಕೇಳಮ್ಮ ದೊಡ್ಡಮ್ಮ ನನ್ನ ವರದಲ್ಲಿ ಹುಟ್ಟಾವ್ನೆ ಭಾಗ್ಯವುಳ್ಳ ಕೆಂಪಣ್ಣ ಒಂಬತ್ತು ಹಗಲು ಒಂಬತ್ತು ರಾತ್ರಿಗೆ ನೆತ್ತಿ ಮೇಲೆ ಕುರುಜಡೆ ಸಹಿತವಾಗಿ ಭೂಮಿಗೆ ಜನನವಾಗಿದ್ದಾನೆ ಮಗ. ಆರು ಜನ ಗಂಡು ಮಕ್ಕಳು ಇದ್ದಾರೆ ಇವರಿಗೆ ಊಟಕ್ಕೆ ಇಲ್ಲ ಮತ್ತೊಬ್ಬ ಮಗ ಹುಟ್ಟಿದ್ದಾನೆ ಎಂದು ಹೇಳುತ್ತಾ ಮುದ್ದಮ್ಮ ತನ್ನ ಗಂಡನಿಗೆ ಒಂದು ಬುದ್ಧಿವಾದದ ಮಾತನ್ನು ಹೇಳುತ್ತಾಳೆ. ಕೆಟ್ಟು ಪಟ್ಟಣವನ್ನಾದರೂ ಸೇರಿ ಕೊಟ್ಟನ್ನಾದರೂ ಕುಟ್ಟಿ ಮಕ್ಕಳನ್ನು

ದೊಡ್ಡವರು ಮಾಡಬೇಕು ಅಂತ್ಹೇಳಿ ಹುಟ್ಟಿದಂತಹ ಗ್ರಾಮ ನಿಡುಘಟ್ಟವನ್ನು ಬಿಟ್ಟು ಆ ಚಿಕ್ಕರಾಯನ ಪಟ್ಟಣವನ್ನ ಸೇರಿದರಂತೆ. ಅವತ್ತು ಮಾನ್ಯರ ಮನೆ ಪಡಸಾಲೆ ಅರಮನೆ ಆಗಿತ್ತು. ಕೇಳವ್ವ ದೊಡ್ಡಮ್ಮ ಆ ಕಿರಿಮಗ ಕೆಂಪಾಚಾರಿ ಹುಟ್ಟಿದ ಐದು ದಿನಕ್ಕೆ

ಮಗ ಹುಟ್ಟಿದ ಮೇಲೆ . . . . .
ದರಿದ್ರ ದೂರಾಯ್ತು .. . .
ಸಂಪತ್ತು ಬಂದ್ಬುಡ್ತು . . . .
ಬಡತಾನ ಹೊಂಟ್ಹೋಯ್ತು .. . .
ಸಿರಿತಾನ ಬಂದ್ಬುಡ್ತು . . ..
ಮೊರದಲ್ಲಿ ಬಂಗಾರ ಹವಳದಲ್ಲಿ ಗೋಡೆ
ಮುತ್ತಿನಲ್ಲಿ ಮುಂಬಾಗಲು
ಅವಳ ಮನೆಯ ಮೇಲೆ ಮುಚ್ಚಿರುವ
ಹಂಚು ತಾಮ್ರದ ಬಿಲ್ಲೆ ಹಂಚು . . . .
ಸಿದ್ದಯ್ಯ ಸ್ವಾಮಿ ಬನ್ನಿ . . . .
ಉಣ್ಣಕ್ಕೆ ಸಣ್ಣಕ್ಕಿ ಅನ್ನ
ಕುಡಿಯಕ್ಕೆ ಸರಳೆಮ್ಮೆ ಹಾಲು
ಮಲಗುವಂತ ಮಂಚ ಚಿನ್ನ
ಬೆರಳಿಯ ಮಂಚ . . . .
ಪಾದ ತೊಳೆಯುವಂತ ಕಲ್ಲು ಪಚ್ಚೆಕಲ್ಲು
ಕರುವ ಕಟ್ಟಾಕುವ ಗೂಟ ಚಿನ್ನ ಬೆರಳಿ
ಗೂಟವಲ್ಲೋ. . . . .
ಸಿದ್ದಯ್ಯ ಸ್ವಾಮಿ ಬನ್ನಿ . . ..
ಮಾರಳ್ಳಿಯ ಒಳಗೆ . . . . . .
ಲಿಂಗಯ್ಯ ದಯಮಾಡೋ .. . . . .

ಮಾರಳ್ಳಿ ಒಳಗೆ ಕಿರಿಮಗ ಕೆಂಪಾಚಾರಿ ಹುಟ್ಟಿದ ಮೇಲೆ ದರಿದ್ರ ದೂರವಾಯ್ತು ಸಂಪತ್ತು ಬಂದ್ಬುಡ್ತು ಬಡತನ ಹೊಂಟ್ಹೋಯ್ತು ಸಿರಿತನ ಬಂದ್ಬುಡ್ತು. ಮೊರದಲ್ಲಿ ಬಂಗಾರ ಹವಳದಲ್ಲಿ ಗೋಡೆ ಕಂಚಿನೊಳಗೆ ಕದ ಮನೆಯ ಮೇಲೆ ಮುಚ್ಚಿರುವ ಹಂಚು ತಾಮ್ರದ ಬಿಲ್ಲೆಯ ಹಂಚಂತೆ. ಉಣ್ಣಕ್ಕೆ ಸಣ್ಣಕ್ಕಿ ಅನ್ನ ಕುಡಿಯೋಕ್ಕೆ ಸರಳೆಮ್ಮೆ ಹಾಲು ಮಲಗುವಂತ ಮಂಚ ಚಿನ್ನ ಬೆಳ್ಳಿ ಮಂಚ. ಕಾಲು ತೊಳೆಯುವ ಕಲ್ಲು ಪಚ್ಚೆಕಲ್ಲು. ಮುದ್ದಮ್ಮ ಏಳಟ್ಟಿಯನ್ನು ಕಟ್ಕೊಂಡು ಏಳಟ್ಟಿ ತಿರ್ಕೊಂಡು ಬಾಳಾಟ ಮಾಡುತ್ತಿದ್ದಾಳೆ. ಒಬ್ಬೊಬ್ಬ ಗಂಡು ಮಕ್ಕಳನ್ನು ಕೂಡ ಒಂದೊಂದು ಉದ್ಯೋಗವನ್ನು ನೇಮಿಸಿದ್ದಾಳೆ ಮುದ್ದಮ್ಮ.

ಒಬ್ಬ ಮಗನಿಗೆ ಚಿನ್ನದಲ್ಲಿ ಉದ್ಯೋಗ

ಒಬ್ಬ ಮಗನಿಗೆ ಬೆರಳಿಯಲ್ಲಿ ಉದ್ಯೋಗ
ಒಬ್ಬ ಮಗನಿಗೆ ತಾಮ್ರದಲ್ಲಿ ಉದ್ಯೋಗ
ಒಬ್ಬ ಮಗನಿಗೆ ಮರದಲ್ಲಿ ಉದ್ಯೋಗ
ಒಬ್ಬ ಮಗನಿಗೆ ಹವಳದಲ್ಲಿ ಉದ್ಯೋಗ
ಒಬ್ಬ ಮಗನಿಗೆ ಮುತ್ತಿನ ಉದ್ಯೋಗ
ಕಡೆಯಲ್ಲಿ ಹುಟ್ಟಿದ ಮಗನಿಗೆ ಕಬ್ಬಿಣದ
ಉದ್ಯೋಗವಲ್ಲೋ .. . .
ಸಿದ್ದಯ್ಯ ಸ್ವಾಮಿ ಬನ್ನಿ .. . .

ಕೆಂಪಾಚಾರಿಗೆ ಕಬ್ಬಿಣದ ಉದ್ಯೋಗ ಒಬ್ಬೊಬ್ಬ ಮಕ್ಕಳಿಗೂ ಒಂದೊಂದು ಉದ್ಯೋಗವನ್ನು ನೇಮಿಸಿ ಬಾಳಾಟವನ್ನು ಬಾಳುತ್ತಿದ್ದಾಳೆ ಬಂಗಾರದ ಗೊಂಬೆ ಭಾಗ್ಯವುಳ್ಳ ಮುದ್ದಮ್ಮ. ಆ ಕೊನೆಯ ಮಗನನ್ನು ದಾನ ಪಡೆಯ ಬೇಕು ಅಂತ್ಹೇಳಿ ಸ್ವಾಮಿಯವರು ಸೋಮವಾರ ಮಾಪುಣ್ಯ ಕಾಲದಲ್ಲಿ ಉಗ್ರಾಣದ ಮನೆಯ ಒಳಗೆ ಬಿಂಕು ಬಿರುದು ಲಾಂಛಾನ ಧರಿಸಿದರು ಸ್ವಾಮಿಯವರು. ಶಿವಕಂತೆ, ಬುಟ್ಮಂಡೆ ಬುಟ್ಕೀರ್ತಿ ನೆತ್ತಿಮೇಲೆ ಧರಿಸಿಕೊಂಡು ಎಡದಹೊನ್ನ ಪಾದಕ್ಕೆ ಕಬ್ಬಿಣದ ಎಳಭಾರಿ ಬಲದಹೊನ್ನ ಪಾದಕ್ಕೆ ಮಂಡೆ ಉರಿ ಸುತ್ತ ಸರ್ಪನ ಸುತ್ತು ಕಕ್ಕೆಮರದ ಕಂಡಾಯವನ್ನು ಎತ್ತಿ ಹೆಗಲ ಮೇಲೆ ಹೊತ್ಕೊಂಡು ತಂಬೂರಿ ಬಗ್ಗಲಲ್ಲಿ ಧರಸ್ಕೊಂಡು ನವಿಲುಗರಿ ದೊಂದೆ ಕಂಕಳಲ್ಲಿ ಧರಿಸಿ ಸ್ವಾಮಿ ಎರಡು ಪಾದದಲ್ಲಿ ಮುಳ್ಳುಪಾವಾಡವನ್ನು ಧರಿಸಿ ಬೊಳ್ಳನೇ ಬಂದರು ಸ್ವಾಮಿಯವರು. ಮಾರಳ್ಳಿ ಗ್ರಾಮಕ್ಕೆ ಹೋಗುತ್ತಿದ್ದಾರೆ ಕೆಂಪಾಚಾರಿಯನ್ನು ದಾನ ಪಡೆಯುವುದಕ್ಕೆ. ಧರೆಗೆದೊಡ್ಡವ ಪಾದಕ್ಕೆ ದೊಡ್ಡಮ್ಮತಾಯಿ ಮಂಗಳಾರತಿ ಬೆಳಗುತ್ತಿದ್ದಾಳೆ.

ಕಂಡಾಯ ಹೊತ್ಕೊಂಡು
ಕೆಂಡಗಣ್ಣ ಬರುವಾಗ
ಭೂಮಂಡಲವೆಲ್ಲ ನಡುಗಿತ್ತು
ಸುವ್ವಾ ಬಾ ಚೆನ್ನಾ ಬಸವಯ್ಯ
ರಾಜಬೊಪ್ಪಣಪುರವ ಪ್ರೇಮದಲ್ಲಿ
ಬಿಟ್ಟವರೆ ಕಂಡಾಯ ಹೊತ್ಕೊಂಡು
ತಂಬೂರಿ ಹೊತ್ಕೊಂಡು . . . .
ಹಳ್ಳದಾಸಳ್ಳಿ ಬಲಗಡೆಗೆ ಬಿಟ್ಕೊಂಡು
ದೇವಪಟ್ಟಣದ ಮಾರ್ಗವಾಗಿ
ನಮ್ಮ ದೇವರೆ ದಯಮಾಡುತ್ತಾರೆ
ಸಿದ್ದಯ್ಯ ಸ್ವಾಮಿ ಬನ್ನಿ
ಎಳೆಕುಂದೂರು ಬೆಟ್ಟವನ್ನು ಸ್ವಾಮಿ
ಗಳ್ಳ ಗಳ್ಳನೇ ಹತ್ತುತ್ತಾರೆ

ಸಿದ್ದಯ್ಯ ಸ್ವಾಮಿ ಬನ್ನಿ

ಸ್ವಾಮಿಯವರು ಎಳೆಯ ಕುಂದೂರು ಬೆಟ್ಟದ ಕೊಂಬೆ ಮೇಲೆ ನಿಂತ್ಕೊಂಡು ಮಾರಳ್ಳಿ ಗ್ರಾಮವನ್ನು ಲಾಲಾಯಿಸಿ ನೋಡಿದರು ಮಾಮೂರ್ತಿ ಕಂಡಾಯದ ಒಡೆಯ. ಅಂದ್ರೆ ಕೆಂಪಾಚಾರಿ ಹುಟ್ಟೋಕ್ಕೆ ಮೊದಲೆ ಮಳವಳ್ಳಿ ಗ್ರಾಮ ಮೂರು ಮನೆ ಕೊಂಪೆ ದೊಡ್ಡಿ ಹೊಂಗೆಮರದ ಹಳ್ಳ ಮಳವಳ್ಳಿ, ಚಿಕ್ಕರಾಯಪಟ್ಟಣ ಮಾರಳ್ಳಿ ಗ್ರಾಮ. ಪುಣ್ಯವಂತರ ಮಡದಿ ಶರಣೆ ಮುದ್ದಮ್ಮ ಏಳನೆಯ ಮಗ ಲಕ್ಷ್ಮೀ ಪುತ್ರ. "ಹದಗೆಟ್ಟ ಮಕ್ಕ ಹನ್ನೆರಡು ಹುಟ್ಟಿದರೂ ಪ್ರಯೋಜನವಿಲ್ಲ." ಕೆಂಪಾಚಾರಿ ಅಂಥ ಒಬ್ಬ ಮಗ ಹುಟ್ಟಿದರೆ ಸಾಕು. ಆ ಮಗನಿಗೆ ಕಲ್ಲುಸಕ್ಕರೆ ನೊರೆಹಾಲು ತಕ್ಕೊಂಡು ಹೋಗಬೇಕು ಅಂತ್ಹೇಳಿ

ಬೆರಳಿ ತವಟಿಗೆ ತಗದು ಎಡಗೈಲಿ
ಹಿಡಕೊಂಡು . . . .
ಕಂಚಿನ ಹಂಡೆಯ ತೆಗೆದು ಬಲಗೈಲಿ
ಹಿಡಕೊಂಡು . . ..
ಬೆರಳಿ ತವಟಿನ ಮೇಲೆ ಮುದ್ದಮ್ಮ
ಕೂತ್ಕೊಂಡು . . . .
ಮಂಡಿ ಸಂದಿಗೆ ಕಂಚಿನ ಹಂಡೆ
ಮಡಿಕೊಂಡು .. . .
ತಾಯಿ ಕರುವನ್ನು ಬಿಟ್ಕೊಂಡು . ..
ಹಾಲನ್ನು ಕರೆಯುತ್ತಾಳೆ
ಸಿದ್ದಯ್ಯ ಸ್ವಾಮಿ ಬನ್ನಿ .. . . .

ಕರುವನ್ನು ಬಿಟ್ಕೊಂಡು ಹಾಲನ್ನು ಕರೆಯುತ್ತಿದ್ದಾಳೆ ಪುಣ್ಯವಂತನ ಮಡದಿ ಮುದ್ದಮ್ಮ. ಸ್ವಾಮಿ ಧರೆಗೆದೊಡ್ಡವರು ಕಾಮಧೇನು ಕರೆಯುವಂತ ಟೈಮಿಗೆ ಸರಿಯಾಗಿ ಎಳೆಕುಂದೂರು ಬೆಟ್ಟವನ್ನು ಬಿಟ್ಟು ಮಾರಳ್ಳಿ ಗ್ರಾಮಕ್ಕೆ ಬಂದರಂತೆ. ಬಾಳುವರ ಮನೆಯ ಮುಂದೆ ನಿಂತು ದಾನ ಧರ್ಮ ಸಾರಿದರು ಪರಂಜ್ಯೋತಿ ನನ್ನಪ್ಪ. ಹರ ದೇವರ ಭಿಕ್ಷಾ, ಗುರುದೇವರ ಭಿಕ್ಷಾ, ಸಾದು ಸಂಗಯ್ಯನ ಭಿಕ್ಷಾ, ಕಲ್ಯಾಣದೇವರ ಭಿಕ್ಷಾ, ಜ್ಯೋತಿಲಿಂಗಯ್ಯನ ಭಿಕ್ಷಾ ಕೈಲಾಸದವರ ಭಿಕ್ಷಾ, ಮುಮ್ಮೂರ್ತಿಗಳ ಭಿಕ್ಷಾ, ಮುಕ್ಕಣ್ಣಯ್ಯನ ಭಿಕ್ಷಾ ಅಂತ್ಹೇಳಿ ದಾನ ಸಾರಿದರೂ ಗ್ಯಾನವಿಲ್ಲ ಮುದ್ದಮ್ಮನಿಗೆ ಭಿಕ್ಷೆ ಎಂದುರೂ ಲಕ್ಷ್ಯವಿಲ್ಲ. ನೀಡಿದ ಕಾಲ ತೆಗೆಯನಿಲ್ಲ ನಿಜಭಕ್ತಿ ನೋಡನಿಲ್ಲ. ಗಂಧದ ಕಡ್ಡಿ ಹಸ್ಸಿ ಕರವೆತ್ತಿ ಕೈ ಮುಗಿದಿಲ್ಲ ಮುದ್ದಮ್ಮ. ಕರುವನ್ನು ಬಿಟ್ಕೊಂಡು ಹಾಲನ್ನು ಕರೆಯುತ್ತಿದ್ದಾಳೆ ಮುದ್ದಮ್ಮ. ಧರೆಗೆದೊಡ್ಡವರು ಅಷ್ಟೋತ್ತು ನೋಡಿದರು ಇಷ್ಟೋತ್ತು ನೋಡಿದರು ಮೇಲೆ ಕೆಳಗೆ ಹಲ್ಲು ಹುಟ್ಟುವ ನರಮಾನವರಿಗೆ ಗೊತ್ತಾಗದಿದ್ದರೂ ಆ ಕರೆಯುವಂತ ಕಾಮಧೇನುಗಾದರೂ ಗೊತ್ತಾಗಬಾರದಾ ? ಅಂತ್ಹೇಳಿ ಸ್ವಾಮಿ ಧರೆಗೆದೊಡ್ಡವರು ಕಂಡಾಯದ ಬೆಳಕು ತೋರಿದರು ಜೊತೆಗೆ ತಂಬೂರಿ ಕೂಚು ಮಾಡಿದರಂತೆ ಗಗ್ಗರ ಲಾಗಮಾಡಿದರು

ತಂಬೂರಿ ನಾದಕ್ಕೂ . . . ..
ಗಗ್ಗರದ ಕೂಚಿಗೂ . . . . .
ಕರೆಯತಕ್ಕಂತ ಕಾಮಧೇನು . . .
ಝುಲ್ಲ ಝುಲ್ಲನೇ ಬೆದರಿ
ತುಮ್ಮ ತುಮ್ಮನೇ ಕುಣಿದು . .
ಗುರುವೇ ಕಾಲನ್ನ ಎತ್ತಿತ್ತಂತೆ
ಹಾಲಿನಂಡೆ ಒದ್ದಿತ್ತಲ್ಲ . . . .
ಲಿಂಗಪ್ಪ ನೀವೇ ಬನ್ನಿ . . . .

ಕೇಳವ್ವ ಈ ಧರೆಯನ್ನು ಪಡೆದುದಕ್ಕೆ ಧರೆಗೆದೊಡ್ಡವರು ಎಂದು ನಾಮಕರಣವಾಯ್ತು. ಕತ್ತಲರಾಜ್ಯವನ್ನು ಬೆಳಕು ಮಾಡಿದುದಕ್ಕೆ ಜ್ಯೋತಿಲಿಂಗಯ್ಯ ಅಂತ ನಾಮಕರಣವಾಯ್ತು. ಉಳುಮೆ ಮೂಲೆಯಲ್ಲಿ ಉಳುಮೆಸಂಗಪ್ಪ ಅಂತ ನಾಮಕರಣವಾಯ್ತು. ಆದೂ ಅಲ್ಲದೆ ಆದಿಕಲ್ಯಾಣದಲ್ಲಿ ಅಲ್ಲಮಾಪ್ರಭುಗಳೆಂದು ನಾಮಕರಣವಾಯ್ತು. ಕೊಡೇಕಲ್ಲಿನಲ್ಲಿ ಕೊಡೇಕಲ್ಲಯ್ಯ ಅಂತ ನಾಮಕರಣವಾಯ್ತು. ಶಿಲವಂತಪುರದಲ್ಲಿ ಬ್ರಾಹ್ಮಣರಿಗೆ ಪಂಚಾಂಗವನ್ನು ಕೊಟ್ಟಿದಕ್ಕೆ ಶಿಲವಂತಯ್ಯ ಅಂತ ನಾಮಕರಣವಾಯ್ತು. ಬೊಮ್ಮನ ತಿಟ್ಟಿನಲ್ಲಿ ಬೊಮ್ಮಯ್ಯ ಅಂತ ನಾಮಕರಣವಾಯ್ತು. ತುರ್ಕರಕಾಂಡದಲ್ಲಿ ಅಲ್ಲಾ ಓ ಅಕ್ಬರ್ ಅಂತ ನಾಮಕರಣವಾಯ್ತು. ವಿಜಯನಗರದಲ್ಲಿ ಗಣಗಾಡಿಗರ ಜೊತೆಯಲ್ಲಿ ಮೋಡಿ ಆಟವನ್ನು ಗೆದ್ದಿದಕ್ಕೆ ಗಣಗಾಡಗರಗಂಡ ಅಂತ್ಹೇಳಿ ನಾಮಕರಣವಾಯ್ತು. ಮೈಸೂರು ಅರಮನೆಗೆ ಹರಸಿ ಕಂಡಾಯವನ್ನು ಕೊಟ್ಟದಕ್ಕೆ ಕಂಡಾಯದೊಡೆಯ ಅಂತ ನಾಮಕರಣವಾಯ್ತು. ಆದಿಹೊನ್ನಾಯಕನ ಹಳ್ಳಿಯಲ್ಲಿ ಚೆನ್ನಮಂಟೇಸ್ವಾಮಿ ಅಂತ ನಾಮಕರಣವಾಯ್ತು. ಆದಿಹಲವಾರದಲ್ಲಿ ಹಲವಾರದಯ್ಯ ಅಂತ ನಾಮಕರಣವಾಯ್ತು. ಎಳೆ ಕುಂದೂರು ಬೆಟ್ಟದಲ್ಲಿ ಗಡ್ಡಮೀಸೆ ಬಿಟ್ಟಿದ್ದಕ್ಕೆ ಕುಂದೂರಯ್ಯ ಅಂತ ನಾಮಕರಣವಾಯ್ತು. ಬೊಪ್ಪಣಪುರದಲ್ಲಿ ಸತ್ತ ಕುರಿಗಳನ್ನ ಮರಳಿ ಕೊಟ್ಟದಕ್ಕೆ ಗೊಲ್ಲಗುರಿಯಯ್ಯ ಅಂತ ನಾಮಕರಣವಾಯ್ತು. ತುಂಬ್ದ ಸೋಮವಾರ ಮಾಪುಣ್ಯ ಕಾಲದಲ್ಲಿ ನಿನ್ನ ಮನೆ ಬಾಗಿಲಿಗೆ ಬಂದು ದಾನಸಾರಿದಕ್ಕೆ ತಾಯಿ ನಾನು ಮಂಟ್ಕೊಳ್ಳ ಹಾಗೆ ನಿನ್ನ ಮನೆ ಮಂಟ್ಕೊಳ್ಳುವನೆ ಅಂತ ಹೇಳಿದೆಯಲ್ಲ ತಾಯಿ.

ನನ್ನ ಮಂಟೇದಲಿಂಗಯ್ಯ ಅಂತ
ನಾಮಕರಣ ಮಾಡಿರವ್ವ
ಸಿದ್ದಯ್ಯ ಸ್ವಾಮಿ ಬನ್ನಿ
ನೀವು ಕಟ್ಟಿದ ಹೆಸರು ನನಗೆ
ಶಾಶ್ವತವಾಗಲವ್ವ ಊರೂರ ಮೇಲೆ
ದೇಶ ದೇಶದೊಳಗೆ . .. . . .
ಸಿದ್ದಯ್ಯ ಸ್ವಾಮಿ ಬನ್ನಿ

ಮುದ್ದಮ್ಮಶರಣೆ . . . . ..
ಲಿಂಗಪ್ಪ ನೀವೇ ಬನ್ನೋ. . .
ನಾಳೆ ಹೊನ್ನಯ್ಯ ಚೆನ್ನಯ್ಯ ಅನ್ನುವವರು
ಗುಡ್ಡನ ಬಿಡಿಸ್ಕೋತ್ತಾವ್ರೆ .. . .
ಇರುಮುಡಿ ಕಟ್ಟಿಸ್ಕೋತ್ತಾವ್ರೆ . . . .
ನಮ್ಮ ಮನೆಯ ಕಂಡಾಯ
ನಮ್ಮ ಮನೆಯ ತಂಬೂರಿ
ಹೊರುತವ್ರೆ ನನ್ನಪ್ಪ .. . .
ಈ ಕಂಡಾಯ ತಂಬೂರಿ ಹೊರುವರ
ನಾಳೆ ಮಂಟೇದವರು ಎನ್ನಳವ್ವ
ಸಿದ್ದಯ್ಯ ಸ್ವಾಮಿ ಬನ್ನಿ .. . .

ತಾಯಿ ನಾಳೆ ಹೊನ್ನಯ್ಯ ಚೆನ್ನಯ್ಯ ಗುಡ್ಡನ ಬಿಡಸ್ಕೋತ್ತಾರೆ ಗುರುಮಣಿ ಕಟ್ಟಿಸ್ಕೋತ್ತಾರೆ ನಮ್ಮ ಮನೆಯ ಕಂಡಾಯ ನಮ್ಮ ಮನೆಯ ತಂಬೂರಿ ಹೊರುವವರನ್ನು ನಾಳೆ ಮಂಟೇದವರು ಎಂದು ಕರೆಯಲಿ ಕಂದ. ಮುದ್ದಮ್ಮ ನೀವು ಕಟ್ಟಿದ ಹೆಸರು ನಮಗೆ ಶಾಶ್ವತವಾಗಲಿ ಎಂದರು. ಮುದ್ದಮ್ಮ ನಾನು ಎಷ್ಟು ಬೋದರೂ ಕೋಪಿಸಿಕೊಳ್ಳದೆ ನಿಂತಾವ್ರೆ ಇವರು ಎಂತೆಯವರು ಆಗಿರಬಹುದು. ಈ ದೃಶ್ಯವನ್ನು ನನ್ನ ಗಂಡ ಬಾಚಿಬಸವಾಚಾರಿಗೆ ಹೇಳಬೇಕು ಅಂತ್ಹೇಳಿ ನಿಡುಘಟ್ಟದಲ್ಲಿ ೧೦೧ ಚಿತ್ರದ ಮರಗೆಲಸ ಮಾಡುತ್ತಿದ್ದಾನೆ. ತನ್ನ ಗಂಡ ಉದ್ಯೋಗ ಮಾಡುವ ಸ್ಥಳಕ್ಕೆ ಓಡೋಡಿ ಬರುತ್ತಿದ್ದಾನೆ. ಮುದ್ದಮ್ಮ ನಾನು ಬಡತನ ಇದ್ದಾಗ ನಾನು ಉದ್ಯೋಗ ಮಾಡುವಂತ ಸ್ಥಳಕ್ಕೆ ನೀನು ಬಂದವಳಲ್ಲ. ಇವತ್ತು ಮುತ್ತು ಸಾಲದೆ ಬಂದೆಯಾ ? ಬೆರಳಿ ಸಾಲದೆ ಬಂದೆಯಾ ? ಬಂಗಾರ ಸಾಲದೆ ಬಂದೆಯಾ ? ಅದೂ ಅಲ್ಲದೆ ಮಾರಳ್ಳಿ ಒಳಗೆ ಅಂದವರಾರು ? ಆಡಿದವರಾರು ? ಎಂದು ಹೇಳಿಬಿಟ್ಟರೆ ಈ ದೊಡ್ಡ ಬಾಚಿಯಲ್ಲಿ ತರ್ದು ತೋರಣ ಕಟ್ಟಿದ್ತೀನಿ ಎಂದನು. ಗಂಡನಾಡಿದ ಮಾತನ್ನು ಕೇಳಿ ಮುದ್ದಮ್ಮ ಕೇಳಿ ಪತಿದೇವ ಮಾರಳ್ಳಿ ಗ್ರಾಮದಲ್ಲಿ ಅಂದವರಲ್ಲ ಆಡಿದವಲ್ಲ ಸ್ವಾಮಿ. ಮಾರಳ್ಳಿ ಗ್ರಾಮಕ್ಕೆ ನಾವೇ ಲಕ್ಷಿಕರು ನಾವೇ ಪುಣ್ಯವಂತರು. ಆದರೆ ಯಾರೋ ಸ್ವಾಮಿಗಳು ಕಾವಿ ಕಾಮಂಡಲ ಧರಿಸಿದ್ದಾರೆ ರುದ್ರಾಕ್ಷಿ ಭದ್ರಾಕ್ಷಿ ಧರಿಸಿದ್ದಾರೆ ಕಂಡಾಯ ತಂಬೂರಿ ಹೊತ್ತಿರುವ ಇವರು ನಮ್ಮ ಮನೆಯ ಮುಂದುಗಡೆ ನಿಂತು ದಾನ ಸಾರಿದರು ಸ್ವಾಮಿ. ನಾನು ಎಷ್ಟು ಬೋದರೂ ಅವರು ಕೋಪಮಾಡದೇ ನಿಂತಾವ್ರೆ. ನಮ್ಮ ಮನೆಗೆ ಬಂದಿರುವ ಸ್ವಾಮಿಗಳಿಗೆ ನಾನು ಏನು ಭಿಕ್ಷೆ ಕೊಡಬೇಕು ಎಂದು ಕೇಳಿದಳು ಮುದ್ದಮ್ಮ.

ಅವರ ಹೊಟ್ಟೆ ತುಂಬಲು ಬೇಕು
ಅವರ ಜೋಳಿಗೆ ತುಂಬಲು ಬೇಕು
ಅಂತ ದಾನವ ಕೊಟ್ಟು ಮುಂದನ

ಬೀದಿಗೆ ಕಳುಗಿದರೆ ಊರೂರ ನಮ್ಮ
ಹೊಗಳಿ ಕೊಂಡಾಡುವರು
ಸಿದ್ದಯ್ಯ ಸ್ವಾಮಿ ಬನ್ನಿ

ಅವರ ಹೊಟ್ಟೆ ತುಂಬಿ ಅವರ ಜೋಳಿಗೆ ತುಂಬಿ ಕಳುಹಿಸಿದರೆ ಅವರು ಊರೂರ ಮೇಲೆ ನಮ್ಮ ಹೊಗಳಿ ಕೊಂಡಾಡುವರು ಮುದ್ದಮ್ಮ. ನಾವು ಅಷ್ಟೇ ನಾವು ಮೈಸೂರು ಹೋಗಿದ್ದೋ ಚನ್ನಾಗಿ ನೋಡಿದರು ಜೋಬು ತುಂಬ ಹಣವನ್ನು ಕೊಟ್ಟು ಕಳುಹಿಸಿದರು ಎಂದು ಊರೂರ ಮೇಲೆ ಕೊಂಡಾಡುತ್ತೀವಿ. ಹಾಗೆ ಬಾಚಿಬಸವಾಚಾರಿ ಆಡಿದಂತಹ ಮಾತನ್ನು ಕೇಳಿ ಮನೆಗೆ ಬಂದು ಬಂದಿರುವಂತ ಮಾಮುನಿಗಳಿಗೆ ಕೊಳಕು ಕೈಯಲ್ಲಿ ದಾನ ಕೊಡಬಾರದು ಅಂತ್ಹೇಳಿ ಮುದ್ದಮ್ಮ

ಸ್ನಾನದ ಮನೆಗೆ ಹೋಗಿ . . . .
ಮೀದು ಮಡಿಗಳ ಉಟ್ಟು .. . .
ಮುತ್ತು ಮೂರು ಪಾವು . . . .
ರತ್ನ ಮೂರು ಪಾವು . . . . . .
ಬಂಗಾರ ಮೂರು ಪಾವು .. . .
ಐದು ಪಾವು ಬೆನತಕ್ಕಿ .. .. . .
ತೆಗೆದು ತುಂಬವಳೆ ಮುದ್ದಮ್ಮ ..
ದಾನ ತಕ್ಕೊಳ್ಳಿ ಗುರುವೇ
ನಮ್ಮ ಕುಲದ ಒಡೆಯ ಮಂಟೇದಸ್ವಾಮಿ
ಸಿದ್ದಯ್ಯ ಸ್ವಾಮಿ ಬನ್ನಿ

ದಾನ ತಕ್ಕೊಳ್ಳಿ ಗುರುವೇ ಧರ್ಮಗುರುವೇ ಮಂಟೇದಲಿಂಗಯ್ಯ ಭಿಕ್ಷಾ ತಕ್ಕೊಳ್ಳಿ ನನ್ನ ಕುಲದೇವರೇ ಮಂಟೇಸ್ವಾಮಿ ಎಂದು ಹೇಳಿದ್ದಾರೆ ಪುಣ್ಯವಂತರ ಮಡದಿಯಾಗಿರತಕ್ಕಂತ ಶರಣೆ ಮುದ್ದಮ್ಮ. ತಾಯಿ ಮುತ್ತು ರತ್ನ ಬಂಗಾರ ಯಾರಿಗೆ ಬೇಕವ್ವ ಇದು ವಂಚನಕಾರ ಲಕ್ಷ್ಮೀ. ಇವತ್ತು ಇದ್ದವಳು ನಾಳೆ ಇರೋಲ್ಲ. ನಾಳೆ ಇದ್ದವಳು ಆಚೆ ನಾಳೆ ಇರೋದಿಲ್ಲ. ಆದ್ದರಿಂದ ಕೇಳವ್ವ ಮುದ್ದಮ್ಮ ಮಾತನಾಡುವ ಮುತ್ತು ನಿಮ್ಮ ಮನೆಯಲ್ಲಿ ಇರುವ ಕಂದನನ್ನು ನನಗೆ ದಾನವಾಗಿ ಕೊಡವ್ವ. ಈಗಿರುವ ಭಾಗ್ಯಕ್ಕಿಂತ ಇನ್ನೂ ಹೆಚ್ಚಿನ ಭಾಗ್ಯ ಕೊಡುತ್ತೀನಿ ಎಂದು ಧರೆಗೆದೊಡ್ಡವರು. ಬುದ್ಧಿ ನಮ್ಮ ಮನೆ ಒಳಗೆ ಮುತ್ತು ರತ್ನ ಬಂಗಾರ ನಮ್ಮ ಮನೆಯಲ್ಲಿ ಕಾಲ್ಕಸವಾಗಿ ಒದ್ಕೊಂಡು ತಿರುಗಾಡುತ್ತಿದೆ. ಮಾತನಾಡುವ ಮುತ್ತು ಎಂದರೆ ನನಗೆ ಅರ್ಥವಾಗಲಿಲ್ಲ ಎಂದಳು ಮುದ್ದಮ್ಮ. ಹಿಂದೆ ಚಿನ್ನದ ನಾಣ್ಯ ಬೆಳ್ಳಿಯ ನಾಣ್ಯಗಳನ್ನು ಅವತ್ತಿನ ಕಾಲದಲ್ಲಿ ಅಂದರೆ ವಿಜಯನಗರದಲ್ಲಿ ಬೀದಿಯಲ್ಲಿ ಮಾರುತ್ತಿದ್ದರಂತೆ. ಮುತ್ತು ರತ್ನ ಮಾರುವಂತ ಬೀದಿ ಇದೆ ಹಂಪೆಯಲ್ಲಿ. ಮಕ್ಕಳೆಷ್ಟು ಎಂದು ಕೇಳಿದರು ಸ್ವಾಮಿ

ಒಬ್ಬರಲ್ಲ ಇಬ್ಬರಲ್ಲ . . . . .

ಮೂರಲ್ಲ ನಾಕಲ್ಲ .. . .
ಐದಲ್ಲ ಆರಲ್ಲ . . ..
ಗುರುವೇ ಏಳುಮಂದಿ ಗಂಡು ಮಕ್ಕ
ನನ್ನ ಗರ್ಭದಲ್ಲಿ ಜನಿಸಿದ್ದಾರೆ
ಸಿದ್ದಯ್ಯ ಸ್ವಾಮಿ ಬನ್ನಿ .. . . .
ಏಳುಮಂದಿ ಗಂಡು ಮಕ್ಕ
ಮಾರಳ್ಳಿಯ ಒಳಗೆ ನೀನೇ
ಭಾಗ್ಯಶಾಲಿ ನೀನೇ ಪುಣ್ಯಶಾಲಿ
ಆ ಕಡೆಯಲ್ಲಿ ಹುಟ್ಟಿರುವ ಕೆಂಪಾಚಾರಿಯ
ದಾನವಾಗಿ ನೀಡು ಮಗಳೇ .. . . ..
ಸಿದ್ದಯ್ಯ ಸ್ವಾಮಿ ಬನ್ನಿ .. . .

ಕಂದ ಆರು ಮಂದಿ ಗಂಡು ಮಕ್ಕ ನಿನ್ನ ಮಾರಳ್ಳಿ ಗ್ರಾಮಕ್ಕೆ ಆಳುವುದಕ್ಕೆ ಸಾಕು. ಕಡೆಯ ಮಗನಾದ ಬಂಗಾರದ ಗೊಂಬೆ ಭಾಗ್ಯವುಳ್ಳ ಕೆಂಪಾಚಾರಿಯನ್ನು ನನಗೆ ದಾನವಾಗಿ ಕೊಟ್ಟಿಟ್ಟರೆ ಈ ಭಾಗ್ಯವಿಲ್ಲ ಇನ್ನೂ ಭಾಗ್ಯ ಕೊಡುತ್ತೀನಿ. ಈ ಮಾತನ್ನು ಕೇಳಿ ಮುದ್ದಮ್ಮನಿಗೆ ಹತ್ತುಬುಡ್ತು ಬಲು ಕೋಪ. "ಹೆತ್ತ ಮಕ್ಕಳನ್ನು ಬಿತ್ತಿದ ಬೆಳೆಯನ್ನು ಯಾರು ದಾನ ಕೊಡುತ್ತಾರೆ." ಆರು ಜನ ಗಂಡುಮಕ್ಕಳಲ್ಲಿ ಯಾರಾದರೊಬ್ಬರನ್ನು ಕೇಳಿದರೆ ತಕ್ಕೊಂಡು ಹೋಗೋ ಪರದೇಸಿ ಅಂತ ಕಳುಹಿಸಿ ಬಿಡುತ್ತಿದ್ದೆ. ನನ್ನ ಬಂಗಾರದ ಗೊಂಬೆ ಭಾಗ್ಯವುಳ್ಳ ಕೆಂಪಾಚಾರಿ ಹುಟ್ಟಿದ ಮೇಲೆ ನಮ್ಮ ದರಿದ್ರ ದೂರವಾಯ್ತು. ಸಂಪತ್ತು ಬಂದ್ಬಿಡ್ತು ಐಶ್ವರ್ಯ ಬಂದ್ಬಿಡ್ತು. ಅಂತಹ ಬಂಗಾರದ ಗೊಂಬೆಯನ್ನು ದಾನವಾಗಿ ಕೇಳಬಹುದಾ ? ಪರದೇಸಿ. "ಭಿಕ್ಷೆಗೆ ಬಂದವನು ಬಿಸಿ ಅನ್ನ ಕೇಳದಂಗಾಯ್ತು". "ತಿರಕೆ ಮಾಡಕ್ಕೆ ಬಂದವನು ಹಿರಿ ಹೆಡ್ತಿ ಕೇಳ್ದಂಗಾಯ್ತು". ನಿನ್ನ ಬಾಯಿ ಸೇದ್ಹೋಗ. ಈ ಮಾತು ನನ್ನ ಗಂಡನ ಕಿವಿಗೆ ಬಿದ್ಬುಟ್ರೆ, ನಿನ್ನ ಬಾಚಿಯಲ್ಲಿ ತರ್ದು ಬಿಡುತ್ತಾನೆ ಆದ್ದರಿಂದ ನನ್ನ ಗಂಡ ಬರುವುದಕ್ಕೆ ಮೊದಲೇ ಮನೆ ಬಿಟ್ಟು ಕಡದೋಗು ಪರದೇಸಿ ಜಂಗಮ ಅಂತ್ಹೇಳಿದರು. ನೀನು ನಿನ್ನ ಮಗನನ್ನು ದಾನವಾಗಿ ಕೊಟ್ಟಿಟ್ಟರೆ " ನಾನು ಒರಗೋದೇವರು ಆಗುತ್ತೀನಿ ಅವ್ನ ಮೆರೆಯೋ ದೇವರು ಮಾಡುತ್ತೀನಿ ಕಂದ". ನೀನು ಮನೆ ಮನೆ ಭಿಕ್ಷೆ ಮಾಡುವಂತ ಭಿಕ್ಷುಕ. ನೀನೇ ಭಾಗ್ಯಕೊಡಬೇಕು ನನ್ನ ಮಗ ತಂದಿರುವ ಭಾಗ್ಯವೇ ಸಾಕು ನನಗೆ. ನೀನೇನು ಕೊಡಬೇಕು ನಾನೇನು ತಕ್ಕೋಬೇಕು ಮಾರಳ್ಳಿ ಬಿಟ್ಟು ಕಡದೋಗು ಜಂಗಮ. ಕಂದ "ಸುಳ್ಳಾಡಿದವರ ಮನೆ ಸೊಲ್ಲು ಕಡೆಸುತ್ತೀನಿ, ಮದ್ದಿಕ್ಕಿದವರ ಮನೆ ಮಧ್ಯಾಹ್ನಕ್ಕೆ ಕೆಡಿಸುತ್ತೀನಿ, ದೂಷ್ಣ ಮಾಡಿದವರ ಮನೆ ಧೂಳಿಪಟ ಮಾಡುತ್ತೇನೆ. ಅನ್ನ ಇಕ್ಕಿದವರ ಮನೆ ಪುಣ್ಯವಂತರ ಮಾಡಬಲ್ಲೆ. ನಿಂದೆ ಮಾಡಿದವರ ಮನೆಯ ನಿರ್ಮೂಲ ಮಾಡಬಲ್ಲೆ. ಹೊಟ್ಟೆಕಿಚ್ಚು ಪಡುವವರ ಮನೆ ಒಚ್ಚೊಚ್ಚರಿಕೆ ಮುರುದಾಕಬಲ್ಲೆ. ಸಿದ್ದಣ್ಣ ಬಾಳುತ್ತಾನೆ ಅಂತ ಲಿಂಗಣ್ಣ ಹೊಟ್ಟೆಕಿಚ್ಚು

ಪಟ್ಟರೆ ಲಿಂಗಣ್ಣನ ಮನೆ ಗೋಡೆ ಈಶಾನ್ಯ ದಿಕ್ಕಿನ ಕಡೆ ದರ್ಕು ಬಿಟ್ಕೊಳ್ಳತ್ತಂತೆ. ಅವರ ಸಮಕ್ಕೆ ನಾವು ಬಾಳಬೇಕು ಅಂತ ಛಲ ಇರಬೇಕು.

ನನ್ನ ಹಟ್ಟಿ ಎಲ್ಲ ಹಾಳಾದರೂ ಸರಿಯೇ
ಕೊಟ್ಟಿಗೆಯಲ್ಲ ಬರಿದಾದರೂ ಸರಿಯೇ
ನನ್ನ ಕಿರಿಮಗನ ಕೊಡೋದಿಲ್ಲ . . .
ಮಾರಳ್ಳಿ ಹಾಳಾದರೂ ಸರಿಯೇ
ಮಳವಳ್ಳಿ ಉದ್ಧಾರವಾದರೂ ಸರಿಯೇ
ನನ್ನ ಕಿರಿಮಗನ ಕೊಡೋದಿಲ್ಲ
ಮಾರಿಯರನ್ನು ತಂದು ಕೂಡಿದರೂ
ನನ್ನ ಕಿರಿಮಗನ ಕೊಡೋದಿಲ್ಲ
ಆರು ರಾಗಿ ಗುಳಿ ಅನ್ನ ಬೀಜ
ಆಗೋದರೂ
ನನ್ನ ಕಿರಿಮಗನ ಕೊಡೋದಿಲ್ಲ
ಆರು ಜನ ಗಂಡು ಮಕ್ಕ ಉದ್ಯೋಗ
ಮಾಡುವಲ್ಲಿ ಕಕ್ಕಿ ಕಕ್ಕಿ ಸತ್ತರೂ
ನನ್ನ ಕಿರಿಮಗನ ಕೊಡೋದಿಲ್ಲ
ಆರು ಜನ ಸೊಸೆಯರು ಅಡಿಗೆ
ಮನೆಯಲ್ಲಿ ದೆವ್ವವಾಗಿ ನಿಂತ್ಕೊಂಡ್ರು
ನನ್ನ ಕಿರಿಮಗನ ಕೊಡೋದಿಲ್ಲ
ಗಂಡ ಬಾಚಿಬಸವಾಚಾರಿ ಉದ್ಯೋಗ
ಮಾಡುವ ಸ್ಥಳದಲ್ಲೇ ಮರಣವಪ್ಪಿದರು
ಸರಿಯೇ
ಎರಡು ಕಣ್ಣಿನ ನೇತ್ರ ಹಿಗ್ಗೋದರು
ಸರಿಯೇ
ನನ್ನ ಕಿರಿಮಗನ ಕೊಡೋದಿಲ್ಲ
ನನ್ನ ಎರಡು ಕಣ್ಣು ಗೋಳಿಯಾಗಿ
ಬೂಮಿ ಮೇಲೆ ಬುದ್ದೋದರು ಸರಿಯೆ
ನನ್ನ ಕಿರಿಮಗನ ಕೊಡೋದಿಲ್ಲ
ಹೆತ್ತಮಕ್ಕಳ ಬಿತ್ತಿದ ಬೆಳೆಯ
ಯಾರುತ್ತಾನೆ ಕೊಟ್ಟಾರಯ್ಯ
ಸಿದ್ದಯ್ಯ ಸ್ವಾಮಿ ಬನ್ನಿ .. . .
ಪವಾಡ .. . .
ಲಿಂಗಯ್ಯ ದಯ ಮಾಡೋ . .. .

ಹಟ್ಟಿ ಹಾಳಾದರೂ ಸರಿ, ಕೊಟ್ಟಿಗೆ ಬರಿದಾದರೂ ಸರಿ, ಮಾರಳ್ಳಿ ಹಾಳಾದರೂ ಸರಿ ಮಳವಳ್ಳಿ ಉದ್ದಾರವಾದರೂ ಸರಿ. ಆರು ಜನ ಗಂಡು ಮಕ್ಕ ಉದ್ಯೋಗ ಮಾಡುವ ಸ್ಥಳದಲ್ಲಿ ಸತ್ತೋದರೂ ಸರಿ ನನ್ನ ಕಿರಿ ಮಗನನ್ನು ಕೊಡೋಲ್ಲ. ಆರು ಮಂದಿ ಸೊಸೆಯರು ಗೋಕಲ್ಲಾಗಿ ನಿಂತ್ಕೊಂಡ್ರು ನನ್ನ ಕಿರಿಮಗನನ್ನು ಕೊಡೋದಿಲ್ಲ. ಆರು ರಾಗಿ ಗುಳಿ ಅನ್ನ ಬೀಜ ಆಗ್ಹೋದರೂ ನನ್ನ ಕಿರಿಯ ಮಗನ ಕೊಡೋದಿಲ್ಲ. ಗಂಡ ಬಾಚಿಬಸವಾಚಾರಿಗೆ ಎರಡು ಕಣ್ಣಿಗೆ ಮೊಳಬಂದರೂ ಸರಿಯೇ ನನ್ನ ಎರಡು ಕಣ್ಣುಗಳು ಗಾಜಿನ ಗೋಳಿಯಾಗಿ ಭೂಮಿಯ ಮೇಲೆ ಬಿದ್ದರೂ ಸರಿಯೇ ನನ್ನ ಕಿರಿ ಮಗನನ್ನು ಕೊಡೋದಿಲ್ಲ. ನನ್ನ ಮಾರಳ್ಳಿ ಭಾಗ್ಯ ಪಾಳು ಗೋಡೆಯಾದರೂ ಸಹ ನನ್ನ ಕಿರಿ ಮಗನನ್ನ ಕೊಡೋಲ್ಲ. ಅದಕ್ಕೆ ಹೇಳೋದು "ಕಿರಿಮಕ್ಕ ಅಂದ್ರೆ ಕಿವಿ ಕಿತ್ತರು ಪ್ರೀತಿ". ಭಾಗ್ಯ ಕೊಟ್ಟ ದೇವರು ಮನೆ ಬಾಗಿಲಿಗೆ ಬಂದಿದ್ದಾರೆ ಎಂದು ಗೊತ್ತಿಲ್ಲ ಮುದ್ದಮ್ಮನಿಗೆ. ಈ ಭಿಕ್ಷುಕನ ಜೊತೆ ಇನ್ನೇನು ಮಾತು ಎಂದು ಏಳು ಹಟ್ಟಿ ಬಾಗಿಲ ಕದವನ್ನು ದಡಾಬಡನೇ ಮುಚ್ಚಾವಳೆ. ಇವತ್ತು ಸೋಮವಾರ ನಾಳೆ ಮಂಗಳವಾರ ಮಟಮಟ ಮಂಗಳವಾರ ಬಾಗಿಲ ಕದವನ್ನು ಹಚ್ಚಿದಾಗೆ ಮಾಡುತ್ತೀನಿ ಎಂದು ಮಾರಳ್ಳಿ ಬಿಟ್ಟು ಮಾರಳ್ಳಿಗೂ ಮಧ್ಯ ಕೆಂಗೇರಿಗೂ ಮಧ್ಯ ಅಶ್ವಥ್‌ಕಟ್ಟೆ ಜಗಲಿ ಮೇಲೆ ಬಂದು ನೆಲಮೂರ್ತ ಮಾಡಿದರು.

ರೇಚಪ್ಪಾಜಿಯ ಮನೆಯ. . . ...
ಮುತ್ತಿನ ಜೋಳಿಗೆ ತೆಗೆದು . . ..
ಮುಂದುಗಡೆ ಮಡಿಕೊಂಡು . ..
ಆರು ಖಂಡುಗ ಗುರುವೇ . . . .
ಹುಡಿಯ ಭಂಗಿಯಸೊಪ್ಪು . . .
ಮತ್ತಾರು ಖಂಡು ಹೊಗೆಯ
ಸೊಪ್ಪ ಬೆರಸಿ ಎಕ್ಕದಾಲು ಕಳ್ಳಿಹಾಲು
ಪಚ್ಚತ್ರೆ ನಾಗರಾವಿನ ವಿಷ ಸುಣ್ಣದ
ತಿಳಿಯೊಳಗೆ ಚನ್ನಾಗಿ ತೊಳೆದು
ಗಾಂಜಮಿಂಟವ ಮಾಡಿ
ಚಿನ್ನದ ಚಿಲುಮಿಗೆ ಜಡದು ಜಡದು
ತುಂಬುತ್ತಾರೆ
ಸಿದ್ದಯ್ಯ ಸ್ವಾಮಿ ಬನ್ನಿ . . . . .
ಚಕಮುಕಿಯ ಹೊಡೆದು ಸರ್ವೆಕೆಂಡ
ಮಾಡಿ ಚಿಲುಮೆಯ ಮೇಲೆ ಎತ್ತಿ
ಕೆಂಡವ ಮಡಗಿ
ಒಂದು ದಮ್ಮ ಸೇದರಂತೆ
ಬಲಗಡೆಗೆ ಜೋಲುತ್ತಾರೆ

ಸಿದ್ದಯ್ಯ ಸ್ವಾಮಿ ಬನ್ನಿ
ಎರಡು ದಮ್ಮ ಸೇದರಂತೆ
ಎಡಗಡೆಗೆ ಜೋಲುತ್ತಾರೆ
ಸಿದ್ದಯ್ಯ ಸ್ವಾಮಿ ಬನ್ನಿ
ಮೂರು ದಮ್ಮ ಸೇದರಂತೆ
ಮುಂದುಗಡೆ ಜೋಲುತ್ತಾರೆ
ಸಿದ್ದಯ್ಯ ಸ್ವಾಮಿ ಬನ್ನಿ . .. .
ಹನ್ನೆರಡು ಕಟ್ಟು ಭಂಗಿ ಸೊಪ್ಪು
ಎರಡು ದಮ್ಮಿಗೆ ತಿರನಿಲ್ಲ
ಮೂರು ದಮ್ಮಿಗೆ ಸಾಲನಿಲ್ಲ
ಹೊಗೆಯನೆಲ್ಲ ಹೊಟ್ಟೆ ಒಳಗೆ
ತುಂಬ್ಕೊಂಡು
ಭಂಗಿ ಕುಡಿದ ಚಿಲುಮೆ ತಳಕೆಳಕ
ಮಾಡಿದಾಗ ಮೂರು ಖಂಡಗ ಬೂದಿ
ಸುರುದೋಯ್ತಲ್ಲ
ಸಿದ್ದಯ್ಯ ಸ್ವಾಮಿ ಬನ್ನಿ . . . .
ಭಂಗಿ ಕುಡಿದ ಗ್ಯಾನ ದಿಕ್ಕೆಪಲ್ಲಾಟ
ಭಂಗಿ ಕುಡಿದ ಹೊಗೆಯ ಮಾರಳ್ಳಿಗೆ
ಉಪೋ ಅಂತ ಉರುಬುತ್ತಾರೆ
ಸಿದ್ದಯ್ಯ ಸ್ವಾಮಿ ಬನ್ನಿ .. . .

ಭಂಗಿ ಕುಡಿದ ಹೊಗೆಯನ್ನ ಮಾರಳ್ಳಿ ಗ್ರಾಮಕ್ಕೆ ಉಪೋ ಅಂತ ಉರುಬಿದಾಗ ಆ ಮಾರಳ್ಳಿ ದಿನುಮಧ್ಯಾಹ್ನದಲ್ಲಿ ಮಂಜುಕವಿದಾಗೆ ಕವಿದೋಯ್ತು. ಭಂಗಿ ಕುಡಿದ ಗ್ಯಾನದಲ್ಲಿ ೭೭೭೧ ಜನ ಮಾರಿಯರನ್ನು ಕೂಗುತ್ತಾರೆ.

ಅಕ್ಕಮ್ಮ ಚಿಕ್ಕಮ್ಮ .. . .
ಬದ್ರಮ್ಮನ ಕಾಳಿ ಮೂಗು ಮಾರಿ
ಮುಕ್ ಮಾರಿ ಗ್ವಾರದ ಮಾರಿ
ವಾಂತಿ ಭೇದಿ ಮಾರಿ .. . . .
ಮಳವಳ್ಳಿ ದಂಡದ ಮಾರಿ
ಎದ್ದು ಬಾ ನನಕಂದ . . . ..
ಬನ್ನೂರು ಹೇಮಾದ್ರಿ ಸೋಸಲೆ ದೇವಿ
ಮುಡುಗುಂಡದ ಮುಳ್ಳಾಚಿ
ಬಂಕಾಪುರದ ಮಾರಿ

ಎದ್ದು ಬಾ ನನ್ನ ಕಂದ .. . . .
ಹಾಳು ಮಾರಿ ಸೀಗು ಮಾರಿ
ಪಾಳ್ಯದ ಮಾರಿ . . . .
ಪರಂಜ್ಯೋತಿ ನನ್ನಪ್ಪ ಕೂಗಿದರು
ಮಾರಿಯರ . . . .
ಅರುಣ ದೇವತಿ ತಾಯಿ
ಗೋಡಳ್ಳಿ ಹೊಂಬಾತೇರಿ ಮಾರಿ
ಎದ್ದು ಬಾ ನನ್ನವ್ವ . . . .
ಅಗರದಿಂಡಿ ಮಾರವ್ವ
ಮಾಂಬಳ್ಳಿ ಮಾರವ್ವ . . . . . .
ಕೊಳ್ಳೇಗಾಲ ದುರ್ಗಿ
ಮಂಗಳದ ಮಾರಿ ..
ಎದ್ದು ಬಾ ನನ್ನ ಕಂದ
ಸತ್ತಿಗಾಲದ ಮಾರಿ
ಜಾಗೇರಿಯ ಮಾರಿ
ಹನೂರಿನ ಮಾರಿ
ರಾಮಾಪುರದ ಮಾರಿ
ಎದ್ದು ಬಾ ನನ್ನ ಕಂದ
ಶಿಂಷಾ ಮುದ್ದು ಮಾರಿ
ಏಳು ಸಾವಿರ ಮಾರಿಯರ
ಕೂಗುತ್ತಾವ್ರೆ ನನ್ನಪ್ಪ
ಧರೆಗೆದೊಡ್ಡವರು .. . . .
ಚಾಮುಂಡಿ ಓಡಿ ಬಾ
ಎಂದಾರಂತೆ . . . .

ಹೀಗೆ ಸ್ವಾಮಿಯವರು ಕೂಗಿದಾಗ ೭೭೭೧ ಮಾರಿಯರು ಲಾಳಾಯಿಸಿ ಕೇಳ್ಕೊಂಡು ಕಾಗೆ ಬಣ್ಣದ ಸೀರೆ ನವಿಲು ಬಣ್ಣದ ರವಿಕೆ ಉಟ್ಕೊಂಡು ಹೊಂಗೆ ಮರ ಕಿತ್ತು ಊರುಗೋಲು ಮಾಡ್ಕೊಂಡು ಬೇವಿನ ಮರ ಕಿತ್ತು ಹಲ್ಲು ಉಜ್ಕೊಂಡು ನಾನು ಮುಂದು ತಾನು ಮುಂದು ಎಂದು ಹೇಳಿ ಧರೆಗೆದೊಡ್ಡವರ ಮುಂದೆ ಬಂದು ಜಗ್ಗ ಜಗ್ಗನೇ ಕುಣಿಯುತ್ತಾ ಇದ್ದರು. ಸೋಮವಾರ ತಂಪು ಮಂಗಳವಾರ ಮಡ (ಬೆಲ್ಲದನ್ನ) ಬೇಸ್ತವಾರದ ಕುಣಿತ ಗಂಡು ಕೋಣವನ್ನು ತರ್ದು ಗಂಡು ಹಬ್ಬ ಮಾಡುವಂತ ಊರಿಗೆ ಹೋಯ್ತಿರ ಮಾರಿಯರೇ. ನಮ್ಮೂರ ಮಾರಮ್ಮನಿಗೆ ಒಂದು ಕಾಕ ಹಾಕಿ ಎಂದು ಹೊಡೆಸ್ಕೊಂಡು ಕಾಲಿಗೆ ಗೆಜ್ಜೆ ಕಟ್ಕೊಂಡು ಥೈ ಥೈ ಥೈ ಕುಣಿಸುತ್ತಾ ಮಾರಿಕುಣಿತ ನೋಡುವುದು ಒಂದು ಚಂದ. ಮಾರಳ್ಳಿ ಗ್ರಾಮಕ್ಕೆ ನುಗ್ಗಿ ಮುದ್ದಮ್ಮನ ಮನೆ ಹಾಳು

ಮಾಡ್ಬುಟ್ಟು ಬಂದ್ಬಿಡಿ ಎಂದರು ಧರೆಗೆದೊಡ್ಡವರು. ಮಾರಳ್ಳಿ ಸುದ್ದು ಕೇಳಿ ಮಾರಿಯರು ಕುಕ್ಕನೇ ಕೂತ್ಕೊಂಡರಂತೆ. ಅಪ್ಪ ಮಾರಳ್ಳಿ ಒಳಗೆ ಇದ್ದಾಳೆ ಆಚಾರರ ದೇವತೆ ಬದ್ರಬಳುಮಕಾಳಿ. ೧೨ ಅಂಕಣ ಕಲ್ಲುಗುಡಿಯಲ್ಲಿ ಒಬ್ಬಳೇ ಮನಗಾವ್ಳೆ.

ಮೂಲಿಂಗಿಗಾತ್ರದ ಹಲ್ಲು . . .
ಒಂದ್ರಿ ಅಗಲ ಕಣ್ಣು .. . . .
ಮೊರದಗಲ ಕಿವಿ . . ..
ಹೊಂಗದಗಲ ನಾಲಿಗೆ .. . .
ಕೊಳಗದಗಲ ಅವಳ ಮೂಗು ..
ಆರು ಗಾಡಿ ಕುಂಕುಮವ
ಹಣೆಯಲ್ಲಿ ಬಳ್ಕೊಂಡು
ಆರು ಅರಿಶಿನವ ಕೆನ್ನೆಗೆ
ಬಳ್ಕೊಂಡು
ಎಂಬತ್ತು ಮೊಲದ ಸೀರೆ
ಒಂದು ಸುತ್ತಿಗೆ ಸುತ್ಕೊಂಡು
ಹನ್ನೆರಡು ಅಂಕ ಕಲ್ಲುಗುಡಿ
ತುಂಬ ವಾಸವಾಗಿ ಮಲಗಾವ್ಳಲ್ಲೋ
ಸಿದ್ದಯ್ಯ ಸ್ವಾಮಿ ಬನ್ನಿ . . . . . .
ಅವ ಆರು ತಿಂಗಳ ನಿದ್ರೆ
ಅವ ಆರು ತಿಂಗಳ ಎಚ್ಚರ
ಈಗ ನಿದ್ರೆ ಮಾಡುತ್ತಾ ಮನಗಾವ್ಳೆ
ಬದ್ರಬಳುಮದ ಕಾಳಿ
ಬಾಳೆ ಹಣ್ಣು ನುಂಗುವಂತೆ
ಗೊಳಕ್ಕ ಗೊಳಕ್ಕನೇ ನುಂಗುತ್ತಾಳೆ
ಸಿದ್ದಯ್ಯ ಸ್ವಾಮಿ ಬನ್ನಿ . . . . .

ಮಾರಮ್ಮ ಅಂದರೆ ಸಾಮಾನ್ಯದ ಮಾರಿ ಅಲ್ಲ ಅವಳು. ಮೂಲಂಗಿ ಗಾತ್ರದ ಹಲ್ಲು ಒಂದ್ರಿ ಗಾತ್ರದ ಕಣ್ಣು ಮೊರದಗಲ ಕಿವಿ ಕೊಳಗದಗಲ ಅವಳ ಮೂಗು. ಆರು ಗಾಡಿ ಕುಂಕುಮ ನೆತ್ತಿಗೆ ಬಳ್ಕೊಂಡು ಆರು ಗಾಡಿ ಅರಿಶಿನವನ್ನು ಕೆನ್ನೆ ಬಳ್ಕೊಂಡು ಅರವತ್ತು ಗಜ ರವಕೆ ಬಿಗಿಯಾಗಿ ತೊಟ್ಕೊಂಡು ಹನ್ನೆರಡು ಅಂಕಣದ ಕಲ್ಲುಗುಡಿ ತುಂಬ ವಾಕವಾಗಿ ಮಲಗಾವ್ಳೆ. ನಾವು ಏನಾದರೂ ಅಲ್ಲಿ ಹೋದರೆ ನಂಜನಗೂಡು ರಸಬಾಳೆ ಹಣ್ಣು ನುಂಗುವಂತೆ ನುಂಗಿಬಿಡುತ್ತಾಳೆ. ಬುದ್ದಿ ಆ ಮಾರಿಯನ್ನು ಬರಮಾಡಿ ಅವಳ ಹಿಂದೆ ನಾವು ಹೋಗುತ್ತೀವಿ ಎಂದರು ಮಾರಿಯರು. ಸ್ವಾಮಿ ಕಪ್ಪು ಧೂಳ್ತವನ್ನು ತೆಗೆದು ಆ ಕಲ್ಗುಡಿಗೆ ಉರುಬುದರಂತೆ. ಮಾರಮ್ಮನ ದೇವಸ್ಥಾನಕ್ಕೆ ಮಳೆ ಊದಂಗೆ

ಆಗೋಯ್ತು. ನಿದ್ರೆ ಮಾಡುತ್ತಾ ಮಲಗಿರುವ ಬದ್ರಬಳಮಕಾಳಿಗೆ ಎಚ್ಚರವಾಗ್ಹೋಯ್ತು. ಬಾಗಿಲ ಕದವನ್ನು ತೆಗೆದು ನೋಡಿದಾಗ ಸ್ವಾಮಿಯವರು ಕಂಡಾಯ ತಂಬೂರಿ ಹೊತ್ಕೊಂಡು ನಿಂತಿದ್ದರಲ್ಲ. ಓಹೋ ಯಾರೋ ನಿನ್ನೆ ಹುಟ್ಟಿದಂತಹ ಹುಡುಗ ಭಾಳ ಬೆಡಗಾಡ್ಕೊಂಡು ಬತ್ತಾವ್ನೆ ಬರುವ ಹುಡುಗನ್ನ ರಸಬಾಳೆ ನುಂಗದಾಗೆ ಗೊಳಕನೇ ನುಂಗಬೇಕು ಅಂತ್ಹೇಳಿ ಮಾರಮ್ಮ ಧರೆಗೆದೊಡ್ಡವರ ಬಳಿ ಓಡೋಡಿ ಬಂದಳು ಮಾರಮ್ಮ. ಸ್ವಾಮಿಯವರು ಮಾರಿ ಮಾರಿ ಬೆಡಗಾಡ್ಕೊಂಡು ಬರುತ್ತಾವ್ನೆ ಅವಳ ಬೆಡಗನ್ನು ನೋಡಬೇಕು ಎನುತ ಮಾರಿ ಹಬ್ಬಕ್ಕಿಂತ ಮಾರಿಕುಣಿತ ಚಂದ ಅನ್ನುತ್ತಾರೆ. ನೀನು ನನ್ನ ಹೆಂಗಾದರೂ ನುಂಗುತ್ತೀಯಾ ನನ್ನದೊಂದು ಆಸೆ ನೀನು ಮಾರಿ ಕುಣಿತವನ್ನು ಕುಣಿದರೆ ಕಣ್ಣಾರೆ ನೋಡುತ್ತೀನಿ ಎಂದರು.

ಉಟ್ಟಿರುವಂತ ಸೀರೆ ದುಂಡುಡುಗೆ
ಕಟ್ಕೊಂಡು
ಹಿಂದಕ್ಕೆ ಇಟ್ಟು ಹೆಜ್ಜೆ ಮುಂದಕ್ಕೆ
ಎತ್ತಿ ಮಡಗಿ
ಮುಂದಕ್ಕೆ ಇಟ್ಟ ಹೆಜ್ಜೆ ಹಿಂದಕ್ಕೆ
ಎತ್ತಿ ಮಡಗಿ
ಧರೆಗೆದೊಡ್ಡವರ ಸುತ್ತ ಥೈ ಥೈನೇ
ಕುಣಿಯುತ್ತಾಳೆ
ಸಿದ್ದಯ್ಯ ಸ್ವಾಮಿ ಬನ್ನಿ
ಕುಣಿವಂತ ಮಾರಮ್ಮನ ನೋಡುದರು
ನಮ್ಮಪ್ಪ
ಮಂತ್ರಿಸಿದರೆ ನಾನು ಮಾವಿನ ಕಾಯಿ
ಬೀಳಲ್ಲ
ಮೆಲ್ಲಗೆ ಮಾತಾಡಿದರೆ ಮಾರಿ ಬಗ್ಗವಳಲ್ಲ
ಕುಣಿವಂತ ಮಾರಿಯ ದುರುದುರುನೇ
ನೋಡಿ ನೊರನೊರನೇ ಹಲ್ಲು ಕಚ್ಚಿ
ಕಣಿವಂತ ಮಾರಿಯ ಜಾಡಿಸಿ ಹಿಡ್ಕೊಂಡರಂತೆ
ಸಿದ್ದಯ್ಯ ಸ್ವಾಮಿ ಬನ್ನಿ
ಮಾರಿರ ಎಡಗೈಲಿ ಹಿಡ್ಕೊಂಡು ಉರುಸಂಗಿ
ಕೊರಾಡವ ಬಲಗೈಲಿ ಎತ್ಕೊಂಡ್ರು . . . .
ಮೂರು ಎಳೆತ ಎಳೆದರಂತೆ
ಸಿದ್ದಯ್ಯ ಸ್ವಾಮಿ ಬನ್ನಿ . . . .
ಅಪ್ಪ ಹೊಡೆದ ಏಟು ಹತ್ತುಬುಡ್ತು ಕೋಪ
ಅಪ್ಪ ಇಂಥ ದೇವರು ಅಂತ ಗೊತ್ತಿದ್ದರೆ

ನಿಮ್ಮ ದಂಡಕ್ಕೆ ಬರುತ್ತಿದ್ದೀನಪ್ಪ
ಸಿದ್ದಯ್ಯ ಸ್ವಾಮಿ ಬನ್ನಿ
ಉರಿ ಜ್ವಾಲೆ ಬಿಡಿಸಯ್ಯ
ನಿಮ್ಮ ಮಗಳು ಆಯ್ತಿನಿ ಎಂದಳಂತೆ
ಸಿದ್ದಯ್ಯ ಸ್ವಾಮಿ ಬನ್ನಿ . . .
ನೀವು ಹೇಳಿದಾಗೆ ಕೇಳುತ್ತೀನಿ
ನೀವು ಹೋಗು ಎನ್ನುವಲ್ಲಿ ಹೋಗುತ್ತೀನಿ
ಸಿದ್ದಯ್ಯ ಸ್ವಾಮಿ ಬನ್ನಿ . .. .

ಬುದ್ದಿ ಇಂಥ ದೇವರು ಅಂತಿದ್ದರೆ ನಿಮ್ಮ ದಂಡಕ್ಕೆ ಬರುತ್ತಿರಲಿಲ್ಲ. ಈ ಉರಿ ಜ್ವಾಲೆ ತಪ್ಪಿಸಿ ಬಿಡಪ್ಪ ನೀವು ಹೇಳಿದಾಗೆ ಕೇಳುತ್ತೀನಿ. ಹೇ ಮಾರಿ ನುಂಗ್ಕೋತ್ತೀನಿ ಅಂತ ಬಂದೆಯಲ್ಲ ನುಂಗ್ಕೋ ಎಂದರು ಸ್ವಾಮಿಯವರು. ಮಾರಮ್ಮ ಹೋಗು ಅನ್ನುವ ತಾವಿಗೆ ಹೋಗುತ್ತೀಯಾ ? ಹೋಗುತ್ತೀನಿ ಬುದ್ದಿ. ಈ ಉರಿ ಜ್ವಾಲೆ ಮಾತ್ರ ತಪ್ಪಸ್ಬಿಡಿ ಎಂದಳು ಮಾರಿ. ಆಗ ಧರೆಗೆದೊಡ್ಡವರು ಚಿಂತೆ ಮಾಡಿದರು ಗೋ ಹತ್ಯ , ಶಿಸು ಹತ್ಯ, ಸ್ತ್ರೀ ಹತ್ಯ ಎಂದರೆ ಭಾಳ ದೊಡ್ಡ ಪಾಪ. ಹೆಣ್ಣು ಮಕ್ಕಳು ಹೋದರೆ ಹೋಗಲಿ ಗಂಡು ಮಕ್ಕಳು ಇದ್ದರೆ ಬಲ ಬಲ ಎನ್ನುತ್ತಾರೆ. ಕಪ್ಪು ಧೂಳ್ತವನ್ನು ತೆಗೆದು ಮಾರಮ್ಮನ ನೆತ್ತಿಯ ಮೇಲೆ ಪಿಡಿದರು ತಣ್ಣಗೆ ಆಯ್ತು. ಮಾರಮ್ಮ ವಾಂತಿ ಭೇದಿ ತಗುಲಿದಂತಹ ಊರಿಗೆ ಮೊದಲನೆಯ ಔಷಧಿ ಕಪ್ಪು ಧೂಳ್ತ ಅಂದ್ರಂತೆ. ಹಿಂದೆ ಪ್ಲೇಗ್, ಕಾಲರಾ ವಾಂತಿ ಭೇದಿ ಬಂದಂತಹ ಊರಿಗೆ ಕಂಡಾಯ ಕಾವಿದಾಳ ತಕ್ಕೊಂಡು ಮಾದಾರಿ ಚನ್ನಯ್ಯನ ಉರಿತಮ್ಮಟೆಯನ್ನು ಹೊಲಾರ ಕೊಂಬಿನಕಾಳಗ ತಕ್ಕೊಂಡು ಅವರ ಊರಿಗೆ ಒಂಟ್ಹೋಗ್ಬಿಟ್ಟರೆ ಕಾವಿದಾಳ ಕಂಡೇಟಿಗೆ ಮಾರಿಯರೆಲ್ಲ ಬಿದ್ದು ಕಡೆದು ಹೋಗ್ಬಿಡ್ತಿತ್ತಂತೆ. ಮಾರಳ್ಳಿ ಆಲ್ಪಟ ಧೂಳ್ಪಟ ಮಾಡು ಅಂದಾಗ ಮಾರಮ್ಮಳಿಗೆ ಚಿಂತೆ ಬಂದ್ಬುಡ್ತು. ಅಯ್ಯೋ ನನ್ನಪ್ಪ "ಉಪ್ಪು ಕೊಟ್ಟವರ ಮುಪ್ಪಿರೋತನಕ ನೆನೆ ಎನ್ನುತ್ತಾರೆ". " ಜಾಗಕೊಟ್ಟವರ ಜನ್ಮ ಇರೋತನಕ ನೆನೆ ಎನ್ನುತ್ತಾರೆ". ನನ್ನ ನಂಬ್ಕೊಂಡು ನನ್ನ ಪೂಜೆ ಮಾಡುವರ ಮನೆ ಹಾಳು ಮಾಡು ಎನ್ನುತ್ತೀರಲ್ಲ. ಮೊದಲು ನನ್ನ ಪೂಜೆ ಮಾಡಿ ಗಂಡಸರೆಲ್ಲ ಕುಲುಮೆ ಕತ್ತಿಸ್ಕೊಂಡು ಉದ್ಯೋಗ ಮಾಡುತ್ತಾವ್ರೆ. ಹೆಂಗಸರು ಗುಡಿಗೆ ರಂಗೋಲೆ ಬಿಟ್ಟು ಕಬ್ಬಿಣ ಕೊಟ್ಟ ನಮ್ಮವ್ವ ಕಾಳಕಾದೇವಿ ಮುತ್ತೈದೆ ಸ್ಥಾನ ಕೊಡು ಎಂದು ಮೊದಲು ನನಗೆ ಪೂಜೆ ಮಾಡಿದ ಮೇಲೆ ಅಡಿಗೆ ಮಾಡುತ್ತಾರೆ. ಪೂಜೆ ಮಾಡುವವರ ಮನೆಯ ಒಳಗೆ ಹೆಂಗೆ ಹೋಗಿ ಹಾಳು ಮಾಡುವುದು ಗುರುದೇವ ಎಂದಳು. ಹೋಗಲ್ಲವಾ ತಾಯಿ ಹೋಗಲ್ಲ ಎಂದಾಗ ಸ್ವಾಮಿಯವರು ತಮ್ಮ ಪಾದ ತೆಗೆದು ನೆತ್ತಿ ಮೇಲೆ ಇಟ್ಟರು. ೧೨ ಜಲಬಾವಿಗೆ ಬಳಬಳನೇ ಮುಳುಗಾವ್ಳೆ ಮಾರಮ್ಮ. ಬುದ್ದಿ ಹಸ ಸಾಯಿಬೇಕಾದರೆ ಕರಿಗೆ ಹುಲ್ಲು ಹಾಕಿ ಸಾಯುತ್ತದಾ ? ಬುದ್ದಿ ನಾನೇ ಸಾಯಿಬೇಕಾದರೆ ನನ್ನ ಪೂಜೆ ಮಾಡುವನ್ನ ಕಟ್ಕೊಂಡು ನಾನು ಏನು ಮಾಡಲಿ ನನ್ನ ಮೇಲಕ್ಕೆ ಎತ್ತಿ ನಾನು ಅವರ ಮನೆ ನುಗ್ಗುತ್ತೀನಿ ಎಂದಳು ಮಾರಮ್ಮ.

ಸ್ವಾಮಿ ನಾನು ಮುಂದೆ ಮುಂದೆ ಹಾಳು ಮಾಡಿದರೆ ಹಿಂದೆ ಹಿಂದೆ ಭಾಗ್ಯ ಕೊಟ್ಕೊಂಡು ಬರುತ್ತಾರೆ ಸ್ವಾಮಿ ಒಂದು ಲಕ್ಷ್ಮೀಯನ್ನೇ ಬಗ್ಗಿಸ್ಕೆ ಆಗೋದಿಲ್ಲ ಅಷ್ಟಲಕ್ಷ್ಮೀ ಇದ್ದರೆ ಬಗ್ಗಿಸ್ಕೇ ಆಗುತ್ತಾದಾ ? ಭಾಗ್ಯ ಲಕ್ಮೀಯರನ್ನು ಸ್ವಾಮಿಯವರು ಕೂಗುತ್ತಿದ್ದಾರೆ.

ದಾನ ಲಕ್ಷ್ಮೀ ನೀ ಬಾವ್ವ
ಭಾಗ್ಯ ಲಕ್ಷ್ಮೀ ನೀ ಬಾವ್ವ
ಅಷ್ಟ ಲಕ್ಷ್ಮೀಯರ ಪ್ರೇಮದಲ್ಲಿ
ಕೂಗುತ್ತಾರೆ
ಸಿದ್ದಯ್ಯ ಸ್ವಾಮಿ ಬನ್ನಿ . . ..

ಬಾಳುವರ ಮನೆ ಬಿಟ್ಟು ಮಟ ಮಟ ಮಂಗಳವಾರ ದಿನ ಹೊರ ಬಂದವಂತೆ. ಲಕ್ಷ್ಮೀ ಇರುವ ಮನೆಯ ಮಾತು ಹೊರಗರ ಬರುವುದಿಲ್ಲ ಮನೆಯ ಒಳಗೆ ತಂಗಿರುತ್ತದೆ. ಲಕ್ಷ್ಮೀ ಇಲ್ಲದವರ ಮನೆಯಲ್ಲಿ ಜಗಳ ಆದರೆ ಲಬೋಲಬೋ ಬಾಯ್ಬಡ್ಕೋತ್ತಾರೆ.

ಕೆಟ್ಟ ಮೇಲೆ ಬುದ್ಧಿ ಬಂತಂತೆ
ಮುದ್ದಮ್ಮನಿಗೆ
ನಿನ್ನೆ ಬಂದು ನನ್ನ ಕಿರಿಯ
ಮಗನ ಕೇಳಿದಂತ ಸ್ವಾಮಿಗಳು
ಇವತ್ತು ನನ್ನ ಕಿರಿ ಮಗನ
ಕೊಡುತ್ತೀನಿ ಅನ್ನುತ್ತಾವ್ಳಲ್ಲ

ನಿನ್ನೆ ಬಂದಂತಹ ಸ್ವಾಮಿಗಳ ಬಂದು ಕಿರಿಯ ಮಗನನ್ನು ಕೈಯಾರೆ ದಾನ ಕೊಡುತ್ತೀನಿ ಎಂದಳು ಮುದ್ದಮ್ಮ. ಆವಾಗ ಸ್ವಾಮಿ ಧರೆಗೆ ದೊಡ್ಡವರು ನಿಂತು ಆಲೋಚನೆ ಮಾಡಿದರು. ತಂದೆ ತಾಯಿಗಳ ಸತ್ಯವನ್ನು ನೋಡಿದ್ದಾಯ್ತು. ಈಗ ನನಗೆ ಶಿಸುಮಗನಾಗತಕ್ಕಂತ ಕೆಂಪಾಚಾರಿಯನ್ನು ಪರಿಶೋಧನೆ ಮಾಡಬೇಕಲ್ಲ ಅಂತ್ಹೇಳಿ ಕುಲುಮೆ ಕಚ್ಚೇರಿಗೆ ದೃಷ್ಟಿ ಮಡಗಿದರು. ಇಲ್ಲಿ ಒಂದು ಪ್ರಶ್ನೆ ಏಳಬಹುದು ? ಮಾರಳ್ಳಿ ಎಲ್ಲ ಬರಿದಾಗಿದ ಮೇಲೆ ಕೆಂಪಾಚಾರಿಗೆ ಏನು ಆಗಿಲ್ಲವಾ ಅಂತ್ಹೇಳಿ ? ಮುದ್ದಮ್ಮ ನಮಗೆಲ್ಲರಿಗೂ ಏನಾದರೂ ನನ್ನ ಕೆಂಪಣ್ಣನಿಗೆ ಮಾತ್ರ ಏನು ಆಗಬಾರದು ಎಂದು ಹೇಳಿದ್ದನ್ನು ಸ್ವಾಮಿಯವರು ಸತ್ಯ ಮಾಡಿದರು.

ಕೆಂಪಣ್ಣ ೬೨ ಕುಲುಮೆ ೭೨ ಕಾಲಾಳುಗಳನ್ನು ಕಟ್ಕೊಂಡು ಕಬ್ಬಿಣ್ಣದ ಕಚ್ಚೇರಿ ಒಳಗೆ ಕಬ್ಬಿಣದ ಕೆಲಸ ಮಾಡಿಸುತ್ತಿದ್ದ. ಹಲಗೂರು ಚಿಲ್ಲಾಪುರದಲ್ಲಿ ಇದ್ದುದ್ದು ೭೦೦ ಕುಲುಮೆ, ೭೦೦ ಒಕ್ಕಲು ಅದರಲ್ಲಿ ಕೆಂಪಾಚಾರಿ ಒಬ್ಬನೇ ೬೨ ಕುಲುಮೆ ೭೨ ಕಾಲಾಳು ಕಟ್ಕೊಂಡು ಇದ್ದನಂತೆ. ಅವನು ಉದ್ಯೋಗ ಮಾಡಿಸುತ್ತಿದ್ದ ಸ್ಥಳ ಅಂತ್ಹೇಳಿದರೆ ಉಸ್ಪೂರು ಒಂದಲಗೇರಿಯ ಮಧ್ಯದಲ್ಲಿರುವುದೇ ಕುಲುಮೆ ದೊಡ್ಡಿ. ಕಲುಮೆ ಹೂಡಿರುವಂತ ಸ್ಥಳವೇ ಕುಲುಮೆ ದೊಡ್ಡಿ. ಕುಲುಮೆ ದೊಡ್ಡಿಗೆ ದೃಷ್ಟಿ ಮಡಗಿದರು. ಕಂಡಾಯವನ್ನು ಹೊತ್ಕೊಂಡು ಯಾವ ರೀತಿ ಬರುತ್ತಿದ್ದಾರಪ್ಪ ಎಂದರೆ

ಮಾರಳ್ಳಿ ಗ್ರಾಮವ ಪ್ರೇಮದಲ್ಲಿ
ಬಿಟ್ಟಾರಂತೆ
ಸಿದ್ದಯ್ಯ ಸ್ವಾಮಿ ಬನ್ನಿ
ಕಂದೆಗಾಲದ ಊರೊಳಗೆ
ಬರುತ್ತಾವ್ರೆ ನನ್ನಪ್ಪ . . . .
ಸ್ವಾಮಿ ಒಂದಲಗೇರೆಯ ಬಿಟ್ಟು
ಬತ್ತವರಲ್ಲೋ ಮಾಯ್ಕಾರ
ಸಿದ್ದಯ್ಯ ಸ್ವಾಮಿ ಬನ್ನಿ
ಕುಲುಮೆ ಕಚ್ಚೇರಿಗೆ ನಮ್ಮ
ದೇವರೇ ದಯಮಾಡುತ್ತಾರೆ
ಸಿದ್ದಯ್ಯ ಸ್ವಾಮಿ ಬನ್ನಿ

ಸ್ವಾಮಿ ಒಂದಲಗೆರೆ ಮಾರ್ಗವಾಗಿ ದಯಮಾಡಿದರು ಕುಲುಮೆ ಕಚ್ಚೇರಿಗೆ. ಕಂಡಾಯ ತಂಬೂರಿ ಹೊತ್ಕೊಂಡು ಬರುತ್ತಿರುವುದನ್ನು ನೋಡ್ಬುಟ್ಟ ಕೆಂಪಾಚಾರಿ. ಲೇ ೭೨ ಕಾಲಾಳುಗಳೇ ಈ ಕಂತೆ ಬೊಂತೆಯವರನ್ನು ಕಂಡರೆ ನನಗೆ ಭಾಳ ಕೋಪ ಅಂದ ಕೆಂಪಾಚಾರಿ. ಹೀಗೆಂದ ಮಾತು ನಮ್ಮ ಧರೆಗೆದೊಡ್ಡವರಿಗೆ ಅರ್ಪಿತವಾಯ್ತು. ಈ ಕಂತೆ ಬೊಂತೆ ಎಲ್ಲ ಕಂಡರೆ ನಿನಗೆ ಕೋಪವೇನಪ್ಪ. ನಾಳೆ ಈ ಕಂತೆ ಬೊಂತೆಯನ್ನೆಲ್ಲ ನಿನ್ನ ಕೈಯಲ್ಲಿ ಹೊರಿಸಿ ಹಲಗೂರು ಪಂಚಾಳಗೇರಿಗೆ ಕಳುಸಿ ಕಬ್ಬಿಣ ಭಿಕ್ಷೆಯನ್ನು ತರಿಸಿ ನಾವು ರಾಜಬೊಪ್ಪಣಪುರವನ್ನು ಕಟಸ್ಕೊಂಡು ನಾವು ಪಾತಾಳ ಲೋಕಕ್ಕೆ ಮರೆಯಾಗಲಿಲ್ಲ ನಿನ್ನ ತಾಯಿ ಕಟ್ಟಿದ ಹೆಸರು ಮಂಟೇಸ್ವಾಮಿ ಅಂತ ಹೆಸರು ನನಗೆ ಬೇಡ ಕಾಣಪ್ಪ ಅಂತ್ಹೇಳಿ ಧರೆಗೆದೊಡ್ಡವರು ಕಂಡಾಯ ಹೊತ್ಕೊಂಡು ಕುಲುಮೆಗೆ ಬರುತ್ತಿದ್ದಾರೆ. ಶ್ರೀಮಂತರ ಮಕ್ಕಳನ್ನು ಭಾಳ ಮರ್ಯಾದೆಯಿಂದ ಮಾತಾಡಿದರೆ ನಮ್ಮ ಜೊತೆ ಮಾತಾಡುತ್ತಾರೆ ಏಕವಚನದಲ್ಲಿ ಮಾತಾಡಿದರೆ ಹೊಡೆಯಕ್ಕೆ ಬರುತ್ತಾರೆ ಎಂಬುದನ್ನು ಅರ್ಥ ಮಾಡಿಕೊಂಡು ಕೆಂಪಾಚಾರಿಯನ್ನು ಭಾಳ ಮರ್ಯಾದೆಯಿಂದ ಕರೆಯುತ್ತಿದ್ದಾರೆ.

ಸಿದ್ದಪ್ಪಾಜಿಯ ಸತ್ಯ ಪರೀಕ್ಷೆ – ೧೪

ಇಷ್ಟು ಆಳಿನ ಒಳಗೆ ಸಾವುಕಾರ
ಯಾರಪ್ಪ
ಸಿದ್ದಯ್ಯ ಸ್ವಾಮಿ ಬನ್ನಿ
ಕುಲುಮೆಗೆ ಯಜಮಾನ ಯಾರು
ಕಂದ

ಸಿದ್ದಯ್ಯ ಸ್ವಾಮಿ ಬನ್ನಿ

ಕುಲುಮೆ ಕಚ್ಚೇರಿ ಒಳಗೆ ಯಜಮಾನ ಯಾರಪ್ಪ ? ಇಷ್ಟು ಆಳಿ ಒಳಗೆ ಸಾವುಕಾರ ಯಾರಪ್ಪ ಎಂದು ಕೂಗಿದರು ಸ್ವಾಮಿಯವರು. ಕೆಂಪಣ್ಣ ಮಾತಾಡನಿಲ್ಲ ಭಿಕ್ಷುಕನ ಜೊತೆ ಏನು ಮಾತನಾಡಲಿ ಅಂತ್ಹೇಳಿ ತೆಂಕಲಾಗಿ ಖುರ್ಚಿ ಹಾಕ್ಕೊಂಡು ಕೂತ್ಕೊಂಡಿದ್ದ ಕೆಂಪಾಚಾರಿ ಬಡಗಲಾಗಿ ಮೊಕಮಾಡಿ ಕೂತ್ಕೊಂಡನಂತೆ. ಹತ್ತು ಬೆರಳಿಗೆ ಚಿನ್ನದ ಉಂಗುರ, ಕತ್ತಿಗೆ ರುದ್ರಾಕ್ಷಿಯ ಜನಿವಾರ ತಲೆಗೆ ಕಿರೀಟ ಚಿನ್ನದ ಪಾಪಾಸ ಕಾಲಿಗೆ ಮೆಟ್ಕೊಂಡು ಚಿನ್ನದ ಖುರ್ಚಿ ಮೇಲೆ ಕೂತ್ಕೊಂಡು ಕೆಂಪಾಚಾರಿ ಎತ್ತಾ ತಿರುಗಿದರೂ ತಳಕಾಪಳಕನೇ ಹೊಳೆಯುತ್ತಾ ಇದೆ. ಅವರು ವಜ್ರದ ನಿಲಂಗಿ ತೊಟ್ಟಿದ್ದರು. ಕೆಂಪಣ್ಣ ಹೆಣ್ಣು ದೇವರು ಭದ್ರಬಳುಮಾಕಾಳಿಗೆ ಗಂಡು ದೇವರು ಇಲ್ಲ ಅಂತ್ಹೇಳಿ ಪಟ್ಟರಂಗಸ್ವಾಮಿಗೆ ನಾನು ದಾಸಪ್ಪ ಆಗಬೇಕು ಅಂತ್ಹೇಳಿ ಕುಲುಮೆ ಕಚ್ಚೇರಿ ಒಳಗೆ ಗರುಡಗಂಬ ಕಂಚಿನಲ್ಲಿ ತೇರು ನೇಯಿಸುತ್ತಾ ಕೂತ್ತಾವ್ನೆ ಭಾಗ್ಯವುಳ್ಳ ಕೆಂಪಾಚಾರಿ. ಈಕಡೆ ಧರೆಗೆದೊಡ್ಡವರು ಚಿಂತೆ ಮಾಡಿದರು ತಂದೆ ತಾಯಿಗೆ ಮಗನಾದನೋ ಕಾಣೆ ಅಥವಾ ಪಟ್ಟರಂಗಸ್ವಾಮಿಗೆ ದಾಸಪ್ಪ ಆಗುತ್ತಾನೋ ಕಾಣೆ ಅಥವಾ ಬೀದಿ ಬೊಪ್ಪಣಪುರಕ್ಕೆ ಬೀದಿ ದೇವರು ಆಗುತ್ತಾನೋ ಕಾಣೆ ಅಂತ್ಹೇಳಿ ಸ್ವಾಮಿ ಧರೆಗೆದೊಡ್ಡವರು ಈ ಮಗನ ಸತ್ಯ ನೋಡಬೇಕು ಅಂತ್ಹೇಳಿ ಏಕವಚನದಲ್ಲಿ ಮಾತಾಡೋಣ ಎಂದು

ಕೆಂಪ. . . ಕೆಂಪ .. ಎನ್ನುವವರು
ಈ ಕೊಂಪೆ ಒಳಗೆ ಯಾರಿರುವರಯ್ಯ
ಸಿದ್ದಯ್ಯ ಸ್ವಾಮಿ ಬನ್ನಿ

ಇಷ್ಟು ಆಳಿನ ಒಳಗೆ ಕೆಂಪಾಚಾರಿ ಅನ್ನುವನು ಯಾರು ? ಈ ಕೊಂಪೆ ಒಳಗೆ ಕೆಂಪ ಯಾರಿರುವರಯ್ಯ ಅಂದಾಗ ಕೆಂಪಾಚಾರಿಗೆ ಹತ್ತುಬುಡ್ತು ಕೋಪ ಛೇ ಪರದೇಸಿ ಜಂಗಮ ನನ್ನ ತಂದೆ ತಾಯಿ ಕಟ್ಟಿದಂತಹ ಹೆಸರು ನಿನಗೆ ಹೇಳಿ ಕೊಟ್ಟವರು ಯಾರು ? ಈ ಕುಲುಮೆ ಕಚ್ಚೇರಿಗೆ ನಿನಗೆ ದಾರಿ ತೋರಿಸಿಕೊಟ್ಟವನು ಯಾರು ? ಒಂದು ಊರು ಕೇರಿಗೆ ಹೋದರೆ ಅಕ್ಕಿ ಬೇಳೆ ದಾನ ಕೊಡುತ್ತಾರೆ. ಕಬ್ಬಿಣದ ಕುಲುಮೆಯ ಒಳಗೆ ತಬ್ಬಲಿಗೆ ನಿನಗೆ ಏನು ಕೆಲಸ ? ಬೆಲ್ಲದ ಮೇಲೆ ನೊಣ ಕೂತ್ಕೊಂಡ್ರೆ ಬೆಲ್ಲದ ಸಾರಾಂಶ ನೊಣಕ್ಕೆ ಗೊತ್ತಾಯ್ತದೆ. ಅದೇ ನೊಣ ಕಬ್ಬಿಣದ ಮೇಲೆ ಬಂದು ಕೂತ್ಕೊಂಡ್ರೆ ಕಬ್ಬಿಣದ ಸಾರಾಂಶ ಏನಾರೂ ಗೊತ್ತಾಗುತ್ತದಾ ನೊಣಕ್ಕೆ ? ಏಳು ವರ್ಷದ ಕಂದ ಎಳೆಕೆಂಪಾಚಾರಿ ಕೆಂಪಣ್ಣ ಆಡಿದ ಮಾತನ್ನು ಕೇಳಿ ಕಂದ

ದಾನಕೋಸ್ಕರ ಬಂದವನಲ್ಲ ಕಾಣೋ
ಧರ್ಮಕೋಸ್ಕರ ಬಂದವನಲ್ಲ ಕಾಣೋ
ಭಿಕ್ಷೆಕೋಸ್ಕರ ಬಂದವನಲ್ಲ ಕಾಣೋ
ಕಲಿಬಾರದಾಗಿತ್ತು ಹಾಳಾದವಯಸ್ಸಿನಲ್ಲಿ

ಕಲಿತು ಬಿಟ್ಟಿ ಕಾಣೋ

ಅಂದ್ರೆ ಒಬ್ಬೊಬ್ಬರಿಗೆ ಒಂದೊಂದು ಚಪಲ. ನೆಶ್ಯ ಮೂಸುವವರಿಗೆ ನೆಶ್ಯದ ಚಪಲ. ಎಲೆ ಅಡಿಕೆ ಹಾಕುವವರಿಗೆ ಎಲೆ ಅಡಿಕೆ ಚಪಲ. ಕಲಿಬಾರದಾಗಿತ್ತು ಹಾಳಾದ ವಯಸ್ಸಿನಲ್ಲಿ ಕಲಿತುಬಿಟ್ಟಿ ಅದಕ್ಕೆ ಒಂದು ಕೆಂಡಬೆಂಕಿ ಕೊಡಪ್ಪ ಕಂದ ನಿನಗೆ ಭಾಳ ಪುಣ್ಯಬರುತ್ತದೆ ಎಂದರು. ಏನೋ ಒಂದು ಬೆಂಕಿ ಕೆಂಡ ಕೊಟ್ಟರೆ ನನ್ನ ೬೨ ಕುಲುಮೆಗೆ ಎರಡು ಕಾವು ಕಮ್ಮಿ ಆಗ್ಬಿಡುತ್ತೆ. ಕೊಡಲ್ಲಕಾಣ ಪರದೇಸಿ ಜಂಗಮ ಎಂದ್ನ. ಕೆಂಪಣ್ಣ ನಿನಗೆ ಎರಡು ಕಾವು ಕಮ್ಮಿ ಆಗುತ್ತೇನು ಕಂದ. ಹೌದು ಎಂದ. ನನಗೆ ಕೊಡದಿದ್ದರೂ ಕೂಡ ನನ್ನ ಕಂಡಾಯ ತಂಬೂರಿಯನ್ನು ನೋಡಿ ಕೂಡ ಒಂದು ಬೆಂಕಿಕೆಂಡ ಕೊಡಪ್ಪ. ಏನೋ ಜಂಗುಮ ನೀನು ಹೊತ್ತಿರುವ ಕಂಡಾಯ ತಂಬೂರಿ ನೋಡಿ ನನ್ನ ಮನೆ ದೇವರು ಎಂದು ಹೇಳುತ್ತೀಯಲ್ಲ ಜಂಗಮ.

ಕಂಡಾಯ ಮಾಡದವರು ಯಾರು
ತಂಬೂರಿ ಮಾಡದವರು ಯಾರು
ತಾಳ ಮಾಡದವರು ಯಾರು
ಕಂಡಾಯ ಹೊತ್ತು ತಂಬೂರಿ ಹೊತ್ತು
ಊರೂರ ಭಿಕ್ಷೆ ಮಾಡೋ ಪರದೇಸಿ
ನನಗೆ ದೇವರು ಎನ್ನಬಹುದಾ ?
ಮೊದಲನೆಯ ದೇವರು ನಾವು ಕಾಣೋ
ಎರಡನೆಯ ದೇವರು ನೀವು ಕಾಣೋ
ಸಿದ್ದಯ್ಯ ಸ್ವಾಮಿ ಬನ್ನಿ . . . . . .

ಕಂಡಾಯ ಮಾಡ್ದವರು ನಾವು ತಂಬೂರಿ ಮಾಡ್ದವರು ನಾವು ಅದನ್ನು ಹೊತ್ಕೊಂಡು ಮೆರೆಯತಕ್ಕಂತವನು ನೀನು ಮೊದಲನೆಯ ದೇವರು ನಾನು ಕಾಣೋ. ಎರಡನೆಯ ದೇವರು ನೀನು ಕಾಣೋ ಪರದೇಸಿ ಜಂಗಮ ಎಂದರು ಕೆಂಪಾಚಾರಿ. ಕಂದ ದೇವರು ಆದರೂ ಆಗ್ಕೋಪ್ಪ. ನನಗೊಂದು ಬೆಂಕಿಕೆಂಡ ಕೊಡಪ್ಪ ಭಂಗಿ ಸೇಯಿಬೇಕು ಎಂದು ಧರೆಗೆದೊಡ್ಡವರು. ಕಾಡಿಗೆ ಹೋಗುವವರು ನಾವು ಅಡಗಲ್ಲು ತರುತ್ತೀವಿ. ಅಂದ್ರೆ ಕರಿಕಲ್ಲು. ಅಡಗಲ್ಲು ತರುತ್ತೀವಿ ಹದಬಂದರೆ ಸರಿ ಹದಗಿದ ಬರದೇ ಹೋದರೆ ಕ್ಯಾಕರಿಸಿ ಉಗಿಯುತ್ತೀವಿ ಕಾಲಲ್ಲಿ ಒದೆಯುತ್ತೀವಿ ಕೆತ್ತುತ್ತೀವಿ ಹೀಗೆ ಲಿಂಗ ಮಾಡುವವರು ನಾವು. ನಾವು ಮಾಡುವ ಲಿಂಗ ತಕ್ಕೊಂಡು ಅಂಗೈ ಮೇಲೆ ಮಡ್ಕೊಂಡು ಓಂ ನಮಃ ಶಿವಾಯ ಎಂದು ಪೂಜೆ ಮಾಡಿಕೊಳ್ಳುವ ನೀನು. ಮೊದಲನೆಯ ದೇವರು ನಾನು ಕಾಣೋ ಎರಡನೆಯ ದೇವರು ನೀನು ಕಾಣೋ. ನಾನು ಮರದಲ್ಲಿ ದೇವರು ಮಾಡುತ್ತೀನಿ. ಚಿನ್ನದಲ್ಲಿ ದೇವರು ಮಾಡುತ್ತೀನಿ ಹಿತ್ತಾಳೆಯಲ್ಲಿ ದೇವರು ಮಾಡುತ್ತೀನಿ. ಕಂಚಿನಲ್ಲಿ ದೇವರು ಮಾಡುತ್ತೀನಿ. ಕಲ್ಲಿನಲ್ಲಿ ದೇವರು ಮಾಡುತ್ತೀನಿ. ನಾವು ಮಾಡಿದ ದೇವರನ್ನೆಲ್ಲ

ಲೈನಿನಲ್ಲಿ ನಿಲಸ್ಬುಡ್ತೀವಿ. ಅದಕ್ಕೆ ನೀರು ಗಂಧದ ಕಡ್ಡಿ ಹೂವು ಏನು ಇಕ್ಕಲ್ಲ. ನಾವು ಬ್ರಹ್ಮಕುಲದ ಪಂಚಾಳದವರು ನಾವು ಎಂದ್ನ ಕೆಂಪಣ್ಣ. ಲೇ ತಿರುಕ. ಸ್ವಾಮಿಯವರು ತಿರುಕ ಎಂದ ಮಾತು ಸ್ಥಿರವಾಗಲಿ ಕಂದ ನನಗೆ ಒಂದು ಬೆಂಕಿಕೆಂಡ ಕೊಡು ಎಂದು ಕೇಳಿದನು. ಬೆಂಕಿಕೆಂಡ ಕೊಡಬೇಕಾದರೆ ಒಂದು ಪ್ರಶ್ನೆ ಕೇಳುತ್ತೀನಿ ಅದಕ್ಕೆ ಉತ್ತರ ಕೊಟ್ಬಿಟ್ಟರೆ ಎರಡು ಬೆಂಕಿಕೆಂಡ ಕೊಡುತ್ತೀನಿ ಎಂದ ಕೆಂಪಾಚಾರಿ. ಯುಗಾದಿಗೂ ಮಧ್ಯ ಶಿವರಾತ್ರಿಗೂ ಮಧ್ಯ ಬರುವುದು ಯಾವುದು ಪರದೇಸಿ ಜಂಗುಮ. ಮದುವೆ ಲಗ್ನ. ಮದುವೆ ಲಗ್ನದಲ್ಲಿ ನಾವು ಆಚಾರಿಗಳು ಇಲ್ಲದೆ ನೀವು ಗಂಡ ಹೆಡ್ತಿಯರು ಆಗುವುದಕ್ಕೆ ಸಾಧ್ಯವಿಲ್ಲ ಕಾಣೋ. ಅಕ್ಕ ಭಾವ ಬರದೇ ಇದ್ದರೂ ಮದುವೆ ಆಗ್ಹೋಯ್ತದೆ ಕಾಣೋ. ಅಕ್ಕಿ ಬೇಳೆ ಇಲ್ಲದೇ ಹೋದರೂ ಮದುವೆ ಆಗ್ಬಿಡುತ್ತದೆ ಕಾಣೋ. ಆದರೆ ನಮ್ಮ ಆಚಾರರು ಇಲ್ಲದೆ ನೀವು ಗಂಡ ಹೆಡ್ತಿಯರು ಆಗುವುದಕ್ಕೆ ಸಾಧ್ಯವಿಲ್ಲ ಕಾಣೋ. ಹ್ಯಾಗಪ್ಪ ಕಂದ.

ಮೈಸೂರದು ಗಂಡು
ಮಳವಳ್ಳಿದು ಹೆಣ್ಣು
ಒಪ್ಪಂದ ಆಗ್ಹೋಯ್ತು
ಇನ್ನೂ ಹದಿನೈದು ದಿನಕ್ಕೆ ಮದುವೆ

ಎಲ್ಲಿ ಬರುತ್ತಾರೆ ನಮ್ಮ ಆಚಾರಿ ತಾವಕ್ಕೆ ಬರುತ್ತಾರೆ. ಏನಣ್ಣೋ ನನ್ನ ಮಗಳಿಗೆ ಒಪ್ಪಂದ ಆಗ್ಹೋಯ್ತು ಮೈಸೂರಿಗೆ. ನನ್ನ ಮಗಳಿಗೆ ವಾಲೆ ಭಾಗ್ಯ ಮಾಡಬೇಕು ಎಂದು ಬರುವುತ್ತಾರೆ.

ಕಾಲ ಕಡಗ ಮಾಡುತ್ತೀವಿ
ಕಾಲ ಪಿಲ್ಲಿ ಮಾಡುತ್ತೀವಿ
ಕಾಲುಂಗುರ ಮಾಡುತ್ತೀವಿ
ಕಾಲು ಚೈನು ಮಾಡುತ್ತೀವಿ
ಕತ್ತಿನ ಪದಕ ಮಾಡುತ್ತೀವಿ
ವಜ್ರದ ವಾಲೆ ಮಾಡುತ್ತೀವಿ
ಅದೂವಲ್ಲದೆ ಜಂಗುಮ
ಕತ್ತಿನ ತಾಳ ಮಾಡುತ್ತೀವಿ
ನಾವು ಮಾಡಿಕೊಟ್ಟ ತಾಳಿಯಾ
ನೀ ತಕ್ಕೊಂಡ್ಹೋಗಿ ಚಪ್ಪರದ
ಹಟ್ಟಿ ಒಳಗೆ ಮೂಡಲಾಗಿ
ತಿರಿಕೊಂಡು ಕೈಯೆತ್ತಿ ಕತ್ತಿಗೆ
ಕಟ್ಬುಟ್ಟರೆ ನಿನ್ನ ಹೆಡ್ತಿಯ ಜಂಗಮ
ಇನ್ನೂ ಯಾರ ಹೆಂಡ್ತಿ ?

ತಾಳಿ ಮಾಡಿದ ಗಂಡ ನಾನು
ತಾಳಿ ಕಟ್ಟಿದ ಗಂಡ ನೀನು ಕಾಣೋ
ಸಿದ್ದಯ್ಯ ಸ್ವಾಮಿ ಬನ್ನಿ
ಹಾಳಾದ ತಿರುಕ ಆಹಾ . . . .. .
ಓಹೋ . . . .ಲಿಂಗಯ್ಯ ದಯಮಾಡೋ
ಮೊದಲನೆಯ ಗಂಡ ನಾನು ಕಾಣೋ
ಎರಡನೆಯ ಗಂಡ ನೀನು ಕಾಣೋ
ಸಿದ್ದಯ್ಯ ಸ್ವಾಮಿ ಬನ್ನಿ

ತಾಳಿ ಮಾಡಿದಂತಹ ಗಂಡ ನಾನು ಅದನ್ನು ತಕ್ಕೊಂಡು ಹೋಗಿ ಕಟ್ಟಿದ ಎರಡನೆಯ ಗಂಡ ನೀನು. ಇದನ್ನು ಅರ್ಥ ಮಾಡಿ ಹೇಳಿದರೆ ನಾನು ನಿನಗೆ ಬೆಂಕಿಕೆಂಡ ಕೊಡುತ್ತೀನಿ ಹೇಳದೆ ಹೋದರೆ ರಾವು ಕಾಯಿಸಿ ನಿನ್ನ ತೊಡೆ ಮೇಲೆ ಎಳೆದು ಬಿಡುತ್ತೀನಿ ಎಂದ ಕೆಂಪಾಚಾರಿ. ಅಯ್ಯೋ ಕಂದ ಏಳು ವರ್ಷದ ಪ್ರಾಯಕ್ಕೆ ನನ್ನ ಹೆಡ್ತಿ ಮೇಲೆ ಗ್ಯಾನ ಹೋಯ್ತಾ ? ಅದೂ ಅಲ್ಲದ ನಾನು ಯೋಗಿ. ನನ್ನ ಹೆಂಡತಿಗೆ ಗಂಡ ಎಂದ ಮೇಲೆ ನಾಳೆ ಹೆಂಡ್ರಿಲ್ಲದ ದೇವರು ಮಾಡುತ್ತೀನಿ. ಎಲ್ಲಿ ? ಕೊಯಮತ್ತೂರು ಜಿಲ್ಲೆ ಕೊಳ್ಳೇಗಾಲ ತಾಲ್ಲೂಕು ಇರದಾಳು ಬಾನುಣ್ಸೆ ಕೊತ್ನೂರು ತೆಳ್ನೂರು ಬಾಣೂರು ಸುಂಡ್ರಳ್ಳಿ ಅಂಕಣಪುರದ ಮಧ್ಯೆ ನಾಳೆ ಚಿಕ್ಕಲ್ಲೂರು ಮಾಡಿ ಆ ಒಂಟಿ ಹುಣಸೆಮರದಡಿಯಲ್ಲಿ ಒಂಟಿ ದೇವರು ಮಾಡುತ್ತೀನಿ ಕಂದ. ನಿನಗೆ ಹೇಗೆ ಭೋಗವಿಲ್ಲವೋ ಆ ಹುಣಸೆಮರಕ್ಕೂ ಭೋಗವಿಲ್ಲದೆ ಹೋಗಲಿ. ಹೂವು ಕಾಯಿ ಒಂದು ಗೋಟು ಕೂಡ ಬಿಡದೇ ಹೋಗಲಿ. ಫಲ ಅನ್ನುವುದು ಕಚ್ಚದೇ ಹೋಗಲಿ ಕಾಣೋ ಎಂದು ಧರೆಗೆದೊಡ್ಡವರು ಶಾಪವನ್ನು ಕೊಟ್ಟರು.

ಈ ಪ್ರಶ್ನೆಗೆ ಉತ್ತರ ಗೊತ್ತಿಲ್ಲ ಕಾಣೋ
ಒಂದು ಬೆಂಕಿಕೆಂಡ ಕೊಡು ಕಾಣೋ
ಸಿದ್ದಯ್ಯ ಸ್ವಾಮಿ ಬನ್ನಿ

ಯಾತರಲ್ಲಿ ಬೆಂಕಿಕೆಂಡ ಕೊಡಲಿ ಪಕ್ಕದಲ್ಲಿ ಬಿದ್ದಿರುವ ಚಕ್ಕೆಯಲ್ಲಿ ಕೊಡಪ್ಪ ಎಂದಾಗ ನಿನ್ನ ಅಪ್ಪ ಕೆತ್ತಿ ಮಡಗಿದ್ದಾನಾ ? ಚಕ್ಕೆಯಲ್ಲಿ ಕೊಡುವುದಕ್ಕೆ ಕೊಡಲ್ಲ ಕಾಣೋ

ಅಂಗೈಯ ಒಡ್ಡು ಮಂತೆ
ಬೆಂಕಿಕೆಂಡ ಕೊಡುತ್ತೀನಿ
ಸಿದ್ದಯ್ಯ ಸ್ವಾಮಿ ಬನ್ನಿ

ಬೆಂಕಿಕೆಂಡ ಕೇಳಕ್ಕೆ ಬಂದರೆ ನನಗೆ ಬೆಂಕಿ ಮುಟ್ಟಿ ಸತ್ಯ ಮಾಡಿಸ್ತೀಯಲ್ಲಪ್ಪ. ಆಗ ಕಬ್ಬಿಣದ ಇಕ್ಕಳವನ್ನು ತೆಗೆದು ಗದಗದನೆ ಕಾಯುತ್ತಿರುವಂತ

ಗದಗದನೇ ಕಾಯುತ್ತಿದ್ದ ಬೆಂಕಿಕೆಂಡ
ತೆಗೆದು ಸ್ವಾಮಿ ಅಂಗ್ಯೆ ಮೇಲೆ ಇಟ್ಟ
ಕೆಂಪಣ್ಣ . . . .

ಬೇಲದ ಕಾಯಿಗಾತ್ರದಲ್ಲಿರುವ ಬೆಂಕಿಕೆಂಡವನ್ನು ತೆಗೆದು ಸ್ವಾಮಿಯವರ ಅಂಗ್ಯೆ ಮೇಲೆ ಇಟ್ಟಾಗ ಅಗ್ನಿ ದೇವತೆ ಗಡಗಡನೆ ನಡುಗುತಾವರೆ ಕಮಲವಾಗಿ ಬಂದು ಕೂತ್ಕೊಂಡರಂತೆ.

ಭಂಗಿಯ ಸೇದೋ ತನಕ
ಬಂಧು ಬಳಗ ನೆನ್ಕೊಳಪ್ಪ
ಸಿದ್ದಯ್ಯ ಸ್ವಾಮಿ ಬನ್ನಿ
ವಂಶಿಕರನ್ನ ನೆನ್ಕೋಳ್ಳೋ
ನಿನ್ನ ವಂಶ ಹಾಳಾಗುವನೆ
ಸಿದ್ದಯ್ಯ ಸ್ವಾಮಿ ಬನ್ನಿ

ಆ ಭಂಗಿ ಸೊಪ್ಪಿಗೆ ಹದಿನಾಲ್ಕು ನೀಲಿಗಳನ್ನು ಉಪದೇಶ ಮಾಡುತ್ತಿದ್ದಾರೆ.

ಆನಂದದ ನೀಲಿ
ಅವತಾರದ ನೀಲಿ
ಎಕ್ಕದಾಲಿನ ನೀಲಿ
ಕರಳಿ ಹಾಲಿನ ನೀಲಿ
ಹುಚ್ಚು ಬೆಪ್ಪಿನ ನೀಲಿ
ಮೊಲ್ಲಾಗರದ ನೀಲಿ
ಕಳ್ಳಿ ಹಾಲ ಕಂಡರೆ ಕುಡಿವಂತ ನೀಲಿ
ಎಕ್ಕದ ಹಾಲ ಕಂಡರೆ ಪಕ್ಕನೆ
ಬಾಯ್ಬಿಡುವ ನೀಲಿ
ಬಡಜನರ ಕೈ ಎತ್ತಿ ಮುಗಿಯುವ ನೀಲಿ
ಹೋಗೋ ಜನರನ್ನು ಕಂಡು
ಕಲ್ಲಲ್ಲಿ ಹೊಡೆಯುವ ನೀಲಿ
ಹುಚ್ಚು ಬೆಪ್ಪು ನೀಲಿ
ಆ ಮರ ಹತ್ತೋ ನೀಲಿ
ಮರದಿಂದ ಬೀಳೋ ನೀಲಿ

ಹದಿನಾಲ್ಕು ನೀಲಿಯನ್ನ ಉಪದೇಶ ಮಾಡಿ ಭಂಗಿ ಬೋಧನೆ ಮಾಡಿದರಂತೆ. ಭಂಗಿ ಹೊಗೆಯನ್ನು ಕೆಂಪಣ್ಣನ ನೆತ್ತಿಗೆ ಉಪೋ ಅಂತ ಉರುಬಿದರಂತೆ. ಕೆಂಪಾಚಾರಿಗೆ ಹುಚ್ಚು ಬೆಪ್ಪು ಬಂದ್ಬುಡ್ತು.

ಹುಚ್ಚು ಬೆಪ್ಪು ಗ್ಯಾನದಲ್ಲಿ
ಉಟ್ಟುಬಟ್ಟೆ ಹರಿಯುತ್ತಾನೆ
ಸಿದ್ದಯ್ಯ ಸ್ವಾಮಿ ಬನ್ನಿ
ವಜ್ರದ ಜನವಾರ ಕಿತ್ತು
ಎಸೆದಾವ್ನೆ . .. . . .
ಹತ್ತು ಬೆರಳಿನ ಚಿನ್ನದುಂಗರವ
ಕಳದು ಕಳದು ಬೀಸಾಕುತ್ತಾನೆ
ಸಿದ್ದಯ್ಯ ಸ್ವಾಮಿ ಬನ್ನಿ
ಎಪ್ಪತ್ತೇಳು ಕಾಲಾಳುಗಳ
ಬತ್ತ ಬಡಿದಂತೆ ಬಡಿಯುತ್ತಾನೆ
ಸಿದ್ದಯ್ಯ ಸ್ವಾಮಿ ಬನ್ನಿ

ಎಪ್ಪತ್ತೇಳು ಕಾಲಾಳುಗಳನ್ನ ಬತ್ತ ಬಡಿದಾಗೆ ಬಡಿಯುತ್ತಿದ್ದಾನೆ. ಸ್ವಾಮಿಯವರ ಜುಟ್ಟು ಹಿಡಿದು . . . .

ತಂದೆಯೂ ನೀನೇ
ತಾಯಿಯೂ ನೀನೇ
ಬಂಧು ಬಳಗವೆಲ್ಲ ನೀನೇ
ಗುರುವೇ . . . .
ಆಹಾ . . . .

ಸ್ವಾಮಿ ನೀವು ಬರುವುದಕ್ಕೆ ಮುಂಚೆ ನಮ್ಮ ಚಿಕ್ಕ ದನಿಗಳು ಚನ್ನಾಗಿದ್ದರು ನೀವು ಬಂದ ಮೇಲೆ ಹೀಗೆ ಆಗಾವ್ರೆ ಎಂದಾಗ ಸ್ವಾಮಿಯವರು ಇನ್ನೂ ಮೇಲೆ ಹೀಗೆಯೇ ನೀವೆಲ್ಲರೂ ನಿಮ್ಮ ಊರು ಸೇರ್ಕೊಳ್ಳಿ ಎಂದರು. ನಾನಾಗಿ ಕರೆಯೋ ಗಂಟ ಈ ಕುಲುಮೆಯಲ್ಲಿ ಕುಣಿಯಪ್ಪ ಎಂದು ಸ್ವಾಮಿಯವರು. ತಂದೆ ತಾಯಿಯ ಕೈಯಲ್ಲಿ ದಾನ ಇಸ್ಕೋಬೇಕು ಅಂತ್ಹೇಳಿ ಅದೇ ಮಾರ್ಗವಾಗಿ ಮಾರಳ್ಳಿ ಗ್ರಾಮಕ್ಕೆ ಬಂದಿದ್ದಾರೆ. ಮಾರಳ್ಳಿ ಒಳಗೆ ಪುಣ್ಯವಂತನ ಮಡದಿ ಶರಣೆ ಮುದ್ದಮ್ಮ. ಭಾಗ್ಯವೆಲ್ಲ ಬರಿದಾಗಿದೆ ಕಣ್ಣೆರಡು. ಕಾಣುವುದಿಲ್ಲ. ಸ್ವಾಮಿಯವರು ಬಂದರೆ ನನ್ನ ಮಗನ್ನು ಕೊಟ್ಟಿಡುತ್ತೀನಿ ಎಂದಳಂತೆ. ಆಗ ಸ್ವಾಮಿಯವರು ಅಲ್ಲಿ ಬಂದರಂತೆ. ಮುದ್ದಮ್ಮ ನಿನ್ನ ಸೋಮವಾರ ನಿನ್ನ ಮನೆಗಾಣೆ ನಾನು ಹೋಗಬೇಕಾದರೆ ನಿನ್ನ ಮಾರಳ್ಳಿ ಹಾಲಸಾಗರವಾಗಿ ಬಾಳುತ್ತಿತ್ತಲ್ಲ ಕಂದ. ಈ ಬಾಳಾಟ ಹಾಳಾಗಬೇಕಾದರೆ ಕಾರಣವೇನು ಮುದ್ದಮ್ಮ ಎಂದು ಕೇಳಿದ್ದಾರೆ. ಸ್ವಾಮಿ ನಿನ್ನೆ ದಿಸ ಬೊಪ್ಪಣಪುರದಪ್ಪ ಮಂಟೇಲಿಂಗಪ್ಪ ಅನ್ನುವರು ಬಂದಿದ್ದರು. ನನ್ನ ಕಿರಿ ಮಗನ ಕೇಳಿದರು ಸ್ವಾಮಿ. ಅಂದಾಗೆ ಅಂದುಬಿಟ್ಟೆ ಬೋದಾಗ ಬೋದ್ಬಿಟ್ಟೆ ಸ್ವಾಮಿ. ನನ್ನ ಬಾಯಲ್ಲಿ ಕಡದಂತ ಮಾತಿನಂತೆ ಹಾಳು ಮಾಡಿ ಹೋಗಿದ್ದಾರೆ ಸ್ವಾಮಿ. ಆ ಸ್ವಾಮಿಗಳನ್ನು ನೀವೇನಾದರೂ ನೋಡಿದರ ಸ್ವಾಮಿ. ಆ ಸ್ವಾಮಿ ಸಿಕ್ಕಿದರೆ ನನ್ನ

ಬಂಗಾರದ ಬೊಂಬೆ ಭಾಗ್ಯವುಲ್ಲ ಕೆಂಪಣ್ಣನನ್ನು ದಾನವಾಗಿ ಕೊಡುತ್ತೀನಿ ಸ್ವಾಮಿ ಎಂದರು ಮುದ್ದಮ್ಮ. ಅದಕ್ಕೆ ಸ್ವಾಮಿಯವರು ಕಂದ ಬೊಪ್ಪಣಪುರದ ಮಂಟೇದಲಿಂಗಯ್ಯ ಬಂದಿದ್ದರಾ ತಾಯಿ. ನಾನು ಅವರ ತಮ್ಮ ಲಿಂಗಪ್ಪ ಅಂದರು. ಸ್ವಾಮಿ ಅವರ ತಮ್ಮ ಲಿಂಗಪ್ಪ ಆದ ಮೇಲೆ

ಅಣ್ಣ ಹಾಕಿರೋ ಮಾಟ್ನಾ
ತಮ್ಮ ಒಡೆಯಲು ಬಹುದು
ತಮ್ಮ ಹಾಕಿದ ಮಾಟ್ನಾ
ಅಣ್ಣ ಒಡೆಯಲು ಬಹುದು
ಹಾಳು ಮಾಡಿರುವ ಭಾಗ್ಯವ
ನಿಮ್ಮ ಕಣ್ಣಾರೆ ನೋಡಿ ಸ್ವಾಮಿ
ಸಿದ್ದಯ್ಯ ಸ್ವಾಮಿ ಬನ್ನಿ

ಸ್ವಾಮಿಯವರು ಅಣ್ಣ ಹಾಳು ಮಾಡಿರು ಭಾಗ್ಯವನ್ನು ನಾನು ಕೊಟ್ಟರೆ ನಿನ್ನ ಕಿರಿಯ ಮಗನನ್ನು ದಾನವಾಗಿ ಕೊಡುತ್ತೀಯಾ ಕಂದ ಎಂದರು. ನೀನು ಕೊಡದಿದ್ದರೆ ಅಣ್ಣ ತಮ್ಮರಲ್ಲಿ ಜಗಳ ಬರುತ್ತದೆ ಎಂದರು. ಮುದ್ದಮ್ಮ ನನ್ನ ಕಂದನನ್ನು ಕೊಡುತ್ತೀನಿ ಎಂದಿದ್ದಾಳೆ ಮುದ್ದಮ್ಮ. ಸ್ವಾಮಿಯವರು ಕಂದ 'ಹಸಿ ತಿಂದು ಹುಸಿ ಬೊಗಳುವ ನಾಲಿಗೆ" ಈಗ ಆಡಿದ ಮಾತು ಒಂದು ಘಳಿಗೆ ಬರಲ್ಲ. ಆದ್ದರಿಂದ ನಿನ್ನ ನೆಂಬುವುದು ಹೇಗೆ ಕಂದ ಎಂದರು.

ನನ್ನಾಣ್ಣೋ ಕೊಡುತ್ತೀನಿ
ನನ್ನಕಣ್ಣಾಣೋ ಕೊಡುತ್ತೀನಿ
ಹೊತ್ತಿರುವ ಕಂಡಾಯದಾಣೋ
ಕೊಡುತ್ತೀನಿ ನಿಮ್ಮ ಪಾದ
ಕಂಡಾಯ ಮುಟ್ಟುತ್ತಳೆ
ಮುಟ್ಟಿ ಸತ್ಯ ಮಾಡುತ್ತಾಳೆ
ಸಿದ್ದಯ್ಯ ಸ್ವಾಮಿ ಬನ್ನಿ

ತಡಕಾಡುತ್ತಾ ಹುಡುಕಾಡುತ್ತಾ ಬಂದು ನನ್ನಾಣೆ ಕೊಡುತ್ತೀನಿ ನನ್ನ ಕಣ್ಣಾರೆ ಕೊಡುತ್ತೀನಿ ನಿಮ್ಮ ತಂಬೂರಿ ಆಣೆ ಕೊಡುತ್ತೀನಿ ಎಂದು ಸತ್ಯ ಮಾಡಾವ್ಳೆ ಮುದ್ದಮ್ಮ. ಕಪ್ಪು ಧೂಳ್ತ ಕೊಡುತ್ತೀನಿ ಕಣ್ಬಿಡವ್ವ ಅಂದಳು ಅಷ್ಟೇ. ಮುದ್ದಮ್ಮನಿಗೆ ಕಣ್ಬಂದ್ಬುಟ್ತು. ಹೋಗಿರುವಂತ ಭಾಗ್ಯ ಇದ್ದ ಹಾಗೆ ಬಂದ್ಬುಡ್ತಂತೆ. ಆರು ಜನ ಗಂಡು ಮಕ್ಕ ಉದ್ಯೋಗ ಮಾಡಿಸುತ್ತಿದ್ದಾರೆ ಆರು ಜನ ಸೊಸೆಯರು ಅಡಿಗೆ ಮಾಡುತ್ತಿದ್ದಾರೆ. ಬಾಚಿಬಸವಾಚಾರಿ ಉದ್ಯೋಗ ಮಾಡುತ್ತಿದ್ದಾರೆ.

ಬಂದ್ರೆ ನೀವು ಕರ್ಕೊಂಡು ಹೋಗಿ

ಬರದ್ರೆ ನೀವು ಬಿಟ್ಬಿಟ್ಟು ಹೋಗಿ
ಸಿದ್ದಯ್ಯ ಸ್ವಾಮಿ ಬನ್ನಿ

ಅಂದ ತಕ್ಷಣ ಧರೆಗೆದೊಡ್ಡವರಿಗೆ ಹತ್ಬುಡ್ತು ಕೋಪ. ಆರು ಗಾಡಿ ಸುಳ್ಳು ನಿಮ್ಮ ಆಚಾರರಿಗೆ ಉಂಟಾಗಲವ್ವ ಅಂತ್ಹೇಳಿ ಶಾಪವನ್ನು ಕೊಟ್ಟರು ಧರೆಗೆದೊಡ್ಡವರು.

ಊರಿಗೊಂದು ಒಕ್ಕಲಾಗಿ
ಬೀದಿಗೊಂದು ಒಕ್ಕಲಾಗಿ
ಐದು ಕುಲದ ಮೇಲೆ
ಹೆಚ್ಚಬೇಡಿ ಪಂಚಾಳದವರೆ
ಮಾರಳ್ಳಿ ಹಾಳಾಗಲವ್ವ
ಮಳವಳ್ಳಿ ಏಳಿಗೆಯಾಗಲವ್ವ
ಸಿದ್ದಯ್ಯ ಸ್ವಾಮಿ ಬನ್ನಿ
ನಾಳೆ ಮಾರಳ್ಳಿಗೆ ಕಂದ
ಸೇರೊಕ್ಕಲು ಒಂದಾಗಲವ್ವ
ಸಿದ್ದಯ್ಯ ಸ್ವಾಮಿ ಬನ್ನಿ

ಊರಿಗೆ ಐದು ಕುಲದ ಮೇಲೆ ಹೆಚ್ಚಬೇಡಿ ಪಂಚಾಳದವರೆ.

ಅಡಗಲ್ಲು ಹೊತ್ಕೊಂಡು
ವಾಲೆ ಮಾಡುತ್ತೀವಿ ಅಂತ
ತಾಳಿ ಮಾಡುತ್ತೀವಿ ಅಂತ
ಕಾಲು ಚೈನು ಮಾಡುತ್ತೀವಿ ಅಂತ
ಬಡವರ ಮನೆಯ ಚಿನ್ನ . . . .
ಬಲ್ಲಿದವರ ಮನೆಯ ಚಿನ್ನ . . .
ಮನೆಗೆ ಬಂದ್ಬಿಟ್ಟರೆ . . . .. .
ಕೊಟ್ಟವನು ಕೆಟ್ನಂತ ನೀವು
ಮೂರು ಏಟು ಹೊಡೆಯಿರಪ್ಪ
ಸಿದ್ದಯ್ಯ ಸ್ವಾಮಿ ಬನ್ನಿ
ಈ ಊರ ಬಿಟ್ಬುಟ್ಟು
ಮುಂದಿನ ಊರ ಸೇರಿರಪ್ಪ
ಸಿದ್ದಯ್ಯ ಸ್ವಾಮಿ ಬನ್ನಿ

ಬಡವರ ಮನೆ ಚಿನ್ನ ಶ್ರೀಮಂತರ ಮನೆ ಚಿನ್ನ ನಿಮ್ಮ ಅಡಗಲ್ಲಿಗೆ ಬಂದರೆ ಕೊಟ್ಟವನು ಕೆಟ್ಟ ಅಂತ ಅದನ್ನು ಮೂರೇಟು ಹೊಡೆಯಿರಿ. ಹಿತ್ತಾಳೆ ನೀರು ಬಿಟ್ಟು ಮಾಲಿನವರಿಗೆ ಮಾಲು ಕೊಟ್ಟು ನೀವು ಮುಂದಿನ ಊರು ಸೇರ್ಕೊಳ್ಳಿ ಎಂದರು.

ಭಂಡ ಬಾಳುವೆ ಮಾಡಿ ಎಂದು ಸ್ವಾಮಿಯವರು ಶಾಪಕೊಟ್ಟು ಕೆಂಪಾಚಾರಿಯನ್ನು ಕೂಗುದರಂತೆ. ಕೆಂಪಾಚಾರಿ ಕುಡುಶಿಳ್ಳು ಕಿರುಕಾಕು ಹಾಕುತ್ತಿದ್ದಾನೆ ನೀಲಿ ಬಂದ ಗ್ಯಾನದಲ್ಲಿ ಮಾರಳ್ಳಿಗೆ ಬಂದಿದ್ದಾನೆ. ಬಂದವನಿಗೆ ತಾಯಿ ಯಾರೋ ? ತಂದೆ ಯಾರೋ ? ಮರೆತ್ತಿದಾನೆ. ತಂದೆ ತಾಯಿಯವರು ಕೆಂಪಣ್ಣ . . . .. ಕೆಂಪಾಚಾರಿ ಎಂದು ಕೂಗಿದರೂ ಕೂಡ. ಕೆಂಪಣ್ಣ ಮಾತಾಡುತ್ತಿಲ್ಲ. ತಾಯಿ ಮರೆಸಿ ತಂದೆ ಮರೆಸಿ ಕೆಂಪಾಚಾರಿಯನ್ನು ಕರ್‍ಕೊಂಡು ಕಾಮ ಕ್ರೋಧ ಮದ ಮತ್ಸರ ದುರ್ಬುದ್ಧಿ ಹೋಗಿ ಗುರುಬುದ್ಧಿ ಬರಲು ಇವನನ್ನು ಎಲ್ಲಿ ಇಡಬೇಕು ಅಂತ್ಹೇಳಿ ಚಿಂತೆ ಮಾಡಿದಾಗ ಸ್ವಾಮಿಯವರಿಗೆ ಎಳೆಕುಂದೂರು ಬೆಟ್ಟ ನಮ್ಮ ಸ್ವಾಮಿಯವರ ಕಣ್ಣಿಗೆ ಕಂಡ್ಬಿಟ್ಟಿತಂತೆ.

ಕೆಂಪಾಚಾರಿ ಕರ್‍ಕೊಂಡು
ಕುಂದೂರು ಬೆಟ್ಟಕ್ಕೆ
ಬಂದವರಲ್ಲೋ ಮಾಯ್ಕಾರ
ಸಿದ್ದಯ್ಯ ಸ್ವಾಮಿ ಬನ್ನಿ
ಕುಂದೂರು ಬೆಟ್ಟದಲ್ಲಿ
ಏಳು ಜನ ಋಷಿಗಳು
ಧರೆಗೆದೊಡ್ಡವರ ಕಂಡೇಳಿ
ತಪಸ್ಸು ಮಾಡಿ ಕುಂತಾವ್ರೆ
ಏಳು ಜನ ಋಷಿಗಳು
ಕೆಂಪಾಚಾರಿ ಹುಚ್ಚು ಬೆಪ್ಪಿನ
ಗ್ಯಾನದಲ್ಲಿ ಕುಡುಶಿಳ್ಳ ಹಾಕುತ್ತಾವ್ನೆ
ಕಿರುಕಾಕ ಹೊಡೆಯುತ್ತಾವ್ನೆ
ಎಳೆಕುಂದೂರು ಬೆಟ್ಟ ಗಡಗಡನೇ
ನಡುಗಿತಲ್ಲೋ
ಸಿದ್ದಯ್ಯ ಸ್ವಾಮಿ ಬನ್ನಿ
ಮಂಟೇದಾ ನೀವೇ ಬನ್ನಿ

ಏಳು ಜನ ಋಷಿಗಳು ತಪಸ್ಸು ಭಂಗವನ್ನು ಬಿಟ್ಟು ಬರುತ್ತಿದ್ದಾರೆ. ಸಿದ್ದ ಸಿದ್ದುರಿಗೆಲ್ಲ ಅತೀ ಮುದ್ದು ಘನನೀಲಿ ಮಾಡುತ್ತೀನಿ ಅಂತ್ಹೇಳಿ ಇವನನ್ನು ನಿಮ್ಮ ಜೊತೆಯಲ್ಲಿ ೧೨ ವರ್ಷದವರೆಗೆ ಇಟ್ಟು ಬುದ್ಧಿ ಕಲಿಸಿ ಎಂದರಂತೆ. ಕೆಂಪಾಚಾರಿ ಹುಚ್ಚು ಬೆಪ್ಪಿನ ಗ್ಯಾನದಲ್ಲಿ ಏಳುಜನ ಋಷಿಗಳ ಜುಟ್ಟು ಇಡಿದು ವಾಲಾಡಿದನಂತೆ. ಅಯ್ಯೋ ಈ ಹುಚ್ಚನನ್ನು ನಾವು ಕಲಿಸಕ್ಕೆ ಆಗುತ್ತಾ ಇಲ್ಲ ಅಂತ್ಹೇಳಿ ಇವನಿಗೆ ಈಶಾನ್ಯ ಮೂಲೆಯಲ್ಲಿರುವ ಕಾಳಿಂಗ ಗವಿ ಸೂಕ್ತವಾದ ಜಾಗ ಅಂತ್ಹೇಳಿ ರೋಮ ರೋಮಗಳಲ್ಲಿ ಹಾವು ಚೇಳು ಮನೆ ಮಾಡಿ ದುರಾಂಕರ ದೂರವಾಗಿ ಗುರುಬುದ್ಧಿ ಉಂಟಾದುತ್ತದೆ. ನಮಗೆ ಮೋಕ್ಷ ಕೊಡಿ ಸ್ವಾಮಿ ಎಂದರು ಸಿದ್ದರು.

ರಸ ಸಿದ್ದು ನೀನಾಗು
ರೇವಣ ಸಿದ್ದನಾಗು
ಕಾರಯ್ಯ ಸಿದ್ದನಾಗು
ಮೊನಗಾರ ಸಿದ್ದನಾಗು
ಬಸಯ್ಯ ಸಿದ್ದನಾಗು
ಏಳು ಜನ ಸಿದ್ದ ಋಷಿಗಳು
ಏಳೂರಲ್ಲಿ ನೆಲೆಸುತ್ತಾರೆ
ಸಿದ್ದಯ್ಯ ಸ್ವಾಮಿ ಬನ್ನಿ

ಏಳು ಜನ ಸಿದ್ದ ಋಷಿಗಳನ್ನು ಏಳು ದಿಕ್ಕಿಗೆ ಕಳುಹಿಸಿ ಸ್ವಾಮಿಯವರು

ಕೆಂಪಾಚಾರಿಯನ್ನ . . .
ಎಳೆಕುಂದೂರು ಬೆಟ್ಟಕ್ಕೆ
ಕರಕೊಂಡು ಬರುವುತ್ತಾರೆ
ಸಿದ್ದಯ್ಯ ಸ್ವಾಮಿ ಬನ್ನಿ
ಕಪ್ಪು ಧೂಳ್ತ ಹಿಡಿದರಂತೆ
ಕಾಳಿಂಗ ಸರ್ಪವನ್ನು ಕೂಗುತ್ತಾರೆ
ಸಿದ್ದಯ್ಯ ಸ್ವಾಮಿ ಬನ್ನಿ

ಸ್ವಾಮಿ ಕಪ್ಪು ಧೂಳ್ತವನ್ನು ಹಿಡಿದು ಕಾಳಿಂಗ ಸರ್ಪವನ್ನು ಕರೆದಾಗ ಸರ್ಪ ಎಡೆಯನ್ನು ಎತ್ಕೊಂಡು ಧರೆಗೆದೊಡ್ಡವರ ಮುಂದೆ ಆನಂದವನ್ನು ಆಡುತ್ತಿದೆ. ಕಾಳಿಂಗ ಸರ್ಪಕ್ಕೆ ಬುದ್ದಿ ಹೇಳಿದರೂ ಇವನ ಕಾಮ ಕ್ರೋಧ ಮದ ಮತ್ಸರವನ್ನೆಲ್ಲ ಹಾಳು ಮಾಡಿ ಗುರು ಎನ್ನುವ ಅಕ್ಷರ ಉಂಟಾಗುವ ತನಕ ನಿನ್ನ ಬಂಧನದಲ್ಲಿ ಇಟ್ಕೊಳ್ಳಪ್ಪ ಎಂದರು.

ತಲಕಾಡು ಮಡುವಿನಲ್ಲಿ ಜಲಕ – ೧೫

ಎದ್ದು ಬಾರೋ ನನ್ನ ಶರಣ
ಮಡುವಾಳ ಮಾಚಯ್ಯ
ಎಂದಾಗ ದೊಡ್ಡಮ್ಮ
ತಾಯಿ ಕೂಗಿದಂತಹ ಕೂಗ
ಲಾಳಾಯಿಸಿ ಕೇಳ್ಕೊಂಡು
ನಡುಕಟ್ಟ ಕಟ್ಕೊಂಡು
ಓಡೋಡಿ ಬಂದು
ಗುರುವೇ ಧರೆಗೆದೊಡ್ಡವರ

ಪಾದಕ್ಕೆ ಬಗ್ಗಿ ಶರಣ ಮಾಡುತ್ತಾರೆ
ಸಿದ್ದಯ್ಯ ಸ್ವಾಮಿ ಬನ್ನಿ

ಮಾಚಪ್ಪ ನಡುಕಟ್ಟನ್ನು ಕಟ್ಕೊಂಡು ಧರೆಗೆದೊಡ್ಡವರ ಪಾದಕ್ಕೆ ಬಗ್ಗಿ ಶರಣು ಮಾಡಿ ನನ್ನನ್ನು ಕರೆದಂತಹ ಕಾರಣವೇನು ಸ್ವಾಮಿ ? ಆಚಾರಿ ಮಗ ಮುಟ್ಟಿ ನನಗೆ ಮೈಲಿಗೆ ಮಾಡಿದ್ದಾನೆ ಕಂದ. ತಲಕಾಡು ಮಾಲಂಗಿ ಮಡುವಿಗೆ ಸ್ನಾನಕ್ಕೆ ಹೋಗಬೇಕು ಮಡಿ ಬಿಡುತ್ತೀಯ ಶರಣ ಎಂದರು. ಬುದ್ದಿ ಅದೇ ಜಾತಿಯಲ್ಲಿ ಹುಟ್ಟಿ ಅದೇ ಕಸಬು ಮಾಡುತ್ತಾ ಮಡಿ ಬಿಡುವ ಲೆಕ್ಕಾಚಾರ ಗೊತ್ತಿಲ್ಲವಾ ಸ್ವಾಮಿ ? ಮಡಿಬಿಡಬೇಕಾದರೆ ಶರಣ ನಾವು ಹೋಗುವಂತ ಹೊತ್ತು ಈಗಲ್ಲ ಕಾಣೋ. ನಾವು ಹೋಗುವ ಘಳಿಗೆ ಕಲ್ಲು ನೀರು ಕರಗುವ ಟೈಮು ಗಂಗಾನದಿ ನಿದ್ರೆ ಮಾಡುವ ಟೈಮು ಅಕ್ಷಿಗಳ ಪಕ್ಷಿಗಳ ಗಳಗು ಇರಬಾರದು. ನರಮಾನವರ ಸುಳಿವಿರಬಾರದು. ಅಂತ ನಿಸ್ರಾತ್ರಿ ಒಳಗೆ ನಾವು ನೀವು ಇಬ್ರೆ ಹೋಗಿ ಸ್ನಾನ ಮಾಡ್ಕೊಂಡು ಜೊತೆಗೆ ಶಿವಕಂತೆಯನ್ನು ಮಡಿ ಮಾಡಬೇಕು ಎಂದರು ಧರೆಗೆದೊಡ್ಡವರು. ಮಾಚಯ್ಯ ಶಿವಕಂತೆ ಅಂದ್ರೆ ಸಾಮಾನ್ಯವಾದ ಶಿವಕಂತೆ ಅಲ್ಲ ಕಾಣೋ. ಅದರಲ್ಲಿ ವಾಸವಾಗಿದ್ದಾವೆ ಹೇನು ಕೂರೆ ಮೊಟ್ಟೆ ಒಂದು ಕೂಡ ಪ್ರಾಣ ಬಿಡಕಿಲ್ಲ ಕಾಣೋ.

ನೀರಲ್ಲಿ ಅಜ್ಜಂಗಿಲ್ಲ
ಉಬ್ಬೆಯಲ್ಲಿ ಬೇಯ್ಸಂಗಿಲ್ಲ
ಕಲ್ಲಲ್ಲಿ ಒಗೆಯಂಗಿಲ್ಲ ಕಾಣೋ
ಪ್ರಾಣಿಗಳ ಪ್ರಾಣ ಬಿಡಕಿಲ್ಲಪ್ಪ
ಆ ರೀತಿ ಶಿವಕಂತೆ ಮಡಿ
ಮಾಡಬೇಕು ಅಂತಾವ್ರೆ
ಧರೆಗೆದೊಡ್ಡವರು .. . . .
ಗುರುವೇ . . . .
ಶಂಕರಾ . . ..

ನೀರಲ್ಲಿ ಅಜ್ಜಂಗಿಲ್ಲ ಕಲ್ಲಲ್ಲಿ ಒಗೆಯಂಗಿಲ್ಲ ಉಬ್ಬೆಯಲ್ಲಿ ಬೇಯ್ಸಂಗಿಲ್ಲಲ್ಲಾ ರೀತಿ ಶಿವಕಂತೆ ಮಡಿಮಾಡಬೇಕು ಕಾಣಪ್ಪ. ಅಲ್ಲಿರುವ ಜೀವ ಜಂತು ರಾಶಿಗಳು ಒಂದು ಕೂಡ ಸಾಯಂಗಿಲ್ಲ. ಅದೂ ಅಲ್ಲದೆ ಮುಂದನ ಮಡಿ ಬಿಡಬೇಕು. ಹಿಂದಿನ ಮಡಿ ಎತ್ತೇಕು ವೀರಣ್ಣ ಬೊಮ್ಮಣ ಎಂಬ ಎರಡು ಪೆಂಜು ಕೈಯಲ್ಲಿ ಹಿಡಿಯಬೇಕು. ಈ ನಾಲ್ಕು ಆಳು ಕೆಲಸವನ್ನು ನೀನು ಒಬ್ಬನೇ ಮಾಡಬೇಕು ಎಂದರು ಸ್ವಾಮಿಯವರು. ಬುದ್ದಿ ನನ್ನ ಮಡದಿ ಮಾದೇವಿಯನ್ನು ಕರಕೊಳ್ಳಲ ಬುದ್ದಿ ಅಯ್ಯೋ ಕಂದ ನಾನು ನೀನು ಇಬ್ಬರೆ ಹೋಗಬೇಕು. ಮಡಿವಾಳ ಮಾಚಪ್ಪ ಚಿಂತೆ ಮಾಡುತ್ತಾ ಮಾದೇವಿಯ ಬಳಿಗೆ ಬಂದಾಗ ಶರಣ. ಮಾದೇವಿ ಧರೆಗೆದೊಡ್ಡವರು ಏನು ಹೇಳಿದರು ಸ್ವಾಮಿ. ಮಾದೇವಿ ಏನು ಹೇಳಲಿ. ಅಯ್ಯೋ ಗಂಡನಿಗೆ ಬಂದ ಕಷ್ಟ ಹೆಡ್ತಿಗೆ ಉಂಟು ಹೆಡ್ತಿಗೆ

ಬಂದ ಕಷ್ಟ ಗಂಡನಿಗೆ ಉಂಟು. ಇದು ಹಿಂದಿನ ಕಾಲದಲ್ಲಿ ಈ ಕಾಲದಲ್ಲಿ ಅಲ್ಲ. ಸತಿ ಪತಿಗಳು ಎಂದರೆ ಒಂದು ಜೊತೆ ಎತ್ತು ಇದ್ದ ಹಾಗೆ ಎತ್ತು ಹೇಗೆ ಸಮನಾಗಿ ಭಾರ ಹೊರುತ್ತದೋ ಅದೇ ರೀತಿ ಗಂಡ ಹೆಣ್ತಿ ಸಮನಾಗಿ ಭಾರ ಹೊರಬೇಕಂತೆ. ಪತಿವೃತೆ ಮಲ್ಲಿಗೆ ಮಾದೇವಮ್ಮ. ಹೇಳುವುದಕ್ಕೆ ಬಾಯಿ ಬರುತ್ತಿಲ್ಲ ಹೇಳದೆ ಹೋದರೆ ಪಾಪಿ ಮನಸ್ಸು ಕೇಳುತ್ತಿಲ್ಲ ಮಾದೇವಿ. ಮಡಿಬಿಡುವುದಕ್ಕೆ ಹೇಳಿದ್ದಾರೆ. ಅದಕ್ಕೆ ಯಾಕೆ ಚಿಂತೆ ಮಾಡುತ್ತಿದ್ದೀರಿ ಸ್ವಾಮಿ. ಅದಕ್ಕೆ ನಾನು ಚಿಂತೆ ಮಾಡುತ್ತಿಲ್ಲ ಮುಂದಿನ ಮಡಿ ಬಿಡಬೇಕಂತೆ ಹಿಂದಿನ ಮಡಿ ಎತ್ತಬೇಕಂತೆ. ಎರಡು ಪಂಜು ಹಿಡಿಬೇಕಂತೆ ಮೇಲ್ಕಟ್ಟು ಹೊಡಿಬೇಕಂತೆ. ನಾಲ್ಕು ಆಳು ಮಾಡುವ ಕೆಲಸವನ್ನು ನಾನು ಒಬ್ಬನೇ ಮಾಡಬೇಕಂತೆ ಮಾದೇವಿ. ಅದೂ ಅಲ್ಲದೇ ಅವರ ಶಿವಕಂತೆಯನ್ನು ಮಡಿ ಮಾಡಬೇಕಂತೆ ಮಾದೇವಿ. ಶಿವಕಂತೆಯಲ್ಲಿರುವ ಜೀವ ಜಂತಿನ ರಾಶಿ ಒಂದೂ ಕೂಡ ಸಾಯಬಾರದಂತೆ. ಕಲ್ಲಲ್ಲಿ ಒಗೆಯಂಗಿಲ್ಲವಂತೆ ನೀರಿನಲ್ಲಿ ಹಜ್ಜಂಗಿಲ್ಲವಂತೆ ಉಬ್ಬೆಯಲ್ಲಿ ಬೇಯಿಸಂಗಿಲ್ಲವಂತೆ. ಅದನ್ನ ಯಾವ ರೀತಿ ಮಡಿಮಾಡಬೇಕು ಎಂದು ಕೇಳಿದನು ಮಡಿವಾಳ ಮಾಚಯ್ಯ. ಅದಕ್ಕೆ ಹೇಳುವುದು ಗಂಡ ದಡ್ಡನಾದರೂ ಹೆಣ್ತಿಯಾದರೂ ಜಾಣೆಯಾಗಿರಬೇಕಂತೆ. ಹೆಣ್ತಿ ದಡ್ಡಿಯಾದರೂ ಕೂಡ ಗಂಡ ಬುದ್ಧಿವಂತನಾಗಿರಬೇಕು. ಜಾಣೆ ಮಲ್ಲಿಗೆ ಮಾದೇವಮ್ಮ ನೀವು ನನಗೆ ಬಲಗೈ ಭಾಸೆ ಕೊಟ್ಟೆ ನಾನು ಮಡಿಮಾಡುವುದನ್ನು ಹೇಳಿ ಕೊಡುತ್ತೀನಿ ಸ್ವಾಮಿ. ಮಾಚಯ್ಯನಿಗೆ ಗೊತ್ತಿಲ್ಲದೆ ಬಲಗೈ ಭಾಸೆ ಕೊಟ್ಟ. ಬಲಗೈ ಭಾಸೆಯನ್ನು ಕೊಟ್ಟ ಮಡುವಾಳ ಮಾಚಯ್ಯ ಕೆಟ್ಟ. ಸ್ವಾಮಿ ನನ್ನ ಮಾತಿಗೆ ಪ್ರತಿ ಉತ್ತರ ಕೊಡಬಾರದು. ನಾನು ಕಲ್ಯಾಣಿ ಕೊಳದಿಂದ ಸ್ನಾನ ಮಡಿ ಮಾಡ್ಕೊಂಡು ತಾಮ್ರದ ಬಿಂದಿಗೆಯಲ್ಲಿ ನೀರು ತರಬೇಕಾದರೆ ಮಡದಿ ಎಂಬ ಮಮಕಾರ ತಿಳ್ಕೋಬೇಡಿ. ಮುಂದಲೆ ಹಿಡ್ಕೊಂಡು ಮಂಡಿಮೇಲೆ ಮಡಿಕೊಂಡು ನನ್ನ ಕುತ್ತಿಗೆ ಕೂಧ್ಬಿಟ್ಟು ಸ್ವಾಮಿ. ನನ್ನ ರಕ್ತವನ್ನು ಆ ಪಾನಬಟ್ಲಿಗೆ ಬುಟ್ಕೊಳ್ಳಿ. ಆ ರಕ್ತದಲ್ಲಿ ಕಾವಿಬಟ್ಟೆಯನ್ನು ಹಜ್ಜಿಟ್ಟರೆ ಕಾವಿ ಮಡಿ ಆಗುತ್ತದೆ ಜೀವರಾಶಿ ಸಾಯೋದಿಲ್ಲ. ಬಲದಗೈಲಿ ಮಡಿಬಿಡಿ ಸ್ವಾಮಿ ಎಡದಗೈಯಲ್ಲಿ ಮಡಿ ಎತ್ಕೊಳ್ಳಿ ಸ್ವಾಮಿ. ಈರಣ್ಣ ಬೊಮ್ಮಣ್ಣ ಎಂಬ ಎರಡು ಪೆಂಜನ್ನ ನಿಮ್ಮ ಎಡದ ಭುಜಕ್ಕೂ ಬಲದ ಭೂಜಕ್ಕೂ ಕಟ್ಕೊಳ್ಳಿ. ಕೊಬ್ಬನ್ನು ತೆಗೆದು ಈರಣ್ಣ ಬೊಮ್ಮಣ್ಣ ಎಂಬ ಎರಡು ಪೆಂಜಿಗೆ ಬತ್ತಿ ಮಾಡ್ಕೊಳ್ಳಿ ಸ್ವಾಮಿ ಅದು ಹತ್ತಿಸಿದ ಮೇಲೆ ಕೆಡಲ್ಲ. ಮೇಲ್ಕಟ್ಟನ್ನ ನಿಮ್ಮ ಶಿರಸಕ್ಕೆ ಕಟ್ಕೊಳ್ಳಿ ನಾಲ್ಕು ಆಳು ಕೆಲಸವಾ ನೀವು ಒಬ್ಬರೆ ಮಾಡಿ.

ನನ್ನ ಕೈಯಲ್ಲಿ ಸತಿ ತಲೆಯ
ಕುಯ್ಯುವಂತ ವಿಧಿವಾಸ
ಕೊಟ್ಟೆಯಲ್ಲ ಸ್ವಾಮಿ
ಮಂಟೇದಾ . . . .
ಸಿದ್ದಯ್ಯ ಸ್ವಾಮಿ ಬನ್ನಿ . .

ಬಲಗೈ ಭಾಸೆ ಕೊಟ್ಟಿದ್ದಾನೆ ಪ್ರತಿ ಉತ್ತರ ಕೊಡುವುದಕ್ಕೆ ಆಗುವುದಿಲ್ಲ ಎಂದು ಮಡಿವಾಳ ಮಾಚಯ್ಯ ಚಿಂತೆ ಮಾಡುತ್ತಿದ್ದಾನೆ.

ತಾಳಿ ಕಟ್ಟಿದ ಈ ಕೈಯಲ್ಲಿ
ಮಡದಿಯ ಕುತ್ತಿಗೆ ಕುಯ್ಯುವ
ವಿಧಿವಾಸ ಕೊಟ್ಟೆಯಲ್ಲ ಗುರುವೇ
ಮಂಟೇದಲಿಂಗಯ್ಯ . . .. .
ಗುರುವೇ . . . .

ಗಂಡ ಹೆಡ್ತಿ ಆಡುತ್ತಿದ್ದ ಮಾತು ಆ ಧರೆಗೆದೊಡ್ಡವರಿಗೆ ಅರ್ಪಿತವಾಗಬುಡ್ತು. ಮಡುವಾಳ ಮಾಚಪ್ಪನಂತ ಶರಣ ಈ ಭೂಲೋಕದಲ್ಲಿ ಸಿಕ್ಕುವುದಿಲ್ಲ ನನಗೆ. ದೊಡ್ಡಮ್ಮತಾಯಿಗೆ ಮಠ ಮನೆ ಮಾಡಬೇಕಾದಾಗ ತನ್ನ ಮಗನನ್ನೇ ಕೂದು ಅಡಿಗೆ ಮಾಡಿದರು. ಈಗ ನಮ್ಮ ಶಿವಕಂತೆಯನ್ನು ಮಡಿಮಾಡಬೇಕು ಅಂತ ನಾನು ಹೇಳಿದಾಗ ತನ್ನ ಮಡದಿಯ ಕುತ್ತಿಗೆ ಕುಯ್ಯಕ್ಕೆ ರೆಡಿಯಾದನಲ್ಲ. ಶರಣ ಇರಲಿ ಸತ್ಯವನ್ನು ಪರೀಕ್ಷೆ ಮಾಡೋಣ ಅಂತ್ಹೇಳಿ ಮೌನವಾಗಿ ಸ್ವಾಮಿಯವರು ಕೂತಿದ್ದಾರೆ.

ಮಡುವಾಳ ಸಿದ್ದನಾಗಿ ಯಾವ ಟೈಮಿಗೆ ಎಂದು ಕೇಳದನಂತೆ. ಕಲ್ಲು ನೀರು ಕರಗುವಂತ ಟೈಮು ಗಂಗಾ ನದಿ ನಿದ್ರೆ ಮಾಡುವ ಟೈಮು. ನಿದ್ರೆ ದೇವತೆ ಯಾರನ್ನು ಬಿಟ್ಟವಳಲ್ಲ. ಹರಿತಕ್ಕಂತ ಗಂಗೆ ಹಿಂದಲ ಗಂಗೆ ಹಿಂದಕ್ಕೆ ಮುಂದಲ ಗಂಗೆ ಮುಂದಕ್ಕೆ ಕ್ಷಣ ಮಾತ್ರ ಕಣ್ಣು ಮುಚ್ಚಿ ಕಣ್ಣು ತೆರೆಯುವಷ್ಟರಲ್ಲಿ ಗಂಗಾ ನದಿಯೂ ಕೂಡ ನಿದ್ರೆ ಮಾಡುತ್ತಾಳೆ. ಕಲ್ಲು ನೀರು ಕರಗುವಂತ ಟೈಮು ಅಂತಾಂದ್ರೆ ಅದೇ ಕಲ್ಲುನೀರು ಕರಗುವ ಟೈಮು. ಆ ಟೈಮಿನಲ್ಲು ನರಮಾನವರು ಕೂಡ ಒಂದು ಕಿಂಚತ್ತು ಬೆಳೆಯುವಂತ ಕಾಲ.

ಮಾಚಪ್ಪನ ಮಡಿಯ ಮೇಲೆ
ನಮ್ಮ ಮಾಯ್ಕಾರ ದಯಮಾಡುತ್ತಾರೆ
ಸಿದ್ದಯ್ಯ ಸ್ವಾಮಿ ಬನ್ನಿ .. . .
ಕಂಡಾಯ ಹೊತ್ಕೊಂಡು . . . . .
ತಂಬೂರಿ ಹೊತ್ಕೊಂಡು .. . .
ರಾಜಬೊಪ್ಪಣಪುರವ ಪ್ರೇಮದಲ್ಲಿ ಬಿಟ್ಟವ್ರೆ
ಚಿಕ್ಕಳ್ಳಿಗ್ರಾಮ ಎಡಗಡೆಗೆ ಬಿಟ್ಕೊಂಡು
ಕೊಡಗಳ್ಳಿ ಊರೊಳಗೆ . . . . .
ನಮ್ಮ ಕಂಡಾಯದವರು ದಯಮಾಡುತ್ತಾರೆ
ಸಿದ್ದಯ್ಯ ಸ್ವಾಮಿ ಬನ್ನಿ . . . .
ಗುರುವೇ ತಲಕಾಡು ಮರಳುಗುಡ್ಡೆ
ನಮ್ಮ ದೇವರು ದಯಮಾಡುತ್ತಾರೆ
ಸಿದ್ದಯ್ಯ ಸ್ವಾಮಿ ಬನ್ನಿ . . . .
ಪರಂಜ್ಯೋತಿ ಲಿಂಗಯ್ಯ ನೀವೇ ಬನ್ನಿ

ತಲಕಾಡು ಮರಳುಗುಡ್ಡೆಗೆ ಬಂದರು ಸ್ವಾಮಿಯವರು. ಆ ಮರಳು ಗುಡ್ಡೆಯ ಮೇಲೆ ಕಾವಿ ಕಾಮಂಡಲ ರುದ್ರಾಕ್ಷಿ ಭದ್ರಾಕ್ಷಿ ಕಂಡಾಯ ತಂಬೂರಿ ಬಿರುದು ಬಿಂಕ ಲಾಂಛಾನವೆಲ್ಲ ಕಳೆದು ಮರಳು ಗುಡ್ಡೆ ಮೇಲೆ ಇಟ್ಟು. ಮಡುವಾಳ ನಾನು ಸ್ನಾನ ಮಡಿ ಮಾಡ್ಕೊಂಡು ಬರುವವರೆಗೆ ಹೂವು ಹೊಂಬಾಳೆಯಿಂದ ಕಂಡಾಯವನ್ನು ಚಿತ್ರಿಸಿ ಬಿಡು. ಸ್ವಾಮಿ ನನಗೆ ಮೋಕ್ಷ ಸಿಗಲಿ ನೀವು ಸ್ನಾನ ಮಡಿ ಆದ ಮೇಲೆ ನಿಮ್ಮ ಆತ್ಮಲಿಂಗವನ್ನು ತೆಗೆದು ಆತ್ಮಲಿಂಗವನ್ನು ಪೂಜೆ ಮಾಡುತ್ತಿರಲ್ಲ ಬುದ್ದಿ. ಆವಾಗ ಮಾಚಪ್ಪ ಎಂದು ಕೂಗ್ಬುಡಿ ಬುದ್ದಿ. ಶರಣ ಆತ್ಮಲಿಂಗವನ್ನು ನೋಡುವುದಕ್ಕೆ ಸಾಧ್ಯವಿಲ್ಲ ಎಂದರು. ಇಲ್ಲ ಬುಸ್ಸಿ ನೋಡಬೇಕು ಎಂದ್ರು. ನೋಡ್ಕೊಳ್ಳುವಂತ ಆಸಕ್ತಿ ಇದ್ದರೆ ನೋಡ್ಕೊಳ್ಳಪ್ಪ ಕೂಗುತ್ತೀನಿ ಎಂದರು ಧರೆಗೆದೊಡ್ಡವರು. ಆಲಕ್ರೀಡೆ ಆಡುತ್ತಿದ್ದಾರೆ ಜಡೆಸೂತ್ರಧಾರಿ ಜಡೆಲಿಂಗಪ್ಪನವರು. ಸಾವಿರ ಕುರುಜಡೆಯನ್ನ ಎಡಬಲ ಹರಡಿ ಸ್ವಾಮಿಯವರು ಸ್ನಾನ ಮಾಡುತ್ತಿದ್ದಾರೆ. ಈಕಡೆ ಮಡುವಾಳ ಮಾಚಪ್ಪ ಮಡದಿ ರಕ್ತದಲ್ಲಿ ಹಬ್ಬುಟ್ಟು ಮೇಲಕ್ಕೆತ್ತಿದ್ದಾಗ ಮುಳು ಮುಳು ಅಂತ ಮುಳುಗವಂತೆ ಅಲ್ಲಿರತಕ್ಕಂತ ಹೇನು. ಕೋರೆ ಮೊಟ್ಟೆ. ಒಂದಕ್ಕೊಂದು ಹೆಚ್ಕೊಂಡವಂತೆ. ಅದನ್ನು ಮರಖಗುಡ್ಡೆಯ ಮೇಲೆ ಹಾರಾಕಿದರಂತೆ. ಮಾಚಪ್ಪ ಭಾರಿಯ ಕಂಡಾಯಕ್ಕೆ ಹೂ ಹೊಂಬಾಳೆಯಲ್ಲಿ ಚಿತ್ರಿಸಿದ್ದಾನೆ. ಸ್ವಾಮಿಯವರು ತಮ್ಮ ಎದೆಯನ್ನು ಸೀಳಿ ತಮ್ಮ ಆತ್ಮಲಿಂಗವನ್ನು ಅಂಗೈಯಲ್ಲಿ ಇಟ್ಕೊಂಡು ಮಾಚಯ್ಯ ಅಂತ್ಹೇಳಿ ಕೂಗುದರು ಧರೆಗೆದೊಡ್ಡವರು. ಮುಂಗಾರು ಮಿಂಚಿನ ಹಾಗೆ ಫಲಾರನೇ ಹೊಡ್ದುಬಿಡ್ತಂತೆ. ಆಗ ಕಂಡಾಯದ ಮುಂದೆ ಮೂರ್ಛೆ ಹೋಗಿದ್ದಾನೆ. ಮಾಚಯ್ಯ ಬೆಳಕನ್ನು ಮಾತ್ರ ನೋಡಿದನಂತೆ ಆತ್ಮಲಿಂಗವನ್ನು ನೋಡಿಲ್ಲವಂತೆ. ಸ್ವಾಮಿ ಮಂತ್ರ ಗ್ಯಾನ ಶಿವ ಗ್ಯಾನ ತೀರಿಸ್ಕೊಂಡು ಆತ್ಮಲಿಂಗವನ್ನು ಆತ್ಮಕ್ಕೆ ಸೇರಿಸ್ಕೊಂಡು ಧರೆಗೆದೊಡ್ಡವರು. ಕಂಡಾಯದ ಮಾಮೂರ್ತಿ ಕಂಡಾಯದ ಬಳಿ ಬಂದರು. ಸ್ವಾಮಿ ಮಾಚಪ್ಪನ ಮೇಲೆ ಕಪ್ಪು ಧೂಳ್ತವನ್ನು ಪಿಡಿದರು ಉಸ್ಸೋ ಅಂತ ಎದ್ದು ಕುತ್ಕೊಂಡರಂತೆ. ಮಡಿಬಿಡು ಮಾಚಯ್ಯ ಹೋಗೋಣ ಅಂದಾಗ ಮಡಿವಾಳ ಮಡಿಬಿಟ್ಟಿದ್ದಾನೆ. ಆರು ಹೆಜ್ಜೆ ಮೂರು ಗೇಣು ಮಾಚಪ್ಪನ ಮಡಿ ಮೇಲೆ ಬಂದರು.

ಈಕಡೆ ತೆಂಕಲ ರಾಜ್ಯದಿಂದ ಬಡಗಲ ರಾಜ್ಯಕ್ಕೆ ಬರುತ್ತಿದ್ದಾರೆ ಕಲಿಪುರುಷ. ಮಾಡಿದ ಹೆಂಡ್ತಿಯನ್ನು ಕುದುರೆ ಮೇಲೆ ಕೂರಿಸ್ಕೊಂಡು ಜನ್ಮ ನೀಡಿದ ತಂದೆ ತಾಯಿಗಳನ್ನು ಕಾಲ್ನಡಿಗೆಯಲ್ಲಿ ನಡಸ್ಕೊಂಡು ಚಮ್ಮಾಲಿಗೆಯನ್ನು ತಾಯಿಯ ಕೈಯಲ್ಲಿ ಹೊರಸ್ಕೊಂಡು ಗಂಡ ಹೆಡ್ತಿ ಮಲಗುವಂತ ಹಾಸಿಗೆ ದಿಂಬನ್ನ ತಂದೆ ಕೈಯಲ್ಲಿ ಹೊರಸ್ಕೊಂಡು ತೆಂಕಲ ರಾಜ್ಯದಿಂದ ಬಡಲಗಲ ರಾಜ್ಯಕ್ಕೆ ಬರುತ್ತಿದ್ದಾನೆ ಕಲಿಪುರುಷ. ಕಲಿಪುರುಷ ಬರುತ್ತಿರುವುದು ನಮ್ಮ ಪರಂಜ್ಯೋತಿಯವರ ಪಾದಕ್ಕೆ ಅರ್ಪಿತವಾಗಿತ್ತು. ನಾಳೆ ಬರುವ ಕಲಿಯನ್ನು ಕಣ್ಣಿಂದ ನೋಡಬಾರದು ಕಣ್ಣಿಗೆ ಮರೆ ಆಗಬೇಕು. ಕಲಿಯನ್ನು ಕಂಡು ಗಕ್ಕನೇ ಕೂತ್ಕೊಂಡ್ರು. ಆಗ ಮಾಚಯ್ಯ ನನ್ನ ನಡೆಯಲ್ಲಿ ತಪ್ಪಾಯ್ತಾ ? ನನ್ನ ನುಡಿಯಲ್ಲಿ ತಪ್ಪಾಯ್ತಾ ? ನಿನ್ನಲ್ಲಿ ಏನೂ ತಪ್ಪಿಲ್ಲ. ಯಾವನೋ ತೆಂಕಲ ರಾಜ್ಯದಿಂದ

ಬಡಗಲ ರಾಜ್ಯಕ್ಕೆ ಬರುತ್ತಿದ್ದಾರೆ ಒಳ್ಳೆಯವರಾದರೆ ದಡದಾಟಿಸ್ಕೊಂಡು ಬಾಪ್ಪ. ಕೆಟ್ಟವರಾದರೆ ಅಲ್ಲೇ ಮನಗಸ್ಬುಡಪ್ಪ ಎಂದು ಮೂರು ಹಿಡಿ ಮರಳನ್ನ ಮಂತ್ರಿಸಿ ಕೊಟ್ಟಿದ್ದಾರೆ. ಮಾಚಪ್ಪ ದಡದಾಟಿ ಲೇ ಯಾರು ನೀನು ? ನಾನು ಕಾಣ್ಣೋ ಕಲಿಪುರುಷ. ಇವರು ಯಾರಪ್ಪ ? ನನ್ನ ಧರ್ಮಪತ್ನಿ. ಇವರು ಯಾರಪ್ಪ ? ನನಗೆ ಜನ್ಮ ಕೊಟ್ಟ ತಂದೆ ತಾಯಿಗಳು. ಮಾಡಿದ ಹೆಡ್ತಿಯನ್ನು ಕುದುರೆ ಮೇಲೆ ಕೂರಿಸ್ಕೊಂಡು. ತೆಂಕಲರಾಜ್ಯದಿಂದ ಬಡಗಲ ರಾಜ್ಯಕ್ಕೆ ಬರುತ್ತಿದ್ದಾರೆ. ಸ್ವಾಮಿಯವರು ಹೇಳಿದ್ದು ನಿಜ ಅಂತ್ಹೇಳಿ ಮಂತ್ರಿಸಿ ಕೊಟ್ಟು ಮೂರು ಹಿಡಿ ಮರುಳನ್ನು ಕಲಿ ಮೇಲೆ ಪಿಡಿದರಂತೆ. ಗಂಡ ಹೆಡ್ತಿ ಸಹಿತವಾಗಿ ಮುಳುಗೋದರಂತೆ. ತಂದೆ ತಾಯಿಗಳಿಬ್ಬರೂ ನನ್ನ ಮಗ ಒಳ್ಳೆಯವನೋ ಕೆಟ್ಟವನೋ ಯಾಕೆ ಸ್ವಾಮಿ ಮುಳುಗಿಸಿಬಿಟ್ಟೀರಿ. ನಮಗೆ ದಾರಿ ತೋರಿಸಿ ನೋಡಿ ತಲಕಾಡಿನಲ್ಲಿ ಮೂರುಲಿಂಗ ಇದೆ. ನೀವು ಎರಡು ಲಿಂಗವಾಗಿ ಒಡೆದು ಮೂಡ್ಕೊಳ್ಳಿ. ಐದು ಕಾರ್ತಿಕಾ ಐದು ಶ್ರಾವಣ ಹುಟ್ಟಿದಂತ ವರ್ಷ ಪಂಚಲಿಂಗದರ್ಶನ ಅಂತ್ಹೇಳಿ ಜಾತ್ರೆ ನಡೆಯಲಿ. ಆವಾಗ ನಿಮಗೂ ಕೂಡ ಪೂಜೆ ನಡೆಯಲಿಯಪ್ಪ ಅಂತ್ಹೇಳಿ ಸ್ವಾಮಿಯವರು ಆಶೀರ್ವಾದ ಮಾಡಿದರು. ಬುದ್ದಿ ಕಲಿ ಅಂತ ಹೇಳಿದ್ದರಲ್ಲ ಬುದ್ದಿ ಅದು ಏನು ಬುದ್ದಿ ಎಂದು ಕೇಳಿದ. ಮುಂದೆ ಬರತಕ್ಕಂತ ಕಲಿಯನ್ನು ಕಣ್ಣಾರೆ ನೋಡಕ್ಕೆ ಆಗಲ್ಲ. ಈಗ ಹೇಳಿದರೆ ನನ್ನ ಕಿವಿಯಾರೆ ಕೇಳ್ಕೋತ್ತೀನಿ ಎಂದ ಮಾಚಪ್ಪ.

ನಾಳೆ ಬರುತ್ತದೆ ಕಾಣ್ಣೋ . . .. .
ನರಮಾನವ ಕಲಿ . .. .
ಊರೇ ಕಾಡಾಗಬೇಕು
ಕಾಡೇ ಊರಾಗಬೇಕು .. . .
ಕಾಡಲ್ಲಿರುವ ಕರ್ಮ ಊರ ಸೇರಲ್ಬೇಕು
ಊರಲ್ಲಿರುವ ಕರ್ಮ ಕಾಡಲ್ಲಿ ಸೇರಲ್ಬೇಕು
ಊರುಗುಡಿ ಪಾಳಾದಂಗೆ .. . . . .
ಊರೇ ಪಾಳಾಗಬೇಕು .. . .
ಸಿದ್ದಯ್ಯ ಸ್ವಾಮಿ ಬನ್ನಿ
ಕಲಿಯುಗದೊಳಗೆ ಆ. . . . .
ಗುರುಲಿಂಗಯ್ಯ ದಯಮಾಡೋ . . .
ಅಟ್ಟ ಬೆಟ್ಟವ ಕಿತ್ತು ಹೊಲವ ಮಾಡಬೇಕು
ಹೊಟ್ಟೆಗಿಲ್ಲದೆ ಸಾಯಬೇಕು. . . . .. .
ಅನ್ನ ಉಂಟು ಕಂದ
ಆಳಿಲ್ಲ ಕಾಣ್ಣೋ
ಆಳುಂಟು ನಾಳೆ
ಅನ್ನ ಇಲ್ಲ ಕಾಣ್ಣೋ
ಚಿನ್ನ ತೂಗೋ ತಕ್ಕಡಿ ಒಳಗೆ

ತಿನ್ನೋ ಅನ್ನ ತೂಗಬೇಕು
ಸಿದ್ದಯ್ಯ ಸ್ವಾಮಿ ಬನ್ನಿ
ಕೀಳೆ ಮೇಲಾಗಬೇಕು
ಮೇಲೆ ಕೀಳಾಗಬೇಕು
ಹೆಣ್ಣುಂಟು ನಾಳೆ
ಗಂಡಿಲ್ಲ ಕಾಣೋ
ಒಬ್ಬ ಗಂಡನಿಗೆ ಏಳು ಜನ
ಹೆಂಡ್ತಿಯರು ಆಗಬೇಕು
ತನ್ನ ಗಂಡತನ ಗಂಡ ಅಂತ
ಕಿತ್ತಾಡಿ ಸಾಯ್ಬೇಕು
ಹೆಡ್ತಿ ಕಾಟ ತಡಿಯಲಾರದೆ
ಮಾಡ್ಕೊಂಡಿರುವ ಗಂಡ
ಊರು ಮುಂದೆ ಇರುವಂತ
ಹಡದಿಮರವ ಏರಬೇಕು
ಅಲ್ಲೂವೇ ತಡಿಲಾರದೇ
ಇಳಿ ಬೇಡ ಇಳಿಬೇಡ ಅಂತ
ಇಳಿಗಲ್ಲ ತಕ್ಕೊಂಡು .. . .
ಗಂಡನಿಗೆ ಹೊಡ್ದುಬಿಟ್ಟರೆ ..
ಗಂಡ ಸತ್ತ ಮೇಲೆ ಮುಂಡರಾಗಿ
ಬಾಳಬೇಕು .. . .
ಸಿದ್ದಯ್ಯ ಸ್ವಾಮಿ ಬನ್ನಿ . . .. .
ಗಂಡ ಸತ್ತಮುಂಡೇ ನಾಳೆ
ಗಂಡುಮಗನ ಹೆರಬೇಕು
ಸಿದ್ದಯ್ಯ ಸ್ವಾಮಿ ಬನ್ನಿ
ಆ ಮಗನನ್ನೇ ಕಂದ ಊರ ಮೇಲೆ
ಕೊಂಡಾಡಬೇಕು . . . .
ಸಿದ್ದಯ್ಯ ಸ್ವಾಮಿ ಬನ್ನಿ . . ..
ಮಡುವಾಲಿ . .. .
ಸಿದ್ದಯ್ಯ ದಯಮಾಡೋ .. . .
ಕೇಳಪ್ಪ ಕಂದ ಮಡುವಾಳ ಮಾಚಯ್ಯ
ನಾಳೆ ಅಣ್ಣನ ಮಾತು ಹಿಂದಾಗಬೇಕು
ಸೊಸೆಯ ಮಾತು ಮುಂದಾಗಬೇಕು
ಸಿದ್ದಯ್ಯ ಸ್ವಾಮಿ ಬನ್ನಿ .. . . . .

ನಾಳೆ ಅತ್ತೆಗೆ ನೋಡು ಅರಕಲು ಚಾಪೆ
ಸೊಸೆಗೆ ನೋಡು ಮುಕ್ಕಾಲು ಮಂಚ
ಸಿದ್ದಯ್ಯ ಸ್ವಾಮಿ ಬನ್ನಿ
ನಾಳೆ ಅಪ್ಪನ ಮಾತು ಹಿಂದಾಗಬೇಕು
ಮಗನ ಮಾತು ಮುಂದಾಗಬೇಕು
ಸಿದ್ದಯ್ಯ ಸ್ವಾಮಿ ಬನ್ನಿ . . . . ..
ನಾಳೆ ಮಗ ಮಾಡಿದ ಸಾಲಕ್ಕೆ
ಅಪ್ಪ ಋಜು ಹಾಕ ಬೇಕು
ಸಿದ್ದಯ್ಯ ಸ್ವಾಮಿ ಬನ್ನಿ .. . .
ನಾಳೆ ಬರುತ್ತಿದೆ ಕಾಣೊ
ನರಮಾನವರ ಕಲಿ. . . . . . .
ಶಾಸ್ತ್ರಗಳೆಲ್ಲ ದೇಶಾಂತರ ಹೋಗಬೇಕು
ಗುಡ್ಡ ಗುಡ್ಡಗಳೆಲ್ಲ ಗುದ್ದಾಡಿ ಸಾಯ್ಬೇಕು
ಜೋಗ್ ಜೋಗ್‌ಗಳೆಲ್ಲ ಜೋಗುಳವ ಆಡಬೇಕು
ಮಠದಲ್ಲಿರುವ ಸ್ವಾಮ್ಗೊಳಿಗೆ ಇಬ್ಬರಿಬ್ಬರ್ಹೆಡ್ತಿಯರು
ಆಗಬೇಕು . . . .
ಸಿದ್ದಯ್ಯ ಸ್ವಾಮಿ ಬನ್ನಿ ....
ಅಣ್ಣನ ಹೆಡ್ತಿಯ ಚಂದ ನೋಡಿ
ತಮ್ಮ ಕಣ್ಣಿಡಬೇಕು
ತಮ್ಮನ ಹೆಡ್ತಿಯ ಚಂದ ನೋಡಿ
ಅಣ್ಣ ಕಣ್ಣಿಡಬೇಕು
ತಾನು ತಂದ ಸೋಸೆಯ ಮಾವನೇ
ಕಟ್ಟಾಳ ಬೇಕು
ಸಿದ್ದಯ್ಯ ಸ್ವಾಮಿ ಬನ್ನಿ . . . . ..
ಅರಮನೆ ಅರಮನೆಯಲ್ಲ ಬರಮನೆ
ಆಗಬೇಕು ನಾಳೆ ಕಲಿಯುಗದಲ್ಲಿ
ಮೀಸೆ ಇಲ್ಲದ ರಾಣಿ ದೇಶವ ಆಳಬೇಕು
ಷೇರು ಪಾವು ಮರೆಯಾಗಬೇಕು
ಕೆ.ಜಿ. ಬೊಟ್ಟು ಬರಬೇಕು
ಸಿದ್ದಯ್ಯ ಸ್ವಾಮಿ ಬನ್ನಿ
ಏಳು ವರ್ಷದ ಹುಡುಗಿ
ಋಷ್ಯಾಂತಿ ಆಗಬೇಕು
ಈ ಮುಂದೆ ಬರುವ ಕಲಿಯ

ನಾ ಕಣ್ಣಾರೆ ನೋಡಲಾರೆ
ಸಿದ್ದಯ್ಯ ಸ್ವಾಮಿ ಬನ್ನಿ
ಮಂಟೇದಾ . . . .
ಗುರುಲಿಂಗಯ್ಯ ದಯಮಾಡೋ
ಅದೂವಲ್ಲದೆ ಕಾಣೋ . .. . .
ರವಿಕೆ ಸೀರೆಯಲ್ಲಿ ಮೈ ಕಾಣಬೇಕು
ರವಿಕೆ ಸೀರೆ ಹೋಗಿ
ಜಿನ್ಸ್ ಪ್ಯಾಂಟು ಟೀ ಶರ್ಟ್ ಬರಬೇಕು
ಕೆರೆಯ ನೀರಿಗೆ ಹೋದವರು
ಕಿತ್ತಾಡಿ ಸಾಯ್ಬೇಕು
ಹೊಳೆ ನೀರಿಗೆ ಹೋದವರು
ಹೊಡದಾಡಿ ಸಾಯ್ಬೇಕು
ಬಾವಿ ನೀರಿಗೆ ಹೋದವರು
ಬಡದಾಡಿ ಸಾಯ್ಬೇಕು
ಮುಂದೆ ಬರುವ ಕಲಿಯ ನಾ
ಕಣ್ಣಾರೆ ನೋಡಲಾರೆ
ಸಿದ್ದಯ್ಯ ಸ್ವಾಮಿ ಬನ್ನಿ

ಗುರುಗಳು ಆಡಿದ ಮಾತನ್ನು ಕೇಳವ್ನೆ ಮಾಚಪ್ಪ. ಬುದ್ದಿ ಈ ಕಲಿಪ್ರಮಾಣ ತಿರುಗಬೇಕಾದರೆ ಯಾವಾಗ ಎಂದು ಕೇಳಿದನು ಮಾಚಯ್ಯ. ಕಲ್ಲು ಬಸವ ಎದ್ದು ಗಟುರೆ ಹೊಡೆಯಬೇಕು ಪಟ್ಟರಂಗಸ್ವಾಮಿ ಬಲಮೊಗ್ಗಲಾಗಿ ಎದ್ದು ಕೂರಬೇಕು.

ಮಾಚಯ್ಯನಿಗೆ ಕಲಿಪ್ರಮಾಣವನ್ನು ಸಾರಿ ತಲಕಾಡು ಕಡುವನ್ನು ಬಿಡಬೇಕಾದರೆ "ತಲಕಾಡು ಕಡುವಾಗಲಪ್ಪ ಮಾಲಂಗಿ ಮಡುವಾಗಲಪ್ಪ" ನಾನು ನೀನು ನಿಂತಿರುವಂತ ಸ್ಥಳ ಕರಿಬಸವನ ಕಟ್ಟೆ ಅಂತ ನಾಮಕರಣವಾಗಲಪ್ಪ. ಆ ಕಲಿಮಾನವನು ಕೂಡ ಆ ಕಲ್ಲೂರು ತೋಪಿನಲ್ಲಿ ಒಂದು ಜಾತ್ರೆ ನಡೆದು ಪೂಜೆ ಆಗಲಪ್ಪ ಎಂದು ಹೇಳಿ ಸ್ವಾಮಿಯವರು

ತಲಕಾಡು ಬಿಟ್ಟು ರಾಜಬೊಪ್ಪಣಪುರಕ್ಕೆ
ದಯಮಾಡಿದರಂತೆ ಪರಂಜ್ಯೋತಿ ..
ಗುರುವೇ . .. . .ಆಹಾ . .. .
ಶಂಕರಾ . . . .

ದೊಡ್ಡಮ್ಮತಾಯಿಗೆ ಮಠಮನೆ ಮಾಡಬೇಕಾದರೆ ತನ್ನ ಮಗನನ್ನೇ ಕೂದು ಕಂಡಾಯಕ್ಕೆ ಎಡೆಮಾಡಿದ ಈಗ ನಮ್ಮ ಶಿವಕಂತೆ ಮಡಿಮಾಡಬೇಕಾದರೆ ತನ್ನ

ಮಡದಿಯನ್ನೇ ಕೂದು ಶಿವಕಂತೆ ಮಾಡಿದ್ದೀ. ಮಾಚಪ್ಪ ನಿನ್ನಂತ ಶರಣ ಜಗತ್ತಿನಲ್ಲಿ ಇಲ್ಲ ಕಾಣೋ ಅಂತ್ಹೇಳಿ ಸ್ವಾಮಿಯವರು ಮಲ್ಲಿಗೆ ಮಾದೇವಿಯನ್ನು ಪಡ್ಕೊಟ್ಟಿದ್ದಾರೆ. ಸುಖವಾಗಿ ಕಾಲವನ್ನು ಕಳೆಯಿರಿ ಹೋಗಿರಪ್ಪ ಎಂದು ಹರ್ಷಿ ಕಳುಹಿಸಿ. ಈಕಡೆ ದೊಡ್ಡಮ್ಮತಾಯಿಯನ್ನು ಕರೆದು ಎಳೆಕುಂದೂರು ಬೆಟ್ಟದಲ್ಲಿ ಕೂಡಿರುವಂತ ಮಗನನ್ನು ಬರಮಾಡು ತಾಯಿ. ಗುಡ್ಡನ್ನ ಬಿಟ್ಟು ಗುರುಮನಿ ಕಟ್ಟಿ ಅವರ ಜಾತಿ ಅವರ ಮತ ಹಲಗೂರು ಚಿಲ್ಲಾಪುರಕ್ಕೆ ಕಳುಹಿಸಿ ಕಬ್ಬಿಣ ಭಿಕ್ಷೆ ತರಿಸಿ ಬೊಪ್ಪಣಪುರದಲ್ಲಿ ಮಠಮನೆ ಕಟ್ಕೊಂಡು ನಾವು ಪಾತಾಳ ಲೋಕಕ್ಕೆ ಮರೆಯಾಗಬೇಕು ಎಂದರು ಸ್ವಾಮಿಯವರು. ಕಡೇ ಬಾಗಿಲಿನಲ್ಲಿ ಕುರುಬರ ಮನೆಯ ಕರೀ ಕಂಬಳಿಯನ್ನು ಹಾಸಿ ತಾಯಿ. ಕಡ್ಡಿಕರ್ಪೂರ ಧೂಪ ಸಾಂಬ್ರಾಣಿಗಳನ್ನು ಹಾಕಿ ತಾಯಿ ದೊಡ್ಡಮ್ಮ ಎಳೆಕುಂದೂರು ಬೆಟ್ಟದಲ್ಲಿ ಕೂಡಿರುವಂತ ಮಗ ಕೆಂಪಾಚಾರಿಯನ್ನು ಕೂಗುತ್ತಿದ್ದಾರೆ.

ಧರೆಯದೊಡ್ಡವರ ಮಗನೇ ಬಾಪ್ಪ
ದಳವಾಯಿ ಅರಸು ಬಾರೋ
ಸಿದ್ದಯ್ಯ ಸ್ವಾಮಿ ಬನ್ನಿ
ಹಿರಿ ಚೆನ್ನಾಜಮ್ಮನ ಪುತ್ರ ಎದ್ದು ಬಾರೋ
ರೇಚಪ್ಪಾಜಿಯ ಪುತ್ರ ಎದ್ದು ಬಾರೋ
ಸಿದ್ದಯ್ಯ ಸ್ವಾಮಿ ಬನ್ನಿ

ಕೆಂಪಾಚಾರಿಗೆ ಈ ದೊಡ್ಡಮ್ಮತಾಯಿ ಕೂಗಿದ ಕೂಗು ಕೇಳಿಸಿಲ್ಲ. ಹಾವಿನ ಹಾಸಿಗೆ ಚೇಳಿನ ತಲೆದಿಂಬು ಕಚ್ಚಚ್ಚಿದ ಚೇಳುಗಳನ್ನು ಕಿತ್ಕಿತ್ತು ಬೀಸಾಕಿ ಕೆಂಪಾಚಾರಿ. ಎಡಕ್ಕೆ ಉರುಳಿದರೆ ಹಾವಿನ ಬಂಧಾನ. ಬಲಕ್ಕೆ ಉರುಳಿದರೆ ಚೇಳಿನ ಬಂಧಾನದಲ್ಲಿದ್ದಾನೆ ಬಂಗಾರದ ಗೊಂಬೆ ಭಾಗ್ಯವುಳ್ಳ ಕೆಂಪಣ್ಣ. ದೊಡ್ಡಮ್ಮತಾಯಿ ಓಡೋಡಿ ಬಂದು ಅಣ್ಣಯ್ಯ ಮಗ ಬದುಕಿದ್ದರೆ ಓಡೋಡಿ ಬರುತ್ತಿದ್ದ. ಮಗ ಎಳೆಕುಂದೂರು ಬೆಟ್ಟದಲ್ಲಿ ಸತ್ತೋಗಿದ್ದಾನೆ ಅಣ್ಣಯ್ಯ. ದೊಡ್ಡಮ್ಮ ಅವನು ಯಾರು ಎಂಬ ಮಹಿಮೆ ನಿನಗೆ ಇನ್ನೂ ಮುನ್ನೂ ತಿಳಿಯದು ತಾಯಿ. "ಆಚಾರಿ ಮಗ ಆಯುಷ್ಯದಲ್ಲಿ ಪ್ರವೀಣ" ಅವನು ಸಾಯೋದಿಲ್ಲ ಎಂದು ಕಪ್ಪುಧೂಳ್ತವನ್ನು ತೆಗೆದು ಎಳೆಯಕುಂದೂರುಬೆಟ್ಟದ ಮೇಲೆ ಹಿಡಿದರು ಸ್ವಾಮಿ. ಭಾರೀ ಗುಂಡನ್ನು ಕಾಳಿಂಗನ ಗವಿಗೆ ಚಾಚಿದರಲ್ಲ ಗುಂಡಲ್ಲಿ ಸೂಚಿಗಾತ್ರದ ಸೂರ್ಯನ ಬೆಳಕು ಮಗನಿಗೆ ಕಾಣ್ತಂತೆ. ಹದಿನಾಲ್ಕು ನೀಲಿ ಬಂದ್ಬುಟ್ತು ಕೆಂಪಾಚಾರಿಗೆ. ಆಗ ತನ್ನ ಮೊನಗಾಲಿನಿಂದ ಭಾರೀ ಗುಂಡಿಗೆ ಜಾಡಿಸಿ ಒದ್ಬಿಟ್ಟರಂತೆ. ಕೆಂಪಾಚಾರಿ ಒದ್ದಂತಹ ಗುಂಡು ಆಕಾಶದ ಮಾರ್ಗವಾಗಿ ಹಾರ್ಕೊಂಡು ಬಂದು ಬೊಪ್ಪಣಪುರದ ಮಠದ ಮುಂಭಾಗದಲ್ಲಿ ಬುಗುರಿ ತಿರುಗದಾಗೆ ತಿರುಗುತ್ತಿತ್ತಂತೆ. ಅಣ್ಣಯ್ಯ ಯಾವೂದೇ ಭಾರೀಯ ಗುಂಡು ಮಠದ ಮುಂಭಾಗದಲ್ಲಿ ಬುಗುರಿ ಹಾಗೆ ತಿರುಗುತ್ತಾ ಇದೆ. ಕೆಂಪಾಚಾರಿ ಸತ್ತೋದ ಅಂತ್ಹೇಳಿದೆ ತಾಯಿ ಆ ಗುಂಡು ಅವನು ಕಳುಹಿದ್ದು. ಇದು ನಾವು ಪಾತಾಳಲೋಕಕ್ಕೆ ಮರೆಯಾಗುವಾಗ ನಮ್ಮ ಬಾಗಿಲಿಗೆ

ಮರೆಯಾಗಬೇಕು. ಆ ಭಾರೀ ಗುಂಡಿಗೆ ಮಂಗಳಾರತಿ ಮಾಡು ಎಂದರು ಧರೆಗೆದೊಡ್ಡವರು. ಕುಣ್ಣಿಚೆಂಬಲ್ಲಿ ಪಣ್ಣೀರನ್ನು ತಂದು ಭಾರೀ ಗುಂಡನ್ನು ಚನ್ನಾಗಿ ತೊಳೆದು ಕಡ್ಡಿ ಕರ್ಪೂರಗಳನ್ನು ಹಚ್ಚಿ ಸಾಂಬ್ರಾಣಿ ಧೂಪಗಳನ್ನು ಹಾಕಿ ಮಂಗಳಾರತಿ ಬೆಳಗಿದ್ದಾರೆ. ಈಕಡೆ ಕಂದ ಕೆಂಪಾಚಾರಿ ಏಳು ಹನ್ನೆರಡು ವರ್ಷದ ಕೆಂಪಾಚಾರಿ

ಪಾಳ್ಯೆಗಾರನ ಮಗನ ತಂದು
ಪರದೇಸಿಯ ಮಾಡಿ . . .
ತಾಯಿ ಮರೆಸಿ ತಂದೆ ಮರೆಸಿ
ಬಂಧು ಮರೆಸಿ ಬಳಗನೆಲ್ಲ ಮರೆಸಿ
ಯಾರು ಇಲ್ಲದಂತಹ ಪರದೇಸಿಯ
ಮಾಡಿ ಎಳೆಕುಂದೂರು ಬೆಟ್ಟದ
ಕಾಳಿಂಗನ ಗವಿಗೆ ಕೂಡಿ
ಮರೆತು ಕೂತಿದ್ದೆಯಲ್ಲ ಸ್ವಾಮಿ
ಧರೆಗೆದೊಡ್ಡವರು . .. .
ಸಿದ್ದಯ್ಯ ಸ್ವಾಮಿ ಬನ್ನಿ

ಹುಟ್ಟುಡುಗೆಯಲ್ಲಿ ಕೆಂಪಾಚಾರಿ ಹೇಳುತ್ತಿದ್ದಾನೆ ನಾನು ಬದುಕಿದ ಬಾಳಾಟ ಎಂತಂಥದ್ದು ಈಗಿನ ಬಾಳಾಟ ಎಂತಂಥದ್ದು "ವಿಷವನ್ನಾದರೂ ಕುಡಿಯಬಹುದು ಈ ಋಷಿ ಮುನಿಗಳ ತಂಟೆ ತರವಲ್ಲ ಸ್ವಾಮಿ" ಅಂತ್ಹೇಳಿ ಕೆಂಪಾಚಾರಿ ಉಗಣಿಸೊಪ್ಪು ಕಿತ್ತು ಉಡುಗೆ ಉಟ್ಕೊಂಡು ಹಾವು ಚೇಳಿನ ಹೊರೆಯನ್ನು ತಲೆಯ ಮೇಲೆ ಹೊತ್ಕೊಂಡು

ಗುಂಡು ಬಂದ ಜಗದಲ್ಲಿ
ಬತ್ತಾವ್ನಲ್ಲೋ ಕೆಂಪಾಚಾರಿ
ಸಿದ್ದಯ್ಯ ಸ್ವಾಮಿ ಬನ್ನಿ

ಕೆಂಪಾಚಾರಿ ಬರುತ್ತಿರುವುದು ನಮ್ಮ ಸ್ವಾಮಿಯವರಿಗೆ ಅರ್ಪಿತವಾಯ್ತು. ಹುಚ್ಚು ಮಗ ಬರುತ್ತಾವ್ನೆ ತಾಯಿ ಹಚ್ಚುಡು ಬಾಗಿಲ ಕದವ. ಧರೆಗೆದೊಡ್ಡವರು ಆಡಿದ ಮಾತ ಕಳೆಯಕ್ಕಿಲ್ಲ ಉಳಿಯಕ್ಕಿಲ್ಲ. ಬಡಬಾಗಿಲ ಕದವನ್ನು ಹಚ್ಚುಟ್ಟರಂತೆ. ಆಗ ಕೆಂಪಾಚಾರಿ ಕೆರೆ ಏರಿಯ ಮೇಲೆ ಹಾವು ಚೇಳಿನ ಹೊರೆ ಇಟ್ಟುಟ್ಟು. ಬಡಬಾಗಿಲಿನಲ್ಲಿ ನಿಂತ್ಕೊಂಡು ಸ್ವಾಮಿ ಪರಂಜ್ಯೋತಿ ಮಂಟೇದಲಿಂಗಯ್ಯ ಮರೆತು ಏನು ಕೂತಿದ್ದೀಯ ಎಂದು ಕೂಗಿದರು ಕೂಡ ಮಾತಾಡನಿಲ್ಲ. ಕೆಂಪಾಚಾರಿಗೆ ಹತ್ಬುಡ್ತು ಕೋಪ.

ಆನಂದದ ನೀಲಿ
ಅವತಾರದ ನೀಲಿ
ಎಕ್ಕದಾಲಿ ನೀಲಿ
ಕರಳಿ ಹಾಲಿ ನೀಲಿ

ಮರ ಹತ್ತೋ ನೀಲಿ
ಮಣ್ಣು ಮುಕ್ಕೋ ನೀಲಿ
ಕಲ್ಲು ಕಡಿಯೋ ನೀಲಿ
ನೀಲಿ ಬಂದ ಗ್ಯಾನದಲ್ಲಿ

ಕೆಂಪಾಚಾರಿ ..... ಮೊನಗಾಲ ಎತ್ತಿ ಆ ಮಠದ ಬಾಗಿಲು ಕದವನ್ನು ಒದ್ದ ತಕ್ಷಣವೇ ಎರಡು ಪಂಗಡೆ (ಪಕಡಿ) ಆಗೋಯ್ತು. ಈಗಲೂ ಕೂಡ ಆ ಬಡಗಲ ಬಾಗಿಲನ್ನ ಹಚ್ಚಲ್ಲವಂತೆ. ಕೆಂಪಾಚಾರಿ ಗುರುವಿನ ಪಾದವನ್ನು ಹಿಡ್ಕೊಂಡು

ತಂದೆ ನೀನೇ ತಾಯಿ ನೀನೇ
ಬಂಧು ಬಳಗವೂ ಎಲ್ಲ ನೀನೇ
ಪರಂಜ್ಯೋತಿ ಮಂಟೇದಲಿಂಗಯ್ಯ

ದುರ್ಬುದ್ಧಿ ಹಾಳಾಗಿ ಗುರುಬುದ್ಧಿ ಉಂಟಾಗಿದೆ. ತಾಯಿ ಕೆರೆಯಲ್ಲಿ ಸ್ನಾನ ಮಾಡಿಸವ್ವ. ಹಡಪ್ಪದ ಹಂಪಣ್ಣನತ್ತಿರ ಮಂಡೆ ಚೌರ ಮಾಡಸ್ಕೊಂಡು ಬಂದುಬಿಡಿ. ಮಗನಿಗೆ ಗುಡ್ಡ ಬಿಟ್ಟು ಗುರುಮನಿ ಕಟ್ಬೇಕು ಜಲ್ಮ ಶುದ್ಧವಾಗಬೇಕೆಂದು ತಾಯಿ ಮಗನಿಗೆ ಗೋಮಂತ್ರ ಗೋರಂಜವನ್ನು ಕುಡಿಸಿ ಮಗನ ಜಲ್ಮ ಶುದ್ಧ ಮಾಡ್ಕೊಂಡು ಹೊಸ ಬಟ್ಟೆ ಹೊಸ ಉಡುದಾರ ಸಹಿತವಾಗಿ ಕರ್ಕೊಂಡು ಬಂದ್ಬಿಡಿ ಮಗನನ್ನು ಗುರುಮನಿ ಕಟ್ಟಿ ಗುಡ್ಡನಬಿಡಬೇಕು ಎಂದರು. ಆಗ ಎಲ್ಲ ಶರಣರು ಕೂಡ ಇಲ್ಲಿ ಇರಬೇಕು.

ನೀಲಗಾರನಾಗಿ ದೀಕ್ಷೆ ಪಡೆಯುವುದು – ೧೬

ಅಕ್ಕಯ್ಯ ಚಿಕ್ಕಯ್ಯ ಶರಣ
ಒಕ್ಕಲಿಗರ ಪುಟ್ಟಯ್ಯ ಶರಣ
ಹೊಂಗೆ ದಾಸಯ್ಯ ಶರಣ
ಬೇಡರ ಚೌಡಯ್ಯ ಶರಣ
ಮಡುವಾಳ ಮಾಚಯ್ಯ
ಒಬ್ಬ ಘನ ಶರಣ .. . .
ಸುವ್ವಾ ಬಾ ಚೆನ್ನಾ . ..
ಹೊಲಾರ ಹೊನ್ನಯ್ಯ ಶರಣ
ಮಾದಿಗರ ಚೆನ್ನಯ್ಯ ಶರಣ
ಶಂಕರಾ ದೇವಾ ಆ. . . .
ಬಸವ ತಂದೆ ಆ .. . . ..

ಎಲ್ಲ ಶಿವಶರಣರನ್ನು ಬರಮಾಡಿ ತಾಯಿದೊಡ್ಡಮ್ಮ ಕೆರೆ ಒಳಗೆ ಸ್ನಾನ ಮಾಡ್ಕೊಂಡು ಹೊಸಬಟ್ಟೆ ಹೊಸುಡುದಾರ ಸಹಿತವಾಗಿಯೂ ಜಲ್ಮ ಶುದ್ಧವಾಗಲೆಂದು ಗೋಮೂತ್ರ ಕುಡಿಸಿ ತಾಯಿ ಹಾಲುಮತದವರ ಹಟ್ಟಿ ಕುರುಬೇಗೌಡರ ಮನೆಗೆ ಕರ್‍ಕೊಂಡು ಬಂದರಂತೆ. ಆಗ ಮಗನನ್ನು ಕೂರಿಸಿ ಸ್ವಾಮಿ ಮಂತ್ರೋಪದೇಶವನ್ನು ಮಾಡಿ ಗುರುಗಳು ಗುಡ್ಡನ ಬಿಟ್ಟು ಗುರುಮನಿ ಕಟ್ಟುತ್ತಿದ್ದಾರೆ.

ಬಸವಣ್ಣನವರ ಹೆಸರೇಳಿ . ..
ನಿನಗೆ ಭಸ್ಮಂಗ ಧರಿಸುತ್ತೀನಿ .
ಶರಣಾರ್ಥಿ ಎನ್ನು ಮಗನೇ
ಸಿದ್ಧಯ್ಯ ಸ್ವಾಮಿ ಬನ್ನಿ
ಬಸವಣ್ಣನವರ ಹೆಸರೇಳಿ
ಭಸ್ಮಂಗ ಧರಿಸುತ್ತೀವಿ
ಶರಣಾರ್ಥಿ ಗುರುದೇವ
ರೇಚಪ್ಪಾಜಿಯ ಹೆಸರೇಳಿ
ಮಟ್ಟಿಕಪ್ಪು ಇಕ್ಕುವಾಗ
ಶರಣಾರ್ಥಿ ಎನ್ನು ಮಗನೆ
ಸಿದ್ಧಯ್ಯ ಸ್ವಾಮಿ ಬನ್ನಿ
ಕೇಳಪ್ಪ ನನ್ನ ಕಂದ . . . .
ಗುರುಮನೆ ಹೆಸರೇಳಿ .. .
ಗುರುಕಂಕಣ ಕಟ್ಟುತ್ತೀವಿ
ಶರಣಾರ್ಥಿ ಎನ್ನಪ್ಪ .. .
ಶರಣಾರ್ಥಿ ಗುರುದೇವ
ಗುರುಕಂಕಣ ಒಂದೇ ಸಾಕು
ನರಕಂಕಣ ಬೇಡಕಾಪ್ಪ
ಸಿದ್ಧಯ್ಯ ಸ್ವಾಮಿ ಬನ್ನಿ

ಕಂದ ಗುರುಕಂಕಣ ಒಂದೇ ಸಾಕು ನರಕಂಕಣ ಬೇಡ ಕಾಣಪ್ಪ ಎಂದರು ಸ್ವಾಮಿ ಧರೆಗೆದೊಡ್ಡವರು. ಕಂಡಾಯ ತಂಬೂರಿ ಈ ಎಲ್ಲ ಬಿರುದು ಬಿಂಕು ಲಾಂಛಾನಗಳನ್ನು ಧರಸಿದಾಗ ಸಿದ್ಧಪ್ಪಾಜಿಯ ಕಣ್ಣಲ್ಲಿ ಧಾರಾವತಿಯಾಗಿ ಕಣ್ಣೀರು ಚೊಟ್ಟ ಚೊಟ್ಟನೇ ಚೊಟ್ಟವಂತೆ.

ಪಾಳೆಯಗಾರನ ಮಗನ ತಂದು
ಪರದೇಸಿಯ ಮಾಡಿ . . . . .
ಲಕ್ಷಿಕನ ಮಗನ ತಂದು ಇವತ್ತು
ಮನೆ ಮನೆ ಭಿಕ್ಷುಕನ ಮಾಡಿದೆ
ಗುರುವೇ . . ಮಂಟೇದಲಿಂಗಯ್ಯ

ಒಳಗಿನ ಮರ್ಮ ಎಷ್ಟು ಅಂತ
ಹೇಳಲಪ್ಪ .. ..
ಸಿದ್ದಯ್ಯ ಸ್ವಾಮಿ ಬನ್ನಿ . . ..

ಗುರುದೇವ ಇವತ್ತು ನನಗೆ ಭಿಕ್ಷುಕನಾಗಿ ಮಾಡಿದೆ ಎಂದು ಹೇಳಿದ ತಕ್ಷಣವೇ ಧರೆಗೆದೊಡ್ಡವರಿಗೆ ಹತ್ತುಬ್ಬುತ್ತು ಕೋಪ. ಸಿದ್ದು ಇವರ ತಂದೆ ತಾಯಿಗಳು ಕಟ್ಟಿದಂತಹ ಹೆಸರು ಇಂದಿಗೆ ಹಾಳಾಗಲಪ್ಪ. ಸಿದ್ದಪ್ಪಾಜಿ ಅಂತ ನಾಮಕರಣ ಆಗಲಪ್ಪ ಎಂದು ನಾಮಕರಣ ಮಾಡಿದರು ಸ್ವಾಮಿಯವರು. ಭಿಕ್ಷುಕನು ಎಂಬುದು ನಿಮ್ಮ ಬಾಯಲ್ಲಿ ಬರಬಾರದು ಕಂದ. ಅಪ್ಪ ನನ್ನ ತಂದೆ ತಾಯಿಗಳು ಕಟ್ಟಿದ ಹೆಸರು ಹಾಳುಮಾಡಿದ್ದೀರಿ. ಹೌದು ಕಾಣೋ ನಾನು ಕಟ್ಟಿದ ಹೆಸರು ಸ್ಥಿರವಾಗಲಿ. ಅರಮನೆಯಲ್ಲಿರುವ ಐಶ್ವರ್ಯ ಬರಿದಾಗುತ್ತದೆ. ಸಿರಿ ಬರಿದಾಗುತ್ತದೆ. ಆದರೆ ಗುರು ಕೊಟ್ಟಂತ ಗುರು ಜೋಳಿಗೆ ಮುತ್ತಿನ ಜೋಳಿಗೆ ಮಾತ್ರ ಯಾವತ್ತೂ ಬರಿದಾಗಲ್ಲ ಕಾಣೋ. ಸೋಮವಾರ ಶುಕ್ರವಾರ ಮುತ್ತಿನ ಜೋಳಿಗೆಯನ್ನು ತೆಗೆದುಕೊಂಡು ಭಿಕ್ಷೆಗೆ ಹೊರಟ್ಬಿಟ್ಟರೆ ಒಂದು ಮನೆಯಲ್ಲಿ ಮುಂದಕ್ಕೆ ಹೋಗು ಎಂದರೆ ಒಂಬತ್ತು ಮನೆಯಲ್ಲಿ ನಿನ್ನ ಕರೆದು ಭಿಕ್ಷೆ ಕೊಡುತ್ತಾರೆ ಕಾಣೋ. ಅರಮನೆ ಬರಿದಾದರೂ ನಮ್ಮ ಗುರುಮನೆ ಬರಿದಾಗಲ್ಲ ಕಾಣೋ. ಭಿಕ್ಷುಕ ಎಂಬ ಮಾತು ನಿನ್ನ ಬಾಯೊಳಗೆ ಬರಬಾರದು ಕಾಣೋ. ಕಂದ ಗುಡ್ಡನ ಬಿಟ್ಟು ಗುರುಮನಿ ಕಟ್ಕೊಂಡ ಮೇಲೆ ಇಂದಿನಿಂದ ಗುರುಮಗ. ಬೋದವರನ್ನು ಬಾಯೆತ್ತು ಬೋಯ್ಬೇಡ ಕಾಣೋ. ಇಸ್ಪೇಟು ಆಡುತ್ತೀಯಾ ? ಇಲ್ಲ. ಜೂಜು ಆಡುತ್ತೀಯಾ ? ಇಲ್ಲ. ಹೆಂಡ ಕುಡಿಯುತ್ತೀಯಾ ? ಇಲ್ಲ. ತಂದೆ ತಾಯಿಗಳಿಗೆ ಊಟ ಹಾಕುತ್ತೀಯಾ ? ಓಹೋ ಹಾಕುತ್ತೀನಿ ಕಾಪ್ಪ. ಗುಡ್ಡನ ಬಿಡುವಾಗ ಹೀಗೆಲ್ಲ ಕೇಳುತ್ತಾರೆ. ಸ್ವಾಮಿಯವರು ಮೊದಲ ಭಿಕ್ಷೆಯನ್ನು ದೊಡ್ಡಮ್ಮತಾಯಿಯ ಮನೆ ಹೋಗಬೇಕು ಎಂದು ಕಳುಗಾವ್ರೆ.

ದಾನವೋ ದಾನ . ...
ಧರ್ಮವೋ ಧರ್ಮ .. . .
ಹರನ ದೇವರ ಭಿಕ್ಷಾ .. . .
ಗುರುದೇವರ ಭಿಕ್ಷಾ. . . . .
ಸಾದು ಸಂಗಯ್ಯನ ಭಿಕ್ಷಾ . .. . .
ಜ್ಯೋತಿಲಿಂಗಯ್ಯನ ಭಿಕ್ಷಾ . . . . .
ಕೈಲಾಸದವರ ಭಿಕ್ಷಾ .. . . ..
ಮುಮ್ಮೂರ್ತಿಗಳ ಭಿಕ್ಷಾ .. . . .
ಮುಕ್ಕಣ್ಣಯ್ಯನ ಭಿಕ್ಷಾ. . . . . . .
ಕಲ್ಯಾಣದ ಭಿಕ್ಷಾ. . . . ..
ದೊಡ್ಡಮ್ಮತಾಯ ಮನೆಯ ಒಳಗೆ
ಮೊದಲ ಭಿಕ್ಷಾ ಅಂದಾರಂತೆ . . .

ಸಿದ್ದಯ್ಯ ಸ್ವಾಮಿ ಬನ್ನಿ .. . . . .

ದೊಡ್ಡಮ್ಮತಾಯಿಯ ಮನೆಯ ಒಳಗೆ ಮೊದಲ ಭಿಕ್ಷಾ ಎಂದು ದಾನ ಸಾರಿದಾಗ ಬಿದುರಿನ ಮೊರದಲ್ಲಿ ಬೆಳ್ಳಿ ರತ್ನ ಮುತ್ತು ಬಂಗಾರವನ್ನು ತುಂಬಿ ದಾನ ಕೊಡುತ್ತಾಳೆ. ರಾಚಪ್ಪಾಜಿಯವರು ಭಿಕ್ಷೆ ಒಡ್ಡಪ್ಪ ಎಂದರು. ಜೋಳಿಗೆ ಒಡ್ಡಿ ಭಿಕ್ಷೆ ಪಡ್ಕೊಂಡರು. ಆಗ ಭಿಕ್ಷೆ ಕೊಟ್ಟವರ ಮನೆಯನ್ನು ಹರಸಪ್ಪ ಕಂದ ಎನ್ನುತ್ತಾರೆ ದೊಡ್ಡಮ್ಮತಾಯಿ.

ಭಿಕ್ಷಾ ಕೊಟ್ಟವರ ಮನೆ
ಸಕಲ ಭಾಗ್ಯ ಒದಗಲಪ್ಪ
ಸಿದ್ದಯ್ಯ ಸ್ವಾಮಿ ಬನ್ನಿ
ದಾನ ಕೊಟ್ಟವರ ಮನೆ
ಬೆರಳ್ಳಿ ಹೊನ್ನಾಗಲಿ
ಸಿದ್ದಯ್ಯ ಸ್ವಾಮಿ ಬನ್ನಿ

ದಾನ ಕೊಟ್ಟವರ ಮನೆ ಬೆರಳಿ ಹೊನ್ನಾಗಲಿ ಭಿಕ್ಷೆ ಕೊಟ್ಟವರ ಮನೆಗೆ ಸಕಲ ಭಾಗ್ಯ ಬರಲಿ ಎಂದು ಹರಸಾವ್ರೆ. ಏಳು ಗ್ರಾಮದ ಭಿಕ್ಷೆಯನ್ನು ಮಾಡ್ಕೊಂಡು ಸಿದ್ದಪ್ಪಾಜಿಯನ್ನು ಕರ್ಕೊಂಡು ಬೊಪ್ಪಣಪುರಕ್ಕೆ ಬಂದರಂತೆ. ಅನಂತರ ಬೊಪ್ಪಣಪುರದ ಮಠಕ್ಕೂ ತಾಯಿದೊಡ್ಡಮ್ಮನವರ ಮಠಕ್ಕೂ ಭಾರೀ ಹೆಚ್ಚಾಳದಲ್ಲಿ ತಿರುಗಾಡುತ್ತಿದ್ದಾನೆ. ನೋಡುದುರು ಸಿದ್ದಪ್ಪಾಜಿಯನ್ನು ಬೊಪ್ಪೇಣಗೌಡನಪುರದ ಮಠದಲ್ಲಿ. ಸಿದ್ದಪ್ಪಾಜಿಗೆ ಯಮಲೋಕದ ಶಿಕ್ಷೆ ಆಗಬೇಕು ಅಂತ್ಹೇಳಿ ಸ್ವಾಮಿ ಧರೆಗೆದೊಡ್ಡವರು, ದೊಡ್ಡಮ್ಮ ನೀನು ಸಾಕಿರುವಂತ ಮಗನನ್ನು ಬರಮಾಡಿಬಿಡಮ್ಮ. ದೊಡ್ಡಮ್ಮ ಕಷ್ಟಬಿದ್ದಷ್ಟು ಮಕ್ಕಳಿಗೆ ಮುಂದೆ ಸುಖ ಉಂಟು. ಇವತ್ತು ಕಷ್ಟ ಬಿದ್ದರೆ ನಾಳೆ ಸುಖ.

ಎದ್ದು ಬಾರೋ ನನ್ನ ಕಂದ
ಘನ ನೀಲಿ ಸಿದ್ದಪ್ಪಾಜಿ
ಸಿದ್ದಯ್ಯ ಸ್ವಾಮಿ ಬನ್ನಿ
ಪವಾಡ ಒದಗಿತ್ತಲ್ಲೋ
ಲಿಂಗಯ್ಯ ನೀವೇ ಬನ್ನೋ
ಕೂಗಿದಂತ ಕೂಗ ಲಾಲಾಯಿಸಿ
ಕೇಳ್ಕೊಂಡು ದೊಡ್ಡಮ್ಮತಾಯಿಯ
ಬಳಿಗೆ ಓಡಿ ಓಡಿ ಬಂದಾರಂತೆ
ಸಿದ್ದಯ್ಯ ಸ್ವಾಮಿ ಬನ್ನಿ

ತಾಯಿ ದೊಡ್ಡಮ್ಮರವರ ಬಳಿ ಓಡಿ ಬಂದರಂತೆ ನಮ್ಮ ಸಿದ್ದಪ್ಪಾಜಿಯವರು ಬಂದು ನನ್ನ ಕರೆದ ಕಾರಣವೇನು ತಾಯಿ ಎಂದು ಕೇಳದರಂತೆ. ಆಗ ತಾಯಿಯವರು ಧರೆಗೆದೊಡ್ಡವರು ಕರೆದರು ಅವರನ್ನು ಕೇಳಪ್ಪ ಎಂದರು. ಸ್ವಾಮಿಯವರ ಪಾದಚರಣಗಳಿಗೆ

ಪೂಜೆ ಮಾಡಿ ನನ್ನ ಬರಹೇಳಿದ್ದಕ್ಕೆ ಕಾರಣವೇನು ಸ್ವಾಮಿ ಎಂದು ಕೇಳಿದರು. ನೋಡಪ್ಪ ಕಲಿ ಹೆಚ್ಚುಬಿಡ್ತು ಕಾಲಜ್ಞಾನ ಹೆಚ್ಚುಬಿಡ್ತು ನಮ್ಮ ಹಂಗು ನರರಿಗೆ ಉಂಟಾಗಲಿ ನರರ ಹಂಗು ನಮಗೆ ಬೇಕಿಲ್ಲ ಕಾಣೋ. ನಾವು ಪಾತಾಳಲೋಕಕ್ಕೆ ಮರೆಯಾಗ ಬೇಕು ಎಂದು ಹೇಳಿದರು ಧರೆಗೆದೊಡ್ಡವರು.

ಪಾತಾಳಲೋಕಕ್ಕೆ ಮರೆಯಾಗಬೇಕು
ಎಂದಾಗ . . . .

ಗುರುದೇವ ನನ್ನಿಂದ ಏನಾಗಬೇಕು ಎಂದರು ಸಿದ್ದಪ್ಪಾಜಿ. ನಾವು ಪಾತಾಳಲೋಕಕ್ಕೆ ಮರೆಯಾಗಬೇಕಾದರೆ ಮಠಮನೆಯನ್ನು ಕಟ್ಟಿಸುವಂತ ಜವಾಬ್ದಾರಿ ನಿನದು ಆಗಬೇಕು ಕಾಣೋ. ಸ್ವಾಮಿಯವರ ಮಾತನ್ನು ಕೇಳಿ ಬಹಳ ಸಂತೋಷವಾಯ್ತು. ಪಾಳ್ಯಗಾರನ ಮಗ ಪಾಳ್ಯಗಾರರ ಮಾತಾಡುತ್ತಾನೆ.

ಅಪ್ಪ ಕುಂದೂರು ಬೆಟ್ಟವ ಕುಟ್ಟಿ
ಚಿನ್ನದ ರಾಶಿಯ ಮಾಡಿ
ಅಪ್ಪ ಬಸವನ ಬೆಟ್ಟವ ಬಡದು
ಬೆರಳಿ ರಾಶಿಯ ಮಾಡಿ
ರಾಜಬೊಪ್ಪಣಪುರಕ್ಕೆ ಗಾಡಿ ಕಟ್ಟಿ
ಹೊಡುಸ್ತೀನಿ   .. . .
ಸಿದ್ದಯ್ಯ ಸ್ವಾಮಿ ಬನ್ನಿ .. . . .

ಚಿನ್ನ ಬೆಳ್ಳಿ ಒಳಗಡೆ ಮಠಮನೆಯನ್ನು ಕಟ್ಟಿಸ್ಬುಡುತ್ತೀನಿ ಎಂದರು. ಮುತ್ತು ರತ್ನ ಬಂಗಾರ ಯಾರಿಗೆ ಬೇಕಪ್ಪ ಸಿದ್ದಪ್ಪಾಜಿ. ಅದಕ್ಕೆ ಹೇಳೋದು ಶಾಸ್ತ್ರಕ್ಕಾದರೂ ಚಿನ್ನ ಹಾಕಿದರೆ ಸಾವಿರ ಲಿಂಗ ಪೂಜೆ ಮಾಡಬೇಕು ಎಂದು ಹೇಳುವುದು. ಯಾಕೆಂದರೆ ಕಳ್ಳರು ಕಾಕರು ಇದ್ದಾರೆ. ಏಕೆಂದರೆ ಅದು ವಂಚನಕಾರ ಲಕ್ಷ್ಮೀ. ಗಂಡ ಸತ್ತ ಮುಂಡೇಗೆ ಇರಬೇಕಾದ ಒಂದನೆಯ ಚಿನ್ನ ಅಂದರೆ ಕಬ್ಬಿಣ. ಆ ಕಬ್ಬಿಣವಿಲ್ಲದೆ ಈ ನರಮಾನವ ಈಪಾಟಿ ಕಲ್ಲು ಕೀಳುವುದಕ್ಕೂ ಆಗುವುದಿಲ್ಲ.

ಕಬ್ಬಿಣ ಭಿಕ್ಷೆಗೆ ಹಲಗೂರು
ಚಿಲ್ಲಾಪುರಕ್ಕೆ ಪ್ರಯಾಣವ
ಬೆಳೆಸುವಪ್ಪ . . . . . .
ಸಿದ್ದಯ್ಯ ಸ್ವಾಮಿ ಬನ್ನಿ

ಸಿದ್ದಪ್ಪಾಜಿ ಕಬ್ಬಿಣ ಭಿಕ್ಷೆ ಮಾಡಿ ರಾಜಬೊಪ್ಪಣಪುರವನ್ನು ಕಟ್ಟಿಸಿಬಿಟ್ಟರೆ ಒರಗೋದೇವರು ನಾನಾಗುತ್ತೀನಿ ಮೆರೆಯುವ ದೇವರನ್ನಾಗಿ ನಿನ್ನ ಮಾಡುತ್ತೀನಿ ಕಂದ. ಗುರುಗಳು ಆಡಿದ ಮಾತನ್ನು ಕೇಳಿ ಗುರುದೇವ ಮುತ್ತಲ್ಲ ರತ್ನವಲ್ಲ ಬೆಳ್ಳಿಯಲ್ಲ ಬಂಗಾರವಲ್ಲ ಒಂದು ಬೆಂಕಿಕೆಂಡ ಮಾತಿಗೆ ಮಾರಳ್ಳಿಯನ್ನು ಹಾಳ್ಬಟ ಧೂಳ್ಬಟ

ಮಾಡಿದವರು ಈಗ ನಾನು ಅವರ ಊರಿಗೆ ಹೋಗಿ ಕಬ್ಬಿಣ ಭಿಕ್ಷೆ ತರಬೇಕೇ+ ಗುರುದೇವ. ಸಿದ್ದಪ್ಪಾಜಿ ಕಬ್ಬಿಣಕೋಸ್ಕರ ಪ್ರಪಂಚ ಸುತ್ತ ಬೇಡ ಕಾಣೋ.

ಸಿದ್ದಪ್ಪಾಜಿ ಪವಾಡ – ೧೭

ಗಜಮುಖನೇ ಗರ್ವಸಿರಿ ಗಣನಾತ ... ಆಹಾ
ಇಲಿಯ ವಾಹನವನೇರಿ ತ್ರಿಲೋಕಸಂಚರಿಪ
ಶ್ರೀಗೌರಿವರ ಪುತ್ರ ಶಿವನ ಕುಮಾರ
ವಿದ್ಯದಾಯಕ ಕೊಡು ಎಮಗೆ ಮತಿಯ
ನಿನ್ನ ಪಾದ ಚರಣಗಳಿಗೆ ಮೊದಲು ಶರಣಯ್ಯ
ಶರಣು ಶರಣಯ್ಯ ಆಹಾ ...
ಆ..................... ಶಂಕರಾ ....
ನಂಬಿದವರ ಮನೆಯ ಒಳಗೆ
ತುಂಬಿ ತುಳುಕಾಡು ಬಾಪ್ಪ
ಸಿದ್ಧಯ್ಯ ಸ್ವಾಮಿ ಬನ್ನಿ
ಕಂಡಾಯದ ಒಡೆಯ ಆಹಾ ....
ಲಿಂಗಯ್ಯ ದಯಮಾಡೋ
ಪರಂಜ್ಯೋತಿ ನನ್ನಪ್ಪ ಆಹಾ .....
ಗುರುವಿಗೆ ಹಾದಿಗೆ ಹಲವಾರವಂತೆ
ಬೀದಿಗೆ ಬೊಪ್ಪಣಪುರ
ಲಿಂಗಯ್ಯ ಸ್ವಾಮಿ ಬನ್ನಿ
ಗುರುವಿಗೆ ಬೀದಿಗೆ ಬೊಪ್ಪಣಪುರವಂತೆ
ಚಿಕ್ಕಲ್ಲೂರು ಗುರುಮಠವಂತೆ
ಸಿದ್ದಯ್ಯ ಸ್ವಾಮಿ ಬನ್ನಿ
ಸ್ವಾಮಿಗೆ ಚಿಕ್ಕಲ್ಲೂರು ಗುರುಮಠವಂತೆ
ಕಪ್ಪಡಿ ಕೈಲಾಸವಂತೆ
ಸಿದ್ದಯ್ಯ ಸ್ವಾಮಿ ಬನ್ನಿ
ಸ್ವಾಮಿಗೆ ಕಪ್ಪಡಿ ಕೈಲಾಸವಂತೆ
ನಿತ್ಯ ಪೂಜೆ ಬೊಪ್ಪಣಪುರ
ಸಿದ್ದಯ್ಯ ಸ್ವಾಮಿ ಬನ್ನಿ
ರಾಜುಬೊಪ್ಪಣಪುರ ತೆರಳಾಕೊಂಪಣದೊಡ್ಡಿ
ಕುರುಬೇಗೌಡರ ಮನೆಯ

ಹದಿನಾರು ಅಂಕಣದ
ತೊಟ್ಟಿ ಹಟ್ಟಿಯ ಒಳಗೆ
ಮರತು ಮಲಗಿರವಂತ
ನಮ್ಮ ಮಂಟೇದಲಿಂಗಯ್ಯ
ನಾವು ಕೂಗುವ ಕೂಗು ನಿಮ್ಮ
ಪಾದಕ್ಕರುವಾಗಲಪ್ಪ
ಸಿದ್ದಯ್ಯ ಸ್ವಾಮಿ ಬನ್ನಿ
ಕಿಡುಗಣ್ಣ ರೇಚಪ್ಪಾಜಿ
ಹಿರಿಚೆನ್ನಾಜಮ್ಮ
ತೋಪಿನ ದೊಡ್ಡಮ್ಮ
ಮಳವಳ್ಳಿ ಸ್ವಾಮಿಗಳು
ಬೊಪ್ಪಣಪುರದ ಬುದ್ದಿಯವರೆ
ನಾವು ಕೂಗುವ ಕೂಗು ನಿಮ್ಮ
ಪಾದಕ್ಕರುವಾಗಲಪ್ಪ
ಸಿದ್ದಯ್ಯ ಸ್ವಾಮಿ ಬನ್ನಿ
ಕಂಡಾಯದ ಒಡೆಯ
ಲಿಂಗಯ್ಯ ದಯಮಾಡೋ
ರಾಜಬೊಪ್ಪಣಪುರ
ಕರಳಾಕೆಂಪಣ ದೊಡ್ಡಿ
ಕುರುಬೇಗೌಡರ ಮನೆಯ
ತೊಟ್ಟಿ ಹಟ್ಟಿಯ ಒಳಗೆ
ಕುಳಿತಿರುವ ನನ್ನಪ್ಪ
ಮಂಟೇದಲಿಂಗಯ್ಯ
ಸ್ವಾಮಿ ನೀಲಿ ಸಿದ್ದಪ್ಪಾಜಿಯವರ
ಪ್ರೇಮದಲ್ಲಿ ಕರೆದರಂತೆ
ಸಿದ್ಧಯ್ಯ ಸ್ವಾಮಿ ಬನ್ನಿ
ಪರಂಜ್ಯೋತಿ .... ಆ ..
ಜ್ಯೋತಿ ತಂದಯ್ಯ ಬನ್ನಿ
ಗುರುಗಳು ಕೂಗಿದ ಕೂಗು
ಲಾಳಾಯಿಸಿ ಕೇಳ್ಕೊಂಡು
ನೀಲಿ ಸಿದ್ದಪ್ಪಾಜಿ ಕೊರಳು ತುಂಬ
ರುದ್ರಾಕ್ಷಿ ಧರಿಸಿದರಂತೆ ಸ್ವಾಮಿ
ನೀಲಿ ಸಿದ್ದಪ್ಪಾಜಿ

ತಮ್ಮ ಗುರುದೇವರ ಹತ್ತಿರ
ಸ್ವಾಮಿ ಮೆಲ್ಲ ಮೆಲ್ಲನೆ ಬಂದಾರಂತೆ
ಸಿದ್ದಯ್ಯ ಸ್ವಾಮಿ ಬನ್ನಿ
ಪವಾಡ ಲಿಂಗಯ್ಯೋ ನೀವೇ ಬನ್ನಿ

ಪರಂಜ್ಯೋತಿ ಆಗಿರತಕ್ಕಂತ ಮಂಟೇಸ್ವಾಮಿ, ಸಿದ್ದಪ್ಪಾಜಿಯನ್ನು ಬಾರಪ್ಪ ಕಂದ ಅಂತ ಕೂಗಿದ ತಕ್ಷಣ. ಗುರುಗಳು ಕೂಗುತ್ತಿದ್ದಾರಂತ್ಲೇಳಿ ಸಿದ್ದಪ್ಪಾಜಿ ಓಡೋಡಿ ಕುರುಬೇಗೌಡರ ಆ ಹದಿನಾರು ಅಂಕಣದ ತೊಟ್ಟಿ ಹಟ್ಟಿ ಮನೆಯಲ್ಲಿ ಕುಳಿತಿರತಕ್ಕಂತ ಪರಂಜ್ಯೋತಿ ಮಂಟೇಸ್ವಾಮಿಯವರ ಪಾದ ಚರಣಗಳಿಗೆ ಕರವೆತ್ತಿ ಕೈಮುಗಿದು ಶಿರವೆತ್ತಿ ಶರಣು ಮಾಡಿದರಂತೆ. ಗುರುದೇವ ನನ್ನನ್ನು ಯಾತಕೋಸ್ಕರವಾಗಿ ತಾವು ಬರಮಾಡಿದ್ದೀರಿ ಬುದ್ಧಿ ಎಂದು ಕೇಳಿದಾಗ, ಸಿದ್ದಪ್ಪಾಜಿ ನಿನ್ನನ್ನು ಬರಮಾಡಿದಂತಹ ವಿಚಾರ ಹೇಳಬೇಕೇಣೋ. ನೋಡಪ್ಪ ಕಲಿ ಹೆಚ್ಚುತ್ತಾ ಬಂದ್ಬುಡ್ತು ಕಾಲಜ್ಞಾನ ಉತ್ಪತ್ತಿ ಆಗುತ್ತಾ ಬಂದ್ಬುಡ್ತು. ಆದ್ದರಿಂದ ನರರ ಕಲಿಯನ್ನು ನಮ್ಮ ಕಣ್ಣಿಂದ ನೋಡಕ್ಕೆ ಆಗೋದಿಲ್ಲ. ಕಾಲಜ್ಞಾನ ಬರುವುದಕ್ಕೆ ಮುಂಚಿತವಾಗಿ ನಾವು ಪಾತಾಳಲೋಕಕ್ಕೆ ಮರೆಯಾಗಿ ಹೊಂಟ್ಹೋಗಬೇಕು. ಕುರುಬೇಗೌಡರ ಕುರಿಕೂಡುವಂತ ಕೊಟ್ಟಿಗೆ ನಾವು ೧೨ ಆಳುದ್ದ ಭಾವಿ ತೋಡ್ಕೊಂಡು ಪಾತಾಳಲೋಕಕ್ಕೆ ಮರೆಯಾಗಿ ಮಲಗಬೇಕು. "ನಮ್ಮ ಹಂಗು ನರರಿಗೆ ಉಂಟಾಗಲಿ ನರರ ಹಂಗು ನಮಗೆ ಬೇಕಿಲ್ಲ" ಎಂದರು ಸ್ವಾಮಿಯವರು. ನೋಡಪ್ಪ ಕಂದ ಈ ಬೊಪ್ಪಣಪುರದ ಮಠವನ್ನು ಕಟ್ಟಿಸಬೇಕಾದರೆ ನಮಗೆ ಕಬ್ಬಿಣದ ಬೇಕಾಗಿದೆ.

ನಮಗೆ ಕಬ್ಬಿಣದ ಲಾಂಛನ
ಆಗಬೇಕು ಅಂದಾರಂತೆ
ಸಿದ್ದಯ್ಯ ಸ್ವಾಮಿ ಬನ್ನಿ
ತಂಬೂರಿ ದೇವರೇ
ಲಿಂಗಯ್ಯ ನೀವೇ ಬನ್ನೋ
ಹನ್ನೆರಡು ಎಳಗುದ್ದಲಿ

ಹನ್ನೆರಡು ಹಾರೆ ಕೋಲು
ಆಗಬೇಕು ಕಾಣೋ ನೀಲಿ ಸಿದ್ದಪ್ಪಾಜಿ
ಹನ್ನೆರಡು ತೊಲಗಂಬ
ಆಗಬೇಕು ಕಾಣೋ ನೀಲಿ ಸಿದ್ದಪ್ಪಾಜಿ
ಸಿದ್ದಯ್ಯ ಸ್ವಾಮಿ ಬನ್ನಿ
ಮಂಟೇದಲಿಂಗಯ್ಯ ನೀವೇ ಬನ್ನೋ
ಗುರುಗಳು ಆಡಿದ ಮಾತು ಕೇಳಿ

ಕೆಳಗಡೆ ಕುಳ್ತಕೊಂಡರಂತೆ
ಸಿದ್ದಯ್ಯ ಸ್ವಾಮಿ ಬನ್ನಿ
ಘನನೀಲಿ ಲಿಂಗಯ್ಯೋ ನೀವೇ ಬನ್ಯೋ

ಗುರುಗಳು ಆಡಿದ ಮಾತನ್ನು ಕೇಳಿದ ಸಿದ್ದಪ್ಪಾಜಿ ಕೆಳಗಡೆ ಕುಳುತ್ಕೊಂಡರಂತೆ. ಸ್ವಾಮಿ ನಾನು ಏಳು ವರ್ಷದ ಪ್ರಾಯದಲ್ಲಿ ಮಾರಳ್ಳಿ ಕುಲುಮೆ ಕಚ್ಚೇರಿ ಒಳಗಡೆ ಕಬ್ಬಿಣ ಉದ್ಯೋಗ ಮಾಡಸ್ತಿದ್ದೆ. ಐಶ್ವರ್ಯವಂತನ ಮಗನಾಗಿ ಬಾಳುತ್ತಿದ್ದ ನನ್ನ ನೀವು ಮಾರಳ್ಳಿಯಿಂದ ಪಡ್ಕೊಂಡು ಬಂದ್ರಿ. ನನ್ನ ತಾಯಿ ಮುದ್ದೋಜಿ ಕೊಡಲ್ಲ ಕೊಡಲ್ಲ ಅಂದರೂ ನನ್ನ ಬಿಡದೇ ಕರ್ಕೊಂಡು ಬಂದ್ರಿ . ಕರ್ಕೊಂಡು ಬಂದು ಬೊಪ್ಪೇಗೌಡನಪುರದ ಆಶ್ರಮದಲ್ಲಿ ನನ್ನ ತಂದೆ ತಾಯಿ ಇಟ್ಟ ಕೆಂಪಾಚಾರಿ ಎಂಬ ನಾಮವನ್ನು ಅಳ್ಸಿ. ನನ್ನ ಕೊರಳಿಗೆ ಲಿಂಗಧಾರಣೆಯನ್ನು ಮಾಡಿ ಹದಲಿಗೆಬದಲು ನಾಮಕರಣವನ್ನು ಮಾಡಿದ್ರಿ. ಸಿದ್ದಪ್ಪಾಜಿ ಎಂಬ ನಾಮಕರಣವನ್ನು ಮಾಡಿ ತಮ್ಮ ಬಳಿಯಲ್ಲಿ ಇರುಸ್ಕೊಂಡೀರಿ. ಈ ಬೊಪ್ಪೆಗೌಡನಪುರದಲ್ಲಿ ಇವತ್ತು ಕಬ್ಬಿಣ ಆಗಬೇಕು. ಕಬ್ಬಿಣದ ಆಯುಧಾನಗಳು ಆಗಬೇಕು ಅಂಥ ಹೇಳುತ್ತಾ ಇದ್ದಿರಲ್ಲ ಬುದ್ದಿ

ನಾನು ಯಾವ ಕಡೆ ಹೋಗಲಪ್ಪ
ಕಬ್ಬಿಣಾನ ತರಲಪ್ಪ
ಸಿದ್ದಯ್ಯ ಸ್ವಾಮಿ ಬನ್ನಿ

ಸಿದ್ದಪ್ಪಾಜಿ ಕಬ್ಬಿಣಕೋಸ್ಕರವಾಗಿ ಈ ಪ್ರಪಂಚವನ್ನೇ ಸುತ್ತಬೇಕಾದ ಅವಶ್ಯಕತೆ ಇಲ್ಲ ಕಾಣೋ. ಎಲ್ಲಿ ಅಂತ ಕೇಳುತ್ತಾ ಇದ್ದೀಯ ? ನೋಡೋ ಕಬ್ಬಣ ಉತ್ಪತ್ತಿ ಆಗೋ ಸ್ಥಳ ಹೇಳುತ್ತೀನಿ ಕೇಳಪ್ಪ –

ಕಂಪ ಈಶಾನ್ಯ ಮೂಲೆ ಒಳಗೆ
ಆಡುತ್ತಾದೆ ನೋಡು ಮಗನೇ
ಸಿದ್ದಯ್ಯ ಸ್ವಾಮಿ ಬನ್ನಿ
ಅಯ್ಯೋ ಮಗನೇ
ಲಿಂಗಪ್ಪ ನೀವೇ ಬನ್ನಿ

ಈಶಾನ್ಯದ ಮೂಲೆ
ಕುಬೇರನ ಮೂಲೆ
ಕಣ್ಣಿಗೆ ಸ್ವಲ್ಪ ಹತ್ತಿರ
ಕಾಲಿಗೆ ಸ್ವಲ್ಪ ದೂರ
ಕಾಡೆಲ್ಲ ಪರವಲ್ಲ
ನಿಮ್ಮ ಜಾತಿಯವರು

ನಿನ್ನ ಮತದವರು
ಹಲಗೂರು ಏಳು ಬೀದಿ
ಚಿಲ್ಲಾಪುರ ಏಳು ಬೀದಿ

ಪಾಳೆಗಾರರ ಹಲಗೂರಿಗೆ
ಪ್ರಯಾಣವ ಮಾಡು ಮಗನೆ
ಲಿಂಗಯ್ಯ ನೀವೇ ಬನ್ನಿ
ನಮ್ಮ ಜಾತ್ಯವರ ಮನೆಗೆ
ಕಳುಗಬ್ಯಾಡಿ ನಿಮ್ಮ ಪಾದ
ಸಿದ್ದಯ್ಯ ಸ್ವಾಮಿ ಬನ್ನಿ
ನನ್ನ ಗುರುವೇ ...
ಲಿಂಗಪ್ಪ ನೀವೇ ಬನ್ನಿ

ಹಲಗೂರ ಹೆಸರ ಕೇಳಿದರಂತೆ
ಗಡಗಡನೇ ನಡುಗಿದರಂತೆ
ಸಿದ್ದಯ್ಯ ಸ್ವಾಮಿ ಬನ್ನಿ
ಘನನೀಲಿ ಆ.....
ಲಿಂಗಯ್ಯ ದಯಮಡೋ

ಮಂಟೇದಲಿಂಗಯ್ಯ ನನ್ನ ಜಾತಿ ನನ್ನ ಮತದ ಹಲಗೂರು ಚಿಲ್ಲಾಪುರಕ್ಕೆ ಹೋಗಿ ಕಬ್ಬಿಣದ ಲಾಂಛಾನ ತಕ್ಕೊಂಡು ಬನ್ನಿ ಅಂತ ಹೇಳುತ್ತೀರಲ್ಲ ಬುದ್ಧಿ ಹಲಗೂರು ಹುಟ್ಟಿದ ಕಾಲಕ್ಕೂ ಚಿಲ್ಲಾಪುರ ಹುಟ್ಟಿದ ಕಾಲಕ್ಕೂ ನನ್ನ ಜಾತಿವಂತರ ಮನೆಗೆ ಇಲ್ಲಿವರೆಗೆ ಹರದೇಸಿ, ಪರದೇಸಿ, ಕಾಳುಮುಖಿ, ಸನ್ಯಾಸಿಗಳು, ದೊಂಬರರು, ತಿರುಕರು, ಕಾಡು ಕಟ್ಟೋರು, ನೀರು ಮಂತ್ರಿಸೋರು, ಮಾಪಿಳ್ಳೆದವರು, ಮರಾಠಿಯವರು, ಅಂತ್ರಗಾರ, ಮಂತ್ರಗಾರ ಯಾರೂ ಸಹ ಹಲಗೂರು ಪಾಳ್ಯಗಾರರ ಮನೆಗೆ ಹೋಗಲಿಲ್ಲ ಬುದ್ಧಿ. ನನ್ನ ಜಾತಿವಂತರ ಬೀದಿಗೆ ಹೋಗಿ ಅವರ ಮೊಕವನ್ನು ನೋಡಿ, ಅವರ ಕೈಯಿಂದ ಭಿಕ್ಷೆ ತಕ್ಕೊಂಡು ಬಂದವರೇ ಈ ಧರೆಯಲ್ಲಿ ಹುಟ್ಟಿಲ್ಲವಲ್ಲ ಬುದ್ಧಿ. ಅಂಥ ಕೆಟ್ಟ ದಿಕ್ಕಿಗೆ ಹೋಗಿ ಕಬ್ಬಿಣ ಭಿಕ್ಷೆ ಮಾಡಕೊಂಡು ಬರೋಗಿ ಅಂತ ಹೇಳ್ತೀರಲ್ಲ ಬುದ್ಧಿ ಪರಂಜ್ಯೋತಿ ಮಂಟೇದಲಿಂಗಯ್ಯ –

ಅಪ್ಪ ಆಡುತ್ತೀರಿ ಬಾಯಿ ಮಾತು
ಹೋಗುತ್ತಿದೆ ನನ್ನ ಪ್ರಾಣ
ಸಿದ್ದಯ್ಯ ಸ್ವಾಮಿ ಬನ್ನಿ ಆ.....

ಅತ್ತ ಕೆಟ್ಟೋರ ಸುದ್ದಿ ಕೇಳಿದ್ರೆ

ನನ್ನ ಹೊಟ್ಟೆ ಕರಳು ನಡುಗುತ್ತಾದೆ
ಗಂಗಾಧರಲಿಂಗಯ್ಯ ಬನ್ನಿ

ಸ್ವಾಮಿ ಕೆಟ್ಟವರಾದ ಹಲಗೂರು ಚಿಲ್ಲಾಪುರದವರ ಹೆಸರು ಕೇಳಿದರೆ ಸಾಕು ನನ್ನ ಹೊಟ್ಟೆ ಕರುಳೆಲ್ಲ ನಡುಗುತ್ತದೆ. ಈ ಎರಡು ಊರನ್ನು ಬಿಟ್ಟು ಬೇರೆ ಯಾವೂದೇ ಲೋಕವನ್ನು ಹೇಳಿ ಎಂದರಂತೆ. ಸಿದ್ದಪ್ಪಾಜಿ ಹಲಗೂರು ಚಿಲ್ಲಾಪುರಕ್ಕೆ ಹೋಗಲಿಲ್ಲವೆಂದರೆ ಇನ್ನೆಲ್ಲಿ ಹೋಗುತ್ತೀಯೋ? ಬುದ್ದಿ ಆ ನನ್ನ ಜಾತಿಯವರಾದ ಹಲಗೂರು ಚಿಲ್ಲಾಪುರದ ಪಾಂಚಾಳರು ಊರುಬಿಟ್ಟರೂ ಪರವಾಗಿಲ್ಲ. ನೀವು ಬೇಕು ಅಂತ ಅಂದ್ಬುಟ್ಟರೆ ಕಲಿಯುಗ ಬಂದಾಗ ನಿಮ್ಮ ಪಾದದ ಬಳಿ ಚಪ್ಪನ್ನಾರು ದೇಶದ ಭಕ್ತಾಧಿಗಳನ್ನು ತಮ್ಮ ಪಾದಕ್ಕೆ ಕರವೆತ್ತಿ ಕೈ ಮುಗಿಸ್ತೀನಿ. ಕಾಸಿನ ಧೂಪ ಹಾಕಿ ಕರವೆತ್ತಿ ಕೈಮುಗಿಸ್ತೀನಿ, ಎಲ್ಲಿಂದ ತರುತ್ತೀಯ ಸಿದ್ದಪ್ಪಾಜಿ.

ಸ್ವಾಮಿ ಈ ಎರಡು ಊರು ಇಲ್ಲ ಅಂದ್ಬಿಟ್ರೆ ನಾಳೆ ಕೊಚ್ಚಿ, ಕೊಯಮುತ್ತೂರು, ಅಂದಾಮು, ಬಾದಾಮಿ, ಬನ್ನೂರು ಮೂರು ಸಾವಿರ, ಬೆಡಗಿನ ಬೆಂಗಳೂರು, ಮಾರ್ಟಳ್ಳಿ, ಹೆಗ್ಗಡದೇವನ ಕೋಟೆ, ಪಿರಿಯಾಪಟ್ಟಣ, ಸಂತೆಕಾಣಿ, ಸಂತೇಮರಳ್ಳಿ, ರಾಮನಗರ, ಚೆನ್ನಪಟ್ಟಣ, ಚಿತ್ರದುರ್ಗ, ಹಾಸನ, ಬೈರಾಪಟ್ಟಣ, ದುಗ್ಗಟಿ, ಹೊಂಗನೂರು, ನರಸೀಪುರ, ಉತ್ತೂರು, ಮಳವಳ್ಳಿ ಎಲ್ಲ ತಂದು ನಿಮ್ಮ ಪಾದದ ಮೇಲೆ ಕೆಡವುತ್ತೀನಿ. ಜಗತ್ತಿನ ರಾಜ್ಯದ ಜನವನೆಲ್ಲ ಬೇಕಾದರೆ ನಿಮ್ಮ ಪಾದದ ಮೇಲೆ ಒಕ್ಕಲು ಮಾಡಿಕೊಡುತ್ತೀನಿ.

ನನ್ನ ಜಾತಿಯವರ ಮನೆಗೆ
ಕಳುಗಬ್ಯಾಡಿ ನಿಮ್ಮ ಪಾದ
ಸಿದ್ದಯ್ಯ ಸ್ವಾಮಿ ಬನ್ನಿ
ನನ್ನ ಗುರುದೇವ
ಲಿಂಗಪ್ಪ ನೀವೇ ಬನ್ನಿ

ಸಿದ್ದಪ್ಪಾಜಿ ಹಾಗಿದ್ದ ಮೇಲೆ ನಾನು ಹೇಳಿದ ಮಾತು ಕೇಳಿಲ್ಲವೇನೋ ? ನಾನು ಕೇಳಲ್ಲ ಅಂತ ಅಲ್ಲ ಬುದ್ಧಿ. ನನ್ನ ಜಾತಿಯವರ ಮನೆಗೆ ಮಾತ್ರ ಕಳುಗಬೇಡಿ. ಸಿದ್ದಪ್ಪಾಜಿ ಕೇಳೋ ಗುರುವಿಗೆ ಗುಲಾಮನಾಗದ ತನಕ ದೊರೆಯದಣ್ಣ ಮುಕುತಿ ಅಂತ ವೇದ ಪುರಾಣಗಳು ಸಾರುತ್ತಾ ಇರುವಾಗ ಗುರು ಆಡತಕ್ಕಂತ ಮಾತನ್ನು ತಿರಸ್ಕಾರ ಮಾಡುತ್ತಾ ಇದ್ದೀ ಅಲ್ಲೋ ನಿನ್ನ ಬ್ರಮೋಕ್ಷ ಆಗವ್ನೆ. ನಾನು ಹೇಳಿದ ಮಾತನ್ನು ಈ ಬೊಪ್ಪೇಗೌಡನ ಪುರದಲ್ಲಿ ತಿರಸ್ಕರ ಮಾಡಿದ ಮೇಲೆ ಸಿದ್ದಪ್ಪಾಜಿ –

ನನಗೆ ನೀನು ಶಿಷ್ಯನಲ್ಲ
ನಿನಗೆ ನಾನು ಗುರುವಲ್ಲ
ಸಿದ್ದಯ್ಯ ಸ್ವಾಮಿ ಬನ್ನಿ
ಲಿಂಗಪ್ಪ ನೀವೇ ಬನ್ನ್ಯೋ
ನಾ ಕಟ್ಟಿದಂತ ಮನಿಯ ಕಳಿಯೋ

ಕೊಟ್ಟ ಜೋಳಿಗೆ ಮಡಗ್ಬುಟ್ಟು
ನನ್ನ ಬೊಪ್ಪೇಗೌಡನಪುರವ
ಬಿಟ್ಟು ಹೊರಟು ಹೋಗು ಅಂದಾರಂತೆ
ಸಿದ್ದಯ್ಯ ಸ್ವಾಮಿ ಬನ್ನಿ
ಕಂಡಾಯದ ಮೂರ್ತಿ
ಲಿಂಗಯ್ಯ ನೀವೇ ಬನ್ನೋ ...

ನನ್ನ ಮಾತು ಕೇಳದ ಮೇಲೆ ನಾನು ಗುರು ಅಲ್ಲ ನೀನು ನನಗೆ ಶಿಷ್ಯನಲ್ಲ. ನಾನು ನಿನ್ನ ಕತ್ತಿಗೆ ಕಟ್ಟಿರುವ ಮನಿಯನ್ನು, ಮುಂಗೈಲಿ ಕಟ್ಟಿರುವಂತ ಜೋಳಿಗೆಯನ್ನು ಕೆಳಗಡೆ ಇಟ್ಟು ಹೊರಟು ಹೋಗು ಅಂದಾರಂತೆ. ಯಾವಾಗ ಬೊಪ್ಪೇಗೌಡನ ಮಠ ಬಿಟ್ಟು ಹೋಗು ಅಂದಾಗ ಗುರುಗಳ ಪಾದದ ಬಳಿ ನಿಂತ್ಕೊಂಡು ಮಾತನಾಡುವ ಧೈರ್ಯ ಬರನಿಲ್ಲವಂತೆ. ಮಠಮನೆ ಬಿಟ್ಟು ಭಾರೀ ಶೋಕಾ ಮಾಡಾವ್ರೆ ಸಿದ್ದಪ್ಪಾಜಿ–

ಹುಟ್ಟಬಾರದು ನನ್ನಂತ ಜನ್ಮ
ಬೆಳೆಯಬಾರದು ಪಾಪಗೇಡಿ ಜನ್ಮ
ಆಚಾರಿಯ ಹೊಟ್ಟೆಯ ಒಳಗಡೆ
ಆಚಾರಿಯರ ಹೊಟ್ಟೆಯಲ್ಲಿ ಹುಟ್ಟಿದ
ಮಗ ಕರ್ಮಕ್ಕೆ ಗುರಿಯಾದೆ
ಪರಂಜ್ಯೋತಿ ...... ಆ ....
ಜಗಜ್ಯೋತಿ .... ಆಹಾ........

ತೋಪಿನ ಕಪ್ಪಡಿ ಒಳಗೆ ದೊಡ್ಡಮ್ಮತಾಯಿ ಇದ್ದಾರೆ. ಆ ದೊಡ್ಡಮ್ಮತಾಯಿಯ ಪಾದ ಬಳಿಗಾದರೂ ಹೋಗಬೇಕು. ಗುರುಗಳು ಹೇಳಿದ ಮಾತನ್ನು ದೊಡ್ಡಮ್ಮತಾಯಿ ಹತ್ತಿರ ಹೇಳಿದರೆ ತಾಯಿಗೆ ಸ್ವಲ್ಪವಾದರೂ ಕನಿಕರ ಬರುತ್ತದೆ ಅಂತ್ಹೇಳಿ ಆವಾಗ ದೊಡ್ಡಮ್ಮತಾಯಿ ಧರೆಗೆದೊಡ್ಡವರ ಬಳಿಗೆ ಬಂದು ಅಣ್ಣಯ್ಯ ನನ್ನ ಮಗನ ಹಲಗೂರು ಚೆಲ್ಲಾಪುರಕ್ಕೆ ಕಳುಗ ಬೇಡಿ ಅಂತ ಒಂದು ಮಾತು ಹೇಳಿದರೆ ಸಾಕು. ಏಕೆಂದರೆ ದೊಡ್ಡಮ್ಮತಾಯಿಯ ಮಾತೆಂದರೆ ಗುರುಗಳು ಕೇಳುತ್ತಾರೆ. ಅದ್ದರಿಂದ ತಾಯಿಯ ಪಾದದ ಬಳಿಗಾದರೂ ಹೋಗಬೇಕು ಅಂತ್ಹೇಳಿ ಕುರುಬೇಗೌಡರ ಮಠ ಮನೆಯಿಂದ ಸಿದ್ಧಪ್ಪಾಜಿ –

ಒಕ್ಕ ಒಕ್ಕಲ ನೀರ ಕಣ್ಣಲ್ಲಿ ತುಂಬ್ಕೊಂಡು
ತನ್ನ ತಾಯಿದೊಡ್ಡಮ್ಮನ ಬಳಿಗೆ
ವಾಲುತ್ತಾ ಬರುತ್ತಾವ್ರೆ
ಸಿದ್ದಯ್ಯ ಸ್ವಾಮಿ ಬನ್ನಿ
ಅಳುತ್ತಾ ಬರುವ ಮಗನ

ನೋಡಿದಳಂತೆ ತಾಯಿ
ತೋಪಿನ ದೊಡ್ಡಮ್ಮ
ಸಿದ್ದಯ್ಯ ಯಾಕೋ ಕಂದ
ಅಳುತ್ತಾ ಬರುತ್ತಾ ಇದ್ದೀಯ
ಸಿದ್ದಪ್ಪಾಜಿ ನಿನ್ನ ಹಾಳಾದ ಕಣ್ಣೀರು
ಇನ್ನಾದರೂ ತಪ್ಪಲಿಲ್ಲವೆ
ಸಿದ್ದಯ್ಯ ಸ್ವಾಮಿ ಬನ್ನಿ
ಅಯ್ಯೋ .. ಮಗನೇ..............
ಲಿಂಗಪ್ಪ ನೀವೇ ಬನ್ನಿ
ಆಕಡೆಯಿಂದ ಅಳುತ್ತಾ ಬರುವ
ಮಗನ ತೋಪಿನ ದೊಡ್ಡಮ್ಮತಾಯಿ
ಮುಂಗೈಯ ಹಿಡಿದಾವ್ಳೆ ಮಗನೆತ್ತಿ
ದೊಡ್ಡಮ್ಮ ತನ್ನ ತೊಡೆಯ ಮೇಲೆ
ಕುಂಡಸ್ಕೊಂಡು ತಾಯಿ ಸೆರಗಲ್ಲಿ
ಮಗನ ಕಣ್ಣೀರ ಒರಸಿದಳು
ಸಿದ್ದಯ್ಯ ಸ್ವಾಮಿ ಬನ್ನಿ
ಲಿಂಗಪ್ಪ ನೀವೇ ಬನ್ನಿ

ದೊಡ್ಡಮ್ಮತಾಯಿ ಆಕಡೆಯಿಂದ ಅಳುತ್ತಾ ಬರುತ್ತಿದ್ದ ಮಗನ ಮುಂಗೈಲಿ ಎತ್ಕೊಂಡು ತೊಡೆ ಮೇಲೆ ಕುಂಡಸ್ಕೊಂಡು. ಯಾಕೋ ? ನಿನ್ನ ಹಾಳಾದ ಕಣ್ಣೀರು ಈ ಬೊಪ್ಪಣಪುರದಲ್ಲಿ ಇನ್ನು ಮುನ್ನು ತಪ್ಪಲಿಲ್ಲವೇನೋ ? ಯಾರು ? ಏನು ಹೇಳಿದರೆಂದು ? ಈ ರೀತಿ ಶೋಕ ಮಾಡುತ್ತಾ ಇದ್ದೀಯಾ ? ಸಿದ್ಧಪ್ಪಾಜಿ ಅಂತ್ಹೇಳಿ ದೊಡ್ಡಮ್ಮತಾಯಿ ಸಮಾಧಾನವಾಗಿ ಕೇಳಿದಾಗ, ತಾಯಿ ನನ್ನನ್ನು ಯಾರು ಹೊಡೆನಿಲ್ಲ ಬಡಿನಿಲ್ಲ. ಬೊಪ್ಪೇಗೌಡನಪುರದಲ್ಲಿರುವ ಪರಂಜ್ಯೋತಿ ಮಂಟೇದಲಿಂಗಯ್ಯ ಏನು ಹೇಳಿದರಪ್ಪ ಎಂದರೆ ಹಲಗೂರು ಚಿಲ್ಲಾಪುರ ಪಂಚಾಳದವರ ಬೀದಿಗೆ ಹೋಗಿ ಕಬ್ಬಿಣದ ಆಯುಧಾನ ಮಾಡಸ್ಕೊಂಡು ಬರೋಗು ಅಂತ ಹೇಳುತ್ತಾ ಇದ್ದಾರೆ.

ಹೋದರೆ ನನ್ನ ಪ್ರಾಣ
ನಿಮ್ಮಿಂದ ಹೋಗಬೇಕು ತಾಯಿ
ಉಳಿದರೆ ಈ ನನ್ನ ಜೀವ
ಬೊಪ್ಪಣಪುರದಲ್ಲಿ ನಿಮ್ಮಿಂದ
ಉಳಿಯಬೇಕು ತಾಯಿ
ನನ್ನ ಹಲಗೂರು ಚಿಲ್ಲಾಪುರಕ್ಕೆ
ಹೋಗೋದನ್ನು ಮಾಪ್ ಮಾಡಸ್ಕೊಡಿ

ನಿಮ್ಮ ಪಾದ ಅಂತ್ಹೇಳಿ
ದೊಡ್ಡಮ್ಮತಾಯಿ ಪಾದಗಳ
ಬಾಚಿ ತಬ್ಬಿದರಂತೆ ಘನನೀಲಿ ....

ಅಯ್ಯೋ ಕಂದ ಗುರುಗಳು ಹೇಳಿದಂತ ಮಾತನ್ನು ಯಾರು ತಿರಸ್ಕಾರ ಮಾಡಂಗಿಲ್ಲ. ನಾನು ಒಬ್ಬನೇ ಹಲಗೂರು ಚಿಲ್ಲಾಪುರಕ್ಕೆ ಹೋಗಬೇಕೆಂದು ನೀನು ಭಯಪಡಬೇಡ. ಎಡಗೆಡೆ ರೇಚಪ್ಪಾಜಿ ಕಳುಗಿಸ್ತೀನಿ. ಬಲಗಡೆ ಚೆನ್ನಜವ್ವನನ್ನು ಕಳುಗಿಸಿ ಕೊಡುತ್ತೀನಿ. ಮುಟ್ನಳ್ಳಿ ಫಲಾರದಯ್ಯನನ್ನು ಮುಂದ್ ಮುಂದು ಕಳುಗಿಸಿ ಕೊಡುತ್ತೀನಿ. ಹಣೆಯಲ್ಲಿ ಧರಿಸಿರುವ ಮಟ್ಟಿಕಪ್ಪಲ್ಲಿ ನಾನೇ ಮೈತುಂಬ್ಕೊಂಡು ಬರುತ್ತೀನಿ. ಹೆಗಲ ಮೇಲೆ ಹೊತ್ಕೊಂಡು ಹೋಗುವಂತ ಉತ್ತರದೇಶದ ಕಂಡಾಯದಲ್ಲಿ ಪರಂಜ್ಯೋತಿ ಮಂಟೇಸ್ವಾಮಿ ಹೂ ಹೊಂಬಾಳೆ ಮೇಲೆ ವಾಲಾಡಿಕೊಂಡು ಬರುತ್ತಾರೆ. ಅಷ್ಟಲ್ಲದೆ, ನಿನ್ನ ಬೆನ್ನಿಂದೆ ೭೭ ಜನ ಮಾರಿಯರನ್ನು ತಂದು ಕೂಡುತ್ತೀನಿ. ಬಗ್ಗದರೆ ಆಚಾರರು ಬಗ್ಲಿ. ಬಗ್ನಿಲ್ಲವೋ ? ಆದರೂ ನೀನು ಅವರಿಗೆ ಹೆದರಬೇಡ. ತಾಯಿ ೭೭ ಜನ ಮಾರಿಯರನ್ನು ತಂದು ಕೂಡುತ್ತೀನಿ ಅಂತ ಹೇಳುತ್ತಿ ಅಲ್ಲ ಏನು ಪ್ರಯೋಜನ. ಹಲಗೂರು ಚಿಲ್ಲಾಪುರದವರು ಊರ ಸುತ್ತ ಮಾರಿಯರ ಕಾವಲು ಇಟ್ಟಿದ್ದಾರೆ. ಏಕೆಂದರೆ ನಾವಿಲ್ಲದಂತಹ ಸಂದರ್ಭದಲ್ಲಿ ಯಾವನಾದರೂ ಪರದೇಸಿ ಹರದೇಸಿ ಗ್ರಾಮಕ್ಕೆ ಬಂದು ನಮ್ಮ ಹೆಂಡ್ತಿರ ಮೊಕ ನೋಡಿ, ನಮ್ಮ ಹೆಂಡ್ತಿರ ಕೈಯಿಂದ ಭಿಕ್ಷೆ ತಕ್ಕೊಂಡು ಹೋಗುತ್ತಾರೆ. ಮುತ್ತೋಜಿ, ಸಿದ್ದೋಜಿ, ಪುಟ್ಟೋಜಿ, ರತ್ನೋಜಿ, ಕೆಂಡೋಜಿ, ಬೆಟ್ಟೋಜಿ ಅಂತಕ್ಕಂತ ಏಳು ಜನ ಪಾಳ್ಯಗಾರರು ಊರು ಸುತ್ತ ಮಾರಮ್ಮನ ಕಾವಲು ಇಟ್ಕೊಂಡಿದ್ದಾರೆ.

ದೊಡ್ಡಮ್ಮತಾಯಿ– ಯಾವ ಮಾರಿಯರಪ್ಪ. ಮೂಡುಚೋರಿ ಗೇಟಲ್ಲಿ ಮೂಗುಮಾರಿಯರ ಕಾವಲು, ತೆಂಕಚೋರಿ ಗೇಟಲ್ಲಿ ಸುಂಕದ ಮಾರಿಯ ಕಾವಲು, ಪಡಚೋರಿ ಗೇಟಲ್ಲಿ ಮೆಂದಮಾರಿಯ ಕಾವಲು, ಬಡಗಚೋರಿ ಗೇಟಲ್ಲಿ ಅಂಕದ ಮಾರಿಯರ ಕಾವಲು. ಇದರ ಜೊತೆಗೆ ಬಿಚ್ಚು ಕತ್ತಿ ಪಾರ ಊರ ಸುತ್ತ. ನಡೂರಿನಲ್ಲಿ ತಾಯಿ ಕಾಳಮ್ಮನ ಪೂಜೆ ಮಾಡುತ್ತಾವ್ರೆ. ಆ ಕಾಳಕಾದೇವಿ ದೃಷ್ಟಿ ದೇವತೆ ಅಂದರೆ ಎಂಥ ದೇವತೆ ಗೊತ್ತೆ.

ಅವಳ ಹೊಟ್ಟೆಯ ನೋಡಿದರೆ
ಬಂಡೆಗಾತ್ರ ಹೊಟ್ಟೆ
ಕೊಳಗದಗಲ ಮೂಗು
ಒಂದೂರಿ ಅಗಲ ಕಣ್ಣು
ಮೊರದಗಲ ಕಿವಿ
ಮೂಲಂಗಿ ಗಾತ್ರದ ಹಲ್ಲು
ಕೊಂಕದಗಲ ನಾಲಿಗೆ
ಐದುಗಾಡಿ ಕುಂಕುಮ

ಒಂದು ಕೆನ್ನೆಗೆ ಬಳ್ಕೊಂಡು
ಐದುಗಾಡಿ ಅರಿಶಿಣವ
ಒಂದು ಕೆನ್ನೆಗೆ ಬಳ್ಕೊಂಡು
ಹನ್ನೆರಡು ಮಾರುದ್ದ ಮಂಡೆ
ಗತ್ಗಂಟು ಹಾಕ್ಕೊಂಡು
ಅರವತ್ತು ಗಜದ ರವಕೆ
ಬಿಗಿಯಾಗಿ ಕಟ್ಕೊಂಡು
ಎಂಬತ್ತು ಮೊಳದ ಸೀರೆ
ಒಂದೇ ಸುತ್ತಿಗೆ ಉಟ್ಕೊಂಡು
ಆಚಾರರ ದೇವತೆ
ಅವ್ವ ಹನ್ನೆರಡು ಗದ್ದುಗೆ ತುಂಬ
ವಾಸವಾಗಿ ಮಲಗಾವಲಲ್ಲೋ
ಸಿದ್ದಯ್ಯ ಸ್ವಾಮಿ ಬನ್ನಿ
ಕಾಳಮ್ಮ ಓ........................
ಜ್ಯೋತಿ ತಂದಯ್ಯ ಬನ್ನಿ

ದೊಡ್ಡಮ್ಮ ಹನ್ನೆರಡು ಅಂಕಣದ ತುಂಬ ಒಬ್ಬೆ ಕಾಳಕಾದೇವಿ. ಆ ಮಲಗಿರುವಂತ ಕಾಳಕಾಮ್ಮನ ಬಳಿಗೇನಾರು ನಿನ್ನ ಬೊಪ್ಪಣಪುರದ ೭೭ ಜನ ಮಾರಿಯರನ್ನು ಕೂಡಬಿಟ್ರೆ ಕಾಲಿಗೆ ಬಾಳೆ ಹಣ್ಣು ಸಿಪ್ಪೆ ಸಿಕ್ದಂಗೆ ಎಲ್ಲವನ್ನೂ ತುಳುದು ತುಳುದು ಹತ ಮಾಡಿಬಿಡುತ್ತವೆ. ಭತ್ತ ಬಡದಾಗೆ ತೂದು ತೂದು ಇಟ್ಟುಬುಡ್ತಾಳೆ. ಅಂಥ ದೃಷ್ಟ (ದುಷ್ಟ) ಮಾರಮ್ಮ ಕಾಳಕಾದೇವಿ ದೊಡ್ಡಮ್ಮ. ಸಿದ್ದಪ್ಪಾಜಿ ನೀನು ಹಲಗೂರು ಚಿಲ್ಲಾಪುರದ ಪಾಂಚಾಳರ ಶವ ಇಟ್ಟುಕೊಂಡಿರುವ ಮಾರಮ್ಮದೇವಿ ಈ ಪ್ರಪಂಚಕ್ಕೆ ದೊಡ್ಡವಳಂತ ತಿಳಿದಿ ಏನೋ ? ಆ ಮಾರಮ್ಮ ಅಲ್ಲ ದೊಡ್ಡವಳು. ಬೊಪ್ಪಣಪುರದ ಮಠದ ಹಿಂಭಾಗದಲ್ಲಿ ನಾನು ಮೂರು ಜನ ಮಾರಮ್ಮನನ್ನು ಸಾಕ್ಕೊಂಡಿದ್ದೀನಿ. ಅವರು ಯಾರು ತಾಯಿ. ನೋಡೋ ಹರಳುಕಟ್ಟದ ಮಾರಿ ಹಲ್ಕಟ್ಟದ ಮಾರಿನ ತಂದು ಹಲಗೂರಿನಲ್ಲಿ ಕೂಡುತ್ತೀನಿ. ಹಸುಮಕ್ಕಳಿಗೆಲ್ಲ ಹಡವಳಿಗೆಲ್ಲ ತೊಡವಳಿಗೆಲ್ಲ ಹರಳಾಗಬೇಕು. ಒಂದು ಅರಳು ಎದ್ದು ಪಟ್ ಅಂತ ಹೊಡೆದರೆ ಸುತ್ತ ಸೋರಿ ಒಂಭತ್ತು ಅಳ್ಳು ಮೂಡುಸ್ತೀನಿ. ಒಂದು ವೇಳೆ ಹರಳುಕಟ್ಟದ ಮಾರಿಗೆ ಹಲಗೂರು ಚಿಲ್ಲಾಪುರದ ಪಾಂಚಾಳದವರು ಹೆದರದೆ ಹೋದರೆ ? ಇನ್ನೊಬ್ಬಳು ಮಾರಿ ಹಿಂದುಗಂಟ್ಲೆ ತಂದು ಕೂಡುತ್ತೀನಿ ಅವಳು ಗ್ವಾರದ ಮಾರಿ. ತಂದು ಕೂಡ್ಬಿಟ್ಟರೆ ಹಸುಮಕ್ಕಳಿಗೆಲ್ಲ ಗ್ವಾರೆಯಾಗಬೇಕು, ಕೀವು ಸುರಿಯಬೇಕು, ರಕ್ತ ಹರಿಯಬೇಕು, ಮಕ್ಕಳೆಲ್ಲ ಕರ್ರೋ ಕರ್ರೋ ಅಂತ ಅರಚಬೇಕು. ತಾಯಂದಿರು ಮಕ್ಕಳು ಯಾಕೆ ಇಷ್ಟೊಂದು ಅರಚುತ್ತಾರೆಂದು ಮಕ್ಕಳನ್ನು ತೂಗಿ ಮಲಗಿಸಬೇಕೆಂದು ಹೇಳಿ ಬಂಗಾರದ ತೊಟ್ಲಿನ ಒಳಗೆ ಮಕ್ಕಳನ್ನು ತೂಗುವಾಗ ಕೀವು ರಕ್ತ ಸುರಿಯುವಾಗ ತಾಯಂದಿರು ಅಸಹ್ಯಪಡಬೇಕು. ನುಗ್ಗಿದ ಊರನಲ್ಲಿ ಹಸುಮಕ್ಕಳ ಗೋರ್ಕೊಂಡು

ಹೋಗಬೇಕು. ಒಂದು ವೇಳೆ ಗ್ವಾರದ ಮಾರಮ್ಮನಿಗೂ ಹೆದರದೆ ಹೋದರೆ ಇನ್ನೊಬ್ಬಳಿದ್ದಾಳೆ ಈ ಪ್ರಪಂಚಕ್ಕೆ ದೊಡ್ಡ ಮಾರಿ ವೈದಿದ್ಯಮಾರಿ. ಇವಳಿಗೆ ೬೮ ಕೀಲು, ೮ ಕೋಟಿ ರೋಮ, ಅಂಗ ಭಂಗವೆಲ್ಲ ಕಣ್ಣು, ನವದ್ವಾರ, ಏಳುನಾಲಿಗೆ ದುರ್ಗಿ ಅವಳೇ ಈ ಪ್ರಪಂಚಕ್ಕೆಲ್ಲ ದೊಡ್ಡ ಮಾರಿ –

ಮಾರಿ ಮಾರಿಗೆಲ್ಲ ಮಗನೇ
ವಾಂತಿಭೇದಿ ಮಾರಿ ಕಾಣೋ
ಸಿದ್ದಯ್ಯ ಸ್ವಾಮಿ ಬನ್ನಿ
ಪವಾಡ ಲಿಂಗಪ್ಪ ನೀವೇ ಬನ್ನಿ
ವಾಂತಿಭೇದಿ ಮಾರಿ ಹಲಗೂರಿಗೆ
ನುಗ್ಗಿದರೆ ....
ಊರೂರ ಮುಂದ ಇರುವ
ಏಳು ಜನ ಪಾಳ್ಯೆಗಾರರು
ಬಿಟ್ಟು ಬಿಟ್ಟು ಮಾರಮ್ಮ
ಮಿಕ್ಕನಾದವರಿಗೆಲ್ಲ
ಹಿಂದ ವಾಂತಿ ಕೊಡುತ್ತೀನಿ
ಮುಂದು ವಾಂತಿ ಕೊಡುತ್ತೀನಿ
ಹಿಂದುಗಡೆ ಮೂರು ಸಾರಿ
ಮುಂದುಗಡೆ ಮೂರು ಸಾರಿ
ವಾಂತಿಭೇದಿ ಆಗೋದ್ರೆ
ನಿಮ್ಮ ಜಾತಿ ಪಾಂಚಾಳದವರಿಗೆ
ಹಾದಿಯಾಗ ಅಂಡಾಡುಸ್ತೀನಿ
ಬೀದಿಯಾಗ ಚೆಂಡಾಡುಸ್ತೀನಿ
ಸಿದ್ದಯ್ಯ ಸ್ವಾಮಿ ಬನ್ನಿ

ಆ ಮುಂಡೇ ಮಕ್ಕಳ ಹೆಣವ
ಬಂಡಿಕಟ್ಟಿ ಹೂಡುಸುತ್ತೀನಿ
ಸಿದ್ದಯ್ಯ ಸ್ವಾಮಿ ಬನ್ನಿ
ಹಲಗೂರಿನವರ ಲಿಂಗಯ್ಯೋ
ನೀವೇ ಬನ್ನಿ ....

ವಾಂತಿಭೇದಿ ಮಾರಮ್ಮನ ತಂದು ಹಲಗೂರಿನಲ್ಲಿ ಕೂಡಬಿಟ್ರೆ . ಹಿಂದ್ವಾಂತಿ ಮುಂದ್ವಾಂತಿ ಆದ ತಕ್ಷಣ ಹೆಣವನೆಲ್ಲ ಬಂಡಿ ಕಟ್ಕೊಂಡು ಬಸವನ ಬೆಟ್ಟದ ಹಳ್ಳ ಎಲ್ಲಿ ಇದೆಯೋ ಅಲ್ಲಿ ಕಾಡಿನೊಳಗೆ ಹೂಳಬೇಕು. ಊರ ಮುಂದಾಗಿರುವ ಏಳು ಜನ

ಪಾಳ್ಯಗಾರರು ಕೂತ್ಕೊಂಡು ದರ್ಬಾರು ಕಟ್ಟುವ ಚಾವಡಿಯಲ್ಲಿ ನ್ಯಾಯ ಪಂಚಾಯಿತಿ ಮಾಡುತ್ತಾವ್ರೆ . ಹೇ ನನ್ನ ಮುದ್ದೋಜಿ, ಸಿದ್ದೋಜಿ, ಪುಟ್ಟೋಜಿ, ಲಿಂಗೋಜಿ ಹಾಲಿನಂತ ಹಲಗೂರು ಚಿಲ್ಲಾಪುರಕ್ಕೆ ವಾಂತಿಭೇದಿ ರೋಗ ಬಂದ್‌ಬಿಡ್ತು. ನಮ್ಮ ಜಾತಿಯವರು ಇಷ್ಟೊಂದು ಜನ ಸಾಯುತ್ತಾ ಇದ್ದಾರಲ್ಲ? ಹೀಗೆ ಸಾಯುತ್ತಿರುವ ಜನರನ್ನು ಬದುಕಿಸಬೇಕು. ಆದ್ದರಿಂದ ಈ ರೋಗಕ್ಕೆ ಔಷಧಿ ಕೊಡುವವರು ಇನ್ನಾರಾದರು ಇದ್ದಾರಂತ. ಕೋಣದೇರಿನ ಮೇಲೆ ಚಿನ್ನ ಬೆರಳಿ ಹೊಡ್ಕೊಂಡು ಎಲ್ಲೆಲ್ಲಿ ಹೋಗಿ ತಿರುಗಿದರೂ ಈ ರೋಗಕ್ಕೆ ಔಷಧಿ ಕೊಡುವವರು ಯಾರೂ ಇಲ್ಲ. ಆವಾಗ ಮಾರಳ್ಳಿ ಪೇಟೆ ಒಳಗಡೆ ಇದ್ದರಂತೆ ವೈದ್ಯ ಪಂಡಿತರು ಅವರನ್ನಾದರೂ ಕರ್ಕೊಂಡು ಬರೋಣ ಅಂತ್ಹೇಳಿ ಮಾರಳ್ಳಿ ಮಾರಾಪುರಿಪಟ್ಣ ಚಿಕ್ಕನಾಯ್ಕನ ಹಳ್ಳಿಗೆ ಬಂದು ನೋಡ್ರಿ ಪಂಡಿತರೇ ವೈದ್ಯರೇ ಹಲಗೂರು ಚಿಲ್ಲಾಪುರಕ್ಕೆ ರೋಗ ಅಂಟುಬಿಟ್ಟಿದೆ ಕಂಡ್ರಿ. ನಾಡ ಔಷಧಿಯನ್ನಾದರೂ ಕೊಟ್ಟು ಸಾಯುತಕ್ಕಂತವರನ್ನು ಬದುಕಿಸಿಕೊಟ್ರೆ ಚಿನ್ನ ಬೆರಳಿ ಮುತ್ತು ರತ್ನ ನಿಮಗೆ ಕೊಡುತ್ತೀವಿ ಕಂಡ್ರಿ. ಹಾಗಂತ ಹಲಗೂರು ಚಿಲ್ಲಾಪುರದವರು ಬಂದು ಕರೆದರೆ ಈ ಮಾರಳ್ಳಿ ಒಳಗಡೆ ಇರುವ ಪಂಡಿತರು ವೈದ್ಯಗಾರರಿಗೆ ನಾವು ಕೊಟ್ಟಿರುವ ರೋಗದ ವಿಚಾರ ಗೊತ್ತಿಲ್ಲದೆ. ನಡ್ರಿ ಪಂಡಿತರೇ ವಿಚಾರಿಸಿ ಬರೋಣ ಚಿನ್ನ ಬೆಳ್ಳಿ ಬೇಕಾದಷ್ಟು ಕೊಡುತ್ತಾರಂತೆ. ಆ ರೋಗಕ್ಕೆ ನಾವು ನಾಡೌಷಧಿಯಾದರೂ ಕೊಟ್ಟು ಸಾಯಿತ್ತಿರುವ ಜನಾನ ಉಳಿಸಿ ಕೊಟ್ಟುಬಿಟ್ಟರೆ ಬೇಕಾದಷ್ಟು ಚಿನ್ನ ಬೆಳ್ಳಿ ತಕ್ಕೊಂಡು ಬರಬಹುದು ಅಂತ ಮಾರಳ್ಳಿ ಪೇಟೆಯಿಂದ ಹೊರಡುತ್ತಾರೆ ವೈದ್ಯರು ಪಂಡಿತರು. ಈಕಡೆ ಸಿದ್ದಪ್ಪಾಜಿ ಔಷಧಿ –

ಜಾತ್ಯವರಿಗೆ ಕೊಟ್ಟಿರುವ ರೋಗ
ಪಂಡಿತರಿಗೂ ಕೊಡುತ್ತೀನಿ
ವೈದ್ಯರಿಗೂ ಕೊಡುತ್ತೀನಿ
ಆರು ಗಜ್ಜೆ ಅಡಿಯಲ್ಲಿ
ಚೊಲ್ಲ ಚೊಲ್ಲನೇ ಹರಿಯುತ್ತೀನಿ
ಸಿದ್ದಯ್ಯ ಸ್ವಾಮಿ ಬನ್ನಿ
ಈ ಪಂಡಿತರ ನೋಡ್ಬುಟ್ಟು
ಏನ್ರಿ ಪಂಡಿತರೇ ....
ಹಲಗೂರವರ ಖಾಯಿಲೆ
ವಾಸಿಮಾಡಬೇಕಂತ ನಾವು
ಹಲಗೂರಿಗೆ ಬರುತ್ತಿದ್ದೀವಿ
ಹಲಗೂರಿಗೆ ಅಂಟಿದ ರೋಗ
ಮೂಡಲ ಗಾಳಿ ಬೀಸಿ
ಬಸವನ ಬೆಟ್ಟ ತಡೆದು
ನಮಗೆ ಅಂಟ್ಕೋ ಬಿಡ್ತು
ಇದು ಅಂಟು ರೋಗ ಕಾಂಡ್ರಿ

ಔಷಧಿ ಕೊಡೋದೇ ಗೊತ್ತಿಲ್ಲ
ಅನ್ನಬುಡುತ್ತೀನಿ ಕಾಣೋ
ಅವರು ಗುಂಡಾಪುರ ಹೊಳೆಕೆರೆ
ಒಳಗ ಒತ್ತಾರಸ್ಬುಡುತ್ತೀನಿ ಅಂದಾರಂತೆ
ಸಿದ್ದಯ್ಯ ಸ್ವಾಮಿ ಬನ್ನಿ
ಘನನೀಲಿ .....ಆ ...
ಲಿಂಗಯ್ಯ ದಯ ಮಾಡೋ ...

ಸಿದ್ದಪ್ಪಾಜಿ ಗುಂಡಾಪುರದ ಹೊಳೆಕೆರೆ ಒಳಗಡೆ ಒದ್ದಾಡಬೇಕು ಪಂಡಿತರು ವೈದ್ಯಗಾರರು. ಕರ್‍ಕೊಂಡು ಹೋಗಿರತಕ್ಕಂತ ಪಾಳ್ಯಗಾರರು ಏನ್ರೀ ರೋಗಕ್ಕೆ ಔಷಧಿ ಕೊಡುತ್ತೀವಿ ಅಂತ ಮಾರಳ್ಳಿಯಿಂದ ಚೆಂದಾಗಿಯೇ ಬಂದ್ದೀರಿ ನಮ್ಮ ಊರಿಗೆ ಅಂಟಿದ ರೋಗ ಇವರಿಗೂ ಅಂಟ್ಬುಡ್ತಲ್ಲ. ಅವರ ಹೆಂಡ್ತಿಯರು ಬಂದು ನಮ್ಮ ಗಂಡಂದಿರ ನೀವು ಕರ್‍ಕೊಂಡು ಹೋದರಲ್ಲಪ್ಪ ಎಂದು ಗುಳೋ ಅಂತ ಅತ್ತರೆ ನಾವೇನು ಮಾಡೋದು. ನಡ್ರೀ ಬಸವನ ಬೆಟ್ಟಕ್ಕೆ ಹೋಗಿ ಹಸ್ಸಿ ಬಿದುರು ಬೊಂಬನ್ನು ತರ್ಕೊಂಡು ಬಂದು ಬಿದುರು ಬೊಂಬಿನ ಮೇಲೆ ನಾವು ಕರ್‍ಕೊಂಡು ಹೋದ ತಪ್ಪಿಗೆ ಹಲಗೂರು ಚೆಲ್ಲಾಪುರದವರು ಒಂಟು ಅಂಟೆ ಒಳಗಡೆ ಜೋಳಿಕಟ್ಟಿ ಮಾರಳ್ಳಿತನಕ ಹೊರಬೇಕು. ಸಿದ್ದಪ್ಪಾಜಿ ನಿನ್ನ ಹಲಗೂರು ಚೆಲ್ಲಾಪುರದ ಪಾಂಚಾಳದವರು ಈ ರೋಗಕ್ಕೆ ಔಷಧಿ ಕೊಡುವವರು ಇನ್ನು ಯಾರಪ್ಪ ಇದ್ದಾರೆ ? ಚಿನ್ನ ಬೆಳ್ಳಿ ಮುತ್ತು ರತ್ನಗಳನ್ನು ಕೋಣನೇರಿನ ಮೇಲೆ ಬಂಡಿ ಕಟ್ಟಿ ಹೊಡ್ಕೊಂಡು ಸುತ್ತಾ ಲೋಕ ತಿರುಗಿದರೂ ನಾವು ಕೊಟ್ಟಂತ ರೋಗಕ್ಕೆ ಔಷಧಿ ಕೊಡುವವರೇ ಇಲ್ಲ. ಹೀಗೆ ಪಾಳೆಯಗಾರರು ಎಲ್ಲಲ್ಲಾಡಿ ತಿರುಗಿದರೂ ಕೊನೆಗೆ ನಮ್ಮ ಬೊಪ್ಪಣಪುರಕ್ಕೆ ಬರಬೇಕು. ಮಾಡಿದ್ದು ತಪ್ಪಾಯಿತು ಅಂತ ನಮ್ಮ ಮನೆ ಕಪ್ಪು ಧೂಳ್ತ, ನಮ್ಮ ಮನೆ ಕಂಡಾಯ, ನಮ್ಮ ಮನೆ ಬಸಪ್ಪ, ನಮ್ಮ ಮನೆ ಕಾವಿದಾಳ ಇಷ್ಟು ಹೋಗಿ ವಾಂತಿಭೇದಿ ಮಾರಮ್ಮ ನುಗ್ಗಿದ ಊರಲ್ಲಿ ಮೆರವಣಿಗೆ ಆಗೋದರೆ. ಆ ಊರಿಗೆ ನುಗ್ಗಿರುವಂತ ಮಾರಿಮಸಣಿಯರು ಎದ್ದು ಬಿದ್ದು ಓಡಬೇಕು. ಆದ್ದರಿಂದ ಹೆದರಬೇಡ ಹಲಗೂರಿಗೆ ಹೋಗಪ್ಪ ಎಂದರು ತಾಯಿದೊಡ್ಡಮ್ಮ ಆವಾಗ ಮಗನಿಗೆ ಸ್ವಲ್ಪ ಧೈರ್ಯವಾಯ್ತಂತೆ

ಹೋಗುತ್ತೀನಿ ದೊಡ್ಡಮ್ಮ
ಈ ರೀತಿಯಾಗಿ ನೀವು ಹೇಳಿದ ಮೇಲೆ
ಹಲಗೂರು ಪಾಂಚಾಳದವರ
ಮನೆಗೆ ಹೋಗುತ್ತೀನಿ ಆದರೆ ದೊಡ್ಡಮ್ಮ –
ನಿಮ್ಮ ಮನೆ ಕಂಡಾಯ
ನಿಮ್ಮ ಮನೆಯ ಜಗಟೆ
ನಿಮ್ಮ ಮನೆಯ ತ್ರಿಶೂಲ

ನಿಮ್ಮ ಮನೆಯ ಮುಳ್ಳು ಪಾವಾಡ
ಒಂದೂ ತಕ್ಕೊಂಡು ಹೋಗಲ್ಲ
ಪಂಚಾಳದವರು ನನ್ನನ್ನು ನೋಡಿ
ಮರ್ಯಾದೆಯಿಂದ ಮಾತನಾಡಿಸದೆ
ಹೋದರೆ ಚಿಂತೆ ಇಲ್ಲ
ನನ್ನ ಹೆಗಲ ಮೇಲೆ ಹೊತ್ತಿರುವ
ಕಂಡಾಯ ಜಗಟೆ ತ್ರಿಶೂಲ
ನೋಡಿ ಅಪಹಾಸ್ಯ ಮಾಡುತ್ತಾರೆ
ಏನಂತ ಅಪಹಾಸ್ಯ ಮಾಡುತ್ತಾರಪ್ಪ ಎಂದರೆ –
ನನ್ನ ಕಂಡಾಯ ನೋಡಿ
ಅವರು ದೊಡ್ಡಾರೆ ಅನ್ನುತ್ತಾರೆ
ಸಿದ್ದಯ್ಯ ಸ್ವಾಮಿ ಬನ್ನಿ
ನನ್ನ ಜಡಮುಡಿಗಳ ನೋಡಿ
ಅವರು ಸನ್ಯಾಸಿ ಅನ್ನುತ್ತಾರೆ
ಸಿದ್ದಯ್ಯ ಸ್ವಾಮಿ ಬನ್ನಿ

ನನ್ನ ಮಟ್ಟಿ ಕಪ್ಪು ನೋಡಿ
ಅವರು ಗಾಡಿ ಕಪ್ಪು ಅನ್ನುತ್ತಾರೆ
ಸಿದ್ದಯ್ಯ ಸ್ವಾಮಿ ಬನ್ನಿ

ನನ್ನ ರುದ್ರಾಕ್ಷಿ ನೋಡಿ ಅವರು
ಹರಳಕಾಯಿ ಅನ್ನುತ್ತಾರೆ
ಸಿದ್ದಯ್ಯ ಸ್ವಾಮಿ ಬನ್ನಿ

ನನ್ನ ಭಸ್ಮಂಗ ನೋಡಿ ಅವರು
ಕುಲುಮೆ ಬೂದಿ ಅನ್ನುತ್ತಾರೆ
ಸಿದ್ದಯ್ಯ ಸ್ವಾಮಿ ಬನ್ನಿ

ನನ್ನ ಕಾವಿ ಬಟ್ಟೆ ನೋಡಿ ಅವರು
ಕೆಮ್ಮಣ್ಣ ಬಟ್ಟೆ ಅನ್ನುತ್ತಾರೆ
ಸಿದ್ದಯ್ಯ ಸ್ವಾಮಿ ಬನ್ನಿ

ಅಂಥ ಹಾಸ್ಯ ಮಾಡುವರ

ಮನೆಗೆ ನಾನು ಹೇಗೆ ತಾನೇ
ಹೋಗಲಪ್ಪ ....
ಸಿದ್ದಯ್ಯ ಸ್ವಾಮಿ ಬನ್ನಿ
ದೊಡ್ಡಮ್ಮತಾಯಿ ....
ಲಿಂಗಪ್ಪ ನೀವೇ ಬನ್ನಿ

ದೊಡ್ಡಮ್ಮತಾಯಿ ಹೇಳುತ್ತಿದ್ದಾಳೆ ಅಂಥ ಅಪಹಾಸ್ಯ ಮಾಡುವರ ಮನೆಗೆ–

ಘನನೀಲಿ ಸಿದ್ದಪ್ಪಾಜಿ
ಹಾಸ್ಯ ಮಾಡಿದೋರ ಮನೆ
ನಾಶ್ನ ಮಾಡುತ್ತೀವಿ ಸಿದ್ದಪ್ಪಾಜಿ
ಮಾಟ್ನಾ ಮಾಡಿಸೋವ್ರ ಮನೆ
ಮಾಳ ಮಾಡಿಸ್ತೀವಿ ಸಿದ್ದಪ್ಪಾಜಿ
ನಮ್ಮನ್ನು ನಂಬಿ ಯಾರು
ಸೋಮವಾರ ಶುಕ್ರವಾರ
ಮನೆ ಕೋಣೆ ತೊಳೆದು
ಗಂಧ ಕಡ್ಡಿ ಹಸ್ಸಿ
ಪರಂಜ್ಯೋತಿ ಅಂತ
ಯಾರು ಕೈಯೆತ್ತಿ ಮುಗಿಯುತ್ತಾರೋ
ಅಂತವರ ಮನೆಯನ್ನು ನಾವು
ಹಾಲು ಸಾಗರ ಮಾಡುತ್ತೀವಿ
ಹಾಸ್ಯ ಮಾಡುತ್ತಾರಂತ್ಹೇಳಿ
ಭಯಪಡಬೇಡ ಸಿದ್ದಪ್ಪಾಜಿ
ಮನೆ ಬಿರ್ದನ್ನು ಮರ್ರು
ಹೋಗಬೇಡ ಸಿದ್ದಪ್ಪಾಜಿ
ಕಂಡಾಯ ಜಾಗಟೆ ತ್ರಿಶೂಲ
ಎಲ್ಲ ತಕ್ಕೊಂಡು ನಿಮ್ಮ ಜಾತಿವಂತರ
ಮನೆಗೆ ದಯಮಾಡಪ್ಪ ಅಂದಾರಂತೆ

ಹಾಗಾದ ಮೇಲೆ ಹಲಗೂರು ಪಾಂಚಾಳದವರ ಮನೆಗೆ ಹೋಗುತ್ತೀನಿ ತಾಯಿ. ಸ್ವಲ್ಪ ಗುರುಗಳಿಗೆ ಹೇಳಿ ಭಂಗಿ ಸೊಪ್ಪು ಇಸ್ಕೊಟ್ಟುಬಿಡಿ. ಭಂಗಿ ಕುಡ್ಕೊಂಡು ಅನಂತರ ನಾನು ಹಲಗೂರು ಚಿಲ್ಲಾಪುರಕ್ಕೆ ಹೋಗುತ್ತೀನಿ ಅಂದರಂತೆ ಸ್ವಾಮಿ ಸಿದ್ದಪ್ಪಾಜಿ. ಹೌದೇನಪ್ಪ ಸಿದ್ದಪ್ಪಾಜಿ? ಹೌದು ತಾಯಿ. ಬಾರೋ ಅಂತ್ಹೇಳಿ ದೊಡ್ಡಮ್ಮತಾಯಿ ತೋಪಿನ ಕಪ್ಪಡಿಯಿಂದ ಕುರುಬರ ಮನೆಗೆ ಸಿದ್ದಪ್ಪಾಜಿಯನ್ನು ಕರ್ಕೊಂಡು ಬಂದಿದ್ದಾರೆ.

ಗುರುಗಳು ಸಿದ್ದಪ್ಪಾಜಿಯನ್ನು ನೋಡ್ಬುಟ್ಟು, ದೊಡ್ಡಮ್ಮ ಸಿದ್ದಪ್ಪಾಜಿಯನ್ನು ಬೊಪ್ಪಣಪುರ ಮಠದಲ್ಲಿ ಇರಬೇಡಿ ಅಂಥ ಹೇಳಿದ್ದೆ ಮತ್ತೆ ಬೊಪ್ಪಣಪುರಕ್ಕೆ ಯಾತಕೋಸ್ಕರ ಕರ್ಕೊಂಡು ಬಂದಿದ್ದೀರಿ ತಾಯಿ. ಅಣ್ಣಯ್ಯ ನನ್ನ ಮಗನ ಮೇಲೆ ಆ ರೀತಿ ಮಾತಾಡಬೇಡಿ. ನಾನು ಮಗನಿಗೆ ಸಮಾಧಾನ ಹೇಳಿದ್ದೀನಿ. ಮಗ ಚಿಲ್ಲಾಪುರಕ್ಕೆ ಹೋಗುತ್ತಾನಂತೆ ಅದಕ್ಕೆ ಸ್ವಲ್ಪ ಭಂಗಿ ಸೊಪ್ಪಂತೆ ಕೊಟ್ಟುಬಿಡಿ. ಭಂಗಿ ಕುಡಿಯುತ್ತೀ ಏನೋ ಸಿದ್ದಪ್ಪಾಜಿ ಹಾಗಾದ ಮೇಲೆ ಬಾರ್ರೋಪ್ಪ ಅಂತ್ಹೇಳಿ ಹುಲಿ ಚರ್ಮವನ್ನು ಹಾಸ್ಕೊಂಡು ಸ್ವಾಮಿ ಮುತ್ತಿನ ಜೋಳಿಗೆ ತೆಗೆದು ಮುಂದುಗಡೆ ಮಡಿಕೊಂಡು.

ಆರು ಖಂಡಿಗ ಗುರುವೇ
ಹುಡಿಯ ಭಂಗಿಯ ಸೊಪ್ಪು
ಮತ್ತಾರು ಖಂಡಿಗ ಹೊಗೆಯ ಸೊಪ್ಪು
ಬೆರೆಸಾವ್ರೆ ಗುರುವೇ
ಕಳ್ಳಿ ಹಾಲು ಆರುಖಂಡಿಗ
ಎಕ್ಕದಾಲು ಆರುಖಂಡಿಗ
ಹರಳೆಣ್ಣೆ ಪಚ್ಚೆಪತ್ರೆ
ಎಳೆಯನಾಗರ ವಿಶ
ನುಣ್ಣನೆಯ ತಿಳಿಯ ಒಳಗೆ
ಬೆರಸ್ಕೊಂಡು ನನ್ನಪ್ಪ
ಮಂಟೇದಲಿಂಗಯ್ಯ
ಸಿದ್ದಯ್ಯ ಸ್ವಾಮಿ ಬನ್ನಿ
ನನ್ನ ಗುರುವೇ
ಲಿಂಗಪ್ಪ ನೀವೇ ಬನ್ನಿ

ಪರಂಜ್ಯೋತಿ ವಾವನ ಮೂರುತಿ ಭಂಗಿಸೊಪ್ಪಿನ ಚಿಲುಮೆಯನ್ನು ಯಾವಾಗ ಸಿದ್ದಪ್ಪಾಜಿ ಕೈಗೆ ಕೊಟ್ಟರೋ ಆ ಗುರುಗಳು ಕೊಟ್ಟಂತ ಚಿಲುಮೆಯನ್ನು ಆ ಎರಡು ಕೈಯಿಂದ ಒಡ್ಡಿ ಪಡ್ಕೊಂಡು ಆ ಭಂಗಿ ಚಿಲುಮೆಯನ್ನು ಕೈಲಿ ಹಿಡ್ಕೊಂಡು ಉತ್ತರದೇಶದ ಕಂಡಾಯಕ್ಕೆ ಓಂ ನಮ ಶಿವಾಯಃ ಸಕಲ ಕಂಠಕ ವಿಮೋಚನವಾಗಲಿ ಪರಂಜ್ಯೋತಿ ಮಂಟೇದಲಿಂಗಯ್ಯ ಎಂಬುದಾಗಿ ಕರವೆತ್ತಿ ಕೈಮುಗಿದು ಶಿರವೆತ್ತಿ ಶರಣು ಮಾಡಿ ಸ್ವಾಮಿ ಸಿದ್ದಪ್ಪಾಜಿ –

ಒಂದು ದಮ್ಮ ಹೊಡೆದರಂತೆ
ಬಲಗಡೆಗೆ ಜೋಲುತ್ತಾರೆ
ಸಿದ್ದಯ್ಯ ಸ್ವಾಮಿ ಬನ್ನಿ

ಎರಡು ದಮ್ಮ ಹೊಡೆದರಂತೆ

ಎಡಗಡೆಗೆ ಜೋಲುತ್ತಾರೆ
ಸಿದ್ದಯ್ಯ ಸ್ವಾಮಿ ಬನ್ನಿ

ಮೂರು ದಮ್ಮ ಹೊಡೆದರಂತೆ
ಮುಂದಕ್ಕೆ ಜೋಲುತ್ತಾರೆ
ಸಿದ್ದಯ್ಯ ಸ್ವಾಮಿ ಬನ್ನಿ

ಹನ್ನೆರಡು ಹುಡಿಕಟ್ಟು ಭಂಗಿಸೊಪ್ಪು
ಸಿದ್ದಪ್ಪಾಜಿಯವರಿಗೆ ಎರಡು ದಮ್ಮಿಗೆ
ತಿರಲಿಲ್ಲ ಮೂರು ದಮ್ಮಿಗೆ ಸಾಲಲ್ಲಿ
ಮಾಯದಂತೆ ಕುಡಿದ ಕುಡಿದ
ಹೊಗೆಯನೆಲ್ಲ ಹೊಟ್ಟೆ ಒಳಗೆ
ತುಂಬ್ಕೊಂಡು ಭಂಗಿ ಕುಡಿದ
ಚಿಲುಮೆಯ ಸ್ವಾಮಿ ತಳಕೆಳಕ ಮಾಡದಾಗ
ಆರುಖಂಡಗ ಬೂದಿ ಆ ಭೂಮಿ ಮ್ಯಾಲೆ
ಸರುದೋಗಿತ್ತಂತೆ
ಸಿದ್ದಯ್ಯ ಸ್ವಾಮಿ ಬನ್ನಿ

ಯಾವಾಗ ಬೊಪ್ಪೇಗೌಡನಪುರದ ಪರಂಜ್ಯೋತಿಯವರು ನೀಲಿಸಿದ್ದಪ್ಪಾಜಿಗೆ ಭಂಗಿಯನ್ನು ಸೇದಿದರೋ ಆ ಭಂಗಿಸೊಪ್ಪಿನ ಒಳಗಡೆ ಏಳೇಳು ಹದಿನಾಲ್ಕು ನೀಲಿ ಬೆರಸಿ ಕೊಟ್ಟುಬಿಟ್ಟರಂತೆ. ಯಾಕೆಂದರೆ ಭಯಪಡುತ್ತಿದ್ದಾನೆ. ಹಲಗೂರು ಚಿಲ್ಲಾಪುರಕ್ಕೆ ಹೋಗುವುದಕೋಸ್ಕರ ನೀಲಿಸಿದ್ದಪ್ಪಾಜಿ ಈ ನೀಲಿ ಒಳಗಾದರೂ ಹೋಗಲಿ ಅಂತ ಧರೆಗೆದೊಡ್ಡವರು. ಏಳೇಳು ಹದಿನಾಲ್ಕು ನೀಲಿ ಬೆರಸಿದರಂತೆ ಏಳು ಜಾತಿ ಭಂಗಿಸೊಪ್ಪಿಗೆ. ಹದಿನಾಲ್ಕು ತರದ ನೀಲಿ ಆಸೊಂದು ನೀಲಿ, ಅವತಾರದ ನೀಲಿ, ನೀರು ಬಲದ ನೀಲಿ, ಮರ ಹತ್ತೋ ನೀಲಿ, ಕಲ್ಲು ಕಡಿಯೋ ನೀಲಿ, ತೊಪ್ಪೆ ಹುಂಡೆ ಕಂಡರೆ ಗೊಳಕ ಗೊಳಕನೇ ನುಂಗೋ ನೀಲಿ, ತಾಯಾಲ ಕಂಡರೆ ಹಲ್ಲು ಕಚ್ಚೋ ನೀಲಿ, ಎಕ್ಕದಾಲ ಕಂಡರೆ ಪಕ್ಕನೇ ಬಾಯಿ ಬಿಡೋ ನೀಲಿ, ಬರೋ ಜನಂಗಳಿಗೆಲ್ಲ ಕಲ್ಲಿಂದ ಹೊಡೆಯೋ ನೀಲಿ, ಹೋಗೋ ಜನಂಗಳಿಗೆಲ್ಲ ಕೈಯೆತ್ತಿ ಮುಗಿಯೋ ನೀಲಿ, ಹುಚ್ಚು ನೀಲಿ, ಬೆಪ್ಪು ನೀಲಿ, ಮೊಲ್ಲಾಗರದ ನೀಲಿ, ಬೊಗಲೋ ನೀಲಿ ಹೀಗೆ ಏಳೇಳು ಹದಿನಾಲ್ಕು ನೀಲಿ ಯಾವಾಗ ಬಂದಬಿಡ್ತೋ ಆಗ ಸಿದ್ದಪ್ಪಾಜಿ ಬೊಪ್ಪೇಗೌಡನ ಮಠದ ಮುಂಭಾಗದಲ್ಲಿ ತುಮ್ಮತುಮ್ಮನೆ ಕುಣಿವರಂತೆ. ನೀಲಿ ಒಳಗಡೆ ಕುಣಿತಕ್ಕಂತ ಮಗನನ್ನು ನೋಡಿದರಂತೆ ಪರಂಜ್ಯೋತಿ ಮಂಟೇಸ್ವಾಮಿ. ಅಯ್ಯೋ ದೊಡ್ಡಮ್ಮ ದೊಡ್ಡಮ್ಮ ನಿಮ್ಮ ಮಗನ ಮೊಕ ನೋಡಿ ಸ್ವಲ್ಪ ಹೊತ್ತು ಎಂದರಂತೆ.

ಅವ್ವ ಈ ರೀತಿ ಕಣ್ಣು ಬಿಡಂವ

ಹಲಗೂರವರ ಮಡಗಿನಂವ
ಸಿದ್ದಯ್ಯ ಸ್ವಾಮಿ ಬನ್ನಿ

ಇವನ ಉರಿಗಣ್ಣು ಬಿಟ್ಟಾಗಲೇ
ಉಳದಾರ ಪಾಂಚಾಳದವರು
ಸಿದ್ದಯ್ಯ ಸ್ವಾಮಿ ಬನ್ನಿ

ಇವನ ಕೆಂಡಗಣ್ಣು ಬಿಟ್ಟಾಗಲೇ
ಕೆಟ್ಟೋದರು ಪಾಂಚಾಳದವರು
ಸಿದ್ದಯ್ಯ ಸ್ವಾಮಿ ಬನ್ನಿ
ಲಿಂಗಪ್ಪ ನೇವೇ ಬನ್ಯೋ

ತನ್ನ ಜಾತಿಯವರ ಹಲಗೂರಿಗೆ
ಹೋಗಬೇಕಂತ ನೀಲಿ ಸಿದ್ದಪ್ಪಾಜಿ
ಉಗ್ರಾಣದ ಮನೆಗೆ ನಮ್ಮ
ಸ್ವಾಮಿಯವರು ದಯಮಾಡುತ್ತಾರೆ
ಸಿದ್ದಯ್ಯ ಸ್ವಾಮಿ ಬನ್ನಿ
ಮುಕ್ಕಣ್ಣ ಕುಲಾವಿ
ಉಗ್ರಾಣ ಮನೆ ಒಳಗೆ
ಬಿಂಕು ಬಿರುದು ಧರಸಾವ್ರೆ
ನೀಲಿ ಸಿದ್ದಪ್ಪಾಜಿ
ಎಡದ ಹೊನ್ನ ಪಾದಕ್ಕೆ ಕಬ್ಬಿಣದ ಎಳಭಾರಿ
ಬಲದ ಹೊನ್ನ ಪಾದಕ್ಕೆ ಮಂಡೆ ಉರಿಯ ಬಿರುದು
ಮುಳ್ಳಿನ ಪಾವಾಡ ಪಾದದಲ್ಲಿ ತುಳ್ಕೊಂಡು
ಹುಲಿಯ ಚರ್ಮ ಹುಟ್ಕೊಂಡು
ನೀಲಿ ಸಿದ್ದಪ್ಪಾಜಿ ....
ಜಗಟೆಯ ತೆಗೆದು ಬಲಗೈಲಿ ಹಿಡ್ಕೊಂಡು
ಭಾರೀ ತ್ರಿಶೂಲ ಬಲಗೈಲಿ ಹಿಡ್ಕೊಂಡು
ಜಡಮುಡಿಗಳ ಬಿಟ್ಕೊಂಡು
೭೭೭ ಕುರು ಜಡೆ ಮರುಜಡೆ ಬೆನ್ನಿನ
ಮೇಲೆ ಹರಡಾವ್ರೆ
ನೀಲಿ ಸಿದ್ದಪ್ಪಾಜಿ ....
ಸ್ವಾಮಿ ಕಕ್ಕೆಮರದ ಕಂಡಾಯ

ಎತ್ತಿ ಹೆಗಲಿಗೆ ಮಡಗಿದರಂತೆ
ಸಿದ್ದಯ್ಯ ಸ್ವಾಮಿ ಬನ್ನಿ

ಕಕ್ಕೆಮರದ ಕಂಡಾಯ
ಹೆಗಲ ಮೇಲೆ ಮಡಿಕೊಂಡು
ಪರಂಜ್ಯೋತಿ ನನ್ನಪ್ಪ ನೀಲಿಸಿದ್ದಪ್ಪಾಜಿ
ಸ್ವಾಮಿ ಉಗ್ರಾಣದ ಮನೆಯಿಂದ
ಝುಲಕ ಝುಲಕ್ಕನೆ ಬಂದಾರಂತೆ
ಸಿದ್ದಯ್ಯ ಸ್ವಾಮಿ ಬನ್ನಿ
ಘನನೀಲಿ ..... ಆಹಾ..............
ಜ್ಯೋತಿ ಲಿಂಗಯ್ಯ ಬನ್ನಿ

ಪರಂಜ್ಯೋತಿ ಘನನೀಲಿ ಸಿದ್ದಪ್ಪಾಜಿ ತಮ್ಮ ಜಾತಿವಂತರ ಹಲಗೂರು ಚಿಲ್ಲಾಮುಕ್ಕೆ ಹೋಗುವುದಕೋಸ್ಕರ ಸ್ವಾಮಿ ಉಗ್ರಾಣದ ಮನೆಯಿಂದ ಬಿಂಕು ಬಿರುದು ಲಾಂಛಾನಗಳನ್ನು ಧರಸ್ಕೊಂಡು ಸಿಂಗಾರವಾಗಿ ಸ್ವಾಮಿ ಚಿಲುಮೆಯ ಮೂರ್ತಿ ಕುರುಬೇಗೌಡರಾಯರ ಚಂದ್ರಸಾಲೆಯಿಂದ ಬಂದು ನಿಂತ್ಕೊಂಡಾಗ ದೊಡ್ಡಮ್ಮತಾಯಿ ನೋಡಿದರಂತೆ. ಆಹಾ ನನ್ನ ಮಗ ಸಿದ್ದಪ್ಪಾಜಿ ನನ್ನ ಜಾತಿವಂತರ ಹಲಗೂರಿಗೆ ಹೋಗುತ್ತಾ ಇದ್ದಾರೆ ತುಂಬ್ದ ಸೋಮವಾರ ಮಹಾ ಪುಣ್ಯ ದಿನ. ಮಗನ ಪಾದಪೂಜೆ ಚರಣಗಳಿಗೆ ನಾವು ಬೆಜ್ಜಲಿಕೆಂಡ ತುಂಬಿ ಮಡ್ಡಿ ಧೂಪ ಹಾಕಿ ಕಡ್ಡಿ ಕರ್ಪೂರದ ಮಂಗಳಾರತಿ ಬೆಳಗಬೇಕೆನ್ನುತ್ತ ತಾಯಿ ಮಣೆಯನ್ನು ತಂದು ನಡುಮನೆಗೆ ಮಡಗಿ ಬೆರಳಿ ತಟ್ಟೆ ಒಳಗಡೆ ಗಂಧದರಸ ಕಡ್ಡಿ ಕರ್ಪೂರ ಧೂಪ ಸಾಂಬ್ರಾಣಿಗಳನ್ನು ತಂದು ಆ ಸ್ವಾಮಿ ಸಿದ್ದಪ್ಪಾಜಿಯವರ ಪಾದವನ್ನು ತೊಳೆದು ರೇಚಪ್ಪಾಜಿ ಚೆನ್ನಾಜಮ್ಮ, ಮಳವಳ್ಳಿ ಸ್ವಾಮಿಯವರು, ಬೊಪ್ಪಣಪುರದ ಬುದ್ದಿಯವರು, ಜಗನ್ಮಾತೆ ದೊಡ್ಡಮ್ಮತಾಯಿ, ಪರಂಜ್ಯೋತಿ ಮಂಟೇಸ್ವಾಮಿ.

ಸಿದ್ದಪ್ಪಾಜಿ ಪಾದಚರಣಗಳಿಗೆ
ಮಂಗಳಾರತಿಯ ಬೆಳಗಿದರಂತೆ
ದೊಡ್ಡಮ್ಮಯ್ಯ .... ಆ
ಜಗನ್ಮಾತೆ ....ಆ....

ಸ್ವಾಮಿ ಸಿದ್ದಪ್ಪಾಜಿಯವರ ಪಾದಚರಣಗಳಿಗೆ ಮಂಗಳಾರತಿ ಬೆಳಗಿದರಂತೆ ದೊಡ್ಡಮ್ಮತಾಯಿ. ಕಾರ್ತಿಕಾ ಸೋಮವಾರದ ಮೊದಮೊದಲನೆಯ ದಿನ –

ಎಡಗಡೆ ಕಂಡಾಯ ....
ಬಲಗಡೆ ತಂಬೂರಿ ....
ಮಧ್ಯ ನಿಂತಾವ್ರೆ ಮಾಯ್ಕಾರ

ಬಾಳೆ ಬಾಗಿದವೋ .... ಓ .....

ಮಧ್ಯ ನಿಂತಾವ್ರೆ ಘನನೀಲಿ ಸಿದ್ದಪ್ಪಾಜಿ
ಪಾದಕ್ಕೆ ಮಂಗಳಾರತಿ ಬೆಳಗುತ್ತಾರೆ
ಬಾಳೆ ಬಾಗಿದವೋ ....

ತಿಂಗಳು ಮುಳುಗಿದವೋ ಥೈ ಥೈ ..
ರಂಗೋಲಿ ಬೆಳಗಿದವೋ
ಸಿದ್ದಪ್ಪಾಜಿಯ ಪೂಜೆಗೆಂದು
ಬಾಳೆಬಾಗಿದವೋ ....
ನಮ್ಮ ಸಿದ್ದಪ್ಪಾಜಿಯ ಪೂಜೆಗೆಂದು
ಬಾಳೆ ಬಾಗಿದವೋ ....
ಸ್ವಾಮೀ ....
ಹಾದಿಗೆ ಹಲವಾರ ..
ಬೀದಿಗೆ ಬೊಪ್ಪಣಪುರ ..
ಚಿಕ್ಕಲ್ಲೂರು ಸ್ವಾಮಿಗೆ ಗುರುಮಠ
ಬಾಳೆ ಬಾಗಿದವೋ ....
ತಿಂಗಳು ಮುಳುಗಿದವೋ ..
ರಂಗೋಲಿ ಬೆಳಗಿದವೋ..
ಸಿದ್ದಪ್ಪಾಜಿಯವರ ಪೂಜೆಗೆಂದು
ಬಾಳೆ ಬಾಗಿದವೋ ....
ನಮ್ಮ ಸಿದ್ದಪ್ಪಾಜಿಯವರ ಪೂಜೆಗೆಂದು
ಬಾಳೆ ಬಾಗಿದವೋ ....

ಯಾಕಪ್ಪ ಮಾಯ್ಕಾರ
ಮೊಕವೆಲ್ಲ ಸಪ್ಪಿಗೆ
ನೋಡಿದವರೆಲ್ಲ ನಗುತ್ತಾರೆ
ಬಾಳೆ ಬಾಗಿದವೋ ....
ನಿಮ್ಮ ನೋಡಿದೋರೆಲ್ಲ ನಗುತ್ತಾರೆ
ಬಾಳೆ ಬಾಗಿದವೋ

ಮಲ್ಲಿಗೆ ಹೂವಿನಾಗೆ
ಚೆಲ್ಲಿತು ನಿಮ್ಮ ಪರುಸೆ

ನಮ್ಮ ಚಲ್ಲಾಟಗಾರ ಮಾಯ್ಕಾರ
ಬಾಳೆ ಬಾಗಿದವೋ ..... ಓ ......
ಚಿಕ್ಕಲ್ಲೂರಿನಲ್ಲಿ ಏನಯ್ಯ ವೈಭೋಗ
ಧೂಪದ ಮಂಜು ಕವಿದಾವೋ
ಬಾಳೆ ಬಾಗಿದವೋ ....ಓ
ಸಾಂಬ್ರಾಣಿ ಗಮಲು ಕವಿದಾವೋ
ಬಾಳೆ ಬಾಗಿದವೋ ....

ತಿಂಗಳು ಮುಳುಗಿದವೋ
ರಂಗೋಲಿ ಬೆಳಗಿದವೋ
ಸಿದ್ದಪ್ಪಾಜಿಯ ಪೂಜೆಗೆಂದು
ಬಾಳೆ ಬಾಗಿದವೋ .... ಓ ..

ಆನೆ ಮೇಲೆ ಅಮ್ಮಯ್ಯ
ಕುದುರೆ ಮೇಲೆ ಸಿದ್ದಪ್ಪಾಜಿ
ಪಲ್ಲಕ್ಕಿ ಮೇಲೆ ಪರಂಜ್ಯೋತಿ
ಬಾಳೆ ಬಾಗಿದವೋ .. ಓ ..
ಪಲ್ಲಕ್ಕಿ ಮೇಲೆ ಪರಂಜ್ಯೋತಿ
ಬಾಳೆ ಬಾಗಿದವೋ

ಸ್ವಾಮಿ ನಾವು ಕೂಗುವ ಕೂಗು
ಪರಂಜ್ಯೋತಿ ಮಾಯ್ಕಾರ
ಪಾದಕ್ಕರುವಾಗಲಿ ಮಾಯ್ಕಾರ
ಬಾಳೆ ಬಾಗಿದವೋ .. ಓ ..
ನಿಮ್ಮ ಪಾದಕ್ಕರುವಾಗಲಿ ಮಾಯ್ಕಾರ
ಬಾಳೆ ಬಾಗಿದವೋ ....

ತಿಂಗಳು ಮುಳುಗಿದವೋ .. ಥೈ ಥೈ ..
ರಂಗೋಲಿ ಬೆಳಗಿದವೋ
ಪರಂಜ್ಯೋತಿ ಪೂಜೆಗೆಂದು
ಬಾಳೆ ಬಾಗಿದವೋ ....
ನಮ್ಮ ಸಿದ್ದಪ್ಪಾಜಿಯವರ ಪೂಜೆಗೆಂದು
ಬಾಳೆ ಬಾಗಿದವೋ ....

ಓ.. ಬಾಳೆ ಬಾಗಿದವೋ .. ..

ಘನನೀಲಿ ಸಿದ್ದಪ್ಪಾಜಿ ಮತ್ತು ಪರಂಜ್ಯೋತಿಯವರ ಪಾದಚರಣಗಳಿಗೆ ಒಳ್ಳೆ ಮಾತುಂಬಿದ ಕಾರ್ತಿಕಾ ದಿನ ಪಾದಪೂಜೆ ಮಾಡಿದರಂತೆ ದೊಡ್ಡಮ್ಮತಾಯಿ. ಮಡಿವಾಳ ಮಾಚಪ್ಪ ಮಡಿಬಿಡು ಎಂದಾಗ, ಆಗಬಹುದು ತಾಯಿ ಎಂದು ಮಡಿ ಬಿಟ್ಟನಂತೆ.

ಮಾತದೇವರ ಮಡಿಯ ಮೇಲೆ
ಮೆಲ್ಲ ಮೆಲ್ಲನೆ ಹೊರಟರಂತೆ
ಸಿದ್ದಯ್ಯ ಸ್ವಾಮಿ ಬನ್ನಿ
ಘನನೀಲಿ ಲಿಂಗಪ್ಪ ನೀವೇ ಬನ್ನಿ
ತೋಪಿನ ಕಪ್ಪಡಿಗೆ ಅವರು
ಮೆಲ್ಲ ಮೆಲ್ಲನೆ ಬಂದರಂತೆ
ಸಿದ್ದಯ್ಯ ಸ್ವಾಮಿ ಬನ್ನಿ
ಪಾವಾಡ ಲಿಂಗಪ್ಪ ನೀವೇ ಬನ್ನೋ
ಬನ್ನೋ ....

ತೋಪಿನ ಕಪ್ಪಡಿಗೆ ಸಿಂಗಾರವಾಗಿ ಚಿಲುಮೆಯ ಮೂರ್ತಿ ಸಿದ್ದಪ್ಪಾಜಿ ಬಂದು ನಿಂತ್ಕೊಂಡರಂತೆ. ದೊಡ್ಡಮ್ಮತಾಯಿ ನನ್ನ ಜಾತಿವಂತಿಕರ ಹಲಗೂರು ಚಿಲ್ಲಾಪುಕ್ಕೆ ನಾನು ಯಾವ ಕಡೆಯಿಂದ ಎಲ್ಲಾಣೆ ಹೊಗಬೇಕು ಎಂದು ಕೇಳಿದಾಗ ತಾಯಿ ಹಲಗೂರು ಚಿಲ್ಲಾಪುರಕ್ಕೆ ಹೋಗಬೇಕಾದರೆ ನಾನು ದಾರಿಯನ್ನು ಹೇಳುತ್ತೀನಿ ಕೇಳಪ್ಪ ಸಿದ್ದಪ್ಪಾಜಿ –

ಒನಗಳ್ಳಿ ಒಕ್ರಳ್ಳಿ
ಹಳ್ಳಾದ ದಾಸಳ್ಳಿ
ಬಲಗಡೆ ಬಿಟ್ಕೊಂಡು
ನಂಜನಾಯ್ಕನ ದೊಡ್ಡಿ
ಎಡಗಡೆ ಬಿಟ್ಕೊಂಡು
ಮಗನೇ ದೇವಪಟ್ಟಣದ ಮಾರ್ಗ
ಹೋಗುತ್ತಾದೆ ಹೋಗು ಮಗನೇ
ಸಿದ್ದಯ್ಯ ಸ್ವಾಮಿ ಬನ್ನಿ
ಘನನೀಲಿ ಆಹಾ ....
ಲಿಂಗಯ್ಯ ದಯಮಾಡೋ
ದೇವಪಟ್ಟಣದ ಮಾರ್ಗ
ಕಂಚುಗಳ್ಳಿ ಪೊರಗಾಣೆ
ಕೆಂಕೆರೆ ಏರಿಗಾಣೆ

ಕಾಡು ಬಸಯ್ಯನ ಕಟ್ಟೆ
ಹಾದಿ ಒಳಗೆ ನನ್ನಪ್ಪ
ನೀಲಿ ಸಿದ್ಧಪ್ಪಾಜಿ ..
ಎಳೆಯ ಕುಂದೂರು ಬೆಟ್ಟದಮೇಗೆ
ಹೋಗುತ್ತಾದೆ ಹೋಗು ಮಗನೇ
ಸಿದ್ದಯ್ಯ ಸ್ವಾಮಿ ಬನ್ನಿ
ಎಳಯ ಕುಂದೂರು ಬೆಟ್ಟ
ಎಡಗಡೆಗೆ ಬಿಟ್ಕೊಂಡು
ದಾಸನಾಯ್ಕನದೊಡ್ಡಿ
ಬಂಡುತ್ತಳ್ಳಿ ಬಾಚನಳ್ಳಿ
ಮಾರ್ಗವಾಗಿ ನನ್ನ ಕಂದ
ಒಡೆಹಳ್ಳಿ ಮಾರ್ಗವಾಗಿ
ಹೇಳಲೋ ನನ್ನ ಕಂದ
ದೊಡ್ಡನಳ್ಳಿ ಚೆಂದಳ್ಳಿ ಮಾರ್ಗ
ಹೋಗುತ್ತಾದೆ ಹೋಗು ಮಗನೇ
ಸಿದ್ದಯ್ಯ ಸ್ವಾಮಿ ಬನ್ನಿ
ಅರಸಳ್ಳಿಗವಿಯ ಎಡಗಡೆ ಬಿಟ್ಕೊಂಡು
ಕೇಳಪ್ಪ ನನ್ನ ಕಂದ ನೀಲಿ ಸಿದ್ಧಪ್ಪಾಜಿ
ಮಗನೇ ಕಾಡಿನ ಬೋರೆ ಮೇಲೆ
ಹೋಗುತ್ತಾದೆ ಹೋಗು ಮಗನೇ
ಸಿದ್ದಯ್ಯ ಸ್ವಾಮಿ ಬನ್ನಿ
ಘನನೀಲಿ .... ಆಹಾ ....
ಲಿಂಗಯ್ಯ ದಯ ಮಾಡೋ

ಸಿದ್ಧಪ್ಪಾಜಿ ಹೇಳಿದ್ದು ಗೊತ್ತಾಯಿತ್ತೇನಪ್ಪ. ದೊಡ್ಡಮ್ಮ ಹೋಗುತ್ತೀನಿ ತಾಯಿ

ದೊಡ್ಡಮ್ಮ ಬದುಕಿ ಬಂದರೆ
ನಾ ನಿನ್ನ ಮಗ
ಹಲಗೂರಿನಲ್ಲಿ ಆಚಾರರು ಮಾಡ್ತಕ್ಕಂತ
ಪವಾಡಕ್ಕೆ ನಾನೇನಾದರೂ
ಮಾಡಲಾರದೆ ಸತ್ತೋದರೆ
ನಾ ಬ್ರಹ್ಮನ ಮಗ ದೊಡ್ಡಮ್ಮ
ಲಿಂಗಯ್ಯ ನೀವೇ ಬನ್ನಿ

ಹಲಗೂರಲ್ಲಿ ಏನಾದರು ನಾನು ಸತ್ತೋದರೆ ಆಚಾರರ ಮಗ ಸತ್ತೋದರು ಅಂತ್ಹೇಳಿ ನೀವು ಮರತು ಬಿಡಬೇಡಿ. ರಾಜಬೊಪ್ಪಣಪುರದ ಮಠದಲ್ಲಿ ಹಿಂಪಾರ್ಶ್ವದಲ್ಲಿ ಜೀವದ ಗೋರಿಯನ್ನು ಗೇಯಿಸ್ಕೊಂಡು ಮೂರೊತ್ತು ನೀವು ಗಂಧದ ಕಡ್ಡಿ ಹಸ್ಸಿ ಪೂಜೆ ಮಾಡ್ಕೊಳ್ಳಿ ದೊಡ್ಡಮ್ಮ. ಸಿದ್ದಪ್ಪಾಜಿ, ಯಾತಕೋಸ್ಕರವಾಗಿ ಈ ಮಾತು ಆಡುತ್ತಿದ್ದೀಯಾ ಕಂದ ? ನಿನ್ನ ಹಲಗೂರು ಚೆಲ್ಲಪುರದಲ್ಲಿ ಪ್ರಾಣ ತೆಗೆಯದು ಬಿಟ್ಟರೆ ಈ ಬೊಪ್ಪೇಗೌಡನ ಪುರದಲ್ಲಿ ಪ್ರಾಣ ಇಟ್ಕೊಂಡು ಧರೆಯ ಮೇಲೆ ಬಾಳುತ್ತಾಳೆ ಬದುಕುತ್ತಾಳೆ ಅಂದ್ಕೊಂಡೆಯಾ ಸಿದ್ದಪ್ಪಾಜಿ ? ನಾನು ಬದುಕುವುದಿಲ್ಲ ಸಿದ್ದಪ್ಪಾಜಿ. ನಿನ್ನ ಪ್ರಾಣ ಹೋದ ಮಾರನೆಯ ದಿನ ನನ್ನ ಪ್ರಾಣ ತೊರೆದು ಬಿಡುತ್ತೀನಪ್ಪ ಈ ಬೊಪ್ಪಣಪುರದಲ್ಲಿ ಆ ರೀತಿ ಮಾತ್ನಾಡಬೇಡ. ಕಬ್ಬುಣ ಹೋಗಿ ಕೇಳು ಆಯುಧಾನ ಮಾಡಸ್ಕೊಡಿಯಂತ ನಿಮ್ಮ ಮತದವರಿಗೆ ಹೋಗಿ ಕೇಳು. ಏನಾದರೂ ಆಯುಧಾನ ಮಾಡ್ಸಿಕೊಟ್ರೆ ತಕ್ಕೊಂಡು ಬಾ. ಒಂದು ವೇಳೆ ಕೊಡಲ್ಲ ಅಂತ ಅವರೇನಾದರೂ ಮಾತ್ನಾಡಿದರೆ ತಿರುಗಿ ಮಾತನಾಡದೆ ಬಂದುಬಿಡಪ್ಪ. ಆಗಬಹುದು ಅಂತ್ಹೇಳಿ ಸಿದ್ದಪ್ಪಾಜಿ ಕಟ್ಟಕಡೆಯದಾಗಿ ಬೊಪ್ಪೇಗೌಡನ ಪುರಕ್ಕೆ ಕರವೆತ್ತಿ ಕೈಮುಗಿದು ಶಿರವೆತ್ತಿ ಶರಣು ಮಾಡಿ ಹೊರಟಿದ್ದಾರೆ.

ಜಗತ್ ಜನನಿ ಯಾವ ದೇವತೆ
ದೇವಮಾನವರನ್ನು ನಂಬಬಹುದಲ್ಲ
ನನ್ನಪ್ಪೋ ....
ಈ ಬೊಪ್ಪಣಪುರದ ಅಪ್ಪನಿಗೆ
ನಾನು ಮಗನಾಗಿ ಬಂದ ಪಾಪ
ಆಹಾ ....
ಈ ಕಂಡಾಯ ಹೊತ್ತವರಿಗೆ ನಾನು
ಈ ತಂಬೂರಿ ಹೊತ್ತವರಿಗೆ ನಾನು
ಈ ಬೊಪ್ಪಣಪುರದ ಪರಂಜ್ಯೋತಿಗೆ ನಾನು
ಶಿಷ್ಯನಾಗಿ ಬಂದ ಅಪರಾಧ ಧರೆಯಲ್ಲುಂಟಪ್ಪೋ
ಗುರುವೇ ಗುರು ತಂದೆ .... ಆಹಾ ....

ನನ್ನ ಜಾತಿವಂತಿಕರ ಹಲಗೂರು ಚೆಲ್ಲಾಪುರಕ್ಕೆ ಹೋಗುವುದಕೋಸ್ಕರವಾಗಿ ಸ್ವಾಮಿ ಸಿದ್ದಪ್ಪಾಜಿ ಕಣ್ಣಲ್ಲಿ ಕಣ್ಣೀರು ತುಂಬ್ಕೊಂಡು ಶೋಕ ಮಾಡ್ಕೊಂಡು ತೊಟ್ಟಿಕ್ಕುವ ಕಣ್ಣೀರು ಅವರ ಎದೆಯ ಮೇಲೆ ತೊಟೆ ತೊಟೆಯಂತ ತೊಟ್ಟಾವಂತೆ. ಕೆರೆ ಏರಿಯ ಮೆಲೆ ನಿಂತ್ಕೊಂಡು ಕಟ್ಟಕಡೆಯದಾಗಿ ಬೊಪ್ಪೇಗೌಡನ ಪುರಕ್ಕೆ ಎರಡು ಕರಗಳನೆತ್ತಿ ಕೈಮುಗಿದು ಸ್ವಾಮಿ ಸಿದ್ದಪ್ಪಾಜಿ

ತನ್ನ ಮತದವರ ಮನೆಗೆ ಸ್ವಾಮಿ
ಪ್ರಯಾಣ ಮಾಡಿದ್ದಾರೆ

ಸಿದ್ದಯ ಸ್ವಾಮಿ ಬನ್ನಿ
ನನ್ನ ಗುರುವೇ ಲಿಂಗಪ್ಪ ನೀವೇ ಬನ್ನಿ
ಒನಗಳ್ಳಿ ಒಕ್ರರಳ್ಳಿ
ಬಲಗಡೆಗೆ ಬಿಟ್ಕೊಂಡು
ನಂಜನಾಯಕನ ದೊಡ್ಡಿ
ಎಡಗಡೆಗೆ ಬಿಟ್ಕೊಂಡು
ಸ್ವಾಮಿ ದೇವಪಟ್ಟಣದ ಮಾರ್ಗವಾಗಿ
ನಮ್ಮ ದೇವರು ದಯ ಮಾಡುತ್ತಾರೆ
ಸಿದ್ದಯ್ಯ ಸ್ವಾಮಿ ಬನ್ನಿ
ದೇವಪಟ್ಟಣದ ಮಾರ್ಗ
ನೀಲಿ ಸಿದ್ದಪ್ಪಾಜಿ ಕಂಚಗಳ್ಳಿ ಪುರಗಾಣೆ
ಹಂಚಿಪುರದ ಮಲಗಾಣೆ..............
ಸ್ವಾಮಿ ಎಳೆಯ ಕುಂದೂರು ಬೆಟ್ಟದ
ಮರೆಯ ಸ್ವಾಮಿ ಮೆಲ್ಲ ಮೆಲ್ಲನೆ ಬರುತ್ತಾರೆ
ಸಿದ್ದಯ್ಯ ಸ್ವಾಮಿ ಬನ್ನಿ
ಕುಂದೂರು ಬೆಟ್ಟದ ಮಾರ್ಗವಾಗಿ
ಯಾರೋ ಬರುತ್ತಿದ್ದಾರೆ ಎಂದು
ನೋಡಿದಳಂತೆ ಮಾರಿ
ಕುಂದೂರು ಬೆಟ್ಟದ ಮಾರಿ
ಮೊದಲನೆಯ ಗೇಟು ಹಲಗೂರಿಗೆ
ಕುಂದೂರು ಬೆಟ್ಟ ಆ ಬೆಟ್ಟದ ಮೇಲೆ
ಹಲಗೂರು ಚಿಲ್ಲಾಪುರದ ಪಾಂಚಾಳದವರು

ಮಾರಿಯರನ್ನು ತಂದು ಕಾವಲು ಮಡಗಿದರಂತೆ. ಯಾರಾದರೂ ಪರದೇಸಿಗಳು ಹಲಗೂರು ಚಿಲ್ಲಾಪುರದ ಕಡೆಗೆ ಬಂದದ್ದಾದರೆ ಅವರನ್ನು ಬಿಡಬೇಡ ಮಾರಮ್ಮ ಅಂತ್ಹೇಳಿ ಕಾವಲು ಮಡಗಿದರಂತೆ –

ನಮ್ಮ ಸ್ವಾಮಿ ಬರುವುದನ್ನು
ಕಣ್ಣಲ್ಲಿ ಕಂಡುಕೊಂಡಳಂತೆ
ಕುಂದೂರು ಬೆಟ್ಟದ ಮಾರಿ
ಸಿದ್ದಪ್ಪಾಜಿಯ ನೋಡಿದಳಂತೆ
ಕಿರ್ಕಾಕು ಹೊಡೆದಾಳಂತೆ
ಸಿದ್ದಯ್ಯ ಸ್ವಾಮಿ ಬನ್ನಿ
ನಮ್ಮ ಸಿದ್ದಪ್ಪಾಜಿಯವರ ಹತ್ತಿರ

ಮೂರು ಏಳುತ್ತ ಏಳುವಾಗ ಅಕ್ಕನಿಗೆ ಹೊಡೆದಂತೆ ಏಟು ಕುರುಬರದೊಡ್ಡಿ ಮಾರಮ್ಮನಿಗೆ ಆರೇಟು ಬಿದ್ದೋಯ್ತಂತೆ. ಅಕ್ಕನಿಗೆ ಹೊಡೆದುದ್ದು ತಂಗಿಗೆ ತಟ್ಟಬಡ್ತು ಅಂತ ಹಿರೀಕರು ಮಾತನ್ನು ಹೇಳ್ತಾರೆ. ಹಾಗೆ ಕುಂದೂರು ಬೆಟ್ಟದ ಮಾರಮ್ಮನಿಗೆ ಬಿದ್ದ ಏಟು ಯಾವಾಗ ತಂಗ್ಯಮ್ಮನಿಗೂ ಆರೇಟು ಬಿದ್ಬಿಡ್ತೋ ಕುರುಬರದೊಡ್ಡಿ ಮಾರಮ್ಮ ಕಿಟ್ಟೋ ಅಂತ ಕಿರ್ಚ್ಬಿಟ್ಟಳಂತೆ. ಕಿಟ್ಟೋ ಅಂತ ಕಿರ್ಚ್ಬಿಟ್ಟಾಗ ಮೂಡಲ ಮುತ್ತತ್ತಿರಾಯ ಮೂರು ನಾಮದ ದಾಸಪ್ಪ ಕುರುಬರದೊಡ್ಡಿಗೆ ಮೂರು ಮೂರು ದಿನಕ್ಕೆ ಹೋಗುತ್ತಾ ಬರುತ್ತಾ ಇದ್ದನಂತೆ. ಕುರುಬರದೊಡ್ಡಿ ಗ್ರಾಮಕ್ಕೆ ಭಿಕ್ಷೆ ಮಾಡಬೇಕು ಅಂತ್ಹೇಳಿ ಈ ಕುರುಬರದೊಡ್ಡಿಗೆ ಮಾರಮ್ಮ ಕೂಗಿದಂತ ಕೂಗಿಗೆ ಮುತ್ತತ್ತಿರಾಯ ಹೆದರ್ಬಿಟ್ಟು ಮಾರಮ್ಮ ನನ್ನನ್ನೇನೋ ಕಂಡ್ಕೊಂಡು ಬಿಟ್ಟಿದ್ದಾಳೆ ಅದಕ್ಕೆ ದಾಸಪ್ಪ ಬರುತ್ತಾ ಇದ್ದಾನೆ ಅಂತ್ಹೇಳಿ ಕೂಗುತ್ತಾ ಅರಚ್ತಾ ಇದ್ದಾಳೆ ಅಂದ್ಬುಟ್ಟು ಮುತ್ತತ್ತಿರಾಯ ಮುಂದುಬಿದ್ದು ಓಡ್ಬಿಟ್ಟನಂತೆ. ಆವಾಗ ಈಕಡೆ ಮುತ್ತತ್ತಿರಾಯ ಬಿದ್ದೋಡ್ಬಿಟ್ಟಾಗ ಕುರುಬರದೊಡ್ಡಿ ಮಾರಮ್ಮ ಅರಚುವಳಂತೆ ಕಿರ್ರೋ ಅಂತ ಕುಂದೂರು ಬೆಟ್ಟ ಮಾರಮ್ಮನ ಮೈಮೇಲೆ ಕಪ್ಪು ಧೂಳ್ತವಿಟ್ಟಾಗ ತಣ್ಣಗಾಯ್ತೋ ಆ ಕುರುಬರದೊಡ್ಡಿ ಮಾರಮ್ಮನ ಶರೀರವೂ ತಣ್ಣಗಾಯ್ತಂತೆ. ಹೌದೇ ಮಾರಮ್ಮ ? ನೋಡು ಹೇಳುತ್ತೀನಿ ಮೊದಲು ನಿನ್ನ ತಂಗಿ ಕುರುಬರದೊಡ್ಡಿ ಮಾರಮ್ಮನಿಗೂ ಅರಿವಾಗಿದೆ.

ಹಾಗಿದ್ದ ಮೇಲೆ ನೀವು ಇವತ್ತು ಇಲ್ಲೇ ನೆಲೆಗೊಳ್ಳಿ ನಾನು ಮತ್ತು ನನ್ನ ತಂಗಿ ಇಬ್ರೂ ಬಸವನಬೆಟ್ಟಕ್ಕೆ ಹೋಗಿ ೧೨ ಕಟ್ಟು ಭಂಗಿ ಸೊಪ್ಪು ತಕ್ಕೊಂಡು ಬಂದು ಕುರುಬರದೊಡ್ಡಿ ಊರ ಮುಂದಿರತಕ್ಕಂತ ಬೇವಿನ ಜಗಲಿ ಕಟ್ಟೆ ಮೇಲೆ ತಂದು ಇಟ್ಟಿರುತ್ತೇವೆ. ನೀವು ಬರುವುದನ್ನೇ ಕಾಯ್ಕೊಂಡು ಕುಂತಿರುತ್ತೇವೆ. ನೀವು ಹಲಗೂರಿಗೆ ಹೋಗುವಾಗ ಕುರುಬರದೊಡ್ಡಿ ಮಾರ್ಗ ಬಂದ್ಬಿಡಿ ಸ್ವಾಮಿ. ಹೌದೇ ? ಮಾರಮ್ಮ ಆಗಿದ್ಮೇಲೆ ನಡಿ ನಾನು ಬರುತ್ತೀನಿ ಅಂತ್ಹೇಳಿ ಕುಂದೂರು ಬೆಟ್ಟದ ಕುಂಡಮಾರಮ್ಮನ ನಡಿ ಅಂತ ಕಳುಗಿಸಿದರಂತೆ ಸಿದ್ದಪ್ಪಾಜಿ. ಆ ಮಾರಮ್ಮನ ಮುಂದಕ್ಕೆ ಕಳುಗಿಸ್ಬುಟ್ಟು ಸ್ವಾಮಿ. ಕುಂದೂರು ಬೆಟ್ಟದ ಮೇಲೆ ನಿಂತ್ಕೊಂಡು ರಾಜಬೊಪ್ಪಣಪುರಕ್ಕೆ ಕರವೆತ್ತಿ ಕೈಮುಗಿದು. ತಾಯಿದೊಡ್ಡಮ್ಮ ನನ್ನ ಜಾತಿವಂತರ ಹಲಗೂರು ಚಿಲ್ಲಾಪುರಕ್ಕೆ ಹೋಗುತ್ತೀನಿ ತಾಯಿ ಎಂಬುದಾಗಿ ಸ್ವಾಮಿ ಸಿದ್ದಪ್ಪಾಜಿ.

ಕುಂದೂರು ಬೆಟ್ಟದಿಂದ
ಬಸವನಬೆಟ್ಟಕ್ಕೆ ಹಾರಿದರಂತೆ
ಸಿದ್ದಯ್ಯ ಸ್ವಾಮಿ ಬನ್ನಿ
ನನ್ನ ಗುರುವೇ ..
ಲಿಂಗಪ್ಪ ನೀವೇ ಬನ್ನಿ
ಕುಂದೂರು ಬೆಟ್ಟದಿಂದ
ಬಸವನಬೆಟ್ಟಕ್ಕೆ ಸ್ವಾಮಿ

ಆ ಕುಣಿತ್ತಿದ್ದ ಮಾರಿ ಮುಂದಲೆ
ಜಾಡಿಸಿ ಹಿಡಿದರಂತೆ
ಸಿದ್ದಯ್ಯ ಸ್ವಾಮಿ ಬನ್ನಿ
ನನ್ನ ಗುರುವೆ ಲಿಂಗಪ್ಪ ನೀವೇ ಬನ್ನಿ
ಕುಳಿತಿರವಂತ ಅರಮನೆ ಮುಂದಲೆ
ಎಡಗೈಲಿ ಹಿಡ್ಕೊಂಡರಂತೆ
ನೀಲಿ ಸಿದ್ದಪ್ಪಾಜಿ ಮುತ್ತಿನ ಜೋಳಿಗೆ
ಒಳಗೆ ಉರುಸಿಂಗಿ ಕೊರಡ
ಎಳ್ಕೊಂಡು ಆ ಕುಣಿತ್ತಿದ್ದ ಮಾರಿಯ
ಮೈ ಮೇಲೆ ಸ್ವಾಮಿ ಮೂರು ಎಳೆತ
ಎಳೆದರಂತೆ
ಸಿದ್ದಯ್ಯ ಸ್ವಾಮಿ ಬನ್ನಿ
ಪವಾಡಲಿಂಗಪ್ಪ ನೀವೇ ಬನ್ನಿ

ಯಾವಾಗ ಉರಸಿಂಗಿ ಕೊರಡವನ್ನು ಎಳ್ಕೊಂಡು ಮಾರಮ್ಮನ ಮೈಮೇಲೆ ಮೂರು ಎಳೆತ ಎಳೆದು ಬಿಟ್ಟರೋ ಸ್ವಾಮಿ ಹೊಡೆದಂತಹ ಏಟಿನಿಂದ ಮೈಯೆಲ್ಲ ಉರಿ ಬಂದುಬಿಡ್ತು.

ಅಯ್ಯಯ್ಯೋ ಪರಂಜ್ಯೋತಿ
ಉರಿಜ್ವಾಲೆ ತಪ್ಪಿಸಪ್ಪ ಗುರುವೇ
ಇಂಥ ಕೆಟ್ಟ ದೇವರಂತಿದ್ದರೆ
ನಿಮ್ಮ ಪಾದದಾಣೆ
ನಿಮ್ಮ ಬಳಿಗೆ ಬರುತ್ತಿರಲಿಲ್ಲ ಬುದ್ಧಿ
ಉರಿ ಜ್ವಾಲೆ ತಪ್ಪಿಸಿಯಂತ
ಮಾರಮ್ಮ ಕೂಗ್ಕೊಂಡಾಗ

ಆವಾಗ ಕಪ್ಪು ಧೂಳ್ತವನ್ನು ತೆಗೆದು ಮಾರಮ್ಮನ ಮೈಮೇಲೆ ಇಟ್ರಂತೆ. ಮಾರಮ್ಮನ ಮೈಮೇಲೆ ಇಟ್ಟಾಗ ಉರಿತ್ತಿದ್ದಂತಹ ಶರೀರ ತಣ್ಣಗಾಯ್ತು. ಆವಾಗ ಬುದ್ಧಿ ತಾವು ಯಾರು? ಬೊಪ್ಪೇಗೌಡನಪುರದಲ್ಲಿ ಇರತಕ್ಕಂತ ಮಂಟೇಸ್ವಾಮಿಯವರ ಮಗ ನೀಲಿ ಸಿದ್ದಪ್ಪಾಜಿ. ಈಕಡೆ ಎಲ್ಲಿಗೋಗುತ್ತಾ ಇದ್ದೀರಿ ಬುದ್ದಿ ಹೇ ಮಾರಿ ಬೊಪ್ಪಣಪುರದ ನನ್ನ ಗುರುಗಳಾದ ಮಂಟೇಸ್ವಾಮಿಯವರಿಗೆ ಮಠಮನೆ ಕಟ್ಟಿಸಿ ಕೊಡಬೇಕಂತೆ. ಅದಕ್ಕೆ ಹಲಗೂರು ಚಿಲ್ಲಾಪುರಕ್ಕೆ ಹೋಗುತ್ತಾ ಇದ್ದೀನಿ ಕಾಣೆ. ಯಾತಕ್ಕೋಸ್ಕರ ಬುದ್ದಿ ಕಬ್ಬಿಣದ ಲಾಂಛಾನವನ್ನು ಮಾಡಿಸಬೇಕು ನನ್ನ ಜಾತಿ ಪಾಂಚಾಳದವರಿಂದ. ಹೌದೇನು ಆಗಲಿ ಬುದ್ದಿ. ಗುರುದೇವ ಮುಂದುಗಡೆ ಗೇಟ್ಲಿ ನನ್ನ ತಂಗಿ ಕುರುಬರದೊಡ್ಡಿ ಮಾರಮ್ಮ ಇದ್ದಾಳೆ ಅವಳಿಗೆ ನೀವು ಹೊಡೆಯಬೇಡಿ. ಅಯ್ಯೋ ನಿನಗೆ ಹೊಡೆದಂತ ಏಟು

ಪಾಂಚಾಳಗೇರಿಯವನೋ ? ಬೆಟ್ಟದ ಮೇಲೆ ನಿಂತ್ಕೊಂಡು ಬಾ .. ಬಾ .. ಮಾಡ್ಕೊಟ್ಟೇನು ? ಅಂತ ಕೂಗುತ್ತಾವ್ನೆ ಇನ್ನೇನು ಗತಿ ಅಂತ್ಹೇಳಿ ಮುತ್ತತ್ತಿರಾಯ–

ಒದ್ರ ಗೆಜ್ಜೆ ಎತ್ತಿ ಹಿಡ್ಕೊಂಡು
ಬಿದ್ದು ಕೆಳಗು ಓಡುತ್ತಾನೆ
ಸಿದ್ದಯ್ಯ ಸ್ವಾಮಿ ಬನ್ನಿ
ಮುತ್ತತ್ತಿರಾಯ ಲಿಂಗಪ್ಪ ನೀವೇ ಬನ್ನಿ

ಹೀಗೆ ಮುತ್ತತ್ತಿರಾಯ ಓಡೋಗ್ತಿದ್ದಾಗ ಅಯ್ಯಯ್ಯೋ ಭಾವ ನಾನು ಕಾಣಯ್ಯ ನಿಂತ್ಕೊಳ್ಳಿ ಅಂದರಂತೆ. ಆವಾಗ ಇವನಿಗೆ ಒಳ್ಳೆ ಸ್ವಚ್ಛವಾಗಿ ಅಕ್ಷರಗಳು ಕೇಳಿದಾಗ ಯಾರು ನನ್ನ ಭಾವ ಅಂತ ಕರೆಯುತ್ತಾ ಇದ್ದಾನಲ್ಲ ಈ ಕಾಡೊಳಗೆ ಯಾರಿರಬಹುದು ಎಂದು ಹೋಗುತ್ತಿದ್ದ ಮುತ್ತತ್ತಿರಾಯ ನಿಂತ್ಕೊಂಡನು. ಸಿದ್ದಪ್ಪಾಜಿ ಕೆಳಗಡೆ ಇಳಿದು ಬಂದು ಮುತ್ತತ್ತಿರಾಯನ ಕೈಹಿಡ್ಕೊಂಡರಂತೆ. ಭಯಪಟ್ಕೊಂಡು ಮುತ್ತತ್ತಿರಾಯ ಯಾರಪ್ಪ ನೀನು ? ಅಯ್ಯೋ ಭಾವ ನನ್ನ ಪರಿಚಯ ಗೊತ್ತಿಲ್ಲವೇ ? ರಾಜಬೊಪ್ಪಣಪುರದ ಮಂಟೇಸ್ವಾಮಿಯವರ ಮಗ ನೀಲಿ ಸಿದ್ದಪ್ಪಾಜಿ. ಓಹೋ ! ಸಿದ್ದಪ್ಪಾಜಿ ಅನ್ನುವವನು ನೀನೇನಾ ? ಹೌದು ಕಾಣಪ್ಪ. ಪರಂಜ್ಯೋತಿ ಮಂಟೇಸ್ವಾಮಿಯವರಿಗೆ ನಾನು ಮಠಮನೆ ಕಟ್ಟಿಸಬೇಕಾಗಿದೆ. ಅದಕ್ಕೆ ನನ್ನ ಗುರು ಹಲಗೂರು ಚಿಲ್ಲಾಪುರ ಪಾಂಚಾಳರ ಮನೆಗೆ ಹೋಗಿ ಆಯುಧಾನಗಳನ್ನು ಮಾಡ್ಕೊಂಡು ಬಾ ಅಂತ ಕಳುಗಿದ್ದಾರೆ ಅದಕ್ಕೆ ನಾನು ಹೋಗ್ತಾ ಇದ್ದೀನಿ. ಬನ್ನಿ ಭಾವ ನನ್ನ ಸಂಗಡ ನೀವೂ. ಹಲಗೂರಿಗೆ ಹೋಗೋಣ. ನೋಡಿ ತ್ರೇತಾಯುಗದಲ್ಲಿ ದ್ವಾಪರಯುಗದಲ್ಲಿ ದಾಸಪ್ಪನವರಿಗೂ ಗುಡ್ಡಪ್ಪನವರಿಗೂ ಹೊಂದಾಣಿಕೆ ಇರಲ್ಲ. ಏಕೆ ? ಗುಡ್ಡರ ಮನಸ್ಥಾನದ ಹೆಣ್ಣನ್ನು ದಾಸರು ತಕ್ಕೊಂಡು ಹೋಗೋಂಗಿಲ್ಲ. ಏಕೆಂದರೆ ದಾಸಗಳು ನುಗ್ಗಿದ ಮನೆ ನಾಶ ಅಂತ. ಅಂದರೆ ಒಕ್ಕಲುತನವೇ ನಾಶನಾ ? ಇಲ್ಲ. ದಾಸಗಳನ್ನು ಹರಿಯ ಪೂಜೆ ಮಾಡಿ ಅವನ ಮನೆಗೆ ಕರ್ಕೊಂಡು ಹೋಗಿ ನುಗ್ಗಿಸಿಬಿಟ್ಟರೆ, ಮನೆಯಲ್ಲಿರುವ ಮಾಟ ಮಂತ್ರ ಮದ್ದು ಮಾಯ ಗಾಳಿ ಪೀಡೆ ಎಲ್ಲಾ ನಾಶ ಅಂತ ಅರ್ಥ. ಭಾವ ಈ ಕಲಿಯುಗದಲ್ಲಿ ನಾವಿಬ್ಬರೂ ಭಾವ ಭಾಮೈಕಳಾಗಿ ಹಲಗೂರು ಚಿಲ್ಲಾಪುರಕ್ಕೆ ಹೋಗೋಣ. ಅಯ್ಯೋ ಸಿದ್ದಪ್ಪಾಜಿ ಅಂಥ ಊರಿಗೆ ಕರೆಯಬಹುದಾ ? ನಾನು ಈಗ ೧೫ ದಿವಸಕ್ಕೆ ಹೋಗಿದ್ದೆ. ಆ ಊರಿಗೆ ಯಾರೂ ಹೋಗಿಲ್ಲವಂತೆ. ನಾನಾದರೂ ಹೊರಟು ಹೋಗಿ ಮಹಾ ಪಾಳ್ಯಗಾರರ ಮನೆ ಮುಂದೆ ನನ್ನ ಶಂಕವನ್ನು ಉರ್ ಅಂತ ಊರ್ಬ್‌ಬಿಟ್ಟೆ, ಅಪ್ಪಪ್ಪಾ ಎಲ್ಲಿ ನಿಂತಿದ್ದರೋ ಅವರ ಮನೆ ಹಾಳಾಗ ಏಳು ಜನರು ಬೆರಣಿ ತೋರಣ ತಕ್ಕೊಂಡು ಓಡಸ್ಕೊಂಡು ಬಂದ್ಬಿಟ್ರು. ಆ ಕೆಟ್ಟ ಊರಿಗೆ ನನ್ನ ಬಾ ಎಂದು ಕರೆಯುತ್ತಾ ಇದ್ದಿ ಅಲ್ಲ ಸಿದ್ದಪ್ಪಾಜಿ.

ಆ ಕೆಟ್ಟೂರ ಸುದ್ದಿಯ
ಕೇಳಿದರೆ ನನ್ನಪ್ಪ

ಹುಲ್ಲೆಕರ ಹಾರದಾಗೆ
ಮಾಯ್ಕಾರ ನನ್ನಪ್ಪ
ಮಾಯದಲ್ಲಿ ಹಾರಿದರಂತೆ
ಬಸವನ ಬೆಟ್ಟದ ದಟ್ಟಡವಿ
ಯಾರೆಂದರೆ ಯಾರಿಲ್ಲ
ಅಕ್ಷಿ ಪಕ್ಷಿಗಳ ಸುಳಿವಿಲ್ಲ
ನರಮನುಷ್ಯರ ಸುಳಿವಿಲ್ಲ
ಒಬ್ಬರೇ ಒಬ್ಬರು ಸ್ವಾಮಿ
ಬಸವನ ಬೆಟ್ಟದ ಮೇಲೆ
ನಿಂತ್ಕೊಂಡು ನನ್ನಪ್ಪ
ನಾಲ್ಕು ಮೂಲೆ
ಎಂಟು ದಿಕ್ಕು ದಿಟ್ಟಾಯಿಸಿ
ನೋಡುತ್ತಾರೆ ..
ಸಿದ್ದಯ್ಯ ಸ್ವಾಮಿ ಬನ್ನಿ
ಮಾರಿಯರ ಗಂಡ ..

ಯಾವಾಗ ಸಿದ್ದಪ್ಪಾಜಿ ಬಸವನಬೆಟ್ಟದ ಮೆಲೆ ನಿಂತ್ಕೊಂಡು ನಾಲ್ಕು ದಿಕ್ಕು ಎಂಟು ಮೂಲೆಯನ್ನು ನೋಡುತ್ತಿರುವಾಗ ಮುತ್ತತ್ತಿರಾಯ ಬೆಳಬೆಳಿಗೆ ಎದ್ದು ನೆನ್ನೆ ದಿನ ಇದ್ದುಬಿಟ್ಟಿದ್ದೀನಿ ಅಂತ್ಹೇಳಿ ಕುರುಬರದೊಡ್ಡಿ ಮಾರಮ್ಮನ ಕೂಗ್ಕೊಂಡು ಶಂಕು ಜಾಗಟೆ ಬೋನಾಶಿ ಅಂತ್ಹೇಳಿ ಮುತ್ತತ್ತಿರಾಯ ಬೆಟ್ಟದ ಕೆಳಗಡೆ ಬರುತ್ತಿರುವುದನ್ನು ನೋಡಿದರಂತೆ ಸ್ವಾಮಿಯವರು. ಅಯ್ಯಯ್ಯೋ ಯಾವ ಯಾವ ಕಡೆ ಬಿದ್ದೋಗಿದೆಯೋ ಶಂಕು ಜಾಗಟೆ ಬೋನಾಶಿ ಅಂತ್ಹೇಳಿ ಮುತ್ತತ್ತಿರಾಯ ಬೆಟ್ಟದ ಮೇಲೆ ನಿಂತಿರತಕ್ಕಂತ ಸಿದ್ದಪ್ಪಾಜಿ ಆಕಸ್ಮಿಕವಾಗಿ ತಿರುಗಿ ನೋಡಿದರಂತೆ. ಮುತ್ತತ್ತಿರಾಯನನ್ನು ನೋಡಬಿಟ್ರು. ಓಹೋ ಈ ಬಸವನಬೆಟ್ಟದ ಕಾಡಿನೊಳಗೆ ಯಾರೂ ಇಲ್ಲ ಅಂತ ತಿಳ್ಕೊಂಡಿದ್ದೆ ಆದರೆ ಯಾವನೋ ಒಬ್ಬ ಈ ಬೆಟ್ಟದ ಕೆಳಗೆ ಬರುತ್ತಾ ಇದ್ದಾನಲ್ಲ ಅಂತ ಸಿದ್ದಾಪ್ಪಾಜಿ. ಆ ಬೆಟ್ಟದ ಮೇಲೆ ನಿಂತ್ಕೊಂಡು ಆಹಾ .. ಇವರು ಯಾರೋ ಅಂತ ತಿಳ್ಕೋಬಿಟ್ಟಿದೆ. ಅಯ್ಯೋ ನಮ್ಮ ಭಾವ ಬರುತ್ತಾ ಇದ್ದಾರೆ ಎಂಬುದಾಗಿ ನೀಲಿಸಿದ್ದಪ್ಪಾಜಿ ಬೆಟ್ಟದ ಮೇಲೆ ನಿಂತ್ಕೊಂಡು ಜೋರಾಗಿ ಒಂದು ಸಾರಿ ಭಾವ .... ಯಾವಾಗ ಆ ರೀತಿ ಕೂಗಿಬಿಟ್ಟರೋ ಆವಾಗ ಈ ಮುತ್ತತ್ತಿರಾಯನ ಕಿವಿಗೆ ಏನು ಕೇಳ್ಬಿಡ್ತು. "ವ" ನ ಅಕ್ಷರ ಕೇಳಲಿಲ್ಲ. ಈ ಬೆಟ್ಟದ ಪ್ರತಿಧ್ವನಿಯಿಂದ ಭಾವ ಅಂದಿದ್ದು ಇವರ ಕಿವಿಗೆ ಬಾ .. ಬಾ.. ಮಾಡ್ಕೊಟ್ಟೇನು ಎಂದು ಕೇಳ್ಬಿಡ್ತು. ಅಪ್ಪಪ್ಪ ನಿನ್ನೆ ದಿನ ನೋಡಿದರೆ ಕುರುಬರದೊಡ್ಡಿ ಮಾರಮ್ಮನ ಕಾಟ ಏನು ಕಿಟ್ಬೋ ಅಂತ ಕಿರುಚ್ಬುಟ್ಟು ಇವತ್ತು ಇವರು ಯಾರೋ ಹಲಗೂರು ಚಿಲ್ಲಾಪುರದ

ಅವಳು ಓಡೋಡಿ ಬರುತಾವ್ಳೆ
ಸಿದ್ದಯ್ಯ ಸ್ವಾಮಿ ಬನ್ನಿ
ಮಾರಮ್ಮ .... ಓಹೋ.....
ಲಿಂಗಯ್ಯ ದಯ ಮಾಡೋ ..

ಯಾವಾಗ ಕುಂದೂರು ಬೆಟ್ಟದ ಮಾರಮ್ಮನಿಗೆ ಸಿದ್ದಪ್ಪಾಜಿ ಸ್ವಾಮಿ ಎನ್ನುವುದು ಗೊತ್ತಾಗಿಲ್ಲವಂತೆ. ಯಾವುದೋ ಪರದೇಸಿ ಮುಂಡೇಮಗ ಈಕಡೆ ಬರುತ್ತಾ ಇದ್ದಾನಲ್ಲ ಅಂತ್ಹೇಳಿ ಮಾರಮ್ಮ ಓಡಸ್ಕೊಂಡು ಬಂದು ಸಿದ್ದಪ್ಪಾಜಿಯವರ ಮುಂದೆ ಜಗ್ಗು ಜಗ್ಗುನೇ ಕುಣಿವುಳಂತೆ. ಹೇ ಪರದೇಸಿ ಕಂತೆ ಬೊಂತೆನೆಲ್ಲ ಕಳೆದುಬಿಡೋ ನಿನ್ನನ್ನು ಒಂದೇ ತುತ್ತಿಗೆ ನುಂಗಿ ಬಿಡುತ್ತೀನಿ. ಮಾರಮ್ಮನ ಆರ್ಭಟ ನೋಡ್ಬುಟ್ಟು ಸ್ವಾಮಿ ಮಾಯ್ಕಾರ ಆಗಲಿ ಮಾರಮ್ಮ ನೀನು ನುಂಗುತಕ್ಕಂತವ್ಳೆ ಬಿಡತಕ್ಕಂತವಳಲ್ಲ. ಆದರೆ ನನ್ನದೊಂದು ಆಸೆ ಮಾರಮ್ಮ ಊರೂರ ಮೇಲೆ ಮಾರಿಹಬ್ಬ ಚಂದ ಚಂದ ಅನ್ತಾರೆ. ಮಾರಿಕುಣಿತ ಅದರಲ್ಲೂ ಆನಂದ ಅನ್ತಾವ್ರೆ.

ನಿನ್ನ ಮಾರಿ ಕುಣಿತ ಕುಣಿಯವ್ವ
ನನ್ನ ಕಣ್ಣಾರೆ ನೋಡುತ್ತೀನಿ
ಸಿದ್ದಯ್ಯ ಸ್ವಮಿ ಬನ್ನಿ
ಮಾರಮ್ಮ ತಾಯಿ ....
ಲಿಂಗಪ್ಪ ನೀವೇ ಬನ್ನಿ ..

ಹೌದಾ ಪರದೇಸಿ? ಆಗಲಿ ಕಾಣೋ ಅಂತ್ಹೇಳಿ ಮಾರಮ್ಮ ಕುಣಿಯುತ್ತಾಳೆ.

ಉಟ್ಟಿರುವ ಸೀರೆ
ಒಳಗುಂಡುಡಗೆ ಕಟ್ಕೊಂಡು
ನಮ್ಮ ಸಿದ್ದಪ್ಪಾಜಿಯವರ ಮುಂದೆ
ಜಗ್ಗು ಜಗ್ಗುನೇ ಕುಣಿಯುತ್ತಾಳೆ
ಸಿದ್ದಯ್ಯ ಸ್ವಾಮಿ ಬನ್ನಿ
ಮಾರಮ್ಮ ತಾಯಿ
ಲಿಂಗಪ್ಪ ನೀವೇ ಬನ್ನಿ
ಕುಣಿಯುವಂತ ಮಾರಿ
ನೋಡಿದರಂತೆ ಸ್ವಾಮಿ
ನೀಲಿ ಸಿದ್ದಪ್ಪಾಜಿ ಆಹಾ.......
ಮಂತ್ರಿಸಿದರೆ ನಾನು ಮಾವಿನಕಾಯಿ
ಬೀಳೋದಿಲ್ಲ ಮೆಲ್ಲಗೆ ಮಾತಾಡಿದರೆ
ಈ ಮುಂಡೇ ಬಗ್ಗುವಳಲ್ಲ
ಎಂಬುದಾಗಿ ಸ್ವಾಮಿ ನೀಲಿ ಸಿದ್ದಪ್ಪಾಜಿ

ನೀಲಿ ಸಿದ್ದಪ್ಪಾಜಿ
ಹಿಂದು ಮುಂದು ಗೊತ್ತಿಲ್ಲ
ಪಾಳ್ಯಗಾರರ ಹೆಸರು ಕೇಳಿದರೆ
ಸಿದ್ದಯ್ಯ ಸ್ವಾಮಿ ಬನ್ನಿ
ಅಯ್ಯಯ್ಯೋ ಗುರುವೆ
ಲಿಂಗಯ್ಯ ನೀವೇ ಬನ್ನಿ
ಅಂತ ಪಾಳ್ಯಗಾರರ ಊರಿಗೆ
ಕರೆಯ ಬೇಡಿ ನಿಮ್ಮ ಪಾದ
ಸಿದ್ದಯ್ಯ ಸ್ವಾಮಿ ಬನ್ನಿ

ಮುತ್ತತ್ತಿರಾಯ ನನ್ನನ್ನು ಮಾತ್ರ ಹಲಗೂರು ಚಿಲ್ಲಾಪುರಕ್ಕೆ ಕರೆಯಬೇಡಿ. ಆಗ ಸಿದ್ದಪ್ಪಾಜಿ ಭಾವ ಹಲಗೂರಿಗೆ ಬರನಿಲ್ಲ ಅಂತ ಅಂದ್ರೂ ಕುರುಬರದೊಡ್ಡಿಗಾದರೂ ಬನ್ನಿ. ಏಕೆ ? ಆ ಮಾರಮ್ಮ ಭಂಗಿ ಕುಡ್ಕೊಂಡು ಹೋಗಿರಿ ಬನ್ನಿ ಅಂತ ಕರೆದಿದ್ದಾಳೆ. ಅಯ್ಯೋ ನನ್ನ ಕಂಡರೆ ಆಗಲ್ಲವಲ್ಲ ಅವಳಿಗೆ ಸಿದ್ದಪ್ಪಾಜಿ. ನೋಡು ಭಾವ ಮಾರಮ್ಮನನ್ನು ನಾನು ನೋಡಿಕೊಳ್ಳುತ್ತೇನೆ ಬನ್ನಿ ಅಂತ್ಹೇಳಿ ಇಬ್ರೂ ಭಾವಭಾಮೈಕ ಬಂದರಂತೆ.

ಬಸವನ ಬೆಟ್ಟ ಬಿಟ್ಟಾರಂತೆ
ಕುರುಬರ ದೊಡ್ಡಿಗೆ ಬರುತ್ತಾರೆ
ಸಿದ್ದಯ್ಯ ಸ್ವಾಮಿ ಬನ್ನಿ
ಪವಾಡ ಲಿಂಗಪ್ಪ ನೀವೇ ಬನ್ನೋ
ಕುರಬರದೊಡ್ಡಿಗೆ ಬಂದು
ಬೇವಿನ ಜಗಲಿಕಟ್ಟೆಯ ಮೇಲೆ
ಹಾಸಿದರಂತೆ ಹುಲಿ ಚರ್ಮ
ಹರಡಿದರಂತೆ ಊದ್ಕಡ್ಡಿ
ಪವಾಡಲಿಂಗಯ್ಯ ನೀವೇ ಬನ್ನಿ

ಸಿದ್ದಪ್ಪಾಜಿಯವರು ಕುರುಬರದೊಡ್ಡಿಯ ಊರ ಮುಂದಿರುವ ಬೇವಿನ ಮರದ ಜಗಲಿಯ ಮೇಲೆ ಹುಲಿ ಚರ್ಮ ಹಾಸ್ಕೊಂಡು ಕುಳಿತುಕೊಂಡರಂತೆ. ಮುತ್ತತ್ತಿರಾಯ ಮುಂದ್ಗಡೆ ಕೂತ್ಕೊಂಡರಂತೆ. ಮಾರಮ್ಮ ಭಂಗಿ ಸೊಪ್ಪನ್ನು ತಂದು ಸಿದ್ದಪ್ಪಾಜಿಗೆ ಕೊಟ್ಟಳಂತೆ. ಸಿದ್ದಪ್ಪಾಜಿ ಭಂಗಿ ಸೊಪ್ಪನ್ನು ಅಂಗೈಲಿ ಇಟ್ಟು ಗಸಗಸನೇ ತಿಕ್ಕಿ ಗಾಂಜಮಿಟ್ಟ ಮಾಡಿ, ಚಿಲುಮೆ ಒಳಗಡೆ ತುಂಬ್ಕೊಂಡು ಸ್ವಾಮಿ ಸಿದ್ದಪ್ಪಾಜಿ–

ಒಂದು ದಮ್ಮ ಎಳೆದರಂತೆ
ದೊಡ್ಡಮ್ಮತಾಯಿನ ನೆನೆದರಂತೆ
ಸಿದ್ದಯ್ಯ ಸ್ವಾಮಿ ಬನ್ನಿ

ಬನ್ನೋ ....

ಅಪ್ಪ ಎರಡು ದಮ್ಮ ಎಳೆದರಂತೆ
ಸ್ವಾಮಿ ರೇಚಪ್ಪಾಜಿಯ ನೆನೆದರಂತೆ
ಸಿದ್ದಯ್ಯ ಸ್ವಾಮಿ ಬನ್ನಿ
ಬನ್ನೋ ....

ಮೂರು ದಮ್ಮ ಎಳೆದರಂತೆ
ಪರಂಜ್ಯೋತಿ ಅಂದಾರಂತೆ
ಸಿದ್ದಯ್ಯ ಸ್ವಾಮಿ ಬನ್ನಿ
ನನ್ನ ಗುರುವೇ ಲಿಂಗಯ್ಯ ನೀವೇ ಬನ್ನಿ
ಬನ್ನೋ ....

ಯಾವಾಗ ಸಿದ್ದಪ್ಪಾಜಿ ಭಂಗಿಯನ್ನು ಸೇದಿದರೋ ಆಗ ಮುತ್ತತ್ತಿರಾಯ ಸುಮ್ನೆ ಮುಂದುಗಡೆ ಕೂತ್ಕೊಂಡು ನೋಡ್ತಾ ಇದ್ದರಂತೆ. ಭಾವ ಜೊತೆಯಲ್ಲಿ ಕರ್ಕೊಂಡು ಬಂದು ನಿಮ್ಮ ದ್ರೋಹ ಬಗೆಯಬಾರದು. ಪಂತಿ ಒಳಗಡೆ ವಂಚನೆ ಮಾಡಿದವನ ಮೆಚ್ಕೋದಿಲ್ಲ ಸರ್ವಜ್ಞ ಆದ್ದರಿಂದ ನೀವು ಸ್ವಲ್ಪ ಭಂಗಿ ಸೇವ್ನೆ ಮಾಡಿ ಎಂದರಂತೆ. ಆಗ ಮುತ್ತತ್ತಿರಾಯ ಅಯ್ಯೋ ನನಗೆ ಯಾವಾಗಲೂ ಭಂಗಿ ಕುಡಿದು ಅಭ್ಯಾಸವಿಲ್ಲ ಎಂದನು. ಬೇಟೆಮಣೆ ಹಾಡೋದೆಂದರೆ ಚನ್ನಾಗಿ ಹಾಡುತ್ತೀನಿ. ಏನು ಹಾಗಂದರೆ – ದಾಸಗಳೆಲ್ಲ ಕಲ್ಲೆಪುರಿ ಗುಡ್ಡೆಹಾಕ್ಕೊಂಡು ನಡು ರೋಡ್ನಲ್ಲಿ ಆ, ಓ, ಪರಾಕ್ .. ಅನ್ನುವವರು.

ನೀವು ಹೇಳುವಾಗ ನನಗೂ ಸ್ವಲ್ಪ ಕೊಡಪ್ಪ ರುಚಿ ಪಚಿ ಹೆಂಗಿದೆ ನೋಡೋಣ ಅಂದರಂತೆ ಮುತ್ತತ್ತಿರಾಯ. ಆಗ ಸಿದ್ದಪ್ಪಾಜಿ ಸ್ವಲ್ಪ ಭಂಗಿ ಸೊಪ್ಪು, ಸ್ವಲ್ಪ ಹೊಗೆ ಸೊಪ್ಪು , ಪಚ್ಚಪತ್ರೆ, ಹರನಾಗರ ವಿಶ ಬೆರಸಿ ಮುತ್ತತ್ತಿರಾಯನಿಗೆ ಗಾಂಜಮಿಟ್ಟ ಮಾಡಿ ಕೊಟ್ಬಿಟ್ಟರಂತೆ. ಮೂಡಲ ಮುತ್ತತ್ತಿರಾಯ ಎಂದೆಂದೂ ಭಂಗಿ ಕುಡಿದವನಿಲ್ಲ.

ಒಂದು ದಮ್ಮು ಎಳೆದರಂತೆ
ಬುಕ್ಕ ಬುಕ್ಕನೇ ಕೆಮ್ಮುತ್ತಾರೆ
ಸಿದ್ದಯ್ಯ ಸ್ವಾಮಿ ಬನ್ನಿ
ಮುತ್ತತ್ತಿರಾಯ ....
ಲಿಂಗಯ್ಯ ದಯ ಮಾಡೋ ..
ಎರಡು ದಮ್ಮು ಎಳೆದರಂತೆ
ಕರಿಗುಳ್ಳೆ ಹೊಂಟೋದವಂತೆ
ಬಿಳಿಗುಳ್ಳೆ ಬಂದೋದವಂತೆ
ಸಿದ್ದಯ್ಯ ಸ್ವಾಮಿ ಬನ್ನಿ

ಪಾವಾಡ ಲಿಂಗಯ್ಯ ನೀವೇ ಬನ್ನ್ಯೋ ..

ಮುತ್ತತ್ತಿರಾಯನನ್ನು ನೋಡ್ದರಂತೆ ಸಿದ್ದಪ್ಪಾಜಿ ಉಸರು ಪಸರು ಒಂದೂ ಇಲ್ಲವಂತೆ. ಮುತ್ತತ್ತಿರಾಯನನ್ನು ಹೀಗೆ ಕಾಯ್ದುಕೊಂಡರೆ ಹಲಗೂರಿಗೆ ಹೋಗುವುದು ಯಾವಾಗ ? ಪವಾಡ ಗೆದ್ದು ಕಬ್ಬಿಣ ಪಡೆದು ಮಠಮನೆ ಕಟ್ಟುವುದು ಯಾವಾಗ ? ಎಂದ್ಕೊಂಡು ಸಿದ್ದಪ್ಪಾಜಿ ಕಪ್ಪು ಧೂಳ್ತವನ್ನು ತಂದು ಮುತ್ತತ್ತಿರಾಯನ ತಲೆ ಮೇಲೆ ಇಟ್ಟರಂತೆ. ನೆತ್ತಿಗೆ ಏರಿದ ಮತ್ತೆಲ್ಲ ಮೆಲ್ಲಗೆ ಇಳಿದು ಹೊಯ್ತಂತೆ. ಓ ಪರಾಕ್ ಓ ಗೋವಿಂದ ನಾರಾಯಣ ಎಂದು ಎದ್ದು ಕುಳಿತ್ಕೊಂಡವ್ನೆ.

ಕುರುಬರದೊಡ್ಡಿ ಬಿಟ್ಟಾರಂತೆ
ಬಸವನಬೆಟ್ಟಕ್ಕೆ ಬರುವರಂತೆ
ಸಿದ್ದಯ್ಯ ಸ್ವಾಮಿ ಬನ್ನಿ
ಘನನೀಲಿ .... ಆ ....
ಲಿಂಗಯ್ಯ ದಯ ಮಾಡೋ ..

ಭಾವಭಾವೈಕ್ಕಳಿಬ್ಬರು ಬಸವನಬೆಟ್ಟದ ಮೇಲೆ ನಿಂತ್ಕೊಂಡು ಸುತ್ತ ನೋಡುತ್ತಾ ಇರುವರಂತೆ ನಾಲ್ಕು ದಿಕ್ಕು ಎಂಟು ಮೂಲೆಯ ಅಗ್ನಿ ಮೂಲೆ ಒಳಗೆ ನೋಡ್ಬಿಟ್ಟರಂತೆ ಭಾವ ಭಾವ ಅದು ಯಾವೂರು ಅದು ಕಾಣುತ್ತಿದೆಯಲ್ಲ ಆ ಊರೇ ಹಲಗೂರು ೭ ಬೀದಿ, ಚಿಲ್ಲಾಪುರ ೭ ಬೀದಿ, ನಿನ್ನ ಜಾತಿ ಮತದವರು ೭೭೦ ಕುಲಮತದ ಪಾಂಚಾಳರು. ಮಧ್ಯದ ತಿಟ್ಟಲ್ಲಿ ಕೂತ್ಕೊಂಡು ಉದ್ಯೋಗ ಮಾಡುವವರು. ಭೂಮಿಯನ್ನು ಅಗದು ಭೂಮಿ ಒಳಗೆ ಇರತಕ್ಕಂತ ಉಂಡೆ ಕಬ್ಬಿಣ ತೆಗೆಸಿ, ಅದನ್ನು ತಿವಿ ಒಳಗಡೆ ಹಾಕಿ ಕಾಯಿಸಿ ಆಯುಧಾನಗಳನ್ನು ಮಾಡುವ ತಿಟ್ಟು ಅಂದರೆ ಅವರ ದರ್ಬಾಕಟ್ಟೆ ಚೌಡಿ. ೭೭೦ ಕುಲುಮೆಯಲ್ಲಿ ಅದರ್ ಕಿಡಿ ಅದರುತ್ತಾ ಉದುರ್ ಕಿಡಿ ಉದುರುತ್ತಾ ಇದೆ. ನೋಡಪ್ಪ ಅದೇ ನಿನ್ನ ಹಲಗೂರು ಚಿಲ್ಲಾಪುರ ಬೀದಿ ಅಂದಾರಂತೆ.

ಒಬ್ಬರಿಗಿಂತ ಇಬ್ಬರು ಲೇಸು
ಹಬ್ಬ ಮಾಡೋದಕ್ಕಿಂತ
ಮದುವೆ ಮಾಡೋದು ಲೇಸು

ಕಬ್ಬಿಣ ಪಡೆದು ಮಠಮನೆ ಕಟ್ಟಿಸಿ ಆದ ಮೇಲೆ ನನ್ನ ಗುರು ಮಂಟೇಸ್ವಾಮಿ ನನ್ನ ಪೂರ್ವ ದಿಕ್ಕಿನಲ್ಲಿ ಇರತಕ್ಕಂತ ಚಿಕ್ಕಳ್ಳಿ ಎಂಬ ಗ್ರಾಮ ಚಿಕ್ಕಲ್ಲೂರಿನಲ್ಲಿ ನಾನು ದೇವರಾಗಿ ನೆಲೆಗೊಂಡಾಗ ಹುಣ್ಣಿಮೆಯ ಮೊದ್ ಮೊದಲನೆಯ ದಿನ ಚಂದ್ರಮಂಡಲ ಅಂತ ಜಗನ್‌ಜ್ಯೋತಿ ಹತ್ತಿಸುತ್ತಾರೆ ಆ ಚಂದ್ರಮಂಡಲ ಅನ್ನುವುದು ಚೆನ್ನಾಜಮ್ಮನಿಗಾಗಲಿ. ಎರಡನೆಯ ದಿನಕ್ಕೆ ದೊಡ್ಡೋರ ಸೇವೆ ಅಂತ ಮಾಡುತ್ತಾರೆ ಅನ್ನ ಪಾಯಸ ಊಟ ಅದು ಧರೆಗೆದೊಡ್ಡವರಿಗೆ ಮತ್ತು ರೇಚಪ್ಪಾಜಿಯವರಿಗೆ ಮತ್ತು ದೊಡ್ಡಮ್ಮತಾಯಿ ಈ ಮೂರು ಜನಕ್ಕೂ ಪ್ರಿಯವಾಗಲಿ. ಮೂರನೆಯ ದಿನಕ್ಕೆ ನೋಡಿ ಭಾವ ಬಂದ

ಯಾತ್ರಿಕರೆಲ್ಲ ಭಕ್ತಾದಿಗಳೆಲ್ಲ ಮುಡಿ ಸೇವೆ ಕೊಡುತ್ತಾರೆ. ಆ ಮುಡಿಸೇವೆ ಅನ್ತಕ್ಕಂತದ್ದು ಮಡಿವಾಳ ಮಾಚಪ್ಪನಿಗೆ ಆಗಲಿ. ಅದಾದ ಮೇಲೆ ನಾಲ್ಕನೆಯ ದಿನಕ್ಕೆ ನೋಡಿ ಭಾವ ನನಗಾಗುತ್ತದೆ. ಏನಪ್ಪ ಆಗುತ್ತದೆ ನಿನಗೆ ? ಅಲ್ಲಿ ಬಂದಿರತಕ್ಕಂತ ಭಕ್ತಾಧಿಗಳೆಲ್ಲ ಮಾಡುವ –

ಭಂಗಿಸೇವೆ ನನಗಾಗಲಿಯಪ್ಪ
ಮಣೆಸೇವೆ ನಿಮಗಾಗಲಿಯಪ್ಪ
ಸಿದ್ದಯ್ಯ ಸ್ವಾಮಿ ಬನ್ನಿ
ಚಿಕ್ಕಲ್ಲೂರಿನ ಒಳಗೆ ನನ್ನ ಗುಡಿ
ಹಿಂಪಾರ್ಶ್ವದಲ್ಲಿ ನಿಮಗೊಂದು
ಅಂಕಣದ ಗುಡಿಯ ಕಟ್ಟಿಸಿ
ಕೊಡುತ್ತೀನಿ ಭಾವ
ಭಕ್ತಾಧಿಗಳ ಕೈಲಿ ಮುತ್ತೈದೆಸೇವೆ
ಅಂತ ಮಾಡಿಸ್ತೀನಿ ಭಾವ ಎಂದಾರಂತೆ
ಸಿದ್ದಯ್ಯ ಸ್ವಾಮಿ ಬನ್ನಿ
ಚಿಕ್ಕಲ್ಲೂರಯ್ಯ ....
ಲಿಂಗಯ್ಯ ದಯ ಮಾಡೋ ..

ಭಾವ ನಿಮಗೆ ಮುತ್ತತ್ತಿರಾಯ ಸೇವೆ ಅಂತ ಒಂದು ಸೇವೆ ಮಾಡಿಸ್ತೀನಿ ಚಿಕ್ಕಲ್ಲೂರಲ್ಲಿ. ಆಗಲಪ್ಪ ಅಂತ್ಹೇಳಿದ ಮೇಲೆ ಮುತ್ತತ್ತಿಗೆ ದಯಮಾಡುತ್ತಾರೆ. ಸಿದ್ದಪ್ಪಾಜಿ ಒಬ್ಬರೇ ಬಸವನ ಬೆಟ್ಟದ ಹಬ್ಬಿನ ಹೊಂಗೆಮರದ ತೋಪಿನ ಮಲ್ಲಮ್ಮನ ಮಡುವಿನಲ್ಲಿ ಮಡಿ ಮಾಡಿ ಮೀದು ಮಡಿಗಳನ್ನು ಉಟ್ಟು. ಜೊತೆಯಲ್ಲಿ ತಕ್ಕೊಂಡು ಹೋಗಿರತಕ್ಕಂತ ಕಂಡಾಯವನ್ನು ಬೆಳಗಿವಾಗ ಭಾವ ಹೋಗಲಾ, ಅಪ್ಪ ಹೋಗೋದು ಹೋಗುತ್ತಾ ಇದ್ದೀಯ ? ಒಂದು ಮಾತು ಹೇಳುತ್ತೀನಿ ಕೇಳಪ್ಪ. ಏನ್ ಭಾವ ? ಭಾಗ್ಯವಂತರ ಬೀದಿಗೆ ಹೋಗಿ ನೀನು ಭಿಕ್ಷೆ ಕೇಳಬೇಕಾದರೆ, ನೋಡೋ ಇದೊಂದು ತಂಬೂರಿಯನ್ನು ಕೊಡುತ್ತೀನಿ ತಕ್ಕೊಂಡು ಹೋಗಪ್ಪ. ಈ ತಂಬೂರಿ ಬಾರಿಸ್ಕೊಂಡು ನಿಮ್ಮ ಜಾತಿಯವರ ಬೀದಿಯಲ್ಲಿ ಭಿಕ್ಷೆ ಕೇಳು ಅಂತ ಮೂಡಲ ಮುತ್ತತ್ತಿರಾಯನಿಗೆ ಸಿದ್ದಪ್ಪಾಜಿಯವರು ತಂಬೂರಿ ಅದರ ಜೊತೆಗೆ ಚಿಟಕಿದಾಳವನ್ನು ಕೊಟ್ಟು ಬಸವನಬೆಟ್ಟದ ಮೇಲೆ ಕಕ್ಕೆ ಹೂವುಗಳನ್ನು ತಂದು ಕಂಡಾಯವನ್ನು ಚಿತ್ರಿಸಿ ಹೂವು ಹೊಂಬಾಳೆ ಮಾಡಿ ಸಿಂಗಾರವಾಗಿ ತನ್ನ ಜಾತಿವಂತಿಕರ ಹಲಗೂರು ಚಿಲ್ಲಾಪುರಕ್ಕೆ ಹೋಗಬೇಕಾದರೆ ಸ್ವಾಮಿ ರಾಜಬೊಪ್ಪಣಪುರಕ್ಕೆ ಕರವೆತ್ತಿ ಕೈಮುಗಿದರು.

ಇನ್ನೂ ನನ್ನ ಜಾತಿಯವರ ಮನೆಗೆ
ನಾನು ಹೋಗುತ್ತಾ ಇದ್ದೀನಿ ದೊಡ್ಡಮ್ಮ
ಈ ಪಾಪಿ ಹೆತ್ತ ಮಗನ ಮೇಲೆ

ಕರುಣೆ ಇರಲಿ ಎಂದೆನುತ
ರಾಜಬೊಪ್ಪೇಗೌಡನ ಮುರಕ್ಕೆ
ಕರವೆತ್ತಿ ಕೈಮುಗಿದರಂತೆ
ಘನನೀಲಿ ....

ಸ್ವಾಮಿ ತಿರುಗಿ ನೋಡಿದರಂತೆ ತನ್ನ ಜಾತಿ ಹಲಗೂರು ಚಿಲ್ಲಾಪುರ ಪಾಳ್ಯೆಗಾರರ ಬೀದಿಯನ್ನು ಬಸವನ ಬೆಟ್ಟದ ಮೇಲೆ ನಿಂತ್ಕೊಂಡು

ಬರ್ತೀನಿ ಬರ್ತೀನಿ ಮಾಡ್ರೋ
ಬ್ರಹ್ಮ ಪಾಂಚಾಳದವರೆ
ಸಿದ್ದಯ್ಯ ಸ್ವಾಮಿ ಬನ್ನಿ
ನನ್ನ ಜಾತಿಯವರೇ ....
ನೀವು ಕೆಟ್ಟು ಮೂರು ದಿನವಾಯ್ತು
ಗ್ಯಾಪಸ್ಕೊಳ್ಳಿ ಪಾಂಚಾಳದವರೆ
ಗಂಗಾಧರ ಲಿಂಗಯ್ಯ ಬನ್ನಿ
ಉತ್ತರದೇಶದ ಕಂಡಾಯ
ತಲೆ ಮೇಲೆ ಹೊತ್ಕೊಂಡು
ನೀಲಿ ಸಿದ್ದಪ್ಪಾಜಿ ..
ಜಾತಿಯವರ ಹಲಗೂರಿಗೆ ನಮ್ಮ
ಸ್ವಾಮಿಯವರು ದಯಮಾಡುತ್ತಾರೆ
ಸಿದ್ದಯ್ಯ ಸ್ವಾಮಿ ಬನ್ನಿ

ಪರಂಜ್ಯೋತಿ ಘನನೀಲಿ ಸಿದ್ದಪ್ಪಾಜಿ ತನ್ನ ಜಾತಿಯವರ ಮನೆಗೆ ಹಲಗೂರು ಚಿಲ್ಲಾಪುರಕ್ಕೆ ಹೊರಟರಂತೆ. ಊರ ಅಡ್ಡ ಬಾಗಿಲಿನಲ್ಲಿ ನಿಂತ್ಕೊಂಡು ಯಾವ ಗೇಟಗಾಣೆ ಹೋಗಲಿ. ತೆಂಕಚೋರಿ ಹೋಗಲೆಂದರೆ ಮೆಂದಮಾರಿ ಕಾವಲಾವ್ಳೆ , ಪಡಗಚೋರಿ ಗೇಟಿನಾಗ ಬರುತ್ತೀನೆಂದರೆ ಅಂಕದಮಾರಿ ಅವ್ಳೆ , ಹೀಗೆ ಈ ಮೂರು ಮಾರಿಯರು ಮಾತ್ನಾಡುತ್ತಾರೆ. ಇವರ ಹತ್ತಿರ ನಾನು ಹೋದರೆ ಅವರು ತಣಿದರೆ (ಹೊಡೆತ) ತಿನ್ಕೊಂಡು ಹಲಗೂರು ಚಿಲ್ಲಾಪುರದವರಿಗೆ ಗೊತ್ತಾದರೆ ಕಷ್ಟ ಆಗುತ್ತದೆ ಜೊತೆಗೆ ಪಾಳೆಗಾರರಿಗೆ ಹೇಳಿಬಿಡಬಹುದು ಅಂತ್ಹೇಳಿ ಮೂಡಲಚೋರಿ ಗೇಟಿನಲ್ಲಿ ಮೂಗುಮಾರಿ ಗೇಟ್ನಾಗೆ ಹೋಗೋದು ಸರಿ ಅನ್ಕೊಂಡ್ರು

ಮೂಡಲಚೋರಿ ಗೇಟಿಗಾಣೆ
ಬರುತ್ತಾರಲ್ಲ ಮಾಯ್ಕಾರ
ಸಿದ್ದಯ್ಯ ಸ್ವಾಮಿ ಬನ್ನಿ
ಮೂಡಲಚೋರಿ ಗೇಟಿಗಾಣೆ

ಬರುವಾಗ ಸ್ವಾಮಿ
ಕಂಡುಕೊಂಡಳಂತೆ ಮಾರಿ
ಮೂಗು ಮಾರಿ ಮುಂಡೇ
ನಮ್ಮ ಸಿದ್ಧಪ್ಪಾಜಿಯ
ಕೊಚಪಿಚಿ ಕೊಚಪಿಚಿ ಅಂದಾಳಂತೆ
ಸಿದ್ಧಯ್ಯ ಸ್ವಾಮಿ ಬನ್ನಿ
ಬರುತ್ತಿರುವಂತ ಮಾರಿ
ನೋಡಿದರಂತೆ ಸ್ವಾಮಿ
ನೀಲಿ ಸಿದ್ಧಪ್ಪಾಜಿ ....
ಆಕಡೆಯಿಂದ ಬರುವ ಮಾರಿಯ
ನೋಡಿದರಂತೆ ಸ್ವಾಮಿ
ಸ್ವಾಮಿ ಬಲಗಾಲ ಎತ್ತಿದರಂತೆ
ಜಾಡ್ಸಿ ಒದ್ದಾರಂತೆ
ಸಿದ್ಧಯ್ಯ ಸ್ವಾಮಿ ಬನ್ನಿ
ಸ್ವಾಮಿ ಒದ್ದ ಒದತಕ್ಕೆ
ಆಕಾಶದ ಮೇಲೆ
ಹಾರ್ಬಿಟ್ಟ ಮಾರಮ್ಮ
ಹಲಗೂರಲ್ಲಿ ಒದ್ದದಕ್ಕೆ
ಬೊಪ್ಪಣಪುರದಲ್ಲಿ ಬಿದ್ದಾಳಂತೆ
ಸಿದ್ಧಯ್ಯ ಸ್ವಾಮಿ ಬನ್ನಿ

ಮೂಡಲಚೋರಿ ಗೇಟಲ್ಲಿ ಮೂಗು ಮಾರಿಯನ್ನು ಒದ್ದ ತಕ್ಷಣ ಸುಂಟರಗಾಳಿಯಲ್ಲಿ ತರಗೆಲೆ ಹಾರಿದ ಹಾಗೆ ಮಾರಮ್ಮ ಹಾರಿ ಕಡೇಬಾಗಿಲಿಗೆ ಬಂದು ಬಿದ್ದೇಟಿಗೆ ಅಪ್ಪಾ ಅಂತ ಬಿದ್ದುದ್ದನ್ನು ದೊಡ್ಡಮ್ಮತಾಯಿ ನೋಡಿದರು. ಯಾರೋ ಕಾಣೆ ಆನೆ ಗಾತ್ರದ ಮಾರಿ ಬಂದು ಬಿದ್ದಾವ್ಳೆ ಕಾಣಣ್ಣ ಅಂದಾಗ ಧರೆಗೆದೊಡ್ಡವರು ಬಂದು ನೋಡಿದರಂತೆ. ಲೇ ಮಾರಮ್ಮ ನೀನು ಯಾರು ? ಬುದ್ಧಿ ಹಲಗೂರು ಚಿಲ್ಲಾಪುರದ ಮೂಡಚೋರಿಗೇಟಿನ ಮೂಗು ಮಾರಿ ಕಾವಲು ಕಾಯ್ಕೊಂಡು ಇದ್ದೆ. ಯಾರೋ ಒಬ್ಬ ಹುಡುಗ ಊರಿನ ಒಳಗೆ ನುಗ್ಗುತ್ತಿದ್ದ. ತಡೆಯಕ್ಕೆ ಆ............ ಅನ್ಕೊಂಡು ಹೋದೆ. ಅಯ್ಯೋ ಬುದ್ಧಿ ನನ್ನ ಹೊಟ್ಟೆ ಮೇಲೆ ಒಂದು ಒತ್ತಾ ಕೊಟ್ಟದ್ದಕ್ಕೆ ಇಲ್ಲಿಗೆ ಬಂದು ಬಿದ್ದಿದ್ದೀನಿ. ನಾನು ಹುಟ್ಟಿದ ಕಾಲದಿಂದಲೂ ಮಾತನಾಡಲಿಕ್ಕೆ ಬರುತ್ತಿರಲಿಲ್ಲ. ಈ ಸ್ಥಳಕ್ಕೆ ಬಂದು ಬಿದ್ದ ತಕ್ಷಣ ನನಗೆ ಮಾತ್ನಾಡಲು ಶಕ್ತಿ ಬಂದ್ಬಿಡ್ತು. ಓಹೋ ದೊಡ್ಡಮ್ಮತಾಯಿ ನಿನ್ನ ಮಗ ಸಿದ್ಧಪ್ಪಾಜಿ ಒದ್ದು ಕಳುಹಿಸಿರುವ ಮೊದ್ ಮೊದಲನೆಯ ಮಾರಿ. ಬುದ್ಧಿ ತಾವು ಅಪ್ಪಣೆ ಕೊಟ್ಬಿಡಿ ನಾನು ಹೊರಟು ಹೋಗುತ್ತೀನಿ. ಯಾಕೆ ಮಾರಮ್ಮ ಅಲ್ಲಿಗೆ ಹೋಗುತ್ತೀ ? ಸಾಧ್ಯವಿಲ್ಲ. ನಮ್ಮ ಮಠದ ಹಿಂಪಾರ್ಶ್ವದಲ್ಲಿ ಮೂಗು ಮಾರಮ್ಮ ಎಂದು ಇಲ್ಲಿ ಸ್ಥಾಪನೆ ಆಗು. ಬುದ್ಧಿ

ನನಗೆ ವರ್ಷ ವರ್ಷ ಹಬ್ಬ ಮಾಡುತ್ತೀರಲ್ಲ ? ವರ್ಷ ವರ್ಷ ಹಲಗೂರು ಚಿಲ್ಲಾಪುರದವರು ಮಾಡತಕ್ಕಂತ ಹಬ್ಬವನ್ನು ಬೊಪ್ಪಣಪುರದವರ ಕೈಲಿ ಚೆನ್ನಯ್ಯನ ಕೈಲಿ ಕುರಿ ಕೋಳಿ ಕುಯ್ಸಿ ನಿನಗೆ ದೊಡ್ಡ ಹಬ್ಬ ಮಾಡಿಸ್ತೀನಿ ಮಾರಮ್ಮ. ಆಯ್ತು ಬುದ್ದಿ ಅಂತ್ಹೇಳಿ ಅಲ್ಲೇ ಸ್ಥಾಪನೆ ಆಗಿದ್ದಾಳೆ. ಈಕಡೆ ಸಿದ್ದಪ್ಪಾಜಿ ಮೂಡಚೋರಿ ಗೇಟಿನಾಗೆ ನುಗ್ಗಿ ಹೋದಂತ ಸ್ವಾಮಿ ಮಾಯ್ಕಾರ ತಂಬೂರಿ ಬಾರಿಸ್ಕೊಂಡು ತಮ್ಮ ಜಾತಿವಂತರ ಹಲಗೂರು ಚಿಲ್ಲಾಪುರದ ಬೀದಿ ಒಳಗಡೆ ಭಿಕ್ಷೆ ಕೇಳ್ಕೊಂಡು ಬರುವರಂತೆ ಮಾರಾಣಿಯವರ ಬೀದಿ ಚಿಲ್ಲಾಪುರದ ಒಳಗಡೆ

ದಾನ ಧರ್ಮ ಕಲ್ಯಾಣದ ಭಿಕ್ಷಾ
ಸಿದ್ದಯ್ಯ ಸ್ವಾಮಿ ಬನ್ನಿ
ತಂಬೂರಿ ದೇವರೇ .. ಆ..
ಲಿಂಗಯ್ಯ ದಯ ಮಾಡೋ..
ದಾನವೋ ದಾನ ಧರ್ಮವೋ ಧರ್ಮ
ಹರದೇವರ ಭಿಕ್ಷಾ
ಗುರುದೇವರ ಭಿಕ್ಷಾ
ಸಾಧುಸನ್ಯಾಸಿಯ ಭಿಕ್ಷಾ
ಜ್ಯೋತಿಲಿಂಗರ ಭಿಕ್ಷಾ
ನಮ್ಮ ಜಾತಿಯವರ ಮನೆಯಲ್ಲಿ
ಮೊದಲ ಭಿಕ್ಷೆ ಅಂದಾರಂತೆ
ಸಿದ್ದಯ್ಯ ಸ್ವಾಮಿ ಬನ್ನಿ
ದಾನ ಧರ್ಮ ಸಾರಿದ್ದಾರೆ
ಧರ್ಮಗಳ ಕೇಳಿದ್ದಾರೆ
ಚಿಲ್ಲಾಪುರದ ಸಿರಿ ಒಳಗಡೆ
ಮಾರಾಣಿಯರಿಗೆ
ದಾನವೆಂದರೂ ಗ್ಯಾನವಿಲ್ಲ
ಭಿಕ್ಷೆ ಅಂದರೂ ಲಕ್ಷ್ಯವಿಲ್ಲ
ಸಿದ್ದಯ್ಯ ಸ್ವಾಮಿ ಬನ್ನಿ
ಅವರು ಬಗ್ಗಿದ ತಲೆ ಎತ್ತಿಲ್ಲವಂತೆ
ಎದ್ದು ಭಿಕ್ಷಾ ಕೊಡಲಿಲ್ಲವಂತೆ
ನಿಜಯೋಗತಿ ನೋಡಲಿಲ್ಲವಂತೆ
ಸಿದ್ದಯ್ಯ ಸ್ವಾಮಿ ಬನ್ನಿ
ಮಾರಾಣಿಯವರೇ ....
ಲಿಂಗಯ್ಯ ನೀವೇ ಬನ್ನಿ

ನೀಡಿದ ಕಾಲ ತಕ್ಕೊಳ್ಳಲಿಲ್ಲವಂತೆ. ನಿಜಭಕ್ತಿ ಏನು ಎಂಬುದನ್ನು ತಿಳಿಯಲಿಲ್ಲವಂತೆ ಪಾಳ್ಯಗಾರರ ಹೆಂಡ್ತಿಯರು. ಚಿಲ್ಲಾಪುರದ ಬೀದಿಲಿ ನಿಂತ್ಕೊಂಡು ಸ್ವಾಮಿಯವರು ಗೊಳೋ ಅಂತ ಶೋಕ ಮಾಡವ್ರೆ. ಅಯ್ಯೋ ದೊಡ್ಡಮ್ಮತಾಯಿ ನಾನು ನನ್ನ ಜಾತಿ ಪಾಂಚಾಳದವರ ಮನೆಗೆ ಹೋಗಲಾರೆ ಅವರು ಭಿಕ್ಷೆ ಕೊಡಲಾರರು ಎಂದು ಎಷ್ಟೇ ನಿಮ್ಮ ಪಾದ ಹಿಡಿದುಕೊಂಡು ಬೇಡಿದರೂ ನೀವು ಹೋಗಪ್ಪ ಹೋಗಪ್ಪ ಎಂದು ಹೇಳಿ ಕಳುಗಿದರಲ್ಲ ತಾಯಿ. ನನ್ನ ಮತದವರು ಹಲಗೂರು ಚಿಲ್ಲಾಪುರದ ಬೀದಿಯೊಳಗೆ ತಂಬೂರಿ ಬಾರಸ್ಕೊಂಡು ಉತ್ತರದೇಶದ ಕಂಡಾಯ ಹೊತ್ಕೊಂಡು ಭಿಕ್ಷೆ ಕೇಳಿದರೆ ನನ್ನ ಜಾತಿ ಮತದ ಪಾಂಚಾಳದವರು ಒಬ್ಬರಾದರೂ ಮನೆಯಿಂದ ಹೊರಗಡೆ ಬರಲಿಲ್ಲ.

ನನ್ನ ಮುತ್ತಿನ ಜೋಳಿಗೆಗೆ
ಮರ್ಯಾದಿ ಭಿಕ್ಷೆ ಕೊಡಲಿಲ್ಲ
ನನ್ನ ಹೆಗಲ ಮೇಲೆ ಹೊತ್ತು
ಬಂದಿರುವಿ ಕಂಡಾಯಕ್ಕೆ
ಯಾರ ಮನೆಯಲ್ಲಾದರೂ
ಧೂಪ ಸಾಂಬ್ರಾಣಿ ಹೊಗೆ ತೋರನಿಲ್ಲ
ಕಂಡಾಯಕ್ಕೆ ಕರವೆತ್ತಿ ಕೈಮುಗಿಯನಿಲ್ಲ
ಇಂಥ ಅಸಾಧ್ಯವಾದ ಹಲಗೂರು
ಚಿಲ್ಲಾಪುರದ ಬೀದಿ ಒಳಗೆ
ಕಬ್ಬಿಣ ಆಯುಧಾನ ಯಾವ ರೀತಿ
ಮಾಡಿಸ್ಕೊಂಡು ನಿಮ್ಮ ಬೊಪ್ಪೇಗೌಡನಪುರಕ್ಕೆ
ನಾನು ಕಬ್ಬಿಣ ತರಲಿ ತಾಯಿ ಎಂಬುದಾಗಿ
ಮಾರಾಣಿ ಬೀದಿಯಲ್ಲಿ ನಿಂತ್ಕೊಂಡು
ಸಿದ್ದಪ್ಪಾಜಿ ಶೋಕ ಮಾಡವ್ರಂತೆ
ಘನನೀಲಿ ....ಗುರುವೇ ...... ಆ ..

ಸಿದ್ದಪ್ಪಾಜಿ ಶೋಕಮಾಡಿ ಚಿಲ್ಲಾಪುರದ ಮಾರಾಣಿಯರ ಬೀದಿಯಲ್ಲಿ ನಿಂತ್ಕೊಂಡು ಚಿಂತೆ ಮಾಡಿದರಂತೆ. ಹೊತ್ತಿಸದೆ ಎಂದಿಗೂ ಒಲೆ ಉರಿಯುವುದಿಲ್ಲ. ಊರವರ ಸಹಾಯ ಇಲ್ಲದೇ ಯಾವ ಕಳ್ಳನೂ ಊರಿಗೆ ಬರುವುದಕ್ಕೆ ಆಗುವುದಿಲ್ಲ. ನಾನು ಹಲಗೂರು ಚಿಲ್ಲಾಪುರ ಮಧ್ಯೆ ಇರುವ ಮಾರಮ್ಮನ ದೇವಸ್ಥಾನಕ್ಕೆ ಹೋಗಿ, ನಾನು ಬೊಪ್ಪೇಗೌಡನಪುರದಿಂದ ತಂದಿರತಕ್ಕಂತ ಬಿಂಕು ಬಿರುದು ಲಾಂಛಾನಗಳನ್ನೆಲ್ಲ ಮಡುಗುವುದಕೋಸ್ಕರ ದೇವಸ್ಥಾನದಲ್ಲಿ ನನಗೆ ಜಾಗ ಕೇಳ್ಕೋಬೇಕು ಅಂತ ಸ್ವಾಮಿ ಸಿದ್ದಪ್ಪಾಜಿ

ಚಿಲ್ಲಾಪುರವ ಬಿಟ್ಟಾರಂತೆ

ಕಾಳಮ್ಮನ ಗುಡಿಗೆ
ನಮ್ಮ ಸ್ವಾಮಿಯವರು
ದಯಮಾಡುತ್ತಾರೆ
ಸಿದ್ದಯ್ಯ ಸ್ವಾಮಿ ಬನ್ನಿ
ಕಾಳಮ್ಮನ ದೇವಸ್ಥಾನಕ್ಕೆ ಬಂದು
ಬಾಗಿಲ ಬಳಿಯಲ್ಲಿ ನಿಂತು
ಸ್ವಾಮಿ ಕಾಳಿ ಕಾಳಿ ಎಂದು
ಮೂರು ಸಾರಿ ಕೂಗಿದ್ದಾರೆ
ಲಿಂಗಪ್ಪ ನೀವೇ ಬನ್ನಿ
ಕೂಗಿದರೂ ಮಾತ್ನಾಡನಿಲ್ಲ
ಬಲಗಾಲ ಎತ್ತಿದರಂತೆ
ಬಾಗಿಲ ಜಾಡಿಸಿ ಒದ್ದಾರಂತೆ
ಬಾಗಿಲ ಕಲ್ಕದ ಮುರುದು
ಬಿದ್ದ ರಭಸಕ್ಕೆ ಕಾಳ್ಕಾದೇವಿ
ಕಿಟ್ವೋ ಅಂತ ಕಿರುಚಿದ
ರಭಸಕ್ಕೆ ಅಂಕಣದ
ಕಲ್ಲೆ ಹಾರೋಯ್ತಂತೆ
ಸಿದ್ದಯ್ಯ ಸ್ವಾಮಿ ಬನ್ನಿ

ಯಾವಾಗ ಸಿದ್ದಪ್ಪಾಜಿ ಕಾಳ್ಕಾದೇವಿಯ ಕಲ್ಲುಗುಡಿಯ ಬಾಗಿಲ ಜಾಡಿಸಿ ಒದ್ದು ಬಿಟ್ಟರೋ ಕಲ್ಲು ಬಾಗಿಲು ಮುರಿದು ಎದೆ ಮೇಲೆ ಬಿದ್ದ ತಕ್ಷಣ ದೇವಿ ಕಿಟ್ವೋ ಅಂತ ಕಿರುಚಿ ಬಿಟ್ಟಳಂತೆ. ಅವಳ ದೇವಸ್ಥಾನದ ಮೇಲೆ ಮುಚ್ಚಿದಂತಹ ಕಲ್ಲು ಮೇಲಕ್ಕೆ ಹಾರ್ಬುಡ್ತಂತೆ. ಹೆಗ್ಗುಲುಮೆತಿಟ್ಟು ದರ್ಬಾರ್ ಕಟ್ಟೆ ಚೌಡಿ ಮೇಲೆ ಬಂದು ಗಿರಿಗಿರಿ ಅಂತ ತಿರುಗ್ತತಂತೆ. ಉದ್ಯೋಗ ಮಾಡುಸ್ತ ಕುಂತಿದ್ದಂತಹ ಪಂಚಾಳದವರು ನೋಡ್ಬುಟ್ಟು ನೋಡ್ರಪ್ಪ ಕಾಳ್ಕಾದೇವಿಗೆ ಹಬ್ಬ ಮಾಡ್ಕೊಡನಿಲ್ಲವೆಂದು ಕೋಪಸ್ಕೋಬಿಟ್ಟು ದೇವಸ್ಥಾನದ ಮೇಲಿದ್ದ ಚಪ್ಪಡಿಕಲ್ಲು ಹಾರಿಸಿ ಕಳಿಸಿ ಬಿಟ್ಟಿದ್ದಾಳೆ. ಅಯ್ಯೋ ಇಂಥಾ ಕಾಳ್ಕಾದೇವಿಯನ್ನ ಹಲಗೂರು ಚಿಲ್ಲಾಪುರದವರು ಹಬ್ಬ ಮಾಡಿ ಕೊಡನಿಲ್ಲವೆಂದರೆ ನಮ್ಮ ಹಲಗೂರು ಚಿಲ್ಲಾಪುರನ ಮಡಗುತ್ತಾಳಾ ? ಇಲ್ಲ. ಆದ್ದರಿಂದ ನಮ್ಮ ಜಾತಿಮತದವರೆಲ್ಲ ಬನ್ನಿ ಅಂತ ಕೂಗ್ಕೊಂಡು ಪಾಳ್ಯೆಗಾರರು. ಎಲ್ಲರೂ ಅರಳಿಮರದ ಚಾವಡಿ ಹತ್ತಿರ ಬಂದು ಕೂತ್ಕೊಂಡರು. ದೊರೆಗಳು ಚಿನ್ನದ ಕುರ್ಚಿ ಮೇಲೆ ಕೂತ್ಕೊಂಡು ನ್ಯಾಯ ಮಾಡ್ತಾ ಇದ್ದಾರೆ. ನೋಡ್ರಪ್ಪ ಕಾಳ್ಕಾದೇವಿ ಮುನ್ಸ್ಕೊಂಡು ಬಿಟ್ಟಾವ್ಳೆ. ಪೂಜೆ ಮಾಡಿಕೊಡಬೇಕು ಅಂತ್ಹೇಳಿ ಏಳು ಜನ ಪಾಳ್ಯಗಾರರು ಅರಿಶಿನ ಕುಂಕುಮ ಧೂಪ ಸಾಂಬ್ರಾಣಿ ತಂದು ವಾರ ಹದಿನೈದು ದಿನ ತುಂಬುವುದರೊಳಗೆ ಪಾಂಚಾಳದವರೆಲ್ಲ ಹಲಗೂರು ಏಳು ಬೀದಿ, ಚಿಲ್ಲಾಪುರ ಏಳು ಬೀದಿ ಜನರೆಲ್ಲ ಹಬ್ಬಕ್ಕೆ ಗಣ್ಣು ಗಣ್ಣು ಕಡ್ಡು ಸೋಮವಾರ

ತಂಪು ಮಂಗಳವಾರ ಮಡೆ ಬುಧುವಾರ ಕುಣಿತ ಹಾಯ್ಮರಿ ಹಾಯ್ಸಿ ಹುಯ್ಮರಿ ಹುಯ್ಸಿ ತಾಳ, ತಂಬೂರಿ, ವೀಣೆ, ತಮ್ಮಟೆ, ವೀರಮಕ್ಕಳ ಕುಣಿತ ಟಾಮುಟೂಮು ನಾಗರಬತ್ತಿ ಉಗುರುಬಾನ ಜಗಜಂಕಿನ ಸದ್ದು. ಗುಂಡಾಪುರದ ಒಳಕೆರಿಯಿಂದ ಹಸ್ಸಿ ಮಣ್ಣನ್ನು ತರುವಾಗ ಹೆಜ್ಜೆ ಹೆಜ್ಜೆಗೂ ಮರಿಯನ್ನು ಕುಯ್ಸಿ, ತಲೆಯ ಮೇಲೆ ಕಾಯನ್ನು ಹೊಡೆದು ಸೂಲೆಯ ಸೋಬಾನ ಮುಂಡೇಯರ ಹಿಮ್ಮೇಳದಿಂದ ಹಬ್ಬ ಮಾಡಿಕೊಡುತ್ತೀವಿ ಮಾರಮ್ಮ. ತಪ್ಪು ನೆಪ್ಪು ಏನೇ ಇದ್ದರೂ ನೀ ಮನ್ನಿಸ್ಕೊಂಡು ಇಲ್ಲಿ ತಿರುಗ್ತಕ್ಕಂತ ಚಪ್ಪಡಿ ಕಲ್ಲ ನಿಮ್ಮ ದೇವಸ್ಥಾನಕ್ಕೆ ಕರ್‍ಕೊಳಮ್ಮ ಎಂದು ಮಂಗಳಾರತಿ ಬೆಳಗಿದರಂತೆ. ಬೆಳ್ಳಿ ರೂಪಾಯನ್ನು ಅರಿಶಿನದ ಬಟ್ಟೆಗೆ ಕಟ್ಟಿ ಕಪ್ಪ ಕಾಣಿಕೆಯನ್ನು ಕಂಬಕ್ಕೆ ಕಟ್ಟಿದರಂತೆ. ಆವಾಗ ಪಾಂಚಾಳದವರೆಲ್ಲ ಇಲ್ಲಿ ಕಲ್ಲಿಗೆ ಪೂಜೆಮಾಡುವಾಗ ಕಾಳಮ್ಮನ ದೇವಸ್ಥಾನದ ಮನೆ ಬಾಗಿಲಿನಲ್ಲಿ ನಿಂತಿರ್‍ತಕ್ಕಂತ ಸಿದ್ದಪ್ಪಾಜಿಯವರ ಪಾದಕ್ಕೆ ಪ್ರಿಯವಾಯ್ತಂತೆ. ಕಪ್ಪು ಧೂಳ್ತವನ್ನು ತೆಗೆದು ಚಪ್ಪಡಿ ಕಲ್ಲಿಗೆ ಇಟ್ಟಾಗ ಮತ್ತೆ ಹಿಂದಿರುಗಿ ಬಂದು ದೇವಸ್ಥಾನದ ಮೇಲೆ ಕೂತ್ಕೋಬಿಡ್ತಂತೆ. ಇದನ್ನು ಕಂಡ ಪಾಂಚಾಳದವರಿಗೆ ಭಾಳ ಸಂತೋಷವಾಯ್ತಂತೆ. ನಮ್ಮ ಮನೆದೇವತಿ ಕಾಳಕಾದೇವಿ ಎಂಥ ಸತ್ಯ ದೇವತಿ ನೋಡಿದೆಯಾ ? ಕಪ್ಪ ಕಾಣಿಕೆ ಕಟ್ಟಿ ಹಬ್ಬ ಮಾಡಿ ಕೊಡುತ್ತೀವಿ ಅಂದ ತಕ್ಷಣ ದೇವಸ್ಥಾನದ ಚಪ್ಪಡಿ ಕಲ್ಲು ಮತ್ತೆ ದೇವಸ್ಥಾನಕ್ಕೆ ಕರ್‍ಕೋಬಿಟ್ಟಳು. ಎಲ್ಲರಿಗೂ ಹೇಳಿ ಬಿಡಿ ಹಬ್ಬ ಮಾಡಬೇಕು ಅಂತ. ಬೀದಿ ಬೀದಿ ಒಳಗಡೆ ನಗಾರಿ ತಮಟೆ ಹೊಡೆಯುವರಂತೆ. ಹಬ್ಬಕ್ಕೆ ಬೇಕಾದ ಸಾಮಗ್ರಿ ಆಮಂತ್ರಿಸಿಕೋಬೇಕಂತೆ. ಈಕಡೆ ಸಿದ್ದಪ್ಪಾಜಿ ಕಾಳಮ್ಮನ ದೇವಸ್ಥಾನಕ್ಕೆ ಹೋದರಂತೆ. ಕಾಳಮ್ಮ ಹೆದರ್‍ಕೋಬಿಟ್ಟು ತಾವು ಯಾರು ? ಏನೇ ಮಾರಿ ನನ್ನನ್ನು ಯಾರು ಅಂತ ಕೇಳ್ತಾ ಇದ್ದೀಯಾ ? ನಿನ್ನ ಒಡೆಯ. ಮಾರಳ್ಳಿ ಮುದ್ದಮ್ಮನ ಹೊಟ್ಟೆಯ ಒಳಗಡೆ ಹುಟ್ಟಿದ ಏಳನೇ ಮಗ ಕೆಂಪಾಚಾರಿ ಮಾರಳ್ಳಿ ಒಳಗೆ ನನ್ನ ಮನೆದೇವತಿ ಕಾಳ್ಕಾದೇವಿ ಆಗಿದ್ದಿ. ಮಾರಳ್ಳಿ ಎಲ್ಲ ಹಾಳಾಗಿ ಹೋದ ಮೇಲೆ ಮಾರಳ್ಳಿ ಗ್ರಾಮ ಬಿಟ್ಟು ಹಲಗೂರು ಬಂದು ಸೇರ್‍ಕೋಬಿಟ್ಟಿದ್ದೀಯ ? ಹೌದು ತಂದೆ ನನ್ನ ಒಡೆಯ. ಬುದ್ದಿ ತಾವು ಯಾತಕೋಸ್ಕರ ಬಂದಿದ್ದೀರಾ ? ನನ್ನನ್ನು ಪಡ್ಕೊಂಡು ಹೋದರಲ್ಲ ಪರಂಜ್ಯೋತಿ ಮಂಟೇಸ್ವಾಮಿ ಬೊಪ್ಪಣಪುರದಲ್ಲಿ ಇರುವಂತ ಗುರು ಅವರಿಗೆ ನಾನು ಕಬ್ಬಿಣದ ಆಯುಧಾನಗಳನ್ನು ಮಾಡಿಸಿಕೊಂಡು ಬೊಪ್ಪಣಪುರದಲ್ಲಿ ಮಠಮನೆ ಕಟ್ಟಬೇಕಾಗಿದೆ. ಅದಕ್ಕೆ ಗುರು ನನ್ನ ಜಾತಿ ಹಲಗೂರು ಚಿಲ್ಲಾಪುರಕ್ಕೆ ಕಳಿಸಿದ್ದಾರೆ ಹಲಗೂರಿನಲ್ಲಿ ಕಬ್ಬಣ ತಕ್ಕೊಂಡು ಆಯುಧಾನಗಳನ್ನು ಮಾಡೋತನಕ ನಿನ್ನ ದೇವಸ್ಥಾನದಲ್ಲಿ ಎರಡು ಅಂಕಣ ಜಾಗ ಬೇಕು ನನ್ನ ಬಿಂಕು ಬಿರುದಾನ ಮಡಿಕೊಳ್ಳುವುದಕ್ಕೆ ಅಂತ ಕೇಳಿದರಂತೆ ಸಿದ್ದಪ್ಪಾಜಿ. ಅದಕ್ಕೆ ಕಾಳಕಾದೇವಿ ಅಷ್ಟೆತಾನೇ ಗುರುದೇವ ಎಂದು ಜಾಗ ಕೊಟ್ಟಳಂತೆ. ಆ ದೇವಸ್ಥಾನದಲ್ಲಿ ಸಿದ್ದಪ್ಪಾಜಿ ಕಂಡಾಯ ತಂಬೂರಿ ಮುತ್ತಿನ ಜೋಳಿಗೆ ನಾಗಬೆತ್ತ ತ್ರಿಶೂಲವನ್ನು ಮಡಗ್ಬುಟ್ಟು ಅಮ್ಮ ನಾ ಬಂದಿರತಕ್ಕಂತ ವಿಚಾರವನ್ನು ಯಾರಿಗೂ ತಿಳಿಸಬೇಡಿ. ನಾ ಬತ್ತೀನಿ ಎಂಬುದಾಗಿ ಸ್ವಾಮಿ ಸಿದ್ದಪ್ಪಾಜಿ –

ಕಾಳಮ್ಮನ ದೇವಸ್ಥಾನ ಬಿಟ್ಟಾರಂತೆ
ಬಸವನ ಬೆಟ್ಟಕ್ಕೆ ಹೊರಟಾರಂತೆ
ಸಿದ್ದಯ್ಯ ಸ್ವಾಮಿ ಬನ್ನಿ
ಬಸವನ ಬೆಟ್ಟದ ಮೇಲೆ ..
ನಿಂತ್ಕೊಂಡು ನನ್ನಪ್ಪ
ನೀಲಿ ಗ್ಯಾನದ ಭೋಗಿ
ನೀಲಿಸಿದ್ದಪ್ಪಾಜಿ
ಸ್ವಾಮಿ ರಾಜಬೊಪ್ಪಣಪುರವ
ಕೈಯೆತ್ತಿ ಮುಗಿದಾರಂತೆ
ಸಿದ್ದಯ್ಯ ಸ್ವಾಮಿ ಬನ್ನಿ

ಸಿದ್ದಪ್ಪಾಜಿ ಬಸವನಬೆಟ್ಟದ ಮೇಲೆ ನಿಂತ್ಕೊಂಡು ಬೊಪ್ಪೇಗೌಡನಪುರಕ್ಕೆ ಕರವೆತ್ತಿ ಕೈ ಮುಗಿದರಂತೆ. ದೊಡ್ಡಮ್ಮ ನಾನು ಹಲಗೂರು ಚಿಲ್ಲಾಪುರಕ್ಕೆ ಹೋಗಲಾರಿ ಹೋಗಲಾರಿ ಎಂದು ಕೇಳಿದರೂ ನನ್ನನ್ನ ನೀವು ಕಳುಗಿದ್ದೀರಲ್ಲ ತಾಯಿ. ನನ್ನ ಮತದವರ ಬೀದಿ ಒಳಗಡೆ ನಾನು ದಾನ ಧರ್ಮ ಕ್ವಾರಣ್ಯ ಎಂದು ಎಷ್ಟೇ ಕೂಗಿ ಭಿಕ್ಷೆ ಬೇಡಿದರೂ ನನ್ನ ಜಾತಿ ಮತದವರಾದ ಪಾಂಚಾಳದವರು ಒಬ್ಬರಾದರೂ ಬಂದು ಕಂಡಾಯವನ್ನ ಕರವೆತ್ತಿ ಕೈಮುಗಿಯಲಿಲ್ಲ ಶಿರಬಾಗಿ ಶರಣು ಮಾಡನಿಲ್ಲ. ಹೋಗಲಿ ಧೂಪ ಸಾಂಬ್ರಾಣಿ ಹೊಗೆಯನ್ನಾದರೂ ತೋರಲಿಲ್ಲ. ಬೆತ್ತದ ಮೊರದಲ್ಲಿ ತಂದು ದಿನಸಿ ಧಾನ್ಯವನ್ನು ಮುತ್ತಿನ ಜೋಳಿಗೆಯಲ್ಲಿ ಹಾಕಲಿಲ್ಲ ಇಂಥ ಅಸಾಧ್ಯವಾದ ಹಲಗೂರು ಚಿಲ್ಲಾಪುರದಿಂದ ನಾನು ಯಾವ ರೀತಿ ಕಬ್ಬಿಣದ ಆಯುಧಾನವನ್ನು ತರಲಿ ತಾಯಿ. ನಿಮ್ಮ ಪಾದವೇ ಗತಿ ಎಂದು ಸಿದ್ದಪ್ಪಾಜಿ ಬೆಟ್ಟದ ಮೇಲೆ ನಿಂತ್ಕೊಂಡು ಚಿಂತೆ ಮಾಡಿದರಂತೆ. ಪಾಳ್ಯಗಾರರ ಜೊತೆಯಲ್ಲಿ ಪಾಳ್ಯಗಾರನಾಗಿಯೇ ಮಾತಾಡಬೇಕು. ಇಂದು ನಾನು ಪಾಳ್ಯಗಾರರ ಹೆಂಡ್ತಿರ ಜೊತೆಗೆ ಮಾತನಾಡಿದರೆ ಪಾಳ್ಯಗಾರರಿಗೆ ಕೋಪ ಬರುತ್ತದೆ. ಆವಾಗ ನಾನು ಪಾವಾಡದಲ್ಲಿ ಗೆಲ್ಲಬಹದು ರಾಜಬೊಪ್ಪಣಪುರಕ್ಕೆ ಆಯುಧಾನಗಳನ್ನು ತಕ್ಕೊಂಡು ಹೋಗಬಹುದು ಎನ್ನುತ್ತಾ ಸ್ವಾಮಿ ಸಿದ್ದಪ್ಪಾಜಿಯವರು. ಆ ಹೆಂಗಸರ ಮಧ್ಯೆ ಯಾವ ವ್ಯಾಪಾರವನ್ನು ಮಾಡ್ಕೊಂಡು ಹೋಗಬೇಕು. ಚಿನ್ನ, ಬೆಳ್ಳಿ, ಮುತ್ತು, ರತ್ನ, ತಕ್ಕೊಂಡು ಹೋದರೆ ಅವರು ಕಣ್ಣೆತ್ತಿಯೂ ನೋಡೋಲ್ಲ. ಪಾಂಚಾಳರ ಮನೆಯ ಮುತ್ತಿನಲ್ಲಿ ಮುಂಬಾಗಿಲ ಕನ್ನಡಿಯಲ್ಲಿ ಕದ, ಕಂಚಿನಲ್ಲಿ ಕಮಾನು ಚಿತ್ರದಲ್ಲಿ ತೊಟ್ಟಿ ಸರಳ ಬೆರಳಿಯ ಮಂಚ. ಆಚಾರರ ಮನೆಯ ಒಳಗೆ –

ಕರುವ ಕಟ್ಟಿದ ಗೂಟವೆಲ್ಲ
ಚಿನ್ನ ಬೆರಳಿ ಗೂಟವಂತೆ
ಸಿದ್ದಯ್ಯ ಸ್ವಾಮಿ ಬನ್ನಿ
ರಾಗಿ ಕಲ್ಲಿನ ಗೂಟ
ಚಿನ್ನ ಬೆರಳಿಯ ಗೂಟ

ಅಂಥವರ ಮನೆಗೆ ನಾನು
ಚಿನ್ನ ಬೆರಳಿ ತಕ್ಕೊಂಡು ಹೋದರೆ
ಪಾಳ್ಯಗಾರರ ಹೆಂಡ್ತಿಯರು
ಕಣ್ಣೆತ್ತಿ ನೋಡನಿಲ್ಲ
ನನ್ನ ಜಾತಿ ಮತದ ಹೆಂಗಸರು
ಬಲೆಯ ವ್ಯಾಪಾರ ಮಾಡಬೇಕು
ಅಂದಾರಂತೆ
ಸಿದ್ದಯ್ಯ ಸ್ವಾಮಿ ಬನ್ನಿ

ಪಾಳ್ಯಗಾರರ ಹೆಂಗಸರಿಗೆ ವ್ಯಾಪಾರ ಮಾಡ್ಕೊಂಡು ಹೋಗಬೇಕೆಂದು ಸ್ವಾಮಿ ಸಿದ್ದಪ್ಪಾಜಿ ಬಸವನ ಬೆಟ್ಟ ಮೇಲೆ ನಿಂತ್ಕೊಂಡು –

ಸ್ವಾಮಿ ಹದಿನೆಂಟು ಜಾತಿ ಹಾವ ಚೇಳ
ಕೈಬೀಸಿ ಕರೆದರಂತೆ
ಸಿದ್ದಯ್ಯ ಸ್ವಾಮಿ ಬನ್ನಿ
ಹದಿನೆಂಟು ಜಾತಿ ಹಾವು ಚೇಳುಗಳ
ಸ್ವಾಮಿ ಕೈಬೀಸಿ ಕರೆದಾಗ
ಸ್ವಾಮಿ ಕೂಗಿದ ಶಬುದಕ್ಕೆ
ಹುತ್ತದಲ್ಲಿದ್ದ ಓಣಿ ಒಳಗಿದ್ದ
ಗವಿಕಾಡೊಳಗಿದ್ದ ಅಟ್ಟ ಬೆಟ್ಟದೊಳಗಿದ್ದ
ಹಾವು ಚೇಳುಗಳೆಲ್ಲ
ಹಾರ್‍ಕೊಂಡು ಹಾರ್‍ಕೊಂಡು ಬಂದು
ಬಸವನ ಬೆಟ್ಟದ ಮೇಲೆ ಸಿದ್ದಪ್ಪಾಜಿಯವರ
ಸುತ್ತ ಹಾವು ಆನಂದ ಆಡುತ್ತಾವೆ
ಸಿದ್ದಯ್ಯ ಸ್ವಾಮಿ ಬನ್ನಿ

ಹಾವು ಚೇಳುಗಳೆಲ್ಲ ಹೆಡೆಯ ಬಿಟ್ಕೊಂಡು ಆನಂದ ಆಡುವಾಗ ಬಸವನಬೆಟ್ಟದ ಮೇಲಿರುವ ಹಾವು ಚೇಳನ್ನು ಸ್ವಾಮಿಯವರು ನೋಡಾವ್ರೆ.

ಹಾವು ಚೇಳು ಹಿಡ್ಕೊಂಡು
ಬಳೆಯ ಮಾಡುತಾವ್ರೆ
ಉದ್ದುದ್ದ ಇರುವವರಿಗೆ
ನಾಗರದಾವಿನ ಬಳೆ
ಬೆಳ್ಳಬೆಳ್ಳಗೆ ಇರುವವರಿಗೆ
ಒಳ್ಳೆ ಹಾವಿನ ಬಳೆ

ಕೆಂಪ ಕೆಂಪಗೆ ಇರುವವರಿಗೆ
ಕಡಗನ ಬಳೆ
ಹಸಿರು ಸೀರೆ ಉಟ್ಟವರಿಗೆಲ್ಲ
ಹಸಿರು ಹಾವಿನ ಬಳೆ
ಕುಳ್ಳ ಕುಳ್ಳಗೆ ಇರುವವರಿಗೆಲ್ಲ
ಸುಂಟದ ಹಾವಿನ ಬಳೆ
ದಪ್ಪದಪ್ಪಗೆ ಇರೋರಿಗೆಲ್ಲ
ಮಂಡಲದಾವಿನ ಬಳೆ
ಕರ್ಕರ್‍ಗೆ ಇರೋರಿಗೆಲ್ಲ
ಕೆವ್ವಳಿನ ಬಳೆಗಳಂತೆ
ಸಿದ್ದಯ್ಯ ಸ್ವಾಮಿ ಬನ್ನಿ

ಮಂಡಲದ ಹಾವನ್ನು ಹಿಡಿದು ಒಳ್ಳೆಯ ಮಧ್ಯಕ್ಕಿರುವ ದಂಡೆ ಮಾಡ್ಕೊಂಡು ಕಚ್ಚುವ ಹಾವನ್ನು ಹಿಡ್ಕೊಂಡು ಕತ್ತಿಗೆ ಕಟ್ಕೊಂಡು ನಾಗರದಾವನ್ನು ಹಿಡ್ಕೊಂಡು ನಡುವಿಗೆ ಕಟ್ಕೊಂಡು ಹನ್ನೆರಡು ಮೊಲದ ಪಿಲಪಂಚೆ ಆರು ಗಜ ಹಾಕ್ಕೊಂಡು ಕೋರೆ ರುಮಾಲು ಸುತ್ಕೊಂಡು ಬಿರ್ಲಾಮೀಸೆ ಕಟ್ಕೊಂಡು ಅರಣ್ಯ ಮಧ್ಯದೊಳಗೆ ಬಿದ್ದಿ ಪಟ್ಟೆಯನ್ನು ಧರಸವ್ರೆ, ಕಾಲಿಗೆ ಸ್ವಾಮಿ ಕೊಕ್ಕೆ ಜೋಡು ಮೆಟ್ಕೊಂಡು ಸುರಪಾನದ ಹಾವಿಡ್ಕೊಂಡು ಶೆಟ್ರ ವೇಷ ತಾಳಿ ಪ್ರಯಾಣ ಮಾಡಿದರಂತೆ.

ಬಸವನಬೆಟ್ಟ ಬಿಟ್ಟಾರಂತೆ
ಚಿಲ್ಲಾಪುರದ ರಾಣಿ ಮನೆಗೆ
ಮೆಲ್ಲ ಮೆಲ್ಲನೆ ಬರುತ್ತಾರೆ
ಸಿದ್ದಯ್ಯ ಸ್ವಾಮಿ ಬನ್ನಿ
ತೆಂಕಚೋರಿ ಗೇಟಿಗಾಣೆ
ಮಾಯ್ಕಾರದಾಗ ಮಾಡುತ್ತಾರೆ
ಸಿದ್ದಯ್ಯ ಸ್ವಾಮಿ ಬನ್ನಿ

ಸ್ವಾಮಿ ತೆಂಕಚೋರಿ ಗೇಟಿಗಾಣೆ ಸುಂಕದ ಮಾರಮ್ಮನ ಹತ್ತಿರ ಉಪಾಯದ ಮಾತ್ನಾಡಿ ಉಪ್ಪರಿಗೆ ಮೇಲೆ ಕುಂಡ್ಸುಬಿಟ್ಟು ಏಕೆಂದರೆ ಊರಿನ ಒಳಗೆ ಹೋಗಬೇಕಾದರೆ ಸುಂಕ ಕೊಡು ಅಂತ ಕೇಳಿದಳಂತೆ. ಅದಕ್ಕೆ ಮಾರಮ್ಮ ವ್ಯಾಪಾರ ಮಾಡಿ ಬರುವಾಗ ಕೊಡುತ್ತೀನಿ ಸುಂಕನಾ ? ಎಂದು ಉಪಾಯದ ಮಾತ್ನಾಡ್ಬುಟ್ಟು ಸ್ವಾಮಿಯವರು ಬಳೆ ಸಾರ್‍ಕೊಂಡು ಬರುತ್ತಿರುವರಂತೆ ಮಾರಾಣಿ ಬೀದಿ ಒಳಗೆ ಅವರು ಕಂಡಾಯ ಹೊತ್ಕೊಂಡು ತಂಬೂರಿ ಹೊತ್ಕೊಂಡು ಭಿಕ್ಷೆ ಬೇಡಿದ ಬೀದಿ ಒಳಗೆ ಸ್ವಾಮಿಯವರು ಬಳೆಗಾರ ಶೆಟ್ರ ವೇಷವನ್ನು ತಾಳ್ಕೊಂಡು –

ಬಳೇ........... ಬಳೇ.....................
ಬೊಂಬಾಯಿ ಬಳೇ ....
ಬಂಡ್ರಕ್ಕ ಬಾರದಕ್ಕ ಪುಟ್ಟಮ್ಮ
ರತ್ನಮ್ಮ ಗೋರಮ್ಮ ಪಾಳ್ಯಗಾರರ ಹೆಂಡ್ತೀಯರೆ
ನೀವು ಕೇಳಿರಿ ಬಳೆಯ ಕೊಡುತ್ತೀವಿ
ನೀವು ಓಡಿ ಬನ್ನಿ ಅಂದಾರಂತೆ
ಸಿದ್ದಯ್ಯ ಸ್ವಾಮಿ ಬನ್ನಿ
ಬಳೆಯ ತರುವಾಗ ....
ಬೀದಿ ಒಳಗೆ ನನ್ನಪ್ಪ
ಅರಮನೆಯ ಮೇಲೆ ಕುಳುತ್ಕೊಂಡು
ಉಯ್ಯಾಲೆ ಆಡುತ್ತಿದ್ದ ಪಾಳ್ಯಗಾರರ ಹೆಡ್ತಿಯರು
ಬಳೆಗಾರನ ಶಬುದ ಕೇಳಿದರಂತೆ
ಉಯ್ಯಾಲೆಯ ಇಳಿದಾರಂತೆ
ಸಿದ್ದಯ್ಯ ಸ್ವಾಮಿ ಬನ್ನಿ
ಉಯ್ಯಾಲೆ ಇಳಿದು ಅರಮನೆ ಮುಂದೆ
ನಿಂತ್ಕೊಂಡು ಬೀದಿಯೊಳಗೆ
ಬರುತ್ತಿದ್ದ ಬಳೆಗಾರ ಶೆಟ್ಟಿಯ ನೋಡಿ
ಇಂದ್ರಿ, ರತ್ನಿ ಸುಂದ್ರಿ ಎನಮ್ಮಿ ..
ಹಲಗೂರು ಚಿಲ್ಲಾಪುರ ಉತ್ಪತ್ತಿ
ಆದಂತಹ ಕಾಲಕ್ಕೂ ಇಲ್ಲಿತನಕ
ಹರ ಹರಿ ಬ್ರಹ್ಮ ತ್ರಿಮೂರ್ತಿ ದಾಸ ಬುಡಬುಡಕಿ
ಜೋಗಿ ಸನ್ಯಾಸಿ ಕಾಳಭೋಗಿ
ತಿರುಕರು ಎರಕರು ಅಂಡರು
ಹಲಗೂರು ಚಿಲ್ಲಾಪುರಕ್ಕೆ
ಯಾರೂ ಬಂದಿರನಿಲ್ಲ
ಈ ಬಳೆಗಾರ ಶೆಟ್ಟಿ ಎಳ್ಳಾಣೆ ಬಂದಾನಮ್ಮಿ
ಸಿದ್ದಯ್ಯ ಸ್ವಾಮಿ ಬನ್ನಿ ....

ಏನಮ್ಮಿ ಹಲಗೂರು ಚಿಲ್ಲಾಪುರಕ್ಕೆ ತರಗು ಗೂಡಿಸಿ ಮನೆ ಮಾಡಿದ ಕಾಲದಿಂದ ಯಾರೂ ಬರಲಿಲ್ಲ. ಆದರೆ ಈ ಬಳೆಗಾರ ಶೆಟ್ಟಿ ಯಾವ ಗೇಟಿನಾಗೆ ಬಂದು ಬಿಟ್ಟನೋ ಕಾಣೆ. ಅಯ್ಯೆಯ್ಯೋ ಬರೋದು ಬಂದು ಬಿಟ್ಟ ಕಾಣೆ ಇಂದ್ರಮ್ಮ ನನ್ನದೊಂದು ಮಾತು ಕಾಣೆ. ನಮ್ಮ ಯಜಮಾನ್ರು ಹೆಗ್ಗುಲುಮೆ ತಿಟ್ಟಿನಲ್ಲಿ ಉದ್ಯೋಗ ಮಾಡುತ್ತಾ ಕೂತಾವ್ರೆ ಅಲ್ಲ ಅವರು ಮಧ್ಯಾನ ತಾನೇ ಊಟಕ್ಕೆ ಬರೋದು ಅವರು ಊಟಕ್ಕೆ ಬರೋತನಕ ಬಳೆಗಾರ ಶೆಟ್ರನ್ನು ಅರಮನೆ ಒಳಗಡೆ ಕರ್ಕೊಂಡು ಹೋಗಿ ಬೆರಳಿ ಹಣ

ಕೊಟ್ಟು ಕೈ ತುಂಬ ಬಳೆ ತೊಡ್ಸಿ ಕೊಳ್ಳೋಣ. ಹಾಗೆ ಆಗಲಿ ಕಾಣಕ್ಕ ಇಂದ್ರಮ್ಮ ಸುಂದ್ರಮ್ಮ ಕಮಲಮ್ಮ ರತ್ನಮ್ಮ ಬೋರಮ್ಮ ಎಲ್ಲರೂ ಅದೇ ಸರಿ ಅಂತ ಬಳೆ ತೊಟ್ಕೊಂಡು ಸರಿ ಅಂತ ಮಾತ್ನಾಡ್ಕೋತ ನಿಂತಿದ್ದರಂತೆ. ಇವರು ಆರು ಜನ ಮಾರಾಣಿಯರು ಅರಮನೆಯ ಮೇಲೆ ಮಾತ್ನಾಡ್ಕೊಂಡು ಇದ್ದುದ್ದನ್ನು ಹಿರಿ ಸೊಸೆ ಬೆಟ್ಟೋಜಿಯ ಹೆಂಡ್ತಿ ಕೇಳ್ಕೊಂಡರಂತೆ. ಏನ್ರೇ ನನ್ನ ಬಿಟ್ಬಿಟ್ಟು ನೀವೇ ಮಾತ್ನಾಡುಕೊಳ್ಳುತ್ತಿದ್ದೀರಿ ಏನೇ ಇಂದ್ರಿ ಸುಂದ್ರಿ ಕಮಲಿ. ಏನಿಲ್ಲ ರಾಜಕ್ಕ ಬಳೆಗಾರ ಶೆಟ್ಟರು ಬಂದಿದ್ದಾರೆ ಬೆರಳಿ ಹಣ ಕೊಟ್ಟುಬಿಟ್ಟು ಬಳೆ ತೊಡಿಸಿಕೊಳ್ಳಬೇಕು ಅಂತ ಮಾತ್ನಾಡಿಕೊಂಡೇವು. ಎಲ್ಲೇ ಬಳೆಗಾರ ಶೆಟ್ಟಿ, ಅದೋ ಬರುತ್ತಾ ಬೀದಿ ಒಳಗೆ. ರಾಜಕ್ಕ ಬಳೆಗಾರಶೆಟ್ಟಿಯನ್ನು ನೋಡ್ಬುಟ್ಟು ಏನೇ ಇಂದ್ರಿ ಕಮಲಿ ರತ್ನಿ ನೀವೆಲ್ಲ ಬಳೆಗಾರರ ಶೆಟ್ರ ಕೈಲಿ ಬಳೆತೊಟ್ಟು ಕೊಳ್ಳಬೇಕು ಅಂತ ಮಾತ್ನಾಡ್ಕೊಳ್ಳುತ್ತಿದ್ದೀರೇನು? ಹೌದು ಕಾಣಕ್ಕ. ಆದರೆ ನಾನು ಒಂದು ಮಾತು ಹೋಳುತ್ತೀನಿ ಕೇಳುತ್ತೀರಾ ? ನೋಡಮ್ಮಿ –

ಬಳೆಯ ತೊಡಸ್ಕೊಳ್ಳೋ ಮಾತಿರಲಿ
ಬಳೆಗಾರ ಶೆಟ್ರ ಚಂದ ನೋಡಿ
ಸಿದ್ದಯ್ಯ ಸ್ವಾಮಿ ಬನ್ನಿ
ಮೂಗಿನ ಚಂದ ನೋಡಿ
ಸಂಪಿಗೆ ಮೊಗ್ಗಿನಾಗೆ
ಕಣ್ಣುಗಳ ಹೊಲಪು ನೋಡಿ
ನಿಂಬಿ ಹೋಲಿನಾಗೆ
ತುಟಿಯ ಚಂದ ನೋಡಿ
ತೊಂಡೆ ಹಣ್ಣಿನಾಗೆ
ಹಲ್ಲುಗಳ ಸಾಲು ನೋಡಿ
ತಾಳಿಂಬಿ ಬೆಟ್ಟದಾಗೆ
ಫಲ ಫಲ ಅನ್ನುತ್ತಾವನೆ ಈ ಬಳಗಾರ
ಅವನ ಅಂಗಲಿನ ಚಂದವ ನೋಡಿ
ಪೂರ್ಣಿಯ ಚಂದಿರನಂತೆ
ಅವನ ಕಡೇ ಗಣ್ಣಿನ ಚಂದವ ನೋಡಿ
ಕುಡಿ ಮಿಂಚಿನ ಹಾಗೆ
ಸಿದ್ದಯ್ಯ ಸ್ವಾಮಿ ಬನ್ನಿ

ಅಲ್ಲ ಕಾಂಡ್ರೇ ಬಳೆಯ ತೊಡಿಸೋ ಮಾತಿರಲಿ ಬಳೆಗಾರ ಶೆಟ್ರು ಎಷ್ಟು ಚನ್ನಾಗಿದ್ದಾನೆ ನೋಡ್ರೇ. ಬೀದಿಲಿ ಹೋಗುತ್ತಿರುವ ಬಳೆಗಾರ ಶೆಟ್ರ ಅರಮನೆ ಮೇಲೆ ಮಾರಾಣಿಯರು ಬರಮಾಡಿದರು ಅಂತ್ಹೇಳಿ ಕರ್ಕೊಂಡು ಬರ್‍ರಿ ಹೋಗಿ ಎಂದಾಗ ಆಗಲಿ ಕಾಣಕ್ಕ

ಅಂತ್ಹೇಳಿ – ಸೂರ್ಯ ಚಂದ್ರ ಬೀದಿ ಎಂದರೆ ಮೂಡಲ ಪಟ್ಟಣದ ಬೀದಿ ಒಳಗೆ ಬಳೇ ಬಳೇ ಯೋ ಬಳೆಗಾರ ಶೆಟ್ಟಿ. ಏನ್ರಕ್ಕ ಅರಮನೆ ಮೇಲೆ ಮಾರಾಣಿಯರು ಬಳೆ ತೊಟ್ಕೊಳ್ಳಬೇಕಂತೆ. ಬಳೆ ತಕ್ಕೊಂಡು ಬಾಯ್ಯಾ ಎಂದಾಗ ಸಿದ್ದಪ್ಪಾಜಿಯವರ ಕಣ್ಣಲ್ಲಿ ಕಣ್ಣೀರು ಜುಲು ಜುಲುನೇ ಸುರುದೋಯ್ತಂತೆ.

ಸ್ವಾಮಿ ಮನೆಯ ಕಂಡಾಯ ಹೊತ್ಕೊಂಡು
ಬೀದಿ ಒಳಗೆ ಭಿಕ್ಷೆ ಕೇಳಿದರೆ ನನ್ನ ಜಾತಿ
ಮತದ ಪಾಂಚಾಳದವರು ಒಬ್ಬರಾದರೂ
ಬಂದು ನನ್ನ ಕಂಡಾಯಕ್ಕೆ ಕರವೆತ್ತಿ ಕೈ
ಮುಗಿಯನಿಲ್ಲ ಧೂಪ ಸಾಂಬ್ರಾಣಿ ಕರ್ಪೂರ
ತೋರಲಿಲ್ಲ ದೊಡ್ಡಮ್ಮಯ್ಯೋ
ಬಸವನ ಬೆಟ್ಟದ ಹಾವು ಚೇಳು
ಹಿಡ್ಕೊಂಡು ಬಂದು ಚಿಲ್ಲಾಪುರ
ಮಾ[illegible]ಯುವರ ಬೀದಿ [illegible]
ಒಳೆ ಅ[illegible] ನಾ ಸಾರಿದರೆ
ನನ್ನ ಜಾತಿ ಮತದವರ ಹೆಂಗಸರು
ಅರಮನೆ ಮೇಲಕ್ಕೆ ಬರಮಾಡಿ
ಕಳುಗರಲ್ಲ ಈ ವಿಚಿತ್ರವನ್ನು
ನಾನೇನು ಹೇಳಲಿ
ಪರಂಜ್ಯೋತಿ ಮಂಟೇದಲಿಂಗಯ್ಯ .. ಅ ..
ಗುರುವೇ .... ಅ .. ಅ ..

ಲೋ ಬಳೆಗಾರ ಶೆಟ್ಟಿ ಯಾಕೋ ಆ ರೀತಿ ನಿಂತಿದ್ದೀಯಾ ? ಬಾರೋ ಎಂದು ಮಾರಾಣಿಯರು ಬರಮಾಡಿದರು. ಆಗಲಿ ನಡ್ರಕ್ಕ ಎಂದು ಬಳೆ ಮಲ್ಲಾರವನ್ನು ಹೊತ್ಕೊಂಡು ಅರಮನೆ ಮೇಲಕ್ಕೆ ಬಂದರಂತೆ. ರಾಣಿಯರೆಲ್ಲ ಕುಳಿತಿರುವರಂತೆ ಚಿನ್ನ ಕುರ್ಚಿಯ ಮೇಲೆ, ಅಪ್ಪಾಜಿ ಬಂದು ನಿಂತ್ಕೊಂಡಾಗ ಪಗಡಕ್ಕೇನೆ ಮಂದ್ಲಿಗೆ ಹಾಕ್ಕೊಟ್ಟರಂತೆ. ಬಳೆಗಾರ ಮಂದ್ಲಿಗೆ ಮೇಲೆ ಬಳೆಯ ಮಲ್ಲಾರವನ್ನು ಮಡಿಕೊಂಡು ಬೊಪ್ಪೇಗೌಡನ ಪುರದ ಕಡೆ ಮೊಕಮಾಡಿ ಕೂತ್ಕೊಂಡರಂತೆ. ಘನನೀಲಿ ಸಿದ್ದಪ್ಪಾಜಿ. ಪಾಳ್ಯಗಾರರ ಹೆಡ್ತಿಯರು ಏನಯ್ಯ ಬಳೆಗಾರ ಶೆಟ್ಟಿ ಯಾವ್ಯಾವ ಜಾತಿಯ ಬಳೆ ತಂದಿದ್ದೀಯಾ ? ನೋಡ್ರಕ್ಕ ನಾನು ನಾಲ್ಕು ಜಾತಿ ಬಳೆ ತಂದಿದ್ದೀನಿ. ಅಷ್ಟೇನಾ ? ಹೌದು ಕಾಂಡ್ರಕ್ಕ ಎಲ್ಲಿ ಮಲ್ಲಾರ ಬಿಚ್ಚಿ ನೋಡುತ್ತೇವೆ ಚನ್ನಾಗಿದ್ದರೆ ತಕ್ಕೋತ್ತೇವೆ. ಚನ್ನಾಗಿಲ್ಲಾಂದರೆ ಹಿಂದಕ್ಕೆ ಕಳುಗುತ್ತೀವಿ. ಮಂಟೇಸ್ವಾಮಿಯನ್ನು ನೆನ್ಕೊಂಡು ಮಲ್ಲಾರವನ್ನು ಬಿಚ್ಚಿದಾಗ ಮುತ್ತೈದೆಯರು ತೊಡುವ ಬಳೆ. ಒಂದು ಬೆಳ್ಳಿ ರೂಪಾಯಿಗೆ ಎಷ್ಟು ಬಳೆ ತೊಡುತ್ತೀಯೋ ? ನೋಡ್ರಕ್ಕ ಐದು ಬಳೆ ತೊಡುತ್ತೀನಿ. ಐದು ಬಳೆನಾ ? ಹತ್ತು

ಬಳೆ ತೊಡೋ ಸಾಧ್ಯವಿಲ್ಲ ಕಾಂಡ್ರಕ್ಕ. ತೊಡಬಹುದು ತೊಡೋ. ಏಕೆ ? ತೊಡಬಹುದು ತೊಡೋ ನಮ್ಮ ಯಜಮಾನ್ರು ಕೈತುಂಬ ಚಿನ್ನ ಬೆಳ್ಳಿ ಬಳೆನೇ ತೊಡಿಸಿದ್ದಾರೆ. ಚಿನ್ನ ಬೆಳ್ಳಿ ಬಳೆಗಿಂತ ನಿನ್ನ ಮಣ್ಣಿನ ಬಳೆ ಕಾಸು ಹೆಚ್ಚಾಯಿತ್ತದಾ ? ಏನಿಲ್ಲ ತೊಡಬಹುದು ತೊಡೋ. ನೋಡ್ರಕ್ಕ ನಿಮ್ಮ ಗಂಡಂದಿರು ಶ್ರೀಮಂತರು ಹಲಗೂರು ಚಿಲ್ಲಾಪುರ ಕಟ್ಟಾಳುವಂತ ಪಾಳ್ಯಗಾರರು ನೀವು. ನಾನು ತಂದಿರುವ ಬಳೆ ಮುತ್ತೈದೆಯರು ತೊಟ್ಟುಕೊಳ್ಳುವ ಲಕ್ಷಣವಾದ ಬಳೆ. ಗಂಡಂದಿರು ಇರೋತನಕ ನಾನು ತೊಡತಕ್ಕಂತ ಮುತ್ತೈದೆ ಬಳೆ ಅಂತ ತೊಟ್ಕೊಂಡು ಇರುತ್ತಾರೆ. ಗಂಡ ಸತ್ತೋದ ಮೇಲೆ ಇವತ್ತಿಗೆ ನಾನು ಮುಂಡೆಯಾದೆಯಂತ ನಾನು ತೊಡ್ತಕ್ಕಂತ ಬಳೆ ಎಲ್ಲಾನೂ ಆವಾಗ ಹೊಡೆದು ಹಾಕ್ಬುಟ್ಟು, ಶ್ರೀಮಂತರಾದವರು ಚಿನ್ನ ಬೆಳ್ಳಿ ಹಾಕ್ಕೋತ್ತಾರೆ. ಅದಕ್ಕಿಂತ ಶ್ರೀಮಂತರಾದವರು ಬಂಗಾರದ ಬಳೆಯನ್ನು ಹಾಕ್ಕೋ ಬಹುದು. ಹಲಗೂರು ಚಿಲ್ಲಾಪುರ ಕಟ್ಟಾಳುವ ಪಾಳ್ಯಗಾರರ ಹೆಂಡ್ತಿಯರು ಅಂತೀರಾ ? ಗಂಡಂದಿರು ಬೇರೆ ಇದ್ದಾರೆ ಅಂತೀರಾ ? ಹೀಗಿದ್ದು ಕೈ ತುಂಬ ಚಿನ್ನದ ಬಳೆಯನ್ನೇ ಮಾಡ್ಸಿ ತೊಡಸ್ಕೊಂಡು ಇದ್ದೀರಾ ಮಾರಾಣಿಯವರೆ. ನಿಮ್ಮ ಗಂಡಂದಿರು ತೊಡಿಸಿರುವಂತ ಬಳೆ ಅದು ಎಂಥಾ ಬಳೆ ಎಂಬುದು ಏನಾದರೂ ಗೊತ್ತೇ ? –

ನೀವು ಗಂಡಂದಿರು ಇದ್ದರೂ
ಮುಂಡೇರು ಕಾಣಕ್ಕ
ಗಂಡಂದಿರು ಸತ್ತರೂ ....
ಮುಂಡೇರು ಕಾಣ್ರಕ್ಕ .. ..
ಸಿದ್ದಯ್ಯ ಸ್ವಾಮಿ ಬನ್ನಿ
ಅಕ್ಕ ಗಂಡಂದಿರಿರುವ
ಮುಂಡೇರ್ನ ಇಂದು ಕಂಡಂಗಾಯ್ತು
ಸಿದ್ದಯ್ಯ ಸ್ವಾಮಿ ಬನ್ನಿ
ಬಳೆಗಾರ ಶೆಟ್ರ ಮಾತ ಕೇಳಿದ ಮಾರಾಣಿಯರು
ಇಂದ್ರಿ ಸುಂದ್ರಿ ಕಮಲಿ ಬಳೆಗಾರ ಎಂಥಾ
ಮಾತ್ನಾಡಬಿಟ್ಟ ನಿಜ ಕಾಣಮ್ಮಿ ಸುಂದ್ರಿ
ಬಳೆಗಾರನ ಮಾತು ಸುಳ್ಳಲ್ಲ
ನಮ್ಮ ಗಂಡಂದಿರು ತೊಡಿಸಿರುವ ಬಳೆ
ಮುಂಡೇರು ತೊಟ್ಟು ಕೊಳ್ಳುವ ಬಳೆ
ಬಳೆಗಾರ ತಂದಿರುವ ಬಳೆ
ಮುತ್ತೈದೆಯರು ತೊಟ್ಕೊಳ್ಳುವ
ಲಕ್ಷಣವಾದ ಬಳೆ ಅಂತ್ಹೇಳಿ ಮಾರಾಣಿಯರು
ನಮ್ಮ ಬಳೆಗಾರ ಶೆಟ್ರ ಮಾತ್ಕೇಳಿ
ಅವರ ಕೈಲಿದ್ದ ಬಳೆಗಳನೆಲ್ಲ

ಕಳದು ಕಳದು ಇಟ್ಬುಟ್ಟರಂತೆ
ಸಿದ್ದಯ್ಯ ಸ್ವಾಮಿ ಬನ್ನಿ

ಯಾವಾಗ ಬಳೆಗಾರ ಶೆಟ್ರ ಮಾತ ಕೇಳಿದ ತಕ್ಷಣ ಅವರು ಗಂಡಂದಿರು ತೊಡಿಸಿದ ಬಳೆಯನ್ನೆಲ್ಲ ಕಳದು ಇಟ್ಬುಟ್ಟರಂತೆ. ನೋಡೋ ಬಳೆಗಾರಶೆಟ್ಟಿ ತೊಡೋ ಮತ್ತೆ ಬಳೆನಾ ? ಎಂದಾಗ ಕೆಳಗೆ ಬಂದು ಕುಳಿತುಕೊಳ್ಳಿ ಆಗ ನಾನು ಬಳೆ ತೊಡುತ್ತೀನಿ ಎಂದರು. ಸಿದ್ದಪ್ಪಾಜಿಯವರ ಸುತ್ತಾ ಕುಳಿತುಕೊಂಡಾಗ ಇವರ ಕಣ್ಣಿನಲ್ಲಿ ಕಣ್ಣೀರು ಸುರಿಯುವುದಂತೆ.

ಲಕ್ಷಿಕರ ಮಗನ ತಂದು ....
ಭಿಕ್ಷುಕನ ಮಾಡಿ ....
ಪಾಳೆಗಾರರ ಮಗನ ತಂದು ..
ಪರದೇಶಿ ಮಾಡಿ ....
ಬಾಳಲಿ ಬದುಕಲಿ ನನ್ನ ಜಾತಿ ಮತದ
ಪಂಚಾಳದವರ ಹೆಂಗಸ ಕೈಹಿಡಿದು
ಬಳೆ ತೊಡಿಸುವ ವಿಧಿ ಕೊಟ್ಟೆಯಲ್ಲೋ
ಪರಂಜ್ಯೋತಿ ಮಂಟೇದಲಿಂಗಯ್ಯ

ಬಳೆಗಾರ ನಮ್ಮ ಯಜಮಾನ್ರು ಬರು ಹೊತ್ತಾಯ್ತು. ತೊಡೋ ಬೇಗ ಬೇಗ. ಆವಾಗ ಮಾರಾಣಿಯರೆಲ್ಲ ಕೈ ಕೊಡುವಾಗ ಸ್ವಾಮಿ ಮಾಯದ ಬಳೆಗಳನ್ನ ಮಾಡ್ಕೊಂಡು ಹೋಗಿದ್ದ ಮಾಯದ ಸಿದ್ದಪ್ಪಾಜಿ ಮಾರಾಣಿಯರ ಕೈಗೆ ಬಳೆ ತೊಡುವಾಗ –

ಉದ್ದುದ್ದಾಗಿರುವವರಿಗೆಲ್ಲ ನಾಗರದಾವಿನ ಬಳೆ
ಬೆಳ್ಳಬೆಳ್ಳಗಿರುವವರಿಗೆಲ್ಲ ಒಳ್ಳಾವಿನ ಬಳೆ
ದಪ್ಪದಪ್ಪಗಿರೋರಿಗೆಲ್ಲ ಮಂಡಲದಾವಿನ ಬಳೆ
ಹಸಿರು ಸೀರೆ ಹುಟ್ಟಿದವರಿಗೆಲ್ಲ ಹಸಿರಾವಿನ ಬಳೆ
ಕೆಂಪ್ಕೆಂಪ್ಗೆ ಇರೋರಿಗೆಲ್ಲ ಕಡಗದ ಬಳೆಗಳಂತೆ
ಕರ್ಕಗ್ಗೆ ಇರೋರಿಗೆಲ್ಲ ತೆವ್ಳಿನ ಬಳೆಗಳಂತೆ
ಸ್ವಾಮಿ ಹಾವು ಚೇಳಿನ ಬಳೆನೆಲ್ಲ ತೊಟ್ಟರಂತೆ
ನಮ್ಮ ಘನನೀಲಿ ....

ಸಿದ್ದಪ್ಪಾಜಿ ಪಾಳ್ಯಗಾರರ ಹೆಂಡ್ತಿಯರ ಕೈಗೆಲ್ಲ ಬಳೆ ತೊಟ್ಟರಂತೆ. ಮಾರಾಣಿಯವರು ಚಿನ್ನ ಬೆರಳಿ ಹಣ ತಂದು ಕೊಟ್ಟು, ಹೋಗೋ ಬಳೆಗಾರ ಶೇಟ್ಟಿ, ನಮ್ಮ ಯಜಮಾನ್ರು ಬರೋ ಹೊತ್ತಾಯ್ತು. ಹೋಗು ಅಂತ ಯಾವಾಗ ಕಳುಗಿಸ್ಬುಟ್ಟರೋ ಸ್ವಾಮಿ ಸಿದ್ದಪ್ಪಾಜಿಯವರು ಕೊಟ್ಟ ಚಿನ್ನ ಬೆರಳಿ ಹಣ ಈಸ್ಕೊಂಡು ಬಂದು ಹಲಗೂರು ಚಿಲ್ಲಾಪುರ ಮಧ್ಯೆ ಇರುವ ಕಾಳಮ್ಮನ ದೇವಸ್ಥಾನಕ್ಕೆ ಬಂದು ಕೂತ್ಕೊಂಡಾಗ ಪಾಳ್ಯಗಾರರ

ಹೆಂಡ್ತೀರೆಲ್ಲ ಕಣಿಬೀದಿಗೋಗಿ ಅವರು ಕೊಪ್ಪರಿಕೆ ಒಳಗಡೆ ಪನ್ನೀರು ತುಂಬ್ಕೊಂಡು ಪನ್ನೀರು ಸ್ನಾನ ಮಾಡ್ಕೊಂಡು ಗಂಧದ ಎಣ್ಣೆ ಒಳಗಡೆ ಸಂಪಿಗೆ ಎಣ್ಣೆ ಒಳಗೆ ಶ್ರೀಮಂತ ಮಾರಾಣಿಯರೆಲ್ಲ ಸ್ನಾನ ಮಾಡ್ಕೊಂಡು ಪಟ್ಟೆ ಸೀರೆ ಉಟ್ಕೊಂಡು ಮೊಗ್ಗಿನ ರವಕೆ ಹಾಕ್ಕೊಂಡು ಕೀಚಿ ಬಾಚಿ ಎಲ್ಲಿ ಹೆಣ್ಕೊಂಡು ಮಂಡೆ ತುಂಬ ಮಲ್ಲಿಗೆ ಹೂವು. ಕಿವಿಗೆ ವಜ್ರದ ಓಲೆ ಧರಿಸಿ ಮೂಗಿನ ಮೂಗುತ್ತಿ ಧರಿಸಿ, ಕಾಲಿನ ಕಡಗ ಕೈನ ಕಡಗ ನತ್ತಿನ ಕೈನ ಪದಕ ಎಲ್ಲ ಧರಸ್ಕೊಂಡು ಬಳೆಗಾರ ಶೆಟ್ಟಿ ತೊಡಿಸಿರುವ ಬಳೆಯನ್ನು ಧರಿಸಿ ನೋಡ್ರಕ್ಕ ಇಂದ್ರಿ ನನ್ನ ಕೈನ ಬಳೆ ನೋಡೆ ಲೇ ಚಂದ್ರಿ ನನ್ನ ಕೈನ ಬಳೆ ನೋಡೆ ಅಂತ ಅವರವರ ಕೈನ ಬಳೆಯನ್ನು ಅವರವರು ತಿರುಗಿಸಿ ನೋಡ್ಕೋತಾ ಕುಂತಿದ್ದರಂತೆ. ಚಿಲ್ಲಾಪುರದ ಅರಮನೆ ಒಳಗಡೆ ಕಾಳಮ್ಮನ ದೇವಸ್ಥಾನದಲ್ಲಿ ಕುಂತಿರುವ ಮಾಯ್ಕಾರ ಸಿದ್ದಪ್ಪಾಜಿ ಕಪ್ಪು ಧೂಳ್ತ ತಕ್ಕೊಂಡು ಎಲಾ ನನ್ನ ಜಾತಿ ಮತದ ಪಾಳ್ಯಗಾರರ ಹೆಂಡ್ತಿಯರೇ ಅವು ಒಳ್ಳೆ ಬಳೆ ಅಂತ ತಿಳ್ಕೊಂಡು ಅಂದ ನೋಡಿ, ಚೆಂದ ನೋಡಿ ತಿರುಗಿಸಿ ತಿರುಗಿಸಿ ನೋಡ್ತಾ ಇದ್ದೀರಾ ? ಸಿದ್ದಪ್ಪಾಜಿ ಕಪ್ಪು ಧೂಳ್ತ ತೆಗೆದು –

ಕಪ್ಪು ಧೂಳ್ತ ತೆಗೆದಾರಂತೆ
ಉಪ್ ಅಂತ ಉರುಬುದರಂತೆ
ಸಿದ್ದಯ್ಯ ಸ್ವಾಮಿ ಬನ್ನಿ
ಕಪ್ಪು ಧೂಳ್ತ ತೆಗೆದು ....
ಉಪ್ನೆ ಉರುಬುದಾಗ
ಸ್ವಾಮಿ ಇಟ್ಟ ಧೂಳ್ತ
ಚಿಲ್ಲಾಪುರದ ಅರಮನೆ ಒಳಗಡೆ
ಕುಳಿತಿದ್ದ ಮಾರಾಣಿಗೆ ಬಿದ್ದಾಗ
ಕೈಲಿದ್ದ ಬಳೆಗಳು ಹೊರಟ್ಹೋದವಂತೆ
ಹಾವು ಚೇಳು ಆಗೋದವಂತೆ
ಸಿದ್ದಯ್ಯ ಸ್ವಾಮಿ ಬನ್ನಿ
ಕೈಲಿದ್ದ ಬಳೆಗಳೆಲ್ಲ ಮಾಯವಾಗಿ
ಹೊರಟಾಗ ಹಾವು ಚೇಳು ಆಗೋಗಿ
ತೊಡ ತೋಳು ಊದ್ಕೊಂಡು
ಹಾವು ಚೇಳುಗಳೆಲ್ಲ
ಆ ಹಾವು ಚೇಳುಗಳ ಕಾಟ
ತಡೆಯಲಾರದೆ ಲಬಲಬನೇ
ಬಾಯ್ಬಡಿದು ತುಮ್ಮ ತುಮ್ಮನೆ
ಕುಣಿದು ಗುಡುಗುಡೂನೆ ಓಡೋಗಿ
ಕೋಣೆ ಒಳಗೆ ನುಗ್ಕೊಂಡರಂತೆ
ಹಾವು ಚೇಳು ಬರದೆ ಹೋಗಲಿಯಂತ

ಸ್ವಾಮಿಯವರ ಮೈಮೆಯಿಂದ
ಕೋಣೆ ಒಳಗೆ ಹೆಗ್ಗಡಜ ಹಾರ್ಬಿಟ್ಟು
ಮಾರಾಣಿಯರಿಗೆಲ್ಲ ಹೆಗ್ಗಡಜ ಮುತ್ತ್ಕೊಂಡು
ತುರುಕ ತುರುಕನೆ ಕಚ್ಚಿ ಚುಚ್ಚಿದರಿಂದ
ಪರ್ರಪರ್ರನೆ ಕೆರೆಯುತ್ತಾರೆ
ತುರ್ಕ ತುರ್ಕನೆ ಕಚ್ಚಿ
ಪರ್ರಪರ್ರನೆ ಕೆರೆದು
ಮಾರಾಣಿಯರೆಲ್ಲ ಚಿಲ್ಲಾಪುರದ
ಒಳಗೆ ಬಾಯಿ ಬಾಯ ಬಡಿದಾರಂತೆ
ಥೈ ಥೈ ಕುಣಿದಾರಂತೆ
ಸಿದ್ದಯ್ಯ ಸ್ವಾಮಿ ಬನ್ನಿ

ಮಾರಾಣಿಯರು ಚಿಲ್ಲಾಪುರದಲ್ಲಿ ಆ ಕಡಜಗಳ ಕಾಟ ತಾಳಲಾರದೆ ಜೊತೆಗೆ ಹಾವು ಚೇಳುಗಳ ಕಾಟ ತಾಳಲಾರದೆ ತುಮ್ಮ ತುಮ್ಮನೆ ಕುಣಿದು ಬಾಯಿಯ ಯಾವಾಗ ಬಡಿದು ಕೂಗ್‌ಬಿಟ್ಟ ಶಬ್ದ ಅವರ ಗಂಡಂದಿರುಗಳಾಗ ಮುತ್ತೋಜಿ ಸಿದ್ದೋಜಿ ಪುಟ್ಟೋಜಿ ರತ್ನೋಜಿ ಕೆಂಡೋಜಿ ಬೆಟ್ಟೋಜಿಗೆ ಕೇಳ್ಬಿಡ್ತಂತೆ. ಗಂಡಂದಿರು ಇಲ್ಲದ ಅಂಕೆ ಶಂಕೆ ಇಲ್ಲವೇ ಕೆಂಡೋಜಿ ಹೋಗಿ ವಿಚಾರ ತಿಳ್ಕೊಂಡು ಬಾ ಹೋಗು ಎಂದು ಚಿಲ್ಲಾಪುರಕ್ಕೆ ಕಳುಗುತ್ತಾರೆ. ಈ ವಿಷಯ ಕಾಳಮ್ಮ ದೇವಸ್ಥಾನದಲ್ಲಿ ಕುಳಿತಿರುವ ಸಿದ್ದಪ್ಪಾಜಿಯವರ ಪಾದಕ್ಕೆ ಪ್ರಿಯವಾಯ್ತಂತೆ. ಆಗ ಮತ್ತೆ ಕಪ್ಪು ಧೂಳ್ತವನ್ನು ಚಿಲ್ಲಾಪುರದ ಮೇಲೆ ಹಾಕಿದರಂತೆ. ಕಪ್ಪು ಧೂಳ್ತ ಬಿದ್ದೇಟಿಗೆ ಹಾವು ಚೇಳು ಕಡಜಗಳೆಲ್ಲ ಮಾಯವಾದವಂತೆ. ಈಕಡೆ ಕೆಂಡೋಜಿ ಬಂದು ಏಣ್ರೆ ಈ ರೀತಿ ಕಿರುಚ್ಕೊತ್ತಾ ಇದ್ದಿರಲ್ಲ ನಿಮಗೆ ಏನು ಕಾಣಿಸ್ಕೊಂಡಿದೆ. ಯಾರೋ ಬಳೆಗಾರಶೆಟ್ಟಿ ಬಂದಿದ್ದ ನಾವು ಚಿನ್ನ ಬೆಳ್ಳಿ ಹಣ ಕೊಟ್ಟು ಬಳೆ ತೊಡಿಸಿ ಕೊಂಡೇವು. ಅವನೇನು ಅಂತ್ರಗಾರನೋ ಮಂತ್ರಗಾರನೋ ಮದ್ದುಗಾರನೋ ಮಾಟ್ನಕಾರನೋ ಮೋಡಿ ವಿದ್ಯೆ ಕಲಿತ್ಕೊಂಡು ಬಂದಿದ್ದನೋ ತಿಳಿಯದು ನಮಗೆ. ಅವನು ತೊಡಿಸಿದ ಬಳೆ ಎಲ್ಲ ನಮ್ಮ ಕೈಯಲ್ಲಿ ಹಾವು ಚೇಳಾಗಿ ನಮ್ಮನ್ನೆಲ್ಲ ಓಡಾಡಿಸಿ ಕಡದಾಕಿ ಬಿಟ್ಟವು. ಹಾವು ಚೇಳು ಕಡಜಗಳ ಕಾಟ ತಡೆಯಲಾರದೆ ಬಾಯಿ ಬಡ್ಕುಬುಟ್ಟೆವು ನಾವು ಮಾಡಿದ ಅಪರಾಧ ಇಷ್ಟೇ. ಇನ್ನೇನು ನಾವು ತಪ್ಪು ಮಾಡಲಿಲ್ಲ.

ಕೆಂಡೋಜಿ ಹಿಂದಿರುಗಿ ಹೆಗ್ಗುಲುಮೆ ತಿಟ್ಟಿಗೆ ಹೋದಾಗ ಚಿಲ್ಲಾಪುರಕ್ಕೆ ಹೋಗಿದ್ದೇಯಲ್ಲ ಏನು ಸಮಾಚಾರ ಎಂದು ಅಣ್ಣಂದಿರು ಕೇಳಿದರು. ನೋಡ್ರಣ್ಣ ಯಾವುದೋ ಬಳೆಗಾರ ಶೆಟ್ಟಿ ಬಂದಿದ್ದನಂತೆ ಚಿಲ್ಲಾಪುರಕ್ಕೆ ಬಳೆ ತೊಡಿಸಿ ಹೋದ ಮೇಲೆ ಆ ಬಳೆಗಳೆಲ್ಲ ಹಾವು ಚೇಳು ಕಡಜಗಳಾಗಿ ವಿಪರೀತ ಕಡದು ಹಾಕ್ಬಿಟ್ಟಿದೆಯಂತೆ. ಆಗ ಆ ರೀತಿ ಕೂಗ್ಕೊಂಡರಂತೆ. ನಾನು ಹೋಗಿ ನೋಡಿದಾಗ ಆ ರೀತಿ ಇರಲಿಲ್ಲ ಕಾಣಣ್ಣ ಉಳಿದ ಆರು ಜನ ಪಾಳ್ಯಗಾರರು

ಏನಣ್ಣ ಅವಮಾನ ....
ಹಲಗೂರು ಚಿಲ್ಲಾಪುರ
ಉತ್ಪತ್ತಿಯಾದಂತ ಕಾಲಕ್ಕೂ
ಯಾರೂ ಬಂದಿರಲಿಲ್ಲ
ಅಣ್ಣ ಬಳೆಗಾರ ನೋಡಣ್ಣ
ಎಲ್ಲಾಣೆ ಬಂದಾನಣ್ಣ
ಸಿದ್ದಯ್ಯ ಸ್ವಾಮಿ ಬನ್ನಿ
ಅಣ್ಣ ಊರಿಗೆ ಬಂದ ಬಳೆಗಾರನದೇ
ಮೊದಲನೆಯ ತಪ್ಪು ಅಂದರಂತೆ
ಸಿದ್ದಯ್ಯ ಸ್ವಾಮಿ ಬನ್ನಿ
ಈ ಪುಟ್ಟೋಜಿ ಆಡಿದ ಮಾತ
ರತ್ನೋಜಿ ಕೇಳ್ಕೊಂಡು
ಬಳೆಗಾರನದು ತಪ್ಪಲ್ಲ
ಹಲಗೂರು ಸುತ್ತ ಕಾವಲು
ಕಾಯ್ಕೊಂಡಿರುವ ಮಾರಿಯರದು
ಮೊದಲನೆಯ ತಪ್ಪು
ಸಿದ್ದಯ್ಯ ಸ್ವಾಮಿ ಬನ್ನಿ
ಅವನೇಳಿದ ಮಾತ ನಿಂಗೋಜಿ
ಕೇಳ್ಕೊಂಡು ಮಾರಿಯರದೂ ತಪ್ಪಲ್ಲ
ಬಳೆಗಾರನದೂ ತಪ್ಪಲ್ಲ
ಕೈಕೊಟ್ಟು ಬಳೆ ತೊಡಸ್ಕೊಂಡರಲ್ಲ
ನಮ್ಮ ಹೆಂಡ್ತಿಯರದೇ ಮೊದಲನೇ ತಪ್ಪು
ಸಿದ್ದಯ್ಯ ಸ್ವಾಮಿ ಬನ್ನಿ
ಲಿಂಗೋಜಿ ಆಡಿದ ಮಾತ ರತ್ನೋಜಿ ಕೇಳ್ಕೊಂಡು
ಯಾರದೂ ತಪ್ಪಲ್ಲ ಹೆಂಡ್ತಿಯರದು ತಪ್ಪಲ್ಲ
ಹೆಂಡ್ತಿಯರಿಗೆ ಅಧಿಕಾರ ಕೊಟ್ಟ ಪಾಳ್ಯಗಾರರದೇ
ಮೊದಲನೆಯ ತಪ್ಪು
ಸಿದ್ದಯ್ಯ ಸ್ವಾಮಿ ಬನ್ನಿ
ಬೀದೀಲಿ ಹೋದ ಬಳೆಗಾರನ
ಕೈಸನ್ನೆ ಯಾಕೆ ಮಾಡಿದರು
ಕೈನ ಯಾಕೆ ಕೊಟ್ಟು ಬಳೆಯನ್ನ
ಯಾಕೆ ತೊಡಸ್ಕೊಂಡ್ರು
ಅಣ್ಣ ಕೈ ಕೊಟ್ಟು ಬಳೆ ತೊಡಿಸಿದ

ನಮ್ಮ ಹೆಂಡ್ತಿಯರದೆ ಮೊದಲನೇ ತಪ್ಪು
ಸಿದ್ದಯ್ಯ ಸ್ವಾಮಿ ಬನ್ನಿ
ಹೆಂಡ್ತಿಯರದೂ ತಪ್ಪಲ್ಲ
ಬಳೆಗಾರನದೂ ತಪ್ಪಲ್ಲ
ಮಾರಿಯರದೂ ತಪ್ಪಲ್ಲ
ಅಣ್ಣ ಹೆಂಡ್ತಿಯರಿಗೆಲ್ಲ
ಅಧಿಕಾರ ಕೊಟ್ಟ ಪಾಳ್ಯಗಾರರದೇ
ಮೊದಲನೆಯ ತಪ್ಪು
ಸಿದ್ದಯ್ಯ ಸ್ವಾಮಿ ಬನ್ನಿ

ಬಳೆಗಾರ ಎಲ್ಲೂ ಹೋಗಿರಕ್ಕಿಲ್ಲ ಎಂದು ಪಾಳ್ಯಗಾರರು ಹೇಳಿದ ಮಾತನ್ನು ಕೇಳಿ ಜಾತಿ ಮತದವರೆಲ್ಲ ಭರ್ಜಿ, ದೊಣ್ಣೆ, ಮಚ್ಚು ತೆಗೆದುಕೊಂಡು ಏಳೇಳು ಹದಿನಾಲ್ಕು ಬೀದಿಯಲ್ಲೂ ಹುಡುಕುತ್ತಿರುವರಂತೆ. ಕಾಳಮ್ಮನ ದೇವಸ್ಥಾನದಲ್ಲಿ ಕುಂತಿರುವಂತ ಸಿದ್ದಪ್ಪಾಜಿ ಬೊಪ್ಪೇಗೌಡನ ಪುರಕ್ಕೆ ಕರವೆತ್ತಿ ಕೈ ಮುಗಿದರಂತೆ. ಆಗ ದೊಡ್ಡಮ್ಮ ತಾಯಿ ಪಾದಕ್ಕೆ ಪ್ರಿಯವಾಯ್ತಂತೆ. ದೊಡ್ಡಮ್ಮತಾಯಿ ಕಾಳಮ್ಮನ ದೇವಸ್ಥಾನಕ್ಕೆ ಬಂದು ಪ್ರತ್ಯಕ್ಷಳಾದಳಂತೆ. ಸಿದ್ದಪ್ಪಾಜಿ ನಿನ್ನ ಜಾತಿಯವರಿಗೆ ಹೆದರ್ಕೊಂಡು ಕಾಳಮ್ಮನ ದೇವಸ್ಥಾನದಲ್ಲಿ ಕುಳಿತಿದ್ದರೆ ನೀನು ಪ್ರಪಂಚಕ್ಕೆ ದೇವರಾಯ್ತಿಯೋ ? ಆಗಲಾರೆ. ಕಾಳಮ್ಮನ ದೇವಸ್ಥಾನದಲ್ಲಿ ಮಡುಗಿದೆಯಲ್ಲ ಬಿಂಕ ಬಿರುದು ಲಾಂಛಾನವನ್ನೆಲ್ಲ ಧರಸ್ಕೊಂಡು ಬಳೆಯ ತೊಟ್ಟವರ ಬೀದಿಯಲ್ಲಿ ನೀನು ಭಿಕ್ಷೆ ಕೇಳ್ಕೊಂಡು ಹೋಗಪ್ಪ ಅವರ ಕಣ್ಣಿಗೆ ಕಾಣಿಸ್ಕೋ ಅವರು ಕೊಡುವಂತ ಕಷ್ಟವೆಲ್ಲ ನಮಗಿರಲಿ ಸುಖ ಮಾತ್ರ ನಿನಗಿರಲಿ ಬಾರಪ್ಪ ಎಂದು ದೊಡ್ಡಮ್ಮತಾಯಿ ಮಗನಿಗೆ ಹೇಳಿದಾಗ ಆಯ್ತು ದೊಡ್ಡಮ್ಮ ನಿಮ್ಮ ಶಿರಪಾದವೇ ಗತಿ ಎನ್ನುತ್ತಾ ಸ್ವಾಮಿ

ಬಳೆಯ ತೊಟ್ಟವರ ಬೀದಿಗೆ
ದಾನ ಧರ್ಮ ಸಾರ್ಕೊಂಡು
ಬರುತ್ತಾರಂತೆ ಘನನೀಲಿ ....
ಸಿದ್ದಯ್ಯ ಸ್ವಾಮಿ ಬನ್ನಿ ....
ಚಿಲ್ಲಾಪುರದ ಬೀದಿ ಒಳಗೆ ಸ್ವಾಮಿ
ಜಾತಿ ಮತದ ಪಾಂಚಾಳದವರು
ಕಂಡುಕೊಂಡರಂತೆ ಸಿಕ್ಕಿದ ಬಳೆಗಾರ
ಕಾನಣ್ಣ ಹಿಡಿರೀ ಹಿಡಿರೀ ಎಂದು
ಹಗ್ಗವ ತೆಗೆದಾರಂತೆ ಕೈಕಾಲ
ಕಟ್ಟಿದರಂತೆ ....
ಸಿದ್ದಯ್ಯ ಸ್ವಾಮಿ ಬನ್ನಿ

ಕೈಕಾಲಕಟ್ಟಿ ಹೆಗ್ಗಲುಮೆ ತಿಟ್ಟಿಗೆ
ಎಳ್ಕೊಂಡು ಬರುತ್ತಾವ್ರೆ
ಸಿದ್ದಯ್ಯ ಸ್ವಾಮಿ ಬನ್ನಿ

ಎಲ್ಲಾ ಕಡೆ ಹುಡುಕಿದ್ದರೂ ಎಲ್ಲೂ ಸಿಕ್ಕಿಲ್ಲ. ಕಾವಿ ಕಾಮಂಡಲ ಧರಿಸಿದ್ದ ಇವನೇ ಇರಬಹುದು ಅಂತ್ಹೇಳಿ ಎಳ್ಕೊಂಡು ಬಂದಿದ್ದೀವಿ. ನೀವು ವಿಚಾರಣೆ ಮಾಡಿ ಎಂದು ಹೇಳಿದಾಗ ಈ ಏಳು ಜನ ಪಾಳ್ಯಗಾರರು ಕೆಂಡಗಣ್ಣಿಂದ ಕೆಕ್ಕರಿಸಿ ನೋಡಿದರಂತೆ. ಯಾರು ನೀನು ಹೇಳು ಎಂದು ಏಕವಚನದಲ್ಲಿ ಮಾತನಾಡಿಸುವಾಗ ಅಯ್ಯೋ ನನ್ನ ಹೆಗಲ ಮೇಲಿರುವ ಕಂಡಾಯ ಮತ್ತು ತಂಬೂರಿಯನ್ನಾದರೂ ನೋಡಿ ಯಾರಪ್ಪ ಎಂದು ನಿಮ್ಮ ಬಾಯಿನಲ್ಲಿ ಬರಲಿಲ್ಲವಲ್ಲ ಯಾರೋ ನೀನು ಎಂದು ಏಕವಚನದಲ್ಲಿ ಮಾತನಾಡುತ್ತಿದ್ದೀರಲ್ಲಪ್ಪ

ಬಳೆ ತೊಡಿಸಿದವನು
ನಾನೇ ಕಾಂಡ್ರೋ
ನಿಮ್ಮ ಹೆಂಡ್ತಿಯರ
ಕೈಹಿಡ್ದವನು ನಾನೇ ಕಾಂಡ್ರೋ
ಸಿದ್ದಯ್ಯ ಸ್ವಾಮಿ ಬನ್ನಿ

ನಿಮ್ಮ ಹೆಂಡ್ತಿಯರಿಗೆ ಬಳೆಯ ತೊಡಿಸಿದವನು ನಾನೇ, ನಿಮ್ಮ ಹೆಂಡ್ತಿಯರ ಕೈಹಿಡಿದವನು ನಾನೇ ಚಿಲ್ಲಾಪುರದಲ್ಲಿ ಎಂದು ಹೇಳಿದಾಗ ಏಳು ಜನ ಪಾಳ್ಯಗಾರರು ಹಲಗೂರು ಚಿಲ್ಲಾಪುರ ಹುಟ್ಟಿದ ಕಾಲದಿಂದ ನಮ್ಮ ಎದುರು ನಿಂತು ಮಾತನಾಡಿದವರಿಲ್ಲ. ಇವನು ಯಾರಾಗಿರಬಹುದು ? ಮೊದಲು ಶುದ್ಧ ಮಾಡಿ ಅವನನ್ನ ಎಂದರು ಪಾಂಚಾಳರು. ಆವಾಗ ಸಿದ್ದೋಜಿ ಸ್ವಲ್ಪ ನಿಧಾನಿಸಿ ಅಣ್ಣಯ್ಯ ಅಂದರಂತೆ. ಇವನ ವೇಷಭೂಷಣವನ್ನು ನೋಡಿದರಂತೆ. ಇವನ ಹಾವಭಾವ ನೋಡಿದರಂತೆ. ನನಗೆ ಸ್ವಲ್ಪ ಅನುಮಾನ. ನೋಡ್ಲಾ ನಿಜವಾಗಿ ಹೇಳು ನೀನು ಯಾರಂತ? ಎಂಬುದಾಗಿ ಸಿದ್ದೋಜಿ ಕೇಳಿದರಂತೆ. ಆವಾಗ ನೋಡ್ರಣ್ಣ ಸಿದ್ದೋಜಿ ಮರ್ಯಾದೆಯಿಂದ ನೀವು ನಿಜವಾಗಿ ಹೇಳಿ ಎಂದು ಕೇಳಿದ ಮೇಲೆ ನಿಜ ಹೇಳುವುದು ಧರ್ಮ, ಸತ್ಯ. ನೋಡ್ರಣ್ಣ ನಾನು ನಿಮ್ಮ ಜಾತಿಕನೇ ಅಂದ್ರೆ ಮಾರಳ್ಳಿ ಒಳಗಡೆ ಮುದ್ದೋಜಿ ಹೊಟ್ಟೆ ಒಳಗಡೆ ಹುಟ್ಟಿದ ಏಳನೆಯ ಮಗ ಎಳೆಯ ಕೆಂಪಾಚಾರಿ. ಅಯ್ಯಯ್ಯೋ ಪರದೇಸಿ ನಮ್ಮ ಜಾತಿ ಮತದವನಾಗಿದ್ದುಕೊಂಡು ಪರದೇಸಿ ವೇಷವನ್ನು ತೊಟ್ಟು ಬಂದಿದ್ದೆಯಲ್ಲ. ಏನು ನಿನ್ನ ಕಂತೆ ಬೊಂತೆಯಲ್ಲ ಎಂದು ಕೇಳಿದಾಗ ನಾನು ಇವತ್ತು ಮಾರಳ್ಳಿ ಮುದ್ದೋಜಿ ಎಳೆಯ ಕೆಂಪಾಚಾರಿಯ ಮಗನಲ್ಲ. ಮತ್ತೆ ? ರಾಜಬೊಪ್ಪೇಗೌಡನಪುರದ ಮಂಟೆಸ್ವಾಮಿಯ ಮಗ ನೀಲಿಸಿದ್ದಪ್ಪಾಜಿ. ಏನು ಯಾರ ಮಗ ? ಧರೆಗೆದೊಡ್ಡವರ ಮಗ. ನೋಡೋ ಪರದೇಸಿ ನಮ್ಮ ಜಾತಿಯವರ ಹೊಟ್ಟೆಯಲ್ಲಿ ಹುಟ್ಟಿ ನಮ್ಮ ಜಾತಿಯವನ ಹೊಟ್ಟೆಯಲ್ಲಿ ಬೆಳೆದು ನೀನು ಇನ್ನೊಬ್ಬನಿಗೆ ಮಗ ಅಂತ ಹೇಳ್ಕೋತಾ ಇದ್ದೀಯಾ ?

ಧರೆಗೆದೊಡ್ಡವ ಅಂದ್ರೆ ನೀನು
ಧರೆಗಾತ್ರ ಇದ್ದೀಯೇನೋ ?
ಸಿದ್ದಯ್ಯ ಸ್ವಾಮಿ ಬನ್ನಿ
ಹಾಳಾದ ತಿರುಕ ಲಿಂಗಯ್ಯ ಸ್ವಾಮಿ ಬನ್ನಿ

ಧರೆಗೆದೊಡ್ಡವ ಅಂದ್ರೆ ಧರೆಗಾತ್ರ ಇದ್ದಾನಾ ? ಏನೋ ನಮ್ಮ ಜಾತಿಕನಾದುದರಿಂದ ಹೇಳ್ತಾ ಇದ್ದೀವಿ ಕೇಳು. ನಮ್ಮ ಮತದವನಾದ್ದರಿಂದ ನಮ್ಮ ೭೭೦ ಕುಲಕ್ಕೆಲ್ಲ ನಿನ್ನ ದೊರೆ ಮಾಡ್ಕೊಳ್ತೀವಿ. ನಮ್ಮ ಏಳು ಜನ ಪಾಳೆಗಾರತನವನ್ನೆಲ್ಲ ನಿಮ್ಮೊಬ್ಬನಿಗೆ ಕಟ್ಟುತ್ತೀವಿ. ಚಿಲ್ಲಾಪುರದಲ್ಲಿ ದೊರೆಯಾಗಿ ನಮ್ಮ ಜಾತಿಕರ ಜೊತೆಯಲ್ಲಿರಿ ಎಂಬುದಾಗಿ ಕಂತೆ ಬೊಂತೆ ಎಲ್ಲವನ್ನು ತೆಗೆದು ಉರಿಯುತ್ತಾ ಇರುವ ಕುಲುಮೆ ಒಳಗೆ ಉರ್ಹೋಗಲಿ ಎಂದಾರಂತೆ. ಅಣ್ಣ ಪಾಂಚಾಳದವರೇ ನಾನು ದೊರೆಯಾಗಬೇಕು ಎಂಬ ಆಸೆ ಪಡ್ನಿಲ್ಲ ಜಗತ್ತಿಗೆ ದೇವರಾಗಬೇಕು. ಧರೆಗೆದೊಡ್ಡವರಿಗೆ ನಾನು ಮಗನಾಗಬೇಕು. ಹಾಗಿದ್ದರೆ ನಾವು ಹೇಳತಕ್ಕಂತ ಮಾತು ಕೇಳುವುದಿಲ್ಲವೇ. ದೇವರಾಗಬೇಕು, ದೊರೆ ಆಗಬೇಕಾದ್ದಿಲ್ಲ ಹಾಗಿದ್ದ ಮೇಲೆ ಹಲಗೂರು ಚಿಲ್ಲಾಪುರಕ್ಕೆ ಯಾಕೆ ಬಂದಿದ್ದೀಯಾ ? ನನ್ನ ಪರಂಜ್ಯೋತಿ ಮಂಟೇಸ್ವಾಮಿ ಬೊಪ್ಪೇಗೌಡನಪುರದಲ್ಲಿ ಇರತಕ್ಕಂತವರಿಗೆ ನಾನು ಮಠಮನೆ ಕಟ್ಟಿಸಿ ಕೊಡಬೇಕು. ಅದಕ್ಕೆ ಕಬ್ಬಿಣದ ಆಯುಧಾನಗಳು ಆಗಬೇಕು. ಎಳೆ ಗುದ್ಲಿ, ಮಣ್ಣು ಗುದ್ಲಿ, ಪಿಕ್ಕಾಶಿ, ಹಾರ (ದಬ್ಬ) ಕಬ್ಬಿಣದ ತೊಲಗಂಬ ಆಗಬೇಕು. ಕಾಲಿನ ಕಡಗ, ಕೈನ ಕಡಗ, ನೆತ್ತಿ ಮಲ್ಕು, ಕತ್ತಿನ ಪದಕ, ಕುಂಕುಮ ಸಮೇತವಾಗಿ ವಜ್ರದ ಓಲೆ, ಮೂಗುತಿ ಸಮೇತವಾಗಿ ಆಗ್ಬೇಕು ಕಾನ್ರಣ್ಣ ಜಾತಿಮತದವರಾದ ಹಲಗೂರು ಚಿಲ್ಲಾಪುರ ಪಾಂಚಾಳದವರೇ–

ನನಗೆ ಕಬ್ಬಿಣದ ಆಯುಧಾನಗಳ
ಮಾಡಿಸಿ ಕೊಡಿ ಅಂದಾರಂತೆ
ಸಿದ್ದಯ್ಯ ಸ್ವಾಮಿ ಬನ್ನಿ
ಹಾಗಂದ ಮಾತ ಕೇಳಿದರಂತೆ
ಪಾಂಚಾಳದವರು ನಮ್ಮ ಹಲಗೂರು
ಚಿಲ್ಲಾಪುರಕ್ಕೆ ಬಂದದು ಅಲ್ಲದೇ
ಕಬ್ಬಿಣದ ಆಯುಧಾನ ಮಾಡ್ಸಿ
ಅನ್ತಾವನಲ್ಲ ಹಾಳಾದ ಪರದೇಸಿ
ಈ ಕಬ್ಬಿಣ ಕೇಳುವ ಸಿದ್ದನ
ಶುದ್ಧ ಮಾಡಿ ಅಂದಾರಂತೆ
ಸಿದ್ದಯ್ಯ ಸ್ವಾಮಿ ಬನ್ನಿ
ಜಾತಿ ಮತದವರೆಲ್ಲ ಹೆಗಲ ಮೇಲೆ
ಹೊತ್ತಿರುವ ಕಂಡಾಯ ಕಿತ್ತಾರಂತೆ

ಕೆಳಗಡೆ ತೂದು ಇಟ್ಟಾರಂತೆ
ಸಿದ್ದಯ್ಯ ಸ್ವಾಮಿ ಬನ್ನಿ
ಅಡಗಲ್ಲಿನ ಮೇಲೆ ಕುಂದ್ರಸ್ಕೊಂಡು
ಸ್ವಾಮಿನ ಗೋಡೆ ಸುತ್ತಿಗೆ ತಕ್ಕೊಂಡು
ಒಂದೇಟು ಹೊಡೆದಾಗ ಪರಂಜ್ಯೋತಿ
ನೆನೆದಾವ್ರೆ
ಸಿದ್ದಯ್ಯ ಸ್ವಾಮಿ ಬನ್ನಿ
ಎರಡೇಟು ಹೊಡೆದಾಗ ರೇಚಪ್ಪಾಜಿ
ನೆನೆದಾವ್ರೆ
ಮೂರೇಟು ಹೊಡೆದಾಗ ದೊಡ್ಡಮ್ಮತಾಯಿ
ನೆನೆದಾವ್ರೆ
ಸಿದ್ದಯ್ಯ ಸ್ವಾಮಿ ಬನ್ನಿ
ಒಂದೇಟು ಹೊಡೆದಾರಂತೆ ಅಡಗಲ್ಲೆಲ್ಲ
ಪುಡಿ ಪುಡಿ ಆದವಂತೆ
ಸಿದ್ದಯ್ಯ ಸ್ವಾಮಿ ಬನ್ನಿ

ಆಚಾರರ ಕಣ್ಣಿಗೆ ಮೂಳೆ ಮಾಂಸಗಳು ಹೆಗ್ಗುಲುಮೆ ತಿಟ್ಟಿನಲ್ಲಿ ಬಿದ್ದು ರಕ್ತ ಸುರಿತ್ತಿರುವುದಂತೆ. ಆವಾಗ ಸಿದ್ದ ಅಂತಕ್ಕಂತವನು ಸತ್ತ ಅಂದ್ಬುಟ್ಟು, ಎಲ್ಲವನ್ನು ಮುದ್ದೆಕಟ್ಟಿ ರಸಮುದ್ರೆ ಕಳಿಸಿ. ನಾಲ್ಕು ಮೂಲೆಗಳಲ್ಲಿ ಇರುವ ಮಾರಮ್ಮನ್ನರಿಗೆಲ್ಲ ಇಟ್ಕೋ ಬಂದ್ಬುಡಿ ಅಂತ ಹೇಳಿದರಂತೆ, ಊರ ಮುಂದಾಗಿರುವ ದೊರೆಗಳು. ಆವಾಗ ಈ ಕಬ್ಬಿಣವನ್ನೆಲ್ಲ ಮುಂದೆ ಕಟ್ಕೊಂಡು ಮಾರಮ್ಮನವರ ಹತ್ತಿರ ತಕ್ಕೊಂಡು ಹೋಗಿ ಇಟ್ಟಾಗ ಅಯ್ಯೋ ನಿಮ್ಮ ಮನೆ ಹಾಳಾಗ ಮುಂಡೇ ಮಕ್ಕಳೇ

ನೀವು ಹೇಳಿದ ಪವಾಡ ಗೆದ್ದು ಬಂದೆ
ನಾವು ಕೇಳಿದ ಕಬ್ಬಿಣ ಕೊಡಿರಣ್ಣ
ಸಿದ್ದಯ್ಯ ಸ್ವಾಮಿ ಬನ್ನಿ

ಸತ್ತೋದ ಸಿದ್ದ ಅಂತ ನೀವೆಲ್ಲ ಹೇಳಿದ್ದೀರಲ್ಲ ಜಾತಿಕರೆ. ಮಾರಮ್ಮನಿಗೆ ತಕ್ಕೊಂಡು ಹೋಗಿ ರಸಮುದ್ರೆ ಇಟ್ಟು ಬಂದ್ದೀವಿ ಅಂದ್ರಲ್ಲೋ ಇವನ್ನಾರು ? ಇಲ್ಲೊಬ್ಬ ಬಂದಿದ್ದಾನಲ್ಲೋ –

ಆ ಸಿದ್ದ ಸತ್ತ ಕಾನಣ್ಣ ಇನ್ನೊಬ್ಬ
ಸಿದ್ದ ಬಂದಾವ್ನೆ ಕಾನಣ್ಣ
ಈ ಸಿದ್ದ ಎಂಬುವವನನ್ನು
ನೀವು ಹಿಡ್ಕೊಂಡು

ಶುದ್ಧ ಮಾಡಿ ಅಂದಾರಂತೆ
ಸಿದ್ದಯ್ಯ ಸ್ವಾಮಿ ಬನ್ನಿ

ಸಿದ್ದನ ಹಿಡ್ಕೊಂಡು ಶುದ್ದ ಮಾಡಿ ಅಂತ ದೊರೆಗಳು ಹೇಳ್ಬಿಟ್ಟರೋ ಆಗ ಸಿದ್ದಪ್ಪಾಜಿ ನನ್ನನ್ನು ಮಾತ್ರ ಹಿಂಸೆ ಮಾಡಬೇಡಿ. ನೀವು ಹೇಳ್ತಂಕಂತಹ ಪವಾಡಕ್ಕೆ ನಾನೇ ಬರುತ್ತೀನಿ ಪವಾಡ ಗೆದ್ದು ಬಂದರೆ ನೀವು ಕೇಳಿದ ಕಬ್ಬಿಣ ಕೊಟ್ಟು ಕಳುಗುಸ್ತೀವಿ. ಬೊಪ್ಪೇಗೌಡನಪುರಕ್ಕೆ ಸಿದ್ದಪ್ಪಾಜಿ ಊರಮುಂದೆ ಇರುವ ಅರಳಿಕಟ್ಟೆ ಜಗಲಿ ಮೇಲೆ ಬಂದು ಗೌಜುಲಕ್ಕಿಯ ಕುಸ್ತಿ ನೋಡ್ತಾ ಕುಳಿತಿರುವರಂತೆ. ಇವರೆಲ್ಲ ಮಾತುಕತೆ ಮಾಡಿ ಎಣ್ಣೆ ಕೊಪ್ಪರಿಕೆ ಪವಾಡ ರೆಡಿಮಾಡಿರುವರಂತೆ

ಆ ಎಣ್ಣೆ ಕೊಪ್ಪರಿಕೆ ಪವಾಡಕ್ಕೆ
ಬಂದರಂತೆ ಮಾಯ್ಕಾರ
ಸಿದ್ದಯ್ಯ ಸ್ವಾಮಿ ಬನ್ನಿ

ಎಣ್ಣೆ ಕೊಪ್ಪರಿಕೆ ಪವಾಡಕ್ಕೆ ಯಾವಾಗ ಘನನೀಲಿ ದಯಮಾಡಿದರೋ ಕೊತ ಕೊತನೆ ಕಾದು ಮಲ್ಲೋದವಂತೆ. ಸ್ವಾಮಿಯವರು ಎಣ್ಣೆಕೊಪ್ಪರಿಕೆಗೆ ಮುಳುಗುವಾಗ ತಂದೆ ಮಂಟೇಲಿಂಗಯ್ಯ ತಾಯಿ ದೊಡ್ಡಮ್ಮ ರೇಚಪ್ಪಾಜಿಯನ್ನು ನೆನ್ಕೊಂಡು ಕಪ್ಪು ಧೂಳ್ತವನ್ನು ತೆಗೆದು ಎಣ್ಣೆ ಕೊಪ್ಪರಿಗೆಗೆ ಇಟ್ಬುಟ್ಟು

ಬಲಗಾಲ ಎತ್ತಿದರಂತೆ ಎಣ್ಣೆಕೊಪ್ಪರಿಕೆ
ಒಳಗಡೆ ಇಳಿದರಂತೆ ಮಾಯ್ಕಾರ
ಸಿದ್ದಯ್ಯ ಸ್ವಾಮಿ ಬನ್ನಿ

ಸ್ವಾಮಿ ಇಳಿದಾಗ ಎಣ್ಣೆ ಕೊಪ್ಪರಿಕೆಯ ಎಣ್ಣೆಯೆಲ್ಲ ಪನ್ನೀರು ಆಯ್ತಂತೆ. ಆಚಾರರ ಕಣ್ಣಿಗೆ ಮಾತ್ರ ಕೊತ ಕೊತನೆ ಮಲ್ಲೋದಂಗೆ ಕಾಣುತ್ತಿತ್ತಂತೆ. ಮೇಲೊಂದು ಕೊಪ್ಪರಿಕೆ ದಬಾಕ್ಬುಟ್ಟು ಸುತ್ತ ಚನ್ನಾಗಿ ಬೆಸ್ತುಬ್ಟರಂತೆ. ಸಿದ್ದಪ್ಪಾಜಿ ಬಲಗಾಲೆತ್ತಿ ಮೇಲೆ ಮುಚ್ಚಿರುವ ಕೊಪ್ಪರಿಕೆಯನ್ನು ಜಾಡ್ಸಿ ಒದ್ದರಂತೆ. ಆಗ ಅದು ಆಕಾಶದ ಮೇಲೆ ಗಿರಿ ಗಿರಿನೆ ತಿರುಗುತ್ತಿತ್ತಂತೆ. ನೋಡದೆಯಪ್ಪ ಪಂಚಾಳದವರೇ ನೀವು ಮಾಡ್ಸಿದ ಪವಾಡ ಮಂಟೇಸ್ವಾಮಿಯವರ ಆಶೀರ್ವಾದದಿಂದ ಗೆದ್ದಿದ್ದೀನಿ. ಆಕಾಶದಲ್ಲಿ ತಿರುಗುತ್ತಿರುವ ಕೊಪ್ಪರಿಕೆ ನನ್ನ ತಂದೆ ರಾಚಪ್ಪಾಜಿ ಕಪ್ಪಡಿ ತಿಪ್ಪೂರಿಂದ ಮಾಲ್ನೇ ತೀರಿಸ್ಕೊಂಡು ಮಾರ್ಲಿಪ್ರಸಾದ ತಕ್ಕೊಂಡು ರಾಜಬೊಪ್ಪಣಪುರಕ್ಕೆ ಯುಗಾದಿ ಹಬ್ಬದ ನಾಲ್ಕನೆಯ ದಿನಕ್ಕೆ ಅಳಿಗುಳಕ್ಕೆ ಬರುತ್ತಾರೆ. ಆ ಬೇಸಿಗೆಯ ಬಿಸಿಲಲ್ಲಿ ದಣಿದು ಬರತಕ್ಕಂತಹ ರಾಚಪ್ಪಾಜಿಯವರಿಗೆ ನಾನು ಕೆಳಗಡೆ ಕುಂತಿರತಕ್ಕಂತ ಕೊಪ್ಪರಿಕೆ ನನ್ನ ತಾಯಿಗೆ ಪಾನ ಬಟ್ಲಾಗಲಿ ಪಂಚಾಳದವರೆ. ನೀವು ಹೇಳಿದಂತ ಪವಾಡ ಗೆದ್ದು ಬಂದಿದ್ದೀನಿ. ನಾವು ಕೇಳಿದ ಕಬ್ಬಿಣ ಕೊಡಿರಪ್ಪ ಮತ್ತೆ ಈ ಪವಾಡ ಗೆದ್ದಿದ ನಂತರ ಕಬ್ಬಿಣ ಕೊಟ್ಟು ಕಳುಗಿಸಿದರೆ ನಮ್ಮ ಪಾಳ್ಯಗಾರತನವೆಲ್ಲ ಹಾಳಾಗುತ್ತದೆ. ಈ ಪವಾಡ ಮಾಡಿದಕ್ಕೆ ನಾವು ಕಬ್ಬಿಣ ಕೊಡಕ್ಕೆ ಆಗುವುದಿಲ್ಲ. ಆದ್ದರಿಂದ ಮಾರಮ್ಮನ ದೇವಸ್ಥಾನಕ್ಕೆ ಹೋಗಿ ಕೂಡ್ಬಿಡಿ.

ಮಾರಮ್ಮ ಹಸ್ದು ಮಲಗಿದ್ದಾಳೆ ಮರಿ ಕುಯ್ಯೋ ಬದಲು ಇವನ್ನೇ ಬಲಿ ಕೊಟ್ಟು ಬಿಡಿ ಅಂತೇಳಿದರು ಊರ ಮುಂದಾಗಿರುವ ಪಾಳ್ಯಗಾರರು. ಆಚಾರರ ಮತದವರು ಹೇಳಿದ ಮಾತು ಕೇಳಿದ ತಕ್ಷಣ

ಕಾಳಮ್ಮನ ದೇವಸ್ಥಾನಕ್ಕೆ ತಕ್ಕೊಂಡು
ಹೋಗಿ ಕೂಡುತ್ತಾರೆ ....
ಸಿದ್ದಯ್ಯ ಸ್ವಾಮಿ ಬನ್ನಿ
ಕಾಳಮ್ಮನ ದೇವಸ್ಥಾನಕ್ಕೆ
ಕೂಡಿಬುಟ್ಟು ಬಂದಾಗ ....
ಹತ್ತಿದ ಬಾಗಿಲು ಹತ್ತಿದಾಗೆ
ಹಾಕಿದ ಬಾಗಿಲು ಹಾಕಿದಾಗೆ
ಕಾಳಮ್ಮ ದೇವಸ್ಥಾನ ಬಿಟ್ಟು
ಮರೆಯಾಗಿ ಬಂದಾರಂತೆ
ಸಿದ್ದಯ್ಯ ಸ್ವಾಮಿ ಬನ್ನಿ ....

ಸಿದ್ಧಪ್ಪಾಜಿಯನ್ನು ಕಾಳಮ್ಮನ ದೇವಸ್ಥಾನಕ್ಕೆ ಬಿಟ್ಟು ಬಂದಿರುವಂತ ಪಾಳೆಗಾರರು ಕಾಳಮ್ಮ ಗುಡಿಯಲ್ಲಿ ಇಷ್ಟೊತ್ತಿಗೆ ಸತ್ತೋಗಿರುತ್ತಾನೆ ಎಂದು ಸಂತೋಷಪಡುತ್ತಿರುವಂತೆ. ಸಿದ್ಧಪ್ಪಾಜಿ ಕಾಳಮ್ಮನ ದೇವಸ್ಥಾನದ ಹತ್ತಿರ ಬಂದು ಪಾಂಚಾಳದವರೇ ನೀವು ಹೇಳಿದಂತಹ ಪವಾಡ ಗೆದ್ದು ಬಂದನಲ್ಲ. ಕಬ್ಬಿಣ ಕೊಡಿರಪ್ಪ. ಕೆಂಡೋಜಿ ರತ್ನೋಜಿ ಪುಟ್ಟೋಜಿ .... ಕಾಳಮ್ಮ ದೇವಸ್ಥಾನದಲ್ಲಿ ಹೋಗಿ ಕೂಡಿದರೋ ಬಿಟ್ಟರೋ ಅಂದಾಗ ಕೂಡಿಬಿಟ್ಟೆ ಬಂದೇವು ಮತ್ತೆ ಕಾಳಮ್ಮನ ದೇವಸ್ಥಾನದಲ್ಲಿ ಕೂಡಿಯೇ ಬಂದೇವು ಎಂದರು.

ಆ ಸಿದ್ದ ಸತ್ತೋಗ್ಬಿಟ್ಟ
ಇಲ್ಲೊಬ್ಬ ಸಿದ್ದ ಬಂದಾವ್ನೆ ಕಾನಣ್ಣ
ಸಿದ್ದಯ್ಯ ಸ್ವಾಮಿ ಬನ್ನಿ
ಈ ಸಿದ್ದ ಅನ್ನವವನ್ನ ಹಿಡ್ಕೊಂಡು
ನೀವು ಶುದ್ಧ ಮಾಡಿ ಅಂದಾರಂತೆ
ಸಿದ್ದಯ್ಯ ಸ್ವಾಮಿ ಬನ್ನಿ

ಸಿದ್ದ ಎಂಬುವರನ್ನು ಹಿಡ್ಕೊಂಡು ಮೊದಲು ಶುದ್ಧ ಮಾಡಿರಿ ಎಂದಾರಂತೆ ಪಾಂಚಾಳರು. ಆವಾಗ ಅಪ್ಪ ನನ್ನ ಮುಟ್ಟಿ ಮುಟ್ಟಿ ಮೈಲಿಗೆ ಮಾಡಬೇಡಿ. ನೀವು ಹೇಳಿದಂತ ಪಾವಾಡಕ್ಕೆ ನಾನೇ ಬರುತ್ತೀನಿ. ಅಂತ್ರ ಮಂತ್ರ ಮಾಯಾ ಮದ್ದು ಕಳ್ಕೊಂಡು ಬಂದಿದ್ದಾನೆ ಸಿದ್ಧ ಎನ್ನುವವನು. ಇದರಿಂದ ಎಲ್ಲ ಪವಾಡವನ್ನು ಗೆದ್ದು ಬರುತ್ತಾವ್ನೆ ಇವನಿಗೆ ಪವಾಡ ಮಾಡ್ಸೋದು ಬೇಕಾಗಿಲ್ಲ. ಕರಳಿ ಹಾಲ ಕರ್‍ಕೊಂಡು ಬಂದು

ಕೊಪ್ಪರಿಗೆ ತುಂಬ ತುಂಬುಬಿಡಿ. ಕರಳಿ ಹಾಲ ಎಕ್ಕದ ಹಾಲ ಕುಡಿಸಿ ಸಾಯ್ಸಿಬಿಡಿ ಎಂದರಂತೆ. ಆವಾಗ ಆಗಲಪ್ಪ ಎಂದು ಸಿದ್ದಪ್ಪಾಜಿ ಊರ ಮುಂದೆ ರಾಡಬಾಗಿಲಿನಲ್ಲಿ ಕುಂತಿದ್ದು

ಕರಳಿ ಎಕ್ಕದಾಲ ಕುಡಿಯಲಿಕ್ಕೆ
ನಮ್ಮ ಸ್ವಾಮಿಯವರು ದಯಮಾಡುತ್ತಾರೆ
ಸಿದ್ದಯ್ಯ ಸ್ವಾಮಿ ಬನ್ನಿ
ಕರಳಿ ಹಾಲು ಎಕ್ಕದಾಲು ಕುಡಿಯೋದಕ್ಕೆ
ಸ್ವಾಮಿಯವರು ದಯಮಾಡಿದರಂತೆ.
ಹೆಗ್ಗಲುಮೆ ತಿಟ್ಟತ್ತಿರ ತಾಯಿ ಹಾಲು ಕುಡಿದಾಗೆ
ಕೊಪ್ಪರಿಕೆ ತುಂಬ ತುಂಬಿರುವ ಕರಳಿ ಹಾಲ
ಎಕ್ಕದಾಲ ಸ್ವಾಮಿ ಗಟ ಗಟನೆ ಕುಡಿದಾರಂತೆ
ಸಿದ್ದಯ್ಯ ಸ್ವಾಮಿ ಬನ್ನಿ

ಅಪ್ಪ ಪಾಂಚಾಳದವರೇ ನೀವು ಹೇಳಿದಂತ ಪವಾಡವನ್ನು ನಾನು ಗೆದ್ದು ಬಂದನಲ್ಲಪ್ಪ ಈ ಪವಾಡವನ್ನಾದರೂ ಒಪ್ಕೊಂಡು ನನಗೆ ಕಬ್ಬಿಣ ಕೊಟ್ಟು ಕಳುಗಿಸಿರಪ್ಪ ಬೊಪ್ಪೇಗೌಡನಪುರಕ್ಕೆ ನಾನು ಹೋಗಬೇಕು ಅಂದರು. ನೀನು ಏನೋ ಮಾಯಾ ಮದ್ದು ಕಲ್ತುಕೊಂಡು ಬಂದಿದ್ದೀಯ. ನೀನು ಈ ಪವಾಡ ಗೆದ್ದೆಯಂತ ನಾವು ಕಬ್ಬಣ ಕೊಡಕ್ಕೆ ಸಾಧ್ಯವಿಲ್ಲ ಬೇರೆವೊಂದು ಸುಣ್ಣದ ಗೂಡಿನ ಪವಾಡ ರೆಡಿಮಾಡಿ ಸುಣ್ಣದ ಗೂಡಲ್ಲಿ ಕೂಡಿಬಿಡೋಣ. ಆರು ಖಂಡುಗ ಸುಣ್ಣದ ಗೂಡಿನಲ್ಲಿ ಕೂಡ್ಬುಟ್ಟು ನಗನಾಡುವರಂತೆ ಪಾಂಚಾಳದವರು.

ಆರು ಖಂಡುಗ ಸುಣ್ಣದ ಕಲ್ಲು
ಮಲ್ಲಿಗೆ ಹೂವು ಆಯ್ತಂತೆ
ಸಿದ್ದಯ್ಯ ಸ್ವಾಮಿ ಬನ್ನಿ
ಸುಣ್ಣದಗೂಡ ಸ್ವಾಮಿ
ಬಲಗಾಲಲ್ಲಿ ಒದ್ದಾಗ ಎರಡು
ಭಾಗ ಆಗ್ಹೋಯ್ತಂತೆ
ಸುಣ್ಣದ ಗೂಡಿನಿಂದ
ಹೊರಗಡೆ ಬಂದು ಸ್ವಾಮಿ
ನೀವು ಹೇಳಿದ ಪವಾಡ ಗೆದ್ದನಲ್ಲ
ನಾವು ಕೇಳಿದ ಕಬ್ಬಿಣ ಕೊಡಿರಣ್ಣ
ಸಿದ್ದಯ್ಯ ಸ್ವಾಮಿ ಬನ್ನಿ

ಅಣ್ಣ ನೀವು ಹೇಳಿದ ಪವಾಡ ಮಾಡಿದನಲ್ಲ ನಾವು ಕೇಳಿದ ಕಬ್ಬಿಣ ಕೊಡ್ರಣ್ಣ. ಏನ್ರಲಾ ಮದ್ದು ಮಾಯ ಕಲ್ತುಕೊಂಡು ಬಂದಿರಬಹುದು ಈ ಸಿದ್ಧ. ಆದ್ದರಿಂದ

ಇನ್ನೊಂದು ಪವಾಡ ರೆಡಿಮಾಡಿ. ಇನ್ನಾವ ಪವಾಡ ಮಾಡಬೇಕು ಕಾನ್ರಣ್ಣ. ಹೆಂಗಸ್ಸಿರಿಗೆಲ್ಲ ಹಾವು ಚೇಳಿನ ಬಳೆ ತೊಡಸಾವ್ನೆ ಆದ್ದರಿಂದ ಕಬ್ಬಿಣದ ಬಳೆ ಮಾಡ್ಸಿ ಬಿಡಿ ಅಂದಾರಂತೆ. ಪವಾಡಕ್ಕೆ ಸಿದ್ಧಮಾಡಿ ಊರ ರಾಡಬಾಗಿಲಲ್ಲಿ ಅರಳಿಮರ ಜಗಲಿಕಟ್ಟೆಯ ಮೇಲೆ ಕುಂತ್ಕೊಂಡು ಸ್ವಾಮಿ ಸಿದ್ದಪ್ಪಾಜಿ ನವಲು ಹಿಡ್ಕೊಂಡು ಆಟ ಆಡಿಸುತ್ತಾ ಕುಂತಿರುವರಂತೆ –

ಬಾರಾದ ಪವಾಡಕ್ಕೆ
ಬರುತ್ತಾವ್ರಂತೆ ಮಾಯ್ಕಾರ
ಸಿದ್ದಯ್ಯ ಸ್ವಾಮಿ ಬನ್ನಿ

ಯಾವಾಗ ಬಾರದ ಪವಾಡಕ್ಕೂ ಬಂದು ನಿಂತ್ಕೊಂಡರು ಸ್ವಾಮಿ ಸಿದ್ದಪ್ಪಾಜಿಯವರು.

ಕಾದಿರುವ ಕಬ್ಬಿಣದ ಬಳೆಯ
ಕೈ ಕಾಲಿಗೆ ತೊಡಿಸುತ್ತಾರೆ
ಸಿದ್ದಯ್ಯ ಸ್ವಾಮಿ ಬನ್ನಿ ....
ಕಾಯ್ಸಿರುವ ಕಬ್ಬಿಣದ ಬಳೆ
ಕೈ ಕಾಲಿಗೆ ತೊಡುವಾಗ
ಪಾಂಚಾಳದವರೆಲ್ಲ ....
ಅವರು ತೊಡುವಂತ ಬಳೆಗಳೆಲ್ಲ
ಪಟ್ಟ ಪಟ್ನೇ ಒಡದೋದವಂತೆ
ಸಿದ್ದಯ್ಯ ಸ್ವಾಮಿ ಬನ್ನಿ

ಯಾವಾಗ ತೊಡಿಸಿದ ಬಳೆ ಪಟ ಪಟನೇ ಒಡದೋದವೋ ಆಗ ಸ್ವಾಮಿಯವರು ಅಪ್ಪ ಜಾತಿ ಮತದವರೇ ನೀವು ಹೇಳಿದಂತಹ ಪವಾಡವನ್ನು ಪರಂಜ್ಯೋತಿ ಮಂಟೇಸ್ವಾಮಿಯವರ ಆಶೀರ್ವಾದದಿಂದ ಗೆದ್ದು ಬಂದೆನಲ್ಲಪ್ಪ. ಈಗಲಾದರೂ ಕೇಳಿದ ಕಬ್ಬಿಣ ಕೊಡಿ ಎಂದಾಗ ಪಾಂಚಾಳದವರು ನಮ್ಮ ಜಾತಿಯವರಿಗೆಲ್ಲ ಅವಮಾನ ಊರಿಗೆ ಒಬ್ಬ ಬಂದು ಮಾಡಿದ ಪವಾಡವನ್ನೆಲ್ಲ ಗೆದ್ದು ಗೆದ್ದು ಕಬ್ಬಿಣ ಕೊಡಿ ಅಂತ ಕೇಳ್ತಾವ್ನೆ ಅಲ್ಲ. ಇವನು ಕಬ್ಬಿಣ ಕೇಳಿದ ಅಂತ ಕೊಟ್ಟು ಕಳುಗಿಸಿದೇನಾದರೆ ನಾವು ಹಲಗೂರು ಚೆಲ್ಲಾಪುರ ಕಟ್ಬಾಳುವುದಕ್ಕೆ ಸಾರ್ಥಕವಿಲ್ಲ. ಆದ್ದರಿಂದ ಈ ಪವಾಡ ರೆಡಿ ಮಾಡಿ ಅಂದರೆ ಪಾಳು ಬಾವಿಗೆ ತಕ್ಕೊಂಡು ಕೂಡುಬಿಡಿ. ಹುಣಸೆ ತರಗೆಲೆಯನ್ನು ತುಂಬುಬಿಡಿ. ಆರು ಖಂಡಿಗ ಮೆಣಸಿನ ಕಾಯಿ ತುಂಬುಬಿಡಿ. ಆ ಪಾಳು ಬಾವಿಯಲ್ಲಿ ತಕ್ಕೊಂಡು ಹೋಗಿ ಮೇಲೆ ಕಟುಕನ ಕಲ್ಲು ಮುಚ್ಚಿಡಿ. ಆ ಪಾಳು ಬಾವಿಯಿಂದ ಬದುಕಿ ಬಂದುದ್ದೇ ಆದರೆ ನೀ ಕೇಳಿದ ಕಬ್ಬಿಣ ಕೊಟ್ಟು ಕಳುಗಿಸ್ತೀನಿ ಅಂದಾರಂತೆ. ಆಯ್ತು ಎಂದು ಒಪ್ಕೊಂಡ್ಬುಟ್ಟು ಸಿದ್ದಪ್ಪಾಜಿ ಅರಳಿಮರದ ಹತ್ತಿರ ಭಂಗಿಯನ್ನು ಸೇಯ್ತಾ ನಿಂತಿರುವರಂತೆ–

ಪಾಳು ಬಾವಿ ಪವಾಡಕ್ಕೆ
ಬರುತ್ತಾವರಲ್ಲೋ ಮಾಯ್ಕಾರ
ಸಿದ್ದಯ್ಯ ಸ್ವಾಮಿ ಬನ್ನಿ
ಪರಂಜ್ಯೋತಿ ಪಾದವ ನೆನ್ಕೊಂಡು
ದೊಡ್ಡಮ್ಮನ ನೆನ್ಕೊಂಡು
ರೇಚಪ್ಪಾಜಿ ನೆನ್ಕೊಂಡು
ಪಾಳು ಬಾವಿ ಒಳಗೆ ಬಲಗಾಲಿಟ್ಟು
ದೊಳ ದೊಳನೇ ಇಳಿದಾರಂತೆ
ಪರಂಜ್ಯೋತಿ ನನ್ನಪ್ಪ
ಆ ಪಾಳುಬಾವಿ ಒಳಗಿದ್ದಂತಹ
ಆರು ಖಂಡುಗ ಹುಣಸೆ ತರಗೆಲೆಗಳೆಲ್ಲ
ಕೆಂದ ಸಂಪಿಗೆ ಆಯ್ತು
ಆರು ಖಂಡುಗ ಮೆಣಸಿನ ಕಾಯಿ
ಸಂಪಿಗೆ ಮೊಗ್ಗು ಆಯ್ತಂತೆ
ಸಿದ್ದಯ್ಯ ಸ್ವಾಮಿ ಬನ್ನಿ
ಆ ಸಂಪಿಗೆ ಮೊಗ್ಗಿನ ಮೇಲೆ
ಸಂತೋಷವಾಗಿ ಮಲಗಾವರಲ್ಲೋ
ಸಿದ್ದಯ್ಯ ಸ್ವಾಮಿ ಬನ್ನಿ
ಮೂರು ದಿನ ಮಧ್ಯಾನ ಮಲಗಿದ್ದು
ಮೂರು ದಿನ ಮಧ್ಯಾನ ಕಳೆದ ಮೇಲೆ
ಮುಚ್ಚಿದ ಚಪ್ಪಡಿ ಕಲ್ಲು ಕಿತ್ತಾಗ
ಸ್ವಾಮಿ ಪರಂಜ್ಯೋತಿ ಕಂಡಾಯ
ಹೊತ್ಕೊಂಡು ಮೆಲ್ಲ ಮೆಲ್ಲನೆ ಮೇಲ್ಗಡೆಗೆ
ಬರುತ್ತಾವರಲ್ಲೋ ನಮ್ಮ ಘನನೀಲಿ
ಸಿದ್ದಯ್ಯ ಸ್ವಾಮಿ ಬನ್ನಿ

ಈ ಪವಾಡನೂ ಗೆದ್ದು ಬಂದೆ ಪಾಂಚಾಳದವರೇ ನಾನು ಕೇಳಿದ ಕಬ್ಬಿಣ ಕೊಡ್ರಪ್ಪ. ಇವನು ಮಂತ್ರ ಮದ್ದು ಇಂದ್ರಜಾಲ ಕಲ್ತುಕೊಂಡು ಬಂದಾವ್ನೆ. ಈ ಪವಾಡ ಗೆದ್ದ ಅಂತ ನಾವು ಕಬ್ಬಿಣ ಕೊಟ್ಟು ಕಳುಗಿಸುವುದಿಲ್ಲ. ಇನ್ನೊಂದು ಪವಾಡ ರೆಡಿ ಮಾಡಿ. ಯಾವುದು ? ಒಂದು ಮಣ ಕಬ್ಣ, ಒಂದು ಮಣ ಪಂಚಲೋಹ, ಒಂದು ಮಣ ಸಿಲ್ವಾರ ಎಲ್ಲಾ ಬೆರೆಸಿ 12 ಹಟ್ಟಿಯಷ್ಟು ಕಲಭಾರೆ ಕಾಯ್ಸಿಬಿಡಿ. ಕಾದಗಟ್ಟಿ 770 ಕುಲುಮೆ ಹಾಕಿ ಗದಗದನೇ ಕಾದು ಕಬ್ಣ ನೀರಾಗಿ ಹರಿದು ಹೋಗಬೇಕು. ಬಸವನ ಬೆಟ್ಟದ ಹತ್ತಿರ ಹರ್ಕೊಂಡು ಹೋಗುತ್ತದಲ್ಲ ಸೋನೆ ನೀರು ಅದನ್ನು ಕಾವಲಿ ತಂದು ನಿಲ್ಲಿಗೆ ನಿಲ್ಲಿಸಿಕೊಳ್ಳಿ. ಸಿದ್ದ ಅನ್ನಕ್ಕಂತವನು ಕಾದುಗಟ್ಟಿ ಮೇಲೆ ನಡ್ಕೊಂಡು ಕೂತಿದ್ದು

ಬಂದರೆ ಆಗ ನೀನು ಕೇಳಿದ ಕಬ್ಣ ಕೊಡುತ್ತೀವಿ ಸಿದ್ಧ ಅಂದರಂತೆ. ಆಯ್ತು ಎಂದು ಒಪ್ಕೊಂಡು ಬಸವನ ಬೆಟ್ಟದ ಮೇಲೆ ಹುಲಿಯನ್ನು ಹಿಡ್ಕೊಂಡು ಮೂರು ಸಾರಿ ಸವಾರಿ ಮಾಡ್ಬುಟ್ಟು ಬೆಟ್ಟ ಸುತ್ತ ಒದಗಾಡ್ಬುಟ್ಟಾಗ ರಭಸವನ್ನು ಹುಲಿ ರಕ್ತ ಕಕ್ಕಿ ಸತ್ತೋಯ್ತಂತೆ. ರಕ್ತ ಕಕ್ಕಿ ಸತ್ತೋದಾಗ ಬಸವನ ಬೆಟ್ಟದ ಮೇಲೆ ದೊಡ್ಡಮ್ಮ ಎಂಟು ಪವಾಡ ಮಾಡು ಎಂಟನೇ ಪವಾಡಕ್ಕೆ ತಪ್ಪದೇ ಬರುತ್ತೀನಿ ಅಂತ ಹೇಳಿದೇ ಅಲ್ಲ ತಾಯಿ. ನನ್ನ ಜಾತಿಯವರು ಇವತ್ತು ಕಾದುಗಟ್ಟಿ ಪವಾಡ ಮಾಡ್ತುತ್ತಿದ್ದಾರೆ. ಹಲಗೂರು ಚಿಲ್ಲಾಪುರದಲ್ಲಿ ದಮ್ಮಯ್ಯ ಈ ಪವಾಡದಲ್ಲಿ ನಿಜವಾಗಲ್ಲೂ ಗೆದ್ದು ಬೊಪ್ಪಣಪುರಕ್ಕೆ ಬರಲಾರಿ ದೊಡ್ಡಮ್ಮ ಎಂದು ಸಿದ್ದಪ್ಪಾಜಿ ರಾಜಬೊಪ್ಪಣ ಪುರಕ್ಕೆ ಕೈ ಮುಗಿದಾಗ ಮಗ ಕೂಗಿದ ಕೂಗು ದೊಡ್ಡಮ್ಮ ತಾಯಿ ಪಾದಕ್ಕೆ ಪ್ರಿಯವಾಯ್ತಂತೆ. ಅಣ್ಣಯ್ಯ ನನ್ನ ಮಗ ಕಾದುಗಟ್ಟಿ ಪವಾಡ ಮಾಡಬೇಕಾಗಿದೆಯಂತೆ. ಬಸವನ ಬೆಟ್ಟದ ಮೇಲಿಂದ ಕೂಗುತ್ತಾ ಇದ್ದಾನೆ. ನಡ್ರಿ ಅಣ್ಣಯ್ಯ ಹೋಗಣ ಎಂದರು. ಅದಕ್ಕೆ ಸ್ವಾಮಿಯವರು ದೊಡ್ಡಮ್ಮ ಅವನ್ಮಾತು ಯಾಕೆ ? ಅವನಿಗೆ ಏನಾದರೂ ಆಗಲಿ ಸುಮ್ಮನಿರಿ. ಅಯ್ಯೈಯ್ಯೋ ಅಣ್ಣಯ್ಯ ಅವರು ಜಾತಿಕರು ಏನಾದರೂ ಕೊಂದಾಕಿ ಬಿಟ್ಟರೇ ಈ ಬೊಪ್ಪಣಪುರದಲ್ಲಿ ಪ್ರಾಣ ಬಿಡುತ್ತೀನಿ ಅಣ್ಣಯ್ಯ. ನಡ್ರಿ ದೊಡ್ಡಮ್ಮ ರೇಚಪ್ಪಾಜಿ ಚೆನ್ನಾಜವ್ವ ನಾಲ್ಕು ಜನಾನು ಬಂದು ಸಿದ್ದಪ್ಪಾಜಿಗೆ ದರ್ಶನ ಕೊಟ್ಟರಂತೆ. ಈಕಡೆ ಹಲಗೂರು ಚಿಲ್ಲಾಪುರದ ಪಾಂಚಾಳದವರು ನಾಲ್ಕು ಜನರನ್ನು ಬಸವನ ಬೆಟ್ಟಕ್ಕೆ ಕಳುಹಿಸಿದ್ದಾರೆ. ಕಾದುಗಟ್ಟಿ ಪವಾಡ ಮಾಡಿದ್ದಾರೆ ಅದರಲ್ಲಿ ಜಯಶೀಲನಾದರೆ ಕಬ್ಬಿಣ ಕೊಟ್ಟು ಕಳುಗುತ್ತಾರಂತೆ ಬಾರೋ ಸಿದ್ಧ ಎಂದು ಆಳುಗಳು ಕರೆದರು.

ಧರ್ಮಗುರು ಪರಂಜ್ಯೋತಿ
ಮಂಟೇದಲಿಂಗಯ್ಯ .. ಅ ..
ಬದುಕಿ ಬಂದರೆ ನಾನು ..
ನಿಮ್ಮಿಂದ ಬದುಕಿ ಬರಬೇಕು
ಸತ್ತರೆ ನನ್ನ ಜಾತಿ ಮತದವರ ಹಲಗೂರಲ್ಲಿ
ನಾನು ಪಾಪಿ ಮಗ ಸಾಯಬೇಕು
ಈ ಪಾಪಗೇಡಿ ಮಗನ ಮೇಲೆ
ಕರುಣೆ ಇರಲಿ ಎಂದೆನುತ
ರಾಜಬೊಪ್ಪಣಪುರಕ್ಕೆ ಕರವೆತ್ತಿ
ಕೈಮುಗಿದರಂತೆ ....

ಕಾದಗಟ್ಟಿ ಪವಾಡಕ್ಕೆ ಗೆದ್ದು ಬೊಪ್ಪೇಗೌಡನ ಪುರಕ್ಕೆ ಕಬ್ಬಿಣ ತಕ್ಕೊಂಡು ಹೋಗಬೇಕು ಅಂತ ಸ್ವಾಮಿ –

ಕಾದಗಟ್ಟಿ ಪವಾಡಕ್ಕೆ
ಕಂಡಾಯದವರೆ ಬರುತ್ತಾರೆ

ಸಿದ್ದಯ್ಯ ಸ್ವಾಮಿ ....
ಹಲಗೂರಿಗೂ ಮಧ್ಯ
ಚಿಲ್ಲಾಪುರಕ್ಕೂ ಮಧ್ಯ
ಹೆಗ್ಗಲುಮೆ ತಿಟ್ಟು
ಕುರುಬರ ಕಟ್ಟೆ ಚೌಡಿ
ಗದಗದನೇ ಕಾದು ನೀರಾಗಿ
ಹರಿಯುವುದಂತೆ
ಆ ಕಾದುಗಟ್ಟಿ ಮುಂದುಗಡೆ
ನಿಂತ್ಕೊಂಡು ಗಾಳಗೋಳನೇ
ಅಳುತ್ತಾ ಭಾರಿ ಶೋಕ ಮಾಡುತ್ತಾ
ಸಿದ್ದಯ್ಯ ಸ್ವಾಮಿ ಬನ್ನಿ

ಸಿದ್ದಪ್ಪಾಜಿ ಕಾದಗಟ್ಟಿಯ ಮುಂದೆ ಅಳುತ್ತಾ ನಿಂತಿರುವರಂತೆ. ಕಾದ ಕಬ್ಬಿಣ ನೀರಾಗಿ ಹರಿಯುತ್ತಿರುವುದಂತೆ. ಜಾತಿ ಮತದವರೆಲ್ಲ ನಡ್ರೆ ಇಂದ್ರಿ ಚಂದ್ರಿ ಸುಂದ್ರಿ ಕಮಲಿ ರತ್ನಿ ನಮ್ಮ ಯಜಮಾನ್ರು ಇವತ್ತು ನಮ್ಮ ಊರಿಗೆ ಬಂದಿರುವಂತ ಸಿದ್ದನಿಗೆ ಕಾದುಗಟ್ಟಿ ಪವಾಡವನ್ನು ಮಾಡಿಸುತ್ತಾರೆ. ಅವನು ಯಾವ ರೀತಿ ಸತ್ತೋಗ್ತಾನೆ ನೋಡ ಬೇಕು ನಡ್ರಿ ಅಂತ. ಆ ಜಾತಿಮತದ ಹೆಂಗಸರೆಲ್ಲ ತಮ್ಮ ತೊಟ್ಲಿನಲ್ಲಿ ಆಡತಕ್ಕಂತ ಮಕ್ಕಳನ್ನು ಸಹ ಬಿಡದೇ ಕಂಕಳಲ್ಲಿ ಎತ್ಕೊಂಡು ಸುತ್ತಾ ನಿಂತ್ಕೊಂಡು ನೋಡುತ್ತಾ ಇರುವರಂತೆ ಮತ್ತು ಮಾರಾಣಿಯವರು ಅರಮನೆ ಮೇಲೆ ನಿಂತ್ಕೊಂಡಿದ್ದರಂತೆ. ಈಕಡೆ ಸ್ವಾಮಿ ಸಿದ್ದಪ್ಪಾಜಿ ಕಾದಗಟ್ಟಿ ಮೇಲೆ ನಿಂತ್ಕೊಂಡಿರುವುದನ್ನು ತಮ್ಮ ಜಾತಿ ಮತದ ಹೆಂಗಸರನ್ನು ನೋಡಿದರಂತೆ.

ಮಕ್ಕಳ ಹೆತ್ತಿರುವ ತಂದೆ ತಾಯಿಗಳೇ
ನಾನು ಒಬ್ಬ ನಿಮ್ಮ ಕಂಕಳಲ್ಲಿ ತಬ್ಕೊಂಡು
ನಿಂತಿರುವ ಮಗನ ಸಮನಲ್ಲವೇ
ನನ್ನ ಕಣ್ಣಿನೊಳಗೆ ನೀವು ಎಷ್ಟು
ಕಣ್ಣೀರು ಸುರಿಸುತ್ತಾ ಇದ್ದೀರೋ
ನಾಳೆ ಅಷ್ಟೇ ನಿಮ್ಮ ಮಕ್ಕಳ ಕಣ್ಣಲ್ಲಿ
ನಾನು ರಕ್ತ ಸುರಿಸ್ತೀನಿ ಅನ್ನುವರಂತೆ
ಘನನೀಲಿ .... ಆ..

ಸಿದ್ದಪ್ಪಾಜಿ ಗೋಳೋ ಅಂತ ಶೋಕ ಮಾಡೋವರಂತೆ. ಈಕಡೆ ಪಾಂಚಾಳದವರನ್ನು ನೋಡ್ಕಾ ಎಲ್ಲಾ ಸುಲಭವಾದ ಪವಾಡಗಳನ್ನು ಗೆದ್ದು ಬಿಟ್ಟೆ ಈ ಕಾದುಗಟ್ಟಿ ಪವಾಡ ಯಾವ ರೀತಿ ಗೆಲ್ಲಲಪ್ಪ ಅಂತ ಶೋಕ ಮಾಡ್ತಾ ನಿಂತಾವ್ನೆ ಸಿದ್ದಪ್ಪಾಜಿ. ಅವನು ಯಾವ ರೀತಿ ಗೆದ್ದು ಹೋಗುತ್ತಾನೆ ನೋಡೋಣ ಎಂದು ಏಳು ಜನ ಪಾಳೈಗಾರರು ನಗುನಾಡುತ್ತಾ

ಕುಂತಿರುವರಂತೆ. ಸಿದ್ದಪ್ಪಾಜಿ ಕಾದು ನೀರಾಗಿ ಹರ್‍ಕೊಂಡು ಹೋಗುವಂತ ಕಾದುಗಟ್ಟಿಯನ್ನ ನೋಡಿ

ನವುಲು ಗರಿಯ ದೊಂಬೆ
ಬಲಗೈಲಿ ಹಿಡ್ಕೊಂಡು
ಕಾದುಗಟ್ಟಿಯ ಮೇಲೆ
ದುಂಬು ಧೂಳು ಹೊಡೆದರಂತೆ
ನವುಲು ಗರಿಯ ದೊಂಬೆ
ಸಾಂಬ್ರಾಣಿ ಗೋರಿ ನಡುಮಧ್ಯಕ್ಕೆ
ಎರಚಿದರಂತೆ ..
ಸಾಂಬ್ರಾಣಿ ನನ್ನಪ್ಪ ಕಾದು ಕೆಂಪಗಿರುವ
ಕಾದುಗಟ್ಟಿಯ ಮೇಲೆ ಸಾಂಬ್ರಾಣಿ ಬೇಯನಿಲ್ಲ
ದೊಡ್ಡಮ್ಮ .... ನಿಮ್ಮ ಸಹಕಾರವನ್ನು
ನೀಡಿ ಎಂಬುದಾಗಿ ಮಗನು ಕೂಗಿದಾಗ
ದೊಡ್ಡಮ್ಮತಾಯಿ ಅಡಿಯಲ್ಲಿ ಬೆರೆಸಿರೋ
ಮಟ್ಟಿ ಕಪ್ಪಿನ ಒಳಗೆ ....
ಹೆಗಲ ಮೇಲೆ ಹೊತ್ತಿರುವ ಕಂಡಾಯದ
ಹೂ ಹೊಂಬಾಳೆಯ ಮೇಲೆ ಧರೆಗೆದೊಡ್ಡವರು
ವಾಲಾಡಿ ದರುಶನ ಕೊಟ್ಟಾವ್ರೆ
ಎಡಗಡೆ ರೇಚಪ್ಪಾಜಿ ಬಲಗಡೆ ಚೆನ್ನಾಜಮ್ಮ
ಮಗನಿಗೆ ದರುಶನ ಕೊಟ್ಟಾಗ
ಘನನೀಲಿ ಸಿದ್ದಪ್ಪಾಜಿ
ಬಲಗಾಲ ಎತ್ತಿದರಂತೆ ಕಾದುಗಟ್ಟಿಯ ಮೇಲೆ
ಮಡಗಿದರಂತೆ
ಸಿದ್ದಯ್ಯ ಸ್ವಾಮಿ ಬನ್ನಿ
ಕಾದುಗಟ್ಟಿಯ ಮೇಲೆ ಬಲಗಾಲ
ಎತ್ತಿ ಮಡಗಿದಾಗ ಮಂಡಿತನಕ ಮುಳುಗೋಯ್ತಂತೆ
ಎಡಗಾಲ ಎತ್ತಿ ಮುಂದಕ್ಕೆ ಒಂದು ಹೆಜ್ಜೆಯ
ಮಡಗಿದಾಗ ನನ್ನಪ್ಪ ....
ನಡುವಿನ ತನಕ ಮುಳುಗೋದರಂತೆ
ರೇಚಪ್ಪಾಜಿ ಅಂತ ಮೂರನೆಯ ಪಾದ ಎತ್ತಿ
ಮುಂದಕ್ಕೆ ಮಡಗಿದಾಗ ಎದೆ ತನಕ
ಮುಳುಗೋದರಂತೆ
ಪರಂಜ್ಯೋತಿ ನೀವಾದರೂ ನನ್ನ ಕಾಪಾಡ್ಕೊಳ್ಳಿ

ಈ ಪವಾಡ ಮಾತ್ರ ಗೆದ್ದು ನಿಜವಾಗಲೂ
ನಾನು ಬೊಪ್ಪೇಗೌಡನ ಪುರಕ್ಕೆ ಕಬ್ಬಿಣ ತರಲಾರೆ
ಕಬ್ಬಿಣದಲ್ಲಿ ನಾನು ಮುಳುಗೋಗ್ತೀನಿ
ಅಂತ್ಹೇಳಿ ಸಿದ್ದಪ್ಪಾಜಿ ನಡು ಮಧ್ಯಕ್ಕೆ ಬರುವಾಗ
ತಮೆಯ ಮುಳುಗೋದರಂತೆ
ಸಿದ್ದಯ್ಯ ಸ್ವಾಮಿ ಬನ್ನಿ
ಆ ಕಬ್ಬಿಣದೊಳಗೆ ಆ ....
ಲಿಂಗಯ್ಯ ದಯ ಮಾಡೋ ....

ಯಾವಾಗ ನಡು ಮಧ್ಯಕ್ಕೆ ಬರುವಾಗ ಸಿದ್ದಪ್ಪಾಜಿ ಕಬ್ಬಿಣದೊಳಗಡೆ ತಮೆಯ ಬೊಳ ಬೊಳನೇ ಮುಳುಗೋದ ತಕ್ಷಣ ಆ ಪಾಂಚಾಳದವರೆಲ್ಲ ನೋಡ್ರಣ್ಣ ಸಿದ್ದ ಅಂತಕ್ಕಂತವನು, ಕಬ್ಬಿಣ ಕೇಳಕ್ಕೆ ಬಂದವನು ಕಬ್ಬಿಣದಲ್ಲಿ ಮುಳುಗೋದ. ನೀರು ಬಿಟ್ಟುಡಿ ನಿಲ್ಲಿಸ್ಕೊಂಡಿರುವ ನೀರು ಕಾದಿರತಕ್ಕಂತ ಕಬ್ಬಿಣಕ್ಕೆ ಬಿಟ್ಟ ತಕ್ಷಣ ಕಬ್ಬಿಣ ಸರ್ರಂತ ಗಟ್ಟಿ ಆಯ್ತಂತೆ. ಸಿದ್ದಪ್ಪಾಜಿ ಎಡಗಡೆ ಬಲಗಡೆ ನೋಡಿದರಂತೆ. ಹದಿನಾಲ್ಕು ಅಂಕಣದ ಬೊಪ್ಪೇಗೌಡನ ಪುರದಲ್ಲಿ ನೀಲಿ ಭಂಗಿ ಕುಡ್ಕೊಂಡು ಹೋಗಿರುವ ನೀಲಿ ಬಲಗಾಲನ್ನು ಎತ್ತಿ ಜಾಡ್ಸಿ ಕಬ್ಬಿಣವನ್ನು ಒದ್ದ ತಕ್ಷಣ ಕಾದುಗಟ್ಟಿ ಮೂರು ಭಾಗ ಆಗ್ಹೋಯ್ತಂತೆ. ಒಂದು ಭಾಗ ಚಿಲ್ಲಾಪುರದಲ್ಲಿ, ಮತ್ತೊಂದು ಹಲಗೂರು ರಾಡುಬಾಗಿಲಲ್ಲಿ ಒಂದು ಭಾಗ, ಗುಂಡಾಪುರದ ಹೊಲೆಕೆರೆಯೊಳಗೆ ಒಂದು ಭಾಗ ಬಿದ್ಹೋದಾಗ ಸ್ವಾಮಿ ಕಂಡಾಯ ಹೊತ್ಕೊಂಡು ನಿಂತ್ಕೊಂಡಂತೆ ಪಾವಾಡುತ್ತಾರೆ

'ನ ಪುರಕ್ಕೆ ಕಬ್ಬಿಣ ತಕ್ಕೊಂಡು ಹೋಗಬೇಕು ಅಂತ ಸ್ವಾಮಿ ಹೆಗ್ಗುಲುಮೆ ತಿಟ್ಟತ್ತಿರ ಅಣ್ಣ ಪಾಂಚಾಳ ಜಾತಿ ಮತದವರೇ ನೀವು ಹೇಳು ಹೇಳಿದಂತಹ ಪವಾಡವನ್ನು ನಾನು ಗೆದ್ದು ಗೆದ್ದು ಬಂದನಲ್ಲಪ್ಪ ಈವಾಗಲಾದರೂ ಕಬ್ಬಿಣ ಕೊಡಿರಪ್ಪ. ಜಾತಿ ಮತದವರೆಲ್ಲ ನೋಡುಬುಟ್ಟು ಭಾರಿ ಆಶ್ಚರ್ಯ ಪಟ್ಟುಬಿಟ್ಟರಂತೆ. ಕಾದುಗಟ್ಟಿ ಒಳಗೆ ಮುಳುಗೋಗಿ ಬಂದಾವ್ನೆ ಅಲ್ಲ ಈ ಮಾಯ್ಕಾರ ಸಿದ್ದ ಯಾವ ಇಂದ್ರ ಜಾಲ ಮಹೇಂದ್ರ ಜಾಲ ಕಲ್ತುಕೊಂಡು ಬಂದಿರುವುನು ಒಂಭತ್ತು ಪವಾಡ ಮಾಡಿದ್ದು ಸಾಕು –

ಇವನ್ನ ಪವಾಡ ಮಾಡಿಸೋದು ಬೇಕಾಗಿಲ್ಲ
ಈಟಿ ಭರ್ಜಿ ತಕ್ಕೋಳ್ರಣ್ಣ
ಕೈಯಾರೆ ತಿವಿದು ಸಾಯ್ಸಿ ಬಿಡಬೇಕು
ಸಿದ್ದಯ್ಯ ಸ್ವಾಮಿ ಬನ್ನಿ

ಸಿದ್ದಪ್ಪಾಜಿ ಮಾಯವಾಗಿ ಹೋದರಂತೆ. ಸಿದ್ದಪ್ಪಾಜಿ ಬಸವನಬೆಟ್ಟದ ಮೇಲೆ ದೊಡ್ಡಮ್ಮ ತಾಯಿ ಹಲಗೂರು ಚಿಲ್ಲಾಪುರದವರಿಗೆ ಎಷ್ಟು ಹೇಳಿದರೂ ಅವರ ಕೈಯಿಂದ ಕಬ್ಬಿಣ ಕೊಡುತ್ತಿಲ್ಲ. ಬಗ್ಗಿದರೆ ಒಂದು ವೇಳೆ ಬಗ್ಗಿ ಬಗ್ಗಲಿಲ್ಲವೆಂದರೆ ಈ ೭೭ ಜನ

ಮಾರಿಯ ತಂದು ಕೂಡುಬುಡ್ತೀನಿ ಎಂದಾಗ ಮಟಮಟ ಮಂಗಳವಾರ ತಂದು ಕೂಡ್ಬುಡಿ ಎಂದಾಗ ಮಾರಮ್ಮನವರೆಲ್ಲ ಆಹಾ ! ಹಲಗೂರು ಚಿಲ್ಲಾಪುರ ಎಂತಾ ಊರು ತೋರಿದೇಯಪ್ಪ ಸಿದ್ದಪ್ಪಾಜಿ ಮಾರಮ್ಮನವರೆಲ್ಲ ಹಲಗೂರು ಚಿಲ್ಲಾಪುರ ನುಗ್ಗುವಾಗ ಸಿದ್ದಪ್ಪಾಜಿಯವರ ಕಣ್ಣಲ್ಲಿ ಕಣ್ಣೀರಂತೆ ತನ್ನ ಜಾತಿಕರು ನಾ ಎಷ್ಟು ಕಷ್ಟ ಕೊಟ್ಟಿದ್ದರೂ

ಬಾಳುಸಿದ ನನ್ನ ಜಾತಿ ಮತದ
ಹಲಗೂರು ಚಿಲ್ಲಾಪುರ
ಪಾಂಚಾಳದವರ ಮನೆಯ
ನನ್ನ ಜಾತಿ ಮತದವರ ಮನೆಗೆ
ನಾನೇ ಮಾರಿ ಹಿಂಡು ಕೂಡಿ
ಹಾಲ್ನಂತ ಹಲಗೂರು ಚಿಲ್ಲಾಪುರವನ್ನೆಲ್ಲ
ಹಾಳು ಮಾಡಿದೆನಲ್ಲ ಪರಂಜ್ಯೋತಿ ..
ನಿಮ್ಮ ಹೊಟ್ಟೆ ಒಳಗಡೆ ಮರ್ಮ
ಎಷ್ಟು ಅಂತ ಹೇಳಲಪ್ಪ ....
ಪರಂಜ್ಯೋತಿ ಕಂಡಾಯದ ಮೂರುತಿ
ಎಂದೆನ್ನುತ್ತಾ ಸ್ವಾಮಿ ಸಿದ್ದಪ್ಪಾಜಿ
ಬಸವನ ಬೆಟ್ಟದ ಮೇಲೆ ನಿಂತು
ಶೋಕ ಮಾಡವ್ರಂತೆ ಘನನೀಲಿ ....

ಘನನೀಲಿ ಸಿದ್ದಪ್ಪಾಜಿ ಬಸವನ ಬೆಟ್ಟದ ಮೇಲೆ ನಿಂತ್ಕೊಂಡು ೭೭ ಜನ ಮಾರಿಯರನ್ನ ಹಲಗೂರು ಚಿಲ್ಲಾಪುರಕ್ಕೆ ಹೋಗಿ ಅಂತ ಕಳಿಸಿಬಿಟ್ಟರಂತೆ. ಯಾವಾಗ ಮಾರಮ್ಮನವರೆಲ್ಲ ಮಟಮಟ ಮಂಗಳವಾರ ಹಾಲ್ನಂತ ಹಲಗೂರು ಚಿಲ್ಲಾಪುರಕ್ಕೆ ಅಲ್ಕೊಂಡು ನುಗ್ಗಿದಾಗ –

ಮಾರಮ್ಮ ನುಗ್ಗಿದ ಊರೊಳಗೆ
ಇಲಿ ಹೆಗ್ಗಣ ಸಾಯುತ್ತಾವೆ
ಸಿದ್ದಯ್ಯ ಸ್ವಾಮಿ ಬನ್ನಿ

ಹಾಲ್ನಂತ ಹಲಗೂರು ಚಿಲ್ಲಾಪುರಕ್ಕೆ ಮಾರಮ್ಮನವರು ಯಾವಾಗ ಬಂದು ನುಗ್ಗುದರೋ ಆವಾಗ ವಾಂತಿ ಭೇದಿ ರೋಗ ಹಲ್ಲುಕಟ್ಟಿನ ರೋಗ ಗ್ವಾರದ ರೋಗದಿಂದ ಜನರೆಲ್ಲರೂ ಸಾಯುತ್ತಿರುವಾಗ ಮತದ ಪಂಚಾಳದವರು ಏನಣ್ಣ ನಮ್ಮ ಹಲಗೂರು ಚಿಲ್ಲಾಪುರಕ್ಕೆ ಇಂಥ ರೋಗ ಬಂದು ಬಿಡ್ತು. ನಮ್ಮ ಹೆಂಡ್ತೀರು ಏನಾದರೂ ಸತ್ತೋದರೆ ಏನು ಮಾಡುವುದು ನೋಡಣ್ಣ ಉತ್ತರದೇಶದಲ್ಲಿ ಹೆಣ್ಣು ಮಕ್ಕಳು ಮೈನೆರೆದು ಮೈನೆರೆದು ಇದ್ದಾರಂತೆ. ನಾವು ಒಬ್ಬೊಬ್ಬರೂ ಹತ್ತು ಹತ್ತು ಜನ ಹೆಂಗಸರನ್ನ ಮದುವೆ ಮಾಡಿಕೊಂಡರೆ

ಒಬ್ಬೊಬ್ಬರಿಗೆ ಹತ್ತು ಜನ ಮಕ್ಕಳಾದರೆ ೭೦೦ ಜನ ಮಕ್ಕಳಾಗುತ್ತಾರೆ ೭೦ ಜನ ಹೆಂಡ್ತಿಯರು ನಾವು ಏಳು ಜನ ಪಾಳ್ಯಗಾರರಿಗೆ.

ಆಗಲೂ ನೋಡಿ ನಾವು ೭೭೭ ಕುಲುಮೆ
ಸರಿಯಾಗಿಯೇ ಉಳುಕ್ಕೋತ್ತೀವಿ
ಸಿದ್ದಯ್ಯ ಸ್ವಾಮಿ ಬನ್ನಿ

ನಾವು ೭೭೭ ಕುಲುಮೆ ಉಳ್ಕೋತ್ತೀವಿ ನೀವು ಸುಮ್ಮನಿರಿ ಎಂದರಂತೆ. ಅಲ್ಲ ಕಾನಣ್ಣ ಆ ಕೊರವಂಜಿಯರು ಬಂದರೂ ಕೂಡ ಶಾಸ್ತ್ರ ಗೀಸ್ತ್ರ ಕೇಳಬಹುದಾಗಿತ್ತು ಎಂಬ ಪಾಳ್ಯಗಾರರ ಮಾತನ್ನು ಬಸವನ ಬೆಟ್ಟದ ಮೇಲಿರುವ ಸಿದ್ದಪ್ಪಾಜಿ ಪಾದಕ್ಕೆ ಪ್ರಿಯವಾಯ್ತಂತೆ. ಓಹೋ ಶಾಸ್ತ್ರ ಹೇಳ್ಕೊಂಡು ಹೋಗೋದೇ ಸರಿ ಅಂತ್ಹೇಳಿ ಸ್ವಾಮಿ. ನಿಶ್ಚಯಿಸಿ ಕೊರವಂಜಿಯ ವೇಷ ತಾಳ್ಕೊಂಡು ಸ್ವಾಮಿ ಹಲಗೂರು ಚಿಲ್ಲಾಪುರಕ್ಕೆ ಬಂದು ಶಾಸ್ತ್ರ ಹೇಳುತ್ತಾ ಇರುವರಂತೆ.

ನಾ ಹೇಳುವೇವು ಕಣಿಯ
ನಾ ಪೇಳುವೇವು ಕಣಿಯ
ಕಲ್ಲೂರಪ್ಪನ ಬೆಟ್ಟದವರು
ಕಲಿ ಹೇಳಕ್ಕೆ ಬಂದಿರುವರು
ಬಾಬಾ ಬುಡನಗಿರಿಯವರು
ಬಾಳದೂರದಿಂದ ಬಂದಿರುವರು
ಬಿಳಿಗಿರಿರಂಗನ ಬೆಟ್ಟದವರು
ನಾವು ಬೇಕಾದ ಕಣಿ ಹೇಳುವವರು
ನಾ ಹೇಳುವೇವು ಕಣಿಯ
ನಾ ಪೇಳುವೇವು ಕಣಿಯ

ಕೊರವಂಜಮ್ಮ ವೇಷ ತಾಳ್ಕೊಂಡು ಸಿದ್ದಪ್ಪಾಜಿ ಹಲಗೂರು ಚಿಲ್ಲಾಪುರದಲ್ಲಿ ಶಾಸ್ತ್ರ ಹೇಳ್ಕೊಂಡು ಬರುವಾಗ ಪಾಂಚಾಳದವರು ನೋಡಿದರಂತೆ. ಯಾವಳೋ ಕೊರವಂಜಿ ಬರುತ್ತಿದ್ದಾಳೆ. ಅವಳನ್ನು ನೋಡಿ ಕರ್ಕೊಂಡು ಬಂದು ಶಾಸ್ತ್ರ ಕೇಳಿದರಂತೆ. ರತ್ನೋಜಿ ಎಂಟು ಕವಡಮನಿಯನ್ನು ತೆಗೆದು ಕೆಳಗೆ ಬಿಟ್ಟರಂತೆ. ಬೊಪ್ಪಣಪುರದ ಕಡೆ ಮೂರು ಅಳ್ಳು ಮೊಕ ಮಾಡಿಕೊಂಡಿವೆಯಂತೆ. ಇದು ಮಾಟ್ನಾ ಕೂಟ್ನಾವಲ್ಲ ಮಂತ್ರ ತಂತ್ರ ಇಲ್ಲ. ನಿಮ್ಮ ಜಾತಿ ಮತದ ಸಿದ್ದಪ್ಪಾಜಿಯವರು ಬಂದು ಒಂಭತ್ತು ಪವಾಡ ಮಾಡಿದಂತರಲ್ಲ, ನೀವು ಕಬ್ಬಿಣದ ಆಯುಧಾನ ಮಾಡಿ ಕೊಡುತ್ತೀವಿ ಎಂದು ಹೇಳಿ ಕೊಡದೇ ಕಳುಸಿದಿರಂತಲ್ಲ. ಆದ್ದರಿಂದ ಅವರು ಹೋಗುವಾಗ ಕೊಟ್ಟು ಹೋಗಿರುವ ರೋಗವೇ ಹೊರತು ಮತ್ತಾರೂ ಕೊಟ್ಟ ರೋಗವಲ್ಲ ನಿಜ ಕಾನಣ್ಣ. ಈ ಕೊರವಂಜಿ ಹೇಳೋ ಮಾತು ನಿಜ. ಕೊರವಂಜಮ್ಮ ಅವರು ಹೋಗಿ ಮೂರು ನಾಲ್ಕು ದಿನವಾಯ್ತು ಅಂದರು.

ಆಗ ಕೊರವಂಜಿ ವೇಷದಲ್ಲಿದ್ದ ಸ್ವಾಮಿಯವರು ನಾನು ಬರುವಾಗ ಯಾರೋ ಬಸವನ ಬೆಟ್ಟದಲ್ಲಿ ಕುಂತಿದ್ರು ಅವರೇ ಇರಬಹುದು ಹೋಗಿ ನೋಡಿ ಎಂದಳು. ಕೊರವಂಜಮ್ಮ ಬೆರಳಿ ಹಣ ತಕ್ಕೊಂಡು ಹೋಗಮ್ಮ ನೀನು ಹೇಳಿದಂತಹ ಶಾಸ್ತ್ರ ನಿಜವಾಗಿದೆ. ಕೊರವಂಜಿ ವೇಷ ತಾಳ್ಕೊಂಡಿರುವ ಸಿದ್ದಪ್ಪಾಜಿ ಮಾಯವಾಗಿ ಬಸವನ ಬೆಟ್ಟದಲ್ಲಿ ಕುಂತಿದ್ದಾರೆ. ಆಗ ಹಲಗೂರು ಚಿಲ್ಲಾಪುರದವರು ಬಂದು ಅಪ್ಪ ಸಿದ್ದಪ್ಪಾಜಿ ಮನೆದೇವರು ಕುಲದೇವರು ಬಾಪ್ಪ. ನಾವು ಮಾಡಿದ್ದು ಭಾಳ ಅಪರಾಧವಾಗೋಯ್ತು. ಕಬ್ಬಿಣದ ಆಯುಧಾನ ಮಾಡಿಕೊಡುತ್ತೀವಿ ಅಂತ ಬಸವನ ಬೆಟ್ಟದಿಂದ ಹಲಗೂರು ಚಿಲ್ಲಾಪುರಕ್ಕೆ ಕರ್‍ಕೊಂಡು ಬಂದು ಏಳೇಳು ಹದಿನಾಲ್ಕು ಬೀದಿಯಲ್ಲಿ ಸ್ವಾಮಿಯವರನ್ನು ಪಲ್ಲಕ್ಕಿ ಮೇಲೆ ಕುಂದ್ರಿಸಿ ಮೆರವಣಿಗೆ ಮಾಡಿಸಿದರಂತೆ. ಅವರು ಕೇಳ್ಕೇಳಿದ ಲಾಂಭಾನ ಮಾಡಿಸ್ಕೊಂಡು ಹಾಗೂ ಬೊಪ್ಪೇಗೌಡನಪುರಕ್ಕೆ ಆಗತಕ್ಕಂತ ಸಾಮಗ್ರಿಗಳನೆಲ್ಲ ಮಾಡಿಸ್ಕೊಂಡು ತಿಂಗಳ್ನಾಗಂಟ ಹಲಗೂರು ಚಿಲ್ಲಾಪುರದಲ್ಲಿದ್ದು ತೊಲಗಂಬ ಮಾಡಸ್ಕೊಂಡು ಸಿದ್ದಪ್ಪಾಜಿ ಏಳು ಜನ ಪಾಳ್ಯಗಾರರನ್ನ ಕರ್‍ಕೊಂಡು ಕ್ವಾಣನೇರಿನ ಮೇಲೆ ಕಬ್ಬಿಣ ಆಯುಧಾನಗಳನ್ನು ಹೂಡ್ಸ್ಕೊಂಡು ಸ್ವಾಮಿ ಕಂಡಾಯವನ್ನು ಮೆರವಣಿಗೆ ಮಾಡಸ್ಕೊಂಡು ಮಂಗಳಾರತಿಯನ್ನು ಪಡ್ಕೊಂಡು

ಕಬ್ಬಿಣ ತಕ್ಕೊಂಡು ರಾಜಬೊಪ್ಪಣಪುರಕ್ಕೆ
ನಮ್ಮ ಸ್ವಾಮಿಯವರು ದಯಮಾಡುತ್ತಾರೆ
ಸಿದ್ದಯ್ಯ ಸ್ವಾಮಿ ಬನ್ನಿ
ರಾಜಬೊಪ್ಪಣಪುರಕ್ಕೆ ಬಂದಂತ ನನ್ನಪ್ಪ
ದೊಡ್ಡಮ್ಮತಾಯಿ ನೋಡಿ ಬಂದ್ಯೆಪ್ಪ ನೀನು
ಎಂಬುದಾಗಿ ದೊಡ್ಡಮ್ಮ
ಮಗನ ಪಾದಕ್ಕೆ ಅವರು ಮಂಗಳಾರತಿ
ಬೆಳಗಿದರಂತೆ
ಸಿದ್ದಯ್ಯ ಸ್ವಾಮಿ ಬನ್ನಿ

ಸಿದ್ದಪ್ಪಾಜಿಯವರ ಪವಾಡಕ್ಕೆ ದೊಡ್ಡಮ್ಮತಾಯಿ ಮಂಗಳಾರತಿ ಬೆಳಗಿದರಂತೆ. ಪನ್ನೀರು ಕಾಯ್ಸಿ ಸ್ನಾನ ಮಾಡಿದ ಪಂಚಾಳರು ಸೋಮವಾರ ಗುದ್ಲಿ ಪೂಜೆ ನೆರವೇರಿಸಿದರಂತೆ. ಚಿಲ್ಲಾಪುರದ ಆಚಾರರ ಕೈಲಿ ಬೊಪ್ಪೇಗೌಡನಪುರದ ಮಠಮನೆ ಮೂರು ತಿಂಗಳಿಗೆ ಮೂರು ದಿನ ಕಡಿಮೆ ಇರುವ ಹಾಗೆ ಬೊಪ್ಪಣಪುರಮಠ ಪೂರ್ಣ ಮಾಡಿದರಂತೆ. ಪರಂಜ್ಯೋತಿಯವರು ಹೇಳಿ ಯಾವ ಯಾವ ರೀತಿಯಾಗಿ ಕಟ್ಟಿಸಿದಾರಪ್ಪ ಎಂದರೆ ತೆಂಕ್ಲಾಗೆ ಚಂದ್ರಸಾಲೆ, ಬಡಗಲಾಗೆ ಒಂದೇ ಒಂದು ನಗಾರಿ ಹೂಡಿಸಿದ್ದಾರೆ. ಕುರುಬೇಗೌಡ ಕುರಿ ಕೂಡುವ ಕೊಟ್ಟಿಗೆಯನ್ನು ಹನ್ನೆರಡು ಆಳುದ್ದ ಜಲಬಾವಿ ತೋಡಿ ಪಕ್ಕದಲ್ಲೊಂದು ಮಜ್ಜನ ಬಾವಿ ಮಾಡಿಸಿದ್ದಾರೆ. ಭಾರೀ ಗುಂಡು ತೆಗೆದು ಬಾಗಿಲಿಗೆ ಮಡಗಿದ್ದಾರೆ. ಎಲ್ಲ ಮಾವಿನ ತೋಪಿನ ತೋರಣ ಕಟ್ಟಿಸಿಬಿಟ್ಟು ಹೋಗಿ ಪಾಂಚಾಳದವರೇ ಸಂತೋಷವಾಗಿ ಹೊಟ್ಟೆ ಹಸ್ದಾಗ ಊಟ ಮಾಡ್ಕೊಳ್ಳಿ

ಆಚಾರರೆಲ್ಲ ಎಂದು ತಳಿಗೆ ಪ್ರಸಾದ ಕೊಟ್ಟರು ದೊಡ್ಡಮ್ಮತಾಯಿ. ಕಾಡಂಕನಳ್ಳಿ ಹತ್ತಿರಕ್ಕೆ ಬಂದಾಗ, ನೋಡ್ಲಾ ಮುತ್ತೋಜಿ ಆ ಪೊಟ್ಣಾ ಬಿಚ್ಚಿ ನೋಡು ಎಂದರಂತೆ. ಪೊಟ್ಣಾ ಬಿಚ್ಚಿ ನೋಡಿದಾಗ ತಳಿಗೆ ಪ್ರಸಾದ ಘಮ ಘಮ ಅಂತಿತ್ತಂತೆ. ಆಚಾರರು ನೋಡ್ಬುಟ್ಟು ಸಣ್ಣಕ್ಕಿ ಅನ್ನ ಉಣ್ಣುವಂತವರು ನಾವು. ಯಾವಾಗ ಅನ್ನ ತೆಗೆದು ಇಟ್ಬುಟ್ಟರೋ ಆವಾಗ ಧರೆಗೆದೊಡ್ಡವರು ಅನ್ನದಲ್ಲೇ ಉದ್ಭವವಾದರಂತೆ. ಅಯ್ಯೋ ನಿಮ್ಮ ಮನೆ ಹಾಳಾಗೋಗ ಆಚಾರರೇ ಅನ್ನ ಕೊಟ್ಟು ಅವಸಾಂಗವಾಗಿ ಬಾಳಿ ಎಂದು ಬೊಪ್ಪಣಪುರದಲ್ಲಿ ಹರಸಿ ಕೊಟ್ಟರೆ ಅನ್ನ ಉಣ್ಣಕ್ಕಾಗುತ್ತದಾ ಅಂತ ಒಳ ಒಳಕ್ಕೆ ಹಾಕ್ತಾ ಇದ್ದೀರಲ್ಲ ಆಚಾರರೇ ನಿಮಗೆ ಶಾಪ ಕೊಡುತ್ತೀನಿ.

ನಾಳೆ ಹತ್ತು ಸಾವ್ರ ತಂದರೂ
ಸಂಜೆಗೆ ಲಾಯವಾಗಲಪ್ಪ
ಬಾಗಿಲ ಗಿಂಡೀಲಿ ಬರೋದೆಲ್ಲ
ನಿಮ್ಮ ಬಚ್ಚಲ ಗಿಂಡೀಲಿ ಹೋಗಲಪ್ಪ
ಸಿದ್ದಯ್ಯ ಸ್ವಾಮಿ ಬನ್ನಿ
ಕೇಳಿದ ಪಾಂಚಾಳದವರು
ಚಿನ್ನ ತಂದು ಕೊಟ್ಟಾರೆ ಅವರು
ಕೊಟ್ಟಂತ ಚಿನ್ನ ಅಡಗಲ್ಲಿನಲ್ಲಿ
ಮಡಿಕೊಂಡು ಕೊಟ್ಟವನು
ಕೆಟ್ಟ ಅಂತ ನೀವು ಮೂರು ಏಟು
ಹೊಡೆಯಿರಣ್ಣ
ಊರೂರಲ್ಲಿ ನೀವು ಒಂದೊಂದು
ಒಕ್ಲೇ ಆಗಿರಣ್ಣ
ಸಿದ್ದಯ್ಯ ಸ್ವಾಮಿ ಬನ್ನಿ
ಊರು ದುಡ್ಡು ನಿಮ್ಮ ಜೋಬಿನಿಂದ
ಹೋದರೂ ಸರಿಯೇ ಮೂರು ಸಾವಿರ
ರೂಪಾಯಿನ ಮಾತಾಡಿ
ಮೊನಕಾಲ್ಗಂಟ ಪಂಚೆ ಬಿಟ್ಕೊಂಡು
ಪೊನಕ ಪೊನಕ ತಿರುಗಾಡರಪ್ಪ
ಸಿದ್ದಯ್ಯ ಸ್ವಾಮಿ ಬನ್ನಿ
ಅವರಿವರ ಮನೆ ಮಾತ್ರ
ಚಂದಾಗಿ ಕಟ್ಟಿ ನಿಮ್ಮ ಮನೆ ಮಾತ್ರ
ಹದಗೆಟ್ಹೋಗ್ಲಿ
ಸಿದ್ದಯ್ಯ ಸ್ವಾಮಿ ಬನ್ನಿ
ಹಲಗೂರು ಚಿಲ್ಲಾಪುರದಲ್ಲಿ

೭೭೭ ಕುಲ ಹೊರಟ್ಹೋಗಿ
ಏಳು ಕುಲ ಉಳಕೊಳ್ರಪ್ಪ
ಸಿದ್ದಯ್ಯ ಸ್ವಾಮಿ ಬನ್ನಿ
ಚಿಲ್ಲಾಪುರದಲ್ಲಿ ಮಾತ್ರ ವಂಶಕ್ಕೆ
ಒಂದು ಕುಲ ಉಳಕೊಳ್ರಪ್ಪ
ಸಿದ್ದಯ್ಯ ಸ್ವಾಮಿ ಬನ್ನಿ
ಕೇಳಿ ಪಾಂಚಾಳದವರೆ
ನಾಳೆ ಕಲಿಯುಗದಲ್ಲಿ
ಊರೂರು ತಿರುಗುವವರು ನೀವು
ಒಡೂರ ಚಿನ್ನ ಕಳೆದು ಹೋದರೆ
ಹೊಟ್ಟೆ ನೋವು ಬರಲಪ್ಪ
ಸಿದ್ದಯ್ಯ ಸ್ವಾಮಿ ಬನ್ನಿ

ಹಲಗೂರು ಚಿಲ್ಲಾಪುರದವರಿಗೆ ಶಾಪ ಕೊಟ್ಟು ಬಿಟ್ಟು, ಈಕಡೆ ಪರಂಜ್ಯೋತಿ ಘನನೀಲಿ ಸಿದ್ದಪ್ಪಾಜಿ. ನೋಡಪ್ಪ ಬೊಪ್ಪೇಗೌಡನ ಪುರ ಮಠ ಕಟ್ಟಿಸಿ ಕೊಟ್ಟಿದ್ದೀಯಾ ಕಂದ. ನೀನು ಚಿಕ್ಕಳ್ಳಿ ಗ್ರಾಮ ಚಿಕ್ಕಲ್ಲೂರು ಕ್ಷೇತ್ರಕ್ಕೆ ಹೋಗಿ ಐಕ್ಯವಾಗು, ರೇಚಪ್ಪಾಜಿ ದೊಡ್ಡಮ್ಮ ತಾಯಿಗೆ ಮದುವೆಯಾಗಿ ಅಯ್ಯಯ್ಯೋ ನಾನು ಮಾತ್ರ ಮದುವೆ ಆಗಲ್ಲ ಎಂದು ರಾಚಪ್ಪಾಜಿಯವರು ಮುನಸ್ಕೊಂಡು ಕೂತಿರುವರಂತೆ. ಆವಾಗ ರಾಚಪ್ಪಾಜಿ ಯಾತಕೋಸ್ಕರ ಇಲ್ಲಿ ಬಂದು ಕುಂತಿದ್ದೀರಪ್ಪ. ದೊಡ್ಡಮ್ಮತಾಯಿ ನಾಚಿಕೆಯಿಂದ ರಾಚಪ್ಪಾಜಿಯವರ ಮುಖ ನೋಡಿ ನಾನು ಸೂತಕವಾಗಿದ್ದೀನಿ. ಮುಟ್ಟಾದ ಸ್ಥಳ ನಾಳೆ ಮುಟ್ನಳ್ಳಿ ತೋಪು ಅಂತ ನಾಮಕರಣವಾಗಲಿ. ರಾಚಪ್ಪಾಜಿ ಚೆನ್ನಾಜಮ್ಮನನ್ನು ಕರ್ಕೊಂಡು ಕಪ್ಪಡಿ ಕೈಲಾಸಕ್ಕೆ ಹೋಗಿ ದೊಡ್ಡಮ್ಮ ತಾಯಿ ಮಡುವಾಳ ಮಾಚಪ್ಪನ ಮನೆಗೆ ಹೋಗಿ ಐಕ್ಯವಾಗಿ ನಾನು ಕುರುಬೇಗೌಡರ ಕುರಿ ಕೂಡುವ ಕೊಟ್ಗೆಯ ಪಾತಾಳ ಲೋಕಕ್ಕೆ ಭಾರೀ ಗುಂಡನ್ನ ಮುಚ್ಚಿಬಿಡಿ. ನಾನು ಪಾತಾಳ ಲೋಕಕ್ಕೆ ಮರೆಯಾಗಿ ಹೋಗ್ತೀನಿ ಎಂದರಂತೆ. ಪೂರ್ವ ದಿಕ್ಕಿನಲ್ಲಿರುವ ಚಿಕ್ಕಳ್ಳಿ ಎಂಬ ಗ್ರಾಮದಲ್ಲಿ ಅದ್ದೂರಿಯಾಗಿ ಐಭೋಗದಲ್ಲಿ ನಿನಗೆ ಜಾತ್ರೆ ಆಗಲಿ. ಎರಡನೆಯ ಪೂಜೆ ಶಿವರಾತ್ರಿಯೊಳಗೆ ನಿಮಗಾಗಲಿ, ಮೂರನೆಯ ಪೂಜೆ ನೀವು ಕಪ್ಪಡಿಯಿಂದ ಬರುವಾಗ ಮುಟ್ನಳ್ಳಿ ತೋಪಿನಲ್ಲಿ ಫಲಾರದಯ್ಯನಿಗಾಗಲಿ, ನಾಲ್ಕನೆಯ ಪೂಜೆ ದೊಡ್ಡಮ್ಮ ತಾಯಿಗೆ ಮಡುವಾಳ ಮಾಚಪ್ಪನ ಮನೆಯೊಳಗಡೆ ಆಗಲಿ, ಐದನೆಯ ಪೂಜೆ ಬೊಪ್ಪೇಗೌಡನಪುರದ ಹಟ್ಟಿಯೊಳಗಡೆ ನಮಗಾಗಲಿ. ನಾನು ಕಲಿ ಮುಗಿಯೋ ತನಕ ನಾನು ಬರಲಾರೆ ಕಣ್ಣಿಗೆ ಮರೆಯಾಗಿ ಹೋಗುತ್ತೀನಿ. ಭಾರೀ ಗುಂಡನ್ನು ಬಾಗಿಲಿಗೆ ಒತ್ರಸ್ಬುಡಿ ಅಂಥ ಸ್ವಾಮಿ ಪರಂಜ್ಯೋತಿ ಮಂಟೇದಲಿಂಗಯ್ಯ ಕುರುಬೇಗೌಡನ ಹಟ್ಟಿಯ ಪಾತಾಳ ಲೋಕಕ್ಕೆ ಮರೆಯಾಗಿ ಹೋಗುತ್ತಿರುವರಂತೆ. ಹೀಗೆ ಹೇಳುತ್ತಿರುವ ಪರಂಜ್ಯೋತಿ ಮಂಟೇಲಿಂಗಯ್ಯನವರ ಪಾದಚರಣಗಳಿಗೆ ಎಲ್ಲರೂ ಸಹ ಮಂಗಳಾರತಿಯನ್ನ ಬೆಳಗಿದರಂತೆ.

ಹಾಡಿರಿ ರಾಗಗಳ
ನುಡಿಸಿರಿ ತಾಳಗಳ
ಹಚ್ಚಿರಿ ದೀಪಗಳ
ಸ್ವಾಮಿಗೆ ಹಾಕಿರಿ ಧೂಪಗಳ – ೨
ಅ.......... ಹಚ್ಚಿರಿ ದೀಪಗಳ
ಸ್ವಾಮಿ ಹಾಕಿರಿ ಧೂಪಗಳ
ಬೊಪ್ಪೇಗೌಡನಪುರದಲ್ಲಿ
ಏನಯ್ಯ ವೈಭೋಗ
ಅಲ್ಲಿ ಧೂಪದ ಮಂಜು
ಕವಿದಾವೋ ಮಾಯ್ಕಾರ
ಸ್ವಾಮಿ ಇಡಕಾಯಿ ಇನ್ನೂರು
ಹೊಡಕಾಯಿ ಮುನ್ನೂರು
ನಿಮಗೆ ಎಳನೀರಿನ
ಕೋಡಿ ಹರಿದವು ಮಯ್ಕಾರ
ಹಾಡಿರಿ ರಾಗಗಳ ....
ಸಂಪಿಗೆ ಹೂವಿನಾಗೆ
ಗುಂಪಾಯ್ತು ನಿನ್ನ ಪರುಸೆ
ಸಂಪತ್ತುಗಾರ ನಮ್ಮ ಸಿದ್ದಪ್ಪಾಜಿ
ಸಂಪತ್ತುಗಾರ ಪರಂಜ್ಯೋತಿ ಮಾಯ್ಕಾರ
ಆಹಾ ....
ತಂಪೋತ್ಲಿ ನಾವು ಕೂಗುವ ಕೂಗು

ಹಾಡಿರಿ............................
ಪರಂಜ್ಯೋತಿ ಮಂಟೇಸ್ವಾಮಿ
ನಿಮ್ಮ ಪಾದಕ್ಕೆ ಅರುವಾಗಲಿ
ನಮ್ಮ ಮಾಯ್ಕಾರ ಮಂಟೇಸ್ವಾಮಿ
ಹಾಡಿರಿ ....

ಪರಂಜ್ಯೋತಿ ಮಂಟೇಸ್ವಾಮಿ ಕುರುಬೇಗೌಡರ ಹಟ್ಟಿ ಪಾತಾಳಕ್ಕೆ ಹೋಗುತ್ತಾ ಇದ್ದೀರಲ್ಲ ಸ್ವಾಮಿ ಮತ್ತೆ ಬರುವುದು ಯಾವಾಗ ಅಣ್ಣಯ್ಯ. ನೋಡು ದೊಡ್ಡಮ್ಮ ನಾಳೆ ಕಲಿ ಸಂಪೂರ್ಣವಾಗಿ ಮುಗಿದು ಮೇಲೆ ಬರುತ್ತೀನಿ. ಅಲ್ಲಿತನಕ ಅಣ್ಣಯ್ಯ ನಮಗೆ ದರ್ಶನ ಕೊಡೋದಿಲ್ಲವೇ ? ಕೊಡುತ್ತೀನಿ ದೊಡ್ಡಮ್ಮ. ಎಲ್ಲಿ ? ಪೂರ್ವದಿಕ್ಕಿನಲ್ಲಿ ಕುರುಬರ ಕಟ್ಟೆ ಎಂಬ ಗ್ರಾಮ ನಿರ್ಮಿತವಾಗುತ್ತದೆ. ಅಲ್ಲಿ ಹೊನ್ನಯ್ಯನ ಕಂಡಾಯ

ಮತ್ತು ಚೆನ್ನಯ್ಯನ ಕಂಡಾಯ ಅಂತ ಪ್ರತಿಷ್ಠಿತವಾಗುತ್ತದೆ. ಕುರುಬನ ಕಟ್ಟೆಗೆ ಹೋಗಿ ಯಾರು ಕಂಡಾಯ ತಂದು ಊರಲ್ಲಿ ಮೆರವಣಿಗೆ ಮಾಡಿಸುತ್ತಾರೋ

ಆ ಕಂಡಾಯ ಬಂದ ಊರಿಗೆ
ನಾ ಖಂಡಿತವಾಗಿ ಬರುತ್ತೀನಿ
ಸಿದ್ದಯ್ಯ ಸ್ವಾಮಿ ಬನ್ನಿ

ದೊಡ್ಡಮ್ಮ ಕಂಡಾಯ ಬಂದ ಊರಿಗೆ ನಾನು ಖಂಡಿತವಾಗಲೂ ಹೂ ಹೊಂಬಾಳೆ ಮೇಲೆ ವಾಲಾಡಿ ಬರುತ್ತೀನಿ ಎಂದು ಹೇಳಿ ಮರೆಯಾದಾಗ ಪಾದ ಚರಣಗಳಿಗೆ ಮಂಗಳಾರತಿ ಬೆಳಗಿದರಂತೆ.

ಮಂಗಳ ಹಾಡು

ಬೊಪ್ಪಣ ಪುರದಲ್ಲಿ
ಒಪ್ಪದಲ್ಲಿ ನೆಲೆಸಿರೋ
ಮಂಟೇದಸ್ವಾಮಿಯ ನೆನೆಯಣ್ಣ
ಪುಣ್ಯಾತ್ಮನ ಪಾದ ಪೂಜೆ ಮಾಡಣ್ಣ
ಕಪ್ಪಡಿ ಕೈಲಾಸದಲ್ಲಿರುವ
ರೇಚಪ್ಪಾಜಿಯ ನೆನೆಯಣ್ಣ
ಚಿಕ್ಕಲ್ಲೂರಲ್ಲಿ ಇರುವ ನಮ್ಮ
ಸಿದ್ದಪ್ಪಾಜಿಯ ನೆನೆಯಣ್ಣ
ಬೊಪ್ಪಗಣ ....
ಕಾದುಗಟ್ಟಿ ಮೆಲೆ ಕೂತ ಪುಣ್ಯಾತ್ಮನ
ಪಾದ ಪೂಜೆ ಮಾಡಣ್ಣ
ಜನ್ಮ ಕೊಟ್ಟಿರುವ ತಂದೆ ತಾಯಿಗಳ
ಭಕ್ತಿಯಿಂದ ನೆನೆಯಣ್ಣ
ಕರ್ಪೂರದ ಮಂಗಳಾರತಿ
ಮಂಟೇಸ್ವಾಮಿ ಪಾದಕ್ಕೆ
ಸಿದ್ದಪ್ಪಾಜಿ ಪಾದಕ್ಕೆ
ಚೆನ್ನಾಜಮ್ಮನ ಪಾದಕ್ಕೆ
ತೋಪಿನ ದೊಡ್ಡಮ್ಮನ ಪಾದಕ್ಕೆ
ಘನನೀಲಿ ಪಾದಕ್ಕೆ
ಪರಂಜ್ಯೋತಿ ಪಾದಕ್ಕೆ ..

ಅನುಬಂಧ

೧. ದಕ್ಷಿಣ ಕರ್ನಾಟಕ ಮಂಟೇಸ್ವಾಮಿ ಕಾವ್ಯ ಸಂಪ್ರದಾಯದ ಬಹುಮುಖೀ ದಾಖಲೀಕರಣ ಮತ್ತು ಭಾಷಾಂತರ ಯೋಜನೆ

ಯೋಜನೆಯನ್ನು ಕಾರ್ಯಗತಗೊಳಿಸಿದ ವಿಧಾನ

ಅ. ಪೂರ್ವಸಿದ್ಧತೆ – ಕ್ಷೇತ್ರಕಾರ್ಯ ವಿಧಾನ :

ಮಂಟೇಸ್ವಾಮಿ ಕಾವ್ಯ, ಕರ್ನಾಟಕ ಜನಪದ ಕಾವ್ಯ ಪ್ರಕಾರಗಳಲ್ಲಿ ಪ್ರಮುಖವಾದ ಹಾಗೂ ವಿಶಿಷ್ಟವಾದ ಜನಪದ ಮಹಾಕಾವ್ಯ. ನೀಲಗಾರರೆಂಬ ವೃತ್ತಿಗಾಯಕರಿಂದ ನಿರೂಪಿತಗೊಂಡಿರುವ ಕಾವ್ಯ.

ಮಂಡ್ಯಜಿಲ್ಲೆಯ ಬೊಪ್ಪೇಗೌಡನಪುರದ ಧರೆಗೆದೊಡ್ಡವರ ಮಠ, ಮೈಸೂರು ಜಿಲ್ಲೆಯ ಕಪ್ಪಡಿ ರಾಚಪ್ಪಾಜಿಯ ಮಠ, ಚಾಮರಾಜನಗರ ಜಿಲ್ಲೆಯ ಚಿಕ್ಕಲ್ಲೂರಿನಲ್ಲಿರುವ ಸಿದ್ದಪ್ಪಾಜಿ ಮಠ, ರಾಮನಗರ ಜಿಲ್ಲೆಯ ಧರೆಗೆದೊಡ್ಡವರ ಹಳೆಮಠ ಮುಂತಾದವು ಈ ಕಾವ್ಯ ಸಂಪ್ರದಾಯದ ಕ್ಷೇತ್ರಗಳು.

ಕಾವ್ಯ ಪ್ರಸ್ತುತಪಡಿಸುವಾಗ ಬಳಸುವ ಪಕ್ಕವಾದ್ಯಪರಿಕರಗಳು : ನಾಲ್ಕು ತಂತಿಯ ತಂಬೂರಿ, ದಮ್ಮಡಿ, ಗಗ್ಗರ ಹಾಗೂ ಗುಮ್ಮಟೆ ಇವೇ ಮುಖ್ಯವಾದುದು. ಇವರು ಧರಿಸುವ ಉಡುಪು : ತಲೆಗೆ ಕೆಂಪುಪೇಟ, ಕರಿನಿಲುವಂಗಿ, ಬಿಳಿಯ ಪಿಲ್ಲಿ ಹಾಗೂ ಬಗಳಿಗೊಂದು ಜೋಳಿಗೆ. ಈ ಕಾವ್ಯವನ್ನು ಹಾಡುವ ಗಾಯಕರು ಚಾಮರಾಜನಗರ, ಮೈಸೂರು, ಮಂಡ್ಯ, ರಾಮನಗರ ಜಿಲ್ಲೆಗಳಲ್ಲಿ ದಟ್ಟವಾಗಿಯೂ ಬೆಂಗಳೂರು ಮತ್ತು ಹಾಸನ ಜಿಲ್ಲೆಗಳಲ್ಲಿ ವಿರಳವಾಗಿಯೂ ಕಂಡುಬರುತ್ತಾರೆ.

ದಕ್ಷಿಣ ಕರ್ನಾಟಕದ ಮಂಟೇಸ್ವಾಮಿ ಕಾವ್ಯ ಸಂಪ್ರದಾಯದ ಬಹುಮುಖೀ ದಾಖಲೀಕರಣ, ಪಠ್ಯೀಕರಣ ಮತ್ತು ಭಾಷಾಂತರ ಯೋಜನೆ ಕೈಗೊಂಡ ಮೇಲೆ ಮೊದಲನೆಯ ಘಟ್ಟವಾಗಿ ಈಗಾಗಲೇ ಮಂಟೇಸ್ವಾಮಿ ಕಾವ್ಯ ಕುರಿತು ಹೊರಬಂದಿರುವ ಗ್ರಂಥಗಳಾದ ಶ್ರೀ ಮಂಟೇಸ್ವಾಮಿ ಕಾವ್ಯ (೧೯೭೩) ಸಂ : ಜೀ.ಶಂ. ಪರಮಶಿವಯ್ಯ, ಧರೆಗೆ ದೊಡ್ಡವರ ಕಾವ್ಯ (೧೯೮೦) ಸಂ : ಟಿ.ಎಂ. ಪರಶಿವಮೂರ್ತಿ, ಮಂಟೇಸ್ವಾಮಿ ಕಾವ್ಯ (೧೯೯೭) ಸಂ : ಹಿ.ಚಿ. ಬೋರಲಿಂಗಯ್ಯ, ಧರೆಗೆದೊಡ್ಡವರ ಕಥೆ (೧೯೯೬) ವೆಂಕಟೇಶ ಇಂದ್ವಾಡಿ ಈ ಎಲ್ಲಾ ಸಂಗ್ರಾಹಕರಿಂದ ಸಂಪಾದಿತವಾದ ಮಂಟೇಸ್ವಾಮಿ ಕಾವ್ಯವನ್ನು ಕುರಿತಂತೆ ಅಧ್ಯಯನ ಮಾಡಿ ಟಿಪ್ಪಣಿ ಮಾಡಿಕೊಂಡೆವು. ಆದರೆ ಇಂತಹ

ಬಹುತೇಕ ಪಠ್ಯಗಳು ಸಹ ಏಕವ್ಯಕ್ತಿಯಿಂದ ಕೃತಕಸನ್ನಿವೇಶದಲ್ಲಿ ರೂಪ ತಳೆದವುಗಳೇ ಆಗಿವೆ. ಅಲ್ಲಲ್ಲಿ ದೊರಕಿಸಿಕೊಳ್ಳಲಾದ ಹಾಡುಗಳ ಮೂಲಕ ಹೊರಬಂದ ಪಠ್ಯ ರೂಪಗಳೇ ಹೊರತು ಜೀವಂತ ಪ್ರದರ್ಶನದ ಸಹಜ ಸಂದರ್ಭದಲ್ಲಿ ಮೂಡಿಬಂದ ಪಠ್ಯಗಳಲ್ಲ ಎಂಬುದು ಗಮನಾರ್ಹ. ಆಯಾ ಸಂಕಲನಗಳು ಹೊರಬಂದ ಸಂದರ್ಭದಲ್ಲಿ ದೊರೆಯುತ್ತಿದ್ದ ಸೀಮಿತ ಸೌಲಭ್ಯಗಳ ದೆಸೆಯಿಂದಾಗಿ ಇವು ಬಹುಮಖೀ ದಾಖಲೀಕರಣ ಪ್ರಕ್ರಿಯೆಗೆ ಒಳಪಟ್ಟಿಲ್ಲ. ಇಂತಹ ಎಲ್ಲ ನ್ಯೂನತೆಗಳನ್ನು ಗಮನಿಸಿಕೊಂಡು ಇನ್ನೂ ಹೆಚ್ಚು ವೈಜ್ಞಾನಿಕವಾಗಿ, ಸಮಗ್ರವಾಗಿ ಅಧ್ಯಯನ ಮಾಡುವ ಉದ್ದೇಶದಿಂದ ಯುಜಿಸಿ ನೆರವಿನಿಂದ ಈ ಯೋಜನೆಯನ್ನು ಕೈಗೆತ್ತಿಕೊಳ್ಳಲಾಯಿತು.

ಇದಕ್ಕೆ ಸಂಬಂಧಿದಂತೆ ಅಗತ್ಯ ಮಾಹಿತಿಯನ್ನು ಗ್ರಂಥಸ್ಥ ಆಕರದಲ್ಲಿ ಪಡೆದುಕೊಂಡ ಮೇಲೆ ಕ್ಷೇತ್ರಕಾರ್ಯ ಮಾಡಬೇಕಾದ ಜಿಲ್ಲಾವಾರು ತಾಲ್ಲೂಕುಗಳ ಪಟ್ಟಿಯನ್ನು ಸಹ ಮಾಡಿಕೊಂಡೆವು. ಅವು ಇಂತಿವೆ.

೧. ಚಾಮರಾಜನಗರ ಜಿಲ್ಲೆ

    ೧. ಕೊಳ್ಳೇಗಾಲ ತಾಲ್ಲೂಕು

    ೨. ಯಳಂದೂರು ತಾಲ್ಲೂಕು

    ೩. ಗುಂಡ್ಲುಪೇಟೆ ತಾಲ್ಲೂಕು

    ೪. ಚಾಮರಾಜನಗರ ತಾಲ್ಲೂಕು

೨. ಮೈಸೂರು ಜಿಲ್ಲೆ

    ೧. ನಂಜನಗೂಡು ತಾಲ್ಲೂಕು

    ೨. ಟಿ. ನರಸೀಪುರ ತಾಲ್ಲೂಕು

    ೩. ಹುಣಸೂರು ತಾಲ್ಲೂಕು

    ೪. ಎಚ್.ಡಿ. ಕೋಟೆ ತಾಲ್ಲೂಕು

    ೫. ಕೆ.ಆರ್.ನಗರ ತಾಲ್ಲೂಕು

    ೬. ಪಿರಿಯಾಪಟ್ಟಣ ತಾಲ್ಲೂಕು

    ೭. ಮೈಸೂರು ತಾಲ್ಲೂಕು

೩. ಮಂಡ್ಯ ಜಿಲ್ಲೆ

೧. ಮದ್ದೂರು ತಾಲ್ಲೂಕು

೨. ನಾಗಮಂಗಲ ತಾಲ್ಲೂಕು

೩. ಕೆ.ಆರ್. ಪೇಟೆ ತಾಲ್ಲೂಕು

೪. ಮಳವಳ್ಳಿ ತಾಲ್ಲೂಕು

೫. ಪಾಂಡವಪುರ ತಾಲ್ಲೂಕು

೬. ಮಂಡ್ಯ ತಾಲ್ಲೂಕು

೪. ಹಾಸನ ಜಿಲ್ಲೆ

೧. ಅರಸೀಕೆರೆ ತಾಲ್ಲೂಕು

೨. ಚನ್ನರಾಯಪಟ್ಣ ತಾಲ್ಲೂಕು

೩. ಬೇಲೂರು ತಾಲ್ಲೂಕು

೪. ಸಕಲೇಶಪುರ ತಾಲ್ಲೂಕು

೫. ಆಲೂರು ತಾಲ್ಲೂಕು

೬. ಹೊಳೆನರಸೀಪುರ

೭. ಅರಕಲಗೂಡು ತಾಲ್ಲೂಕು

೮. ಹಾಸನ ತಾಲ್ಲೂಕು

೫. ಬೆಂಗಳೂರು ಗ್ರಾಮಾಂತರ ಜಿಲ್ಲೆ

೧. ದೇವನಹಳ್ಳಿ ತಾಲ್ಲೂಕು

೨. ಹೊಸಕೋಟೆ ತಾಲ್ಲೂಕು

೩. ನೆಲಮಂಗಳ ತಾಲ್ಲೂಕು

೪. ದೊಡ್ಡಬಳ್ಳಾಪುರ ತಾಲ್ಲೂಕು

೬. ರಾಮನಗರ ಜಿಲ್ಲೆ

೧. ರಾಮನಗರ ತಾಲ್ಲೂಕು

೨. ಮಾಗಡಿ ತಾಲ್ಲೂಕು

೩. ಚನ್ನಪಟ್ಟಣ ತಾಲ್ಲೂಕು

೪. ಕನಕಪುರ ತಾಲ್ಲೂಕು

ಇದಕ್ಕೂ ಮುನ್ನ ವಕ್ತೃಗಳ ವಿಳಾಸ ಬಹುಮುಖ್ಯವಾದದ್ದು. ಇವರ ಬಗ್ಗೆ ಮಾಹಿತಿ ದೊರೆಯದೆ ಹೋದರೆ ಕುರುಡ ದಟ್ಟಕಾಡಿನಲ್ಲಿ ಮಾಡಿದ ಪಯಣದಂತೆ. ದಕ್ಷಿಣ ಕರ್ನಾಟಕದಲ್ಲಿ ಈಗಾಗಲೇ ಕ್ಷೇತ್ರಕಾರ್ಯ ಮಾಡಿರುವವರನ್ನು ಸಂಪರ್ಕಿಸಿ ವಕ್ತೃಗಳ ವಿಳಾಸ ಪಡೆಯಲಾಯಿತು. ಇದಲ್ಲದೆ ಆಕಾಶವಾಣಿ ಮತ್ತು ಕನ್ನಡ ಸಂಸ್ಕೃತಿ ಇಲಾಖೆ, ಜಾನಪದ ಲೋಕ ಹಾಗೂ ಇನ್ನಿತರೆ ಸಂಘ ಸಂಸ್ಥೆಗಳಿಂದ ಸಂಗ್ರಹಿಸಲಾಯಿತು. ಕ್ಷೇತ್ರಕಾರ್ಯಕ್ಕೆ ಸಜ್ಜಾಗಿರುವ ನಾವು ಆ ಬೆಲ್ಟ್‌ನಿಂದಲೇ ಬಂದವರಾದುದರಿಂದ ಕೆಲವು ಹಿರಿಯರನ್ನು ಮಾರ್ಗದರ್ಶನದ ಮೇಲೆ ಕಲಾವಿದರ ವಿಳಾಸ ಪಟ್ಟಿಯನ್ನು ಮಾಡಿಕೊಂಡೆವು.

ಅಂತೆಯೇ ಈ ಕ್ಷೇತ್ರದ ಭೌಗೋಳಿಕ ಪರಿಸರದ ಬಗ್ಗೆ ಅಲ್ಲಿನ ಜನಗಳ ಭಾಷೆ, ಆಚಾರ–ವಿಚಾರ, ಸಂಪ್ರದಾಯ, ನಡವಳಿಕೆ, ನಂಬಿಕೆ, ಉಡುಮ ಊಟೋಪಚಾರಗಳ, ಸಾಕಷ್ಟು ತಿಳಿದುಕೊಂಡೆವು. ಅನುಕೂಲತೆಯ ಬಗೆಗೆ ದೃಷ್ಟಿಯಿಂದ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಏನಾದರೂ ಸಾಕ್ಷ್ಯಚಿತ್ರಗಳು, ಪತ್ರಿಕೆಗಳಲ್ಲಿ ಬಂದ ಲೇಖನಗಳು ಇತ್ಯಾದಿ ಓದಿ ತಿಳಿದುಕೊಂಡೆವು. ಈಗಾಗಲೇ ಈ ಕ್ಷೇತ್ರದಲ್ಲಿ ಕ್ಷೇತ್ರಕಾರ್ಯ ಮಾಡಿ ಅನುಭವ ಪಡೆದಿರುವ ವಿದ್ವಾಂಸರಿಂದಲೂ ನೆರವು ಪಡೆದುಕೊಂಡೇವು.

ಹೀಗೆ ಕ್ಷೇತ್ರ ಪ್ರವೇಶಕ್ಕೆ ಪೂರ್ವಸಿದ್ಧತೆ ಪಡೆದುಕೊಂಡು ಹಳ್ಳಿಗಳ ಮೇಲೆ ಕ್ಷೇತ್ರಕಾರ್ಯಕ್ಕೆ ಇಳಿದೆವು. ವಕ್ತೃಗಳ ವಿಳಾಸದ ಬೆನ್ನು ಹತ್ತಿ ಆಯಾ ಊರಿನ ಹಿರಿಯರ ಸಲಹೆಯ ಮೇರೆಗೆ ಅಧಿಕಾರಿಗಳ ಸಹಾಯದ ಮೇರೆಗೆ ಅವರುಗಳನ್ನು ಪತ್ತೆಹಚ್ಚಿದೆವು. ತಮ್ಮ ಪರಿಚಯವನ್ನು ಅವರಿಗೆ ಹೇಳುತ್ತಾ ಅವರ ಪರಿಚಯವನ್ನು ನಾವು ಪಡೆಯುತ್ತಾ ಹೀಗೆ ಮತ್ತೆ ಮತ್ತೆ ಆ ಹಳ್ಳಿಗೆ ಭೇಟಿ ಕೊಡುತ್ತಾ ಒಬ್ಬೊಬ್ಬರಲ್ಲೂ ಆತ್ಮವಿಶ್ವಾಸ ಮೂಡುವಂತೆ ನಡೆದುಕೊಂಡೆವು.

ಹೀಗೆ ಹಳ್ಳಿಯಲ್ಲಿರುವ ವಕ್ತೃಗಳನ್ನು ಪದೇ ಪದೇ ಭೇಟಿ ಮಾಡುತ್ತಿದ್ದೆವು. ಕಲಾವಿದರ ಜೊತೆ ಮಾತನಾಡಿ ್ತ ಅವರು ನೀಡುವ ಕಥಾ ಪ್ರದರ್ಶನಗಳನ್ನು ತಿಳಿದುಕೊಳ್ಳುವ ಸಲುವಾಗಿ ದೂರವಾಣಿ ಅಥವಾ ಸಂಚಾರಿ ದೂರವಾಣಿ ಸಂಖ್ಯೆಗಳನ್ನು ಅವರದ್ದೋ ಅಥವಾ ಪಕ್ಕದ ಮನೆಯವರದ್ದೋ ಪಡೆದುಕೊಳ್ಳುತ್ತಿದ್ದೆವು. ಇದರಿಂದ ನಮಗೆ ಯಾವ

ಹಳ್ಳಿಯಲ್ಲಿ ಯಾವ ಕಥಾ ಪ್ರದರ್ಶನ ನಡೆಯುತ್ತದೆ ಎಂಬುದು ತಿಳಿದುಕೊಂಡು ಆ ಹಳ್ಳಿಗೆ ವೈಜ್ಞಾನಿಕ ಸರಂಜಾಮುಗಳೊಡನೆ ಇಡೀ ರಾತ್ರಿ ಕಥನಕಗಳನ್ನು ಆಲಿಸುತ್ತಿದ್ದೆವು. ಜೊತೆಗೆ ಟೇಪ್‌ರೇಕಾರ್ಡ್‌ನಲ್ಲಿ ದಾಖಲಿಸಿಕೊಂಡೆವು. ಹೀಗೆ ಸಹಜ ಸನ್ನಿವೇಶದಲ್ಲಿ ದಾಖಲಿಸಿಕೊಂಡ ಪಠ್ಯಗಳ ಸಂಖ್ಯೆ ಇಪ್ಪತ್ತು. ಒಟ್ಟು ೫೦ ಧ್ವನಿಸುರುಳಿಗಳಲ್ಲಿ ಅಳವಡಿಸಿಕೊಳ್ಳಲಾಯಿತು. ಆಡಿಯೋ ವಿಡಿಯೋವಿನಲ್ಲೂ ಸಹ ಸಮಗ್ರ ದಾಖಲೀಕರಣವನ್ನು ೨೫ ಸಿ.ಡಿ. ಗಳಲ್ಲಿ ಮಾಡಿಕೊಂಡಿದ್ದೇವೆ. ಇದರ ಜೊತೆಗೆ ಮಂಟೇಸ್ವಾಮಿ ನೀಲಗಾರ ಕಲಾವಿದರ ಭಾವಚಿತ್ರ ಮತ್ತು ಸ್ಥಳಮಹಿಮೆಯ ಛಾಯಾಚಿತ್ರಗಳನ್ನು ತೆಗೆದುಕೊಂಡಿದ್ದೇವೆ.

ದಕ್ಷಿಣ ಕರ್ನಾಟಕದ ಕೆಲವು ಜಿಲ್ಲೆಗಳಲ್ಲಿ ನೀಲಗಾರ ಕಲಾವಿದರು ಹೆಚ್ಚಿನ ಸಂಖ್ಯೆಯಲ್ಲಿ ಇಲ್ಲದಿದ್ದರೂ ಮಂಟೇಸ್ವಾಮಿ ಭಕ್ತರ ಮಹಾಪೂರವೇ ಈ ಜಿಲ್ಲೆಗಳಲ್ಲಿ ಸಿಗುತ್ತಾರೆ. ಇಂಥ ಒಂದು ಬೃಹತ್ ಪರಂಪರೆಯ ಬಗ್ಗೆ ಅಧ್ಯಯನ ಕೈಗೊಳ್ಳುವ ಸಲುವಾಗಿ ಕ್ಷೇತ್ರಕಾರ್ಯ ಮಾಡುವುದು ಒಂದು ಅಗಾಧ ಅನುಭವ ಲಭಿಸಿದಂತಾಗುತ್ತದೆ.

ಮಂಟೇಸ್ವಾಮಿ ಕಾವ್ಯ ಕೆಲವು ನಿರ್ದಿಷ್ಟ ಪುಣ್ಯಕ್ಷೇತ್ರಗಳಿಗೆ ಸಂಬಂಧ ಬೆಸೆದಿರುವ ಧಾರ್ಮಿಕ ಗುರುವೊಬ್ಬರ ಮಹಿಮೆಗಳನ್ನು ಪ್ರಸಾರ ಮಾಡುವ ದೃಷ್ಟಿಯಲ್ಲಿ ಹೆಣೆದಿದೆ. ಅಂದರೆ ದುಷ್ಟರಶಿಕ್ಷೆ – ಶಿಷ್ಟರರಕ್ಷೆ ಇದು ಮಂಟೇಸ್ವಾಮಿ ಕಾವ್ಯದ ಸ್ಪಷ್ಟವಾದ ಉದ್ದೇಶವಾಗಿದೆ. ಕಾವ್ಯದ ಉದ್ದಕ್ಕೂ ಅದ್ಭುತ ಪವಾಡಗಳನ್ನು ಮಾಡಿ ಶಿಷ್ಯ ಪರಂಪರೆಯನ್ನು ಪಡೆದುಕೊಳ್ಳುವ ರೀತಿ ಅತ್ಯಂತ ಆಕರ್ಷಕಭರಿತವಾದದ್ದು. ಸಾಮಾನ್ಯವಾಗಿ ಈ ಕಾವ್ಯ ಅರ್ಧ ಐತಿಹಾಸಿಕ ಅರ್ಧ ಕಾಲ್ಪನಿಕ ಅಂಶಗಳಿಂದ ಕೂಡಿದ್ದರೂ ಕೂಡ ಹೆಚ್ಚಿನ ಅಂಶಗಳು ಪೌರಾಣಿಕ.

ಪ್ರತಿ ಸಂಪ್ರದಾಯದಲ್ಲೂ ಇರುವಂತೆ ಗುರುವೊಬ್ಬರಿಂದಲೋ ಅಥವಾ ಹಿರಿಯ ಭಕ್ತರಿಂದಲೋ ಶಿಷ್ಯರು ಮಂಟೆಸ್ವಾಮಿ ಸಂಪ್ರದಾಯದಲ್ಲಿ ದೀಕ್ಷೆಪಡೆಯುತ್ತಾರೆ. ಈ ಶಿಷ್ಯರುಗಳೇ ಅಂದರೆ ನೀಲಗಾರರು ಈ ಪರಂಪರೆಯ ಪ್ರಸಾರದ ಹೊಣೆಯನ್ನು ಹೊತ್ತಿರುತ್ತಾರೆ. ಮೊದಲ ನೀಲಗಾರ ದೀಕ್ಷೆಯನ್ನು ಪಡೆದವನು ಸಿದ್ದಪ್ಪಾಜಿ. ಈ ಪರಂಪರೆಯ ದೀಕ್ಷೆಯ ಕಾರ್ಯ ಚಿಕ್ಕಲ್ಲೂರು, ಕಪ್ಪಡಿ, ಬೊಪ್ಪೇಗೌಡನಪುರ, ಚನ್ನಪಟ್ಟಣ ಹಳೆಮಠಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ನಡೆಯುತ್ತವೆ.

ಮಂಟೇಸ್ವಾಮಿ ಕಾವ್ಯ ಸಾಕಷ್ಟು ವಿಸ್ತಾರವಾಗಿದ್ದು ನೀಲಗಾರ ಕಲಾವಿದರಿಂದ ಅನೇಕ ರಾತ್ರಿಗಳ ಕಾಲ ಹಾಡುವಷ್ಟು ವ್ಯಾಪಕತೆ ಪಡೆದುಕೊಂಡಿರುತ್ತದೆ. ಅಂದರೆ ಸುಮಾರು ಮೂರರಿಂದ ಐದು ರಾತ್ರಿಗಳ ಕಾಲದವರೆಗೆ ಹಾಡುವಷ್ಟಿದೆ. ನಿರಂತರವಾಗಿ ಹಾಡುವ ಕಲಾವಿದರೂ ಇದ್ದಾರೆ. ಈ ಕಾವ್ಯವನ್ನು ನಾವು ಕೆಲವು ನಿರ್ದಿಷ್ಟ ಸಂದರ್ಭಗಳಲ್ಲಿ ನಡೆಯುವ ಅಂದರೆ ಹಬ್ಬಹರಿದಿನ, ಜಾತ್ರೆ, ಮನೆಕಾರ್ಯ, ಸಾವು ಇಂಥ ಸಹಜಸನ್ನಿವೇಶಗಳಲ್ಲಿ ನಾವು ಸಂಗ್ರಹಿಸಿರುವ ಪಠ್ಯಗಳಾಗಿವೆ.

ಮಂಟೇಸ್ವಾಮಿ ಕಾವ್ಯದ ಕಥಾಚೌಕಟ್ಟು ಹೀಗಿದೆ

ಆದಿಕಲ್ಯಾಣದಲ್ಲಿ ಬಸವಣ್ಣ ಮತ್ತು ನೀಲಮ್ಮನವರು ಒಕ್ಕಳ ಅಕ್ಕಿ ಒಂದು ಬದನೆಕಾಯಿ ಹಾಕಿ ಅಡಿಗೆ ಮಾಡಿ, ಲಕ್ಷದ ಮೇಲೆ ತೊಂಬತ್ತಾರು ಸಾವಿರ ಗಣಂಗಳಿಗೆಲ್ಲಾ ನಿತ್ಯ ಭೋಜನ ಮಾಡಿಸಿ ಮಿಕ್ಕಿದ ಪ್ರಸಾದವನ್ನು ಕಲ್ಲು ಬಂಡಿಕಟ್ಟಿ ಕೈಲಾಸಕ್ಕೆ ಹೂಡುತ್ತಿದ್ದರು. ಇದರಿಂದ ಈ ಲೋಕದಲ್ಲಿ ತಾವೇ ಸರ್ವಮಾನ್ಯರು; ತಮ್ಮನ್ನು ಬಿಟ್ಟರೆ ಇನ್ನಾರು ಇಲ್ಲವೆಂಬ ಭಾವನೆ ಕೊಂಚ ಮನೆಮಾಡಿತಂತೆ.

ಹೀಗಿರಲು ಒಂದು ದಿನ ನೀಲೋಚನೆ ತನ್ನ ಗಂಡನನ್ನು ಕುರಿತು ಒಂದು ಪ್ರಶ್ನೆ ಕೇಳಿದಳು ನಿಮಗೆ ಗುರುಗಳು ಯಾರು ಸ್ವಾಮಿ ಎಂದು ? ... ಕೇಳುತ್ತಾಳೆ. ಈ ಪ್ರಶ್ನೆಯೊಂದಿಗೆ ಕಾವ್ಯದ ಆದಿ ಭಾಗ ಪ್ರಾರಂಭಗೊಳ್ಳುತ್ತದೆ.

ಧರೆಗೆದೊಡ್ಡವರು ಕಲ್ಯಾಣಕ್ಕೆ ಬಂದ ವಿಚಾರ ಪವಾಡ ಸದೃಶ್ಯವಾಗಿ ಕಾವ್ಯದಲ್ಲಿ ಚಿತ್ರಿತವಾಗಿರುವುದನ್ನು ಕಾಣಬಹುದು. ಮಡದಿಯ ಮಾತಿನಿಂದ 'ನಮಗೆ ಗುರುಸ್ವಾಮಿ ಇಲ್ಲ' ಎಂದು ಬಸವಣ್ಣ ತನ್ನ ಪತ್ನಿಗೆ ಹೇಳುತ್ತಾರೆ. ಇದರಿಂದ ಪತಿ ಪತ್ನಿ ಇಬ್ಬರೂ ಏಕಾಗ್ರಚಿತ್ತದಿಂದ ಮಾಡಿದ ತಪಸ್ಸು ಕೈಲಾಸದಲ್ಲಿರುವ ಸಾಕ್ಷಾತ್ ಶಿವನಿಗೆ ಮುಟ್ಟುತ್ತದೆ. ಆಗ ಪರಂಜ್ಯೋತಿಯವರು ಈ ದಂಪತಿಗಳ ಹಿರಿಮೆಯನ್ನು ಲೋಕಕ್ಕೆ ತಿಳಿಸಿಕೊಡಲು ಧರೆಯ ಮೇಲೆ ಅವತರಿಸಿ ನೀಲಲೋಚನೆಯ ಕನಸಿನಲ್ಲಿ ಗೋಚರವಾಗುತ್ತಾರೆ.

ನೀಲಲೋಚನೆ ಕಂಡ ಕನಸು ಹೀಗಿದೆ : "ನಾನು ಕಲ್ಯಾಣಕ್ಕೆ ಬರುವಾಗ ಕಲ್ಯಾಣಪಟ್ಟಣದ ಕಡೇ ಬಾಗಿಲಲ್ಲಿ ನಾಲಿಗೆಯಿಲ್ಲದ ಘಂಟೆ ಢನೀರ್ ಢನೀರ್ ಎಂಬ ನಾದಸಪ್ತ ಮಾಡುತ್ತದೆ. ಕಲ್ಲಿನ ಕೋಳಿ ಕೊ ಕ್ಕೊ ಕ್ಕೋ ಅಂಥ ಮೂರು ಕೂಗು ಹಾಕುತ್ತದೆ. ಕಲ್ಲಿನ ನಂದಿಬಸವ ಮೂರು ಸತಿ ಗೊಟರು ಹೊಡೆಯುತ್ತದೆ ಆಗ ತಾಯಿ ನೀನು ಭಾವಿಸಿಕೋ ನಾನು ಕಲ್ಯಾಣಕ್ಕೆ ಬರುತ್ತಿರುವುದಾಗಿ ಎಂಬ ಸ್ವಪ್ನವನ್ನು ಕಂಡು ತನ್ನ ಪತಿಯಾದ ಬಂದು ಹೇಳಿರುತ್ತಾರೆ".

ಧರೆಗೆದೊಡ್ಡವರು ಅರವತ್ತಾರು ಕಾಸೆ ಮೂವತ್ಮೂರು ಬಿರುದುಗಳನ್ನೆಲ್ಲಾ ಧರಿಸಿ ತನ್ನ ವೇಷಬದಲಿಸಿದರು. ಕಾವಿವಸ್ತ್ರ ತೆಗೆದು ಎಮ್ಮೆ ಚಕ್ಕಳ ಮಾಡಿ ಹೆಗಲ ಮೇಲೆ ಹಾಕಿಕೊಂಡು ಭಾರೀ ಕಂಡಾಯವನ್ನು ಊರುಗೋಲು ಮಾಡಿಕೊಂಡು, ಕಮಂಡಲವನ್ನು ಸುಪಾನದ ಗಡಿಗೆ ಮಾಡಿ ಎಡಗೈಯಲ್ಲಿ ಹಿಡಿದುಕೊಂಡರು. ಮೈಯೆಲ್ಲಾ ಕಜ್ಜಿ ಮೂಗಂಡುಗ ಸೊಳ್ಳೆ, ಮೂಗಂಡುಗ ನೊಣಗಳನ್ನು ಮುತ್ತಿಸಿಕೊಂಡು ಕಲ್ಯಾಣದ ಕಡೆ ಹೊರಟು. ವೇಷಕ್ಕೆ ತಕ್ಕ ನಟನೆ, ಕಾಲು ಸೊತ್ತು, ಕೈ ಸೊತ್ತು, ನಡುಡೊಂಕು ಹೆಜ್ಜೆ ಹೆಜ್ಜೆಗೂ ಮುಗ್ಗರಿಸಿ ಬೀಳುವುದು, ಮೆಳ್ಳೆಗಣ್ಣು ತಿರುಗಿಸುವುದು, ಕಿರುಕಾಕು ಹೊಡೆಯುವುದು – ಈ ರೀತಿಯ ವೇಷವನ್ನು ತಾಳಿ ಧರೆಗೆದೊಡ್ಡವರು ಕಲ್ಯಾಣದ ಬಾಗಿಲಿಗೆ ಬರುತ್ತಾರೆ. ಅಲ್ಲಿ ಪಾರದವರಾದ ಕಟುಗರ ಸಂಗಯ್ಯ ಕೊಳಕನವೇಷ ತಾಳಿರುವ ಧರೆಗೆದೊಡ್ಡವರಿಗೆ ಒಳಗೆ ಬಿಡುವುದಿಲ್ಲ. ಒಳಗಿನ ಪ್ರವೇಶವನ್ನು ಕೋರಿ

ಪದೇ ಪದೇ ಪೀಡಿಸುತ್ತಿದ್ದಾಗ ಕತ್ತಿನಪಟ್ಟಿ ಹಿಡಿದು ಒಂದೆರಡು ಏಟನ್ನು ಹೊಡೆದು ನೂಕಿಬಿಡುತ್ತಾನೆ. ಕಟುಕರಸಂಗಯ್ಯ ಹೊಡೆದ ಏಟನ್ನು ಸ್ವೀಕರಿಸಿ 'ನೋಡಪ್ಪ ನೀನು ಹೊಡೆದ ಏಟು ಬಸವಣ್ಣನಿಗೆ ಆರೇಟು ನೀಲಲೋಚನೆಗೆ ಮೂರೇಟು ಆಗಲಿ ಎಂದು ಹೇಳಿ ಹೊರಟು ಹರಳಯ್ಯನ ತಿಪ್ಪೆಗುಂಡಿಯ ಮೇಲೆ ಪವಡಿಸುತ್ತಾರೆ.

ಧರೆಗೆ ದೊಡ್ಡವರು ಕಲ್ಯಾಣಕ್ಕೆ ಆಗಮಿಸಿದಾಗ ಕಡೇ ಬಾಗಿಲಿನಲ್ಲಿ ಕಟ್ಟಿದ ಚರ್ಮದ ಗಂಟೆಯ ಸದ್ದು ಮಾಡಿದರೂ ಜಂಗಮ ಆರಾಧನೆಯ ಗುಂಗಿನಲ್ಲಿದ್ದ ಅವರಿಗೆ ಕೇಳಲಿಲ್ಲ. ಭಕ್ತಿ ಭಂಡಾರಿಯಾದ ರಾಚಪ್ಪಾಜಿ ಜೊತೆ ಕಲ್ಯಾಣಿಕೊಳದಲ್ಲಿ ಬಸವಣ್ಣನವರು ಸ್ನಾನ ಮಾಡುತ್ತಿದ್ದಾಗ ಬೆನ್ನಿನ ಮೇಲೆ ಮೂರೇಟು ಹೊಡೆದಂಗೆ ಭಾಸವಾಯಿತು. ಅಂತೆಯೇ ಸಂಗಮೇಶನ ಗದ್ದಿಗೆಯನ್ನು ಸ್ವಚ್ಛಗೊಳಿಸುತ್ತಿದ್ದ ನೀಲೋಚನೆಯ ಬೆನ್ನಿಗೆ ಮೂರೇಟು ಹೊಡೆದಂಗೆ ಭಾಸವಾಯಿತು. ಇದನ್ನು ಅರಿತ ಇಬ್ಬರೂ ಕಡೇ ಬಾಗಿಲಿಗೋಡೋಡಿ ಬಂದು ಪಾರದವರಿಗೆ ಕೇಳುತ್ತಾರೆ. ಅವರಿಂದ ಬಂದ ಉತ್ತರವನ್ನು ಕೇಳಿ 96 ಬೀದಿಗಳನ್ನು ದಾಟಿ ಕಡೇ ಬೀದಿ ಮಡಿವಾಳ ಮಾಚಯ್ಯನ ತಿಪ್ಪೆಗುಂಡಿಯ ಮೇಲೆ ಪವಡಿಸಿರುವ ಧರೆಗೆದೊಡ್ಡವರನ್ನು ಬೇಡಿಕೊಳ್ಳುತ್ತಾರೆ –

ದಯೆಮಾಡಿ ಸ್ವಾಮಿ
ನಮ್ಮ ಗುರುಮಠಕ್ಕೆ

ಹೀಗೆ ಗಂಡ ಹೆಂಡತಿ ಇಬ್ಬರೂ ಪಾದವನ್ನು ಹಿಡಿಯುತ್ತಾರೆ ಆದರೆ ಪಾದವೇ ಕಿತ್ತು ಬರುತ್ತದೆ. ರಟ್ಟೆ ಹಿಡಿದು ಎತ್ತುತ್ತಾರೆ ರಟ್ಟೆಯೇ ಈಜಿ ಬರುತ್ತದೆ. ಮುಂಡಾಗು ಹಿಡಿದು ಎತ್ತುತ್ತಾರೆ ಮುಂಡಾಸವೇ ಎದ್ದುಬರುತ್ತದೆ.ಇದೆಲ್ಲ ನಮ್ಮ ಗುರುಸ್ವಾಮಿಯ ರೂಪಾಕಾರ ಎಂದು ತಿಳಿದು ತಮ್ಮ ರೇಷ್ಮೆಯ ವಸ್ತ್ರದಲ್ಲಿ ಮಾಂಸವನೆಲ್ಲ ಗಂಟುಮೂಟೆ ಕಟ್ಟಿ ದಾಸೋಹದ ಪಂಕ್ತಿಯ ಮಧ್ಯದಲ್ಲಿ ಬಸವಣ್ಣ ಹೊತ್ತುಕೊಂಡು ಬರುತ್ತಾರೆ. ಅದರಲ್ಲಿದ್ದ ಕೀವು ರಕ್ತ ಪಂಕ್ತಿಯ ಮಧ್ಯೆ ಸುರಿಯುತ್ತಿತ್ತು. ಇದನ್ನು ಕಂಡ ಒಂದು ಲಕ್ಷದ ಮೇಲೆ ತೊಂಬತ್ತಾರು ಸಾವಿರ ಶರಣರು ಅಸಹ್ಯಪಟ್ಟು ಕಲ್ಯಾಣಿಕೊಳಕ್ಕೆ ಸ್ನಾನಕ್ಕೆ ಹೋಗುತ್ತಾರೆ.

ಎಡೆಬಿಟ್ಟು ಹೋಗಿದ್ದ ಜಂಗಮರು ಕಲ್ಯಾಣಿಕೊಳದಲ್ಲಿ ಸ್ನಾನ ಮಾಡುತ್ತಿರುವಾಗ ಲಿಂಗಗಳು ಮಂಗಮಾಯವಾಗುತ್ತವೆ. ಜಂಗಮರ ಲಿಂಗಗಳೆಲ್ಲ ಧರೆಗೆದೊಡ್ಡವರ ಹೆಂಡದ ಸೋರೆಬುರುಡೆಯಲ್ಲಿ ಸೇರಿಕೊಳ್ಳುತ್ತವೆ. ಆಗ ಧರೆಗೆದೊಡ್ಡವರು ಅವರನ್ನು ಕುರಿತು ನಿಮಗೆ ಲಿಂಗ ದೊರೆಯದು ಮರ್ತ್ಯಲೋಕದಲ್ಲಿ ಅಲ್ಲಾ ಖುದಾ, ಅಕಬರ್ ಇಮಾಮ್ ಸ್ವಾಮಿಯನ್ನು ಪೂಜೆ ಮಾಡಿ ಮುಸಲ್ಮಾನರಾಗಿ ಎಂದು ತಮ್ಮ ಹಸ್ತವನ್ನು ತೋರಿಸುತ್ತಾರೆ.

ಈಕಡೆ ಸಂಗಮೇಶನ ಗದ್ದುಗೆಯಲ್ಲಿ ಪರಂಜ್ಯೋತಿಯವರು ಜ್ಯೋತಿರೂಪವಾಗಿ ದರ್ಶನವನ್ನು ಕೊಡುತ್ತಾರೆ. ಬಸವಣ್ಣನವರ ಅಪೇಕ್ಷೆಯ ಮೇರೆಗೆ ಧರೆಗೆದೊಡ್ಡವರು

ತುಂಬೇ ಸೊಪ್ಪಿನಿಂದ ಒಂದು ಲಕ್ಷದ ಮೇಲೆ ತೊಂಭತ್ತಾರು ಶರಣರನ್ನು ಸೃಷ್ಟಿಸಿಕೊಡುತ್ತಾರೆ. ನೀವೇ ಕಲ್ಯಾಣವನ್ನು ಆಳಿ ಎಂಬ ಬಸವಣ್ಣರು ಹೇಳಿದ ಮಾತಿಗೆ ಕಿವಿಗೊಡದೆ ರಾಚಪಯ್ಯನನ್ನು ಶಿಶುಮಗನಾಗಿ ಪಡೆದುಕೊಂಡು ಕೋಡೆಕಲ್ಲಿಗೆ ಬರುತ್ತಾರೆ ಇಲ್ಲಿ ಆದಿಭಾಗ ಮುಗಿಯುತ್ತದೆ.

ಆದಿಭಾಗದ ಘಟನಾವಳಿಗಳನ್ನು ಇಷ್ಟೊಂದು ಪ್ರಜ್ಞಾಪೂರ್ವಕವಾಗಿ ಹೆಣೆದಿರುವ ಜನಪದ ಕವಿಯ ಬಹುಮುಖ ಪ್ರತಿಭೆಯನ್ನು ಮೆಚ್ಚದಿರಲಾಗದು. ಜಾತಿ ದ್ವೇಷದಿಂದ ಕುದಿಯುತ್ತಿದ್ದ ಕಲ್ಯಾಣವನ್ನು ಕುರಿತು "ಕಲ್ಯಾಣಪಟ್ಟಣ ಹಾಳಾಗಿ ಹೋಗುತ್ತದೆ" ಎಂಬ ಧರೆಗೆದೊಡ್ಡವರ ಮಾತು ಅಂದಿನ ಸ್ಥಿತಿಗತಿಯನ್ನು ತೋರಿಸುತ್ತದೆ. 'ನಾವು ಬರುವುದಿಲ್ಲ' ಎಂಬ ಮಾತಿನ ಹಿಂದೆ ಕಲ್ಯಾಣದಲ್ಲಿ ಜಾತಿವ್ಯವಸ್ಥೆ ಭಯಾನಕವಾಗಿತ್ತು ಎಂಬುದು ಬಾಹ್ಯವಾಗಿ ಗೊತ್ತಾಗುತ್ತದೆ.

ಧರೆಗೆದೊಡ್ಡವರು ಕಲ್ಯಾಣವನ್ನು ಬರಿದು ಮಾಡಿದ ಮೇಲೆ ರಾಚಪ್ಪಾಜಿಯನ್ನು ಶಿಷ್ಯನ್ನಾಗಿ ಸ್ವೀಕರಿಸಿ ಕೊಡೇಕಲ್ಲಿಗೆ ಬರುತ್ತಾರೆ. ಧರೆಗೆದೊಡ್ಡವರು ಅರೆಕಲ್ಲಿನ ಮೇಲೆ ಕುಳಿತು ಧ್ಯಾನದಲ್ಲಿ ನಿರತರಾಗುತ್ತಾರೆ. ಆಗ ಆ ಕಲ್ಲೆ ಬಾಗಿ ಕೊಡೆಯಾಗಿ ನೆರಳು ನೀಡುತ್ತದೆ. ಆ ನೆರಳಿನಲ್ಲಿ ಅವರು ಹುಲಿಚರ್ಮ ಹೊದ್ದು ಮಲಗುತ್ತಾರೆ. ಆದರೆ ರಾಚಪ್ಪಾಜಿಗೆ ನಿದ್ರೆ ಬರದೆ ಹೊರಳಾಡುತ್ತಿರುತ್ತಾನೆ. ಆಗ ರಾಚಪ್ಪಾಜಿಯನ್ನು ಕರೆದು, ನೋಡು ನಮ್ಮ ಉತ್ತರದೇಶದ ಕಂಡಾಯಕ್ಕೆ ಶಿವಪೂಜೆ ಆಗಬೇಕಾಗಿದೆ. ಆದ್ದರಿಂದ ಹೂವು ತರಲು ಮೂಡಲು ಪಡುವಲಿಗಾದರೂ ಹೋಗು ಆದರೆ ತೆಂಕಲ ದಿಕ್ಕಿಗೆ ಮಾತ್ರ ಹೋಗಬೇಡ ಎನ್ನುತ್ತಾರೆ. ಕಾರಣವೇನೆಂದರೆ 'ಮದ್ದಿಕ್ಕಿ ಮಧ್ಯಾಹ್ನಕ್ಕೆ ಮರಣ ಮಾಡುತ್ತಾರೆ. ಹಠವಾದಿ ರಾಚಪ್ಪಾಜಿ ಗುರುಗಳು ಹೋಗಬೇಡ ಎಂದು ಹೇಳಿದರೆ ಅದರಲ್ಲಿ ಏನೋ ಒಂದು ಕರಾಮತ್ತು ಅಡಗಿರಬೇಕು ಎಂದು ಭಾವಿಸಿ ವಿಜಯನಗರಕ್ಕೆ ಹೋಗುತ್ತಾರೆ. ಅಲ್ಲಿ ಗಾರುಡಿಗರ ಮಕ್ಕಳು 'ಇರಳೆಕೋಲು' ಆಡುವಲ್ಲಿ ಬಂದರು. ಆಟದಲ್ಲಿ ಅವರ ಇರಳೆಕೋಲನ್ನೆಲ್ಲಾ ಗೆದ್ದುಕೊಳ್ಳುತ್ತಾರೆ. ರಾಚಪ್ಪಾಜಿಯನ್ನು ಸೋಲಿಸಲು ಗಾರುಡಿಗರು 'ಘನಮೋಡಿ' ಹಾಕುತ್ತಾರೆ. ಅದರಲ್ಲೂ ರಾಚಪ್ಪಾಜಿ ಗೆದ್ದುಕೊಂಡಾಗ ಗಾರುಡಿಗರ ಮಡದಿ ಮಕ್ಕಳ ಸಮೇತ ಬಂದು ಕಾಲಿಗೆರಗುತ್ತಾರೆ. ಆಟದಲ್ಲಿ ಸತ್ತಿರುವ ಗಾರುಡಿಗರನ್ನು ಕಪ್ಪುಧೂಳ್ತದ ಮೂಲಕ ಬದುಕಿಸುತ್ತಾರೆ. ಗಾರುಡಿಗರ ದೇವತೆಯಾದ ಮಲೆಯಾಳದೇವತೆಯನ್ನು ತನ್ನ ಶಿಶುಮಗಳನ್ನಾಗಿ ಪಡೆದು ಗಾರುಡಿಗರನ್ನೆಲ್ಲ ತನ್ನ ಒಕ್ಕಲಾಗಿಸಿ ಬರುತ್ತಾರೆ.

ತೆಂಕಲರಾಜ್ಯಕ್ಕೆ ಹೋಗಬೇಡ ಎಂಬ ಮಾತಿನ ಅರ್ಥ, ಹಠವಾದಿ ರಾಚಪ್ಪಾಜಿಯ ಮೂಲಕ ವಿಜಯನಗರದಲ್ಲಿ ಒಂದು ಪವಾಡ ಮಾಡಿಸುವ ಸಲುವಾಗಿಯೇ ಧರೆಗೆದೊಡ್ಡವರು ಈ ಮಾತು ಹೇಳಿರಬಹುದು ಎಂದೆನಿಸುತ್ತದೆ. ಮಾಟ-ಮಂತ್ರದಲ್ಲಿ ಪ್ರಾವೀಣ್ಯರಾದ ಗಾರುಡಿಗರನ್ನು ತಿದ್ದಿ ಉತ್ತಮ ಜೀವನದತ್ತ ಅವರನ್ನು ತಂದಿರುವುದು ಇಲ್ಲಿ ಪ್ರಶಸ್ತ್ಯವಾದ ವಿಚಾರ.

ವಿಜಯನಗರವನ್ನು ಬಿಟ್ಟು ಕಾಗಿನೆಲೆಗೆ ಬರುತ್ತಾರೆ. ಅಲ್ಲಿ ಅರಸು ವಂಶಸ್ಥರಾದ ಬಸವಲಿಂಗಯ್ಯ ಮತ್ತು ಕಲ್ಯಾಣಮ್ಮ ಈ ದಂಪತಿಗಳಿಗೆ ಒಬ್ಬಳೇ ಮಗಳು. ಆ ಮಗಳನ್ನು ರಾಚಪ್ಪಾಜಿಗೆ ಮದುವೆ ಮಾಡಿಸುವ ಸಲುವಾಗಿ ಕ್ವಾರಣ್ಯ ಭಿಕ್ಷೆ ಕೇಳುತ್ತಾರೆ. ಆಗ ಅರಸುಗಳು ತಮ್ಮ ಆಳುಗಳನ್ನು ಕರೆಸಿ ಅವನ ಕತ್ತಮೇಲೆ ಗುದ್ದಿ ಆಚೆ ತಳ್ಳಿಸುತ್ತಾರೆ. ಈಕಡೆ ಮಗಳಿಗೆ "ಚಳಿಜ್ವರ" ಬಂದು ಪ್ರಾಣಬಿಡುತ್ತಾಳೆ. ಸಹಿಸಲಾಗದ ದುಃಖದಲ್ಲಿ ಮಗಳನ್ನು ಒಪ್ಪಾಮಾಡಿ ಮನೆಗೆ ಬರುತ್ತಾರೆ.

ವಿಜಯನಗರದಿಂದ ಸಖರಾಯಪಟ್ಟಕ್ಕೆ ಬರುತ್ತಾರೆ. ಈ ಸಖ್ರಾಯಪಟ್ಟಣದ ರಾಜ ವೀರಬಸಪ್ಪ ರಾಣಿ ಗುರುಲಿಂಗಮ್ಮ ಎಂಬ ರಾಜದಂಪತಿಗಳಿಗೆ ರಾಜೇಂದ್ರಸ್ವಾಮಿ ವೀರರಾಜಸ್ವಾಮಿ ಎಂಬ ಅವಳಿ ಜವಳಿ ಮಕ್ಕಳು ಇರುತ್ತಾರೆ. ಅರಸು ಮನೆತನದವರಾದ ಇವರು ತಮ್ಮ ಮಕ್ಕಳಿಗೆ ಹನ್ನೆರಡು ವರ್ಷದ ನಂತರ ನಾಮಕರಣ ಬಹಳ ವೈಭವೋಪೇತವಾಗಿ ಮಾಡಲೂ ನಿರ್ಧರಿಸಿರುತ್ತಾರೆ. ಊರಿನ ಮೇಲೆ ಡಂಗುರ ಸಾರಿಸುತ್ತಾರೆ.

ಸಾರುವೆ ಡಂಗೂರವ
ರಾಜರ ಮಕ್ಕಳ ನಾಮಕರಣಕ್ಕೆ
ಎಲ್ಲರೂ ಬರಬೇಕೆಂದು
ಸಾರುವೆ ಡಂಗೂರವ

ಈ ಡಂಗೂರದ ಸುದ್ದಿಯನ್ನು ಕೇಳಿ ತನ್ನ ಶಿಶುಮಕ್ಕಳ ಜೊತೆ ರಾಜನ ಅರಮನೆಯ ಊಟಕ್ಕೆ ಹೋಗುತ್ತಾರೆ. ಆದಿಯಲ್ಲಿ ಕಲ್ಯಾಣಪಟ್ಟಣ ಹಾಳಾದ ಮೇಲೆ ಅಲ್ಲಿನ ಕೆಲವು ಶರಣರು ಈ ರಾಜನ ಆಸ್ಥಾನದಲ್ಲಿ ಆಶ್ರಯಪಡೆದಿದ್ದರು. ಊಟ ಮಾಡಿ ಕೊಳಕು ಕೈಯಿಂದ ಎದ್ದು ಹೋದ ಜಂಗಮರನ್ನು ಕಂಡರು. ರಾಜ ಏಳು ಜನ ಜಂಗಮರ ಮಾತನ್ನು ಕೇಳಿ ಮರು ಭೋಜನ ಸಿದ್ಧಪಡಿಸಿ ಗುರುಗಳಿಗೆ ವಿಷದ ಕಜ್ಜಾಯವನ್ನು ಹಾಕಿಸುತ್ತಾನೆ. ವಿಷದ ಕಜ್ಜಾಯವನು ತಿಂದು ಉಳಿದ ಎರಡು ಕಜ್ಜಾಯವನ್ನು ತಮ್ಮ ಜೋಳಿಗೆಯಲ್ಲಿ ಹಾಕಿಡುತ್ತಾರೆ. ಬೊಮ್ಮಾಪುರ ಮಠದ ಶಾಲೆಯಿಂದ ಹಿಂದಿರುಗುತ್ತಿರುವ ರಾಜನ ಮಕ್ಕಳಿಗೆ ಆ ವಿಷದ ಕಜ್ಜಾಯವನ್ನು ಕೊಡುತ್ತಾರೆ. ಅದನ್ನು ತಿಂದು ಅರಮನೆಯ ಬಾಗಿಲಿಗೆ ಬಂದ ಮಕ್ಕಳು ಕುಸಿದುಬಿದ್ದು ಸಾವನ್ನಪ್ಪುತ್ತಾರೆ. ಆಗ ರಾಜ ನಮ್ಮ ಮಕ್ಕಳನ್ನು ಪಡೆದುಕೊಡಿ ಪ್ರಭುದೇವ ಎಂದು ಅಂಗಲಾಚುತ್ತಾರೆ. ಆಗ ರಾಜರ ಮಕ್ಕಳಿಗೆ ಜೀವವನ್ನು ತುಂಬಿ ಬದುಕಿಸುತ್ತಾರೆ. ನಾಳೆ ಪ್ರಪಂಚವನ್ನು ಇವರ ಕೈಯಲ್ಲಿ ಆಳಿಸುತ್ತೇವೆ ಎಂದು ಹೇಳಿ ಅವರುಗಳನ್ನು ಜೊತೆಯಲ್ಲಿ ಕರೆದುಕೊಂಡು ತಮ್ಮ ಮುಂದಿನ ಪ್ರಯಾಣವನ್ನು ಬೆಳೆಸುತ್ತಾರೆ.

ವಿಜಯನಗರವನ್ನು ಬಿಟ್ಟು ಧರೆಗೆದೊಡ್ಡವರ ಪರಿವಾರ ಚೆನ್ನಪಟ್ಟಣಕ್ಕೆ ಧಾವಿಸುತ್ತಾರೆ. ಧರೆಗೆದೊಡ್ಡವರಿಗೆ ರಾಜಾಸಿಂಗ್ ಎಂಬಾತನ ಕೈಗೆ ಧರೆಗೆದೊಡ್ಡವರು ಕಪ್ಪುಧೂಳ್ತವನ್ನು ಕೊಡುತ್ತಾರೆ. ಆ ಧೂಳ್ತವನ್ನು ತೆಗೆದುಕೊಂಡು ಚೆನ್ನಪಟ್ಟಣದ ಮಾರ್ಗವಾಗಿ ಬರುತ್ತಿದ್ದನು.

ದಾರಿ ಮಧ್ಯದಲ್ಲಿ ಮೈಸೂರು ರಾಜರೊಬ್ಬರು ಬೆನ್ನುಪನಿ ನೋವಿನಿಂದ ನರಳುತ್ತಿದ್ದರು. ಈ ಕಪ್ಪುಧೂಳ್ತದ ಮಹಿಮೆಯಿಂದ ಬೆನ್ನುಪನಿ ರೋಗ ವಾಸಿಯಾಗುತ್ತದೆ. ಆಗ ರಾಜ ಸಂತೋಷದಿಂದ ಗುರುಗಳಿಗೆ ತನ್ನ ಹಳೆಕೋಟೆಯ ಮಠವನ್ನು ಕೊಟ್ಟು ಇದು ನಿಮ್ಮ ಗುರುಗಳಿಗೆ ಮಠಮನೆ ಆಗಲಿ ಎಂದು ಹರಸಿ ದಾನ ಕೊಟ್ಟರಂತೆ. ಈಗ ಆ ಮಠವನ್ನೇ ಚನ್ನಪಟ್ಟಣದ ಕೋಟೆ ಮಠ ಎಂದು ಖ್ಯಾತಿಯಾಗಿದೆ ಎನ್ನುತ್ತಾರೆ ಕೆಲವು ಪುರೋಹಿತರು.

ಚೆನ್ನಪಟ್ಟಣದಿಂದ ಮೈಸೂರಿಗೆ ಪಯಣ ಬೆಳೆಸಿದರು. ಮೈಸೂರು ಮನೆಸ್ಥಾನವನ್ನು ಆಳುತ್ತಿದ್ದ ಮಹಾರಾಜರದು ಒಂದು ಕುಲ. ಕಾರುಗಳ್ಳಿ ಮಾರಾನಾಯಕನದು ಆರು ಸಾವಿರ ಕುಲ. ಆದ್ದರಿಂದ ರಾಜರ ಮಗಳನ್ನು ತನ್ನ ಮಗನಿಗೆ ಕೊಡಬೇಕೆಂದು ಪೀಡಿಸುತ್ತಿದ್ದನು. ಆ ಸಮಯದಲ್ಲಿ ಧರೆಗೆದೊಡ್ಡವರು ತಮ್ಮ ಶಿಶುಮಕ್ಕಳ ಸಮೇತವಾಗಿ ಮೈಸೂರಿನ ಕಾರಂಜಿಕೆರೆಯ ಹತ್ತಿರ ಡೇರೆಯನ್ನು ಹಾಕಿಕೊಂಡು ವಾಸವಾಗಿದ್ದರು. ಆಗ ಆಳ್ವಿಕೆ ಮಾಡುತ್ತಿದ್ದ ರಾಜ ನಾಲ್ವಡಿಕೃಷ್ಣರಾಜ ಒಡೆಯರು. ಮಾರನಾಯಕನನ್ನು ಸೋಲಿಸಿ ದೊಡ್ಡಮ್ಮತಾಯಿಯನ್ನು ಅರಮನೆಯಿಂದ ಭಿಕ್ಷೆ ಪಡೆದು ಮುಂದಿನ ಪ್ರಯಾಣ ಮಾಡಲು ತೊಡಗಿದರು.

ಮೈಸೂರನ್ನು ಬಿಟ್ಟು ಕುಂದೂರು ಬೆಟ್ಟಕ್ಕೆ ಬರುತ್ತಾರೆ. ಕುಂದೂರು ಬೆಟ್ಟದ ಮೇಲೆ ನಿಂತು ನಾಲ್ಕು ಮೂಲೆ ಎಂಟು ದಿಕ್ಕಿನ ರಾಜ್ಯವನ್ನು ದೃಷ್ಟಿಸಿ ನೋಡುತ್ತಾರೆ. ಆಗ ಅವರಿಗೆ ಕಾಡಂಕಹಳ್ಳಿ ಗ್ರಾಮ ಗೋಚರವಾಗುತ್ತದೆ ಅಲ್ಲಿಗೆ ದಯಮಾಡುತ್ತಾರೆ. ಆಗ ಹೊತ್ತು ಮುಳುಗಿ ಸಂಜೆಯ ಸಮಯವಾಗಿರುತ್ತದೆ. ಕುರುಬೇಗೌಡನ ಮನೆಗೆ ಹೋಗಿ ಭಿಕ್ಷೆ ಕೇಳಿದಾಗ, ಗೌಡ ಯಾರಲಾ ಜಂಗಮ ಹೊತ್ತುಗೊತ್ತಿಲ್ಲದೆ ಭಿಕ್ಷೆಗೆ ಬಂದಿದ್ದೀಯ ಎಂದು ಹೇಳುತ್ತಾನೆ. ಧರೆಗೆದೊಡ್ಡವರು ನಗುತ್ತಾ ನೋಡಪ್ಪ ಬೊಪ್ಪೇಗೌಡ ಕೇಳು ನಾವು ಭಿಕ್ಷೆಗೆ ಬರಲಿಲ್ಲ. ಉತ್ತರದಿಂದ ಈ ಜಾಗವನ್ನು ಹುಡುಕಿಕೊಂಡು ಬಂದೆವು. ಆದ್ದರಿಂದ ಈ ಕಂಡಾಯ ಇಡುವುದಕ್ಕೆ ಸ್ವಲ್ಪ ಜಾಗ ಕೊಡಬೇಕು ಎಂದಾಕ್ಷಣ ಗೌಡ ಆರ್ಭಟಿಸಿದನು.

ಕೊನೆಯಲ್ಲಿ ಕಾಡಿಬೇಡಿ ಕುರಿಕೂಡುವ ಕೊಟ್ಟಿಗೆಯ ಜಾಗವನ್ನು ಪಡೆದರು. ಕುರಿಗಳ ಮೇಲೆ ತಮ್ಮ ಪವಾಡವನ್ನು ತೋರಿಸಿದ ಪರಿಣಾಮವಾಗಿ ಎಲ್ಲಾ ಕುರಿಗಳು ಸತ್ತೋದವು. ನಂತರ ಸತ್ತೋದ ಕುರಿಗಳನ್ನು ಬದುಕಿಸಿಕೊಟ್ಟು ವಾಸಕ್ಕೆ ಮುಂದಿನ ಊರನ್ನು ತೋರಿಸಿಕೊಟ್ಟರು. ಆ ಊರೇ ಆದಿಹೊನ್ನಾಯಕನ ಹಳ್ಳಿಯಲ್ಲಿ ಸುಖ ಸಂತೋಷದಲ್ಲಿ ವಾಸಮಾಡುತ್ತಿದ್ದ ಕುರುಬೇಗೌಡ.

ಮಾಚಯ್ಯನ ಉಬ್ಬೆ ಒಲೆಯನ್ನು ದಾನ ಪಡೆಯುವ ಸಲುವಾಗಿ ಕಾಡಂಕನಹಳ್ಳಿಗೆ ಧರೆಗೆದೊಡ್ಡವರು ಬರುತ್ತಾರೆ. ಏಳೂರ ಒಕ್ಕಲು ಮಾಡಿಕೊಂಡು ತಮ್ಮ ಜೀವನ ನಡೆಸುತ್ತಿದ್ದ ಮಾಚಯ್ಯ ಮತ್ತು ಅವನ ಮಡದಿ ಮಲ್ಲಿಗೆಮಹದೇವಮ್ಮ ಹಾಗೂ ಒಬ್ಬ ಪುತ್ರ ವೀರಣ್ಣ ಬಡತನದ ಸುಖ ಸಂತೋಷದಲ್ಲಿ ಕಾಲ ಕಳೆಯುತ್ತಿದ್ದರು. ಈ ಗುಡಿಸಿಲ ಮೇಲೂ ಪವಾಡ ಮಾಡಿ ದೊಡ್ಡಮ್ಮತಾಯಿಗೆ ಮಠಮನೆಯನ್ನು ಮಾಡುತ್ತಾರೆ.

ಈಗಾಗಲೇ ಉತ್ತರದಿಂದ ಬರುವಾಗ ಪಡೆದ ಶಿಶುಮಕ್ಕಳನ್ನು ಧರೆಗೆದೊಡ್ಡವರು ಬೊಪ್ಪೇಗೌಡನಪುರದ ಮಠಮನೆಯಲ್ಲಿ ನೆಲೆಗೊಳಿಸಿದರು. ಕಲ್ಯಾಣದಲ್ಲಿ ಬಾಗಿಲ ಕಾವಲುಗಾರನಿಗೆ ಮಾತು ಕೊಟ್ಟಿದರ ಪ್ರಕಾರ ಶಿಶುಮಗನನ್ನು ಪಡೆಯವುದಕ್ಕೆ ನಿಡುಘಟ್ಟದಲ್ಲಿರುವ ಬಾಚಿಬಸವಾಚಾರಿ ಮತ್ತು ಅವನ ಮಡದಿಯಾದ ಮುದ್ದಮ್ಮನವರ ಗರ್ಭದಲ್ಲಿ ಆರು ಜನಮಕ್ಕಳು ಹುಟ್ಟಿದರು. ಗಂಡ ಹೆಂಡತಿ ಇಬ್ಬರಿಗೂ ಒಂದೇ ಬಟ್ಟೆಯಾಗಿ ತಿನ್ನುವುಧಕ್ಕೆ ಅನ್ನವಿಲ್ಲದೆ ಕುಡಿಯೋ ಅಂಬಲಿ ಪಾಯಸವಾಗಿತ್ತು. ಈ ಬಡತನದಲ್ಲಿ ಹುಟ್ಟಿದ ಕೊನೆಯ ಮಗ ಕೆಂಪಣ್ಣ ಏಳನೆಯ ಮಗ. ಇವನು ಹುಟ್ಟಿದ ಘಳಿಗೆಯಲ್ಲಿ ಬಡತನ ಬಯಲಾಯಿತು ಸಿರಿತನ ಬಂದುಬಿಡ್ತು.

ಭಾಗ್ಯವುಳ್ಳ ಕೆಂಪಣ್ಣನನ್ನು ಶಿಶುಮಗನಾಗಿ ಪಡೆಯುವುದಕ್ಕೆ ಧರೆಗೆದೊಡ್ಡವರು ಜಾಗಟೆ, ತಂಬೂರಿ ಕೂಚುಮಾಡುತ್ತಾ ಮುದ್ದಮ್ಮನ ಮನೆಯ ಬಾಗಿಲ ಮುಂದಿನ ಪಚ್ಚೆಕಲ್ಲಿನ ಮೇಲೆ ನಿಂತು ಕ್ವಾರಣ್ಯ ಭಿಕ್ಷೆ ಕೇಳುತ್ತಾನೆ. ಆಗ ಮುದ್ದಮ್ಮ ತನ್ನ ಬಂಗಾರದ ಮಗನಿಗೆ ಹಾಲು ಕೊಟ್ಟು ಕಳುಹಿಸುವ ಸಲುವಾಗಿ ಹಸುವಿನ ಹಾಲನ್ನು ಕರೆಯುತ್ತಿದ್ದಳು. ತಂಬೂರಿ ನಾದಕ್ಕೆ ಕರೆಯುವಂತ ಹಸು ಚಂಗಚಂಗನೇ ಎಗರಿ ಕರೆಹಂಡೆಯನ್ನು ಕಾಲಿನಿಂದ ಒದ್ದಿತು. ಒದ್ದೇಟಿಗೆ ಹಾಲೆಲ್ಲ ಚೆಲ್ಲೋಗಿ ನೆಲಸಮ ಆಗಿತ್ತು. ಆಗ ಕಡುಕೋಪದಲ್ಲಿ ಭಿಕ್ಷುಕನನ್ನು ನೋಡಿ "ಹಾಳಾದ ಮಂಟೇದ ಒಡೆಯರೇ ಮುಂದೇ ಹೋಗಿ" ಎಂದಳು. ಆಗ ಧರೆಗೆದೊಡ್ಡವರು ತನ್ನನ್ನು ಮಂಟೇದಲಿಂಗಯ್ಯ ಎಂಬ ನಾಮಕರಣವನ್ನು ಬಹಳ ಭಕ್ತಿಭಾವದಿಂದ ಸ್ವೀಕರಿಸಿದರು.

ಧರೆಗೆದೊಡ್ಡವರು ಈ ತಾಯಿಯ ದೃಢಮನ ನೋಡಿಯಾಯಿತು. ಇನ್ನು ಏಳು ವರ್ಷದ ಬಾಲಕ ಕೆಂಪಣ್ಣನ ದೃಢವ ನೋಡಬೇಕೆಂದು ಹೆಗ್ಗಲುಮೆಗೆ ಬರುತ್ತಾರೆ. ಕೆಂಪಣ್ಣನ ಚಿನ್ನದ ಸಿಂಹಾಸದ ಮೇಲೆ ಕೂತಿದ್ದವನ ಹತ್ತಿರಕ್ಕೆ ಬಂದು ಭಂಗಿಸೊಪ್ಪಿಗೆ ಬೆಂಕಿ ಫಲಾರ ಕೇಳುತ್ತಾರೆ. ನಿನಗೆ ಬೆಂಕಿ ಫಲಾರ ಕೊಟ್ಟರೆ ನನ್ನ ಕುಲುಮೆಯ ಕಾವು ಇಳಿಯುತ್ತದೆ. ಆದ್ದರಿಂದ ಕೊಡುವುದಿಲ್ಲ ಎಂದು ಅಹಂಕಾರದ ಮಾತುಗಳನ್ನು ಆಡುತ್ತಾನೆ. ಕಾಡಿಬೇಡಿದ ಏಲೆ ಕೊನೆಯಲ್ಲಿ ಇಕ್ಕಳದಲ್ಲಿ ಬೆಂಕಿಕೆಂಡ ತಂದು ಗುರುಗಳ ಅಂಗೈಮೇಲೆ ತಂದು ಸುರಿಯುತ್ತಾನೆ. ಅಂಗೈಕೆಂಡವನ್ನು ಚಿಲುಮೆಗೆ ಹಾಕಿಕೊಂಡು ಗುರುಗಳು ಭಂಗಿ ಫಲಾರ ಮಾಡುತ್ತಾರೆ. ಭಂಗಿಕುಡಿದ ಗ್ಯಾನದಲ್ಲಿ ಹುಚ್ಚುಬೆಪ್ಪಿನ ಗ್ಯಾನಕೊಡುತ್ತಾರೆ. ಆ ಗ್ಯಾನದಲ್ಲಿ ಕೆಂಪಣ್ಣನನ್ನು ಕೇಳುತ್ತಾರೆ ಈಗಲಾದರೂ ಶಿಷ್ಯ ಆಗುತ್ತೀಯಾ ? ನಿಮ್ಮಂಗೆ ತಿರುಕನಾಗುವುದಿಲ್ಲ ಎಂದು ಹೇಳಿ ಹಠಮಾಡುತ್ತಾನೆ. ಆಗ ಮಂಟೇಸ್ವಾಮಿಯವರು ಕುಂದೂರುಬೆಟ್ಟಕ್ಕೆ ಕರೆದುಕೊಂಡು ಬಂದು ನೀಲಿಗ್ಯಾನಕೊಟ್ಟು ಬರಗನ ಮೇಲೆ ಕೂರಿಸಿದರು. ಅದು ಆಕಾಶಕ್ಕೆ ಹಾರಿ ಚಂದ್ರ ಮಂಡಲ ಸೂರ್ಯಮಂಡಲ ಸುತ್ತಿಸಿ ಕಾಳಿಂಗನ ಗವಿಯಲ್ಲಿ ಕೂಡಿಹಾಕಿ ಬೊಪ್ಪಣಪುರಕ್ಕೆ ಹಿಂದಿರುಗುತ್ತಾರೆ.

ಹಾವು ಚೇಳಿನ ಒತ್ತೆ ಒಳಗೆ
ಮಲಗವನಲ್ಲೋ ಕೆಂಪಣ್ಣ

ಸಿದ್ದಯ್ಯ ಸ್ವಾಮಿ ಬನ್ನಿ

ತಲಕಾಡ ಮಡುವಿಗೆ ಸ್ನಾನಕ್ಕೆ
ಹೊರಟಾರಂತೆ ....
ಸಿದ್ದಯ್ಯ ಸ್ವಾಮಿ ಬನ್ನಿ

ಕೆಂಪಣ್ಣನ್ನು ಕುಂದೂರು ಕಲ್ಲುಗವಿಯಲ್ಲಿ ಕೂಡಿ ಹಾಕಿದರು. ನಂತರ ಮಾಚಯ್ಯನನ್ನು ಜೊತೆಯಲ್ಲಿ ಕರೆದುಕೊಂಡು ತಲಕಾಡು ಮಡುವಿಗೆ ಸ್ನಾನಕ್ಕೆ ಹೋಗುತ್ತಾರೆ. ಮಾಚಯ್ಯನಿಗೆ ಅಲ್ಲಿ ಆತ್ಮಲಿಂಗದ ದರ್ಶನ ಆಗುತ್ತದೆ. ತನ್ನ ಶಿವಕಂತೆಯನ್ನು ಮಡಿಮಾಡುವಾಗ ಅದರಲ್ಲಿರುವ ಜೀವಜಂತುಗಳು ಯಾವುದೂ ಸಾಯಬಾರದು ಎಂದು ಮಡಿವಾಳ ಮಾಚಯ್ಯನಿಂದ ಭಾಸೆ ತೆಗೆದುಕೊಂಡಿರುತ್ತಾರೆ. ಅದರಂತೆಯೇ ಮಾಚಯ್ಯ ಶಿವಕಂತೆಯನ್ನು ಮಡಿಮಾಡಿಕೊಡುತ್ತಾನೆ.

ಮಾಚಯ್ಯನ ಮಡಿ ಮೇಲೆ ಆರು ಹೆಜ್ಜೆ ಮೂರು ಗೇಣು ಬಂದು ತೆಂಕಲಾಗಿ ನೋಡಿದರಂತೆ. ಆಗ ತೆಂಕಲರಾಜ್ಯದಿಂದ ಬಡಗಲ ರಾಜ್ಯದ ಕಡೆಗೆ ಕಲಿಪುರುಷ ಬರುತ್ತಿದ್ದಾನೆ. ಹೇಗೆ ಬರುತ್ತಿದ್ದನಪ್ಪ ಎಂದರೆ ತನ್ನ ಹೆಂಡತಿಯನ್ನು ಹೆಗಲ ಮೇಲೆ ಕೂರಿಸಿಕೊಂಡು, ತಾನು ಕುದುರೆಯ ಮೇಲೆ ಕೂತುಕೊಂಡು, ಜನ್ಮಕೊಟ್ಟ ತಂದೆ ತಾಯಿಯನ್ನು ನಡೆಸಿಕೊಂಡು ಬರುತ್ತಿದ್ದನು. ಗಂಡ ಹೆಂಡತಿ ಮಲಗಿ ಸುಖಪಡುವ ಹಾಸಿಗೆ ದಿಂಬನ್ನು ತಂದೆ ಕೈಯಲ್ಲಿ ಹೊರಿಸಿಕೊಂಡು, ಗಂಡ ಹೆಂಡತಿ ಮೆಟ್ಟುವ ಚಪ್ಪಲಿ ಮತ್ತು ಪೀಕದಾನಿಯನ್ನು ತಾಯಿ ಕೈಯ್ಯಲ್ಲಿ ಹೊರಿಸಿಕೊಂಡು ಬರುತ್ತಿದ್ದಾನೆ.

ಆಗ ಮಂಟೇಸ್ವಾಮಿಯವರು ಒಂದು ಹಿಡಿ ಮರಳನ್ನು ಮಂತ್ರಿಸಿ ಮಾಚಯ್ಯನ ಕೈಗೆ ಕೊಡುತ್ತಾರೆ. ಅದನ್ನು ತೆಗೆದು ಮಾಚಯ್ಯ ಕಲಿಯ ಮೇಲೆ ಹಾಕುತ್ತಾನೆ. ಆಗ ಕಲಿಪುರುಷ ಪಾತಾಳಕ್ಕೆ ಹೋಗಿ ಸೇರುತ್ತಾನೆ. ಈಗಲೂ ಕೂಡ ಕಲ್ಲೂರು ತೋಪು ಕೊಳ್ಳೇಗಾಲದ ಹತ್ತಿರ ಇರುವ ಒಂದು ಗ್ರಾಮ.

ಹೇಳ ಹೇಳಿದ ಕಲಿಯ ನೀನು
ಪಟ್ಟಿ ಮಾಡ್ಕೋ ಮಾಚಪ್ಪ
ಸಿದ್ದಯ್ಯ ಸ್ವಾಮಿ ಬನ್ನಿ

ಈ ಮೇಲಿನಂತೆ ಮಂಟೇಸ್ವಾಮಿ ಪ್ರಸಂಗದ ಹಲವು ಭಾಗಗಳಲ್ಲಿ 'ಇದನ್ನು ಬರಕೋ' ಎಂದು ಮಂಟೇಸ್ವಾಮಿಯವರು ಹೇಳಿ ಬರೆಸುತ್ತಾರೆ. ರೇಚಪ್ಪಾಜಿ ಮೋಸ ಮಾಡಿದ ಎಂದು ಚಪ್ಪೋಡು ಬರಿ ಎಂಬುದಾಗಲೀ ನಾನು ಹೇಳುವ ಕಲಿ ಪ್ರಮಾಣವನ್ನು ಬರಿ ಎಂಬುದಾಗಲೀ ಹೀಗೆ ಒಂದಲ್ಲ ಒಂದು ಈ ಮಾತಿನ ಪ್ರವೇಶ ಇದ್ದೇ ಇರುತ್ತದೆ. ಇದರಿಂದ ನಮಗನ್ನಿಸುವುದು ನಮ್ಮ ಜನ ವಚನವನ್ನು ಕಳೆದುಕೊಂಡ ಕಾಲದಲ್ಲಿ ರಚನೆಯಾದ ಕತೆ ಇದು ಎಂದೆನಿಸುತ್ತದೆ. ನಮಗೆ ಅಕ್ಷರ ಲಭ್ಯವಾದಾಗ ಬರೆದುದು

ಮಾತ್ರ ನಿಜ, ಬರೆಯದೆ ಬರಿ ಬಾಯಿಮಾತು ಸುಳ್ಳು ಎಂಬ ಮನೋಭಾವ ಆಗ ಹುಟ್ಟಿತು ಎನಿಸುತ್ತದೆ. ಈ ಕತೆ ಹುಸಿಯಾಗಬಾರದು ಎಂಬ ದೃಷ್ಟಿಯಿಂದಲೇ ಇದನ್ನು ಬರಿ ಎಂಬ ಮಾತು ಮಂಟೇಸ್ವಾಮಿ ಪದೇ ಪದೇ ಬಳಸಿರಬಹುದು.

ಮಂಟೇಸ್ವಾಮಿಯವರು ಹನ್ನೆರಡು ವರ್ಷದ ಬಳಿಕ ದೊಡ್ಡಮ್ಮತಾಯಿಯನ್ನು ಕರೆದು ಕೆಂಪಣ್ಣನನ್ನು ಕರೆತರಲು ಮಡಿವಾಳ ಮಾಚಯ್ಯನ ಜೊತೆ ಕಳುಹಿಸಿಕೊಡುತ್ತಾರೆ. ಕೆಂಪಣ್ಣ ... ಕೆಂಪಣ್ಣ ... ಕೆಂಪಣ್ಣ... ಎಂದು ಮೂರು ಸಲ ಕರೆದರೂ ಮಾತಾಡಲಿಲ್ಲ. ಆಗ ಇವರಿಬ್ಬರೂ ಮಂಟೇಸ್ವಾಮಿಯ ಹತ್ತಿರಕ್ಕೆ ಬಂದು ನಾವು ಎಷ್ಟು ಕರೆದರೂ ಓಗುಡುತ್ತಿಲ್ಲ. ಆಗ ಅವರಿಗೆ ಮಂಟೇಸ್ವಾಮಿಯವರು 'ಧರೆಗೆದೊಡ್ಡವರ ಮಠದ ಘನನೀಲಿ ಸಿದ್ದಯ್ಯ ಸ್ವಾಮಿ' ಎಂದು ಕರೆಯಿರಿ ಎನ್ನುತ್ತಾರೆ. ಹಾಗೆಯೇ ಕರೆದಾಗ ಗವಿಯ ಬಾಗಿಲ ಮೇಲೆ ಚಾಚಿರುವ ಭಾರೀಯ ಗುಂಡು ಹಾರಿ ಬೊಪ್ಪೇಗೌಡನ ಪುರದ ಮಠದ ಮುಂದುಗಡೆ ಬುಗುರಿಯಂತೆ ಸುತ್ತಿ ಕೆಳಗೆ ಬೀಳುತ್ತದೆ. ಕೆಂಪಣ್ಣ ಗುರುವಿದ್ದ ಬೊಪ್ಪೇಗೌಡನ ಪುರಕ್ಕೆ ಬರುತ್ತಾನೆ. ಈಗಲೂ ಕೂಡ ಬೊಪ್ಪೇಗೌಡನ ಪುರದ ಮಠದಲ್ಲಿ ಆ ಕಲ್ಲುಗವಿಯ ಮೇಲೆ ಚಾಚಿದ ಭಾರೀ ಗುಂಡಿಗೆನೇ ಗುಪ್ತ ಪೂಜೆ ನಡೆಯುತ್ತಿದೆ.

ಮರ್ಯಾದಿ ಭಿಕ್ಷಾ ನಿನಗೆ ಕೊಡುತ್ತಾರೆ
ಹೋಗೋ ಮಗನೆ ಹಲಗೂರಿಗೆ
ಆನೆ ಗಾತ್ರದ ಹೊಗೆ
ಕುದುರೆ ಗಾತ್ರದ ಕಿಡಿ
ಸಿದ್ದಯ್ಯ ಸ್ವಾಮಿ ಬನ್ನಿ

'ಕಲಿ' ಅವತಾರವಾದ ಮೇಲೆ ಇದನ್ನು ಕಣ್ಣಿಂದ ನೋಡಲಾರೆನೆಂದು ಪಾತಾಳಬಾವಿಯಲ್ಲಿ ಪವಡಿಸಲು ಮಂಟೇಸ್ವಾಮಿ ನಿರ್ಧರಿಸುತ್ತಾರೆ. ಸಿದ್ದಪ್ಪಾಜಿ ಭಾವಿ ಸಿದ್ಧತೆಗೆ ಸಲಕರಣೆ ತರಲು ಗುರುವಿನ ಅಪ್ಪಣೆ ಮತ್ತು ದೊಡ್ಡಮ್ಮತಾಯಿಯವರ ಧೈರ್ಯದ ಮೇರೆಗೆ ಹಲಗೂರು ಚಿಲ್ಲಾಪುರಕ್ಕೆ ಕಬ್ಬಿಣ ಭಿಕ್ಷೆಗೆ ಹೋಗುತ್ತಾನೆ. ಪಾಂಚಾಳರು ಇವನನ್ನು ಲಕ್ಷಿಸಲಿಲ್ಲ. ಆಗ ಬಳೆಯ ವೇಷವನ್ನು ತೊಟ್ಟು ಮಹಾರಾಣಿಯರಿಗೆ ಬಳೆಯನ್ನು ತೊಡಿಸುತ್ತಾನೆ. ಪವಾಡದ ಮುಖಾಂತರ ಅವುಗಳೆಲ್ಲವೂ ಹಾವು ಚೇಳುಗಳಾಗುತ್ತವೆ. ಇದರಿಂದ ರಾಣಿಯರು ಬಾಯಿ ಬಾಯಿ ಬಡಿದುಕೊಂಡರು.

ಇದರ ಸದ್ದು ಕುಲುಮೆ ತಿಟ್ಟಿನಲ್ಲಿರುವ ಪಾಂಚಾಳರಿಗೆ ಕೇಳಿಸಿತು. ಪಾಂಚಾಳರು ಬಂದು ತಮ್ಮ ಮಡದಿಯರನ್ನು ಕೇಳಿದರು. ರಾಣಿಯರು, ಯಾರೋ ಒಬ್ಬ ಮದುಕ ಬಂದಿದ್ದ ಚಿನ್ನ ಬೆಳ್ಳಿ ಬಳೆಗಿಂತ ಮಣ್ಣಿನ ಲಕ್ಷಣವಾದ ಬಳೆಗಳನ್ನು ತೊಡಿಸಿ ಎಂದ. ಆ ಮಾತಿಗೆ ಮರುಳಾಗಿ ಬಳೆಯ ಮೇಲಿನ ಆಸೆಯಿಂದ ತೊಡಿಸಿಕೊಂಡೆವು. ಆತ ಅತ್ತಾ ಹೋದ ತಕ್ಷಣ ಅವುಗಳೆಲ್ಲವೂ ಹಾವು ಚೇಳುಗಳಾಗಿ ಮುಳಮುಳನೇ ಹರಿದಾಡುತ್ತಿವೆ. ಇದನ್ನು ಕೇಳಿದ ಪಾಂಚಾಳರು ಆ ಮುದಿಯನನ್ನು ಹುಡುಕಲು ತಮ್ಮ ಸೇವಕರನ್ನು

ಬಿಟ್ಟು ಹುಡುಕಾಡಿಸಿದಾಗ ಕೊನೆಗೆ ಮಾರಮ್ಮನ ಪಡಸಾಲೆಯಲ್ಲಿ ಬಂಧಿಸಿ ಪಾಂಚಾಳರ ಹತ್ತಿರಕ್ಕೆ ಒಪ್ಪಿಸಿದರು. ಪಾಂಚಾಳರು ಸಿದ್ದನನ್ನು ಕುರಿತು ಬಂದಿರುವ ಕಾರಣವೇನು ಎಂದು ಕೇಳಿದರು. ಆಗ ಸಿದ್ದ ನಾನು ಬೊಪ್ಪೇಗೌಡನ ಪುರದ ಮಂಟೇಸ್ವಾಮಿಯ ಶಿಷ್ಯ. ಆದುದರಿಂದ ನನಗೆ ಕಬ್ಬಿಣದ ಈ ಭಿಕ್ಷೆ ಕೊಡಿರಿ ಎಂದು ತನಗೆ ಬೇಕಾದ ಕಬ್ಬಿಣದ ಸರಂಜಾಮನ್ನು ವಿವರಿಸಿದನು. ೧೨ ಎಳಗುದ್ಲಿ, ೧೨ ಮೊನಗುದ್ಲಿ, ೧೨ ಹಾರೆ, ೧೨ ಪಿಕಾಸಿ. ಇದನ್ನು ಕೇಳಿ ಪಾಂಚಾಳದವರಿಗೆ ಕೋಪಾವೇಶದಿಂದ ಕಟ್ಟಾಕಿ ಒಂಬತ್ತು ಪವಾಡಗಳನ್ನು ನಡೆಸುತ್ತಾರೆ. ಪಾಂಚಾಳರಿಗೆ ಕಬ್ಬಿಣ ಎಂದರೆ ಕರಿಚಿನ್ನವಾಗಿತ್ತು. ಅದನ್ನೇ ಈತ ಕೇಳಿದುದರಿಂದ ಒಂಬತ್ತು ಪವಾಡ ಮಾಡಿಸುತ್ತಾರೆ.

೧. ಸುಣ್ಣಗುಳಿಯ ಪವಾಡ
೨. ಕಾಯಿಸಿದ ತೊಲಗಂಬದ ಪವಾಡ
೩. ಕಾಯಿಸಿದ ಕಬ್ಬಿಣದ ಬಳೆಗಳ ಪವಾಡ
೪. ಕಾದ ಎಣ್ಣೆ ಕೊಪ್ಪರಿಕೆ ಪವಾಡ
೫. ಉಕ್ಕಿನ ಕುದುರೆ ಪವಾಡ
೬. ಬಳೆಗಳನ್ನು ಹಾವು ಚೇಳು ಮಾಡಿದ ಪವಾಡ
೭. ಕಳ್ಳಿ ಹಾಲು ಕುಡಿಸುವುದರ ಪವಾಡ
೮. ಸುತ್ತಿಗೆ ಏಟಿನ ಪವಾಡ
೯. ಕಾದಗಟ್ಟಿ ಪವಾಡ

ಕೊನೆಯಲ್ಲಿ ಪಾಂಚಾಳರು ಸಿದ್ದಪ್ಪಾಜಿಗೆ ಅವಮಾನ ಮಾಡಿ ಕಬ್ಬಿಣ ಕೊಡದೆ ಕಳುಹಿಸುತ್ತಾರೆ. ಆಗ ಮಂಟೇಸ್ವಾಮಿಯವರು ಹಲಗೂರು ಚಿಲ್ಲಾಪುರಕ್ಕೆ ಮಾರಿ-ಮಸಣಿಯನ್ನು ನುಗ್ಗಿಸುತ್ತಾರೆ. ಊರಿಗೆ ಊರೇ ಹಾಳಾಗುತ್ತದೆ. ಆಗ ಪಾಂಚಾಳದವರು ಜ್ಯೋತಿಷಿಗಳನ್ನು ಹುಡುಕುವ ಪ್ರಯತ್ನದಲ್ಲಿ ಇರುವಾಗ ಆ ಸಮಯಕ್ಕೆ ಅಲ್ಲಿ ಮಂಟೇಸ್ವಾಮಿಯವರು ಕೊರವಂಜಿಯ ರೂಪತಾಳಿ ಕಾಣಿಸುತ್ತಾರೆ. ಪಾಂಚಾಳರನ್ನು ಕುರಿತು ಈ ತಪ್ಪಿಗೆ ಕಾರಣ ಏನೆಂದರೆ 'ಕಾಡುಪರದೇಶಿಯನ್ನು ಕಾಡಿದುದರಿಂದ' ಈ ಶಿಕ್ಷೆಗೆ ಗುರುಯಾಗಿದ್ದೀರಿ ಎಂದಾಗ ತಮ್ಮ ತಪ್ಪಿನ ಅರಿವಾಗಿ ಪಾಂಚಾಳರು ಬಸವನಬೆಟ್ಟಕ್ಕೆ ಹೋಗಿ ತಮ್ಮ ತಪ್ಪಿನ ಪ್ರಾಯಶ್ಚಿತ ಮಾಡಿಕೊಂಡರು. ಹುಲಿ ಜೊತೆ ಆಟ ಆಡುತ್ತಿದ್ದ ಮಂಟೇಸ್ವಾಮಿಯನ್ನು ತಮ್ಮ ಊರಿಗೆ ಕರೆತಂದರು.

ಕೊನೆಯಲ್ಲಿ ಮಂಟೇಸ್ವಾಮಿ ತಮ್ಮ ಶಿಷ್ಯರನ್ನೆಲ್ಲ ಕರೆದು ಅವರವರ ನೆಲೆಗಳನ್ನು ಸೂಚಿಸಿದರು. ಸಿದ್ದಪ್ಪಾಜಿ ನೀನು ಕೊಳ್ಳೇಗಾಲ ತಾಲ್ಲೂಕಿನ ಚಿಕ್ಕಲ್ಲೂರು ಶ್ರೀಕ್ಷೇತ್ರದಲ್ಲಿ ನೆಲೆಸು. ದೊಡ್ಡಮ್ಮ ತಾಯಿ ಮತ್ತು ಫಲಾರದಯ್ಯ ನೀವಿಬ್ಬರೂ ಮುಟ್ಟನಹಳ್ಳಿಯಲ್ಲಿ ನೆಲೆಗೊಳ್ಳಿ. ರಾಚಪ್ಪಾಜಿ ಮತ್ತು ಚೆನ್ನಾಜಮ್ಮನನ್ನು ಕರೆದು ನೀವು ಕಾವೇರಿ ದಡದಲ್ಲಿರುವ ಕಪ್ಪಡಿಯಲ್ಲಿ ನೆಲೆಗೊಳ್ಳಿ. ರಾಜರ ಮಕ್ಕಳಾದ ಹಿರಿಯವನನ್ನು ಬೊಪ್ಪೇಗೌಡನ ಪುರದಮಠ, ಚಿಕ್ಕಲ್ಲೂರು ಮಠ, ಕುರುಬನಕಟ್ಟೆಯ ಮಠಗಳು ನಿಮ್ಮ ಭಾಗದ ಆಸ್ತಿ. ಕಿರಿಯವನಿಗೆ

ಮಳವಳ್ಳಿ ಮಠ, ಆದಿ ಹೊನ್ನಾಯಕನ ಹಳ್ಳಿ ಮಠ, ಚೆನ್ನಪಟ್ಟಣದ ಕೋಟೆಮಠ ನಿಮ್ಮ ಅಧೀನಕ್ಕೆ ಸೇರಲಿ. ಕಪ್ಪಡಿಜಾತ್ರೆ ಮಾತ್ರ ಇಬ್ಬರಿಗೂ ಒಂದೊಂದು ವರ್ಷ ಜಾತ್ರೆ ಮಾಡುವ ಹಕ್ಕು ನಿಮಗಿರಲಿ, ಲಿಂಗಯ್ಯ ಚೆನ್ನಯ್ಯ ಮತ್ತು ಮಲೆಯಾಳ ದೇವತೆಯನ್ನು ಕರೆದು ನೀವುಗಳು ಕುರುಬನಕಟ್ಟೆಯಲ್ಲಿ ನೆಲೆಗೊಳ್ಳಿ. ಲಿಂಗಯ್ಯ ಚೆನ್ನಯ್ಯ 'ನೀವು ಮೆರೆಯುವ ದೇವರು ಆಗಿ ನಾನು ಮರೆಯುವ ದೇವರು ಆಗುತ್ತೇನೆ' ಎಂದು ಕಂಡಾಯ ಹರಸಿ ಅವರ ಕೈಗೆ ಕೊಟ್ಟು ಕಂಡಾಯ ಬರುವ ಊರಿಗೆ ಖಂಡಿತವಾಗಿಯೂ ನಾನು ಬರುತ್ತೇನೆ ಎಂದು ಹೇಳಿ ಪಾತಾಳ ಬಾವಿಯ ಕಡಗೆ ಪಯಣ ಬೆಳಸುತ್ತಾರೆ.

ಪಾಂಚಾಳರೆಲ್ಲರೂ ಹನ್ನೆರಡು ಆಳುದ್ದ ಪಾತಾಳಬಾವಿ ಮಾಡಿಕೊಡುತ್ತಾರೆ. 'ಆಕಾಶವೇ ಹೊದಿಕೆ ಮಾಡಿಕೊಂಡು, ಭೂಮಿಯನ್ನೇ ತೊಟ್ಟಿಲು ಮಾಡಿಕೊಂಡು, ಚಂದ್ರ ಸೂರ್ಯಾದಿಗಳು ತಾಣದೀವಿಗೆ ಮಾಡಿಕೊಂಡು, ಗುಡುಗು ಮಿಂಚನ್ನು ಶಂಖ ಜಾಗಟೆ ಮಾಡಿಕೊಂಡು, 'ನರರ ಹಂಗು ನಮಗೆ ಬೇಡ, ನಮ್ಮ ಹಂಗು ನರರಿಗೆ ಇರಲಿ' ಎಂದು ಹೇಳಿ ಪಾತಾಳ ಬಾವಿಗೆ ಹೋಗುತ್ತಾರೆ.

ಕಲ್ಯಾಣ ಭಾಗದಲ್ಲಿ ಮಂಟೇಸ್ವಾಮಿಯವರ ಬಗೆಗೆ ಜಾತಿ ಸೂಚಕ ಸಂಕೇತಗಳು ಕಂಡುಬರುತ್ತವೆ. ಸತ್ತೆಮ್ಮೆಕರ ಮತ್ತು ಹೆಂಡದಗಡಿಗೆ. ಈ ಕಾರಣದಿಂದಲೇ ಕಲ್ಯಾಣ ಪಟ್ಟಣದಲ್ಲಿ ಧರೆಗೆದೊಡ್ಡವರಿಗೆ ಪ್ರವೇಶ ಕೊಡುವುದಿಲ್ಲ. ಜೊತೆಗೆ ಮಂಟೇಸ್ವಾಮಿ ರೋಗಿಷ್ಠನಾಗಿದ್ದುದರಿಂದ ಪ್ರವೇಶ ನಿರಾಕರಣೆಗೆ ಕಾರಣವಾಗುತ್ತದೆ. ಇಲ್ಲಿ ಜಾತಿ ಎಂಬುದೊಂದು ಕುಷ್ಠರೋಗವಾಗಿ ಕಂಡು ಬರುತ್ತದೆ ಎನಿಸುತ್ತದೆ.

ಈ ಕಥಾ ಹಂದರದ ಹಿನ್ನೆಲೆಯಲ್ಲಿ ಮಂಟೇಸ್ವಾಮಿ ಒಬ್ಬ ಸಂತನೇ ಅಥವಾ ಅಲ್ಲಮಪ್ರಭುವೇ ಮಂಟೇಸ್ವಾಮಿ ಎಂಬುದರ ಬಗ್ಗೆ ಅನೇಕ ಚರ್ಚೆಗಳು ನಡೆದಿವೆ. ಮಂಟೇಸ್ವಾಮಿ ಕಾವ್ಯ ಪ್ರಾರಂಭವಾಗುವುದೇ 'ಪರಾತ್ಪರ ವಸ್ತು ಪಾವನ ಮೂರ್ತಿ, ಅಖಂಡ ಸ್ವರೂಪ ಅಲ್ಲಮಪ್ರಭು ಎಂದು. ಈ ವಾಕ್ಯ ಅಲ್ಲಮಪ್ರಭುವೇ ಮಂಟೇಸ್ವಾಮಿ ಎಂದು ಗ್ರಹಿಸಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ. ಆದರೆ ಮಂಟೇಸ್ವಾಮಿ ಮತ್ತು ಅಲ್ಲಮ ಪ್ರಭು ಇಬ್ಬರೂ ಬೇರೆ ಬೇರೆ. ಹನ್ನೆರಡನೆಯ ಶತಮಾನದಲ್ಲಿ ವಚನಕಾರರು ಜನಾಂದೋಲನವನ್ನು ಉಂಟು ಮಾಡಿದ್ದು ಜಗಜ್ಜಾಹೀರಾದ ಸುದ್ದಿ. ಆ ಆಂದೋಲನದ ನಿಜವಾದ ಭಾಗ ಅಥವಾ ನಿಜವಾದ ಶಕ್ತಿ ಕೆಳವರ್ಗದವರದು ಎಂಬುದನ್ನು ನಾವು ಮರೆಯುವ ಹಾಗಿಲ್ಲ. ಆದರೆ ಕಾಲಾಂತರದಲ್ಲಿ ವಿಜಯನಗರದ ಕಾಲಘಟ್ಟದಲ್ಲಿ ಮೇಲ್ವರ್ಗದವರ ತೆಕ್ಕೆಗೆ ಹೋಗಿರುವುದನ್ನು ಕಾಣಬಹುದು. ಇದೇ ಕಾಲದಲ್ಲಿ ಕೊಡೇಕಲ್ ಬಸವಣ್ಣ ಮತ್ತು ಮಂಟೇಸ್ವಾಮಿ ಮೇರು ವ್ಯಕ್ತಿತ್ವದ ಜಾತ್ಯತೀತ ನೆಲೆಯಿಂದ ಬಂದ ಸಂತರು. ಈ ಇಬ್ಬರೂ ಕೂಡ ವಚನಕಾರರ ಆಶಯವನ್ನು ಸಾಕಾರಗೊಳಿಸುವ ದಿಕ್ಕಿನಲ್ಲಿ ತಮ್ಮ ಇಡೀ ಜೀವನವನ್ನು ಆಗುಮಾಡಿದವರು. ಜನಸಾಮಾನ್ಯರ ಜೊತೆಗಿದ್ದು ಅವರ ಸಾಧನೆಯ ಸಿದ್ಧಿಗೆ ದಾರಿತೋರಿಸಿ ತುಳಿತಕ್ಕೊಳಗಾದ ದೀನ ದಲಿತರನ್ನು ಎಚ್ಚರಿಸಿ ಅವರನ್ನೆಲ್ಲ ಸಮಾಜದ ಮುಖ್ಯವಾಹಿನಿಗೆ ತರಲು ಪ್ರಯತ್ನಸಿದ ಲೋಕ ಸಂಚಾರಿ ಅಲ್ಲಮಪ್ರಭುವಿನ ಪ್ರಭಾವ ಮಂಟೇಸ್ವಾಮಿಯ ಮೇಲೆ ಆಗಿರಬಹುದು.

ಹರಿಹರ ವಿರಚಿತ 'ಪ್ರಭುದೇವರ ರಗಳೆ'ಯಲ್ಲಾಗಲೀ ಚಾಮರಸ ವಿರಚಿತ 'ಪ್ರಭುಲಿಂಗಲೀಲೆ'ಯಲ್ಲಾಗಲೀ ಮಂಟೇಸ್ವಾಮಿಯನ್ನು ಹೊಂದುವ ಯಾವ ಪ್ರಸಂಗವೂ ಅದರಲ್ಲಿಲ್ಲ.

ಸಂದರ್ಶಿಸಿದ ಕಲಾವಿದರು :

ಈ ಕಾವ್ಯವನ್ನು ಅನೇಕ ಪುರುಷ ಸ್ತ್ರೀ ಹಾಡುಗಾರರು ನಾಡಿನಾದ್ಯಂತ ಹಾಡುತ್ತಿದ್ದಾರೆ. ಈ ಪರಂಪರೆ ಈಗಲೂ ಜೀವಂತವಾಗಿದೆ. ನಾವು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಸಂದರ್ಶಿಸಿದ ಕಲಾವಿದರ ಪಟ್ಟಿ ಹೀಗಿದೆ

ಚಾಮರಾಜನಗರ ಜಿಲ್ಲೆಯ ಮಂಟೇಸ್ವಾಮಿ ಕಲಾವಿದರು

ಹೆಸರು ಮತ್ತು ವಿಳಾಸ	ವಯಸ್ಸು	ಜಾತಿ
೧. ಶ್ರೀ ದೊಡ್ಡಗವಿಬಸಪ್ಪ ಬಿನ್ ಚಿಕ್ಕಹನುಮಶೆಟ್ಟಿದೊಡ್ಡಮೋಳೆ ಗ್ರಾಮಚಾಮರಾಜನಗರ ತಾಲ್ಲೂಕು ಸಂಚಾರಿ ದೂರವಾಣಿ-೯೩೪೧೧೪೫೭೫೫	೪೭ ವರ್ಷ	ಉಪ್ಪಾರರು
೨. ಶ್ರೀ ಹುಚ್ಚುಮಾದಶೆಟ್ಟಿ ಬಿನ್ ಮಾದಶೆಟ್ಟರುಮಲೆಯೂರು ಗ್ರಾಮ. ಹರವೆ ಅಂಚೆಚಾಮರಾಜನಗರ ತಾಲ್ಲೂಕು ಸಂಚಾರಿ ದೂರವಾಣಿ-೯೨೪೧೯೯೦೧೯೬	೬೦ ವರ್ಷ	ಉಪ್ಪಾರರು
೩. ಶ್ರೀ ಆರ್. ಸಿದ್ಧರಾಜು ಬಿನ್ ಕೆ.ಬಿ. ರಾಚಯ್ಯಕೆಬ್ಬೇಪುರ ಗ್ರಾಮ, ಹುಂಡಿಪುರ ಅಂಚೆ, ಗುಂಡ್ಲುಪೇಟೆ ತಾಲ್ಲೂಕುಚಾಮರಾಜನಗರ ಜಿಲ್ಲೆ ಸಂಚಾರಿ ದೂರವಾಣಿ-೯೩೪೧೮೮೭೦೧೭	೪೭ ವರ್ಷ	ಎಡಗೈ ಪಂಗಡದವರು
೪. ಶ್ರೀ ಹಾಲಗೂಡಯ್ಯ ಬಿನ್ ಚೆಲುವಸಯ್ಯಹೊಂಗನೂರು ಗ್ರಾಮ ಚಾಮರಾಜನಗರ ತಾಲ್ಲೂಕು ಸಂಚಾರಿ ದೂರವಾಣಿ-೯೨೪೧೯೧೭೮೭೯	೭೦ ವರ್ಷ	ಬಲಗೈ ಪಂಗಡದವರು
ಶ್ರೀ ಸುಬ್ಬಶೆಟ್ಟಿ ಬಿನ್ ಸಿದ್ದಶೆಟ್ಟಿಕಾಲನುಂಡಿ ಗ್ರಾಮ ಹರವೆ ಹೋಬಳಿ ಚಾಮರಾಜನಗರ ತಾಲ್ಲೂಕು	೭೦ ವರ್ಷ	ಎಡಗೈ ಪಂಗಡದವರು

೬.	ಶ್ರೀ ಮಹದೇವಗೌಡ ಬಿನ್ ರಾಮೇಗೌಡಅಮಚವಾಡಿ ಗ್ರಾಮ ಚಾಮರಾಜನಗರ ತಾಲ್ಲೂಕು	೫೦ ವರ್ಷ	ಕುರುಬರು
೭.	ಶ್ರೀ ಮಹೇಶ್ ಬಿನ್ ತಮ್ಮಯ್ಯಬಾಬು ಜಗಜೀವನ ರಾಮ್ ಬಡಾವಣೆ ಬಸವೇಶ್ವರ ಚಿತ್ರಮಂದಿರ ಹಿಂಭಾಗ ಚಾಮರಾಜನಗರ ತಾಲ್ಲೂಕು ಸಂಚಾರಿ ದೂರವಾಣಿ-೯೩೪೩೨೦೭೦೬೧	೩೦ ವರ್ಷ	ಬಲಗೈ ಪಂಗಡದವರು
೮.	ಶ್ರೀ ನಿಂಗಶೆಟ್ಟಿ ಬಿನ್ ಸಿದ್ದನಂಜಶೆಟ್ಟಿರಾಮಸಮುದ್ರ ಟೌನ್ ಕೋಟೆ ಬೀದಿ ಚಾಮರಾಜನಗರ ತಾಲ್ಲೂಕು	೪೫ ವರ್ಷ	ಉಪ್ಪಾರರು
೯.	ಶ್ರೀ ಸಿದ್ದಯ್ಯ ಬಿನ್ ಹೊತಯ್ಯನಸಿದ್ದಯ್ಯ ಹೊಂಗನೂರು ಚಾಮರಾಜನಗರ ತಾಲ್ಲೂಕು	೬೧ ವರ್ಷ	ಬಲಗೈ ಪಂಗಡದವರು
೧೦.	ಶ್ರೀ ಮಾದಶೆಟ್ಟರು ಬಿನ್ ಬಸವಶೆಟ್ಟರುದೊಡ್ಡರಾಯಪೇಟೆ ಚಾಮರಾಜನಗರ ತಾಲ್ಲೂಕು ಸಂಚಾರಿ ದೂರವಾಣಿ-೯೫೮೨೨೬-೨೩೨೬೧೬	೬೯ ವರ್ಷ	ಉಪ್ಪಾರರು
೧೧.	ಶ್ರೀ ವೈ.ಕೆ. ವೇಣುಗೋಪಾಲ್ ಬಿನ್ ಕೃಷ್ಣಾಚಾರ್ಯಳಂದೂರು ಟೌನ್ ಯಳಂದೂರು ತಾಲ್ಲೂಕು ಚಾಮರಾಜನಗರ ಜಿಲ್ಲೆ	೭೪ ವರ್ಷ	ಬ್ರಾಹ್ಮಣರು
೧೨.	ಶ್ರೀ ಅಂಕಳ್ಳಿ ಸಿದ್ದಯ್ಯ ಬಿನ್ ಪುಟ್ಟಲಿಂಗಯ್ಯಅಂಕಳ್ಳಿ ಗ್ರಾಮ ಬೋಮ್ಲಾಪುರ ಅಂಚೆ ಗುಂಡ್ಲುಪೇಟೆ ತಾಲ್ಲೂಕು ಚಾಮರಾಜನಗರ ಜಿಲ್ಲೆ	೫೦ ವರ್ಷ	ಎಡಗೈ ಪಂಗಡದವರು
೧೩.	ಶ್ರೀ ಕುಂತೂರು ಕಾಳಶೆಟ್ಟಿಕುಂತೂರು ಗ್ರಾಮಕೊಳ್ಳೇಗಾಲ ತಾಲ್ಲೂಕು ಚಾಮರಾಜನಗರ ಜಿಲ್ಲೆ	೭೦ ವರ್ಷ	ಗಾಣಿಗರು
೧೪.	ಶ್ರೀ ಸಿದ್ದರಾಜುಸ್ವಾಮಿಸಿದ್ದಯ್ಯನಪುರ ಗ್ರಾಮ ಕೊಳ್ಳೇಗಾಲ ತಾಲ್ಲೂಕು ಚಾಮರಾಜನಗರ ಜಿಲ್ಲೆ	೪೭ ವರ್ಷ	ಬಲಗೈ ಪಂಗಡದವರು

೧೫. ಶ್ರೀ ರಂಗಯ್ಯತಿಮ್ಮರಾಜಪುರ ಕೊಳ್ಳೇಗಾಲ ತಾಲ್ಲೂಕು ಚಾಮರಾಜನಗರ ಜಿಲ್ಲೆ	೫೫ವರ್ಷ	ಎಡಗೈ ಪಂಗಡದವರು
೧೬. ಶ್ರೀ ತಂಬೂರಿ ಮೋಳೆರಾಜಶೆಟ್ಟಿ ಕೊಳ್ಳೇಗಾಲ ಮೋಳೆ ಕೊಳ್ಳೇಗಾಲ ತಾಲ್ಲೂಕು ಚಾಮರಾಜನಗರ ಜಿಲ್ಲೆ	೬೫ ವರ್ಷ	ಉಪ್ಪಾರರು
೧೭. ಶ್ರೀ ದುಂಡುಶೆಟ್ಟಿಕೃಷ್ಣಾಪುರ ಗ್ರಾಮ ಯಳಂದೂರು ತಾಲ್ಲೂಕು ಚಾಮರಾಜನಗರ ಜಿಲ್ಲೆ	೩೭ ವರ್ಷ	ಉಪ್ಪಾರರು
೧೮. ಶ್ರೀ ತಂಬೂರಿ ಶ್ರೀನಿವಾಸ್‌ಮಾಂಬಳ್ಳಿ ಗ್ರಾಮಕೊಳ್ಳೇಗಾಲ ತಾಲ್ಲೂಕು ಚಾಮರಾಜನಗರ ಜಿಲ್ಲೆ	೪೦ ವರ್ಷ	ಬಲಗೈ ಪಂಗಡದವರು
೧೯. ಶ್ರೀ ದುಂಡುಮಾದಶೆಟ್ಟಿಕುಂತೂರು ಮೋಳೆ ಕೊಳ್ಳೇಗಾಲ ತಾಲ್ಲೂಕು ಚಾಮರಾಜನಗರ ಜಿಲ್ಲೆ	೫೫ ವರ್ಷ	ಉಪ್ಪಾರರು
೨೦. ಶ್ರೀ ಆರ್ ಮಹಾದೇವುಚಿಲಕವಾಡಿ ಗ್ರಾಮಕೊಳ್ಳೇಗಾಲ ತಾಲ್ಲೂಕು ಚಾಮರಾಜನಗರ ಜಿಲ್ಲೆ	೪೬ ವರ್ಷ	ಮಡಿವಾಳಶೆಟ್ಟರು
೨೧. ಶ್ರೀ ಬಸವಯ್ಯದೊಡ್ಡಿಂದ್ವಾಡಿ ಗ್ರಾಮ ಕೊಳ್ಳೇಗಾಲ ತಾಲ್ಲೂಕು ಚಾಮರಾಜನಗರ ಜಿಲ್ಲೆ	೫೬ ವರ್ಷ	ಎಡಗೈ ಪಂಗಡದವರು
೨೨. ಶ್ರೀ ಮಹಾದೇವುಮಲ್ಲಿಗಹಳ್ಳಿ ಗ್ರಾಮ ಯಳಂದೂರು ತಾಲ್ಲೂಕು ಚಾಮರಾಜನಗರ ಜಿಲ್ಲೆ	೫೫ ವರ್ಷ	ಬಲಗೈ ಪಂಗಡದವರು
೨೩. ಶ್ರೀ ಮಹಾದೇವಯ್ಯಮಲ್ಲಿಗಹಳ್ಳಿ ಯಳಂದೂರು ತಾಲ್ಲೂಕು ಚಾಮರಾಜನಗರ ಜಿಲ್ಲೆ	೬೫ ವರ್ಷ	ಉಪ್ಪಾರರು
೨೪. ಶ್ರೀ ಪುಟ್ಟಸ್ವಾಮಿ ಶೆಟ್ಟಿಉತ್ತೂರು ಗ್ರಾಮ ಒಡೆಯರಪಾಳ್ಯ ಕೊಳ್ಳೇಗಾಲ ತಾಲ್ಲೂಕು ಚಾಮರಾಜನಗರ ಜಿಲ್ಲೆ	೫೩ ವರ್ಷ	ಉಪ್ಪಾರರು
೨೫. ಶ್ರೀ ನಂಜುಂಡಶೆಟ್ಟಿ ಬಿನ್ ಬಾಗಲಿಮಾದಶೆಟ್ಟಿದೊಡ್ಡಿಂದ್ವಾಡಿ,	೫೨ ವರ್ಷ	ಉಪ್ಪಾರರು

	ಕಾಮಗೆರೆ ಅಂಚೆ ಕೊಳ್ಳೇಗಾಲ ತಾಲ್ಲೂಕು ಚಾಮರಾಜನಗರ ಜಿಲ್ಲೆ		
೨೬.	ಶ್ರೀ ಜವರಯ್ಯಆಲತ್ತೂರು ಬೇಗೂರು ಅಂಚೆ ಗುಂಡ್ಲುಪೇಟೆ ತಾಲ್ಲೂಕು ಚಾಮರಾಜನಗರ ಜಿಲ್ಲೆ	೫೧ ವರ್ಷ	ಬಲಗೈ ಪಂಗಡದವರು
೨೭.	ಶ್ರೀ ಹುಚ್ಚುಮಾದಶೆಟ್ಟರು ಬಿನ್ ಮಾರಶೆಟ್ಟರುಅಮಚವಾಡಿ ಅಂಚೆ ಚಾಮರಾಜನಗರ ತಾಲ್ಲೂಕು	೪೦ವರ್ಷ	ಉಪ್ಪಾರರು
೨೮.	ಶ್ರೀ ಎಚ್. ಎಸ್. ಪುಟ್ಟಲಿಂಗನಾಯಕ ಬಿನ್ ಸಿದ್ದನಾಯಕಬ್ರಾಹ್ಮಣ ಬೀದಿ, ಅಂಚೆ ಕಛೇರಿ ರಸ್ತೆ ಒಂದನೆಯ ಬ್ಲಾಕ್, ಹೊಂಗನೂರು ಚಾಮರಾಜನಗರ ಜಿಲ್ಲೆ	೬೨ವರ್ಷ	ಪರಿವಾರದವರು
೨೯.	ಶ್ರೀ ಸಿದ್ದಯ್ಯ ಬಿನ್ ಹೂತಯ್ಯ ಹೊಂಗನೂರು ಚಾಮರಾಜನಗರ ತಾಲ್ಲೂಕು	೬೩ ವರ್ಷ ಪಂಗಡದವರು	ಬಲಗೈ
೩೦.	ಶ್ರೀ ಮಾದಶೆಟ್ಟಿ ಬಿನ್ ಸಿದ್ದಶೆಟ್ಟಿಬೇಡಮೂಡ್ಲು ದೊಡ್ಡಮೋಳೆ ಚಾಮರಾಜನಗರ ತಾಲ್ಲೂಕು	೫೦ ವರ್ಷ	ಉಪ್ಪಾರರು
೩೧.	ಮಾದಶೆಟ್ಟರು ಬಿನ್ ಬಸವಶೆಟ್ಟರುದೊಡ್ಡಮೋಳೆ ಗುಂಡ್ಲೂರು ದಾಖಲೆ ಹೊಸಬೀದಿ ಚಾಮರಾಜನಗರ ತಾಲ್ಲೂಕು	೬೬ ವರ್ಷ	ಉಪ್ಪಾರರು
೩೨.	ಶ್ರೀ ಸಣ್ಣಶೆಟ್ಟರು ಬಿನ್ ಬಕ್ರಿಹುಸ್ಸೆಟ್ಟರುದೊಡ್ಡಮೋಳೆ ಚಾಮರಾಜನಗರ ತಾಲ್ಲೂಕು	೫೫ ವರ್ಷ	ಉಪ್ಪಾರರು
೩೩.	ಶ್ರೀ ಮಾದೇವುಇಕ್ಕಡಹಳ್ಳಿ ಕೊಳ್ಳೇಗಾಲ ತಾಲ್ಲೂಕು ಚಾಮರಾಜನಗರ ಜಿಲ್ಲೆ	೫೬ವರ್ಷ	ಕುಂಬಾರರು
೩೪.	ಶ್ರೀ ದೇವರಾಜ್ ಬಿನ್ ಬೆಳ್ಳನಾಯಕತೆರಕನಾಂಬಿ ಪಕ್ಕ ಮೂಡುಗೂರು ಗುಂಡ್ಲುಪೇಟೆ ತಾಲ್ಲೂಕು ಚಾಮರಾಜನಗರ ಜಿಲ್ಲೆ	೪೫ ವರ್ಷ	ಪರಿವಾರದವರು

ಬೆಂಗಳೂರು ಗ್ರಾಮಾಂತರ, ರಾಮನಗರ ಹಾಗೂ ಮಂಡ್ಯ ಜಿಲ್ಲೆಗಳಲ್ಲಿರುವ ಮಂಟೇಸ್ವಾಮಿ ಕಲಾವಿದರು

	ಹೆಸರು ಮತ್ತು ವಿಳಾಸ	ವಯಸ್ಸು	ಜಾತಿ
೧.	ಶ್ರೀ ಪುಟ್ಟಮಾದಯ್ಯ ಬಿನ್ ನಂಜಯ್ಯಗಾಣಾಳು ಗ್ರಾಮ ಕನಕಪುರ ತಾಲ್ಲೂಕು ರಾಮನಗರ ಜಿಲ್ಲೆ	೬೫ ವರ್ಷ	ಬಲಗೈ ಪಂಗಡದವರು
೨.	ಶ್ರೀ ಲಕ್ಷ್ಮಣ ಬಿನ್ ಕಾಳಯ್ಯಕೋನಮಾನಹಳ್ಳಿ ಗಾಣಾಳು ಅಂಚೆ ಕನಕಪುರ ತಾಲ್ಲೂಕು ರಾಮನಗರ ಜಿಲ್ಲೆ ಸಂಚಾರಿ ದೂರವಾಣಿ-೯೨೪೨೨೭೦೧೮೪	೪೯ ವರ್ಷ	ತಿಗಳರು
೩.	ಶ್ರೀ ಚಂದ್ರಯ್ಯ ಬಿನ್ ಮಾದಯ್ಯಕೋನಮಾನಹಳ್ಳಿ ಗಾಣಾಳು ಅಂಚೆ ಕನಕಪುರ ತಾಲ್ಲೂಕು ರಾಮನಗರ ಜಿಲ್ಲೆ ಸಂಚಾರಿ ದೂರವಾಣಿ-೯೭೪೦೬೯೫೦೦೩	೫೦ ವರ್ಷ	ತಿಗಳರು
೪.	ಶ್ರೀ ಕೃಷ್ಣನಾಯಕ್ ಬಿನ್ ಲಕ್ಷ್ಮಾನಾಯಕ್‌ಚೋರಮಾರನಹಳ್ಳಿ ಲಂಬಾಣಿ ತಾಂಡ್ಯ ಸ್ಕೂಲ್‌ಫಾರ್ಮ್ ಅಂಚೆ ಚೆನ್ನಪಟ್ಟಣ ತಾಲ್ಲೂಕು ರಾಮನಗರ ಜಿಲ್ಲೆಸಂಚಾರಿ ದೂರವಾಣಿ-೯೯೬೪೩೩೪೫೫೧	೫೨ ವರ್ಷ	ಲಂಬಾಣಿ
೫.	ಶ್ರೀ ಮಣಿನಾಯಕ್ ಬಿನ್ ತೊಳಚಿಯನಾಯಕ್‌ಚೋರಮಾರನಹಳ್ಳಿ ಲಂಬಾಣಿ ತಾಂಡ್ಯ ಸ್ಕೂಲ್‌ಫಾರ್ಮ್ ಅಂಚೆ ಚೆನ್ನಪಟ್ಟಣ ತಾಲ್ಲೂಕು ರಾಮನಗರ ಜಿಲ್ಲೆ ಸಂಚಾರ ದೂರವಾಣಿ-೯೯೬೪೩೩೪೫೫೧	೬೬ ವರ್ಷ	ಲಂಬಾಣಿ
೬.	ಶ್ರೀ ಮಾದಿರಯ್ಯ ಬಿನ್ ಮಾದಯ್ಯಶಿವನಹಳ್ಳಿ ಗ್ರಾಮ ಕನಕಪುರ ತಾಲ್ಲೂಕು ರಾಮನಗರ ಜಿಲ್ಲೆ ಸಂಚಾರಿ ದೂರವಾಣಿ-೯೩೪೩೮೮೬೧೯೦	೬೫ ವರ್ಷ	ಬಲಗೈ ಪಂಗಡದವರು

೭.	ಶ್ರೀ ನೀಲಗಾರ ನಾರಣಪ್ಪಕೆ. ಎಮ್. ದೊಡ್ಡಿ ಮಳವಳ್ಳಿ ತಾಲ್ಲೂಕು ಮಂಡ್ಯ ಜಿಲ್ಲೆ	೭೪ ವರ್ಷ	ವಡ್ಡರು
೮.	ಶ್ರೀ ದಮ್ಮಡಿ ಬಸವಯ್ಯ ಬಿನ್ ಮಲ್ಲಯ್ಯಗೌಡಗೆರೆ ಗ್ರಾಮ ಮಳವಳ್ಳಿ ತಾಲ್ಲೂಕು ಮಂಡ್ಯ ಜಿಲ್ಲೆ	೭೫ ವರ್ಷ	ಬಲಗೈ ಪಂಗಡದವರು
೯.	ಶ್ರೀ ಶಿವಮಾದಯ್ಯ ಬಿನ್ ಮಾದಯ್ಯಗೌಡಗೆರೆ ಗ್ರಾಮ ಮಳವಳ್ಳಿ ತಾಲ್ಲೂಕು ಮಂಡ್ಯ ಜಿಲ್ಲೆ	೬೭ ವರ್ಷ	ಬಲಗೈ ಪಂಗಡದವರು
೧೦.	ಶ್ರೀ ಗುರುಬಸವಯ್ಯ ಬಿನ್ ಸೀರಿಮಂಟಯ್ಯಮಳವಳ್ಳಿ ಟೌನ್ ಕೀರ್ತಿನಗರ ಮಳವಳ್ಳಿ ತಾಲ್ಲೂಕು ಮಂಡ್ಯ ಜಿಲ್ಲೆ	೭೦ ವರ್ಷ	ಬಲಗೈ ಪಂಗಡದವರು
೧೧.	ಶ್ರೀ ಉಳ್ಳಂಬಳ್ಳಿ ಮಾದಯ್ಯ ಬಿನ್ ಮಾದಯ್ಯಮಾರೇಹಳ್ಳಿ ಮಳವಳ್ಳಿ ತಾಲ್ಲೂಕು ಮಂಡ್ಯ ಜಿಲ್ಲೆ	೬೬ ವರ್ಷ	ಪರಿವಾರದವರು
೧೨.	ಶ್ರೀ ಮಾದೇಶ್ ಬಿನ್ ಮಹದಯ್ಯಮಾರೇಹಳ್ಳಿ ಮಳವಳ್ಳಿ ತಾಲ್ಲೂಕು ಮಂಡ್ಯ ಜಿಲ್ಲೆ ಸ್ಥಿರ ದೂರವಾಣಿ–೯೫೮೨೩೧–೩೧೬೯೫೩	೩೭ ವರ್ಷ	ಪರಿವಾರದವರು
೧೩.	ಶ್ರೀ ಪೂರಿಗಾಲಿ ಮಹದೇವುಪುರಿಗಾಲಿ ಗ್ರಾಮ ಮಳವಳ್ಳಿ ತಾಲ್ಲೂಕು ಮಂಡ್ಯ ಜಿಲ್ಲೆ	೪೯ ವರ್ಷ	ಬಲಗೈ ಪಂಗಡದವರು
೧೪.	ಶ್ರೀಮತಿ ಜಯಮ್ಮಅಪ್ಪಗೆರೆ ಚೆನ್ನಪಟ್ಟಣ ತಾಲ್ಲೂಕು ರಾಮನಗರ ಜಿಲ್ಲೆ	೫೦ ವರ್ಷ	ಬಲಗೈ ಪಂಗಡದವರು

ಮೈಸೂರು ಜಿಲ್ಲೆಯ ನೀಲಗಾರ ಕಲಾವಿದರು

೧೫.	ಶ್ರೀ ಗುರುಸಿದ್ದಯ್ಯ ಬಿನ್ ಸಿದ್ದಯ್ಯ ಹೊಸಹಳ್ಳಿ ನಂಜನಗೂಡು ತಾಲ್ಲೂಕು ಮೈಸೂರು ಜಿಲ್ಲೆ	೫೦ ವರ್ಷ	ಎಡಗೈ ಪಂಗಡದವರು
೧೬.	ಶ್ರೀ ಶಿವರಾಮು ಬಿನ್ ಸಿದ್ದಯ್ಯಹೊಸಹಳ್ಳಿ ಕಳಲೆ ಅಂಚೆ ನಂಜನಗೂಡು ತಾಲ್ಲೂಕು ಮೈಸೂರು ಜಿಲ್ಲೆ	೫೧ ವರ್ಷ	ಬಲಗೈ ಪಂಗಡದವರು
೧೭.	ಶ್ರೀ ದೊಡ್ಡರಾಚಪ್ಪ ಬಿನ್ ಬಸವಯ್ಯಬಸವನಹಳ್ಳಿ ಮಲ್ಲೂರು ಅಂಚೆ ಬನ್ನೂರು ಹೋಬಳಿ ತಿ.ನರಸೀಪುರ ತಾಲ್ಲೂಕು ಮೈಸೂರು ಜಿಲ್ಲೆ	೫೦ ವರ್ಷ	ಬಲಗೈ ಪಂಗಡದವರು
೧೮.	ಶ್ರೀಮತಿ ಕೆಂಪಮ್ಮಜೈಭೀಮ್ ನಗರಬನ್ನೂರು ತಿ.ನರಸೀಪುರ ತಾಲ್ಲೂಕು ಮೈಸೂರು ಜಿಲ್ಲೆ	೬೧ ವರ್ಷ	ಬಲಗೈ ಪಂಗಡದವರು
೧೯.	ಶ್ರೀ ಪಟ್ಟ ಬಿನ್ ಕರುಗಮಾದಯ್ಯಕೇತಳ್ಳಿ ಕೆರಟ್ಟಿ ಅಂಚೆ ಮೂಗೂರು ಹೋಬಳಿ ತಿ. ನರಸೀಪುರ ತಾಲ್ಲೂಕು ಮೈಸೂರು ಜಿಲ್ಲೆ	೪೫ ವರ್ಷ	ಎಡಗೈ ಪಂಗಡದವರು
೨೦.	ಶ್ರೀ ಗುರುರಾಜ್‌ಕೆಸರೆ ಮೈಸೂರು	೪೭ ವರ್ಷ ಪಂಗಡದವರು	ಬಲಗೈ
೨೧.	ಶ್ರೀಮತಿ ಪಾರ್ವತಮ್ಮಮಾದಗಳ್ಳಿ ಬನ್ನೂರು ಹೋಬಳಿ ತಿ. ನರಸೀಪುರ ತಾಲ್ಲೂಕು ಮೈಸೂರು ಜಿಲ್ಲೆ	೪೯ ವರ್ಷ	ಎಡಗೈ ಪಂಗಡದವರು
೨೨.	ಶ್ರೀ ಮಂಟಯ್ಯ ಬಿನ್ ಗುರುಬಸವಯ್ಯಕೆಸರೆ ಮೈಸೂರು	೭೦ ವರ್ಷ	ಬಲಗೈ ಪಂಗಡದವರು

ಪತ್ರ	ಹೆಸರು ಮತ್ತು ವಿಳಾಸ	ವಯಸ್ಸು	ಜಾತಿ
ಅ.	ದಿ॥ ಉಳ್ಳಂಬಳ್ಳಿ ಮಾದಯ್ಯ ಬಿನ್ ಮಾದಯ್ಯ ಮಾರೇಹಳ್ಳಿ ಮಳವಳ್ಳಿ ತಾಲ್ಲೂಕು ಮಂಡ್ಯ ಜಿಲ್ಲೆ	೬೫	ಪರಿವಾರದವರು
ಇ.	ಪೂರಿಗಾಲಿ ಮಹಾದೇವು ಪೂರಿಗಾಲಿ ಗ್ರಾಮ ಮಳವಳ್ಳಿ ತಾಲ್ಲೂಕು ಮಂಡ್ಯ ಜಿಲ್ಲೆ	೪೯	ಹರಿಜನರು
ಉ.	ಕೃಷ್ಣಾಪುರ ಎಂ. ಮಹಾದೇವಸ್ವಾಮಿ ಕನಕಪುರ ರಸ್ತೆ ಮಳವಳ್ಳಿ ಅಂಚೆ ಮಂಡ್ಯ ಜಿಲ್ಲೆ	೫೦	ಹರಿಜನರು
ಎ.	ಕೆಬ್ಬೇಪುರ ಸಿದ್ದರಾಜು ಬಿನ್ ಕೆಬ್ಬೇಪುರ ರಾಚಯ್ಯ ಹುಂಡಿಪುರ ಅಂಚೆ ಗುಂಡ್ಲುಪೇಟೆ ತಾಲ್ಲೂಕು ಚಾಮರಾಜನಗರ ಜಿಲ್ಲೆ	೪೯	ಹರಿಜನರು
ಐ.	ಕುಂತೂರು ಕಾಳಶೆಟ್ಟರು ಕುಂತೂರು ಅಂಚೆ ಕೊಳ್ಳೇಗಾಲ ತಾಲ್ಲೂಕು ಚಾಮರಾಜನಗರ ಜಿಲ್ಲೆ	೭೨	ಗಾಣಿಗರು
ಒ.	ಬನ್ನೂರು ಕೆಂಪಮ್ಮ ಬನ್ನೂರು ಅಂಚೆ ಟಿ. ನರಸೀಪುರ ತಾಲ್ಲೂಕು ಮೈಸೂರು ಜಿಲ್ಲೆ	೬೩	ಹರಿಜನರು
ಔ.	ಮೈಸೂರು ಗುರುರಾಜ್ ಕೆಸರೆ, ಮೈಸೂರು	೪೯	ಹರಿಜನರು

ಹೆಚ್ಚುವರಿ ಪತ್ಯಗಳು

ಕ.	ಲಕ್ಷ್ಮಣ ಬಿನ್ ಕಾಳಯ್ಯ ಕೋನಮಾನ ಹಳ್ಳಿ ಗಾಣಾಳು ಅಂಚೆ ಕನಕಪುರ ತಾಲ್ಲೂಕು ರಾಮನಗರ ಜಿಲ್ಲೆ	೪೬	ತಿಗಳರು
ಚ.	ಶ್ರೀಮತಿ ಜಯಮ್ಮ ಅಪ್ಪಗೆರೆ ಚೆನ್ನಪಟ್ಟಣ ತಾಲ್ಲೂಕು ರಾಮನಗರ ಜಿಲ್ಲೆ	೫೫	ಹರಿಜನರು
ಟ.	ತಂಬೂರಿ ಕೃಷ್ಣಾನಾಯಕ್ ಬಿನ್ ಲಕ್ಷ್ಮಾನಾಯಕ್ ಲಂಬಾಣಿ ತಾಂಡ್ಯ ಸಿಲ್ಕ್ ಫಾರ್ಮ್ ಅಂಚೆ ಚೆನ್ನಪಟ್ಟಣ ತಾಲ್ಲೂಕು ರಾಮನಗರ ಜಿಲ್ಲೆ	೬೧	ಲಂಬಾಣಿ
ತ.	ದೊಡ್ಡಗವಿಬಸಪ್ಪ ಬಿನ್ ಚಿಕ್ಕಹನುಮಶೆಟ್ಟಿ ದೊಡ್ಡಮೋಳೆ ಗ್ರಾಮ ಚಾಮರಾಜನಗರ ತಾಲ್ಲೂಕು	೫೦	ಉಪ್ಪಾರರು

೨. ಮಂಟೇಸ್ವಾಮಿ ಕಾವ್ಯ ಸಂಪ್ರದಾಯದ ಪಠ್ಯಗಳು

ಹನ್ನೆರಡನೆಯ ಶತಮಾನದಲ್ಲಿ ಬಸವಣ್ಣನವರು ಸಮಾನತೆಯ ಸಮಾಜವನ್ನು ನಿರ್ಮಾಣ ಮಾಡಲು ಪ್ರಯತ್ನಿಸಿದರು. ಆದರೆ ಅವರ ಅನುಯಾಯಿಗಳು ದಾರಿ ತಪ್ಪಿದಾಗ ಅವರುಗಳನ್ನು ಎಚ್ಚರಿಸಿದವರು ಮಂಟೇಸ್ವಾಮಿಯವರು. ಆ ಕಾಲದ ಮಹಾನ್ ಸಮಾಜ ಸುಧಾರಕರ ಅವರು ಭಾರತ ಸಂವಿಧಾನ ಯಾವ ಆಶಯಗಳನ್ನು ಹೇಳುತ್ತದೋ, ಅದನ್ನು ಸಮಸಮಾಜ ನಿರ್ಮಾಣದ ಗುರಿ ಇಟ್ಟುಕೊಂಡಿದ್ದ ಮಂಟೇಸ್ವಾಮಿಯವರು ಸುಮಾರು ನಾನೂರು ವರ್ಷಗಳ ಹಿಂದೆಯೇ ಕಾರ್ಯಗತಗೊಳಿಸಲು ಯತ್ನಿಸಿದರು. ವರ್ಗರಹಿತ ವರ್ಣರಹಿತ ಸಮಾಜ ರಚನೆ ಆಗಬೇಕು, ಜಾತಿ ನಿರ್ಮೂಲನೆ ಆಗಬೇಕು, ಮೂಢನಂಬಿಕೆ ಅಳಿಯಬೇಕು, ಅಸ್ಪೃಶ್ಯತೆ ತೊಲಗಬೇಕು ಎಂದು ಭಾರತೀಯ ಸಂವಿಧಾನ ಆಶಿಸುತ್ತದೆ. ಈ ಅಂಶಗಳನ್ನೇ ಬಹುಕಾಲದ ಹಿಂದೆ ಸಮಾಜಕ್ಕೆ ಬೋಧನೆ ಮಾಡಿದವರು ಮಂಟೇಸ್ವಾಮಿಯವರು.

'ಮಂಟೇಸ್ವಾಮಿ ಕಾವ್ಯ' ಕರ್ನಾಟಕದ ಜನಪದ ಕಾವ್ಯ ಪ್ರಕಾರಗಳಲ್ಲಿ ಪ್ರಮುಖವಾದ ಹಾಗೂ ವಿಶಿಷ್ಟವಾದ ಕಾವ್ಯ. ನೀಲಗಾರರೆಂಬ ವೃತ್ತಿಗಾಯಕರಿಂದ ನಿರೂಪಣೆಗೊಂಡಿರುವ ಕಾವ್ಯವಾಗಿದೆ. ಈ ನೀಲಗಾರರನ್ನು ಮಂಟೆದವರು, ಮಂಟೇಸ್ವಾಮಿಗಳು, ಮಂಟೇದಯ್ಯಗಳು ಎಂದೂ ಕರೆಯುತ್ತಾರೆ. ಬೊಪ್ಪೇಗೌಡನಪುರದ ಮಂಟೇಸ್ವಾಮಿ ಮಠ, ಚಿಕ್ಕಲ್ಲೂರು ಸಿದ್ದಪ್ಪಾಜಿ ಮಠ, ಕಪ್ಪಡಿ ರಾಚಪ್ಪಾಜಿ ಮಠ ಹಾಗೂ ಚೆನ್ನಪ್ಪಟ್ಟಣದ ಹಳೆ ಮಠಗಳೂ ಇವೆ. ಇವರ ಆರಾಧ್ಯದೈವ ಮಂಟೇಸ್ವಾಮಿ, ರಾಚಪ್ಪಾಜಿ, ಚೆನ್ನಾಜಮ್ಮ, ದೊಡ್ಡಮ್ಮತಾಯಿ, ಫಲಾರದಯ್ಯ, ಲಿಂಗಯ್ಯ, ಚೆನ್ನಯ್ಯ ಹಾಗೂ ಸಿದ್ದಪ್ಪಾಜಿ. ಇವರುಗಳನ್ನು ಕುರಿತು ನೀಲಗಾರರು ಹಾಡುವ ಕಾವ್ಯಕ್ಕೆ 'ಧರೆಗೆ ದೊಡ್ಡವರ ಕತೆ', 'ಧರೆಗೆ ದೊಡ್ಡವರ ವಚನ', 'ಮಂಟೇಸ್ವಾಮಿ ಕತೆ', 'ಮಂಟೇಸ್ವಾಮಿ – ಸಿದ್ದಪ್ಪಾಜಿ ಕತೆ' ಎಂಬಿತ್ಯಾದಿ ಹೆಸರುಗಳಿಂದ ಕರೆಯುತ್ತಾರೆ.

'ಮಂಟೇಸ್ವಾಮಿ ಕಾವ್ಯ' ಮೂಲತಃ ಮೌಖಿಕ ಮಹಾಕಾವ್ಯ. ಮೌಖಿಕ ರೂಪದಲ್ಲಿ ನೂರಾರು ವರ್ಷಗಳ ಅವಧಿಯಲ್ಲಿ ತಲೆಮಾರಿನಿಂದ ತಲೆಮಾರಿಗೆ ವ್ಯಕ್ತಿಯಿಂದ ವ್ಯಕ್ತಿಗೆ ಬಾಯಿಂದ ಬಾಯಿಗೆ ನಲಿದು ಬಂದ ಕಾವ್ಯ. ಈ ಕಾವ್ಯ ಸುದೀರ್ಘ ರಚನೆಯಾಗಿದ್ದು ಹಲವಾರು ರಾತ್ರಿಗಳ ಕಾಲ ಹಾಡುವ ಕಥಾನಕ. ಈ ಜನಪದರು ಗುರುವಿನ ಮುಖೇನ ಕಲಿತ ಕಥೆಯನ್ನು ಯಥಾವತ್ತಾಗಿ ಹಾಡುತ್ತಾರೆ. ಗುರುವನ್ನೇ ಮೀರಿಸುವ ಕಲಾವಿದರೂ ಇದ್ದಾರೆ. ಯಾವುದೇ ಹಾಡುಗಾರರು ಯಾವುದೊ ಕಾಲದಲ್ಲಿ ಯಾರೋ ಸಿದ್ಧಪಡಿಸಿಟ್ಟಿರುವ ಕಾವ್ಯಗಳನ್ನು ಯಥಾವತ್ತಾಗಿ, ಯಾಂತ್ರಿಕವಾಗಿ ಪುನರಾವರ್ತನೆ ಮಾಡುವುದಿಲ್ಲ. ಅವರು ಸೃಜನಶೀಲ ಕಲಾವಿದರು ಎಂಬುದನ್ನು ನಮ್ಮ ಸಹಜ ಬಹುಮುಖೀ ದಾಖಲೀಕರಣದ ಸಂದರ್ಭದಲ್ಲಿ ಗುರುತಿಸಿಕೊಂಡಿದ್ದೇವೆ.

ಈ ಮಹಾಕಾವ್ಯದಲ್ಲಿ ನಾಟಕೀಯ ಅಂಶಗಳು ಇರುವುದರಿಂದಲೇ ಮಂಟೇಸ್ವಾಮಿ ಕಾವ್ಯ ನಾಟಕೀಯ ರಂಗುಪಡೆದಿದೆ. ಜೊತೆಗೆ ಏಕಸೂತ್ರತೆಯ ದೃಷ್ಟಿಯಿಂದ ಮಹತ್ವಪೂರ್ಣವಾದ ಜನಪದ ಮಹಾಕಾವ್ಯವಾಗಿದೆ. ಪವಾಡಗಳ ಮೂಲಕ ಕಟ್ಟಿಕೊಳ್ಳುತ್ತಾ ಸಾಗುವ ಕತೆಯಾದರೂ ಜನಸಾಮಾನ್ಯರ ಸಾಂಸ್ಕೃತಿಕ ಬದುಕನ್ನು ಒಟ್ಟಾರೆ ಕಟ್ಟಿಕೊಡುವ ಪ್ರಯತ್ನಮಾಡಿದೆ. ಅಸಮಾನತೆಯ ವಿರುದ್ಧ, ಶೋಷಣೆಯ ವಿರುದ್ಧ ಶೋಷಿತ ಸಮುದಾಯದ ಜನರನ್ನು ಜಾಗೃತಗೊಳಿಸುವ, ಪ್ರತಿರೋಧದ ನಡುವೆಯೇ ಅದನ್ನು ಚಳವಳಿಯಾಗಿಸಿದ ಮಂಟೇಸ್ವಾಮಿಯವರ ಪವಾಡಸದೃಶವಾದ ಚಟುವಟಿಕೆಗಳು ಯಾರನ್ನೂ ದಂಗುಬಡಿಸುತ್ತವೆ.

ನೀಲಗಾರರ ವೃತ್ತಿಯೇ ಗಾಯನವಾದುದರಿಂದ ಮಂಟೇಸ್ವಾಮಿ ಕತೆಯಲ್ಲದೆ, ಮಾದಪ್ಪನ ಕತೆ, ಬಾಲನಾಗಮ್ಮನ ಕತೆ, ಮೈಲಾರರಾಮನ ಕತೆ, ಚಾಮುಂಡಿಯ ಕತೆ, ಬಸವಣ್ಣನ ಕತೆ, ಅರ್ಜುನ ಜೋಗಿಯ ಕತೆ, ಸಾರಾಂಧರನ ಕತೆ, ನೀಲವೇಣಿಯ ಕತೆ, ಪಿರಿಯಾಪಟ್ಟಣ ಕಾಳಗ, ಬಿಳಿಗಿರಿರಂಗಸ್ವಾಮಿ ಕತೆ, ಮುಡುಕುತೊರೆ ಮಲ್ಲಿಕಾರ್ಜುನ ಕತೆ, ಅಯ್ಯಪ್ಪನ ಕತೆ, ಚೆನ್ನಿಗರಾಮನ ಕತೆ ಹೀಗೆ ಹತ್ತು ಹಲವು ಕತೆಗಳನ್ನು ಹಲವಾರು ರಾತ್ರಿ ಹಾಡಿ ಪ್ರೇಕ್ಷಕರನ್ನು ರಂಜಿಸುತ್ತಾರೆ.

ಜನಪದ ಮಹಾಕಾವ್ಯದ ಅಧ್ಯಯನದಲ್ಲಿ ಒಂದೇ ಮಹಾಕಾವ್ಯವನ್ನು ಪ್ರಸ್ತುತಪಡಿಸುವ ಪುರುಷರು ಮತ್ತು ಸ್ತ್ರೀಯರು ಹಾಡುವ ಕ್ರಮದಲ್ಲಿ ವ್ಯತ್ಯಾಸಗಳನ್ನು ಗುರುತಿಸುವ ಪ್ರಯತ್ನಗಳನ್ನು ಮಾಡಲಾಗಿದೆ. ಪುರುಷರು ಮತ್ತು ಸ್ತ್ರೀಯರ ಸಂವೇದನೆ ಭಿನ್ನವಾದುದರಿಂದ ಒಂದೇ ಮಹಾಕಾವ್ಯದ ಕಥಾ ವಸ್ತುವನ್ನು ಗ್ರಹಿಸುವ, ಪಾತ್ರಗಳನ್ನು ಪರಿಭಾವಿಸುವ ರೀತಿ ಪದ್ಯದ ಲಯ ಇವೆಲ್ಲವೂ ಬದಲಾಗುತ್ತಾ ಹೋಗುವುದು ಸಾಮಾನ್ಯ. ಹೀಗಾಗಿ ಒಟ್ಟಾರೆ ಈ ಮಹಾಕಾವ್ಯದ ಕಥೆ ಒಂದೇ ಆದರೂ ಅದನ್ನು ನಿರ್ವಹಿಸುವ ರೀತಿಯಲ್ಲಿ ವ್ಯತ್ಯಾಸಗಳು ಕಂಡುಬರುತ್ತವೆ.

ನಾವು ದಕ್ಷಿಣ ಕರ್ನಾಟಕದಾದ್ಯಂತ ವ್ಯಾಪಕ ಕ್ಷೇತ್ರಕಾರ್ಯ ಕೈಗೊಂಡು ೧೩೫ ಹಳ್ಳಿಗಳಿಗೆ ಭೇಟಿ ಕೊಟ್ಟು ೬೦ ಜನ ನೀಲಗಾರ ಪುರುಷ ಕಲಾವಿದರನ್ನು ಮತ್ತು ೧೦ ಜನ ನೀಲಗಾರ ಹಾಡುಗಾರ್ತಿಯರನ್ನು ಸಂದರ್ಶಿಸಿ ಮಾಹಿತಿಯನ್ನು ಪಡೆದಿರುವುದರ ಜೊತೆಗೆ ಅವರು ಸಹಜ ಸಂದರ್ಭದಲ್ಲಿ ಪ್ರಸ್ತುತಪಡಿಸುವ ಕಾವ್ಯವನ್ನು ರಾತ್ರಿಯ ಇಡೀ ಹೊತ್ತು ಸುಮಾರು ೭೦ ರಾತ್ರಿ ಕತೆ ಕೇಳಿದ್ದೇವೆ. ಪಠ್ಯವನ್ನು ಈ ರೀತಿ ಹಲವಾರು ಪಾಠಾಂತರಗಳನ್ನು ಸಂಗ್ರಹಿಸಿ ಅವುಗಳಲ್ಲಿ ಮೂಲ ಪಾಠ ಅಥವಾ ಅಧಿಕೃತ ಪಾಠ ಯಾವುದೆಂಬುದನ್ನು ಕಂಡುಕೊಳ್ಳುವ ಪ್ರಾಮಾಣಿಕ ಪ್ರಯತ್ನ ನಡೆದಿದೆ.

ಮಂಟೇಸ್ವಾಮಿ ಕಾವ್ಯ ಏಕೆ ಸೃಷ್ಟಿ ಆಯಿತು ? ಇಂದಿಗೂ ಏಕೆ ಅದನ್ನು ಹಾಡುತ್ತಾರೆ ಮತ್ತು ಕಲಾವಿದರು ಹೇಗೆ ಅದನ್ನು ನೆನಪಿಟ್ಟುಕೊಂಡಿದ್ದಾರೆ ಎಂಬುದನ್ನು ನೋಡಿದಾಗ ಕಾರಣ ಹೊಳೆಯುತ್ತದೆ.

ಇತಿಹಾಸದ ಆಧಾರದಲ್ಲಿ ಮಂಟೇಸ್ವಾಮಿ, ಮಲೈಮಾದೇಶ್ವರ, ಜುಂಜಪ್ಪನ ಮಹಾಕಾವ್ಯ ಹೀಗೆ ಇವೆಲ್ಲವೂ ಆಯಾ ಪ್ರದೇಶದ ಸಾಮಾಜಿಕ ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಮಹತ್ವವನ್ನು ಪಡೆದುಕೊಂಡು ಆರಾಧನೆಯದೈವಗಳಾಗಿ ನೆಲೆ ಪಡೆದಿವೆ.

ಆಧುನಿಕತೆಯ ಚೌಕಟ್ಟಿನಲ್ಲಿ ಜಾನಪದ ಪಠ್ಯಗಳ ಮರುರೂಪೀಕರಣವನ್ನು ಹೇಗೆ ಕಟ್ಟಿಕೊಳ್ಳಬಹುದು ? ಪ್ರದರ್ಶನವನ್ನು ಪಠ್ಯವೆಂದು ತಿಳಿದುಕೊಳ್ಳಬೇಕೇ ? ಪೂರ್ಣಪ್ರಮಾಣದ ಪಠ್ಯ ಏಕಮಾತ್ರ ಕಲಾವಿದರಿಂದ ಹೊರಬರಲು ಸಾಧ್ಯವೆ ? ತುಂಡು ತುಂಡು ಕಥಾನಕಗಳನ್ನು ಮಾತ್ರ ಪಡೆಯುಲು ಸಾಧ್ಯವೆ ? ಅದನ್ನು ಪಠ್ಯ ಎಂದು ಹೇಗೆ ಕರೆಯುವುದು ? ಪೂರ್ಣಪ್ರಮಾಣದ ಕಥಾನಕಗಳನ್ನು ದೊರಕಿಸಿಕೊಳ್ಳಲು ಕಲಾವಿದರ ಬೆನ್ನ ಹಿಂದೆ ಬಿದ್ದು ಅವರನ್ನು ಕಾಡುವುದು ಅನಿವಾರ್ಯವಾಗಿದೆ ಅವರನ್ನು ಒಲಿಸಿಕೊಳ್ಳಬೇಕಾಗುತ್ತದೆ. ಅವರಿಂದ ಪೂರ್ಣಪ್ರಮಾಣದ ಪಠ್ಯ ಸಂಗ್ರಹಿಸುವುದು ಅಷ್ಟು ಸುಲಭದ ಕೆಲಸವೇನಲ್ಲ. ನಮ್ಮಲ್ಲಿ ಹಣವಿದ್ದರೂ ಆಗಲ್ಲ; ಪರಿಶ್ರಮವಿದ್ದರೂ ಆಗಲ್ಲ. ಕಲಾವಿದರನ್ನು ಒಲಿಸಿಕೊಳ್ಳುವ ಚಾಕಚಕ್ಯತೆ ಬೇಕಾಗುತ್ತದೆ. ಅವರನ್ನು ಒಲಿಸಿಕೊಳ್ಳದೆ ಒಂದು ಘಂಟೆಗೆ ಇಷ್ಟು ಎಂದು ಹಣಕೊಟ್ಟು ಪ್ರದರ್ಶನ ಮಾಡಿಸಿದರೆ ಬೇಕಂತಲೇ ಕಥಾ ಭಾಗವನ್ನು ನುಂಗಬಹುದು. ಈ ಎಲ್ಲ ತೊಡಕುಗಳನ್ನು ನಿವಾರಿಸಿಕೊಂಡು ದಾಖಲೀಕರಣ ನಡೆಸುವುದು ಕಷ್ಟಸಾಧ್ಯದ ಬಹು ಪ್ರಯಾಸದ ಕೆಲಸ.

ಮಂಟೇಸ್ವಾಮಿ ಕಾವ್ಯವನ್ನು ಚಾರಿತ್ರಿಕ ಹಿನ್ನೆಲೆಯಲ್ಲಿ ಪರಿಭಾವಿಸಬಹುದೆ ಎನ್ನುವುದು ಚರ್ಚಾಸ್ಪದ ಸಂಗತಿ.ಮೈಸೂರು ರಾಜಮನೆತನ, ಮಾರನಾಯಕ, ವಿಜಯನಗರ ಹೀಗೆ ಎಷ್ಟೋ ಐತಿಹಾಸಿಕ ಸಂಗತಿಗಳು ಮಂಟೇಸ್ವಾಮಿ ಕಾವ್ಯದಲ್ಲಿ ಬಂದಿವೆ. ಆದರೆ ಇತಿಹಾಸದಲ್ಲಿ ಎಲ್ಲಿಯೂ ಮಂಟೇಸ್ವಾಮಿ ಪ್ರಸ್ತಾಪ ಬಂದಿಲ್ಲ. ಯಾಕೆ ಹೀಗೆ ? ಇಡೀ ಕತೆಯಲ್ಲಿ ಮಂಟೇಸ್ವಾಮಿ ನಾಯಕ; ಸಿದ್ದಪ್ಪಾಜಿಯವರು ಉಪನಾಯಕ.

ಮಂಟೇಸ್ವಾಮಿಯವರ ಆರಾಧನೆಯಲ್ಲಿ ಯಾರಿದ್ದಾರೆ ? ಕುರುಬ, ಬೇಡ – ಇಂಥ ಹಿಂದುಳಿದ ಸಮೂಹಗಳ ಜನರೇ ಹೆಚ್ಚು. ಕಂಡಾಯವನ್ನು ಮತ್ತು ನಾಗಬೆತ್ತವನ್ನು ನೆಟ್ಟು ಪೂಜಿಸುತ್ತಾರೆ. ಇದರ ಹಿನ್ನೆಲೆ ಏನು ? ಏಕೆ ಕಾಡಿನ ಕೊಂಪೆ ಮತ್ತು ನದಿದಡದಲ್ಲಿ ಮಂಟೇಸ್ವಾಮಿ ಮತ್ತು ಅವರ ಶಿಷ್ಯರು ನೆಲೆಪಡೆದಿದ್ದಾರೆ? ಉಳಿದ ಕಡೆ ಏಕಿಲ್ಲ ? ಕೃಷಿ ಅಭಿವೃದ್ಧಿಪಡಿಸುವ ಉದ್ದೇಶ ಇರಬಹುದು. ಆದ್ದರಿಂದಲೇ ಈ ಜಗತ್ತು ಕಾರಣ ಮತ್ತು ಕಾರ್ಯಗಳ ವಹಿವಾಟು ಆಗಿರದೆ.

ಮಂಟೇಸ್ವಾಮಿ ಶೂದ್ರ ವರ್ಗದಲ್ಲಿ ಉನ್ನತ ಸ್ಥಾನ ಹೊಂದಿದ್ದ ಕಾರಣಕ್ಕಾಗಿ ತಳಸಮುದಾಯದ ಜನರಿಂದ ಆರಾಧನೆಗೊಂಡು ಪ್ರಸಿದ್ಧರಾಗಿದ್ದಾರೆ.

ಮಂಟೇಸ್ವಾಮಿ ಆರಾಧನೆ ಸಂಕ್ರಾಂತಿಯಿಂದ ಯುಗಾದಿಯವರೆಗೆ ಹುಣ್ಣಿಮೆಯ ದಿನಗಳಲ್ಲಿ ಮುಖ್ಯವಾಗಿ ರಾತ್ರಿ ಹೊತ್ತಿನಲ್ಲಿ ಜರುಗುವುದು ಸಾಮಾನ್ಯ. ಆರಾಧನಾ ಕೇಂದ್ರಗಳಲ್ಲಿ ಜಾತ್ರೆಗಳು ವಿಜೃಂಭಣೆಯಿಂದ ನಡೆಯುತ್ತವೆ.

ದಕ್ಷಿಣ ಕರ್ನಾಟಕದಲ್ಲಿ ಮಂಟೇಸ್ವಾಮಿ ಮತ್ತು ಮಹದೇಶ್ವರರ ಪ್ರಭಾವ ಗಾಢವಾಗಿರುವ ಕಾರಣಕ್ಕೆ ದಕ್ಷಿಣ ಕರ್ನಾಟಕದಲ್ಲಿ ಹೆಚ್ಚಿನ ಕಡೆ ಗದ್ದುಗೆಗಳನ್ನು ನಿರ್ಮಾಣ ಮಾಡಿರುವುದು ಮತ್ತು ಅದನ್ನು ಆರಾಧನೆ ಮಾಡಿಕೊಂಡು ಬರುತ್ತಿರುವುದು ಗೊತ್ತಾಗುತ್ತದೆ.

ಮಂಟೇಸ್ವಾಮಿ ಕಾವ್ಯ ಪ್ರದರ್ಶನಗೊಳ್ಳುವುದನ್ನು ನಾವು ಐದು ನೆಲೆಗಳಲ್ಲಿ ನೋಡಬಹುದು.

೧. ಗದ್ದೆಯ ನಾಟಿಯ ಸಮಯದಲ್ಲಿ ಹೆಣ್ಣುಮಕ್ಕಳು ಹಾಡುವ ಪಠ್ಯ

೨. ಭಿಕ್ಷಾಟನೆಯ ಸಂದರ್ಭದಲ್ಲಿ ನೀಲಗಾರರಿಂದ ಪ್ರದರ್ಶನಗೊಳ್ಳುವ ಪಠ್ಯ

೩. ರಾತ್ರಿ ಪಾಳಿಯಲ್ಲಿ ಕಥನ ಪ್ರದರ್ಶನದ ಪಠ್ಯ

೪. ಜಾತ್ರೆಗಳ ಸಂದರ್ಭದಲ್ಲಿ ಪ್ರದರ್ಶನಗೊಳ್ಳುವ ಪಠ್ಯ

೫. ವಿಶೇಷ ಕಾರ್ಯಕ್ರಮದಲ್ಲಿ ಪ್ರದರ್ಶನಗೊಳ್ಳುವ ಪಠ್ಯ

ಆಚರಣೆಯ ಸಂದರ್ಭದಲ್ಲಿ ಸೃಷ್ಟಿಯಾಗುವ ಮಧ್ಯಂತರ ಜಗತ್ತಿನ ವ್ಯಕ್ತಿತ್ವಪಲ್ಲಟದ ಮೂಲಕ ನಿಜ ಬದುಕಿನ ನೋವು ಒತ್ತಡಗಳಿಂದ ಪಾರಾಗುವ ಅಂತರ್ ಶಕ್ತಿ ಈ ಕಾವ್ಯದ್ದು.

ನಾವು ಜಾನಪದವನ್ನು ಒಂದು ಚಾರಿತ್ರಿಕ ಸಂದರ್ಭದ ಮೂಲಕ ನೋಡುವುದಕ್ಕೆ ಸಾಧ್ಯವೇ ಇಲ್ಲ. ಜನಪದ ಕಾವ್ಯ ಯಾವುದೋ ಒಂದು ಚಾರಿತ್ರಿಕ ಘಟ್ಟದಲ್ಲಿ ನಡೆದ ಕಾರ್ಯ ಅಲ್ಲ ಅದು ಸಾಮೂಹಿಕವಾದ ಒಂದು ಅಭಿವ್ಯಕ್ತಿ. ಯಾವುದೋ ಒಂದು ಕಾಲಘಟ್ಟದಲ್ಲಿ ಯಾರೋ ಒಬ್ಬ ಆ ಕತೆಯನ್ನು ಮೂಲ ರೂಪದಲ್ಲಿ ಹೇಳಿರುತ್ತಾನೆ. ಆಮೇಲೆ ಅದನ್ನು ಹೇಳುವವರು ಕಾಲಕ್ರಮೇಣ ಬೇರೆ ಬೇರೆ ಭಾಗಗಳನ್ನು ಸೇರಿಸಿ ಹೇಳುತ್ತಾರೆ. ಆದ್ದರಿಂದ ಅದು ಒಂದು ಶತಮಾನದ ವ್ಯಾಪ್ತಿಯ ಒಳಗೆ ರಚನೆಯಾದ ಕಾವ್ಯ ಅಲ್ಲ. ಅಂದರೆ ಬೇರೆ ಬೇರೆ ಕಾಲಘಟ್ಟದಲ್ಲಿ ಬೇರೆ ಬೇರೆ ಕಲಾವಿದರು ಸೇರ್ಪಡೆ ಮಾಡಿ ಅದನ್ನು ಹಿಗ್ಗಿಸಿ ಕುಗ್ಗಿಸಿ ಹೇಳುತ್ತಾರೆ. ಒಬ್ಬ ಕಲಾವಿದನ ಪಠ್ಯವನ್ನು ಮತ್ತೊಬ್ಬ ಕಲಾವಿದನ ಪಠ್ಯದೊಡನೆ ಹೋಲಿಸಿ ಪರಿಶೀಲಿಸಿದರೆ ಸಾಕಷ್ಟು ಬದಲಾವಣೆ ಇರುವುದನ್ನು ಕಾಣಬಹುದು. ಮಂಟೇಸ್ವಾಮಿ ಕಲ್ಯಾಣಕ್ಕೆ ಬರುವಾಗ ಗೇಟಿನಲ್ಲಿ ನಿಂತ ಕಾವಲುಗಾರ ಎಂಬ ಪದ ಬಳಕೆಗೆ ಕಾರಣ ಸ್ಪಷ್ಟವಿದೆ. ಕನ್ನಡ ಜಾಯಮಾನಕ್ಕೆ ಒಗ್ಗಿ ಹೋಗಿದ್ದ ಈ ಪದ ಪ್ರಯೋಗ ಸರ್ವೇಸಾಮಾನ್ಯ.

ಮಂಟೇಸ್ವಾಮಿಯನ್ನು ನಾವು ಒಂದು ಜಾತಿಗೆ ಒಂದು ಸಮುದಾಯಕ್ಕೆ ಸೀಮಿತಗೊಳಿಸಿ ನೋಡುವುದು ಸಮಂಜಸವಲ್ಲ. ಈ ಪರಂಪರೆ ಜಾತಿಯ ಎಲ್ಲೆಯನ್ನು ಮೀರಿ ನಿಲ್ಲುವಂಥದ್ದು. ರಾಜರ ಆಳ್ವಿಕೆಯಲ್ಲಿ ನಾವು ಜಾತಿಗಳನ್ನು ಗುರುತಿಸುವುದಿಲ್ಲ. ಅಲ್ಲಿ ಅಧಿಕಾರದ ಹಿನ್ನೆಲೆಯಲ್ಲಿ ನೋಡಲಾಗುತ್ತದೆ. ಆದರೆ ಪ್ರಜಾಪ್ರಭುತ್ವದಲ್ಲಿ ಪ್ರಜೆಗೆ

ಮೊದಲ ಸ್ಥಾನ. ರಾಜಪ್ರಭುತ್ವದಲ್ಲಿ ಆಗದೆ ಇದ್ದದ್ದು ಪ್ರಜಾಪ್ರಭುತ್ವದಲ್ಲಿ ಸಾಧ್ಯ ಆಗಿದೆ. ಕೆಳೆದ ಶತಮಾನದ ೭೦ ರ ದಶಕದಲ್ಲಿ ದಲಿತ ಹೋರಾಟ ಆರಂಭಗೊಂಡದ್ದು ಈಗ ಇತಿಹಾಸ. ಅಂದರೆ ಅದಕ್ಕಿಂತ ಹಿಂದೆ ದಲಿತರು ಇರಲಿಲ್ಲವೇ ? ಹೋರಾಟಕ್ಕೆ ಅಲ್ಲಿ ಅವಕಾಶವಿರಲಿಲ್ಲ; ಆಸ್ಪದವಿರಲಿಲ್ಲ. ಆದರೆ ಪ್ರಜಾಪ್ರಭುತ್ವಕ್ಕೆ ಈ ಶಕ್ತಿ ಬಂದಿದೆ.

ಮೌಖಿಕ ಪರಂಪರೆಯ ಮೂಲಕ ಹೊರಬಂದಿರುವ ಈ ಕಾವ್ಯವನ್ನು ಅಕ್ಷರ ಜ್ಞಾನವಿಲ್ಲದ ಅಲಕ್ಷಿತ ಸಮುದಾಯಯದಿಂದ ಬಂದಿರುವ ಸೃಜನಶೀಲತೆಯ ತೊರೆಗಳು ಎಂದು ನಾವು ಭಾವಿಸಬಹುದು. ಈ ರೀತಿ ರಚನೆಗೊಂಡ ಮಹಾಕಾವ್ಯಗಳು ನಮ್ಮ ಸೃಜನಶೀಲ ಮನಸ್ಸಿಗೆ ಯಾಕೆ ಬೆರಗನ್ನು ಉಂಟು ಮಾಡುತ್ತದೆ ಎಂದರೆ ನಾವು ಅಕ್ಷರ ಜ್ಞಾನವನ್ನು ಹೊಂದಿರುವಂತಹವರು. ಕಲಾವಿದರ ಯಾವುದೋ ಒಂದು ತಲೆಮಾರಿನಲ್ಲಿ ನಡೆದ ಕಥೆಯನ್ನು ಮುಂದಿಟ್ಟುಕೊಂಡು ಕಾವ್ಯವನ್ನು ಕಟ್ಟುತ್ತಾನೆ. ಅವನು ಕಟ್ಟುವ ಕತೆಗೊಂದು ಕಥಾ ಹಂದರವಿದೆ. ಆ ತಲೆಮಾರಿನಿಂದ ಈ ತಲೆಮಾರಿನವರೆಗೆ ಹೇಗೆ ಹರಿಯುತ್ತಿದೆ ಎಂದರೆ ಅದಕ್ಕೆ ಸೂತ್ರ ಮತ್ತು ತಂತ್ರ ಒಂದು ಇದೆ. ಅಂದರೆ ಆಯಾ ತಲೆಮಾರಿನ ಸೃಜನಶೀಲ ಮನಸ್ಸುಗಳ ಒಳಗಿರುವ ಛಂದೋಬದ್ಧ ಲಯವಿನ್ಯಾಸ, ಪದಮೈತ್ರಿ, ನುಡಿಗಟ್ಟು, ಉಪಮೆ, ಪ್ರತಿಮೆಗಳನ್ನು ಬಳಸಿಕೊಂಡು ಭಿನ್ನವಾದ ಪಠ್ಯಗಳನ್ನು ಕಟ್ಟುತ್ತಿರಬಹುದು. ಇದನ್ನು ವಿದ್ಯಾವಂತರು ಕಟ್ಟುವುದಕ್ಕೆ ಆಗುವುದಿಲ್ಲ. ಹೀಗೆ ಕಟ್ಟಿರುವ ಮೌಖಿಕ ಕಾವ್ಯವನ್ನು ಕೆಲವು ಪ್ರಸಂಗಗಳಲ್ಲಿ ಹಿಗ್ಗಿಸುವುದು ಮತ್ತು ಕುಗ್ಗಿಸುವುದನ್ನು ಕಾವ್ಯದ ಉದ್ದಕ್ಕೂ ಕಾಣಬಹುದು. ಸಾಮಾಜಿಕ ಸಮಸ್ಯೆಯನ್ನು ಬಿಡಿ ಬಿಡಿಯಾಗಿ ಬಿಚ್ಚಿಡುವ ಪ್ರಯತ್ನವೂ ಇಲ್ಲಿರುವುದನ್ನು ಗುರುತಿಸಬಹುದು. ಆತ್ಮಪ್ರಜ್ಞೆಯ ಜೊತೆಗೆ ದುಡುಕುತನ, ಮುಂಗೋಪ, ಹಠ ಇದೆಲ್ಲವನ್ನೂ ಕಾವ್ಯದ ಹಿನ್ನೆಲೆಯಲ್ಲಿ ಕಾಣಬಹುದು.

ಸೂಳೆಗಾರಿಕೆಯನ್ನು ಹೋಗಲಾಡಿಸಬೇಕಾದರೆ ಸೂಳೆಗಾರಿಕೆ ವೃತ್ತಿಯನ್ನೇ ಬುಡಮುಟ್ಟ ತೊಡೆದು ಹಾಕಬೇಕು. ಇದನ್ನು ಬಿಟ್ಟು ಸೂಳೆಗಾರಿಕೆಯನ್ನು ನಿಂದಿಸುವುದರಿಂದ ಸಮಾಜಕ್ಕೆ ಪ್ರಯೋಜನವಿಲ್ಲ. ಇದನ್ನು ಮನಗಂಡೇ ನೀಲಗಾರರು ಮಂಟೇಸ್ವಾಮಿ ಕಾವ್ಯದ ಉದ್ದಕ್ಕೂ ಈ ವೃತ್ತಿಯನ್ನು ಬುಡಮುಟ್ಟ ಕಿತ್ತು ಹಾಕಿರುವುದನ್ನು ಕಾಣಬಹುದು.

ಮಂಟೇಸ್ವಾಮಿ ಕಾವ್ಯವನ್ನು ಪಠ್ಯೀಕರಣ ಪ್ರಕ್ರಿಯೆಗೆ ಗುರಿಮಾಡುವುದಕ್ಕೆ ಮೊದಲು ಧ್ವನಿಸುರುಳಿಯಲ್ಲಿ ದಾಖಲಿಸಿಕೊಳ್ಳಲಾಯಿತು. ಹೆಚ್ಚಿನ ಭಾಗಗಳು ಸಹಜ ಸಂದರ್ಭದವುಗಳೇ ಆಗಿವೆ. ಭಾಗಗಳನ್ನು ಶ್ರವ್ಯ ಮತ್ತು ದೃಶ್ಯ ಎರಡೂ ಮಾಧ್ಯಮದಲ್ಲೂ ದಾಖಲಿಸಿಕೊಳ್ಳಲಾಯಿತು. ಅನಂತರ ಲಿಪ್ಯಂತರಕ್ಕೆ ಇಳಿಸಲಾಗಿದೆ. ಇದರಿಂದ ಈ ಮಹಾಕಾವ್ಯದ ಪಠ್ಯ ರಚನಾಕ್ರಿಯೆಯನ್ನು ಅಭ್ಯಾಸ ಮಾಡಲು ಸಾಧ್ಯವಾಗಿದೆ. ಈ ಬಗೆಯ ಅಧ್ಯಯನದಿಂದ ನಮಗೆ ತಿಳಿಯುವ ಮುಖ್ಯ ಸಂಗತಿ ಏನೆಂದರೆ ಪ್ರತಿಬಾರಿ ಹಾಡುವಾಗಲೂ ಹಾಡುಗಾರ ಅಥವಾ ಹಾಡುಗಾರ್ತಿ ಒಂದಲ್ಲ ಒಂದು ರೀತಿಯ ಪುನರ್ ಸೃಷ್ಟಿ ಕಾರ್ಯದಲ್ಲಿ ತೊಡಗಿರುತ್ತಾರೆ. ಆತನು ಒಂದು ಪಠ್ಯದ ಕಥಾ ಹಂದರವನ್ನು ಮಾತ್ರ ತನ್ನ ತಲೆಯಲ್ಲಿ ಇಟ್ಟುಕೊಂಡಿರುತ್ತಾನೆ. ಇದು 'ಮಾಡಲ್ ಟೆಕ್ಸ್ಟ್.' ಅದು

ಸಂದರ್ಭಕ್ಕನುಗುಣವಾಗಿ ಪ್ರದರ್ಶಿಸಲ್ಪಡುತ್ತದೆ. ಅದೇ 'ಫರ್ಫಾರ್ಮೆನ್ಸ್ ಟೆಕ್ಸ್ಟ್.' ಕೇವಲ ಪಠ್ಯವನ್ನು ಪುನರಾವರ್ತನೆ ಮಾಡುವುದಿಲ್ಲ. ಅದು ಸಮಯ ಸಂದರ್ಭಕ್ಕೆ ತಕ್ಕಂತೆ ಸಿಪ್ಪೆ ತೆಗೆದ ಕಿತ್ತಳೆಯ ತೊಳೆಗಳಂತೆ ಬಿಚ್ಚಿಕೊಳ್ಳುತ್ತವೆ. ಕಥಾನಕವನ್ನು ಸೂಕ್ಷ್ಮವಾಗಿ ಗಮನಿಸಿದರೆ ಇಂತಹ ಕೌಶಲ್ಯಗಳನ್ನು ಗುರುತಿಸಬಹುದು.

ದಕ್ಷಿಣ ಕರ್ನಾಟಕದ ಮಂಟೇಸ್ವಾಮಿ ಒಕ್ಕಲಿನವರಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಹರಿಜನರು ಕಂಡುಬರುತ್ತಾರೆ. ಉಳಿದಂತೆ ಕುರುಬರು, ಉಪ್ಪಲಿಗಶೆಟ್ಟರು, ಮಡಿವಾಳರು, ಲಿಂಗಾಯತರು, ಅಕ್ಕಸಾಲಿಗರು, ಗಂಗಡಕಾರಗೌಡರು, ಪರಿವಾರದವರು, ಕುಂಬಾರರು, ಸೋಲಿಗರು, ಲಂಬಾಣಿಗರು ಮುಂತಾದವರೂ ಇದ್ದಾರೆ. ಈರೇಳು ಜಾತಿ ಬಾಂಧವರಲ್ಲಿ ದೀಕ್ಷೆಪಡೆದವರನ್ನು 'ನೀಲಗಾರರು' ಎಂದು ಕರೆಯುತ್ತಾರೆ. ಲಿಂಗಾಯತರು, ಗೌಡರು, ಅರಸರು ಇವರುಗಳು ಕಥೆ ಮಾಡುವುದಿಲ್ಲ. ಉಳಿದವರು ಸಾಮಾನ್ಯವಾಗಿ ಕಥೆ ಮಾಡುತ್ತಾರೆ.

'ನೀಲಗಾರರು' ಎಂದರೆ ಲೀಲೆಗಾರರು ಎಂದೂ ಹೆಸರಿನಲ್ಲಿ ಹಾಡುವುದನ್ನೇ ವೃತ್ತಿಯನ್ನಾಗಿ ಮಾಡಿಕೊಂಡವರು ಎಂದೂ ಜೀಶಂಪ ಅವರು ಅರ್ಥೈಸಿದ್ದಾರೆ. ಆದರೆ ಈ ಪರಂಪರೆಯ ವಕ್ತೃಗಳು ತಮ್ಮ ಹೆಸರಿನ ಬಗ್ಗೆ ನೀಡುವ ಅರ್ಥವೇ ಬೇರೆ ಇದೆ. ಅದೇನೆಂದರೆ ಮಂಟೇಸ್ವಾಮಿಗಳು ಸಿದ್ದಪ್ಪಾಜಿಯನ್ನು ಶಿಶುಮಗನಾಗಿ ಪಡೆದ ಮೇಲೆ ದೀಕ್ಷೆಯನ್ನು ಕೊಟ್ಟು ನೀಲಗಾರನನ್ನಾಗಿ ಮಾಡುತ್ತಾರೆ. ಆಗ ಅವನ ಕತ್ತಿಗೆ 'ರುದ್ರಾಕ್ಷಿಯ ನೀಲಮಣಿ'ಯನ್ನು ಕಟ್ಟುತ್ತಾರೆ. ಅದರ ಕುರುಹಾಗಿ ಈಗಲೂ ಕೂಡ ನೀಲಗಾರಿಕೆ ಬಿಡುವಾಗ ರುದ್ರಾಕ್ಷಿಗೆ ನೀಲವಾಗಿ ದಾರವನ್ನು ಪೋಣಿಸಿ ಧರಿಸುತ್ತಾರೆ. ಆದ್ದರಿಂದಲೇ ನೀಲಗಾರರು ಎಂಬ ಪದ ಬಳಕೆಯಾಗಿದೆ ಎನ್ನುತ್ತಾರೆ. ಈಗಲೂ ಕೂಡ ಈ ಪರಂಪರೆಯೇ ಜೀವಂತವಾಗಿ ಇದೆ. ಹಬ್ಬ ಹರಿದಿನಗಳಲ್ಲಿ ಜಾತ್ರಾ ಸಂದರ್ಭಗಳಲ್ಲಿ ಈ ವಿಧಿಕ್ರಿಯೆ ನಡೆಯುತ್ತದೆ. ಹಾಗೆಯೇ ಮಾದೇಶ್ವರನ ಗುಡ್ಡರು ಧರಿಸುವ ರುದ್ರಾಕ್ಷಿಮಣಿಗೆ ದಾರವನ್ನು ಅಡ್ಡ ಅಡ್ಡಲಾಗಿ ಪೋಣಿಸಿ ಧರಿಸಿರುತ್ತಾರೆ. ಈ ಕಾರಣದಿಂದಲೇ ನೀಲಗಾರರು ಮತ್ತು ಗುಡ್ಡರನ್ನು ದಕ್ಷಿಣ ಕರ್ನಾಟಕದಲ್ಲಿ ಅವಳಿ ಜವಳಿ ಸಂಪ್ರದಾಯಗಳೆಂದು ಕರೆದಿರುವುದಕ್ಕೆ ಸಮರ್ಥನೆ ಒದಗಿದಂತಾಗುತ್ತದೆ. ಒಂದು ಕಾಲದಲ್ಲಿ ಈ ಪರಂಪರೆಯ ನಾಯಕರು ಐತಿಹಾಸಿಕ ವ್ಯಕ್ತಿಗಳಾಗಿ ಸಮಾಜದ ಸಮಾನತೆಗಾಗಿ ಹೋರಾಡಿ ಸಮಸಂಸ್ಕೃತಿಯನ್ನು ಕಟ್ಟಲು ಹೆಣಗಾಡಿದವರು. ಈಗ ಇವರು ಆರಾಧ್ಯದೇವತೆಗಳಾಗಿದ್ದಾರೆ.

ನೀಲಗಾರರ ವೇಷಭೂಷಣವನ್ನು ನೋಡುವುದೇ ಒಂದು ವೈಭವ. ತಲೆಗೆ ಒಂದು ದೊಡ್ಡ ಕೆಂಪುಪೇಟ, ಮೈಮೇಲೆ ಬಿಳಿಯ ಷರ್ಟ್, ಅದರ ಮೇಲೊಂದು ಕರಿಯ ಕೋಟು, ಬಿಳಿ ಹಾರೋ ಕಚ್ಚೆಯ ಪಂಚೆ, ಹೆಗಲಲ್ಲಿ ಕಾವಿವಸ್ತ್ರ, ಕೊರಳಲ್ಲಿ ನೀಲ ಮುಖದ ಏಕ ರುದ್ರಾಕ್ಷಿ, ಎಡಗೈನ ಎರಡು ಬೆರಳಿಗೆ ಕಂಚಿನ ಗಗ್ಗರ, ಹೆಗಲ ಮೇಲೆ ನಾಗರ ಹೆಡೆಯ ನಾಲ್ಕು ತಂತಿಯ ತಂಬೂರಿ, ಹಣೆಯಲ್ಲಿ ಭಸ್ಮಂಗ ಅದರ ಮಧ್ಯದಲ್ಲೊಂದು ಕಪ್ಪು ತಿಲಕ. ಈ ಭಂಗಿಯಲ್ಲಿ ಸರ್ವಸುಂದರವಾಗಿರುವ ನೀಲಗಾರರು ಬರಿಗಾಲಿನಲ್ಲಿಯೇ ಲೋಕ ಸಂಚಾರಕ್ಕೆ ಹೋಗುತ್ತಾರೆ. ಇವರ ವೇಷಭೂಷಣದಲ್ಲಿ

ಗಹನವಾದ ಅರ್ಥ ಅಡಗಿದೆ ಎಂಬುದು ಮನವರಿಕೆ ಆಗುತ್ತದೆ. ಸಮಾಜದ ಅಂಕು ಡೊಂಕುಗಳನ್ನು ತಿದ್ದುವ, ಸಮಾನತೆಯ ಸಾರವನ್ನು ಸಾರುವ, ಸಂಸ್ಕೃತಿಯನ್ನು ಕಟ್ಟುವ, ಜನಪದ ಶಿಕ್ಷಕರೂ, ಸಮಾಜದ ಮೇಲು ಕೀಳು ಭಾವನೆಯನ್ನು ಹೋಗಲಾಡಿಸಿ ಸಮಾನತೆಯ ಅರಿವನ್ನು ಮೂಡಿಸಲು ಹೆಣಗುತ್ತಿರುವ ಧೀರರೂ, ಕಾನೂನು ಮೇಷ್ಟ್ರೂ ಆಗಿರುತ್ತಾರೆ.

ಇಂತಹ ಸಾಮಾನ್ಯ ಜನರಿಂದ ಮೂಡಿಬಂದಿರುವ ಈ ಸಾಹಿತ್ಯ ನಾಡಿನ ಅಮೂಲ್ಯವಾದ ಸಂಪತ್ತು. ಈ ಸಾಹಿತ್ಯದಲ್ಲಿ ಹಾಡುಗಳಿಗೆ ವಿಶಿಷ್ಟ ಸ್ಥಾನವಿದೆ. ಮೊದಮೊದಲು ಈ ಸಾಹಿತ್ಯವೆಂದರೆ ಹಾಡುಗಳೇ ಎಂಬ ಭಾವನೆ ಇತ್ತು. ಬರಬರುತ್ತಾ ಅವು ಈ ಜನರ ಸಾಹಿತ್ಯ ಭಂಡಾರದ ಪ್ರಮುಖ ಭಾಗ ಮಾತ್ರ ಎಂಬ ಸತ್ಯದ ದರ್ಶನವಾಯಿತುದೀ ಜನರು ತಮ್ಮ ಹಾಡುಗಳನ್ನು ದೈನಂದಿನ ಬದುಕಿನೊಂದಿಗೆ ಉಳಿಸಿಕೊಂಡು ಬೆಳೆಸಿಕೊಂಡು ಬಂದಿದ್ದಾರೆ. ಹಾಡುವಿಕೆ ಅವರ ಪಾಲಿಗೆ ಒಂದು ಸಹಜ ಪ್ರವೃತ್ತಿಯಾಗಿದೆ.

ಮಂಟೇಸ್ವಾಮಿ ಕತೆಗಳನ್ನು ಸಾಮಾನ್ಯವಾಗಿ ಸತ್ತು-ಕೆಟ್ಟಾಗ, ಮಕ್ಕಳಿಗೆ ದೀಕ್ಷೆ ಕೊಡಿಸುವಾಗ ಬಿಡುವಾಗ, ಹಬ್ಬ ಹರಿದಿನ, ಗೃಹಪ್ರವೇಶಗಳ ಶುಭ ಸಂದರ್ಭಗಳಲ್ಲಿ ಮುಖ್ಯ ಕಲಾವಿದನನ್ನೊಳಗೊಂಡ ಇಡೀ ರಾತ್ರಿ ಕತೆ ಮಾಡುತ್ತಾರೆ. ಕಲಾವಿದರು ಗಣಪತಿಯ ಸ್ತುತಿ ಮಾಡಿದ ಮೇಲೆ ಕಥೆ ಪ್ರಾರಂಭಿಸುತ್ತಾರೆ. ಬಹುಪಾಲು ನೀಲಗಾರರು ಮಂಟೇಸ್ವಾಮಿಗೆ ಶರಣು ಮಾಡಿ ಕಾವ್ಯ ಪ್ರಾರಂಭಿಸುತ್ತಾರೆ.

ಯುಜಿಸಿ ಪ್ರಧಾನ ಯೋಜನೆಯ ಬಹುಮುಖೀ ದಾಖಲೀಕರಣಕ್ಕಾಗಿ ದಕ್ಷಿಣ ಕರ್ನಾಟಕದಾದ್ಯಂತ ವ್ಯಾಪಕ ಕ್ಷೇತ್ರಕಾರ್ಯವನ್ನು ಕೈಗೊಳ್ಳಲಾಯಿತು. ಸಹಜವಲ್ಲದ ಮತ್ತು ಸಂದರ್ಭದಲ್ಲಿ ದಾಖಲೀಕರಣವನ್ನು ನಡೆಸಲಾಯಿತು. ಪ್ರಚಲಿತವಿರುವ ಪಠ್ಯಗಳಲ್ಲಿ ಎದ್ದುಕಾಣುವ ಪ್ರಮುಖ ವ್ಯತ್ಯಾಸಗಳನ್ನು ಇಲ್ಲಿ ಗುರುತಿಸಲಾಗಿದೆ –

ಮಂಟೇಸ್ವಾಮಿ ಕಾವ್ಯವನ್ನು ಈ ಪ್ರದೇಶದ ನುರಿತ ಹಾಡುಗಾರರು ಯೋಜನೆಗಾಗಿ ಪ್ರಸ್ತುತಪಡಿಸಿದ್ದಾರೆ. ಅವರ ಪಠ್ಯಗಳನ್ನು ಅ,ಇ,ಉ,ಎ,ಐ,ಓ,ಔ ಎಂದೂ ಸಂಕೇತಿಸಲಾಗಿದೆ. ಹೆಚ್ಚುವರಿ ಪಠ್ಯಗಳನ್ನು ಕ,ಚ,ಟ,ತ ಎಂದು ಗುರುತಿಸಲಾಗಿದೆ.

ಪಠ್ಯ	ಹೆಸರು ಮತ್ತು ವಿಳಾಸ	ವಯಸ್ಸು	ಜಾತಿ
ಅ.	ದಿ॥ ಉಳ್ಳಂಬಳ್ಳಿ ಮಾದಯ್ಯ ಬಿನ್ ಮಾದಯ್ಯ ಮಾರೇಹಳ್ಳಿ ಮಳವಳ್ಳಿ ತಾಲ್ಲೂಕು ಮಂಡ್ಯ ಜಿಲ್ಲೆ	೬೫	ಪರಿವಾರದವರು

ಇ.	ಪುರಿಗಾಲಿ ಮಹಾದೇವು ಪುರಿಗಾಲಿ ಗ್ರಾಮ ಮಳವಳ್ಳಿ ತಾಲ್ಲೂಕು ಮಂಡ್ಯ ಜಿಲ್ಲೆ	೪೯	ಹರಿಜನರು
ಉ.	ಕೃಷ್ಣಾಪುರ ಎಂ. ಮಹಾದೇವಸ್ವಾಮಿ ಕನಕಪುರ ರಸ್ತೆ ಮಳವಳ್ಳಿ ಅಂಚೆ & ತಾಲ್ಲೂಕು ಮಂಡ್ಯ ಜಿಲ್ಲೆ	೫೦	ಹರಿಜನರು
ಎ.	ಕೆಬ್ಬೇಪುರ ಸಿದ್ದರಾಜು ಬಿನ್ ಕೆಬ್ಬೇಪುರ ರಾಚಯ್ಯ ಹುಂಡಿಪುರ ಅಂಚೆ ಗುಂಡ್ಲುಪೇಟೆ ತಾಲ್ಲೂಕು ಚಾಮರಾಜನಗರ ಜಿಲ್ಲೆ	೪೯	ಹರಿಜನರು
ಐ.	ಕುಂತೂರು ಕಾಳಶೆಟ್ಟರು ಕುಂತೂರು ಅಂಚೆ ಕೊಳ್ಳೇಗಾಲ ತಾಲ್ಲೂಕು ಚಾಮರಾಜನಗರ ಜಿಲ್ಲೆ	೭೨	ಗಾಣಿಗರು
ಒ.	ಬನ್ನೂರು ಕೆಂಪಮ್ಮ ಬನ್ನೂರು ಅಂಚೆ ಟಿ. ನರಸೀಪುರ ತಾಲ್ಲೂಕು ಮೈಸೂರು ಜಿಲ್ಲೆ	೬೩	ಹರಿಜನರು
ಔ.	ಮೈಸೂರು ಗುರುರಾಜ್ ಕೆಸರೆ, ಮೈಸೂರು	೪೯	ಹರಿಜನರು

ಹೆಚ್ಚುವರಿ ಪಠ್ಯಗಳು

ಕ.	ಲಕ್ಷ್ಮಣ ಬಿನ್ ಕಾಳಯ್ಯ ಕೋನಮಾನ ಹಳ್ಳಿ ಗಾಣಾಳು ಅಂಚೆ ಕನಕಪುರ ತಾಲ್ಲೂಕು ರಾಮನಗರ ಜಿಲ್ಲೆ	೪೬	ತಿಗಳರು
ಚ.	ಶ್ರೀಮತಿ ಜಯಮ್ಮ ಅಪ್ಪಗೆರೆ	೫೫	ಹರಿಜನರು

ಚೆನ್ನಪಟ್ಟಣ ತಾಲ್ಲೂಕು
ರಾಮನಗರ ಜಿಲ್ಲೆ

ಟ.	ತಂಬೂರಿ ಕೃಷ್ಣಾನಾಯಕ್ ಬಿನ್ ಲಕ್ಷ್ಮಾನಾಯಕ್ ಲಂಬಾಣಿ ತಾಂಡ್ಯ ಸಿಲ್ಕ್ ಫಾರ್ಮ್ ಅಂಚೆ ಚೆನ್ನಪಟ್ಟಣ ತಾಲ್ಲೂಕು ರಾಮನಗರ ಜಿಲ್ಲೆ	೬೧	ಲಂಬಾಣಿ
ತ.	ದೊಡ್ಡಗವಿಬಸಪ್ಪ ಬಿನ್ ಚಿಕ್ಕಹನುಮಶೆಟ್ಟಿ ದೊಡ್ಡಮೋಳೆ ಗ್ರಾಮ ಚಾಮರಾಜನಗರ ತಾಲ್ಲೂಕು & ಜಿಲ್ಲೆ	೫೦	ಉಪ್ಪಾರರು

ಅನಕ್ಷರಸ್ಥರಾದ ಈ ಕಲಾವಿದರು ಮಹಾಕಾವ್ಯದ ಕತೆಯನ್ನು ತಮ್ಮ ಸ್ಮೃತಿಯಲ್ಲಿಟ್ಟುಕೊಂಡು ತಮ್ಮ ಸುತ್ತಮುತ್ತಲಿನ ವಿವರಗಳ ಜೊತೆಗೆ ಪ್ರಸ್ತುತ ಸನ್ನಿವೇಶಗಳನ್ನು ಸೇರಿಸಿ ಕತೆಯಾಗಿಸುತ್ತಾರೆ. ಒಬ್ಬೊಬ್ಬ ಗಾಯಕನೂ ಒಂದೊಂದು ರೀತಿಯ ಕಾವ್ಯವನ್ನು ಪ್ರಾರಂಭಿಸಿ ತನ್ನದೇ ಆದ ಧಾಟಿಯಲ್ಲಿ ಹಾಡುತ್ತಾನೆ. ಈ ಕಾರಣಗಳಿಂದ ಒಬ್ಬೊಬ್ಬ ಗಾಯಕನ ಕತೆ ಒಂದೊಂದು ಪಠ್ಯವಾಗುವ ಅರ್ಹತೆ ದಕ್ಕಿಸಿಕೊಂಡಿದೆ. ಅವರವರ ಪ್ರತಿಭೆ, ಬುದ್ಧಿಕೌಶಲ ಚಮತ್ಕಾರಗಳಿಗನುಗುಣವಾಗಿ ಪವಾಡಗಳು, ಪಾಂಚಾಳರ ಸಿರಿ ಸಂಪತ್ತು ಇತ್ಯಾದಿಗಳಲ್ಲಿ ವ್ಯತ್ಯಾಸ ಕಂಡು ಬರುತ್ತದೆ. ಅದನ್ನು ಈ ಕೆಳಕಂಡಂತೆ ಗುರುತಿಸಬಹುದು.

೧. ಹಳೆ ತಲೆಮಾರಿನ ಕಲಾವಿದರು ಧರೆಗೆದೊಡ್ಡವರ ಕತೆಯನ್ನು ಪ್ರಾರಂಭಿಸುವಾಗ

'ಪರಾಪರ ವಸ್ತು ಪಾವನಮೂರ್ತಿ
ಅಖಂಡ ಸ್ವರೂಪ ಅಲ್ಲಮಪ್ರಭು
ಧರೆತಂದ ಗುರುವೇ ಧರೆಗೆದೊಡ್ಡಯ್ಯ
ನಿಮ್ಮ ಪಾದ ಕಮಲಕ್ಕೆ ಮೊದಲು
ಶರಣಯ್ಯಾ .. . . ಆಹಾ . . .
ಶಂಕರಾ . . . .

ಹೀಗೆ ಪ್ರಾರಂಭವಾಗುವ ಕಾವ್ಯ ಮಂಟೇಸ್ವಾಮಿ, ಆದಿಯಾಗಿ ಸಿದ್ದಪ್ಪಾಜಿ ಅಂತ್ಯದವರೆಗೆ ಕಥಾನಕದಲ್ಲಿ ಬರುವ ಎಲ್ಲರ ಹೆಸರನ್ನು ಸ್ಮರಿಸಿದ ಮೇಲೆ ಕತೆಯನ್ನು ಪ್ರಸ್ತುತಪಡಿಸುತ್ತಾರೆ. ಹೀಗೆ ಹೀಗೆ ಪ್ರಾರಂಭವಾಗುವ 'ಅ.ಇ.ಎ.ಐ.ಒ' ಪಠ್ಯಗಳು. ಈಗೀಗ ಆಧುನಿಕತೆಯ ಕಾರಣದಿಂದಲೊ ಶಿಷ್ಟ ಸಾಹಿತ್ಯದ ಪ್ರಭಾವದಿಂದಲೋ ಕಾವ್ಯ ಪ್ರಾರಂಭವಾಗುವುದು ಗಣಪತಿ ಸ್ತುತಿಯಿಂದ. ಇದನ್ನು 'ಉ' ಪಠ್ಯ ಸಾದರಪಡಿಸುತ್ತದೆ.

೨. ಪರಂಜ್ಯೋತಿ ಸ್ವರೂಪನಾಗಿ ಆದಿ ಮೂಲದ ಬಟಾ ಬಯಲಿನ ಹರಿಯುವ ಜಲದಲ್ಲಿ ತಾವರೆ ಪುಷ್ಪವಾಗಿ ಉದ್ಭವಿಸುತ್ತಾರನೆ ಮಂಟೇಸ್ವಾಮಿ ಎಂದು ಎಲ್ಲಾ ಪಠ್ಯಗಳು ಸಾರುತ್ತವೆ.

೩. ಆದಿ ಮೂಲದ ಬಟಾ ಬಯಲಿನಲ್ಲಿ ಪರಾತ್ಪರ ವಸ್ತು ಪಾವನ ಮೂರ್ತಿ ಅಖಂಡ ಸ್ವರೂಪ ಅಲ್ಲಮಪ್ರಭು ಸ್ವಾಮಿಯವರು ಕೈಲಾಸವನ್ನು ಬಿಟ್ಟು ಉಕ್ಕಿ ಹರಿಯುವ ಸಮುದ್ರದ ಕೆಂದಾವರೆ ಕೊಳದಲ್ಲಿ ಉದ್ಭವವಾಗಿ ಹರಿಯೋ ಸಮುದ್ರವನ್ನು ತಡೆಗಟ್ಟಿ ಜಲಕ್ಕೆ ಜಾಂಬವನನ್ನು ಕೊಂದು ಧರೆಯನ್ನೇ ಸೃಷ್ಟಿ ಮಾಡಿ ಧರೆಗೆದೊಡ್ಡವರು ಎಂದು ನಾಮಾಂಕಿತವನ್ನು ಪಡೆದರು. ನಂತರ ಕತ್ತಲ ರಾಜ್ಯವನ್ನು ಬೆಳಕು ಮಾಡಿ ಪರಂಜ್ಯೋತಿ ಎಂದು ನಾಮಾಂಕಿತವನ್ನು ಪಡೆದರು. ಈ ಪ್ರಸಂಗವನ್ನು ಎಲ್ಲಾ ಪಠ್ಯಗಳು ಸಾಮಾನ್ಯವಾಗಿ ನಿರೂಪಿಸುತ್ತವೆ.

೪. ಧರೆಗೆದೊಡ್ಡವರು ಪರಂಜ್ಯೋತಿ ಎಂಬ ನಾಮಾಂಕಿತವನ್ನು ಪಡೆದ ಮೇಲೆ ಧರೆಗೆದೊಡ್ಡವರಾದ ಪರಮೇಶ್ವರರು ಉಳುಮೇಕಾಡಿನಲ್ಲಿ ಕೂತ್ಕೊಂಡು ನಾಲ್ಕು ಮೂಲೆ ಎಂಟು ದಿಕ್ಕಿನ ರಾಜ್ಯವನ್ನು 'ದಿಷ್ಟಾಯಿಸಿ' ನೋಡಿದಾಗ ಆದಿಕಲ್ಯಾಣ ಕಾಣುತ್ತದೆ. ಆದಿಕಲ್ಯಾಣ ಎಂದರೆ ಬಿಜ್ಜಳನ ದೊರೆತನ ಕೊಂಡಕಾರ ಮಂಚಣ್ಣ ಬಸವಣ್ಣನವರ ಮಂತ್ರಿತ್ವದಲ್ಲಿ ಕಲ್ಯಾಣಪಟ್ಟಣ ೯೭ ಬೀದಿ, ಒಂದು ಲಕ್ಷದ ಮೇಲೆ ತೊಂಬತ್ತಾರು ಸಾವಿರ ಶರಣರು, ೩೬ ಮಂದಿ ಪೂರೋಹಿತರು, ೬೬ ಮಂದಿ ಸ್ವಾಮ್ಗೋಳು. ಈ ಮಾಹಿತಿಯನ್ನು 'ಅ' ಪಠ್ಯ ನಿರೂಪಿಸುತ್ತದೆ.

೫. ಧರೆಗೆದೊಡ್ಡವರಿಗೆ ಪರಂಜ್ಯೋತಿ, ಪ್ರಭುದೇವ, ಪ್ರಭುಸ್ವಾಮಿ, ಅಲ್ಲಮಪ್ರಭುಗಳು ಮಂಟೇಸ್ವಾಮಿ ಎಂಬ ಹೆಸರುಗಳು ಇರುವುದು ಪಠ್ಯ 'ಅ' ದಲ್ಲಿದೆ.

೬ ಬೆಂಗಳೂರು ಗ್ರಾಮಾಂತರ, ರಾಮನಗರ, ಹಾಸನ ಜಿಲ್ಲೆಗಳಲ್ಲಿ ಮಂಟೇಸ್ವಾಮಿ ಕಾವ್ಯದ ಆದಿಭಾಗವನ್ನು ಕಲ್ಯಾಣಪಟ್ಟಣದಿಂದ ಪ್ರಾರಂಭಿಸುವುದು ಸಾಮಾನ್ಯ. ಮೈಸೂರು ಮಂಡ್ಯ ಚಾಮರಾಜನಗರ ಜಿಲ್ಲೆಗಳಲ್ಲಿ ಕಥಾನಕವನ್ನು ಮಂಟೇಸ್ವಾಮಿ ಹುಟ್ಟು ಕತೆಯಿಂದ ಪ್ರಾರಂಭ ಮಾಡುತ್ತಾರೆ. ತಮಗೆ ಗುರುಸ್ವಾಮಿಗಳು ಬೇಕೆಂದು ಬಸವಣ್ಣ ಮತ್ತು ನೀಲಾಂಬಿಕೆ ಮಾಡಿದ ತಪಸ್ಸು ಕೈಲಾಸಕ್ಕೆ ಮುಟ್ಟಿತು. ಈ ದಂಪತಿಗಳ ಹಿರಿಮೆಯನ್ನು ಲೋಕಕ್ಕೆ ಸಾರುವುದಕ್ಕಾಗಿ ಮಂಟೇಸ್ವಾಮಿಯವರು ಅವತರಿಸುತ್ತಾರೆ ಎಂದು ಹೆಚ್ಚುವರಿ ಪಠ್ಯಗಳು ತಿಳಿಸುತ್ತವೆ.

೭ ಕಲ್ಯಾಣದಲ್ಲಿ ಒಂದು ಲಕ್ಷದ ಮೇಲೆ ತೊಂಬತ್ತಾರು ಸಾವಿರ ಶರಣರಿಗೆ ನಿತ್ಯ ಭೋಜನವನ್ನು ಮಾಡಿಸಿ ಮಿಕ್ಕಿದ ಪ್ರಸಾದವನ್ನು ಕಲ್ಲುಬಂಡಿ ಕಟ್ಟಿ ಕೈಲಾಸಕ್ಕೆ ಹೂಡುತ್ತಿದ್ದರಂತೆ. ಬಸವಣ್ಣ ಮತ್ತು ನೀಲಾಂಬಿಕೆಯ ನಡುವೆ ನಡೆಯುವ ಇದನ್ನು ದೃಢೀಕರಿಸುತ್ತದೆ.

ನೀಲಲೋಚನೆ : ಒಂದು ಲಕ್ಷದ ಮೇಲೆ ತೊಂಬತ್ತಾರು ಸಾವಿರ ಶರಣರಿಗೆಲ್ಲ ನಿತ್ಯ ಭೋಜನ ಮಾಡಿಸುತ್ತಿರುವ ನೀವು ನಿಜವಾದ ಗುರುಗಳಲ್ಲವೇ ?

ಬಸವಣ್ಣ : ಹೌದು ನೀಲಲೋಚನೆ.

ನೀಲಲೋಚನೆ : ನೀವು ನಮಗೆ ಪತಿ ಆದ ಮೇಲೆ ನಿಮಗೆ ಗುರುಗಳು ಯಾರು?

ಬಸವಣ್ಣ : ಹಾಗಾದರೆ ನನಗೆ ಗುರುಗಳಾರು ?

"ಸತಿಗೆ ಪತಿದೇವರು ಪತಿಗೆ ಸತಿದೇವರು" ಎಂದು ನಂಬಿದ್ದ ನೀಲಲೋಚನೆ ಮತ್ತು ಬಸವಣ್ಣನವರು ಗಾಢ ಚಿಂತೆಯಲ್ಲಿ ತೊಡಗಿದ್ದುದು ಮಾಡುತ್ತಿರುವಂತದ್ದು ಉಳುಮೆ ಕಾಡಿನಲ್ಲಿ ಕುಳಿತಿದ್ದ ಧರೆಗೆದೊಡ್ಡವರಿಗೆ ಮನವರಿಕೆಯಾಯಿತಂತೆ. ಆಗ ಸ್ವಾಮಿಯವರು ಅಸಹ್ಯ ವೇಷವನ್ನು ತೊಟ್ಟು ಕಲ್ಯಾಣಕ್ಕೆ ಬರುತ್ತಾರೆ ಎಂಬುದು ಎಲ್ಲಾ 'ಅ.ಇ.ಉ.ಎ.ಐ.ಓ. ಪಠ್ಯಗಳು ತಿಳಿಸುತ್ತವೆ.

೮. ಹೆಚ್ಚುವರಿ ಪಠ್ಯಗಳು ಮಂಟೇಸ್ವಾಮಿ ಕತೆ ಕಲ್ಯಾಣದಿಂದ ಪ್ರಾರಂಭಿಸಿ ಕೊಡೇಕಲ್ಲಿಗೆ ಬರುತ್ತಾರೆ. ಕೊಡೇಕಲ್ಲಿನಿಂದ ವಿಜಯನಗರಕ್ಕೆ ಬರುತ್ತಾರೆ. ವಿಜಯನಗರದಿಂದ ಕಾಗಿನೆಲೆಗೆ ಬರುತ್ತಾರೆ. ಕಾಗಿನೆಲೆಯಿಂದ ಸಖರಾಯಪಟ್ಟಣಕ್ಕೆ ಬರುತ್ತಾರೆ. ಸಖರಾಯಪಟ್ಟಣದಿಂದ ಚೆನ್ನಪಟ್ಟಣಕ್ಕೆ ಬರುತ್ತಾರೆ. ಚೆನ್ನಪಟ್ಟಣದಿಂದ ಆದಿಹೊನ್ನಾಯಕನ ಹಳ್ಳಿಗೆ ಬರುತ್ತಾರೆ. ಆದಿಹೊನ್ನಾಯಕನ ಹಳ್ಳಿಯಿಂದ ಕಾಡಂಕನಹಳ್ಳಿಗೆ ಬರುತ್ತಾರೆ. ಅಲ್ಲಿಂದ ನಿಡುಘಟ್ಟಕ್ಕೆ ಹೋಗಿ ಸಿದ್ದಪ್ಪಾಜಿಯ ಸತ್ಯಪರೀಕ್ಷೆ ಮಾಡುತ್ತಾರೆ ಎಂಬ ವಿಷಯವನ್ನು ಹೆಚ್ಚುವರಿ ಪಠ್ಯಗಳು ವಿಶದಪಡಿಸುತ್ತವೆ.

೯. ಪರಂಜ್ಯೋತಿ ಮಂಟೇಸ್ವಾಮಿ ಕೈಲಾಸವನ್ನು ಬಿಟ್ಟು ಭೂಲೋಕದಲ್ಲಿ ನಾಲ್ಕು ಮೂಲೆ ಎಂಟು ದಿಕ್ಕಿನ ಕೊಳದಲ್ಲಿ ಕೆಂದಾವರೆ ಪುಷ್ಪದಲ್ಲಿ ಉದ್ಭವಿಸುತ್ತಾರೆ. ಅವರು ತಮ್ಮ ದೃಷ್ಟಿಯಿಂದ ಪ್ರಪಂಚವನ್ನು ನೋಡಿದಾಗ ಅರಳು ಕತ್ತಲ ರಾಜ್ಯ ಇರುಳು ಕತ್ತಲ ರಾಜ್ಯವಾಗಿತ್ತು. ಈ ಭೂಮಿತಾಯಿ ಅಂತಕ್ಕಂತವಳು ತಾನೇ ತಾನಾಗಿ ಅದರಾಡುತ್ತಾ ಇದ್ದಾಳೆ. ಆಗ ಸ್ವಾಮಿಯವರು ಹರಿಯುವಂತಹ ಜಲವನ್ನು ತಮ್ಮ ಎಡಗೈಕೊಟ್ಟು ತಡೆದು ಜಲಕ್ಕೆ ಜಾಂಬವನನ್ನು ಪಡೆದು ಜಲಸೂತ್ರಧಾರಿ ಎಂದು ನಾಮಕರಣ ಮಾಡಿ ಆ ಜಾಂಬವನನ್ನೇ ಈ ಭೂಮಿಗೆ ಬಲಿಕೊಡುತ್ತಾರೆ. ಆಗ ಭೂಮಿತಾಯಿ ತನಗೆ ಈ ಬಲಿ ಸಾಕಾಗುವುದಿಲ್ಲ ಎಂದಾಗ ಸ್ವಾಮಿಯವರು "ಸೂರ್ಯ ಚಂದ್ರ ಇರೋತನಕ ನೀವು ನಿಲ್ಲೋತನಕ ನಿನಗೆ ಯಾವಾಗಲೂ ಬಲಿ ಕೊಡುತ್ತೇನೆ ಎಂದರು. ಅದಕ್ಕೆ ಭೂಮಿ ತಾಯಿ ಹೇಗೆ ಕೊಡುತ್ತೀ ಎಂದು ಕೇಳಿದಾಗ ಹೀಗೆ ಹೇಳುತ್ತಾರೆ : ನೋಡು ತಾಯಿ ನಾಳೆ ಪಾರ್ವತಿ ಈ ಭೂಲೋಕದಲ್ಲಿ ಹೆಣ್ಣಾಗಿ, ತಾಯಾಗಿ, ಮಣ್ಣಾಗಿ ಹುಟ್ಟುತ್ತಾಳೆ. ಹೀಗೆ ಹುಟ್ಟುವ ಹೆಣ್ಣು ತಿಂಗಳಿಗೆ ಒಂದು ಸಾರಿ ಮುಟ್ಟಾದಹಾಗೆ ನಿನಗೆ ಬಲಿ ಆದಹಾಗೆ ಎಂದು ಹೇಳಿದರು. ಆಗ ಕೆಸರಾಗಿದ್ದ ಭೂಮಿ ಸ್ವಲ್ಪ ಗಟ್ಯಂಗ ಆಗುತ್ತದೆ.

ಹೀಗೆ ಭೂಮಿಯನ್ನು ಗಟ್ಯಂಗ ಮಾಡಿ ಪಡೆದುದರಿಂದ ಧರೆಗೆದೊಡ್ಡವರು ಎಂಬ ನಾಮಕರಣ ಬಂದಿದೆ. ಈ ವಿವರವನ್ನು ಪಠ್ಯ 'ಎ' ತಿಳಿಸುತ್ತದೆ.

೧೦.ಮಂಟೇಸ್ವಾಮಿ ಬಸವಣ್ಣ ಮತ್ತು ನೀಲಲೋಚನೆಯ ಭಕ್ತಿಯನ್ನು ಪರೀಕ್ಷಿಸಲು ಪ್ರದರ್ಶಿಸುವ ಪವಾಡಗಳು ಮುಖ್ಯ ಪಠ್ಯಗಳಲ್ಲೂ ಹೆಚ್ಚುವರಿ ಪಠ್ಯಗಳಲ್ಲೂ ಒಂದೇ ರೀತಿಯಾಗಿ ಕಂಡು ಬರುತ್ತವೆ.

೧೧.ಧರೆಗೆ ದೊಡ್ಡವರು ಕಲ್ಯಾಣದಿಂದ ಶಿಶುಮಗನಾಗಿ ರಾಚಪ್ಪಾಜಿಯನ್ನು ಮಾತ್ರ ಜೊತೆಯಲ್ಲಿ ಉಳುಮೆ ಕಾಡಿಗೆ ಕರ್ಕೊಂಡು ಬಂದು ಅಲ್ಲಿ ಉಳುಮೆ ಸಂಗಯ್ಯ ಎಂದು ನಾಮಕರಣವನ್ನು ಪಡೆಯುತ್ತಾರೆ ಎಂದು ಪಠ್ಯ 'ಅ' ಹೇಳಿದರೆ, ಹೆಚ್ಚುವರಿ ಪಠ್ಯಗಳಾದ 'ಕ,ಚ,ಟ' ಗಳು ಕಲ್ಯಾಣದಿಂದ ಮಂಟೇಸ್ವಾಮಿ ದಕ್ಷಿಣಕ್ಕೆ ಬರುವಾಗ ರಾಚಪ್ಪಾಜಿ, ಫಲಾರದಯ್ಯ, ಚೆನ್ನಾಜಮ್ಮ, ಚೆನ್ನಯ್ಯ, ಲಿಂಗಯ್ಯ ಎಂಬ ಶಿಶು ಮಕ್ಕಳನ್ನು ಪಡೆದುಕೊಂಡು ಹಾಗೆಯೇ ಕಲ್ಯಾಣದಿಂದ ಕಾಲಜ್ಞಾನ ಪುಸ್ತಕವನ್ನು ತಂದರು ಎಂಬುದಾಗಿ ಹೇಳುತ್ತವೆ. ಆದರೆ 'ಉ' ಪಠ್ಯದಲ್ಲಿ ಬಸವಣ್ಣನವರ ಪರಮಭಕ್ತನಾದ ರಾಚಪ್ಪಾಜಿ ಮತ್ತು ಮಡಿವಾಳ ಮಾಚಯ್ಯನನ್ನು ಮಾತ್ರ ಶಿಶು ಮಕ್ಕಳಾಗಿ ಪಡೆದು ಬಂದರು ಎಂಬುದಾಗಿ ತಿಳಿಸಲಾಗಿದೆ.

೧೨.ಧರೆಗೆದೊಡ್ಡವರು ಕೈಲಾಸದಿಂದ ಕಲ್ಯಾಣಕ್ಕೆ ಬಂದರು ಎಂಬ ವಿಷಯವನ್ನು ಎಲ್ಲಾ ಪಠ್ಯಗಳು ತಿಳಿಸುತ್ತವೆ.

೧೩.ಧರೆಗೆದೊಡ್ಡವರ ಕಾವ್ಯದಲ್ಲಿ ಮೇಲಿಂದ ಮೇಲೆ ಗೋಚರಿಸುವ ಸ್ಥಳಗಳು ಬೊಪ್ಪೇಗೌಡನಪುರದ ಬಳಿಯಲ್ಲಿರುವ ಕುಂದೂರುಬೆಟ್ಟ, ಹಲಗೂರು, ಚಿಲ್ಲಾಪುರ, ಕಪ್ಪಡಿ, ಮಳವಳ್ಳಿ, ಕಲ್ಯಾಣಪಟ್ಟಣ, ವಿಜಯನಗರ, ಸಖರಾಯಪಟ್ಟಣ ಹಾಗೂ ಚಿಕ್ಕಲ್ಲೂರಿನ ಆಸುಪಾಸಿನಲ್ಲಿರುವ ಏಳು ಹಳ್ಳಿಗಳ ಉಲ್ಲೇಖ ಹಾಗೂ ಬೊಪ್ಪೇಗೌಡನಪುರದಲ್ಲಿರುವ ಏಳು ಹಳ್ಳಿಗಳು ಮತ್ತೆ ಮತ್ತೆ ಕತೆಯಲ್ಲಿ ಬರುವುದು ವಿಶೇಷ.

೧೪.ಮುತ್ತಿನ ಹಾವುಗೆಯ ಒಂದು ಪ್ರಸಂಗ ಮಾದೇಶ್ವರನ ಕಾವ್ಯದಲ್ಲಿ ಬರುವಂತೆ ಧರೆಗೆದೊಡ್ಡವರ ಕಾವ್ಯದಲ್ಲೂ ಕಂಡುಬರುತ್ತದೆ. ಮಾದಾರಚೆನ್ನಯ್ಯ ತನ್ನ ತೊಡೆಯ ಚರ್ಮದಿಂದ ತಯಾರಿಸಿದ ಚಮ್ಮಾಳಿಗೆಯನ್ನು ಮಾಡಿ ಬಸವಣ್ಣನವರಿಗೆ ತಂದು ಒಪ್ಪಿಸುತ್ತಾನೆ ಎಂಬ ಪ್ರಸಂಗವನ್ನು ಹೆಚ್ಚುವರಿ ಪಠ್ಯಗಳಾದ 'ಕ,ಚ,ಟ'ಗಳು ತಿಳಿಸಿದರೆ, ಇನ್ನುಳಿದ ಪಠ್ಯಗಳಾದ 'ತ,ಪ' ಗಳಲ್ಲಿ ಮಾದಾರಚೆನ್ನಯ್ಯ ಮತ್ತು ಅವನ ಮಡದಿಯಾದ ಕಲ್ಯಾಣಮ್ಮ ಇವರಿಬ್ಬರ ಎಡ ಬಲ ತೊಡೆಯ ಚರ್ಮದಿಂದ ಮಾಡಿದ ಚಮ್ಮಾಳಿಗೆಯನ್ನು ಮಂಟೇಸ್ವಾಮಿಗಾಗಿ ಇಟ್ಟಿರುತ್ತಾರೆ ಎಂಬ ಪ್ರಸಂಗ ಇಲ್ಲಿಯೂ ಬರುತ್ತದೆ.

೧೫.ಫಲಾರದಯ್ಯನನ್ನು ಮಂಟೇಸ್ವಾಮಿಯವರು ಉತ್ತರದಿಂದ ಜೊತೆಯಲ್ಲಿ ಕರೆದುಕೊಂಡು ಬಂದರು ಎಂಬುದಕ್ಕೆ ಸಾಕಷ್ಟು ಆಧಾರ ಸಿಗುವುದಿಲ್ಲ. ಆದರೆ ಮಡಿವಾಳ ಮಾಚಯ್ಯ ಮತ್ತು ಮಲ್ಲಿಗೆ ಮಹಾದೇವಮ್ಮನವರ ಮಗ ವೀರಣ್ಣ ಅವರ ಉಲ್ಲೇಖ

ಕತೆಯಲ್ಲಿ ಬರುತ್ತದೆ. ಇವರಿಬ್ಬರನ್ನು ಸತ್ಯಪರೀಕ್ಷೆಗೆ ಒಳಪಡಿಸಿದ ಮೇಲೆ ಸತ್ತ ಮಗನಾದ ವೀರಣ್ಣನನ್ನು ಪವಾಡದ ಮೂಲಕ ಫಲಾರದಯ್ಯ ಎಂಬುದಾಗಿ ನಾಮಕರಣವನ್ನು ಪಡೆಯುತ್ತಾರೆ ಎಂಬ ಪ್ರಸಂಗ 'ಅ,ಇ,ಉ'ಪಠ್ಯದಲ್ಲಿ ಬರುತ್ತದೆ.

೧೬.ಚಿಲ್ಲಾಪುರ ಹಲಗೂರಿಗೆ ಸಿದ್ದಪ್ಪಾಜಿ ಕಬ್ಬಿಣ ಭಿಕ್ಷೆ ಪಡೆಯಲು ಹೋಗುವಾಗ ಅವನಿಗೆ ಬೆಂಗಾವಲಾಗಿ ಫಲಾರದಯ್ಯನನ್ನು ಕಳುಹಿಸಿಕೊಡುತ್ತಾರೆ ಎಂದು 'ಪ' ಪಠ್ಯ ಹೇಳಿದರೆ, ಸಿದ್ದಪ್ಪಾಜಿ ಕಬ್ಬಿಣ ಭಿಕ್ಷೆಗೆ ಹಲಗೂರಿಗೆ ಹೋಗುವುದಕ್ಕೆ ಹಿಂದೇಟು ಹಾಕುತ್ತಿದ್ದಾಗ ದೊಡ್ಡಮ್ಮತಾಯಿ ಮಗನಿಗೆ ಹೀಗೆ ಧೈರ್ಯ ತುಂಬುತ್ತಾಳೆ: ಕೆಂಡಗಣ್ಣ ರಾಚಪ್ಪಯ್ಯ ನಿನ್ನ ಮಂಡೆ ಮ್ಯಾಲೆ ವಾಲಾಡುತ್ತಾರೆ. ಭೂಮಿಗೆ ದೊಡ್ಡೋರು ನಿನ್ನ ಬೆನ್ನಹಿಂದೆ ಬರುತ್ತಾರೆ. ನಿನ್ನ ಉದರದೊಳಗೆ ನಾನೇ ವಾಲಾಡುತ್ತೀನಿ ಹೆದರಬ್ಯಾಡ ನನ್ನಕಂದ ಹೋಗಿಬಾರೋ ಹಲಗೂರಿಗೆ' ಎಂದು ಹೇಳುವ ಭಾಗ 'ಅ,ಇ,ಉ,ಎ' ಪಠ್ಯದಲ್ಲಿದೆ.

೧೭.ಧರೆಗೆದೊಡ್ಡವರು ಕಲ್ಯಾಣದಿಂದ ನೇರವಾಗಿ ಕೊಡೇಕಲ್ಲಿಗೆ ಬಂದರು ಎಂಬ ವಿಷಯವನ್ನು 'ಅ' ಪಠ್ಯ ಹೀಗೆ ತಿಳಿಸುತ್ತದೆ

> ಆದಿಕಲ್ಯಾಣ ಬಿಟ್ಟಾರಂತೆ
> ಕೊಡೇಕಲ್ಲಿಗೆ ಬತ್ತಾವರಲ್ಲೋ
> ಸಿದ್ದಯ್ಯ ಸ್ವಾಮಿ ಬನ್ಯೋ

ಕೊಡೇಕಲ್ಲಿನಲ್ಲಿ ಅರೆಕಲ್ಲು ಸ್ವಾಮಿಯವರಿಗೆ ನೆರಳಿನ ಆಶ್ರಯ ಮಾಡಿತು ಎಂಬುದನ್ನು ಎಲ್ಲಾ ಪಠ್ಯಗಳು ಪ್ರಚುರಪಡಿಸುತ್ತವೆ.

೧೮.ಹೆಚ್ಚುವರಿ ಪಠ್ಯಗಳಲ್ಲೂ ಕೂಡ ಮಂಟೇಸ್ವಾಮಿಯವರು ಕೊಡೇಕಲ್ಲನ್ನು ಬಿಟ್ಟು ಕಾಗಿನೆಲೆಗೆ ಬಂದರು ಎಂಬುದಾಗಿ ತಿಳಿಸಲಾಗಿದೆ.

೧೯.ಮಂಟೇಸ್ವಾಮಿ ಕಾವ್ಯದ ಆದಿಭಾಗದಲ್ಲಿ ಬರುವ ಒಂದು ಪ್ರಸಂಗ ಯಾವುದೆಂದರೆ ಕಲ್ಯಾಣದಲ್ಲಿ ಒಂದು ಲಕ್ಷದ ಮೇಲೆ ತೊಂಬತ್ತಾರು ಸಾವಿರ ಶಿವಶರಣರಿಗೆ ನಿತ್ಯ ಭೋಜನ ನಡೆಯುತ್ತಿತ್ತು. ಊಟ ಮಾಡಿ ಬಿಸಾಕಿದ ಎಂಜಲು ಎಲೆ ರಾಶಿ ಒಂದು ದೊಡ್ಡ ಬೆಟ್ಟದ ಗಾತ್ರದಲ್ಲಿ ಬಿದ್ದಿದ್ದನ್ನು ನೋಡಿ ರಾಚಪ್ಪಾಜಿಯವರು ಆ ಎಂಜಲು ಎಲೆಯ ಗುಡ್ಡೆಯನ್ನು ಸುಟ್ಟು ಬೂದಿ ಮಾಡಿಕೊಂಡು ತನ್ನ ಜೋಳಿಗೆಯಲ್ಲಿ ತುಂಬಿಕೊಂಡರು ಎಂಬ ವಿವರವನ್ನು 'ಅ,ಇ,ಉ,ಎ,ಐ,ಒ' ಪಠ್ಯಗಳು ತಿಳಿಸುತ್ತವೆ.

೨೦. ಪಠ್ಯ 'ಔ' ರಾಚಪ್ಪಾಜಿ ವಿಜಯನಗರದ ಗಾರುಡಿಗರ ಮೋಡಿ ಆಟವನ್ನು ಗೆದ್ದು ಅವರಿಂದ 'ಘನಗಾರುಡಿಗರ ಗಂಡ' ಎಂಬ ಬಿರುದನ್ನು ಪಡೆದುಕೊಂಡನು. ಅವರಲ್ಲಿ ಇದ್ದ ಕಪ್ಪು ಮಸಿಯನ್ನು ಪಡೆದುಕೊಂಡು ಬಂದರು ಎಂಬುದನ್ನು ದೃಢಪಡಿಸುತ್ತದೆ. ಅಲ್ಲಿಂದ ಗಾರುಡಿಗರ ಮನೆದೇವತೆಯಾದ ಮಲೆಯಾಳ ದೇವತೆಯನ್ನು

ಶಿಶು ಮಗಳನ್ನಾಗಿ ಪಡೆದು ಬರುತ್ತಾರೆ. ಆ ದೇವತೆಯನ್ನು ಕುರುಬನಕಟ್ಟೆಯಲ್ಲಿ ನೆಲೆಗೊಳಿಸಲಾಗಿದೆ ಎಂಬುದನ್ನು ಈ ಪಠ್ಯ ತಿಳಿಸಿಕೊಡುತ್ತದೆ.

೨೧.ಧರೆಗೆದೊಡ್ಡವರು ವಿಜಯನಗರವನ್ನು ಬಿಟ್ಟು ತುರ್ಕರಕಾಂಡಕ್ಕೆ ಬರುತ್ತಾರೆ ಎಂಬುದನ್ನು 'ಅ' ಪಠ್ಯ ಅರುಹುತ್ತದೆ :

ವಿಜಯನಗರ ಬಿಟ್ಟಾರಂತೆ
ತುರ್ಕರಕಾಂಡಕ್ಕೆ ಬರುತ್ತಾರೆ
ಸಿದ್ದಯ್ಯ ಸ್ವಾಮಿ ಬನ್ನೋ

ಮಂಟೇಸ್ವಾಮಿ ತುರ್ಕರಕಾಂಡದಲ್ಲಿ 'ತುರುಕಾಣಯ್ಯ' ಎಂಬ ನಾಮಾಂಕಿತವನ್ನು ಪಡೆದರು ಎಂಬ ಮಾಹಿತಿ ಇದೆ. ಆದರೆ ಶಿವನಸಮುದ್ರದ ಬಳಿ ಇರುವ ದರ್ಗಾದ ಮಾಹಿತಿ ಮಾತ್ರ ಈ ಯಾವ ಪಠ್ಯಗಳಲ್ಲಿಯೂ ಬರುವುದಿಲ್ಲ.

೨೨. ಚೆನ್ನಾಜಮ್ಮನನ್ನು ಕಾಗಿನೆಲೆಯಿಂದ ರಾಚಪ್ಪಾಜಿಯವರು ಕರೆದುಕೊಂಡು ಬಂದರು ಎಂಬುದನ್ನು 'ಉ' ಪಠ್ಯ ಖಚಿತಪಡಿಸುತ್ತದೆ.

೨೩. 'ಧರೆಗೆದೊಡ್ಡವರು' ಉಪಯೋಗಿಸಿದ ತಂಬೂರಿ ಎನ್ನಲಾದ ದೊಡ್ಡ ತಂಬೂರಿಯೊಂದು ಚೆನ್ನಪಟ್ಟಣದ ಹಳೆಕೋಟೆ ಮಠದಲ್ಲಿದೆ. ಹಾಗೆಯೇ ಬೊಪ್ಪಣಪುರದ ಮಠದಲ್ಲೂ ಒಂದು ತಂಬೂರಿ ಇದೆ ಎಂಬುದನ್ನು ಹೆಚ್ಚುವರಿ ಪಠ್ಯಗಳು ತಿಳಿಸುತ್ತವೆ.

೨೪. ನೀಲಗಾರರ ವಾದ್ಯ : ತಂಬೂರಿ, ಗಗ್ಗರ, ಢಕ್ಕೆ, ಎಂಬ ಪರಿಕರಗಳನ್ನು 'ಪ' ಪಠ್ಯ ತಿಳಿಸುತ್ತದೆ. ಹಾಗೆಯೇ ತಂಬೂರಿ ಮುತ್ತತ್ತಿರಾಯನಿಂದ ಬಂದಿತು ಎಂದು ವಾದ್ಯದ ಮೂಲವನ್ನು ತಿಳಿಸುತ್ತದೆ. ಇದರಿಂದ ವೈಷ್ಣವ ಮತ್ತು ಶೈವ ಸಂಪ್ರದಾಯಗಳ ಸಂಗಮವನ್ನು ಇಲ್ಲಿ ಕಾಣಬಹುದು.

೨೫. ಕೈಲಾಸದಿಂದ ಕಲ್ಯಾಣಕ್ಕೆ ಬಂದಾಗ ಧರೆಗೆ ದೊಡ್ಡವರು 'ಎ' ಪಠ್ಯದಲ್ಲಿ ಹೀಗೆ ಕಾಣಿಸಿಕೊಂಡಿದ್ದಾರೆ :

ಕೈಯುವೆ ಸೊತ್ತುಗಳು
ಕಾಲುವೆ ಕುಂಟುಗಳು
ಕಣ್ಣೂವೆ ಕುರುಡುಗಳು
ಕಿವಿಲಿ ಭಂಗಿಸೊಪ್ಪು
ಕೈಲಿ ಸುರಿಗಡಿಗೆ – ಈ ಭಾಗವನ್ನು 'ಎ' ಪಠ್ಯ ತಿಳಿಸುತ್ತದೆ.

೨೬. ಸ್ವಾಮಿಯವರು ಬಸವಣ್ಣನವರನ್ನು ಮತ್ತು ನೀಲಲೋಚನೆಯನ್ನು ಪರೀಕ್ಷಿಸಲು ಬಂದು ಅವರ ಭಕ್ತಿಯನ್ನು ಲೋಕಕ್ಕೆ ಸಾರಲು ಬಂದಾಗ ಅವರ ವೇಷ ಇದ್ದದ್ದು ಹೀಗೆ : ಕೀವು ರಕ್ತ ಸುರಿಸುತ್ತಾ ದೇಹದಲ್ಲೆಲ್ಲ ಹುಣ್ಣುಗಳಿಂದ ಕೂಡಿದವನಾಗಿ ಬಂದ

ಪ್ರಸಂಗ ಸಾಮಾನ್ಯವಾಗಿ ಎಲ್ಲಾ ಪಠ್ಯದಲ್ಲೂ ಕಂಡು ಬರುತ್ತದೆ. ಆಗ ಬಸವಣ್ಣ ಮತ್ತು ನೀಲಲೋಚನೆ ಇಬ್ಬರೂ ಸ್ವಾಮಿಯವರನ್ನು ಗುರುತಿಸಿ ಭಕ್ತಿಯಿಂದ ಅವರ ಎರಡೂ ಪಾದಗಳನ್ನು ಹಿಡಿದು ಎತ್ತಿದಾಗ ಎರಡೂ ಪಾದವೇ ಕಿತ್ತು ಬಂದವಂತೆ. ಎರಡು ರಟ್ಟೆ ಹಿಡಿದೆತ್ತಿದರಂತೆ ಎರಡು ರಟ್ಟೆಯೇ ಈಜಿ ಬಂದವಂತೆ. ದಯಮಾಡಬೇಕು ಸ್ವಾಮಿ ಎಂದು ಮುಂಡಾಸ ಹಿಡಿದರಂತೆ, ಮುಂಡಾಸವೆ ಎದ್ದು ಬಂದಿತಂತೆ. ಇಂಥ ವಿಲಕ್ಷಣ ರೀತಿಯ ವರ್ಣನೆಗಳು ಕಾವ್ಯದ ಆದಿಭಾಗದಲ್ಲಿಯೇ ಕಂಡು ಬರುತ್ತವೆ.

೨೭. ರಾಚಪ್ಪಾಜಿಯ ತಂದೆ ತಾಯಿಗಳು ಕೂಡಲಸಂಗಮದೇವ, ಸುರಮ್ಮ ಎಂಬುದಾಗಿ 'ಇ' ಪಠ್ಯ ತಿಳಿಸುತ್ತದೆ. ಇವರು ತಮ್ಮ ಪುತ್ರನನ್ನು ಬಸವಣ್ಣನವರಿಗೆ ಒಪ್ಪಿಸುವಾಗ ಆತನಿಗೆ ಏಳು ವರ್ಷ ತುಂಬಿತ್ತು. ಈತನ ಮದುವೆ ಮಾಡಿಸುವಂತೆ ಬಸವಣ್ಣನವರನ್ನು ಕೇಳಿಕೊಂಡರು. ಅವರು ಕೂಡ ಒಪ್ಪಿಕೊಂಡರು ಎಂಬ ಭಾಗ ಅದೇ ಪಠ್ಯದಲ್ಲಿ ಕಂಡುಬರುತ್ತದೆ.

೨೮. ಕಲ್ಯಾಣದಲ್ಲಿ ಕಡೆಯ ಬಾಗಿಲನ್ನು ಕಾಯುತ್ತಿದ್ದ ಕಾವಲುಗಾರನೇ ಕಟುಕರಸಂಗಯ್ಯ. ಈತನು ಸ್ವಾಮಿಯವರು ಕಲ್ಯಾಣವನ್ನು ಕ್ರಮಿಸುವಾಗ ಅವರನ್ನು ಅಂಗಲಾಚಿ ಬೇಡಿಕೊಳ್ಳುತ್ತಾನೆ. ನನಗೆ ಮುಂದಿನ ಜನ್ಮದಲ್ಲಿ ಉತ್ತಮ ಪುರುಷನನ್ನಾಗಿ ಹುಟ್ಟಿಸು ಎಂದು ಬೇಡುವುದಕ್ಕೂ ಈ ಕಡೆ ನಿಡುಘಟ್ಟದಲ್ಲಿ ಊಟಕ್ಕೆ ಗತಿಯಿಲ್ಲದೆ ಬೇಡುತ್ತಿದ್ದ ಮುದ್ದಮ್ಮನ ಗೋಳೂ ಒಂದೇ ಆಯಿತು. ಮುಂದಿನ ಜನ್ಮದಲ್ಲಿ ಉತ್ತಮನಾಗಿ ಹುಟ್ಟು ಎಂದು ಆಶೀರ್ವಾದ ಕೊಡುತ್ತಾರೆ. ಈ ಮರುಜನ್ಮವೇ ಕೆಂಪಣ್ಣನಾಗಿ ನಿಡುಘಟ್ಟದಲ್ಲಿ ಅವತರಿಸುತ್ತಾರೆ ಎಂಬ ಭಾಗವನ್ನು ಸಾಮಾನ್ಯವಾಗಿ ಎಲ್ಲಾ ಪಠ್ಯಗಳು ತಿಳಿಸುತ್ತವೆ.

೨೯. ಕಲ್ಯಾಣದಲ್ಲಿ ಕೂಡಲಸಂಗಮನಿಗೆ ಕೊಟ್ಟ ವಚನದಂತೆ ರಾಚಪ್ಪಾಜಿಯವರಿಗೆ ಮದುವೆ ಮಾಡಿಸಬೇಕೆಂದು ಭಾವಿಸಿ ಸ್ವಾಮಿಯವರು ವಿಜಯನಗರವನ್ನು ಬಿಟ್ಟು ಕಾಗಿನೆಲೆಗೆ ಬರುತ್ತಾರೆ. ಅಲ್ಲಿ ಕ್ಷತ್ರಿಯ ಕುಲದ ಅರಸು ಬಸವಲಿಂಗಯ್ಯ ಆತನ ಮಡದಿಯಾದ ಕಲ್ಯಾಣಮ್ಮನವರಿಗೆ ಗಂಡು ಮಕ್ಕಳು ಇಲ್ಲ. ಒಂದೇ ಒಂದು ಹೆಣ್ಣು ಮಗಳು. ಆ ಮಗಳನ್ನು ಪಡೆದು ರಾಚಪ್ಪಾಜಿಯವರಿಗೆ ಮದುವೆ ಮಾಡಿಸಬೇಕೆಂದು ಅಲ್ಲಿ ಪವಾಡ ಮಾಡಿ ದೊಡ್ಡಮ್ಮತಾಯಿಯನ್ನು ಪಡೆದರು ಎಂದು ಪಠ್ಯ 'ಕ' ವಿವರಿಸುತ್ತದೆ.

೩೦. 'ಎ' ಪಠ್ಯದ ಪ್ರಕಾರ ಮಂಟೇಸ್ವಾಮಿಯ ಕಥಾ ಹಂದರ ಆದಿಕಲ್ಯಾಣದಿಂದ ವಿಜಯನಗರಕ್ಕೆ, ವಿಜಯನಗರದಿಂದ ಕಾಗಿನೆಲೆಗೆ, ಕಾಗಿನೆಲೆಯಿಂದ ಸಖರಾಯಪಟ್ಟಣಕ್ಕೆ, ಸಖರಾಯಪಟ್ಟಣದಿಂದ ಚನ್ನಪಟ್ಟಣಕ್ಕೆ, ಚನ್ನಪಟ್ಟಣದಿಂದ ಬೊಪ್ಪೇಗೌಡನಪುರಕ್ಕೆ, ಬೊಪ್ಪೇಗೌಡನಪುರದಿಂದ ಆದಿಹೊನ್ನಾಯ್ಕನ ಹಳ್ಳಿಗೆ, ಅಲ್ಲಿಂದ ನಿಡುಘಟ್ಟಕ್ಕೆ, ಚಿಕ್ಕಲ್ಲೂರಿಗೆ, ಕಪ್ಪಡಿಗೆ ಈ ಸ್ಥಳಗಳಲ್ಲಿ ಕಥೆ ಹರಿಯುತ್ತದೆ.

೩೧. ಪಠ್ಯ 'ಅ' ಪ್ರಕಾರ ಮಂಟೇಸ್ವಾಮಿಯವರು ಕುಂದೂರು ಬೆಟ್ಟದ ನೆತ್ತಿಮ್ಯಾಲೆ ನಿಂತ್ಕೊಂಡು ನಾಲ್ಕು ಮೂಲೆಯ ರಾಜ್ಯವ... ದಿಟ್ಟಿಸಿ ನೋಡುತ್ತಾರೆ. ಆಗ ಅವರಿಗೆ

ಕಾಡಂಕನಹಳ್ಳಿಯಲ್ಲಿ ಇರುವ ಮಡಿವಾಳ ಮಾಚಯ್ಯನ ಹಟ್ಟಿ ಮೊದಲಿಗೆ ಕಂಡಿತು, ಅದನ್ನು ಪಡೆದುಕೊಳ್ಳುತ್ತಾರೆ ಎಂದು ತಿಳಿದುಬರುತ್ತದೆ. ಆದರೆ 'ಒ' ಪಠ್ಯ ಮೊದಲು ಬೊಪ್ಪೇಗೌಡನ ಕುರಿ ಕೂಡುವ ಕೊಟ್ಟಿಗೆಯನ್ನು ಪಡೆದು ತನ್ನ ಶಿಶುಮಕ್ಕಳನ್ನು ಅದರ ಆಶ್ರಯದಲ್ಲಿ ಇಟ್ಟರು. ತದನಂತರ ದೊಡ್ಡಮ್ಮತಾಯಿಗೋಸ್ಕರ ಮಡಿವಾಳ ಮಾಚಯ್ಯನ ಕತ್ತೆ ಕಟ್ಟುವ ಕೊಟ್ಟಿಗೆಯನ್ನು ದಾನವಾಗಿ ಪಡೆದುಕೊಳ್ಳುತ್ತಾರೆ ಎಂಬ ಭಾಗ ಬರುತ್ತದೆ.

೩೨. ಸಿದ್ದಪ್ಪಾಜಿಯ ಸತ್ವಪರೀಕ್ಷೆ, ದಳವಾಯಿಯಾಗಿ ಅವನನ್ನು ಸ್ವೀಕರಿಸಿದ ಪರಿ, ಹಲಗೂರು ಚಿಲ್ಲಾಪುರದಲ್ಲಿ ಕಬ್ಬಿಣ ಭಿಕ್ಷೆಯ ಪವಾಡದ ಭಾಗವನ್ನು ನೀಲಗಾರರು ಅತ್ಯುತ್ಸಾಹದಿಂದ ಹಾಡುತ್ತಾರೆ. ಕಲ್ಯಾಣದ ಕಡೇಬಾಗಿಲಲ್ಲಿ ಕಾವಲುಗಾರನಾಗಿ ಧರೆಗೆದೊಡ್ಡವರಿಗೆ ಕಾಣಿಸಿಕೊಂಡ ಬ್ರಹ್ಮಚಾರಿಯೇ ಈ ಸಿದ್ದಪ್ಪಾಜಿ. ನಿಡುಘಟ್ಟದಲ್ಲಿ ಅನ್ನೋಜಿ ಮಗ ಬಾಚಿಬಸವಾಚಾರಿ ಈತನ ಮಡದಿಯಾದ ಮುದ್ದಮ್ಮ ಈ ದಂಪತಿಗಳಿಗೆ ಆರು ಜನ ಗಂಡು ಮಕ್ಕಳು ಹುಟ್ಟಿದ್ದರು. ಆದರೂ ಗಂಡ ಹೆಂಡತಿಗೆ ಒಂದೇ ಬಟ್ಟೆಯಾಗಿ ತಿನ್ನುವುದಕ್ಕೆ ಅನ್ನವಿಲ್ಲದೆ ಬಡತನದಲ್ಲಿ ಮುದ್ದಮ್ಮ ಅಯ್ಯೋ ಶಿವನೇ ಭಗವಂತನೇ ನನಗೆ ಇಷ್ಟೊಂದು ಮಕ್ಕಳನ್ನು ಕೊಟ್ಟೆ ಆದರೆ ಹೊಟ್ಟೆಗೆ ಅನ್ನಕೊಟ್ಟಿಲ್ಲವಲ್ಲ ತಂದೆ. ಹೀಗೆ ಗಂಡ ಹೆಂಡತಿ ಇಬ್ಬರೂ ಚಿಂತೆ ಮಾಡುತ್ತಾ ಬೇಡುವುದಕ್ಕೂ ಕಲ್ಯಾಣದಲ್ಲಿ ಕಾವಲುಗಾರನಾಗಿದ್ದ ಬ್ರಹ್ಮಚಾರಿ(ಕಟುಕರಸಂಗಯ್ಯ) ತನಗೆ ಮಾನವ ಜನ್ಮ ಬೇಡ ಹೊಸ ಜನ್ಮ ಕೊಡು ಎಂದು ಅಂಗಲಾಚುವುದಕ್ಕೂ ಸರಿಯಾಯಿತು. ಆಗ ಸ್ವಾಮಿಯವರು ಮುದ್ದಮ್ಮನ ಹೊಟ್ಟೆಯಲ್ಲಿ ಏಳನೆಯ ಮಗನಾಗಿ ಹುಟ್ಟುವಿಯಂತೆ ಎಂದು ಆಶೀರ್ವಚನ ನೀಡಿದರು.

ಈ ಕಡೆ ತಮ್ಮ ಜೀವನ ಹೇಗಾದರೂ ಹೋಗಲಿ ತಮ್ಮ ಮಕ್ಕಳ ಜೀವನಕ್ಕಾದರೂ ಕಷ್ಟಪಡಲೇ ಬೇಕು ಎಂದು ಭಾವಿಸಿ ಬಾಚಿಬಸವಾಚಾರಿ ತನ್ನ ಹೆಂಡತಿ ಮಕ್ಕಳ ಸಮೇತವಾಗಿ ಹುಟ್ಟಿದ ನಿಡುಘಟ್ಟವನ್ನು ಬಿಟ್ಟು ಮಾರಾಪುರಿಪಟ್ಟಣ ಮಾರಳ್ಳಿಗ್ರಾಮಕ್ಕೆ ಸೇರೊಕ್ಕಲಾಗಿ ಸೇರಿದಾಗ ಏಳನೆಯ ಮಗ ಕೆಂಪಣ್ಣ ಹುಟ್ಟಿದ ಮೇಲೆ ಬಡತನ ಬರಲಾಗಿ ಸಿರಿತನ ಮನೆಮಾಡುತ್ತದೆ ಎಂಬುದನ್ನು ಮುಖ್ಯ ಮತ್ತು ಹೆಚ್ಚುವರಿ ಪಠ್ಯಗಳೆಲ್ಲವೂ ತಿಳಿಸುತ್ತವೆ. 'ತ' ಪಠ್ಯದಲ್ಲಿ ಕೆಂಪಣ್ಣನ ಜನನ ಆದಿಹೊನ್ನಾಯಕನ ಹಳ್ಳಿಯಲ್ಲಿ ಆಗುತ್ತದೆ ಎಂದು ತಿಳಿಸಲಾಗಿದೆ.

೩೩.ಕಂಡಾಯದ ಬೆಳಕಿಕೊ ತಂಬೂರಿ ನಾದಕ್ಕೊ ಬಳೆ ಮುದ್ದಮ್ಮ ಹಾಲು ಕರೆಯುತ್ತಿದ್ದ ಕಾಮಧೇನು ಝುಲ್ಲಝುಲ್ಲನೇ ಬೆದರಿ ಟುಮ್ಮ ಟುಮ್ಮನೇ ಕುಣಿದು ಕರೆಹಂಡೆಯನ್ನು ಒದ್ದಿತು. ಹಂಡೆ ಒದ್ದೇಟಿಗೆ ಹಾಲೆಲ್ಲ ಭೂಮಿಗೆ ಚೆಲ್ಲೋಗಿ ಶರಣೆ ಮುದ್ದಮ್ಮ ಸಿಟ್ಟಿನಿಂದ ಹಾಳಾದ "ಮಂಟೇದಯ್ಯ" ಎಂದಳು. ಬೀಳು, ಒರಗು ಎಂಬರ್ಥದಲ್ಲಿ ಮಂಟ್ಕೋ, ಮಂಟುಕೋ ಎಂಬ ಶಬ್ದ ಬಳಕೆಯಲ್ಲಿದೆ. ಹಸು ಬೆದರಲು ಕಾರಣನಾದ ಜಂಗಮನಿಗೆ ಮಂಟುಕೊ ಎಂಬ ಮಾತನ್ನು ಮುದ್ದಮ್ಮ ಆಡಿದುದೇ ಹೊಸ ನಾಮಕರಣಕ್ಕೆ ಕಾರಣವಾಯಿತು. ಧರೆಗೆದೊಡ್ಡವರು ನಸು ನಗುತ್ತಾ 'ಮಂಟೇಸ್ವಾಮಿ'

ಎಂಬ ಹೆಸರನ್ನೇ ಸ್ವೀಕರಿಸಿದರು ಎಂಬುದನ್ನು 'ಅ,ಇ,ಉ,ಎ,ಐ,ಒ,ಔ' ಪಠ್ಯಗಳು ಮನವರಿಕೆ ಮಾಡಿಕೊಡುತ್ತವೆ.

೩೪. ಆದರೆ 'ಟ,ತ,ಪ' ಪಠ್ಯಗಳು ಈ ಮೇಲಿನ ಕಥಾ ಪ್ರಸಂಗ ನಡೆದದ್ದು ಮಾರಳ್ಳಿಯಲ್ಲಿ ಅಲ್ಲ ಅದು ನಡೆದದ್ದು ಆದಿಹೊನ್ನಾಯ್ಕನ ಹಳ್ಳಿಯಲ್ಲಿ ಎಂದೂ ಬಳೆಮುದ್ದಮ್ಮನ ವಂಶಸ್ಥರು ಆದಿಹೊನ್ನಾಯ್ಕನ ಹಳ್ಳಿಯಲ್ಲಿ ಇದ್ದಾರೆ ಎಂಬುದಾಗಿಯೂ ತಿಳಿಸುತ್ತದೆ.

೩೫. 'ಅ' ಪಠ್ಯ ಮಂಟೇಸ್ವಾಮಿ ಎಂಬ ಹೆಸರು ಬರುವುದಕ್ಕೆ ಮೊದಲು ಇದ್ದ ಹೆಸರುಗಳನ್ನು ಸಾದ್ಯಂತವಾಗಿ ವಿವರಿಸುತ್ತದೆ. ಪರಂಜ್ಯೋತಿಯವರು ಉತ್ತರದ ಹರಿಯೋ ಕೊಳದಲ್ಲಿ ಹುಟ್ಟಿದ್ದರಿಂದ "ಉತ್ತರಸಿದ್ದು" ಎಂಬ ನಾಮಕರಣವನ್ನು ಪಡೆದರು. ಕತ್ತಲ ರಾಜ್ಯವನ್ನು ದಿನಮಧ್ಯಾಹ್ನದಲ್ಲಿ ಬೆಳಕು ಮಾಡಿದುದರಿಂದ "ಪರಂಜ್ಯೋತಿ" ಎಂಬ ನಾಮಕರಣವನ್ನು ಪಡೆದರು. ಉಳುಮೆ ಮನೆಯೊಳಗೆ ಮೂರ್ತವಾಡಿ "ಉಳುಮೆಸಂಗಯ್ಯ" ಅಂತ ನಾಮಕರಣವನ್ನು ಪಡೆದರು. ಸಖ್ರಾಯಪಟ್ಟಣದ ಕ್ಷತ್ರಿಯ ಅರಸುಗಳಿಂದ "ರಾಜಬುದ್ಧಿ" ಎಂಬ ನಾಮಕರಣವನ್ನು ಪಡೆದರು. ವಿಜಯನಗರದ ಗಾರುಡಿಗರೊಂದಿಗೆ ಮೋಡಿ ಆಟ ಆಡಿ "ಘನಗಾರುಡಿಗರ ಗಂಡ" ಎಂಬ ನಾಮಕರಣವನ್ನು ಪಡೆದರು. ಶೀಲವಂತಪುರದಲ್ಲಿ ಬ್ರಾಹ್ಮಣರಿಗೆ ಪಂಚಾಂಗವನ್ನು ಕೊಟ್ಟಿದ್ದರಿಂದ "ಶೀಲವಂತಯ್ಯ" ಎಂಬ ನಾಮಕರಣವನ್ನು ಪಡೆದರು. ಕಾಗಿನೆಲೆಯಲ್ಲಿ "ರಾಜಗುರು" ಎಂಬ ನಾಮಕರಣವನ್ನು ಪಡೆದರು. ಬೊಮ್ಮಣಗುಡ್ಡೆಗೆ ಬಂದು "ಬೊಮ್ಮನಗುಡ್ಡಯ್ಯ" ಎಂಬ ನಾಮಕರಣವನ್ನು ಪಡೆದರು. ಮೈಸೂರು ಅರಮನೆಗೆ ಬಂದು "ಕಂಡಾಯದ ಒಡೆಯ, ಕಂಡಾಯದ ಮೂರ್ತಿ" ಎಂಬ ನಾಮಕರಣವನ್ನು ಪಡೆದರು. ಶ್ರೀರಂಗಪಟ್ಟಣದಲ್ಲಿ "ನಿಜಗುರು" ಎಂಬ ನಾಮಕರಣವನ್ನು ಪಡೆದರು. ಆದಿಹೊನ್ನಾಯ್ಕನ ಹಳ್ಳಿಯಲ್ಲಿ "ಚೆನ್ನಮಂಟೇಸ್ವಾಮಿ" ಎಂಬ ನಾಮಕರಣವನ್ನು ಪಡೆದರು.

ಹೀಗೆ ವಿವಿಧ ಸ್ಥಳಗಳಲ್ಲಿ ವಿವಿಧ ಹೆಸರುಗಳನ್ನು ಪಡೆದಿದ್ದರೂ ಕೊನೆಯಲ್ಲಿ ಬಳೆಮುದ್ದಮ್ಮನ ಮನೆಯಲ್ಲಿ ಪಡೆದ "ಮಂಟ್ಯೋ ಅಥವಾ ಮಂಟೇಸ್ವಾಮಿ" ಎಂಬ ಹೆಸರೇ ಶಾಶ್ವತವಾಗಿ ಇರಲಿ ಎಂದು ಶರಣೆ ಮುದ್ದಮ್ಮ ಕೊಟ್ಟ ಹೆಸರನ್ನು ಸಂತೋಷದಿಂದ ಸ್ವೀಕರಿಸುತ್ತಾರೆ ಎಂದು 'ಅ' ಪಠ್ಯ ಪ್ರತಿಪಾದಿಸುತ್ತದೆ.

೩೬.'ಎ' ಪಠ್ಯದ ಪ್ರಕಾರ ಅಧಿಪತಿಯಾಗಿ ಬಾಳುತ್ತಿದ್ದ ಕುರುಬೇಗೌಡನ ಏಳು ಊರುಗಳ ಪೈಕಿ – ಒಕ್ರಳ್ಳಿ, ಹೊನಗಳ್ಳಿ, ಹಳ್ಳದಾಸಳ್ಳಿ, ಮುಟ್ಟನಹಳ್ಳಿ, ಕೊಡಗನಹಳ್ಳಿ, ದೈವಪಟ್ಟಣ, ಕಂಚಗಳ್ಳಿ ಇವು ಮುಖ್ಯವಾದವು.

೩೭.ಸಿದ್ದಪ್ಪಾಜಿ ಸಾಲು ಪ್ರಾರಂಭವಾಗುವುದು ಚಿಕ್ಕಲ್ಲೂರು ಕ್ಷೇತ್ರದ ಮಾಹಿತಿಯಿಂದ. ಕೊಯಮತ್ತೂರು ಕೊಳ್ಳೇಗಾಲ ತಾಲ್ಲೂಕಿನ ಇರದಾಳು, ಬಾಳಗುಣ್ಸೆ, ಕೊತ್ನೂರು, ತೆಳ್ನೂರು, ಬಾಣೂರು, ಸುಂಡ್ರಳ್ಳಿ, ಅಂಕಣಪುರ ಮಧ್ಯೆ ಚಿಕ್ಕೇಗೌಡನದೊಡ್ಡಿಯೇ ಚಿಕ್ಕಲ್ಲೂರು ಕ್ಷೇತ್ರ ಎಂಬುದಾಗಿ ಮುಖ್ಯ ಪಠ್ಯಗಳಲ್ಲಿ ಬರುತ್ತದೆ.

೩೮.'ಕಲ್ಯಾಣಪಟ್ಟಣ ಹಾಳಾಗಿ ಹೋಗುತ್ತದೆ' ಅಥವಾ 'ಕಲ್ಯಾಣಪಟ್ಟಣ ಕಟುಕರ ಅಂಗಡಿ ಆಗುತ್ತದೆ' ಎಂಬ ಮಾತು ಎಲ್ಲಾ ಪಠ್ಯದಲ್ಲೂ ಕಂಡು ಬರುತ್ತದೆ.

೩೯.ಮಂಟೇಸ್ವಾಮಿಯವರು ವಿಜಯನಗರದಿಂದ ಕಾಗಿನೆಲೆಗೆ ಬಂದು ಬಸವಲಿಂಗಯ್ಯ ಮತ್ತು ಕಲ್ಯಾಣಮ್ಮ ಎಂಬ ಅರಸು ದಂಪತಿಗಳ ಒಬ್ಬಳೇ ಮಗಳನ್ನು 'ಕ್ವಾರಣ್ಯ' ಕೇಳುತ್ತಾರೆ. ಆ ಮಾತನ್ನು ಕೇಳಿದ ರಾಜ ಕೋಪದಿಂದ ಆಳುಗಳಿಗೆ ಹೇಳಿ "ಕತ್ತ ಮೇಲೆ ಗುದ್ದಿ ಆಚೆ ತಳ್ಳಿಸ್ತಾನೆ." ಇತ್ತ ಮಗಳಿಗೆ ಚಳಿಜ್ವರ ಬಂದು ಪ್ರಾಣಬಿಡುತ್ತದೆ. ಆಗ ಅರಸರು ಮಗಳನ್ನು ದುಃಖದಿಂದ ಒಪ್ಪಾ ಮಾಡಿ ಮನೆಗೆ ಬರುತ್ತಾರೆ. ಮಂಟೇಸ್ವಾಮಿಯವರು ಗೋರಿಯಿಂದ ಸತ್ತ ಮಗುವನ್ನು ಬದುಕಿಸಿ ಮಗುವಿನೊಡನೆ ಬಸವಲಿಂಗಯ್ಯನ ಮನೆಬಾಗಿಲಿಗೆ ಹೋದಾಗ ರಾಜನು 'ಈ ಮಗು ನಮ್ಮದು' ಎನ್ನುತ್ತಾರೆ. ಆಗ ಮಂಟೇಸ್ವಾಮಿಯವರು "ನಿಮ್ಮ ಮಗಳಾದರೆ ನೀವು ಕರೆದುಕೊಳ್ಳಿ" ಎಂದು ಹೇಳಿದಾಗ ಮಗು ತಂದೆ ತಾಯಿಯ ಕಡೆ ಗಮನ ಹರಿಸುವುದಿಲ್ಲ. ಆಗ ಸ್ವಾಮಿಯವರು 'ದುಃಖ ಮಾಡಬೇಡಿ. ಈ ಹೆಣ್ಣುಮಗುವನ್ನು ನಾವು ದೇವರು ಮಾಡಿ ನಿಲ್ಲಿಸುತ್ತೀವಿ' ಎಂದು ದಾನ ಪಡೆಯುತ್ತಾರೆ. ಈ ಪ್ರಸಂಗ ವಡ್ಡಾರಾಧನೆಯ ಸುಕುಮಾರಸ್ವಾಮಿ ಕತೆಯನ್ನು ನೆನಪಿಗೆ ಬರುತ್ತದೆ. ಪಠ್ಯ 'ಐ,ಓ'ಗಳಲ್ಲಿ ಕಂಡುಬರುವ ಪ್ರಸಂಗ ಇದು.

ಮಲ್ಲಿಗೆ ಮಹದೇವಮ್ಮ ತನ್ನ ದೇಹವನ್ನು ಸಮರ್ಪಿಸಿ ಕಾವಿ ಮಡಿ ಮಾಡುವುದು, ಮಾಚಯ್ಯ ಮಗನನ್ನೇ ಕೊಯ್ದು ಧರೆಗೆದೊಡ್ಡವರಿಗೆ ಬಡಿಸುವುದು. ಈ ಪ್ರಸಂಗಗಳು ಅರವತ್ಮೂರು ಪುರಾತನರ ಕತೆಗಳಲ್ಲಿ ಬರುವ 'ಸಿರಿಯಾಳ'ನ ಕತೆಯನ್ನು ನೆನಪಿಸುತ್ತವೆ.

ಸತ್ತ ಹೆಣವನ್ನು ಮಂಟೇಸ್ವಾಮಿಯವರು ಬದುಕಿಸುತ್ತಾರೆ. ಸತ್ತ ಪ್ರಾಣಿಗಳನ್ನು ತಿನ್ನುವ ಪರಿಪಾಠ ಇತ್ತು ಎಂಬುದು ಇದರಿಂದ ವೇದ್ಯವಾಗುತ್ತದೆ.

೪೦. ಪಠ್ಯ 'ಟ,ತ,ಪ' ದಲ್ಲಿ ಸಖ್ರಾಯಪಟ್ಟಣದಲ್ಲಿ ಇಬ್ಬರು ದೊರೆಗಳು ಇದ್ದರು ಎಂಬ ಸಂಗತಿ ಇದ್ದರೆ, 'ಅ,ಇ,ಉ,ಎ' ಪಠ್ಯಗಳಲ್ಲಿ ಸಖರಾಯಪಟ್ಟಣದ ರಾಜನಿಗೆ ಅವಳಿಜವಳಿ ಮಕ್ಕಳು ಇದ್ದರು ಎಂದು ನಿರೂಪಿಸಲಾಗಿದೆ. ಹಿರಿಯ ಮಗನ ಹೆಸರು ಬಸವರಾಜೇಂದ್ರ ಸ್ವಾಮಿಗಳು, ಕಿರಿಯ ಮಗನ ಹೆಸರು ರಾಜಪಟ್ಟದ ವೀರಭದ್ರಸ್ವಾಮಿ ಎಂಬ ನಾಮಕರಣವಿದ್ದುದಾಗಿ ತಿಳಿಸುತ್ತವೆ.

೪೧. ಚೆನ್ನಪಟ್ಟಣದ ಕೂರ್ಮಗೆರೆಯಲ್ಲಿ ರಾಜ ಮನೆತನಕ್ಕೆ ಸೇರಿದ ರಾಚಯ್ಯನವರು ಆಡು ಕಾಯ್ಕೊಂಡು ಒಂದು ಮಠ ಮಾಡಿಕೊಂಡಿರುತ್ತಾರೆ. ಆ ಮಠಕ್ಕೆ ಬಂದ ಧರೆಗೆದೊಡ್ಡವರಿಗೆ 'ಚೆನ್ನಸಂಗಯ್ಯ' ಎಂಬ ನಾಮಕರಣವಾಯಿತು ಎಂದು 'ಕ,ಚ,ಟ' ಪಠ್ಯಗಳು ತಿಳಿಸುತ್ತವೆ. ಚೆನ್ನಪಟ್ಟಣದ ಹಳೆ ಮಠದವರು ಹೇಳುವ ಪ್ರಕಾರ ರಾಜಸ್ಥಾನದಿಂದ ರಾಜಾಸಿಂಗ್ ಅವರು ಮೈಸೂರು ದಸರಾದಲ್ಲಿ ಮಂಟೇಸ್ವಾಮಿಯುವರಿಗೆ ಭೇಟಿಯಾಗುತ್ತಾರೆ. ಆಗ ರಾಜಾಸಿಂಗ್‌ನನ್ನು ಸ್ವಾಮಿಯವರು ರಾಜಸ್ಥಾನಕ್ಕೆ ಹೋಗುವುದು ಬೇಡ. ಚೆನ್ನಪಟ್ಟಣದಲ್ಲಿ ವಾಸಮಾಡಿಕೊಂಡಿರಿ ಎಂದು ಅವರ ಕೈಗೆ ಕಪ್ಪುಧೂಳ್ತವನ್ನು

ಕೊಟ್ಟು ಕಳುಹಿಸುತ್ತಾರೆ. ಆ ವೇಳೆಗೆ ಚಾಮರಾಜ ಒಡೆಯರು ಬೆನ್ನುಪನಿ ರೋಗದಿಂದ ನರಳುತ್ತಿದ್ದರು. ಅರಣ್ಯಮಾರ್ಗವಾಗಿ ರಾಜಾಸಿಂಗ್ ಹೋಗುತ್ತಿರಬೇಕಾದರೆ ಕಪ್ಪುಧೂಳ್ತದ ಮಹಿಮೆಯಿಂದ ರಾಜನ ನೋವು ಕಡಿಮೆ ಆಗುತ್ತದೆಯಂತೆ. ಇದನ್ನು ಅರಿತ ರಾಜ ದಾರಿಯಲ್ಲಿ ಹೋಗುತ್ತಿದ್ದ ರಾಜಾಸಿಂಗ್‌ನನ್ನು ಕರೆದು ನನ್ನ ನೊವು ವಾಸಿಯಾಗಿದೆ. ನಿನ್ನ ಕೈಯಲ್ಲಿ ಏನಿದೆ ? ಎಂದು ಕೇಳಿದಾಗ 'ಸ್ವಾಮಿ ನನ್ನ ಕೈಯಲ್ಲಿ ಏನೂ ಇಲ್ಲ ಈ ಕಪ್ಪುಧೂಳ್ತವನ್ನು ಬಿಟ್ಟರೆ' ಎಂದನು. ಕಪ್ಪುಧೂಳ್ತವನ್ನು ಪಡೆದು ಗಾಯಗಳ ಮೇಲೆ ಸಿಂಪಡಿಸಿದಾಗ ಗಾಯಗಳೆಲ್ಲವೂ ವಾಸಿಯಾಗುತ್ತದೆ. ಆಗ ರಾಜ ಸಂತೋಷದಲ್ಲಿ ನಿನಗೆ ಏನು ಬೇಕು ಎಂದು ರಾಜಾಸಿಂಗ್‌ನನ್ನು ಕೇಳುತ್ತಾರೆ. ನಮ್ಮ ಗುರುಗಳಿಗೆ ಮನೆ ಬೇಕು ಎಂದು ಕೇಳಿದಾಗ ತಮ್ಮ ಹಳೆಕೋಟೆ ಮಠವನ್ನು ಬಿಟ್ಟುಕೊಟ್ಟರು ಎಂಬುದಾಗಿ ಹೇಳುತ್ತಾರೆ.

೪೨. ಧರೆಗೆದೊಡ್ಡವರು ಮುದ್ದೋಜಿ ಮತ್ತು ಮುದ್ದಮ್ಮ ಇವರ ಸತ್ವಪರೀಕ್ಷೆಯನ್ನು ಮಾಡಿದ ಮೇಲೆ ಇವರ ಕೊನೆಯ ಮಗನಾದ ಕೆಂಪಣ್ಣನ ಸತ್ವಪರೀಕ್ಷೆಗೆ ಕುಲುಮೆಗೆ ಬಂದು ಒಂದು ಬೆಂಕಿಕೆಂಡವನ್ನು ದಾನ ಕೇಳುತ್ತಾರೆ. ಕೆಂಪಣ್ಣ ಅಹಂಕಾರದ ಮಾತುಗಳನ್ನು ಆಡಿ ಕೊನೆಗೆ ಇಕ್ಕಳದಲ್ಲಿ ಕೆಂಡವನ್ನು ಎತ್ತಿ ಮಂಟೇಸ್ವಾಮಿಯವರ ಅಂಗೈಮೇಲೆ ಸುರಿಯುತ್ತಾನೆ. ತನ್ನ ಅಂಗೈ ಮೇಲೆ ಬಿದ್ದ ಕೆಂಡಗಳನ್ನು ಚಿಲುಮೆಗೆ ತುಂಬಿ ಮೂರು ದಮ್ಮು ಭಂಗಿ ಬೋಧನೆ ಮಾಡುತ್ತಾರೆ. ಅಷ್ಟರೊಳಗೆ ನೀಲಿಗ್ಯಾನದಲ್ಲಿ ಉರುಸಂಗಿ ಕೊರಡವನ್ನು ಕೊಟ್ಟು ಬರಗನ ಮೇಲೆ ಕೂರಿಸುತ್ತಾರೆ. ಅದು ಆಕಾಶಕ್ಕೆ ಹಾರಿ ಚಂದ್ರಮಂಡಲ ಮತ್ತು ಸೂರ್ಯಮಂಡಲವನ್ನು ಸುತ್ತಿಸಿ ಕೊನೆಗೆ ಕಾಳಿಂಗನಗವಿಯಲ್ಲಿ ೧೨ ವರ್ಷಗಳ ಕಾಲ ಕೂಡಿ ಹಾಕಿ ಬೊಪ್ಪೇಗೌಡನಪುರಕ್ಕೆ ಬರುತ್ತಾರೆ. ಈ ಭಾಗ ಪಠ್ಯಗಳಾದ ' ಅ,ಇ,ಉ,ಎ,ಐ' ಗಳಲ್ಲಿ ಕಾಣಸಿಗುತ್ತದೆ.

೪೩. ಕೆಂಪಣ್ಣನನ್ನು ಕಾಳಿಂಗನಗವಿಯಲ್ಲಿ ಕೂಡಿ ಹಾಕಿ ಬೊಪ್ಪೇಗೌಡನಪುರಕ್ಕೆ ಹೋಗುತ್ತಿದ್ದ ನಡುಹಾದಿಯಲ್ಲಿ ವ್ಯಕ್ತಿ ಒಬ್ಬ ಹೆಗಲ ಮೇಲೆ ಹೆಂಡತಿಯನ್ನು ಕೂರಿಸಿಕೊಂಡು ತನ್ನ ತಾಯಿಯ ಕೈಯಲ್ಲಿ ಹೆಂಡತಿಯ ಪಾದರಕ್ಷೆಯನ್ನು ಹಿಡಿಸಿಕೊಂಡು ಬರುತ್ತಿರುವ ದೃಶ್ಯವನ್ನು ಮಂಟೇಸ್ವಾಮಿಯವರು ಕಂಡರು. ಅವನೇ ಕಲಿಪುರುಷ ಎಂಬುದಾಗಿ ತಿಳಿದುಕೊಂಡು ತನ್ನ ಮನಸ್ಸಿನಲ್ಲಿ ಮುಂದೆ ಬರುವ ಘೋರ ದಿನಗಳನ್ನು ನೆನೆದು ಪಾತಾಳಬಾವಿಯಲ್ಲಿ ಪವಡಿಸಲು ನಿರ್ಧರಿಸುತ್ತಾರೆ ಎಂದು ಪಠ್ಯಗಳಾದ 'ಟ,ತ,ಪ' ಗಳಲ್ಲಿ ನಿರೂಪಿತವಾಗಿದೆ.

ಪಠ್ಯ 'ಅ,ಇ,ಉ,ಎ,ಐ,ಒ' ಗಳ ಪ್ರಕಾರ ಮಂಟೇಸ್ವಾಮಿಯವರು ಕೆಂಪಣ್ಣನನ್ನು ಕಾಳಿಂಗನ ಗವಿಯಲ್ಲಿ ಕೂಡಿಹಾಕಿದ ಮೇಲೆ ಮಡಿವಾಳ ಮಾಚಯ್ಯನನ್ನು ತನ್ನ ಜೊತೆಯಲ್ಲಿ ಕರೆದುಕೊಂಡು ತಲಕಾಡು ಮಡುವಿಗೆ ಸ್ನಾನಕ್ಕೆ ಹೋಗುತ್ತಾರೆ. ಸ್ವಾಮಿಯವರು ತಲಕಾಡು ಮಡುವಿನಲ್ಲಿ ಆತ್ಮಲಿಂಗಕ್ಕೆ ಪೂಜೆಯನ್ನು ಮಾಡಿ ಹೊರಡುವುದಕ್ಕೆ ಸಿದ್ಧರಾದಾಗ ಮಡಿವಾಳಮಾಚಯ್ಯ ಆರುಹೆಜ್ಜೆ ಮೂರು ಗೇಣು ಮಡಿಯ ಮೇಲೆ ಬರುತ್ತಿರಬೇಕಾದರೆ

ಆಗ ತೆಂಕಲರಾಜ್ಯದಿಂದ ಬಡಗಲರಾಜ್ಯಕ್ಕೆ ಯಾರೋ ಒಬ್ಬ ಬರುತ್ತಿದ್ದ. ತನ್ನ ಹೆಂಡತಿಯನ್ನು ಕುದುರೆ ಮೇಲೆ ಕೂರಿಸಿಕೊಂಡು ಜನ್ಮ ನೀಡಿದ ತಂದೆ ತಾಯಿಗಳನ್ನು ಕಾಲ್ನಡಿಗೆಯಲ್ಲಿ ನಡಸ್ಕೊಂಡು ತನ್ನ ಹೆಂಡತಿಯ ಚಮ್ಮಾಳಿಗೆಯನ್ನು ತಾಯಿ ಕೈಯಲ್ಲಿ ಹೊರಿಸ್ಕೊಂಡು, ಗಂಡ ಹೆಂಡತಿ ಮಲಗಿ ಸುಖಪಡುವಂತಹ ಹಾಸಿಗೆ ದಿಂಬನ್ನು ತಂದೆ ಕೈಯಲ್ಲಿ ಹೊರಿಸ್ಕೊಂಡು ಬರುತ್ತಿದ್ದುದನ್ನು ಕಂಡು ಇವನೇ ಕಲಿಪುರುಷ ಎಂದು ಬಗೆಯುತ್ತಾರೆ. ಆಗ ಸ್ವಾಮಿಯವರು ಮನದಲ್ಲೇ ನಾಳೆ ಬರುವ ಕಲಿಯನ್ನು ಕಣ್ಣಿಂದ ನೋಡಬಾರದು; ಕಣ್ಣಿಂದ ಮರೆಯಾಗಬೇಕೆಂದು ಗಕ್ಕನೇ ಕೆಳಗೆ ಕುಳಿತುಕೊಂಡರು. ಆಗ ಮಾಚಯ್ಯ ನನ್ನ ನಡೆಯಲ್ಲಿ ತಪ್ಪಾಯಿತಾ ? ನನ್ನ ನುಡಿಯಲ್ಲಿ ತಪ್ಪಾಯಿತಾ ? ಎಂದು ಮಡಿವಾಳ ಕೇಳಿದಾಗ ಸ್ವಾಮಿಯವರು, ಘನಶರಣ ನಿನ್ನಲ್ಲಿ ತಪ್ಪಿಲ್ಲ. ಯಾವನೋ ಒಬ್ಬ ಬರುತ್ತಿದ್ದಾನೆ ಅವನು ಒಳ್ಳೆಯವನಾದರೆ ದಡದಾಟಿಸು, ಕೆಟ್ಟವನಾದರೆ ಅಲ್ಲೇ ಮುಳುಗಿಸಿಬಿಡು' ಎಂದು ಮೂರು ಹಿಡಿ ಮರುಳನ್ನು ಮಂತ್ರಿಸಿ ಕೊಡುತ್ತಾರೆ ಎಂಬ ಪ್ರಸಂಗ ನಿರೂಪಿತವಾಗಿದೆ.

೪೪. 'ಇ' ಪಠ್ಯದಲ್ಲಿ ಕಲಿಪುರುಷ ಮತ್ತು ಆತನ ಹೆಂಡತಿ ಮುಳುಗಿ ಹೋದಾಗ ಕಲಿಪುರುಷನ ತಂದೆ ತಾಯಿಗಳು 'ನನ್ನ ಮಗ ಒಳ್ಳೆಯವನೋ ಕೆಟ್ಟವನೋ ಗೊತ್ತಿಲ್ಲ. ಆದರೆ ನಮ್ಮನ್ನು ಸಾಕುತ್ತಿದ್ದ. ಈಗ ನಮ್ಮನ್ನು ನೋಡುವವರು ಯಾರು ಸ್ವಾಮಿ' ಎಂದು ಅಂಗಲಾಚಿದರು. ಆಗ ಅವರಿಗೆ ಸ್ವಾಮಿಯವರು ತಲಕಾಡಿನಲ್ಲಿ ಮೂರು ಲಿಂಗ ಇದೆ ಅದರಲ್ಲಿ ನೀವು ಎರಡು ಲಿಂಗ ಒಡೆದು ಮೂಡ್ಕೊಳ್ಳಿ ಎಂದು ಆಶೀರ್ವದಿಸುತ್ತಾರೆ. ಐದು ಕಾರ್ತಿಕಾ ಐದು ಶ್ರಾವಣ ಹುಟ್ಟಿದಂತಹ ವರ್ಷದಲ್ಲಿ 'ಪಂಚಲಿಂಗ ದರ್ಶನ' ಅಂತ್ಹೇಳಿ ಜಾತ್ರೆ ನಡೆಯಲಿ ಆಗ ನಿಮಗೂ ಪೂಜೆ ನಡೆಯುತ್ತದೆ ಎಂದರು. ಈಗಲೂ ಈ ಪರಂಪರೆ ಜೀವಂತವಾಗಿ ನಡೆಯುತ್ತಿದೆ. ೧೨ವರ್ಷಕ್ಕೊಮ್ಮೆ ಪಂಚಲಿಂಗದರ್ಶನ ನಡೆಯುವುದು ರೂಢಿ. ಆದರೆ ಈ ವರ್ಷ(೨೦೦೮)ದಲ್ಲಿ ನಡೆಯುವ ಪಂಚಲಿಂಗ ದರ್ಶನ ಮೂರು ವರ್ಷಕ್ಕೆ ಬಂದಿದೆ. ಇದೊಂದು ವಿಶೇಷ. ಕಡಿಮೆ ವರ್ಷಕ್ಕೆ ಪಂಚಲಿಂಗದರ್ಶನ ಬಂದಿರುವುದು ಇದೇ ಮೊದಲು ಎಂಬುದಾಗಿ ಹಿರಿಯರು ಹೇಳುತ್ತಾರೆ.

೪೫. ಕೆಂಪಣ್ಣನಿಗೆ ನೀಲಗಾರ ದೀಕ್ಷೆಯನ್ನು ಕೊಡಿಸಲು ಸಜ್ಜಾದ ಕಾರ್ಯಕ್ರಮಕ್ಕೆ ಎಲ್ಲಾ ಶರಣರುಗಳನ್ನು ದೊಡ್ಡಮ್ಮತಾಯಿ ಬರಮಾಡಿಕೊಳ್ಳುತ್ತಾಳೆ. ಕೆಂಪಣ್ಣನನ್ನು ಕೆರೆಯಲ್ಲಿ ಸ್ನಾನ ಮಾಡಿಸಿ ದೇಹ ಶುದ್ಧ ಮಾಡಿ. ಗೋಮೂತ್ರವನ್ನು ಕುಡಿಸಿ ಜನ್ಮ ಶುದ್ಧ ಮಾಡುವ ಆನಂತರ ಹಾಲುಮತದವರ ಹಟ್ಟಿಗೆ ಕರ್ಕೊಂಡು ಬಂದು ಸ್ವಾಮಿ ಮುಂದೆ ಕೂರಿಸಿ ಮಂತ್ರೋಪದೇಶವನ್ನು ಪಡೆದು ಅವರ ಕೈಯಾರೆ 'ನೀಲರುದ್ರಾಕ್ಷಿ'ಯನ್ನು ಕತ್ತಿಗೆ ಕಟ್ಟಿಸಿಕೊಳ್ಳುತ್ತಾರೆ. ಈ ಪ್ರಸಂಗವನ್ನು ಎಲ್ಲಾ ಪಠ್ಯಗಳು ತಿಳಿಸುತ್ತವೆ. ಈಗಲೂ ಮಂಟೇಸ್ವಾಮಿಯ ಶಿಶುಮಕ್ಕಳು ನೆಲೆಸಿರುವ ಪುಣ್ಯಕ್ಷೇತ್ರಗಳಲ್ಲಿ ನೀಲಗಾರ ದೀಕ್ಷೆ ಬಹಳ ವಿಜೃಂಭಣೆಯಿಂದ ಜರುಗುತ್ತದೆ.

೪೬. ಪತ್ಯ 'ಉ,ಎ,ಒ' ದಲ್ಲಿ ಮಾರಿಯರ ಒಂದು ಪಟ್ಟಿಯೇ ಸಿಗುತ್ತದೆ. ಬೆಟ್ಟದಚಾಮುಂಡಿ, ಉತ್ತನಳ್ಳಿ ಉರುಕಾತಿ, ಕೊತ್ತತ್ತಿಜ್ಯಾಲಕ್ಕಮ್ಮ, ಕ್ವಾಡಂಬಳ್ಳಿ ಬಿಸಿಲಮಾರಿ, ಸಾಲಲ ಹೊನ್ನಾದೇವಿ, ಕಬ್ಬಳದ ಕರಿದುರ್ಗಿ, ಹೆಬ್ಬೆಟ್ಟದ ಹಿರಿಯ ಮಾರಿಯರು ಕಂಡುಬಂದರೆ, ಪತ್ಯ 'ಅ,ಇ' ಪ್ರಕಾರ ಸ್ವಾಮಿಯವರಿಗೆ ಹನ್ನೆರಡು ಕಟ್ಟು ಭಂಗಿಸೊಪ್ಪು ಮೂರು ದಮ್ಮಿಗೆ ಸಾಲಲಿಲ್ಲ, ಎರಡೂವರೆ ದಮ್ಮಿಗೆ ಆಯಿತಂತೆ. ಭಂಗಿಕುಡಿದ ಗ್ಯಾನದಲ್ಲಿ ಗುರುಗಳಿಗೆ ದಿಕ್ಕೇ ಪಲ್ಲಟವಾಗಿ ೭೭೧ ಜನ ಮಾರಿಯರನ್ನು ಕೂಗುತ್ತಾರೆ. ಅವರಲ್ಲಿ ಮುಖ್ಯರಾದವರು ಉಜ್ಜೈನಿ ಉರುಕಾತಿ, ನಿಡುಸಲೆ ಚೌಡಮ್ಮ, ಮದ್ದೂರು ಮಾರಮ್ಮ, ಮೆಣಸಿಗೆರೆ ಮಾರಮ್ಮ, ಕಾರ್ಕಳ್ಳಿಯ ಮಾರಿ, ದಂಡಿನ ಮಾರಿ, ಒಲಗೆರೆ ಹುಚ್ಚಮ್ಮ, ಪಟ್ಲದಮಾರಿ, ಕುಲ್ಕುಣಿಮಾರಿ, ಹೆಗ್ಗೂರು ಮಾರಮ್ಮ, ಕಿರುಗಾವಲು ಕ್ವಾರಕಾದೇವಿ, ಬೆಂಡ್ರವಾಡಿ ಮಾರಿ, ಚಾಮನಳ್ಳಿ ಮಾರಿ, ಬನ್ನೂರು ಹೇಮಾದ್ರಿ, ಸೋಸಲೆ ಹೊನ್ನಾದೇವಿ, ಮೂಗೂರು ತಿಬ್ಬಾದೇವಿ, ಕೊಳ್ಳೇಗಾಲದ ಕರಿದುರ್ಗಿ, ಸಿದ್ದಯ್ಯನಪುರದ ಮಾರಿ, ಮಧುವನ ಹಳ್ಳಿ ಮಾರಿ, ಕಣ್ಣೂರು ಮಾರಿ, ಹನೂರು ಬೆಟ್ಟದ ಅರಸಿ, ಬೆಳಕವಾಡಿ ಮಂದಲಮಾರಿ, ಕುಂದೂರು ಕುಂಡುಮಾರಿ, ಪಾಳ್ಯದ ಸೀಗಮಾರಿ, ಲಂಬಾಣಿಗರ ಮಾರಮ್ಮ, ಶಿವನಸಮುದ್ರದ ಮಾರಿ, ತಲಕಾಡುಬಂಡರಸಿ, ದೂರದ ದುಬ್ಬಕ್ಕ, ಕರಿಗ್ವಾರದ ಮಾರಿ, ಮಾರಿಮಾರಿಯರಿಗೆಲ್ಲ ವಾಂತಿಭೇದಿ ಮಾರಿ, ಬಿಳಿಗ್ವಾರದ ಮಾರಿ, ಬೆಟ್ಟದ ಅರಸಿ ಚಾಮುಂಡಿ ಹೀಗೆ ಸುತ್ತಮುತ್ತಿನ ಮಾರಿಯರು ಮಂಟೇಸ್ವಾಮಿಯವರ ನೆರವಿಗೆ ಬರುತ್ತಾರೆ.

೪೭. ಪತ್ಯ 'ಅ' ಭಾಗದಲ್ಲಿ ರಾಚಪ್ಪಾಜಿ ಗುರುಗಳ ಆಜ್ಞೆಯ ಮೇರೆಗೆ ಕಪ್ಪಡಿಯತ್ತ ಪಯಣ ಬೆಳೆಸುತ್ತಾರೆ. ಬೊಪ್ಪಣಪುರ, ಬನ್ನೂರು ಮಾರ್ಗವಾಗಿ ಮೈಸೂರಿಗೆ ಬರುತ್ತಾರೆ. ಆಗ ಮೈಸೂರು ಒಂದು ಚಿಕ್ಕ ರಾಜ್ಯವಾಗಿದ್ದು ಕಾರುಗಳ್ಳಿಯ ಹಂಪಣ್ಣನಾಯಕ ಅತ್ಯಂತ ಪ್ರಬಲನಾಗಿದ್ದ ಪಾಳೆಯಗಾರ ಎಂಬುದನ್ನು ಈ ಪತ್ಯ ದೃಢಪಡಿಸುತ್ತದೆ. ಮೈಸೂರು ರಾಜರು ರಾಚಪ್ಪಾಜಿಯ ನೆರವನ್ನು ಪಡೆದು ಹಂಪಣ್ಣ ನಾಯಕನನ್ನು ಗೆಲ್ಲುತ್ತಾರೆ ಎಂಬ ಸಂಗತಿಯನ್ನು 'ಇ' ಪತ್ಯ ತಿಳಿಸುತ್ತದೆ. ಇದೇ ಪತ್ಯದಲ್ಲಿ ರಾಚಪ್ಪಾಜಿಯವರು ಮೈಸೂರು ಏಳಿಗೆಯಾಗಲಿ ಕಾರುಗಳ್ಳಿ ಹಾಳಾಗಲಿ ಎಂಬ ಶಾಪವನ್ನು ಕೊಡುವ ಭಾಗವೂ ಬರುತ್ತದೆ. ಇದೇ ರೀತಿ ಮಂಟೇಸ್ವಾಮಿಯವರು ಒಂದು ಶಾಪ ಕೊಡುತ್ತಾರೆ "ಮಾರೇಹಳ್ಳಿ ಹಾಳಾಗಲಿ, ಮಳವಳ್ಳಿ ಏಳಿಗೆ ಆಗಲಿ" ಎಂಬ ಪ್ರಸಂಗ 'ಔ' ಪತ್ಯದಲ್ಲಿ ಬರುತ್ತದೆ. ಇವೆಲ್ಲವನ್ನೂ ಗಮನಿಸಿದಾಗ ಮಂಟೇಸ್ವಾಮಿ ಕಾವ್ಯಕ್ಕೆ ಇತಿಹಾಸದ ಚಾಪು ಇರುವುದನ್ನು ನೋಡಬಹುದು. ಏನೇ ಇರಲಿ 'ಇತಿಹಾಸಕ್ಕಿಂತಲೂ ಪರಂಪರೆ ಬಹಳ ದೊಡ್ಡದು' ಎಂಬ ಸತ್ಯವನ್ನು ಮಂಟೇಸ್ವಾಮಿ ಕಾವ್ಯ ಸಾದರಪಡಿಸುತ್ತದೆ.

೪೮. ದೊಡ್ಡಮ್ಮತಾಯಿಯನ್ನು ಮಂಟೇಸ್ವಾಮಿಯವರು ಕಾಗಿನೆಲೆಯಲ್ಲಿ ಶಿಶುಮಗಳಾಗಿ ಪಡೆಯುತ್ತಾರೆ ಎಂಬುದನ್ನು 'ಕ,ಚ' ಪತ್ಯಗಳು ಹೇಳುತ್ತವೆ. ದಕ್ಷಿಣ ಕರ್ನಾಟಕದ ಹೆಚ್ಚಿನ ಪತ್ಯಗಳು ದೊಡ್ಡಮ್ಮತಾಯಿಯನ್ನು ಮೈಸೂರಿನಲ್ಲಿ ಶಿಶುಗಳನ್ನಾಗಿ

ಪಡೆಯುತ್ತಾರೆ ಎಂದೇ ಹೇಳುತ್ತವೆ. ಕಾರುಗಳ್ಳಿ ಮಾರನಾಯಕ ಮಹಾರಾಜರಿಗೆ 'ನಿಮ್ಮ ಮಗಳನ್ನು ನಮ್ಮ ಮಗನಿಗೆ ಕೊಡಬೇಕೆಂದು ಪಟ್ಟು ಹಿಡಿಯುತ್ತಾನೆ. ಆಗ ಭಿಕ್ಷೆಗೆ ಬಂದ ಸ್ವಾಮಿಯವರಿಗೆ ಮಹಾರಾಣಿ ವಿವರವಾಗಿ ಮಗಳ ವಿಷಯವನ್ನು ಹೇಳುತ್ತಾಳೆ. ನಾವು ಅರಸುಗಳು, ಅವರು ನಾಯಕರು ನಮ್ಮ ಮಗಳನ್ನು ಹೇಗೆ ಕೊಡುವುದು ಈ ಸಂದಿಗ್ಧ ಸ್ಥಿತಿಯಲ್ಲಿದ್ದೇವೆ ಎಂದಾಗ ನಿಮ್ಮ ಮಗಳನ್ನು ನಮಗೆ ಶಿಶುಮಗಳನ್ನಾಗಿ ಕೊಡಿ ಎಂದು ಕೇಳಿದಾಗ ಮಹಾರಾಣಿ ನಾಯಕರಿಗೆ ಕೊಡುವುದಕ್ಕೆ ಬದಲು ನಿಮಗೆ ದಾನಕೊಡುತ್ತೇವೆ ಎಂದು ಹೇಳಿ ಕೊಡುತ್ತಾರೆ ಎಂಬ ಒಂದು ಪ್ರಸಂಗ ಬರುತ್ತದೆ.

೪೯. ಕಾವಿ ಮಡಿ ಮಾಡುವ ಪ್ರಸಂಗ 'ಅ,ಇ,ಉ,ಎ,ಐ,ಒ,ಔ' ಈ ಪಠ್ಯಗಳಲ್ಲಿ ಒಂದೇ ರೀತಿಯಾಗಿದೆ. ಮಾಚಯ್ಯ ತನ್ನ ಮಡದಿಯಾದ ಮಲ್ಲಿಗೆ ಮಹದೇವಿಯನ್ನು ಕೊಂದು ರಕ್ತವನ್ನು ಪಾನಬಟ್ಟಲಿನಲ್ಲಿ ತುಂಬ್ಕೊಂಡು ಆ ರಕ್ತದಲ್ಲಿ ಕಾವಿ ಬಟ್ಟೆಯನ್ನು ಅದ್ದಿ ಕಾವಿ ಮಡಿ ಮಾಡುತ್ತಾನೆ. ಆಗ ಅದರಲ್ಲಿದ್ದ ಕೋಟ್ಯಾನುಕೋಟಿ ಜೀವರಾಶಿಗಳು ಸಾಯೋದಿಲ್ಲ. ವ್ಯವಸಾಯಕ್ಕೆ ಎಲ್ಲಾ ಕ್ರಿಮಿ ಕೀಟಗಳು ಬೆಳೆಗೆ ಸಹಾಯಕಾರಿ ಎಂಬುದನ್ನು ಮಂಟೇಸ್ವಾಮಿಯವರು ಇದರ ಮೂಲಕ ಹೇಳುತ್ತಿದ್ದಾರೇನೋ ! ಎಂಬುದು ನಮಗೆ ಗುಮಾನಿ ಹುಟ್ಟಿಸುತ್ತದೆ. ಈಗಿನ ಶೂನ್ಯ ಬಂಡವಾಳ ವ್ಯವಸಾಯ ಇದನ್ನೇ ತಿಳಿಸುತ್ತದೆ.

೫೦. ಪಠ್ಯ 'ಟ' ವು ಮಾಚಯ್ಯನ ಬಲತೊಡೆಯ ರಕ್ತವನ್ನೂ ಮಲ್ಲಿಗೆ ಮಹದೇವಿಯ ಎಡತೊಡೆಯ ರಕ್ತವನ್ನೂ ಬಸ್ಕೊಂಡು ಇಬ್ಬರ ರಕ್ತದಿಂದ ಕಲಪಡಿಯನ್ನು ಮಾಡಿ ಪರಂಜ್ಯೋತಿಯವರ ಶಿವಕಂತೆಯನ್ನು ಮಡಿಮಾಡುತ್ತಾರೆ ಎಂಬ ಪ್ರಸಂಗ ಬರುತ್ತದೆ.

ನನ್ನ ಬಲತೊಡೆಯ ರಕುತ
ನೀವು ಬಸ್ಕೊಳ್ಳಿ ಮಾಚಪ್ಪ
ನಿಮ್ಮ ಎಡತೊಡೆಯ ರಕುತ
ನೀವು ಬಸ್ಕೊಳ್ಳಿ ಮಾಚಪ್ಪ
ನಮ್ ಗಂಡ ಹೆಂಡಿರ ರಕ್ತದಲ್ಲಿ
ಶಿವಕಂತೆ ಮಡಿಮಾಡಬೇಕು
ಲಿಂಗಯ್ಯ ಸ್ವಾಮಿ ಬನ್ನಿ

ಹೀಗೆ ಶಿವಕಂತೆಯನ್ನು ಮಡಿ ಮಾಡುವುದರಿಂದ ಅಲ್ಲಿದ್ದ ಲಕ್ಷ ಮೊಟ್ಟೆ ಲಕ್ಷ ಕೂರೆ ಲಕ್ಷ ಹೇನು, ಪ್ರಾಣಿಗಳು ಯಾವುದೂ ಸಾಯುವುದಿಲ್ಲ.

೫೧. ಮಡಿಬಿಡುವ ಪ್ರಸಂಗ 'ಉ' ಪಠ್ಯದಲ್ಲಿ ಹೀಗೆ ಬರುತ್ತದೆ.

ಒಂದು ಬೆರಳಿನ ಒಳಗೆ
ನೀ ಕೈ ಪೆಂಜಾ ಹಿಡ್ಕೋಪ್ಪ
ಮತ್ತೊಂದು ಬೆರಳಿನಲ್ಲಿ
ಮಟ್ಟಿದಾಳ ಹಿಡ್ಕೋಪ್ಪ

ಮತ್ತೊಂದು ಬೆರಳಿನಲ್ಲಿ
ನೀ ಕಂಡಾಯ ಹಿಡ್ಕೋಪ್ಪ
ಮತ್ತೊಂದು ಬೆರಳಿನಲ್ಲಿ
ನೀ ನಾಗಬೆತ್ತ ಹಿಡ್ಕೋಪ್ಪ
ಬಲದ ಕೈಲಿ ನಡೆಮಡಿ
ನನಗೆ ಬಿಡಬೇಕಪ್ಪ
ಲಿಂಗಯ್ಯ ಸ್ವಾಮಿ ಬನ್ನಿ

೫೨. 'ಅ,ಇ,ಉ,ಎ,ಐ,ಒ' ಪಠ್ಯಗಳಲ್ಲಿ ಮಾರೇಹಳ್ಳಿಯಿಂದ ಕೆಂಪಣ್ಣನನ್ನು ತಂದು ಕುಂದೂರು ಕಲ್ಲುಗವಿಯಲ್ಲಿ ಕೂಡಿ ಹಾಕಿದ ಮೇಲೆ ಮಂಟೇಸ್ವಾಮಿಯವರು ತಲಕಾಡು ಮಡುವಿಗೆ ಸ್ನಾನಕ್ಕೆ ಮಡಿವಾಳ ಮಾಚಯ್ಯನ ಜೊತೆ ಸಪಟಮಸಮರಾತ್ರಿಯಲ್ಲಿ ಹೊರಡುವಂತಹ ಪ್ರಸಂಗ ಬರುತ್ತದೆ. ಇಲ್ಲಿ ಕಲಿಪುರುಷನ ದರ್ಶನವಾಗುತ್ತದೆ ಎಂದೂ ತಿಳಿಸಲಾಗಿದೆ.

೫೩. ಕೆಂಪಣ್ಣನನ್ನು ಕಾಯಸಿದ್ಧಿಗಾಗಿ ಹನ್ನೆರಡು ವರ್ಷಗಳ ಕಾಲ ಕಾಳಿಂಗನಗವಿಯಲ್ಲಿ ಕೂಡಿ ಹಾಕಲಾಗಿತ್ತು. ಹನ್ನೆರಡು ವರ್ಷಗಳು ತುಂಬಿದ ಮೇಲೆ ಕಾಳಿಂಗನಗವಿಗೆ ಮುಚ್ಚಿದ ಹಾಸುಗಲ್ಲಿನ ಬದಿಯಲ್ಲಿ ಒಂದು ಚಿಕ್ಕ ತೂತಿನಿಂದ ಸೂರ್ಯನ ಕಿರಣ ಸೂಜಿಗಾತ್ರದಷ್ಟು ಬೀಳುತ್ತಿತ್ತು. ಆಗ ಸಿದ್ದಪ್ಪಾಜಿಯವರು ಹಾಸಿರುವ ಗುಂಡನ್ನು ಕಾಲಿಂದ ಒದ್ದ ಬಿರುಸಿಗೆ ಬೊಪ್ಪೇಗೌಡನಪುರದ ಮಠದ ಮುಂಭಾಗದಲ್ಲಿ ಬುಗುರಿ ಸುತ್ತುವಂತೆ ಸುತ್ತಿ ಕೆಳಗೆ ಬಿದ್ದಿತಂತೆ. ಈಗಲೂ ಈ ಮಠದಲ್ಲಿ ಆ ಗುಂಡಿಗೇ ಮೂರ್ಹೊತ್ತು ಗುಪ್ತಪೂಜೆ ನಡೆಯುತ್ತಿರುವುದು.

೫೪. ರಾಚಪ್ಪಾಜಿಯವರು ಚಂದಗಾಲದ ತೋಟಕ್ಕೆ ಹೋಗಿ ಎಳನೀರನ್ನು ಕೇಳುತ್ತಾರೆ ಬಿಸಿಲನ್ನು ದಣಿವಾರಿಸಿಕೊಳ್ಳುವುದಕ್ಕೆ. ಆದರೆ ತೋಟದ ಕೆಲಸದಾಳು ಏನಯ್ಯ ಬಂದು ಎಳನೀರು ಕೇಳುತ್ತಾ ಇದ್ದಿಯಲ್ಲ ? ನೀನು ಮತ್ತು ನಿಮ್ಮಪ್ಪ ನೀರೆರೆದು ಸಾಕಿದರಾ ? ಎಂದಾಗ ರಾಚಪ್ಪಾಜಿಯವರು ಮನಸ್ಸಿನಲ್ಲಿಯೇ ಕೆಲಸಗಾರನಿಗೆ ಬುದ್ಧಿ ಇಲ್ಲವೆಂದರೆ ಮುಕ್ಕಣ್ಣೇಶ್ವರ ನಿನಗಾದರೂ ತಿಳಿಯೋದು ಬೇಡವೇ ? ಎನ್ನುತ್ತಾ ತೆಂಗಿನ ಮರದಡಿಯಲ್ಲಿ ಕೂತ್ಕೊಂಡು ಮರಕ್ಕೆ ದೃಷ್ಟಿಯನ್ನು ಮಡಗಿದರಂತೆ. ಆಗ ಮೂರು ತೆಂಗಿನ ಮರ ರಾಚಪ್ಪಾಜಿಯವರ ಪಕ್ಕಕ್ಕೆ ಬಗ್ಗಿತಂತೆ. ಈ ದೃಶ್ಯವನ್ನು ಕಣ್ಣಾರೆ ಕಂಡ ಕೆಲಸಗಾರ ಓಡ್ಹೋಗಿ ತನ್ನ ಯಜಮಾನರಿಗೆ ತಿಳಿಸಿದನು. ಆಗ ಗೌಡ ಬಂದು ಸ್ವಾಮಿ ತಾವು ಯಾರು ಎಂದು ನಮಗೆ ಗೊತ್ತಾಗಲಿಲ್ಲ ಎಂದಾಗ ರಾಚಪ್ಪಾಜಿಯವರು ಗೌಡ ನೋಡಪ್ಪ ನಾವು ಬೊಪ್ಪೇಗೌಡನಪುರದ ಧರೆಗೆದೊಡ್ಡವರ ಶಿಶುಮಗ. ನಾವು ಲೋಕ ಕಲ್ಯಾಣಕ್ಕಾಗಿ ಕಪ್ಪಡಿಯಲ್ಲಿ ನೆಲೆಯಾಗುವುದಕ್ಕೆ ಬಂದಿದ್ದೇವೆ ಎಂದರು. ಬುದ್ಧಿ ನಾಳೆ ೧೦೧ ಎಳನೀರು, ೧೦೧ ನಿಂಬೆಹಣ್ಣುಗಳನ್ನು ನಮ್ಮ ತೋಟದಿಂದ ಕಳುಹಿಸಿಕೊಡುತ್ತೀವಿ ಎಂದನು. ಆಗ ಗೌಡನಿಗೆ ರಾಚಪ್ಪಾಜಿಯವರು ಆಶೀರ್ವಾದ ಮಾಡಿ ಮುಂದೆ

ಹೊರಟರಂತೆ. ಈ ಪ್ರಸಂಗವನ್ನು ಎಲ್ಲಾ ಪಠ್ಯಗಳು ಬಿಡದೆ ಹೇಳುತ್ತವೆ. ಈ ಸಂಪ್ರದಾಯ ಈಗಲೂ ಚಾಚುತಪ್ಪದೆ ನಡೆಯುತ್ತಿದೆ. ಇಂದಿಗೂ ಚಂದಗಾಲ ತೋಟದ ತೆಂಗಿನಮರಗಳು ಬಾಗಿಕೊಂಡೇ ನಿಂತಿರುವುದನ್ನು ಕಾಣಬಹುದು.

೫೫.ಮೈಸೂರು ಅರಸರಾಗಿದ್ದ ಚಾಮರಾಜ ಒಡೆಯರ (ಕ್ರಿ.ಶ.೧೩೬೦) ಮಗಳು ರಾಜಮಲ್ಲಿಗೆಯನ್ನು ತನ್ನ ಮಗನಿಗೆ ಮದುವೆ ಮಾಡಿಸುವ ಸಲುವಾಗಿ ಮಾರನಾಯಕ ಮಹಾರಾಣಿಯವರಿಗೆ ಕಿರುಕುಳ ಕೊಡುತ್ತಿದ್ದ. ಮಾರನಾಯಕನನ್ನು ಮಂಟೇಸ್ವಾಮಿಯವರು ಸೋಲಿಸಿ ರಾಜಮಲ್ಲಿಗೆಯನ್ನು ಶಿಶುಮಗಳಾಗಿ ಪಡೆಯುತ್ತಾರೆ ಎಂಬುದನ್ನು 'ಅ' ಪಠ್ಯ ತಿಳಿಸುತ್ತದೆ. ಇನ್ನುಳಿದ ಪಠ್ಯಗಳು ದೊಡ್ಡಮ್ಮತಾಯಿ ಮುಟ್ಟನಹಳ್ಳಿಯಲ್ಲಿ ಐಕ್ಯವಾಗಿದ್ದಾರೆ ಎಂದಷ್ಟೇ ಸಾಲು ಬರುತ್ತದೆ.

೫೬.ಸಖರಾಯಪಟ್ಟಣದಲ್ಲಿ ಅರಸರು ಧರೆಗೆದೊಡ್ಡವರಿಗೆ ವಿಷದ ಕಜ್ಜಾಯ ಬಡಿಸಿದ ನಿಮಿತ್ತವಾಗಿ ಕಜ್ಜಾಯತುಪ್ಪದ ಪಂಕ್ತಿಸೇವೆ ಬೊಪ್ಪೇಗೌಡನಪುರದ ಮಠದಲ್ಲಿ ಇಂದಿಗೂ ಆಚರಣೆಯಲ್ಲಿದೆ.

೫೭.ಕುಂದೂರು ಬೆಟ್ಟವನ್ನು 'ಸಿದ್ದರಗಿರಿ' ಎಂದು ಕರೆಯಲಾಗುತ್ತಿತ್ತು. ಗಿರಿಯ ನೆಲಗವಿಯಲ್ಲಿ ಸಿದ್ದರು ತಪಸ್ಸು ಮಾಡುತ್ತಿದ್ದರೆಂಬ ಪ್ರತೀತಿ ಇದೆ ಎಂಬುದನ್ನು 'ಕ' ಪಠ್ಯ ತಿಳಿಸುತ್ತದೆ.

೫೮.ಬೊಪ್ಪೇಗೌಡನಪುರಕ್ಕಿದ್ದ ಹಿಂದಿನ ಹೆಸರು ಕಾಡಂಕನಹಳ್ಳಿ, ಇಲ್ಲಿ ರಾಜರ ಮಕ್ಕಳು ತಿರುಗಾಡುವ ಜಾಗವಾದುದರಿಂದ 'ರಾಜಬೊಪ್ಪೇಗೌಡನಪುರ' ಎಂದು ಹೆಸರಾಯಿತು ಎಂಬುದನ್ನು 'ಅ' ಪಠ್ಯ ತಿಳಿಸುತ್ತದೆ. 'ಐ' ಪಠ್ಯದಲ್ಲಿ 'ಒಪ್ಪಿಕೊಂಡಪುರವೇ' ಜನರ ಆಡುಮಾತಿನಲ್ಲಿ 'ಬೊಪ್ಪೇಗೌಡನಪುರ, ಎಂದಾಗಿದೆ ಎಂಬುದನ್ನು ತಿಳಿಸುತ್ತದೆ.

೫೯.ಧರೆಗೆದೊಡ್ಡವರು ಕಲಿಯುನ್ನು ಕಣ್ಣಿಂದ ನೋಡಬಾರದೆಂದು ಪಾತಾಳಬಾವಿಯಲ್ಲಿ ಮುಕ್ಕಾಲು ಮಂಚದ ಮೇಲೆ ಕುಳಿತು ಶಿವಯೋಗದಲ್ಲಿ ನಿರತರಾದ ಸಂದರ್ಭದಲ್ಲಿ "ನಮ್ಮ ಹಂಗು ನರರಿಗಿರಲಿ; ನರರ ಹಂಗು ನಮಗೆ ಬೇಡ"ವೆಂದು ಭಾರೀ ಗುಂಡನ್ನು ಚಾಚಿಕೊಂಡರು ಎಂಬ ವಿವರ ಎಲ್ಲಾ ಪಠ್ಯಗಳಲ್ಲೂ ಕಂಡು ಬರುತ್ತದೆ.

೬೦. ಕೊಳ್ಳೇಗಾದಿಂದ ನಾಲ್ಕು ಕಿ.ಮೀ. ದೂರದಲ್ಲಿ ಕಲಿಯೂರು ತೋಪು ಎಂಬ ಊರಿದೆ. ಹಾಗೆಯೇ ತಲಕಾಡಿನಲ್ಲೊಂದು ಕಲಿಯೂರು ತೋಪಿರುವುದನ್ನು 'ಚ' ಪಠ್ಯ ತಿಳಿಸುತ್ತದೆ.

೬೧.ಬೊಪ್ಪೇಗೌಡನಪುರದಲ್ಲಿರುವ ಮಂಟೇಸ್ವಾಮಿ ಮಠವನ್ನು ಹಲಗೂರು ಚಿಲ್ಲಾಪುರದ ಪಾಂಚಾಳರು ಕಟ್ಟಿಸಿದರು ಎಂಬ ಪ್ರಸಂಗ ಎಲ್ಲ ಪಠ್ಯಗಳಲ್ಲೂ ಕಂಡುಬರುತ್ತದೆ. ಮಠಕಟ್ಟಿ ಮುಗಿಸಿದ ಮೇಲೆ ದಾರಿಯಲ್ಲಿ ಸಾಗುವಾಗ ಹಸಿವಾಗಬಹುದೆಂದು

ಪಾಂಚಾಳರಿಗೆ ದೊಡ್ಡಮ್ಮತಾಯಿ ಪ್ರಸಾದವನ್ನು ಕೊಟ್ಟು ಕಳುಹಿಸಿದಳು. ಆದರೆ ಪಾಂಚಾಳರು ಅದನ್ನು ಉಪಯೋಗಿಸದೆ ಬಿಸಾಕಿದ್ದರಿಂದ ಅವರಿಗೆ ಶಾಪ ಪ್ರಾಪ್ತಿಯಾಯಿತು ಎಂದು ಹೇಳಲಾಗಿದೆ.

ಪಾಂಚಾಳರು ಹಸಿದಿರಬಾರದು ಎಂದು ಕನಿಕರಿಸಿದ ದೊಡ್ಡಮ್ಮತಾಯಿ ಯಳಂದೂರು ನಿಂಗಯ್ಯನೆಂಬ ಪಾಳೆಯಗಾರನನ್ನು ಬರಮಾಡಿಕೊಂಡು ಹಾರಕದ ಹಿಟ್ಟು ಮಾಡಿ ಉಣಬಡಿಸಿದರು. ಪಾಂಚಾಳರು ಅದನ್ನು ಊಟ ಮಾಡಿದರೆಂದು 'ಪ' ಪಠ್ಯ ತಿಳಿಸುತ್ತದೆ.

೬೨. ಸಖರಾಯಪಟ್ಟಣದ ಅರಸುಗಳ ಅವಳಿ ಜವಳಿ ಮಕ್ಕಳಲ್ಲಿ ಹಿರಿಯ ಮಗ ರಾಜೇಂದ್ರ ಸ್ವಾಮಿಗಳನ್ನು ಬೊಪ್ಪೇಗೌಡನ ಪುರದಲ್ಲಿಯೂ ಕಿರಿಯ ಮಗನಾದ ವೀರಭದ್ರಸ್ವಾಮಿಗಳನ್ನು ಮಳವಳ್ಳಿ ಮಠದಲ್ಲೂ ನೆಲೆಗೊಳ್ಳುವಂತೆ ಅನುಗ್ರಹಿಸುತ್ತಾರೆ. ಹಾಗೆಯೇ ಇಬ್ಬರು ಮಕ್ಕಳಿಗೂ ರಾಜ್ಯಭಾರವನ್ನು ಸಮಾನವಾಗಿ ಹಂಚಿಕೊಡುತ್ತಾರೆ. ಒಬ್ಬೊಬ್ಬರಿಗೆ ಬಂದ ಪಾಲು ಹೀಗಿದೆ – ಹಿರಿಯ ಮಗನಿಗೆ ಬೊಪ್ಪೇಗೌಡನಪುರ, ಕುರುಬನಕಟ್ಟೆ, ಚಿಕ್ಕಲ್ಲೂರು. ಕಿರಿಯ ಮಗನಿಗೆ – ಮಳವಳ್ಳಿ, ಆದಿಹೊನ್ನಾಯಕನ ಹಳ್ಳಿ, ಚೆನ್ನಪಟ್ಟಣ. ರಾಜದ್ವಯರಿಗೆ ಒಬ್ಬೊಬ್ಬರಿಗೆ ಒಂದೊಂದು ವರ್ಷ ಕಪ್ಪಡಿ ಜಾತ್ರೆ ಮಾಡಬೇಕೆಂದು ಪಾಲು ಮಾಡಿರುವುದು 'ಅ' ಪಠ್ಯದಲ್ಲಿದೆ.

೬೩.ಧರೆಗೆದೊಡ್ಡವರು ಕಲ್ಯಾಣದಿಂದ ರಾಚಪ್ಪಾಜಿಯನ್ನು ಶಿಶುಮಗನಾಗಿ ಪಡ್ಕೊಂಡು ಕಲ್ಯಾಣದ ಕಟ್ಟಕಡೆಯ ಬೀದಿ ಅಂದರೆ ೯೭ನೆಯ ಬೀದಿಗೆ ಬರುತ್ತಾರೆ. ಅಲ್ಲಿ ಹೊಲೆಮಾದಿಗರವನಾದ ಲಿಂಗಯ್ಯ ಚೆನ್ನಯ್ಯ ಮಂಟೇಸ್ವಾಮಿಯವರನ್ನು ಅಂಗಲಾಚಿಕೊಂಡರು. ನೀವು "ಕಲ್ಯಾಣವನ್ನು ಹಾಳು ಮಾಡಿ ಹೋಗುತ್ತಿದ್ದೀರಲ್ಲ, ನಮ್ಮನ್ನು ಮರೆತು" ಕಟುಕರಸಂಗಯ್ಯನಿಗೆ ಮುಕ್ತಿಕೊಟ್ಟಂತೆ ನಮಗೊಂದು ಮುಕ್ತಿ ಕೊಟ್ಟು ನಿಮ್ಮೊಡನೆ ಕರ್ಕೊಂಡು ಹೋಗಿ' ಎಂದರು. ಇನ್ನು ಮುಂದುವರಿದು ನಿಮ್ಮ ಜೊತೆಯಲ್ಲಿಯೇ ನಿಮ್ಮ ಕಂತೆಬೊಂತೆ ಹೊತ್ಕೋತ್ತೀವಿ ಎಂದರು. ಆಗ ಮಂಟೇಸ್ವಾಮಿಯವರು ಅವರನ್ನು ಶಿಶುಮಕ್ಕಳನ್ನಾಗಿ ಪಡೆದುಕೊಂಡು ಕೊಡೇಕಲ್ಲಿಗೆ ಬರುತ್ತಾರೆ ಎಂಬುದನ್ನು 'ಉ' ಪಠ್ಯ ತಿಳಿಸುತ್ತದೆ.

೬೪. ಹೆಚ್ಚುವರಿ ಪಠ್ಯಗಳಾದ 'ಕ,ಚ,ಟ,ತ' ಪ್ರಕಾರ

ಎಲ್ಲೈ ಬಸವಣ್ಣನವರೇ ನೀಲಮ್ಮನವರೇ
ನಿಮ್ಮ ತಾವು ಕಾಲಜ್ಞಾನ ಪುಸ್ತಕ ಇದೆಯಲ್ಲ
ಅದನೇ ತಂದು ಸತಿಪತಿಯರಿಬ್ಬರೂವೆ
ನಾಲ್ಕು ಪಾದದ ಜೋಳಿಗೆಗೆ ದಾನ ಕೊಡಿರಯ್ಯ
ನಿಮ್ಮ ತಾವಿರುವ ರಾಚಪ್ಪಯ್ಯನ
ಶಿಶುಮಗನ ಮಾಡಿಕೊಡಿ

ಎಂಬ ಧರೆಗೆದೊಡ್ಡವರ ಮಾತಿಗೆ ಬಸವಣ್ಣ ಮತ್ತು ನೀಲಮ್ಮನವರು ಒಪ್ಪಿ ನಾಲ್ಕು ಪಾದದ ಜೋಳಿಗೆಗೆ ಕಾಲಜ್ಞಾನ ಪುಸ್ತಕ ಮತ್ತು ರಾಚಪ್ಪಾಜಿಯನ್ನು ಪಡೆದು ಬಂದರು ಎಂದು ತಿಳಿಸುತ್ತದೆ.

೬೫.ಸಿದ್ದಪ್ಪಾಜಿಯವರ ಜನ್ಮದ ಬಗ್ಗೆ ಪಠ್ಯ 'ಪ' ಹೀಗೆ ಹೇಳುತ್ತದೆ. ಸಿದ್ದಪ್ಪಾಜಿಯವರ ಪೂರ್ವ ನಾಮಧೇಯ ಕೆಂಪಾಚಾರಿ ಅಥವಾ ಕೆಂಪಣ್ಣ. ಮಳವಳ್ಳಿಯಿಂದ ನಾಲ್ಕು ಕಿ.ಮೀ. ದೂರದಲ್ಲಿರುವ ಪುಣ್ಯಭೂಮಿ ನಿಡುಘಟ್ಟದ ಬಾಚಿಬಸವಾಚಾರಿ ಮತ್ತು ಮುದ್ದಮ್ಮನವರ ಗರ್ಭದಲ್ಲಿ ಏಳನೆಯ ಮಗನಾಗಿ ಜನಿಸಿದರೆಂದು ತಿಳಿಸುತ್ತದೆ.

೬೬.ಸಿದ್ದಪ್ಪಾಜಿಯವರು ಹಲಗೂರು ಚಿಲ್ಲಾಪುರದಲ್ಲಿ ಮಾಡಿದ ಪವಾಡ ಸ್ಮರಣೀಯವಾದದ್ದು.

೧. ಕಬ್ಬಿಣದ ರಜಗಳನ್ನು ನುಂಗಿದ್ದು
೨. ಉಕ್ಕಿನ ಕುದುರೆಯನ್ನು ಗಗನಕ್ಕೆ ಹಾರಿಸಿದ್ದು
೩. ಕೊಪ್ಪರಿಕೆ ಕಳ್ಳಿ ಹಾಲನ್ನು ಕುಡಿದದ್ದು
೪. ಗುಳಿಯಲ್ಲಿ ಮೆಣಸಿನಕಾಯಿ ಕಳ್ಳಿಹಾಲು ತುಂಬಿ
   ಮೇಲೆ ಚಪ್ಪಡಿಕಲ್ಲನ್ನು ಮುಚ್ಚಿದರೂ
   ಅದನ್ನು ಜಯಿಸಿ ಹೊರಬಂದದ್ದು
೫. ಕಾದ ಕಬ್ಬಿಣದ ಬಳೆ, ತೊಲೆ ಇತ್ಯಾದಿಗಳನ್ನು ಧರಿಸಿದ್ದು
೬. ಪ್ರಖರ ಜ್ವಾಲೆಯಿಂದ ಕೂಡಿದ ಕಾದಗಟ್ಟಿಯ ಮೇಲೆ ಕುಳಿತದ್ದು.

ಈ ಎಲ್ಲಾ ಪವಾಡಗಳು ಪಠ್ಯ 'ಚ' ದಲ್ಲಿ ಕಾಣಸಿಗುತ್ತವೆ..

೬೭.ಕೆಂಪಣ್ಣ ಹದಿನಾರು ನೀಲಿಯೊಳಗೆ ತನ್ನ ಹಮ್ಮು ಬಿಮ್ಮು ಮುರಿದಿಲ್ಲ ಎಂದು ಮಂಟೇಸ್ವಾಮಿಯವರು ಯೋಚಿಸಿ ಅವನನ್ನು ಕಾಳಿಂಗನ ಗವಿಗೆ ಕರೆತಂದರು. ಅಲ್ಲಿದ್ದ ಏಳು ಮಂದಿ ಋಷಿಗಳು ನಮಸ್ಕರಿಸಿ ನಿಂತರು. ಆಗ ನಮ್ಮ ಸಿದ್ಧರಿಗೂ ನೀವು ಜಾಗ ಕೊಡಿರಯ್ಯ ? 'ನಾವು ಜಾಗಕೊಡಬೇಕಾದರೆ ನಮ್ಮ ಕರಿಬರಗದ ಮೇಲೆ ಕೂತು ಕುಂದೂರು ಬೆಟ್ಟದ ಸುತ್ತ ಏಳು ಸುತ್ತು ಸವಾರಿ ಮಾಡಿದರೆ ಅವನನ್ನು ನಮ್ಮಲ್ಲಿ ಸೇರಿಸಿಕೊಳ್ಳುತ್ತೇವೆ' ಎಂದು ಋಷಿಗಳು ಹೇಳಿ ಕರಿಬರಗನನ್ನು ಕರೆಯುತ್ತಾರೆ. ಕರಿಬರಗ ಎಂದರೆ ಭಯಂಕರವಾದ ಹುಲಿ. ಗುಡುಗಿನಂತೆ ಘರ್ಜಿಸುತ್ತಾ ಪಂಜರದಲ್ಲಿ ಕೆಂಧೂಳನ್ನು ಗಗನಕ್ಕೆ ಈಡಾಡುತ್ತಾ ಕರಿಬರಗ ಬರುತ್ತದೆ. ಅದರ ಬಾಲ ಎತ್ತಿ ಕೆಂಪಣ್ಣನನ್ನು ಕೂರಿಸುತ್ತಾರೆ. ಅವನ ಬಲಗೈಗೆ ಉರುಸಂಗಿ ಕೊರಡನ್ನು ಕೊಡುತ್ತಾರೆ. ಹುಚ್ಚು ಬೆಪ್ಪಿನ ಜ್ಞಾನದಲ್ಲಿ ಕೆಂಪಣ್ಣ ಹುಲಿಗೆ ಮೂರು ಎಳೆತ ಎಳೆದನು. ಹುಲಿ ಹತೋಟಿಗೆ ಬಂತು. ಅದರ ಮೇಲೆ ಕೂತು ಕೆಂಪಣ್ಣ ಹದಿನಾರು ಸುತ್ತು ಬೆಟ್ಟವನ್ನು ಸುತ್ತಿ ಬಂದನು. ಇದನ್ನು ಕಂಡ ಋಷಿಗಳು 'ಕಾಳಿಂಗನ ಗವಿಯಲ್ಲಿ ಇವರೇ ಇರಲಿ, ನಾವು ಬೇರೆ ಕಡೆ ಹೋಗುತ್ತೇವೆ' ಎಂದು ಹೇಳಿ ಹೊರಟು ಹೋದರು. ಈ ಭಾಗ ಎಲ್ಲಾ ಪಠ್ಯಗಳಲ್ಲಿ ಒಂದೇ ರೀತಿಯಾಗಿ ಬರುತ್ತದೆ.

68. ಪಠ್ಯ 'ಎ' ಕೆಂಪಣ್ಣನ ತಪಸ್ಸಿನ ಮಹಿಮೆಯನ್ನು ಹೀಗೆ ತಿಳಿಸುತ್ತದೆ : ಕೆಂಪಣ್ಣನ ನೆತ್ತಿಯ ಮೇಲೆ ಹನ್ನೆರಡು ಆಳುದ್ದದ ಹುತ್ತ ಬೆಳೆದಿದೆ. ಮೂಗಿನ ಮೇಲೆ ಮೂರು ಆಳುದ್ದದ ಹುತ್ತ ಬೆಳೆದಿದೆ. ಅವನ ಹೆಕ್ಕತ್ತಿನ ಮೇಲೆ ಮತ್ತಿಯ ಮರವು ಬೆಳೆದಿದೆ. ಕಿವಿಯ ರಂಧ್ರದಲ್ಲಿ ಶಕುನದ ಹಕ್ಕಿ ಮರಿಗಳನ್ನಿಟ್ಟಿದೆ. ಮೂಗಿನ ರಂಧ್ರದಲ್ಲಿ ಜೇನುಗೂಡನ್ನು ನಿರ್ಮಿಸಿದೆ. ನಡುನಾಲಿಗೆಯಲ್ಲಿ ಚಿಕ್ಕ ಚಿಕ್ಕ ಮರಗಳು ಹುಟ್ಟಿವೆ. ಕಂಕುಳ ಸಂದಿಯಲ್ಲಿ ಗರುಡಪಕ್ಷಿ ಮರಿಗಳನ್ನು ಪಾಲಿಸುತ್ತಿದೆ. ಎದೆತೊಕ್ಕೆಯಲ್ಲಿ ಹದ್ದುಗಳು ನೆಲೆಸಿವೆ. ಅಕ್ಕ ಪಕ್ಕದಲ್ಲಿ ಕಾಳಿಂಗ ಸರ್ಪಗಳು ವಾಸ ಮಾಡುತ್ತಿವೆ. ಹೆಬ್ಬಾವೇ ಹಾಸಿಗೆಯಾಗಿದೆ. ಚೇಳೇ ತಲೆದಿಂಬಾಗಿದೆ. ಅವರ ನೂರೊಂದು ಕಿರುಜಡೆಗಳು ಗವಿಯ ತುಂಬ ಹರಡಿಕೊಂಡಿವೆ ಎಂದು ತಪಸ್ಸಿನ ಮಹಿಮೆಯನ್ನು ಅನನ್ಯವಾಗಿ ಅಸ್ವಾದ್ಯಶವಾಗಿ ವರ್ಣಿಸಲಾಗಿದೆ. ಈ ಚಿತ್ರಣವು ಸಾಂಪ್ರದಾಯಿಕ ಮಹಾಕಾವ್ಯಗಳ ವರ್ಣನೆಯನ್ನು ಮೀರಿ ನಿಂತಿದೆ ಎನ್ನಬಹುದು.

ಚಿಕ್ಕಲ್ಲೂರು ಮಹಾಕ್ಷೇತ್ರವು ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕಿನಿಂದ ಇಪ್ಪತ್ತು ಕಿ.ಮೀ. ದೂರದಲ್ಲಿದ್ದು ಪವಿತ್ರ ಯಾತ್ರಾಸ್ಥಳವಾಗಿದೆ. ಇಲ್ಲಿ ಪ್ರತಿವರ್ಷವೂ ಜನವರಿ ತಿಂಗಳಿನಲ್ಲಿ ನಡೆಯುವ ಜಾತ್ರಾ ಮಹೋತ್ಸವವು ಬಹಳ ವೈಶಿಷ್ಟ್ಯಪೂರ್ಣವಾಗಿ ನಡೆಯುತ್ತದೆ.

೧. **ಚಂದ್ರಮಂಡಲೋತ್ಸವ** : ಇದು ಪುಷ್ಯಪೂರ್ಣಿಮೆಯಂದು ಚಂದ್ರೋದಯದ ನಂತರ ನಡೆಯುವ ಮಹತ್ವಪೂರ್ಣ ಉತ್ಸವವಾಗಿದೆ. ಇಲ್ಲಿಂದಲೇ ಜಾತ್ರೆ ಆರಂಭವೂ ಹೌದು. ಘನನೀಲಿ ಸಿದ್ದಪ್ಪಾಜಿಯವರು ಹಲಗೂರು ಪಾಂಚಾಳರು ಒಡ್ಡಿದ "ಕಾದಗಟ್ಟಿ" ಪವಾಡವನ್ನು ಜಯಿಸಿ ಆ ಕಾದಗಟ್ಟಿಯ ಪ್ರಖರ ಜ್ವಾಲೆಯಿಂದ ಪಾಂಚಾಳರ ಅಜ್ಞಾನ ಅಂಧಕಾರವನ್ನು ಹೋಗಲಾಡಿಸಿದ ಸಂಕೇತವಾಗಿ ಈ ಉತ್ಸವವನ್ನು ನಡೆಸಲಾಗುತ್ತದೆ. ಗುರು ಮಂಟೇಸ್ವಾಮಿಯವರು ತಮ್ಮ ಶಿಷ್ಯರಾದ ಸಿದ್ದಪ್ಪಾಜಿಯವರಿಗೆ ಚಂದ್ರಮಂಡಲೋತ್ಸವ ಕಾಲದಲ್ಲಿ ದರ್ಶನ ನೀಡುತ್ತಾರೆ ಎಂದು ನಂಬಲಾಗಿದೆ.

ಉತ್ಸವದ ಸಂದರ್ಭದಲ್ಲಿ ಚಂದ್ರಮಂಡಲವನ್ನು ತಯಾರು ಮಾಡುವ ಜವಾಬ್ದಾರಿ ಚಿಕ್ಕಲ್ಲೂರಿನ ಸುತ್ತಮುತ್ತಲಿನ ಏಳು ಗ್ರಾಮದವರದ್ದು ಕಾಡಿಗೆ ಹೋಗಿ ಹಸಿ ಬಿದಿರನ್ನು ಕಡಿದು ತಂದು ಕಂಡಾಯದ ರೂಪದಲ್ಲಿ / ತೇರಿನ ರೂಪದಲ್ಲಿ ಕಟ್ಟುತ್ತಾರೆ. ಬಿದಿರಿನ ಗಿಣ್ಣು ಗಿಣ್ಣುಗೂ ಪಂಜನ್ನು ಸುತ್ತಿ ಅದರ ಮೇಲೆ ಜನರ ಹರಕೆಯ ತುಪ್ಪವನ್ನು ಸವರಿ ಅಣಿಗೊಳಿಸುತ್ತಾರೆ. ಹೀಗೆ ಜನರಿಂದಲೇ ಅಣಿಯಾದ ಚಂದ್ರಮಂಡಲವನ್ನು ಹತ್ತಿಸಲು ಬೊಪ್ಪಣಪುರದ ಬುದ್ಧಿಯವರನ್ನು ಬಿರುದು ಬಿಂಕುಗಳಿಂದ ಜನಸಮೂಹ ಕರೆತರುತ್ತಾರೆ. ಸ್ವಾಮಿಯವರು ಮೊದಲಿಗೆ ಸಿದ್ದಪ್ಪಾಜಿಯನ್ನು ಪೂಜೆ ಮಾಡಿದ ಮೇಲೆ ಚಂದ್ರಮಂಡಲವನ್ನು ಪೂಜೆ ಮಾಡಿ ಕರ್ಪೂರದಿಂದ ಚಂದ್ರಮಂಡಲವನ್ನು ಹತ್ತಿಸುತ್ತಾರೆ. ತದನಂತರ ಸ್ವಲ್ಪ ಹತ್ತಿ ಉರಿದ ಮೇಲೆ ಮಲಗಿರುವ ಚಂದ್ರಮಂಡಲವನ್ನು ಜನರೆಲ್ಲರೂ ಉಘೇ ಎಂದು ಮೇಲಕ್ಕೆತ್ತಿ ನಿಲ್ಲಿಸುತ್ತಾರೆ. ದೈವಶಕ್ತಿಗೆ ಅಥವಾ ಗಾಳಿಬಡಿತಕ್ಕೆ ಜ್ಯೋತಿ ಬಹುಬಿರುಸಾಗಿ ಧಗಧಗನೆ ಉರಿಯುತ್ತದೆ. ಆಗ ಚಂದ್ರಮಂಡಲದ ಸುತ್ತ ನಿಂತಿರುವ

ಜನಸಾಗರ ತಾವು ಬೆಳೆದಿರುವ ದವಸ ಧಾನ್ಯಗಳನ್ನು ಉರಿಯುತ್ತಿರುವ ಜ್ಯೋತಿಯ ಮೇಲೆ ಎಸೆಯುತ್ತಾರೆ. ಬೀಸಾಟಿಕೆಯ ರಭಸಕ್ಕೆ ಚಂದ್ರಮಂಡಲ ಆನಂದದಿಂದ ಉರಿಯುತ್ತದೆ. ಹೀಗೆ ಉರಿಯುತ್ತಿದ್ದ ಬೆಂಕಿಯ ಜ್ವಾಲೆ ಯಾವ ಕಡೆ ಚಾಚುತ್ತದೋ ಆ ಕಡೆ ಆ ವರ್ಷದಲ್ಲಿ ಮುಂಗಾರು ಮಳೆ ಬೆಳೆ ಹುಲುಸಾಗಿ ಆಗುತ್ತದೆ ಎಂಬ ನಂಬಿಕೆ ಭಕ್ತಾದಿಗಳಲ್ಲಿದೆ.

ಚಂದ್ರಮಂಡಲ ಉರಿದು ಬಿದ್ದಾಗ ಲಭಿಸುವ ಕಪ್ಪುಮಸಿಗೆ ಎಲ್ಲಿಲ್ಲದ ಬೇಡಿಕೆ ಇರುತ್ತದೆ. ಏಕೆಂದರೆ ಮಂಟೇಸ್ವಾಮಿ ತನ್ನ ಶಿಶುಮಕ್ಕಳನ್ನು ಪಡೆಯುವ ಸಂದರ್ಭದಲ್ಲಿ ಮಟ್ಟಿಕಪ್ಪು ಧೂಳ್ತವನ್ನು ಸಿಂಪಡಿಸಿಯೇ ಪಡೆಯುತ್ತಾರೆ. ಆ ಕಪ್ಪುಮಸಿಯನ್ನು ಮನೆಯಲ್ಲಿಟ್ಟರೆ ಭೂತ ಪ್ರೇತ ಗಾಳಿ ಗ್ರಹಚಾರ ರೋಗ ರುಜಿನ ಬರುವುದಿಲ್ಲ ಎಂಬ ಅಚಲವಾದ ನಂಬಿಕೆ ಇದೆ. ಆದ್ದರಿಂದಲೇ ಚಂದ್ರಮಂಡಲ ಉರಿದು ಕೆಳಗೆ ಬೀಳುವ ಕಪ್ಪುಮಸಿಯನ್ನು ಪಡೆಯಲು ಜನಜಂಗುಳಿ ನಾ ಮುಂದು ತಾ ಮುಂದು ಎಂದು ಮುನ್ನುಗ್ಗುತ್ತಾರೆ. ಹೇಗಾದರೂ ಮಾಡಿ ಕಪ್ಪು ಮಸಿಯನ್ನು ಪಡೆದುಕೊಂಡು ಒಂದು ಬಟ್ಟೆಯಲ್ಲಿ ಜೋಪಾನವಾಗಿ ಕಟ್ಟಿ ಇಟ್ಟುಕೊಳ್ಳುತ್ತಾರೆ. ಐದುದಿನದ ಹಬ್ಬ ಆದ ಮೇಲೆ ಊರಿಗೆ ಬಂದು ಅದಕ್ಕೆ ಇನ್ನಷ್ಟು ಮಸಿ ಮತ್ತು ಹರಳೆಣ್ಣೆಯನ್ನು ಬೆರೆಸಿ ಹೆಚ್ಚಿಸಿಕೊಳ್ಳುತ್ತಾರೆ.

೨. ನೀಲಗಾರ ದೀಕ್ಷೆ : ಇದೊಂದು ಧಾರ್ಮಿಕ ವಿಧಿ. ಮಂಟೇಸ್ವಾಮಿ, ರಾಚಪ್ಪಾಜಿ, ದೊಡ್ಡಮ್ಮತಾಯಿ, ಚೆನ್ನಾಜಮ್ಮ, ಸಿದ್ದಪ್ಪಾಜಿಯನ್ನು ಮನೆ ದೇವರಾಗಿ ಪೂಜಿಸುವ ಭಕ್ತಾದಿಗಳು ತಮ್ಮ ಕುಟುಂಬದ ಹಿರಿಯ ಮಗನಿಗೆ ಈ ದೀಕ್ಷೆಯನ್ನು ಕೊಡಿಸುತ್ತಾರೆ. ಈ ದೀಕ್ಷೆಯನ್ನು ಮಠದ ಯಜಮಾನರಿಂದ ಪಡೆದುಕೊಳ್ಳುತ್ತಾರೆ. ರುದ್ರಾಕ್ಷಿಮಣಿ ಧಾರಣೆಯೇ ಈ ದೀಕ್ಷೆಯಾಗಿದ್ದು ಪವಿತ್ರ ತ್ಯಾಗಮಯ ಬದುಕನ್ನು ಉಪದೇಶಿಸುವುದೇ ಇದರ ವಿಧಿಯಾಗಿದೆ. ಇದು ಹಲಗೂರು ಪಾಂಚಾಳರ ಅಂತಿಮ ವೈರಾಗ್ಯ ಬೋಧೆಯ ಸಂಕೇತವಾಗಿದೆ.

೩. ದೊಡ್ಡವರ ಪಂಕ್ತಿಸೇವೆ : ಇದು ಮಂಟೇಸ್ವಾಮಿಯವರ ಅನ್ನದಾಸೋಹದ ಮಹತ್ವವನ್ನು ತನ್ನ ಭಕ್ತಾದಿಗಳಿಗೆ ತಿಳಿಸುವ ಪರಿಯಾಗಿದೆ. ಇದನ್ನು ದೊಡ್ಡಮ್ಮತಾಯಿ ಪಂಕ್ತಿಸೇವೆ ಎಂತಲೂ ಕರೆಯುತ್ತಾರೆ. ದೊಡ್ಡಮ್ಮತಾಯಿ ಆರ್ಕದ ಮುದ್ದೆ ಅಣ್ಣೆಸೊಪ್ಪು ಸಾರು ಮಾಡಿ ಬಂದ ಜನರಿಗೆಲ್ಲ ಸಾಲಾಗಿ ಕೂರಿಸಿ ಅಡಿಗೆ ಬಡಿಸುತ್ತಿದ್ದಳು. ಈ ಸೇವೆ ದಶದಿಕ್ಕಿಗೂ ಹಬ್ಬಿ ಜನರು ಹೆಚ್ಚಿನ ಸಂಖ್ಯೆಯಲ್ಲಿ ಬರತೊಡಗಿದರಂತೆ. ಅವರಲ್ಲಿ ಪಾಂಚಾಳರು ಸಹ ಸೇರಿದ್ದರು ಎಂದು ನಿರೂಪಿಸಲಾಗಿದೆ.

ಒಂದು ದಿನ ಪಂಕ್ತಿಸೇವೆಗಾಗಿ ಅರಿತ ಪಾಂಚಾಳರು ಅಲ್ಲಿಗೆ ಆಗಮಿಸಿದರು. ಆಗ ಅವರಿಗೆ ರಾಗಿ ಮುದ್ದೆ ಅಣ್ಣೆಸೊಪ್ಪಿನ ಸಾರನ್ನು ಮಾಡಿ ಬಡಿಸಿದರು. ಆಗ ಪಾಂಚಾಳರು 'ನಾವು ಪಂಕ್ತಿಸೇವೆ ಎಂದರೆ ಏನೋ ಎಂದು ಭಾವಿಸಿಕೊಂಡಿದ್ದೇವು. ಆದರೆ ಇಲ್ಲಿ ಬಂದು ನೋಡಿದರೆ ಮುದ್ದೆ ಊಟ' "ನಾವು ಹಾಲು ಅನ್ನ ತಿಂದು ತುಪ್ಪದಲ್ಲಿ ಕೈತೊಳೆಯುವವರು. ನಾವು ಗತಿಕೆಟ್ಟು ಈ ಮುದ್ದೆ ಸಾರಿಗೆ ಬಂದಿದ್ದೀವಲ್ಲ ನಮಗೆ

ಬುದ್ಧಿ ಇದೆಯೇ ? ಅಯ್ಯೋ ಇದು ಯಾರಿಗೆ ಬೇಕು ? ಎಂದು ಹೇಳಿ ತಮ್ಮ ಚಪ್ಪಲಿಕಾಲಿನಿಂದ ತುಳಿದುಕೊಂಡು ಹೋದರು. ಈ ದೃಶ್ಯವನ್ನು ನೋಡಿದ ದೊಡ್ಡಮ್ಮತಾಯಿ ಕಣ್ಣೀರನ್ನು ಸುರಿಸುತ್ತಿದ್ದುದ್ದನ್ನು ಕಂಡು ಮಂಟೇಸ್ವಾಮಿಯವರು ಭಾವಿಸಿಕೊಂಡು ಪಾಂಚಾಳರಿಗೆ ಹಿಡಿ ಶಾಪ ಹಾಕಿದರು ಎಂಬ ಪ್ರತೀತಿ ಇದೆ.

ಈಗ ಇದು ಬೊಪ್ಪೇಗೌಡನಪುರದಲ್ಲಿ ಭಕ್ತಾದಿಗಳು ನೀಡುವ ದವಸಧಾನ್ಯಗಳನ್ನು ಕ್ರೋಡೀಕರಿಸಿ ಬಂದಂತಹ ಭಕ್ತರಿಗೆ ದಿನವೂ ಪ್ರಸಾದವನ್ನು ತಯಾರಿಸಿ ಸರ್ವರಿಗೂ ನೀಡುವ ಮಹತ್ವದ ಸೇವೆ ಈಗಲೂ ಜಾರಿಯಲ್ಲಿದೆ.

ಮುತ್ತತ್ತಿರಾಯನ ಸೇವೆ : ಹಲಗೂರು ಪವಾಡಕ್ಕೂ ಪೂರ್ವದಲ್ಲಿ ಮುತ್ತತ್ತಿರಾಯನ ಸಖ್ಯವನ್ನು ಸಿದ್ದಪ್ಪಾಜಿಯವರು ಗಳಿಸಿರುವುದು ಕಾವ್ಯದಲ್ಲಿ ನಿರೂಪಿತವಾಗಿದೆ.

ಮುತ್ತ+ ಎತ್ತಿ = ಮುತ್ತತ್ತಿ (ಮುತ್ತು ಎತ್ತಿಕೊಟ್ಟ ಸ್ಥಳ) ಇದಕ್ಕೆ ಮತ್ತೊಂದು ಹೆಸರು ಕೂಡ ಇದೆ ಅದು 'ತಿರುಗನೆಮಡ' ಎಂದು.

ಗೋಕುಲಾಷ್ಟಮಿಯಲ್ಲಿ ಮೂರು ದಿನದ ಜಾತ್ರೆ ಮುತ್ತತ್ತಿರಾಯನಿಗೆ ಬಹಳ ವಿಜೃಂಭಣೆಯಿಂದ ನಡೆಯುತ್ತದೆ. ಈ ಜಾತ್ರೆಯ ಮೊದಲ ಕಾರ್ಯಕ್ರಮವೇ 'ಹಾಲರವಿಸೇವೆ' ಯಿಂದ ಪ್ರಾರಂಭವಾಗುತ್ತದೆ. ಹಾಲರವಿಸೇವೆ ಮಾಡುವ ಅಧಿಕಾರ ಮೊದಲಿಂದಲೂ ಮಾದಿಗರಿಗೆ ಸೇರಿದ್ದು.

ಎರಡನೆಯ ದಿನ ಮುತ್ತತ್ತಿರಾಯನ ಹೂವಿನ ಪಲ್ಲಕ್ಕಿ, ಹುಲಿವಾಹನದ ಮೆರವಣಿಗೆ ನಡೆಯುತ್ತದೆ.

ಮೂರನೆಯ ದಿನ ಬೆಳಿಗ್ಗೆ ಪೂಜೆ ಆದ ಮೇಲೆ ಕುರಿ ಕೋಳಿಗಳನ್ನು ಹಾರ ನೀಡಿ ಮುತ್ತತ್ತಿರಾಯನ ಸೇವೆ ಮಾಡುತ್ತಾರೆ.

ಮುತ್ತತ್ತಿರಾಯನ ದೇವಸ್ಥಾನದಲ್ಲಿ ಈಗಲೂ ಪೂಜೆ ಮಾಡುವವರು ಸೋಲಿಗರು.

ಕಂಡಾಯಗಳ ಪೂಜೆ ಮತ್ತು ಉತ್ಸವ : ನೀಲಗಾರ ಪರಂಪರೆಯನ್ನು ಪ್ರಧಾನವಾಗಿ ಕಂಡಾಯದ ರೂಪದಲ್ಲೇ ಪೂಜಿಸುವುದು ಸಂಪ್ರದಾಯವಾಗಿದೆ. ಕಂಡಾಯ ಶಕ್ತ್ಯಾಯುಧದ ರೀತಿಯಿದ್ದು ಇದು ಹಲಗೂರು ಚಿಲ್ಲಾಪುರದ ಪಾಂಚಾಳರ ಮೇಲೆ ಪವಾಡ ರೂಪದಲ್ಲಿ ಜಯಗಳಿಸಿ ಮಾನವತೆಯ ಧರ್ಮವನ್ನು ರಕ್ಷಿಸಿದ ಮತ್ತು ಬೋಧಿಸಿದ ಸಂಕೇತವಾಗಿದೆ.

ಸಿದ್ದಪ್ಪಾಜಿ ಹಲಗೂರು ಪಾಂಚಾಳರನ್ನು "ನನ್ನನ್ನು ಕಂಡಿರಾ" ಎಂದು ಕೇಳಿದಾಗ "ನಮಗೆ ಪ್ರಿಯವಾದ ಆಯುಧಗಳಲ್ಲೇ ನಿಮ್ಮನ್ನು ಕಂಡೇವು ಸ್ವಾಮಿ" ಎಂದರಂತೆ. ಇದರಿಂದ ಕಂಡಾಯದ ಪೂಜೆ ಪ್ರಚಲಿತವಾಗಿರಬಹುದು ಎನಿಸುತ್ತದೆ.

ಮಂಟೇಸ್ವಾಮಿಯವರು "ಕಂಡಾಯ ಬಂದ ಊರಿಗೆ ಖಂಡಿತವಾಗಿ ನಾನು ಬರುತ್ತೇನೆ" ಎಂದು ಹೇಳಿ ಲಿಂಗಯ್ಯ ಚೆನ್ನಯ್ಯನವರನ್ನು ಕರೆದು "ನೀವು ಮೆರೆಯುವ

ದೇವರಾಗಿ, ನಾವು ಮರೆಯಾಗುವ ದೇವರಾಗುತ್ತೇವೆ" ಎಂದು ಹೇಳಿ ಜಗತ್ತಿಗೆ ಚೆನ್ನಯ್ಯ ಲಿಂಗಯ್ಯ ಎಂಬ ಎರಡೇ ಕಂಡಾಯ ಜಗತ್ತಿಗೆ ಎಂದು ಹೇಳಿ ಅವರ ಮಹತ್ವವನ್ನು ಎತ್ತಿ ಹಿಡಿದಿದ್ದಾರೆ.

"ಮಾನವ ದೇಹದ ಬೆನ್ನು ಮೂಳೆಯ ಪ್ರತೀಕವೇ ಕಂಡಾಯ" ಎಂಬ ವಿವರಣೆ ನೀಡುವ ಭಕ್ತಾದಿಗಳು ಕಂಡಾಯಕ್ಕೆ ಭಕ್ತಿಪೂರ್ವಕವಾಗಿ ಮಜ್ಜನ ಮಾಡಿಸಿ ಅನಂತರ ನವರತ್ನ ಮಾಲೆ, ಯಜ್ಞೋಪವೀತ ಹೊಸವಸ್ತ್ರಗಳನ್ನು ಧರಿಸಿ ಹೂ ಹೊಂಬಾಳೆಯಲ್ಲಿ ಅಲಂಕರಿಸುತ್ತಾರೆ.

ಮುಡಿಸೇವೆ: ಚಿಕ್ಕಲ್ಲೂರು ಮತ್ತು ಕಪ್ಪಡಿ ಜಾತ್ರೆಗಳಲ್ಲಿ ನೀಲಗಾರರು ತಮ್ಮ ಸಮರ್ಪಣಾಭಾವದಿಂದ ಮುಡಿ ನೀಡುವ ಪದ್ಧತಿಯುಂಟು. ಸಾಮಾನ್ಯವಾಗಿ ಪುರುಷರು ಮಹಿಳೆಯರು ಮತ್ತು ಮಕ್ಕಳು ಪೂರ್ಣ ಮುಡಿಸೇವೆ ನೀಡುತ್ತಾರೆ. ಕೆಲವು ಮಹಿಳೆಯರು ಪಂಚಮುಡಿಸೇವೆ ನೀಡುತ್ತಾರೆ. ಚಿಕ್ಕಲ್ಲೂರಿನಲ್ಲಿ ವರ್ಷವೊಂದಕ್ಕೆ ಹತ್ತು ಸಾವಿರದಿಂದ ಇಪ್ಪತ್ತು ಸಾವಿರದವರೆಗೆ ಭಕ್ತರು ಮುಡಿಸೇವೆಯಲ್ಲಿ ಪಾಲ್ಗೊಳ್ಳುವುದಾಗಿ ತಿಳಿದು ಬರುತ್ತದೆ.

ನಂದಿ ದಾಟಿಸುವುದು: ಮಂಟೇಸ್ವಾಮಿ ಜಾತ್ರೆ ಸಂದರ್ಭದಲ್ಲಿ ನಂದಿಯನ್ನು ಮಂಗಳವಾದ್ಯದೊಂದಿಗೆ ದೇವಸ್ಥಾನಕ್ಕೆ ಕರೆತರುವುದು ರಿವಾಜು. ಈ ಸಂದರ್ಭದಲ್ಲಿ ಭಕ್ತಾದಿಗಳು ಹರಕೆ ಹೊತ್ತು ನಂದಿಯಿಂದ ದಾಟಿಸಿಕೊಳ್ಳುವುದು ರೂಢಿ. ಉತ್ಸವ ಬರುವ ದಾರಿಯಲ್ಲಿ ಸಾಲು ಸಾಲಾಗಿ ಭಕ್ತಾದಿಗಳು ಮಲಗಿರುತ್ತಾರೆ. ನಂದಿ ಭಕ್ತಾದಿಗಳನ್ನು ದಾಟಿ ಹೋಗುತ್ತಾನೆ. ಇದರಿಂದ ಕಷ್ಟಗಳು ಪರಿಹಾರವಾಗುವುದೆಂಬ ನಂಬಿಕೆಯಿದೆ. ಏನಾದರೂ ತೊಂದರೆಯಿದ್ದಲ್ಲಿ ನಂದಿ ದಾಟುವುದಿಲ್ಲ. ಮತ್ತೆ ಹರಕೆ ಕಟ್ಟಬೇಕಾಗುತ್ತದೆ. ಈ ಪದ್ಧತಿ ಮಂಟೇಸ್ವಾಮಿ ಜಾತ್ರೆಗಳಲ್ಲಿ ವಿಶೇಷವಾಗಿ ನಡೆಯುತ್ತದೆ.

ಜಾತ್ರಾ ಸಂದರ್ಭದಲ್ಲಿ ತ್ರಿಕಾಲವೂ ಪೂಜೆ ನಡೆಯುವುದಲ್ಲದೆ, ಹುಲಿವಾಹನ, ಗಜವಾಹನ, ಪಲ್ಲಕ್ಕಿ ಮಂಟಪೋತ್ಸವಗಳು, ಮಂಟೇಸ್ವಾಮಿ ಕಥಾ ಪ್ರಸಂಗಗಳು ತಪ್ಪದೆ ನಡೆಯುವುದು ವಿಶೇಷ.

ಮಂಟೇಸ್ವಾಮಿ ಕಾವ್ಯವನ್ನು ದಾಖಲಿಸುವ ಸಂದರ್ಭದಲ್ಲಿ ನಾವು ಬಹುಮುಖೀ ದಾಖಲೀಕರಣ ವಿಧಾನವನ್ನು ಅನುಸರಿಸಿದ್ದೇವೆ. ಬಹುಮುಖೀ ದಾಖಲೀಕರಣ ಒಂದು ಅರ್ಥಪೂರ್ಣ ಪರಿಕಲ್ಪನೆ. ನಮ್ಮ ದಾಖಲೀಕರಣ ತಂಡ ಚಿಕ್ಕಲ್ಲೂರು ಜಾತ್ರೆಗೆ ಭೇಟಿಕೊಟ್ಟಿತ್ತು. ಅಲ್ಲಿ ನಾವು ಮಂಟೇಸ್ವಾಮಿನ್ನು ಪರಂಪರೆಯ ಆಚರಣೆಗಳು ಶ್ರವ್ಯ ಮತ್ತು ದೃಶ್ಯ ಮಾಧ್ಯಮದಲ್ಲಿ ವಿವಿಧ ಅತ್ಯಾಧುನಿಕ ವೈಜ್ಞಾನಿಕ ಸಲಕರಣೆಗಳನ್ನು ಬಳಸಿ ಮಾಡಿಕೊಳ್ಳಲಾಯಿತು.

ಆರಂಭದಲ್ಲಿ ಮಂಟೇಸ್ವಾಮಿಯ ಕ್ಷೇತ್ರಪರಿಚಯವನ್ನು ಮಾಡಿಕೊಂಡು ಅನಂತರ ಕಲಾವಿದರ ಜೀವನ ವಿವರಗಳನ್ನು ಸಂಗ್ರಹಿಸಿಕೊಳ್ಳಲಾಯಿತು. ಮಂಟೇಸ್ವಾಮಿ ಕಾವ್ಯ ಪಠ್ಯ ಮತ್ತು ಇತರ ಮಾಹಿತಿಗಳನ್ನು ಸಹಜಸನ್ನಿವೇಶದಲ್ಲೇ ಸಂಗ್ರಹಿಸಿಕೊಳ್ಳಲಾಯಿತು.

ಅತ್ಯುತ್ತಮ ಮಟ್ಟದ ದಾಖಲೀಕರಣ ಮಾಡಿಕೊಂಡು ವಿವಿಧ ಪಠ್ಯಗಳನ್ನಾಧರಿಸಿ ಪಠ್ಯವನ್ನು ರೂಪಿಸಲಾಯಿತು.

ಮಂಟೇಸ್ವಾಮಿ ಕಾವ್ಯದ ವಿವಿಧ ಪಠ್ಯಗಳನ್ನು ಊರೂರ ಮೇಲೆ ಸಹಜಸನ್ನಿವೇಶದಲ್ಲಿ ಪ್ರಸ್ತುತಪಡಿಸಿರುವ ಪಠ್ಯಗಳನ್ನು ದೊರಕಿಸಿಕೊಳ್ಳಲಾಗಿದೆ. ಅವರಲ್ಲಿ ಮುಖ್ಯವಾದವರು ಕುಂತೂರು ಕಾಳಶೆಟ್ಟರು, ಕೆಬ್ಬೇಪುರದ ಸಿದ್ದರಾಜು, ಉಳ್ಳಂಬಳ್ಳಿ ಮಾದೇವು, ಕೃಷ್ಣಾಪುರ ಎಂ. ಮಹದೇವಸ್ವಾಮಿ, ಶ್ರೀಮತಿ ಇಂದ್ವಾಡಿ ಜಯಮ್ಮ, ಶ್ರೀಮತಿ ಬನ್ನೂರು ಕೆಂಪಮ್ಮ, ದೊಡ್ಡಮೋಳೆ ದೊಡ್ಡಗವಿಬಸಪ್ಪ, ಪುರಿಗಾಲಿ ಮಹದೇವು, ಮನೆಯೂರು ಹುಚ್ಚುಮಾದಶೆಟ್ಟಿ, ಹೊಂಗನೂರು ಹಾಲಗೂಡಯ್ಯ, ಕಾಲನುಂಡಿ ಸುಬ್ಬಶೆಟ್ಟಿ, ಅಮಚವಾಡಿ ಮಹದೇವಗೌಡ, ಚಾಮರಾಜನಗರ ಮಹೇಶ್, ರಾಮಸಮುದ್ರ ನಿಂಗಶೆಟ್ಟಿ, ಹೊಂಗನೂರು ಸಿದ್ದಯ್ಯ, ದೊಡ್ಡರಾಯಪೇಟೆ ಮಾದಶೆಟ್ಟರು, ಯಳಂದೂರು ವೈ.ಕೆ.ವೇಣುಗೋಪಾಲ್, ಅಂಕಳ್ಳಿ ಸಿದ್ದಯ್ಯ, ಸಿದ್ದಯ್ಯನಪುರ ಸಿದ್ದರಾಜು, ತಿಮ್ಮರಾಜುಪು ರಂಗಯ್ಯ, ಕೊಳ್ಳೇಗಾಲ ಮೋಳೆಯ ರಾಜಶೆಟ್ಟಿ, ಕೃಷ್ಣಾಪುರದ ದುಂಡುಶೆಟ್ಟಿ, ಮಾಂಬಳ್ಳಿ ತಂಬೂರಿ ಶ್ರೀನಿವಾಸ್, ಕುಂತೂರು ದುಂಡಿಮಾದಶೆಟ್ಟಿ, ಚಿಲಕವಾಡಿ ಮಹದೇವು, ದೊಡ್ಡಿಂದುವಾಡಿಬಸವಯ್ಯ, ಮಲ್ಲಿಗಹಳ್ಳಿ ಮಹದೇವು, ಮಲ್ಲಿಗಹಳ್ಳಿ ಮಹದೇವಯ್ಯ, ಉತ್ತೂರು ಪುಟ್ಟಶೆಟ್ಟಿ, ಗಾಣಾಳು ಪುಟ್ಟಮಾದಯ್ಯ, ಕೋನಮಾನಹಳ್ಳಿ ಲಕ್ಷ್ಮಣ್, ಕೋನಮಾನಹಳ್ಳಿ ಚಂದ್ರಯ್ಯ, ಚೋರಮಾರನಹಳ್ಳಿ ತಂಬೂರಿ ಕೃಷ್ಣಾನಾಯಕ್, ಚೋರಮಾನಹಳ್ಳಿ ಮಣಿಮಾದನಾಯಕ್, ಶಿವನಹಳ್ಳಿ ಮಾದಿರಯ್ಯ, ಕೆ.ಎಂ.ದೊಡ್ಡಿ ನೀಲಗಾರ ನಾರಣಪ್ಪ, ಗೌಡಗೆರೆ ದಮ್ಮಡಿಬಸವಯ್ಯ, ಗೌಡಗೆರೆ ಋಇವಮಾದಯ್ಯ, ಮಳವಳ್ಳಿ ಗುರುಬಸವಯ್ಯ ಇವರೇ ಮುಂತಾದ ನೀಲಗಾರ ಕಲಾವಿದರು ಪ್ರಸ್ತುತಪಡಿಸಿದ ಸಹಜ ಪಠ್ಯಗಳನ್ನು ಸಹಜ ಸನ್ನಿವೇಶದಲ್ಲಿ ಅಭ್ಯಸಿಸಿ ಶ್ರವ್ಯ ಮಾಧ್ಯಮದಲ್ಲಿ ದಾಖಲಿಸಿಕೊಳ್ಳಲಾಗಿದೆ.

ಹಾಗೆಯೇ ಪುರಿಗಾಲಿ ಮಹದೇವು ಮತ್ತು ಬನ್ನೂರು ಕೆಂಪಮ್ಮ ಇವರು ಪ್ರಸ್ತುತಪಡಿಸಿದ ಮಂಟೇಸ್ವಾಮಿ ಪೂರ್ಣಕಥಾ ಭಾಗವನ್ನು ೨೪ ಗಂಟೆ ಅವಧಿಯ ಆಡಿಯೋ ವೀಡಿಯೋ ಮೂಲಕ ದಾಖಲಿಸಿಕೊಳ್ಳಲಾಯಿತು. ಜೊತೆಗೆ ಒಂದು ಟೇಪ್‌ರೇಕಾರ್ಡರ್‌ನ್ನು ಬಳಸಿ ಪಠ್ಯವನ್ನು ಧ್ವನಿಸುರುಳಿಯಲ್ಲಿ ಮುದ್ರಿಸಿಕೊಳ್ಳಲಾಗಿದೆ. ಕಲಾವಿದರು ಪ್ರಸ್ತುತಪಡಿಸುವ ಕಥಾನಕದ ಯಾವ ಎಳೆಯೂ ತಪ್ಪಿ ಹೋಗದಂತೆ ಎಚ್ಚರವಹಿಸಲಾಗಿದೆ. ಹಂತ ಹಂತವಾಗಿ ಕಥಾಭಾಗ ಮುಂದುವರಿಯುತ್ತಿದ್ದಂತೆ ಹಾಡಿನಗತಿಯನ್ನು ಅನುಸರಿಸಿ ಕತೆಯ ಓಟವನ್ನು ಟಿಪ್ಪಣಿ ಮೂಲಕ ಬರೆದುಕೊಳ್ಳಲಾಗಿದೆ. ಹೀಗೆ ಮಂಟೇಸ್ವಾಮಿ ಪಠ್ಯದ ಹಾಡು ಮತ್ತು ಅದರ ಎಲ್ಲಾ ಸಂದರ್ಭದ ಸನ್ನಿವೇಶಗಳನ್ನು ಸಾಧ್ಯವಾದಷ್ಟು ಸಮಗ್ರವಾಗಿ ದಾಖಲೀಕರಣ ಮಾಡಿಕೊಳ್ಳಲಾಗಿದೆ.

ಮಂಟೇಸ್ವಾಮಿ ಕಾವ್ಯದ ಪೌರಾಣಿಕ ಪಾತ್ರಗಳಾದ ಮಂಟೇಸ್ವಾಮಿ, ರಾಚಪ್ಪಾಜಿ, ಲಿಂಗಯ್ಯಚೆನ್ನಯ್ಯ, ಚೆನ್ನಾಜಮ್ಮ, ದೊಡ್ಡಮ್ಮತಾಯಿ, ಅವಳಿಜವಳಿ ಅರಸುಮಕ್ಕಳು, ಫಲಾರದಯ್ಯ, ಜೋಡಿ ಶರಣರುಗಳಾದ ಮಲ್ಲಿಗೆಮಹದೇವಮ್ಮ, ಬಾಚಿಬಸವಾಚಾರಿ ಮುದ್ದಮ್ಮ, ಬಸವಣ್ಣ ನೀಲಲೋಚನೆ, ಮುತ್ತತ್ತಿರಾಯ, ಮತ್ತು ಸಿದ್ದಪ್ಪಾಜಿ– ಇವರುಗಳ

ನಡುವೆ ನಡೆದ ಸಂಭಾಷಣೆ ಮತ್ತು ಸಂವಾದ ಭಾಗಗಳು ಹಾಗೂ ಆಚರಣೆಯ ಸಂದರ್ಭದಲ್ಲಿ ಮೂರ್ತಗೊಳ್ಳುವ ಪಠ್ಯಭಾಗಗಳನ್ನು ಸಂಪೂರ್ಣವಾಗಿ ದಾಖಲಿಸಿಕೊಳ್ಳಲಾಗಿದೆ.

ಮಂಟೇಸ್ವಾಮಿ ಮಹಾಕಾವ್ಯವನ್ನು ದಾಖಲಿಸುವುದರ ಜೊತೆಗೆ ಸ್ಥಳೀಯ ಪುರಾಣ ಮತ್ತು ಐತಿಹ್ಯಗಳನ್ನೂ ಆ ಸಂಬಂಧವಾಗಿ ಕಲಾವಿದರು ಒದಗಿಸಿದ ತಿಳಿವಳಿಕೆಯನ್ನೂ ಸಂಗ್ರಹಿಸಲಾಗಿದೆ. ಹಲಗೂರು ಚಿಲ್ಲಾಪುರಗಳಲ್ಲಿ ಕಾಣಸಿಗುವ ಕಬ್ಬಿಣದ ತೊಲಗಂಬ, ಕಬ್ಬಿಣದ ತುಂಡು ತುಂಡು ಭಾಗಗಳು, ಕಾದಗಟ್ಟಿ ಈ ಅವಶೇಷಗಳ ಬಗ್ಗೆ ಮಾಹಿತಿ ಮಾಡಿಕೊಳ್ಳಲಾಯಿತು. ಎಲ್ಲೆಲ್ಲಿ ಸಾಧ್ಯವೊ ಅಲ್ಲಲ್ಲಿ ಛಾಯಾಚಿತ್ರಗಳನ್ನು ಒದಗಿಸಿಕೊಳ್ಳಲಾಯಿತು.

ಮಂಟೇಸ್ವಾಮಿ ಮತ್ತು ಆತನ ಶಿಷ್ಯರು ಜೀವಂತವಿದ್ದಾಗ ಓಡಾಡಿದ ದಾರಿ ಮತ್ತು ಮಡಿವಾಳ ಮಾಚಯ್ಯ ಶಿವಕಂತೆ ಮಡಿಮಾಡಿದ ಸ್ಥಳ, ಮಂಟೇಸ್ವಾಮಿ ಸ್ನಾನಮಾಡಿದ ಜಾಗ, ಕಲಿಪುರುಷನ ದರ್ಶನವಾದ ಸ್ಥಳ, ರಾಚಪ್ಪಾಜಿ ಮತ್ತು ದೊಡ್ಡಮ್ಮತಾಯಿಗೆ ಮದುವೆ ಮಾಡಬೇಕೆಂದಾಗ ರಾಚಪ್ಪಾಜಿ ಕೋಪಿಸಿಕೊಂಡು ಕೆರೆಯ ತೋಪಿನಲ್ಲಿ ಕುಳಿತಿದ್ದ ಸ್ಥಳ, ದೊಡ್ಡಮ್ಮತಾಯಿ ಮುಟ್ಟಾದ ಬಟ್ಟೆಯನ್ನು ಕಾಡಂಕನಹಳ್ಳಿಯ ಕೊಳದಲ್ಲಿ ತೊಳೆದುದರ ಪರಿಣಾಮವಾಗಿ ಕರೆನೀರೆಲ್ಲ ಕೆಂಪಗಾಯಿತು ಎಂದೂ ಪ್ರಚಲಿತವಿರುವ ಸ್ಥಳೀಯ ಐತಿಹ್ಯಗಳಿಗೆ ಸಮರ್ಥನೆ ಒದಗಿಸುತ್ತಾರೆ. ಭೌತಿಕ ವಸ್ತುಗಳನ್ನು ಆಧಾರವಾಗಿ ತೋರಿಸಿ ನೀಡಿದ ವಿವರಗಳನ್ನು ಟಿಪ್ಪಣಿ ಮಾಡಿಕೊಳ್ಳಲಾಗಿದೆ.

ಸದ್ಯ ಲಭ್ಯವಾಗಿರುವ ಎಲ್ಲ ಪಠ್ಯಗಳೂ ಮಂಟೇಸ್ವಾಮಿ ಕೈಲಾಸದಿಂದ ಕಲ್ಯಾಣಕ್ಕೆ ಬಂದವರು ಎಂದೇ ಪ್ರತಿಪಾದಿಸುತ್ತವೆ. ಆದರೆ 12ನೇ ಶತಮಾನದ ಕಲ್ಯಾಣದ ಬಸವಣ್ಣನವರೊಂದಿಗೆ ಮಂಟೇಸ್ವಾಮಿ ವಿಷಯವನ್ನು ತಳಕು ಹಾಕಿರುವುದು ಸ್ಪಷ್ಟ. ವಾಸ್ತವವಾಗಿ ಕಲ್ಯಾಣ ಎಂದರೆ ಇಲ್ಲಿ ಕಡೆಯ ಕಲ್ಯಾಣ ಎನಿಸಿದ ಕೊಡೇಕಲ್ಲು ಹಾಗೂ ಬಸವಣ್ಣ ಎಂದರೆ ಆದಿಕಲ್ಯಾಣದ ಬಸವಣ್ಣನಾಗಿರದೆ ಕೊಡೇಕಲ್ಲ ಬಸವಣ್ಣ ಎಂಬುದು ಈಗ ಸಾಬೀತಾಗಿರುವ ಸಂಗತಿ. ಮಂಟೇಸ್ವಾಮಿ ಕಾವ್ಯ ಪರಂಪರೆಯ ಗಾಯಕರಿಗೆ ಈ ಸ್ಪಷ್ಟ ಐತಿಹಾಸಿಕ ಮಾಹಿತಿಗಳು ಗಮನಕ್ಕೆ ಬಾರದ ಕಾರಣ ಘಟನೆಗಳನ್ನು ಪುರಾಣೀಕರಿಸಿ ಹಾಡಿರುವುದೇ ಈ ಎಲ್ಲ ಗೊಂದಲಗಳಿಗೆ ಕಾರಣ.

ಕೊಡೇಕಲ್ ಬಸವಣ್ಣ (ಕ್ರಿ.ಶ. ೧೪೮೯–೧೫೭೫) ಜಾತಿಯ ಅಸಮಾನತೆಯ ವಿರುದ್ಧ 'ಅಮರಕಲ್ಯಾಣ'ವನ್ನು ರೂಪಿಸಿದ್ದರಿಂದ ಮಂಟೇಸ್ವಾಮಿಯವರು ಅಂಥ ಗುರುವನ್ನು ಅರಸಿಕೊಂಡು ಕೊಡೇಕಲ್‌ಗೆ ಹೋಗಿದ್ದಕ್ಕೆ ಕಾವ್ಯಾಧಾರಗಳಿವೆ. ಈ ಅಮರ ಕಲ್ಯಾಣ ಜಾತ್ಯತೀತ ಶರಣರ ಸಂಘಟನೆಯಾಗಿದ್ದು ಹೆಚ್ಚಿನವರು ತಳವರ್ಗದ ಶರಣರೇ ಆಗಿದ್ದರು ಎಂಬುದು ಗಮನಾರ್ಹ.

ಕೊಡೇಕಲ್ ಬಸವಣ್ಣ ಕೊಡೇಕಲ್‌ಗೆ ಬಂದು ನೆಲೆಸುವುದರ ಹಿಂದೆ ಬಲವಾದ ಕಾರಣ ಒಂದು ಇತ್ತು. ೧೨ನೇ ಶತಮಾನದ ಕಲ್ಯಾಣದ ಬಸವಣ್ಣ ತನ್ನ ಕೊನೆಗಾಲದಲ್ಲಿ ಕೆಲವು ಕಾಲ ಈ ಕೊಡೇಕಲ್‌ನಲ್ಲೇ ಇದ್ದ ಎಂಬ ಸಂಗತಿ ಅದಕ್ಕೆ ಕಾರಣ.

'ಅಮರಕಲ್ಯಾಣ'ವು ಕೊಡೇಕಲ್ ಬಸವನ ಒಂದು ಪರಿಕಲ್ಪನೆ. ೧೨ನೇ ಶತಮಾನದ ಆದಿಕಲ್ಯಾಣದ ಪ್ರಭಾವ ಕೊಡೇಕಲ್ ಬಸವನ ಮೇಲೆ ಅಗಾಧವಾದ ಪರಿಣಾಮ ಬೀರಿದೆ. ಅದೇ ರೀತಿಯಲ್ಲಿ ಕೊಡೇಕಲ್ ಬಸವನಿಗೆ ಕೊಡೇಕಲ್ ಪ್ರದೇಶದಲ್ಲಿ ಆದಿಕಲ್ಯಾಣದ ಮಾದರಿಯಲ್ಲೇ 'ಅಮರಕಲ್ಯಾಣ'ವನ್ನು ನಿರ್ಮಿಸಬೇಕೆಂಬ ಉತ್ಕಟವಾದ ಬಯಕೆ ಇತ್ತು ಎಂದು 'ನಂದಿ ಆಗಮಲೀಲೆ' (ವೀರಸಂಗಯ್ಯ ವಿರಚಿತ ಕಾವ್ಯ) ತಿಳಿಸುತ್ತದೆ. ಅಮರಕಲ್ಯಾಣ ಎಂಬುದು ಭೌತಿಕ ಕಟ್ಟಡವಲ್ಲ. ಅದೊಂದು ಶರಣರ ಸಂಘಟನೆ. ಈ ಉದ್ದೇಶಕ್ಕಾಗಿ ಕೊಡೇಕಲ್‌ಗೆ ಬಂದ ಬಸವ 'ಕೊಡೇಕಲ್‌ಬಸವ' ಎನಿಸಿಕೊಂಡಿದ್ದಾನೆ.

ಕೊಡೇಕಲ್‌ಗೆ ಬರುವ ಮೊದಲು ಹಂಪಿಯಲ್ಲಿದ್ದ ಬಸವ ಕಲ್ಯಾಣದ ಬಸವಣ್ಣನವರು ಕೊಡೇಕಲ್‌ಗೆ ಬಂದಿದ್ದರು ಎಂಬ ಕಾರಣಕ್ಕಾಗಿಯೇ ಹಂಪಿಯಿಂದ ಬಂದು ಬೇಡರ ಹನುಮನಾಯಕನಿಂದ ಕೊಡೇಕಲ್‌ನ್ನು ಪಡೆದುಕೊಳ್ಳುತ್ತಾರೆ. ಈ ಕೊಡೇಕಲ್ ಬಸವನ ಮಗ ರಾಚಪ್ಪಯ್ಯ ಕನಕದಾಸನನ್ನು ಭೇಟಿಯಾಗುವ ಪ್ರಸಂಗವೂ ಬರುತ್ತದೆ. ಇದನ್ನು ಕೊಡೇಕಲ್ ಸಾಹಿತ್ಯ ದೃಢೀಕರಿಸುತ್ತದೆ.

ಕೊಡೇಕಲ್‌ಗ್ರಾಮ ಗುಲಬರ್ಗಾ ಜಿಲ್ಲೆಯ ಸುರಪುರ ತಾಲ್ಲೂಕಿನಲ್ಲಿದೆ. ಮೂಲತಃ ಹಂಪಿಯಲ್ಲಿ ಜನಿಸಿದ ಕೊಡೇಕಲ್ ಬಸವ ದೇಶಸಂಚಾರಗೈಯುತ್ತಾ ಕೊಡೇಕಲ್‌ಗೆ ಬಂದು ಬೇಡರ ಹನುಮನಾಯಕನಿಂದ ಆ ಪ್ರದೇಶವನ್ನು ಪಡೆದುಕೊಂಡು ಅಲ್ಲಿ ಈ ಪರಂಪರೆಯನ್ನು ಹುಟ್ಟುಹಾಕಿದರು ಎಂದು "ನಂದಿ ಆಗಮ ಲೀಲೆ" ಪ್ರತಿಪಾದಿಸುತ್ತದೆ.

ಕೊಡೇಕಲ್ ಸಾಹಿತ್ಯ ಕೊಡೇಕಲ್ ಬಸವಣ್ಣನವರನ್ನು ಕಲ್ಯಾಣದ ಬಸವಣ್ಣನ ಪುನರವತಾರ ಎಂದೇ ಉದ್ದಕ್ಕೂ ಬಗೆಯುತ್ತದೆ. ಕೊಡೇಕಲ್ ಬಸವನಿಗೂ ಕಲ್ಯಾಣದ ಬಸವಣ್ಣನವರಂತೆ ಇಬ್ಬರು ಮಡದಿಯರು. ಮೊದಲನೆಯ ಮಡದಿ ತೀರಿಕೊಂಡ ಮೇಲೆ ಎರಡನೆಯ ಪತ್ನಿ ಮಹದೇವಮ್ಮನಿಂದ ಬಸವರಾಚಣ್ಣ, ಗುಹೇಶ್ವರ ಮತ್ತು ಸಂಗಯ್ಯ ಎಂಬ ಮೂವರು ಪುತ್ರರತ್ನರನ್ನು ಪಡೆಯುತ್ತಾನೆ.

ಮಂಟೇಸ್ವಾಮಿ ಕೊಡೇಕಲ್ ಬಸವನ ಶಿಷ್ಯ. ಗುರುವಿನ ಆಶಯದಂತೆ ಜಾತಿ ಅಸಮಾನತೆಯನ್ನು ನಿವಾರಿಸಿ ಸಮಸಮಾಜದ ನಿರ್ಮಾಣಕ್ಕೆ ಸಂಕಲ್ಪ ಮಾಡಿ ಕೊಡೇಕಲ್‌ನಿಂದ (ಉತ್ತರ ದೇಶದಿಂದ) ಬರುವಾಗ ಗುರುಪುತ್ರ ರಾಚಪ್ಪಾಜಿ ಮತ್ತು ಇತರರೊಡನೆ ಬಂದವನು ಆತ. ಹಾಗೆ ಬರುವ ಮಾರ್ಗದಲ್ಲಿ ಕೊಡೇಕಲ್ ಬಸವಣ್ಣ ಹೇಗೆ ಅಮರಕಲ್ಯಾಣದ ಉದ್ದೇಶಗಳ ಈಡೇರಿಕೆಗಾಗಿ ಶ್ರಮಿಸಿದನೊ ಅದೇ ತೆರನಾಗಿ ಮಂಟೇಸ್ವಾಮಿ ದಕ್ಷಿಣದಲ್ಲಿ ಕಾರ್ಯನಿರತನಾದ. ವೀರಶೈವ ಸಾಂಸ್ಥಿಕತೆಯನ್ನು ಮುರಿದು

ಕೆಲ್ಲೂರು, ಹಂಪಿ, ಚನ್ನಪಟ್ಟಣ, ಹೊನ್ನಾಯಕನ ಹಳ್ಳಿಗಳಲ್ಲಿ ನಡೆಯುವ ಉತ್ಸವ ಜಾತ್ರೆಗಳು ಇದಕ್ಕೆ ನಿದರ್ಶನ ಎನಿಸಿವೆ.

ಒಟ್ಟಿನಲ್ಲಿ ಸಮಸಮಾಜದ ನಿರ್ಮಾಣ ಹಾಗೂ ಆ ಮೂಲಕ ಸಮಾಜದಲ್ಲಿ ಬದಲಾವಣೆ ತರಲು ನಡೆಸಿದ ಒಂದು ಪ್ರಾಮಾಣಿಕ ಪ್ರಯತ್ನ ಈ ಪರಂಪರೆ ಎನ್ನಬಹುದು.

೩. ವಕ್ತೃಗಳ ವಿವರ

ಶ್ರೀ ದೊಡ್ಡಗವಿಬಸಪ್ಪ – (೪೭ ವರ್ಷ ವಯಸ್ಸು)

ಚಾಮರಾಜನಗರ ತಾಲ್ಲೂಕಿನ ಸಮೀಪದ ದೊಡ್ಡಮೋಳೆ ಗ್ರಾಮ ತುಂಬ ಪುಟ್ಟದು. ಈ ಗ್ರಾಮದಲ್ಲಿ ಉಪ್ಪಾರ ಜನಾಂಗದವರೇ ಅಧಿಕ ಸಂಖ್ಯೆಯಲ್ಲಿರುವುದರ ಜೊತೆಗೆ ನೀಲಗಾರರು ಇದ್ದಾರೆ. ಇಲ್ಲಿನ ನೀಲಗಾರರು ಹೇಳುವ ಕಥಾ ಪ್ರಸಂಗಗಳಿಗೆ ಮತ್ತುಭರಿಸುವ ಶಕ್ತಿಯಿದೆ ಎಂದರೆ ತಪ್ಪಾಗಲಾರದು.

ಈ ಗ್ರಾಮದ ದೊಡ್ಡಗವಿಬಸಪ್ಪರವರಿಗೆ ಈಗ ೪೭ ವರ್ಷ ವಯಸ್ಸು. ಉಪ್ಪಾರ ಜನಾಂಗದವರಾದ ಸುಮಾರು ಇವರು ೨೦೦೦ಕ್ಕೂ ಮೇಲ್ಪಟ್ಟ ಕಥೆಗಳನ್ನು ಹಾಡಿ ಜನರ ಮನಸ್ಸನ್ನು ರಂಜಿಸಿದ್ದಾರೆ.

ಆರ್ಥಿಕವಾಗಿ ಹಿಂದುಳಿದ ಗಡಿ ಜಿಲ್ಲೆ ಎನಿಸಿರುವ ಚಾಮರಾಜನಗರ ಜಾನಪದ ನಗರ. ಇಲ್ಲಿ ಮನೆಗೊಬ್ಬ ಜಾನಪದ ಕಲಾವಿದರಿರುವ ಈ ನೆಲದಲ್ಲಿ ಮಲೈಮಹದೇಶ್ವರ, ಮಂಟೇಸ್ವಾಮಿ, ಬಿಳಿಗಿರಿರಂಗಸ್ವಾಮಿ ಕಥಾ ಕಾವ್ಯಲಹರಿ ಜನತೆಯ ನಾಲಿಗೆಯಲ್ಲಿ ಹರಿದಾಡುತ್ತಿದೆ.

ಶ್ರೀಯುತರು ಧರೆಗೆದೊಡ್ಡವರ ಕಥೆಯನ್ನು ೨೩ ವರ್ಷದಿಂದಲೂ ಹಾಡುತ್ತಾ ಬರುತ್ತಿದ್ದಾರೆ. ಇವರಿಗೆ ರಾಜಮ್ಮ ಎಂಬ ಮಡದಿ ಮತ್ತು ಮೂರು ಮಕ್ಕಳು. ಅವರ ಪೈಕಿ ಒಂದು ಗಂಡು ಎರಡು ಹೆಣ್ಣು.

ಶ್ರೀಯುತರು ಶ್ರೀ ಮಲ್ಯೆ ಮಹಾದೇಶ್ವರ ಸಂಘದ ಮುಖ್ಯಸ್ಥರು. ಹಗಲಿಗೆ ತಂಬೂರಿ ಏರಿಸಿ ಹಾಡಲು ಕುಳಿತರೆ ದಿನಪೂರ್ತಿ ಮೇಲೇಳದೆ ಕಣ್ಣಿಗೆ ಕಟ್ಟುವಂತೆ ಪ್ರಸಂಗಗಳನ್ನು ಹೇಳುತ್ತಾರೆ.

ಇವರಿಗೆ ಮಲ್ಯೆ ಮಹದೇಶ್ವರನ ಕಥೆ, ಮಂಟೇಸ್ವಾಮಿ ಕಥೆ, ಮುಡುಕುತೊರೆ ಮಲ್ಲಪ್ಪನ ಕಥೆ, ಬಿಳಿಗಿರಿರಂಗಸ್ವಾಮಿ ಕಥೆ, ಜೋಗಿಹಾಡು, ನಂಜುಂಡೇಶ್ವರನ ಕಥೆ, ಬಾಲ್ನಾಗಮ್ಮನ ಕಥೆ, ಸಾರಂಗದರ ರಾಜನ ಕಥೆ, ನಿಂಗರಾಜಮ್ಮನ ಕಥೆ, ಹೀಗೆ ಹಲವಾರು ಜಾನಪದ ಕಥೆಗಳನ್ನು ಹಾಡಿ ರಂಜಿಸುವ ಮೋಡಿ ಮಾಡುವ ಕಲೆ ಈ ನೀಲಗಾರರಿಗಿದೆ. ಈಗಾಗಲೇ ಜಿಲ್ಲೆಯಲ್ಲಿ ಹೆಸರು ಮಾಡಿದ್ದಾರೆ. ಇದಲ್ಲದೆ ಬಿಜಾಪುರ, ಬೆಳಗಾವಿ, ರಾಮನಗರ, ಬೆಂಗಳೂರು ಸೇರಿದಂತೆ ರಾಜ್ಯದ ವಿವಿಧೆಡೆಗಳಲ್ಲಿ ತಂಬೂರಿ ಶೈಲಿಯ ನೀಲಗಾರರ ಹಾಡುಗಳನ್ನು ಹಾಡಿ ಜನರ ಮೆಚ್ಚುಗೆಗಳಿಸಿರುತ್ತಾರೆ.

ಧರೆಗೆದೊಡ್ಡವರ ಕಥೆಯನ್ನು ಇವರು ಮೂರು ರಾತ್ರಿ ಹಾಡುತ್ತಾರೆ. ಮೊದಲನೆಯ

ರಾತ್ರಿ ಕಥೆಯಲ್ಲಿ ಪರಂಜ್ಯೋತಿಯವರು ಕಲ್ಯಾಣದಿಂದ ಕೊಡೇಕಲ್ಲಿಗೆ ಬರುವ ಭಾಗ, ಅಲ್ಲಿಂದ ವಿಜಯನಗರಕ್ಕೆ ಬರುವ ಭಾಗ, ಅಲ್ಲಿಂದ ಸಖ್ರಾಯಪಟ್ಟಣಕ್ಕೆ ಬರುವ ಭಾಗ, ಸಖ್ರಾಯಪಟಣದಿಂದ ಕಾಗಿನೆಲೆಗೆ ಬಂದು ಕ್ರಮವಾಗಿ ರಾಚಪ್ಪಾಜಿ, ಗಾರುಡಿಗರ ಮಗಳಾದ ಚೆನ್ನಜಮ್ಮ, ರಾಜರಮಕ್ಕಳು ಹಾಗೂ ದೊಡ್ಡಮ್ಮತಾಯಿ ಎಂಬ ಶಿಶುಮಕ್ಕಳನ್ನು ಪಡೆದುಕೊಂಡು ಕತ್ತಲರಾಜ್ಯಕ್ಕೆ ಬರುತ್ತಾರೆ.

ಎರಡನೆಯ ರಾತ್ರಿ ಕಥೆ ಶಿಶುಮಕ್ಕಳನ್ನು ತಂದು ಬೊಪ್ಪೇಗೌಡನಪುರದಲ್ಲಿ ನೆಲೆಗೊಳಿಸಿ, ದೊಡ್ಡಮ್ಮತಾಯಿಗೆ ಮಠಮನೆ ಮಾಡಬೇಕು ಅಂತ್ಹೇಳಿ ಮಡಿವಾಳ ಮಾಚಪ್ಪನ ಮನೆಗೆ ಬರುತ್ತಾರೆ. ಮಡಿವಾಳ ಮಾಚಪ್ಪನ ಹೆಂಡ್ತಿ ಮಲ್ಲಿಗೆಮಹದೇವಮ್ಮ, ಇವರಿಗೊಬ್ಬನೇ ಮಗ ವೀರಣ್ಣ. ಕಾಲಾನಂತರ ಈ ವೀರಣ್ಣನೇ ಫಲಾರದಯ್ಯ. ನಂತರ ಈತನನ್ನು ಮಂಟೇಸ್ವಾಮಿಯವರು ಶಿಶುಮಗನನ್ನಾಗಿ ಪಡೆಯುತ್ತಾರೆ. ಧರೆಗೆದೊಡ್ಡವರಿಗೆ ಕಾಲಜ್ಞಾನ ಗೊತ್ತಿರುತ್ತದೆ. ಆದ್ದರಿಂದ ಮಾರಳ್ಳಿ ಗ್ರಾಮಕ್ಕೆ ಬರುತ್ತಾರೆ ಮುದ್ದಮ್ಮ ಮತ್ತು ಬಸಪ್ಪೋಜಿಯ ಏಳನನೆಯ ಮಗ ಕೆಂಪಾಚಾರಿಯನ್ನು ಶಿಶುಮಗನಾಗಿ ಪಡೆದು (ಆರನೆಯ ಜನ್ಮದಲ್ಲಿ ಆದಿಕಲ್ಯಾಣದಲ್ಲಿರುತ್ತಾರೆ.) ಹನ್ನೆರಡು ವರ್ಷ ಮಗನನ್ನು ಎಳೆ ಕುಂದೂರು ಬೆಟ್ಟದ ಕಲ್ಲುಗವಿಯಲ್ಲಿ ತಂದು ಕೂಡುತ್ತಾರೆ.

ಮೂರನೆಯ ರಾತ್ರಿ – ಕುಂದೂರು ಬೆಟ್ಟದ ಕಲ್ಲುಗವಿಯಿಂದ ಕೆಂಪಾಚಾರಿಯನ್ನು ಬರಮಾಡಿ ನೀಲಗಾರನ್ನಾಗಿ ಮಾಡಿ ಸಿದ್ದಪ್ಪಾಜಿ ಎಂಬ ನಾಮಕರಣವನ್ನು ಮಾಡುತ್ತಾರೆ. ತೆಂಕಲರಾಜ್ಯದಿಂದ ಬಡಗಲರಾಜ್ಯಕ್ಕೆ ಕಲಿ ಹೋಗುತ್ತಿರುವುದನ್ನು ಧರೆಗೆದೊಡ್ಡವರು ನೋಡುತ್ತಾರೆ ಇದನ್ನು ಆಂತರಿಕ ಜ್ಞಾನ ಅಥವಾ ಮೂರನೆಯ ಕಣ್ಣು ಎನ್ನುತ್ತಾರೆ. ಕಲಿಯನ್ನು ನೋಡಲಾರೆ ಆದ್ದರಿಂದ ನನಗೆ ಜಲಬಾವಿಯಲ್ಲಿ ತೂಗುಮಂಚ ಆಗಬೇಕು ಎನ್ನುತ್ತಾರೆ. ಕಬ್ಬಿಣ ಭಿಕ್ಷೆ ತರಲು ಹಲಗೂರಿಗೆ ಮೂರು ಜನ ಮಾರಿಯರ ಸಮೇತ–ಸಿದ್ದಪ್ಪಾಜಿಯನ್ನು ಕಳುಹಿಸಿ ಕೊಡುತ್ತಾರೆ. ಹಲಗೂರಿನಲ್ಲಿ ಚೆಲ್ಲಪುರ ಏಳು ಬೀದಿ, ಹಲಗೂರು ಏಳು ಬೀದಿ ಈ ಏಳು ಬೀದಿಗೆ ಏಳು ದೊರೆಗಳು. (ಹಲಗೂರಿನ ಬಸವನ ಬೆಟ್ಟದಲ್ಲಿ ಸೋನೆ ನೀರು ಹರಿಯುತ್ತಿರುತ್ತದೆ. ಹಲಗೂರಿನವರು ಅದನ್ನು ತಡೆದು ಕಬ್ಬಿಣ ಕುಲುಮೆಗಾಗಿ ಬಳಸಿಕೊಳ್ಳುತ್ತಿದ್ದರು ಎಂಬ ಪ್ರತೀತಿ ಇದೆ.) ಈ ಎಲ್ಲಾ ಭಾಗಗಳು ಮೂರನೆಯ ರಾತ್ರಿ ಕಥೆಯಲ್ಲಿ ಬರುತ್ತದೆ ಎಂಬುದಾಗಿ ತಮ್ಮ ಕಥೆಯ ಹಂದರವನ್ನು ಬಿಚ್ಚಿಡುತ್ತಾರೆ.

ಶ್ರೀ ಸಿದ್ದರಾಜು – (೪೭ ವರ್ಷ ವಯಸ್ಸು)

ನಾಡಿನಾದ್ಯಂತೆ ಧರೆಗೆದೊಡ್ಡವರ ಕಥೆಯನ್ನು ಹಾಡಿ ರಂಜಿಸುತ್ತಿರುವ ಶ್ರೀ ಕೆ.ಬಿ. ರಾಚಯ್ಯನರವ ಪುತ್ರ ಆರ್. ಸಿದ್ದರಾಜುರವರು ತಂದೆಯಂತೆ ತಕ್ಕ ಮಗ. ಉತ್ತಮ ಕಂಠಸಿರಿಯ ಕಲಾವಿದರಾದ ಇವರು ಮಂಟೇಸ್ವಾಮಿ ಕಾವ್ಯವನ್ನು ಪ್ರಸ್ತುತಿಪಡಿಸುವಾಗ ತಮ್ಮ ಕೈಬೆರಳಿನಲ್ಲಿರುವ ಗಗ್ಗರದ ಕೈಚಳಕದಿಂದ ಶ್ರೋತೃಗಳನ್ನು ತಮ್ಮೆಡೆಗೆ

ಸೆಳೆದುಕೊಳ್ಳುತ್ತಾರೆ. ಇದರ ಜೊತೆಗೆ ತಮ್ಮ ನಯನ ಮನೋಹರ ಧಾಟಿ ಪ್ರೇಕ್ಷಕರನ್ನು ಆಕರ್ಷಿಸಿದೆ.

ಮೂರು ತಲೆಮಾರಿನಿಂದ ಧರೆಗೆದೊಡ್ಡವರ ಕಥೆಯನ್ನು ಊರೂರ ಮೇಲೆ ಹಾಡುತ್ತಾ ಜನರ ಮನಸ್ಸನ್ನು ಗೆದ್ದಿರುವರು. ಶ್ರೀ ಸಿದ್ದರಾಜುರವರಿಗೆ ಕಥೆ ಮಾಡಲು ಪ್ರೇರಣೆ ಅವರ ತಂದೆಯವರು. ಸುಮಾರು ಹತ್ತನೆಯ ವಯಸ್ಸಿನಿಂದ ತಂದೆಯವರ ಜೊತೆಯಲ್ಲಿ ಕಥೆ ಮಾಡುತ್ತಾ ದಿನಗಳನ್ನು ತುಂಬುತ್ತಿದ್ದರು. ಕಾಲಾನಂತರ ತಂದೆಯವರು ಮಣ್ಣಿನಲ್ಲಿ ಮರೆಯಾದ ನಂತರ ಕಥೆಗೆ ಒಂದು ರೀತಿಯ ಹಿಡಿತ ಸಿಕ್ಕಿತು ಎನ್ನುವುದಕ್ಕಿಂತ ಆಸಕ್ತಿ ಮೂಡಿತ್ತು ಎಂದೇ ಹೇಳಬೇಕು. ಇದಕ್ಕೆ ಕಾರಣವನ್ನು ಶ್ರೀ. ಸಿದ್ದರಾಜುರವರು ಹೀಗೆ ಹೇಳುತ್ತಾರೆ. "ನನ್ನ ತಂದೆಯವರು ದಿವಂಗತದ ದಿನ. ಶವ ಸಂಸಾರಕ್ಕೆ ಬಂದಷ್ಟು ಜನರು, ಬೇರೆ ಯಾವ ಒಬ್ಬ ಶಾಸಕರು ತೀರಿಕೊಂಡಾಗಲೂ ಇಷ್ಟೊಂದು ಹೆಚ್ಚಿನ ಸಂಖ್ಯೆಯ ಜನರು ಬಂದಿರಲು ಸಾಧ್ಯವಿಲ್ಲ ಅನ್ನುತ್ತಾ, ಈ ದೃಶ್ಯವನ್ನು ನನ್ನ ಎರಡು ಕಣ್ಣುಗಳಿಂದ ನೋಡಿ ತಣಿದೆ. ಅವತ್ತೆ, ನಾನು ನಿರ್ಧಾರ ಮಾಡಿದೆ, ಏನಂದರೆ ತಂದೆಯವರು ಹೇಗೆ ಜನ ಮನ್ನಣೆಯನ್ನು ಪಡೆದರೋ ಹಾಗೆ ನಾನು ಕೂಡ ಉತ್ತಮ ಕಥೆ ನೀಡಿ ಹೆಸರನ್ನು ಮಾಡಬೇಕೆಂದು ಪಣತೊಟ್ಟೆ" ಎನ್ನುತ್ತಾರೆ.

ಸುಮಾರು ೧೫೦೦ ಕಥೆಗಿಂತಲೂ ಹೆಚ್ಚು ಕಥೆಗಳನ್ನು ಹಳ್ಳಿಯಲ್ಲಿ ಪ್ರದರ್ಶನ ನೀಡುತ್ತಿರುವ ಇವರು ಎಡಗೈ ಪಂಗಡಕ್ಕೆ ಸೇರಿದವರಾಗಿರುತ್ತಾರೆ. ಮಡದಿ ಮಹಾದೇವಮ್ಮ ಮೂರು ಜನ ಮಕ್ಕಳು. ಅವರಲ್ಲಿ ಎರಡು ಹೆಣ್ಣು, ಒಂದು ಗಂಡು. ಈಗ ಇವರೆಲ್ಲರೂ ವಿದ್ಯಾಭ್ಯಾಸ ಮಾಡುತ್ತಿದ್ದಾರೆ.

ಶ್ರೀ. ಆರ್. ಸಿದ್ದರಾಜುರವರು ತುಂಬಾ ತಾಳ್ಮೆಯ ಸ್ವಭಾವದವರು. ಪ್ರದರ್ಶನ ಎಲ್ಲೇ ನೀಡಲಿ ಶ್ರೋತೃಗಳು ಏನಾದರು ಪ್ರೀತಿಯಿಂದ ಕೊಡುವ ದವಸ, ಧಾನ್ಯ, ಕಾಸುಗಳನ್ನು ಸಂತೋಷದಿಂದ ಸ್ವೀಕರಿಸುವ ಗುಣದವರು. ಒಂದು ಕಥೆಗೆ ಇಷ್ಟೇ ಕೊಡಬೇಕು ಎಂಬ ಷರತ್ತಿನ ಬೇಡಿಕೆ ಇವರಲ್ಲಿ ಇರೋದಿಲ್ಲ. ಆನಪದ ಕಾವ್ಯಗಳನ್ನು ಕಲಿಯುವುದಕ್ಕೆ ಅವರ ತಂದೆಯವರೇ ಮೊದಲ ಗುರು. ಅವರ ಜೊತೆ ೧೫ ವರ್ಷ ಊರೂರ ಮೇಲೆ ಸುತ್ತಾಡಿ ಧರೆಗೆದೊಡ್ಡವರ ಕಥೆ, ಮಲ್ಯೆ ಮಹದೇಶ್ವರನ ಕಥೆ, ನಂಜುಂಡೇಶ್ವರನ ಕಥೆ, ಬಿಳಿಗಿರಿರಂಗಸ್ವಾಮಿ ಕಥೆ, ಮೈದಾಳರಾಮನ ಕಥೆ, ಬಾಲ್ನಾಗಮ್ಮನ ಕಥೆ, ಮುಡುಕುತೊರೆ ಮಲ್ಲಪ್ಪನ ಕಥೆ, ಸತ್ಯಶೀಲವತಿ ಕಥೆ, ಕಾಳಿಂಗರಾಜನ ಕಥೆ, ಅರ್ಜುನ ಜೋಗಿಹಾಡು, ಅಣ್ಣ ತಂಗಿ ಕಥೆಯನ್ನು ಕಲಿತ್ತಿರುವುದರ ಜೊತೆಗೆ ಈಗೀಗ ಅಯ್ಯಪ್ಪನ ಕಥೆಯನ್ನು ಮಾಡುತ್ತಾ ಬರುತ್ತಿದ್ದಾರೆ.

ಮಂಟೇಸ್ವಾಮಿ ಕಾವ್ಯವನ್ನು ಶ್ರೀ. ಆರ್. ಸಿದ್ದರಾಜುರವರು ಮತ್ತು ಇವರ ಸಂಗಡಿಗರು ಹಾಡಿರುವ ಕಾವ್ಯವನ್ನು ಧ್ವನಿ ಸುರುಳಿಯಲ್ಲಿ ದಾಖಲಿಸಿಕೊಂಡಿರುತ್ತೇವೆ. ದಿನಾಂಕ ೧೦-೦೧-೦೭ ರಂದು ಕೆಬ್ಬೇಪುರದಲ್ಲಿ, ೧೭-೦೧-೦೭ರಂದು

ಚಾಮರಾಜನಗರದಲ್ಲಿ, ೨೫-೦೧-೦೭ ರಂದು ಯರಿಯೂರಲ್ಲಿ ನೀಡಿರುವ ಪ್ರದರ್ಶನಗಳನ್ನು ಪ್ರತ್ಯಕ್ಷವಾಗಿ ಅವಲೋಕಿಸಿ ದಾಖಲೀಕರಣ ಮಾಡಿಕೊಳ್ಳಲಾಯಿತು.

ವಂಶಪಾರಂಪರ್ಯವಾಗಿ ವೃತ್ತಿಗಾಯಕರಾಗಿರುವ ಇವರು ಪ್ರದರ್ಶನ ನೀಡುವಾಗ ಮೈಯೆಲ್ಲ ಕಣ್ಣಾಗಿರುತ್ತಾರೆ. ಗಗ್ಗರಗಳನ್ನು ಬೆರಳಿನಲ್ಲಿ ಕುಣಿಸುತ್ತಾ ತಂಬೂರಿಯನ್ನು ಹೆಗಲಿಗೆ ಹಾಕಿಕೊಂಡು ಸುಮಧುರ ಲಯವನ್ನು ನೀಡುತ್ತಾ ಅದಕ್ಕೆ ಸರಿಯಾಗಿ ಹಿನ್ನೆಲೆಗಾಯಕರು ಸೊಲ್ಲು ನೀಡುವುದರಿಂದ ಕಥೆಗೆ ಒಂದು ಆಕರ್ಷಣೆಯ ಮೋಡಿ ಬಂದಂತಾಗುತ್ತದೆ. ಹೀಗೆ ಹಿಮ್ಮೇಳ ಮತ್ತು ಮುಮ್ಮೇಳಗಳಿಂದ ಮಂಟೇಸ್ವಾಮಿ ಕಾವ್ಯ ಹಾಡ ತೊಡಗಿದರೆ ಕಾವ್ಯ ಕೇಳುಗರಿಗೆ ಮೈಮರೆಸುತ್ತದೆ. ಕಥೆಯಲ್ಲಿ ಮಂಟೇಸ್ವಾಮಿ ವ್ಯಕ್ತಿಗಳನ್ನು ಭಿಕ್ಷೆ ಪಡೆಯುವ ಪ್ರಸಂಗ ಬಂದಾಗ ಶ್ರೋತೃಗಳು ತುಂಬಾ ಶ್ರದ್ಧಾ ಭಕ್ತಿಯಿಂದ ಕಥೆಯನ್ನು ಆಲಿಸುತ್ತಿರುತ್ತಾರೆ. ನಿಜಕ್ಕೂ ಕೇಳುವುದಕ್ಕೆ ಅಪರೂಪವಾಗಿರುತ್ತದೆ ಇಂಥ ಪ್ರದರ್ಶನಗಳು. ಮಂಟೇಸ್ವಾಮಿ ಕಥಾಪ್ರದರ್ಶನ ಎಲ್ಲೇ ನಡೆಯಲಿ ಜನ ಜಂಗುಳಿ ಸೇರುವುದು ಒಂದು ಸ್ವಾಭಾವಿಕ ಪ್ರಕ್ರಿಯೆ. ಇದು ಈ ಕಾವ್ಯ ಸಂಪ್ರದಾಯದ ಜನಪ್ರಿಯತೆಯನ್ನು ತಿಳಿಸುತ್ತದೆ.

ಮುಂದಿನ ಹಂತದಲ್ಲಿ ವಿಸ್ಮೃತಿ ಸಾಗರದಲ್ಲಿ ಮುಳುಗಿ ಹೋಗಿರುವ ನಮ್ಮ ಪಾರಂಪರಿಕ ಕ್ರಿಯೆ, ಪ್ರಕಿಯೆ ರೂಪದ ಸ್ವದೇಶಿ ಸತ್ಯಗಳನ್ನು ಶೋಧಿಸುವ ಸಲುವಾಗಿ ಮಂಟೇಸ್ವಾಮಿ ಕಾವ್ಯದ ಆಡಿಯೋವಿನ ಜೊತೆಗೆ ವೀಡಿಯೋ ದಾಖಲಾತಿ ಮಾಡಬೇಕಾಗಿದೆ. ದಕ್ಷಿಣ ಕರ್ನಾಟಕದ ಐದು ಜಿಲ್ಲೆಗಳಲ್ಲಿ ಕ್ಷೇತ್ರಕಾರ್ಯ ಮಾಡಬೇಕಾಗಿದೆ. ಈಗಾಗಲೇ ಚಾಮರಾಜನಗರ ಮತ್ತು ಮಂಡ್ಯ ಜಿಲ್ಲೆಗಳಲ್ಲಿ ಕ್ಷೇತ್ರಕಾರ್ಯ ನಡೆದಿದೆ. ಮುಂದಿನ ಹಂತದಲ್ಲಿ ಮೈಸೂರು, ಹಾಸನ, ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ವ್ಯಾಪಕ ಕ್ಷೇತ್ರಕಾರ್ಯ, ದಾಖಲೀಕರಣ, ವಿಶ್ಲೇಷಣೆ ನಡೆಸಿ, ಸುಪ್ರಸಿದ್ಧ ಕಲಾವಿದರು ಮತ್ತು ವಕ್ತೃಗಳ ಸಂದರ್ಶನ ನಡೆಸಬೇಕಾಗಿದೆ.

ದಕ್ಷಿಣ ಕರ್ನಾಟಕ ಮತ್ತು ತಮಿಳು ನಾಡಿನ ಗಡಿ ಭಾಗಗಳಲ್ಲಿ ದಟ್ಟವಾಗಿ ಪ್ರಚಲಿತವಾಗಿರುವ ಮಂಟೇಸ್ವಾಮಿ ಸಂಪ್ರದಾಯ ತುಂಬಾ ವಿಶಿಷ್ಟವಾದುದು. ಜಾತಿ, ಮತ ಮತ್ತು ವರ್ಗಗಳ ಎಲ್ಲೆ ಮೀರಿದ ಸಂಕೀರ್ಣ ಸಂಪ್ರದಾಯವಿದು.ಇಂಥ ಸಂಕೀರ್ಣ ಮತ್ತು ಸಮೃದ್ಧ ಸಂಪ್ರದಾಯಗಳನ್ನು ಏಕೀಕೃತ ಸೂತ್ರದಡಿಯಲ್ಲಿ ಜೋಡಿಸುವುದು ದುಸ್ತರವಾದುದು.

ಜೋಳಿಗೆಯನ್ನೇ ನಂಬಿ ಮನೆಮಂದಿ ಅಂದರೆ ಆರು ಜನರ ಜೀವನ ಸಾಗಿಸುತ್ತಿರುವ ಶ್ರೀ. ಆರ್.ಸಿದ್ಧರಾಜು ಅವರು ತಾಳ್ಮೆ ಸ್ವಭಾವದವರು. ಕಥೆ ಮಾಡುವುದಕ್ಕೆ ಇಂತಿಷ್ಟೇ ಹಣ ಬೇಕು ಎಂಬ ಷರತ್ತಿಲ್ಲ. ಶ್ರೋತೃಗಳು ಪ್ರೀತಿಯಿಂದ ಏನೇ ಕೊಟ್ಟರೂ ಸಂತೋಷದಿಂದ ಸ್ವೀಕರಿಸುವ ದೊಡ್ಡ ಗುಣ ಸ್ವಾಭಾವದವರು. ತನಗೆ ಎಷ್ಟೇ ಕಷ್ಟಗಳು ಬಂದರೂ ಅದೆಲ್ಲವನ್ನು ದೇವರ ಮೇಲೆ ಭಾರ ಹಾಕಿ ಹಾಯಾಗಿ ಇರುತ್ತೇನೆ ಎಂದು ಹೇಳುತ್ತಾರೆ.

ಶ್ರೀ ಹಾಲಗೂಡಯ್ಯ – (೬೩ ವರ್ಷ ವಯಸ್ಸು)

ಸುಮಾರು 40 ವರ್ಷಗಳಿಂದ ವಿವಿಧೆಡೆ ಹರಿಕಥೆ, ಕಂಸಾಳೆ ಹಾಗೂ ನೀಲಗಾರರ ಹಾಡನ್ನು ಹಾಡಿ ಜನಪ್ರಿಯತೆಗಳಿಸಿರುವ ಶ್ರೀ. ಹಾಲಗೂಡಯ್ಯನವರು. ಮಾಲತೇಶಬಡಿಗೇರಿ ಅವರು ನಿರ್ದೇಶಿಸಿರುವ ಶ್ರೀ ಮಂಟೇಸ್ವಾಮಿ ನಾಟಕದಲ್ಲೂ ಬಾಯಾಡಿಸಿದ್ದಾರೆ. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಗೌರವ ಪ್ರಶಸ್ತಿಗೆ ಪಾತ್ರರಾಗಿದ್ದಾರೆ.

"ಜೋಳಿಗೆಯೇ ಜೀವನ, ಅದೇ ಆಸ್ತಿ" ಎಂದು ನಂಬಿ ಜೀವನ ಸಾಗಿಸುತ್ತಿರುವ ಶ್ರೀಯುತರು ಬಲಗೈ ಪಂಗಡಕ್ಕೆ ಸೇರಿದವರಾಗಿರುತ್ತಾರೆ. ಈಗ ಇವರಿಗೆ ೬೩ ವರ್ಷ ವಯಸ್ಸು. ಇವರ ಮಡದಿ ರಂಗಮ್ಮ , ಒಟ್ಟು ನಾಲ್ಕು ಜನ ಮಕ್ಕಳ ಪೈಕಿ ಒಂದು ಹೆಣ್ಣು ಮೂರು ಗಂಡು ಎಲ್ಲರಿಗೂ ಮದುವೆಯಾಗಿದೆ. ವಾಸಕ್ಕೆ ಒಂದು ಚಿಕ್ಕ ಗುಡಿಸಲು, ಈ ಹರಕಲು ಗುಡಿಸಿಲಿನಲ್ಲಿ ತಂಬೂರಿ ರಾರಾಜಿಸುತ್ತಿರುತ್ತದೆ. ತಂಬೂರಿ ಬಿಟ್ಟರೆ ಬೇರೆ ಆಸ್ತಿ ಇವರಿಗಿಲ್ಲ. ಜೀವನ ನಡೆಸಲು ಭಿಕ್ಷಾಟನೆಯೇ ಮುಖ್ಯ ಕಸಬು ಅದನ್ನು ಬಿಟ್ಟರೆ ಗಾರೆ ಕೆಲಸಕ್ಕೋ ಕೂಲಿ ಕೆಲಸಕ್ಕೋ ಹೋಗುತ್ತಾರೆ. ಈ ಇಳಿವಯಸ್ಸಿನಲ್ಲೂ ಗಂಡ ಹೆಂಡ್ತಿಯರಿಬ್ಬರೂ ದುಡಿಯುತ್ತಾರೆ.

ಬಾಲ್ಯದಿಂದಲೇ ಮಲೈ ಮಹಾದೇಶ್ವರ ಸ್ವಾಮಿಯ ಗುಡ್ಡರಾಗಿ , ತಂಬೂರಿಯನ್ನು ಕೈಯಲ್ಲಿ ಹಿಡಿದು ಹಾಡು ಹಾಡುತ್ತಲೇ ಬದುಕು ಸವೆಸಿದ ಕಡು ಬಡತನದಲ್ಲಿ ಜೀವನ ನೂಕುತ್ತಿರುವ ಕಲಾವಿದ ಹಾಲಗೂಡಯ್ಯನವರು. ದಿವಂಗತ ದಾಸನಂಜಯ್ಯ ಇವರ ವಿದ್ಯಾಗುರುಗಳಾಗಿದ್ದರು. ಅವರಿಂದ ಮಲೈ ಮಹದೇಶ್ವರ, ಮಂಟೇಸ್ವಾಮಿ, ಶನಿಮಹಾತ್ಮೆ, ಬಾಲನಾಗಮ್ಮ ಬಿಳಿಗಿರಿರಂಗಸ್ವಾಮಿ ಮೊದಲಾದ ಕಥನ ಕಾವ್ಯಗಳನ್ನು ತಂಬೂರಿ ಶೈಲಿಯಲ್ಲಿ ಹಾಡುತ್ತಾ ಹಳ್ಳಿ ಹಳ್ಳಿಗಳಲ್ಲಿ ತಿರುಗಿ ಜನ ಮನ್ನಣೆಯನ್ನು ಗಳಿಸಿದ್ದಾರೆ.

ಬಡತನವೇ ಮೈವೆತ್ತಿ ನಿಂತಿರುವ ನೀಲಗಾರರ ಬದುಕು ಇಂದಿಗೂ ಶೋಚನೀಯ ಸ್ಥಿತಿಯಲ್ಲಿದೆ. ಹಾಲಗೂಡಯ್ಯನವರ ಬದುಕು ಇದಕ್ಕೆ ಹೊರತಾಗಿಲ್ಲ. ಇಳಿವಯಸ್ಸಿನಲ್ಲೂ ಕೂಲಿ ಜೀವನಕ್ಕೆ ಹೋದರೇನೇ ಅವತ್ತಿನ ಗಂಜಿಗೆ ಆಗುತ್ತದೆ ಇಲ್ಲದಿದ್ದರೆ ಇಲ್ಲ. ಇಷ್ಟು ಕಷ್ಟದ ಬದುಕಿನಲ್ಲೂ ತಂಬೂರಿ ಕೈಲಿ ಹಿಡಿದು ಊರೂರು ಹಾಡುತ್ತಿರುತ್ತಾರೆ. ಅವರೇ ಹೇಳುವ ಹಾಗೆ– ಭಗವಂತ ಮಂಟೇಸ್ವಾಮಿ ನಮಗೆ ಆರೋಗ್ಯವೆಂಬ ಆಸ್ತಿಯನ್ನು ದಯಪಾಲಿಸಿದ್ದಾರೆ. ಆದ್ದರಿಂದ ಕೂಲಿನೋ ಕಂಬ್ಳವೋ ಮಾಡಿಕೊಂಡು ಸುಖವಾಗಿ ಇದ್ದೇವೆ. ಆರೋಗ್ಯ ಭಾಗ್ಯವೆಂಬ ಮಾತು ಎಷ್ಟು ದೊಡ್ಡದು ಎಂಬುದರ ಮಾತಿನ ಮರ್ಮವನ್ನು ಅರಿತು ಬಾಳುತ್ತಿದ್ದೇವೆ ಎನ್ನುತ್ತಾರೆ.

ಸುಮಾರು ಸಾವಿರ ಪ್ರದರ್ಶನಗಳಿಗಿಂತಲೂ ಹೆಚ್ಚು ಪ್ರದರ್ಶನಗಳನ್ನು ನೀಡಿ ಜನರನ್ನು ರಂಜಿಸಿದ್ದಾರೆ. ಈಗೀಗ ಮುಖ್ಯ ಗಾಯಕರಾಗಿ ಕಥೆ ಮಾಡುವುದಿಲ್ಲ ನೀಲಗಾರ ಸಿದ್ದಯ್ಯನವರ ಜೊತೆ ಸೇರಿ ಸೊಲ್ಲು ಹಾಡುತಿರುತ್ತಾರೆ. ಇವರ ಕೈ ಕೆಳಗೆ ಕಥೆ

ಕಲಿತು ಕೊಂಡವರಲ್ಲಿ ಸಿದ್ದಯ್ಯನವರು ಕೂಡ ಒಬ್ಬರು. ಈಗ ಕಥೆ ಕಲಿತು ಕೊಂಡು ತಾವೇ ಸ್ವತಂತ್ರವಾಗಿ ಕಥೆ ಮಾಡುತ್ತಾ ಬರುತ್ತಿದ್ದಾರೆ.

ಹೊಂಗನೂರಿನ ಒಂದು ಮನೆಯವರು ಕಥೆ (ಸತ್ತವರ ನೆನೆಪಿಗೆ) ಮಾಡಲು ಕರೆದಿದ್ದ ಪ್ರದರ್ಶನ ದಿನಾಂಕ ೧೬-೧-೦೭ ರಂದು ನಡೆದ ಕಥಾ ಪ್ರದರ್ಶನವನ್ನು ವೀಕ್ಷಿಸಲಾಯಿತು. ರಾತ್ರಿ ಹೊತ್ತು ತುಂತುರು ಹನಿ ಜಿನುಗುತ್ತಿದ್ದರು ಜನರೆಲ್ಲರು ಅದನ್ನು ಲೆಕ್ಕಿಸದೇ ಕಥೆಯನ್ನು ಆಲಿಸುತ್ತಿದ್ದರು. ಹಳ್ಳಿಗಳ ಕಡೆ ಸಾಮಾನ್ಯವಾಗಿ ವಿದ್ಯುತ್ ಕೈಕೊಡುತ್ತದೆ. ಆ ರಾತ್ರಿ ಎರಡು ಗಂಟೆಗೆ ಹೋದ ಕರೆಂಟು ಮುಂಜಾವಾಡುತ್ತಿದ್ದಾರ್ಲೆ, ಎರಡು ಹೆಣ್ಣು, ಒಂದು ಐದು ಗಂಟೆಗೆ ಬಂದಾಗ ಈ ನಡುವೆ ಕೆಲವರು ಮನೆಗೆ ಹೋದರು. ಇನ್ನೂ ಕೆಲವರು ಕಿವಿಗೊಟ್ಟು ಕಥೆಯನ್ನು ಆಲಿಸುತ್ತಿದ್ದನ್ನು ನೋಡಿದರೆ ಆಶ್ಚರ್ಯವಾಗುತ್ತದೆ. ಒಂದೇ ಒಂದು ಬಾಟಲಿನಿಂದ ತಯಾರು ಮಾಡಿರುವ ದೀಪಾ ಮಾತ್ರ ಉರಿಯುತ್ತಿತ್ತು.

ಶ್ರೀ ನಿಂಗಶೆಟ್ಟಿ – (೪೫ ವರ್ಷ ವಯಸ್ಸು)

ಮೂವತ್ತು ವರ್ಷದಿಂದ ಧರೆಗೆದೊಡ್ಡವರ ಕಥೆಯನ್ನು ಊರೂರ ಮೇಲೆ ಹಾಡುತ್ತಾ ಜನ ಮನ್ನಣೆ ಗಳಿಸಿರುವ ಕಲಾವಿದ ಶ್ರೀ ನಿಂಗಶೆಟ್ಟಿಯವರು. ಸಿದ್ದನಂಜಶೆಟ್ಟಿ ಮತ್ತು ಪುಟ್ಟನಂಜಮ್ಮ ಇವರ ತಂದೆ ತಾಯಿಗಳು. ಇಬ್ಬರು ಮಡದಿಯರು ಪುಟ್ಟನಂಜಮ್ಮ ಮತ್ತು ರತ್ನಮ್ಮ ಎಂಬುವವರಿಗೆ ಕ್ರಮವಾಗಿ ಮೊದಲನೆಯ ಮಡದಿಗೆ ಒಬ್ಬ ಮಗ ಎರಡನೆಯ ಮಡದಿಗೆ ಮೂರು ಗಂಡು ಮಕ್ಕಳು ಎಂದು ನಗುನಗುತ್ತಾ ಉತ್ತರ ಕೊಡುತ್ತಾರೆ. ಇಬ್ಬರ ಹೆಂಡಿರ ಮನೆಯಲ್ಲೂ ಇರುತ್ತಾರೆ. ಎರಡನೆಯ ಮಡದಿಯ ಮನೆಯಲ್ಲಿಯೇ ಹೆಚ್ಚು ವಾಸ್ತವ್ಯ ಒಬ್ಬ ಮಗ ತಂದೆಯ ಜೊತೆಯಲ್ಲಿ ಕಥೆ ಮಾಡುತ್ತಾ ಇರುತ್ತಾನೆ. ಉಳಿದ ಮೂರ ಜನ ಮಕ್ಕಳು ಕೂಲಿ ಕೆಲಸ ಅಂದರೆ ಗಾರೆ ಕೆಲಸದ ಮೇಲೆ ಬೆಂಗಳೂರಿನಲ್ಲಿ ಇದ್ದಾರೆ. “ಮಕ್ಕಳ ಬದುಕು ಮಕ್ಕಳದು” ಎಂದು ಹೇಳುತ್ತಾರೆ.

ಉಪ್ಪಾರಜನಾಂಗಕ್ಕೆ ಸೇರಿದವರಾದ ಇವರು ಕಳೆದ ಎರಡು ತಲೆಮಾರಿನಿಂದ ಧರೆಗೆದೊಡ್ಡವರ ಕಥೆಯನ್ನು ಮಾಡುತ್ತಾ ಬರುತ್ತಿದ್ದಾರೆ. ಇವರ ವಿದ್ಯಾಗುರುಗಳು ತಂದೆಯವರೇ ಆದುದರಿಂದ ಧರೆಗೆದೊಡ್ಡವರ ಕಥೆ, ಮಲೈ ಮಹದೇಶ್ವರನ ಕಥೆ, ಮುಡುಕುತೊರೆ ಮಲ್ಲಪ್ಪನ ಕಥೆಗಳನ್ನು ಕಲಿತ್ತಿದ್ದಾರೆ. ಈ ಕಥೆಗಳನ್ನು ಕಲಿತ ಮೇಲೆ ಊರೂರ ಮೇಲೆ ಕಥೆ ಮಾಡುತ್ತಾ ಭಿಕ್ಷೆ ಬೇಡುತ್ತಾ ಜೀವನ ಸಾಗಿಸುತ್ತಿದ್ದಾರೆ.

ಮಂಟೇಸ್ವಾಮಿ ಕಲಾವಿದರಿಗೆ ಆಸ್ತಿ ಮಾಡಬೇಕು, ದೊಡ್ಡವರಾಗಿ ಈ ಭೂಮಿಯ ಮೇಲೆ ಮೆರೆಯಬೇಕು, ಎಂಬ ಕಿಂಚಿತ್ತು ಹಂಬಲ ಇಲ್ಲದವರು. ಹಾಸಿಗೆ ಇದ್ದಷ್ಟು ಕಾಲು ಚಾಚು ಎನ್ನುವ ಗಾದೆ ಮಾತಿನಂತೆ ತುಂಬ ಸರಳವಾಗಿ, ಪ್ರಾಮಾಣಿಕವಾಗಿ, ಇವರ ಜೀವನ ಬೇರೆಯವರಿಗೆ ಮಾದರಿಯಾಗಿದೆ.

ಧರೆಗೆದೊಡ್ಡವರ ಕಾವ್ಯ ಆದಿಭಾಗದ ಬಗ್ಗೆ ಶ್ರೀಯುತರು ಹೀಗೆ ಹೇಳುತ್ತಾರೆ. ಮೊದಲು ಪ್ರಪಂಚವೇ ಸಮುದ್ರಮಯವಾಗಿತ್ತಂತೆ, ಆವಾಗ ಕೆಂದಾವರೆ ಪುಷ್ಪದಲ್ಲಿ

ಅರಳಿದ ಪರಂಜ್ಯೋತಿಯವರು ಮೊದಲಿಗೆ ಜಾಂಬವನನ್ನು (ಕರಡಿ) ಪಡೆದು ತದನಂತರ ರಾಕ್ಷಸನನ್ನು ಪಡೆದು, ಭೂಮಿಗೆ ರಕ್ತಬಲಿ ಕೊಟ್ಟು ಧರೆಯನ್ನು ರೂಪಿಸಿ ಮುಂದಕ್ಕೆ ಬಂದಾಗ ಕತ್ತಲರಾಜ್ಯ ಅದೇ ದಕ್ಷಿಣ ಕರ್ನಾಟಕಕ್ಕೆ ಬರುತ್ತಾರೆ.

ಗಾಡಿಗರ ಮಗಳಾದ ಚೆನ್ನಜ್ಜಮ್ಮನನ್ನು ವಿಜಯನಗರ ಕೋಟೆಯಿಂದ ಧರೆಗೆದೊಡ್ಡವರು ಪಡೆದು ಬರುತ್ತಾರೆ. ರಾಚಪ್ಪಾಜಿಯನ್ನು ಕಲ್ಯಾಣದಿಂದ ಪಡೆದು ಬರುತ್ತಾರೆ.

ಮಡುವಾಳ ಮಾಚಪ್ಪನ ಮನೆ ಮುಟ್ನಳ್ಳಿ ತೋಪು ಇದರ ಹಿಂದಿನ ಹೆಸರು ಕಾಡಂಕನಹಳ್ಳಿ ಎಂಬುದಾಗಿ ಹೇಳುತ್ತಾರೆ.

ದೊಡ್ಡಮ್ಮತಾಯಿಯ ಮೊದಲ ಹೆಸರು ಸುಬ್ಬಾಮಣಿ ಇವಳು ಮೈಸೂರು ಮಹಾರಾಜರ ಮಗಳು ದೊಡ್ಡವಳಾದದ್ದಕ್ಕೆ ದೊಡ್ಡಮ್ಮತಾಯಿ ಎಂದು ಹೆಸರು ಆಯಿತು. ಧರೆಗೆದೊಡ್ಡವರು ಸೂತಕವಾದ ಸ್ಥಳಕ್ಕೆ ಮುಟ್ನಳ್ಳಿ ಎಂಬ ಹೆಸರಿನಿಂದ ಕರೆದರು, ಹೀಗೆ ಕಾವ್ಯದಲ್ಲಿ ಬರುವ ಪಾತ್ರಗಳ ಮೂಲದ ಬಗ್ಗೆ ಮಾಹಿತಿ ನೀಡಿದ್ದಾರೆ.

ಶ್ರೀ ಸಿದ್ದಯ್ಯ – (೬೧ ವರ್ಷ ವಯಸ್ಸು)

ಮಂಟೇಸ್ವಾಮಿ ಕಲಾವಿದರಾದ ಶ್ರೀ ಸಿದ್ದಯ್ಯ ಅವರು ಕಳೆದ ೩೦ ವರ್ಷಗಳಿಂದ ಚಾಮರಾಜನಗರ ಜಿಲ್ಲೆಯ ನೂರಾರು ಹಳ್ಳಿಗಳಲ್ಲಿ ಸಂಚರಿಸಿ ತಮ್ಮ ಕಥೆಗಳ ಪ್ರದರ್ಶನ ನೀಡಿ ಜನ ಮನ್ನಣೆಯನ್ನು ಗಳಿಸಿದ್ದಾರೆ. ಅರವತ್ತೆರಡು ವರ್ಷ ವಯಸ್ಸಿನ ಅವಿದ್ಯಾವಂತ ಕಲಾವಿದ. ಮೂರು ತಲೆಮಾರಿನಿಂದ ಮಂಟೇಸ್ವಾಮಿ ಕಥೆಯನ್ನು ಹಾಡುತ್ತಾ ಬರುತ್ತಿರುವ ಇವರ ಬದುಕು ಮಾತ್ರ ಕಷ್ಟಗಳ ಸುರಿಮಳೆ. ಅವರ ಹೆಂಡ್ತಿಯ ಹೆಸರು ಸರೋಜಮ್ಮ ಎಂದು, ಒಟ್ಟು ನಾಲ್ಕು ಜನ ಮಕ್ಕಳ ಪೈಕಿ ಎರಡು ಗಂಡು ಎರಡು ಹೆಣ್ಣು. ಮೂರು ಮಕ್ಕಳಿಗೆ ಮದುವೆ ಆಗಿದೆ ಕೊನೆಯ ಹೆಣ್ಣು ಮಗಳಿಗೆ ಮದುವೆ ಆಗಿಲ್ಲ ಅವಳು ಈಗ ಆಡು ಮೇಯಿಸುತ್ತಿದ್ದಾಳೆ. ಒಟ್ಟಿನಲ್ಲಿ ಇವರ ಬದುಕು ಗುಡಿಸಲಿನಲ್ಲಿ ಒದ್ದಾಡುತ್ತಿದೆ.

ವೃತ್ತಿಗಾಯಕರಾದ ಇವರು ಬಲಗೈ ಪಂಗಡಕ್ಕೆ ಸೇರಿದವರಾಗಿದ್ದಾರೆ. ಹೂತಯ್ಯಸಿದ್ದಯ್ಯ ಮಿಶನ್‌ಬಸವಯ್ಯ, ಹಾಲಗೂಡಯ್ಯ ಇವರುಗಳು ಕಾವ್ಯ ಗುರುಗಳು. ಇವರಿಂದ ಧರೆಗೆದೊಡ್ಡವರ ಕಥೆ, ಮಲ್ಲೆ ಮಹದೇಶ್ವರನ ಕಥೆಗಳನ್ನು ಸಂಪೂರ್ಣವಾಗಿ ಕಲಿತ್ತಿದ್ದಾರೆ.

ಚಾಮರಾಜನಗರ ತಾಲ್ಲೂಕಿನಲ್ಲಿಯೇ ದಲಿತರು ವಾಸಿಸುತ್ತಿರುವ ದೊಡ್ಡ ಊರು ಹೊಂಗನೂರು. ಇವರ ಜೊತೆ ಕಡಿಮೆ ಸಂಖ್ಯೆಯಲ್ಲಿ ಬ್ರಾಹ್ಮಣರು , ವರ್ತಕಶೆಟ್ಟರು, ಆಚಾರರು, ಗಾಣಗಶೆಟ್ಟರು, ಬೆಳ್ಳಾಲಗೌಡರು, ಪರವಾರದವರು, ಮಡಿವಾಳಶೆಟ್ಟರು, ಸಾಬರುಗಳು, ಗಂಗಡಕಾರರು, ಗೆಜ್ಜಗಾರರು, ಈಡಗಗೌಡರು, ಉಪ್ಪಾರಶೆಟ್ಟರು, ಕುರುಬಗೌಡರು, ಹೀಗೆ ಅನೇಕ ಪಂಗಡಗಳು ವಾಸವಾಗಿದ್ದರು ಹೆಚ್ಚಿನ ಸಂಖ್ಯೆಯಲ್ಲಿ ಇರುವವರು ಹೊಲೆಯರು ಮತ್ತು ಮಾದಿಗರು.

ಆದಿಯಲ್ಲಿ ಧರೆಗೆದೊಡ್ಡವರು ಜಗಟೆ ಮತ್ತು ಓಂಕಾರ ಶಬ್ದದಿಂದ ಉಗಮವಾದರು. ಹೀಗೆ ಉಗಮವಾದ ಶಿವನಿಗೆ ನಾನಾ ಹೆಸರುಗಳು ಯಾವುವೆಂದರೆ ನಿರಾಕಾರ, ನಿರಂಜನ, ಪರಾಪರವಸ್ತು , ಪರಮಪಾವನ ಮೂರ್ತಿ ಎಂಬುದಾಗಿತ್ತು.

ಆದಿ ಭಾಗದಲ್ಲಿ ಧರೆಗೆದೊಡ್ಡವರು ನಿರಾಕಾರ ಮೂರ್ತಿಯಾಗಿದ್ದರು. ಮೊದಲಿಗೆ ಧರೆಯನ್ನು ಪಡೆದು ನಂತರ ಆದಿಶಕ್ತಿಯನ್ನು ಸೃಷ್ಟಿ ಮಾಡಿದರು. ಶಿವನಿಗೆ ನೆತ್ತಿಯ ಮೇಲೆ ಮೂರನೆಯ ಕಣ್ಣು ಇದ್ದ ಹಾಗೆ ಆದಿಶಕ್ತಿಗೆ ಹಸ್ತದಲ್ಲಿ ಉರಿಹಸ್ತ ಇತ್ತು. ದೇವಾನು ದೇವತೆಗಳಾದ ಬ್ರಹ್ಮ ಮತ್ತು ಈಶ್ವರ ಇವರಿಬ್ಬರನ್ನು ಪಡೆದ ಆದಿಶಕ್ತಿ ತನ್ನನ್ನು ಲಗ್ನವಾಗಬೇಕು ಎಂದು ಕೇಳುತ್ತಾಳೆ. ಆಗ ಈ ಇಬ್ಬರು ಆದಿಶಕ್ತಿಯನ್ನು ತಾಯಿ ನೀವು ನಮ್ಮನ್ನು ಪಡೆದುದರಿಂದ ನಮಗೆ ತಾಯಿಯ ಸಮಾನ. ಆದ್ದರಿಂದ ನಾವು ಲಗ್ನವಾಗುವುದಿಲ್ಲ ಎಂದು ಹೇಳುತ್ತಾರೆ. ಈ ಮಾತನ್ನು ಕೇಳಿ ಕೆಂಡಮಂಡಲವಾದ ಆದಿಶಕ್ತಿ ತನ್ನ ಉರಿಹಸ್ತವನ್ನು ಅವರ ತಲೆಯ ಮೇಲೆ ಇಟ್ಟಾಗ ಇಬ್ಬರು ಕ್ಷಣಾರ್ಧದಲ್ಲಿ ಭಸ್ಮವಾಗುತ್ತಾರೆ. (ಮರಳಿನ ೨ ಗುಡ್ಡೆ ಮಾಡಿರುತ್ತಾಳೆ) ನಂತರ ಮಹಾವಿಷ್ಣುವನ್ನು ಪಡೆಯುತ್ತಾಳೆ. ಮಹಾವಿಷ್ಣು ಗದಾವತಾರವಾಗಿ ನಾಲ್ಕು ಕೈಯಲ್ಲಿ ಶಂಕು ಚಕ್ರ ಹಿಡಿದುಕೊಂಡು ಪ್ರತ್ಯಕ್ಷನಾಗಿ ಅಮ್ಮ ನನ್ನನ್ನು ಪಡೆದ ಕಾರಣವೇನು ಎಂದು ಕೇಳಿದಾಗ ಆದಿಶಕ್ತಿ ನನ್ನನ್ನು ಲಗ್ನವಾಗಬೇಕು ಎಂದಳು. ಆಗ ಮಹಾವಿಷ್ಣು ಈಕಡೆ ನೋಡಿ ಈ ಬೂದಿ ಗುಡ್ಡೆಗಳು ಯಾವುವು ಎಂದು ಕೇಳುತ್ತಾಳೆ. ಆಗ ಆದಿಶಕ್ತಿ ಇದು ಬ್ರಹ್ಮನ ಸಮಾಧಿ ಪಕ್ಕದಲ್ಲಿರುವ ಮತ್ತೊಂದು ಈಶ್ವರನ ಸಮಾಧಿ. ಇವರುಗಳು ನನ್ನನ್ನು ಲಗ್ನವಾಗದ ಕಾರಣ ನನ್ನ ಉರಿಹಸ್ತವನ್ನು ಅವರ ತಲೆಯ ಮೇಲಿಟ್ಟು ಭಸ್ಮ ಮಾಡಿದ್ದೇನೆ ಎಂದಾಗ ಮಹಾವಿಷ್ಣು ಹಾಗಾದರೆ ತಾಯಿ ಆ ಉರಿಹಸ್ತವನ್ನು ನನ್ನ ಹಸ್ತಕ್ಕೆ ಕೊಟ್ಟರೆ ನಾನು ನಿಮ್ಮನ್ನು ಲಗ್ನವಾಗುತ್ತೇನೆ ಎಂದರು. ಮಹಾವಿಷ್ಣುವಿನ ಮಾತನ್ನು ನಂಬಿ ಆದಿಶಕ್ತಿ ತನ್ನಲ್ಲಿದ್ದ ಉರಿಹಸ್ತವನ್ನು ಕೊಟ್ಟಳು. ಆಗ ಮಹಾವಿಷ್ಣು ಆದಿಶಕ್ತಿಯನ್ನು ಕುರಿತು ನಾನು ಹೇಗೆ ನೃತ್ಯ ಮಾಡುತ್ತೇನೋ ಹಾಗೆ ನೀನು ನೃತ್ಯ ಮಾಡಿದರೆ ನಿನ್ನನ್ನು ನಾನು ಖಂಡಿತವಾಗಿ ಮದುವೆ ಮಾಡಿಕೊಳ್ಳುತ್ತೇನೆ ಎನ್ನತ್ತಾರೆ. ಆಗ ಮಹಾವಿಷ್ಣು ನರ್ತನ ಮಾಡುತ್ತಾ ಮಾಡುತ್ತಾ ತನ್ನ ಉರಿಹಸ್ತವನ್ನು ಆದಿಶಕ್ತಿಯ ತಲೆಯ ಮೇಲೆ ಇಟ್ಟಿದ್ದಾರೆ, ಆಗ ಆದಿಶಕ್ತಿ ಸುಟ್ಟು ಭಸ್ಮವಾಗಿದ್ದಾಳೆ. ಆಗ ತಮ್ಮ ಮಂತ್ರೋಪದೇಶದಿಂದ ಮತ್ತೆ ಬ್ರಹ್ಮ ಮತ್ತು ಈಶ್ವರರನ್ನು ಪಡೆಯುತ್ತಾರೆ. ಪ್ರಪಂಚಕ್ಕೆ ನಮ್ಮನ್ನು ಪಡೆದುದುದರಿಂದ ದೊಡ್ಡವರು ಅಂತ್ಹೇಳಿ ಬಲಗಡೆ ಪರಮೇಶ್ವರ ಎಡಗಡೆ ಬ್ರಹ್ಮದೇವ ಮಧ್ಯದಲ್ಲಿ ಮಹಾವಿಷ್ಣು ಆಸೀನರಾಗುತ್ತಾರೆ. ಧರೆಗೆದೊಡ್ಡವರು ಕೆಂದಾವರೆ ಪುಷ್ಪದಲ್ಲಿ ನಿರಾಕಾರ ಮೂರ್ತಿಯಾಗಿ ಹೇಗೆ ಹುಟ್ಟುತ್ತಾರೋ ಹಾಗೆಯೇ ಮಲೈ ಮಹದೇಶ್ವರನ ಹುಟ್ಟು ಆಗಿರುತ್ತದೆ. ಬಂಕಾಪುರಿ ಪಟ್ಟಣದಲ್ಲಿರುವ ದದಿತೀ ಎಂಬ ರಾಕ್ಷಸಿಯ ಗರ್ಭದಲ್ಲಿ ಜನಿಸಿದ ಶ್ರವಣದೊರೆ. ಅಘೋರವಾದ ತಪಸ್ಸನ್ನು ಮಾಡಿ ಬ್ರಹ್ಮದೇವನನ್ನು ಒಲಿಸಿಕೊಂಡು ಭೂಮಿಯಿಂದಲೂ ಆಕಾಶದಿಂದಲೂ ಮೃಗಪಕ್ಷಿಗಳಿಂದಲೂ ತನಗೆ ಮರಣ ಆಗಬಾರದು ಎಂದು ಅಪೇಕ್ಷೆಯನ್ನು ಬೇಡಿದಾಗ, ಬ್ರಹ್ಮದೇವನು ಮಾನವಕುಲಕ್ಕೆ ಸಾವು ನಿಶ್ಚಿತ.

ಆದ್ದರಿಂದ ಬೇರೆ ವರವನ್ನಾದರೂ ಕೇಳು ಎಂದರು. ಶ್ರವಣದೊರೆ ಒಪ್ಪದಿದ್ದಾಗ ಬ್ರಹ್ಮದೇವನು ಯಾರ ಗರ್ಭದಲ್ಲೂ ಜನನವಾಗಿರುವುದಕ್ಕಿಲ್ಲ, ರಕ್ತಸಂಬಂಧದಿಂದ ಹುಟ್ಟಿರುವುದಕ್ಕಿಲ್ಲ ಅಂತಹ ಮಾಯದ ಮಗುವಿನಿಂದ ನಿನಗೆ ಮರಣ ಎಂಬ ವರವನ್ನು ಪಡೆದಿದ್ದನು. ನಂತರ ತನಗೆ ಮಾನವನಿಂದ ಮರಣವಿಲ್ಲವೆಂದು ತಿಳಿದ ಶ್ರವಣದೊರೆ ಇಂದ್ರಲೋಕಕ್ಕೆ ಹೋಗಿ ದೇವಾನುದೇವರಿಗೆ ಸೆರೆ ಹಿಡಿದು,ಶನಿದೇವರನ್ನು ಹಿಡಿದು ಹಾಸಿಗೆಯಾಗಿ ಮಾಡಿಕೊಂಡನು. ದೇವತೆಗಳು ಹಾಕಿದ ಕಣ್ಣೀರು ಮಹಾವಿಷ್ಣುವಿನ ಪಾದಕ್ಕೆ ಪ್ರೀಯವಾಗಿದೆ. ನಾರಾಯಣ ವೈಕುಂಠದಿಂದ ಬಂಕಾಪುರಿ ಪಟ್ಟಣಕ್ಕೆ ಬಂದು , ಭಕ್ತ ಇವರನ್ನೆಲ್ಲ ಏಕೆ ಸೆರೆ ಹಿಡಿದಿದ್ದೀಯಾ ? ಎಂದು ಕೇಳಿದಾಗ ಸಿಂಹಾಸನದಲ್ಲಿ ಕುಳಿತು ರಾಜ್ಯಬಾರ ಮಾಡುವ ನಾರಾಯಣನ್ನು ಬಂಧಿಸಿ ಕೈಯಲ್ಲಿ ಪಂಚಾಂಗವನ್ನು ಕೊಟ್ಟಿದ್ದೀಯಾ ಇದರ ಜೊತೆಗೆ ದೇವಾನುದೇವತೆಗಳನ್ನು ಬಂಧಿಸಿದ್ದರಿಂದ ಎಲ್ಲರೂ ಶಿವನನ್ನು ಮೊರೆ ಇಡುತ್ತಾರೆ. ದೇವಾನುದೇವತೆಗಳ ಕಣ್ಣೀರಿನ ಮೊರೆ ಪಾರ್ವತಿ ಪರಮೇಶ್ವರನಿಗೆ ಪ್ರೀಯವಾಗಿದೆ. ಶಿವ ಹಣೆಯ ಬೆವರನ್ನು ಭೂಮಿಯ ಮೇಲೆ ಒಗೆದ ಓಂಕಾರ ಶಬ್ದದಿಂದ ಮಹಾದೇವನ ಜನನವಾಗಿದೆ. "ಶಕ್ತಿಗೆ ದೊಡ್ಡವನು ಭಕ್ತಿಗೆ ಚಿಕ್ಕವನು". ಶಿವನು ಕಣ್ಣು ಬಿಟ್ಟು ನೋಡಿದ ಕೂಡಲೇ ವಿಶ್ವರೂಪದಲ್ಲಿ ತೋರಿದ್ದರಿಂದ "ಮಾದಪ್ಪ" ಎಂದು ಹೆಸರಿಟ್ಟು ಭೂಲೋಕಕ್ಕೆ ತೆರಲಪ್ಪ ಎಂದು 12ವರ್ಷದ ತರುಣನನ್ನು ಶಿವ ಹರಷಿ ಕಳುಹಿಸುತ್ತಾರೆ.

"ದುಷ್ಟರನ್ನು ಸಂಹರಿಸಿ
ಶಿಷ್ಟರನ್ನು ಪರಿಪಾಲಿಸಿ
ಕಲಿಯುಗದಲ್ಲಿ ಅವತಾರ
ಪುರುಷನಾಗಿ ನೀನು" ಎಂದು

ವಾಯ ಉತ್ತಮಾಪುರ ಗ್ರಾಮದಲ್ಲಿರುವ ಉತ್ತರಾಜಮ್ಮ ಮತ್ತು ಆದಿಪಟ್ಟಣದಲ್ಲಿರುವ ಶಿವದಾಸಪ್ಪನಿಗೂ ಹುಟ್ಟಿದ ಮಗ ಮಾಯ್ಕಾರ ಮರಿದೇವರು. ಮಾಯದಿಂದ ಹುಟ್ಟಿದ ಮಗುವಿಗೆ ಯಾವ ರೀತಿಯ ಹೆಸರು ಕಟ್ಟುವುದು ಎಂಬ ಕಕ್ಕಾವಿಕ್ಕಿಯಲ್ಲಿದ್ದಾಗ ಆ ಮಗುವಿನ ಅಂದ ಚೆಂದವನ್ನು ನೋಡಿ ಚಂದಕ್ಕೆ ಚಂದ್ರಶೇಖರಮೂರ್ತಿ ಎಂಬುದಾಗಿ ನಾಮಕರಣ ಮಾಡಿದರು.

ಈ ಮೇಲ್ಕಂಡ ಎರಡು ಸನ್ನಿವೇಶಗಳನ್ನು ಗಮನಿಸಿದಾಗ ಮಂಟೇಸ್ವಾಮಿ ಮತ್ತು ಮಹದೇಶ್ವರ ಇಬ್ಬರೂ ನೀರಾಕಾರ ಮೂರ್ತಿಗಳು ಎಂಬುದು ಮನವರಿಕೆ ಆಗುತ್ತದೆ.

ನೀಲಗಾರನ ಗುರೂಪದೇಶ ಹೀಗಿದೆ. ಅಡಿಂಗದಾಸರು ಎಂದು ಗುರುಗಳು ಹೇಳಿದಾಗ ಅದಕ್ಕೆ ಪ್ರತ್ಯುತ್ತರವಾಗಿ ನೀಲಗಾರ ಆದೇಶಬುದ್ಧಿ ಶರಣು ಶರಣಾರ್ಥಿ ಬುದ್ಧಿ ಎಂದು ಹೇಳಿ ಕಾಲಿಗೆ ನಮಸ್ಕಾರ ಮಾಡಿ ರುದ್ರಾಕ್ಷಿ ಮಾಲೆಯನ್ನು ತೆಗೆದು ಕತ್ತಿಗೆ ಧರಿಸಿಕೊಳ್ಳುತ್ತಾರೆ.

ಶ್ರೀ ದಮ್ಮಡಿ ಬಸವಯ್ಯ – (೫೭ ವರ್ಷ ವಯಸ್ಸು)

ಮಂಡ್ಯ ಜಿಲ್ಲೆ ಮಳವಳ್ಳಿ ತಾಲ್ಲೂಕು ಗೌಡಗೆರೆಯ ನಿವಾಸಿಯಾದ ಮಲ್ಲಯ್ಯನ ಮಗ ದಮ್ಮಡಿ ಬಸವಯ್ಯ. ಆದಿ ಕರ್ನಾಟಕಕ್ಕೆ ಸೇರಿದವರಾದ ಇವರು ಮೂರು ತಲೆಮಾರಿನಿಂದ ಮಂಟೇಸ್ವಾಮಿ ಕಥೆ ಮಾಡುತ್ತಾ ಬರುತ್ತಾ ಇದ್ದಾರೆ. ಇವರ ಅಣ್ಣನವರಾದ ಶ್ರೀ ಕೆಂಪಯ್ಯ ಕಥೆ ಹೇಳುವುದರಲ್ಲಿ ಬಹಳ ನಿಸ್ಸೀಮ. ಮಳವಳ್ಳಿ ತಾಲ್ಲೂಕಿಗೆನೇ ಹೆಸರಾದವರು. ಈಗ ಇವರು ದೈವಾದೀನರಾಗಿದ್ದಾರೆ. ಇವರ ಬದುಕಿನ ಕಾಲದಲ್ಲಿ ಅನೇಕರಿಗೆ ಹಾಡುಗಾರಿಕೆಯನ್ನು ಹೇಳಿ ಕೊಟ್ಟಿದ್ದಾರೆ. ಇವರಲ್ಲಿ ಶ್ರೀ ದಮ್ಮಡಿ ಬಸವಯ್ಯನವರು ಕೂಡ ಒಬ್ಬರು.

ತನ್ನ ಅಣ್ಣನಿಂದ ಮಂಟೇಸ್ವಾಮಿ ಕಥೆ, ಮಾದೇಶ್ವರನ ಕಥೆ, ಮೈದಾಳ ರಾಮನ ಕಥೆ, ಚೆನ್ನಿಗರಾಮನ ಕಥೆ, ನೀಲವೇಣಿ ಕಥೆ, ಬಿಳಿಗಿರಿರಂಗಸ್ವಾಮಿ ಕಥೆಗಳನ್ನು ತನ್ನ ಚಿಕ್ಕ ವಯಸ್ಸಿನಲ್ಲಿಯೇ ಕಲಿತ್ತಿದ್ದಾರೆ.

ಈಗ ಉಳ್ಳಂಬಳ್ಳಿ ಮಾದೇವ ಮತ್ತು ಶಿವಮಾದು ಇವರುಗಳ ತಂಡದಲ್ಲಿ ಕಥೆ ಮಾಡುತ್ತಾ ಇದ್ದಾರೆ. ಹೀಗೆ ಕೇಳುತ್ತಾ ಬಲಗೈ ಮತ್ತು ಎಡಗೈನವರ ವ್ಯತ್ಯಾಸವನ್ನು ಹೀಗೆ ಹೇಳಿದ್ದಾರೆ.

ಆದಿ ಕರ್ನಾಟಕ (ಎ. ಕೆ.)	ಆದಿ ದ್ರಾವಿಡ
೧. ಸತ್ತ ಮಾಂಸವನ್ನು ತಿನ್ನುವುದಿಲ್ಲ	೧. ಸತ್ತ ಮಾಂಸವನ್ನು ತಿನ್ನುತ್ತಾರೆ
೨. ಚಪ್ಪಲಿ ಹೊಲೆಯುವುದಿಲ್ಲ	೨. ಚಪ್ಪಲಿ ಹೊಲೆಯುತ್ತಾರೆ
೩. ತಮಟೆಯನ್ನು ಬಡಿಯುತ್ತಾರೆ	೩. ತಮಟೆ ಬಡಿಯುವುದಿಲ್ಲ
೪. ಇವರು ಅವರಿಗೆ ಹೆಣ್ಣು ಕೊಡುವುದಿಲ್ಲ, ಮನೆ ಒಳಗೆ ಹೋಗುವುದಿಲ್ಲ, ಊಟ ಮಾಡುವುದಿಲ್ಲ.	೪. ಅವರು ಇವರಿಗೆ ಹೆಣ್ಣು ಕೊಡುವುದಿಲ್ಲ ಮನೆ ಒಳಗೆ ಹೋಗುವುದಿಲ್ಲ, ಊಟ ಮಾಡುವುದಿಲ್ಲ.
೫. ಒಂದು ಬಣ್ಣ ಅವರಿಗಿಂತ ಜಾಸ್ತಿ (ಮದುವೆ ಚಪ್ಪರ ಮಾಡುವಾಗ ೧೨ಕಂಬ ಇರುತ್ತದೆ)	೫. ಒಂದು ಬಣ್ಣ ಅವರಿಗಿಂತ ಕಮ್ಮಿ (ಇವರದು ೧೧ ಕಂಬ ಇರುತ್ತದೆ)

ಹೀಗಿದೆ ಸ್ವಾಮಿ ನಾವು ಆದಿ ಕರ್ನಾಟಕಕ್ಕೆ ಸೇರಿದವರು ಎಂಬುದಾಗಿ ಅವರೇ ಮುಕ್ತವಾಗಿ ಹೇಳಿಕೊಂಡರು.

ಶ್ರೀ ತಂಬೂರಿ ಶಿವಮಾದಯ್ಯ – (೬೦ ವರ್ಷ ವಯಸ್ಸು)

ಬೀದಿಯಲ್ಲಿ ಕ್ವಾರಣ್ಯಭಿಕ್ಷೆಗೆ ಹೋಗುವಾಗ ಮನೆ ಮನೆ ಮುಂದೆ ನಿಂತು ಕೆಲ ಕ್ಷಣಗಳ ಕಾಲ ಹಾಡುತ್ತಿರುತ್ತಾರೆ ಹಾಡು ಇಷ್ಟವಾದರೆ ಒಂದು ಅರ್ಧಗಂಟೆ ಮಂದಲಿಗೆ

ಹಾಸಿ ಕೂರಿಸಿ ಹಾಡಿಸುತ್ತಾರೆ. ಇಷ್ಟವಾಗದ್ದಿದ್ದರೆ ಭಿಕ್ಷೆ ಹಾಕಿ ಮುಂದಕ್ಕೆ ಕಳುಹಿಸುತ್ತಾರೆ. ಆದರೆ ತಂಬೂರಿ ಶಿವಮಾದಯ್ಯ ದಿನಾಂಕ ೨೬-೮-೨೦೦೭ರಂದು ಮಂಡ್ಯ ಜಿಲ್ಲೆಯ ಬಸರಾಳು ಗ್ರಾಮದ ಬೀದಿಯಲ್ಲಿ ತಂಬೂರಿ ನುಡಿಸುತ್ತಾ ಚಿಟಿಕೆತಾಳ ಮಾಡುತ್ತಾ ಸುಶ್ರಾವ್ಯವಾಗಿ ಹಾಡುತ್ತಾ ಭಿಕ್ಷೆ ಪಡೆದು ಸಾಗುತ್ತಿದ್ದ ತಂಬೂರಿ ಶಿವಮಾದಯ್ಯನನ್ನು ನೋಡಿ ಮೂಖಸ್ಮಿತರಾದವರಲ್ಲಿ ನಾನು ಕೂಡ ಒಬ್ಬ.

ಅವತ್ತಿನ ಸಂಜೆ ಬಸರಾಳು ಗ್ರಾಮದವರೆಲ್ಲ ಸೇರಿ ಇವತ್ತು ರಾತ್ರಿ ಇವರಿಂದ ತಂಬೂರಿ ಹಾಡಿಸಬೇಕು ಎಂದು ಒಬ್ಬರಿಗೆ ಒಬ್ಬರು ಮಾತನಾಡಿಕೊಂಡು ಕಥೆ ಮಾಡಿಸಿದರು. ಬಸರಾಳು ಗ್ರಾಮದ ತತ್ವಪದಗಾರರಾದ ತಂಬೂರಿ ಜವರಯ್ಯ ಮತ್ತು ಊರಿನವರೆಲ್ಲರು ಸೇರಿ ಮನೆ ಮನೆಯಿಂದ ಹಣವನ್ನು ಸಂಗ್ರಹಿಸಿ ಒಂದು ಚಿಕ್ಕ ಮೊತ್ತವನ್ನು ಪ್ರೀತಿ ಪೂರ್ವಕವಾಗಿ ಕೊಟ್ಟು ಕಳುಹಿಸಿದರು. ಈ ಭಿಕ್ಷೆಯನ್ನು ಪಡೆದ ಕಲಾವಿದರೆ ತಂಬೂರಿ ಶಿವಮಾದಯ್ಯನವರು.

ಮಂಡ್ಯ ಜಿಲ್ಲೆ ಮಳವಳ್ಳಿ ತಾಲ್ಲೂಕು ಗೌಡಗೆರೆ ಗ್ರಾಮದ ನಿವಾಸಿ ಮಾದಯ್ಯನ ಮಗ ತಂಬೂರಿ ಶಿವಮಾದಯ್ಯನವರು. ಅರವತ್ತಾರು ವರ್ಷ ವಯಸ್ಸಾದ ಇವರಿಗೆ ಬಸಮ್ಮ ಎಂಬುವರು ಮಡದಿ, ಒಬ್ಬನೇ ಮಗ ಅವನು ಕೂಲಿ ಜೀವನ ಮಾಡುತ್ತಿದ್ದಾನೆ. ಮೇಲ್ನೋಟಕ್ಕೆ ಚಿಕ್ಕ ಕುಟುಂಬವಾದರೂ ದೊಡ್ಡ ಸಮಸ್ಯೆಗಳ ಮಡು ಎಂದೇ ಹೇಳಬೇಕಾಗುತ್ತದೆ. ವಾಸ ಮಾಡಲು ಮನೆ ಇಲ್ಲ ಒಂದು ಹರಕಲು ಜೋಪಡಿ ಅದೂ ಕೂಡ ಬಾಡಿಗೆ ಮನೆ. ನಾನು ಅವರನ್ನು ಭೇಟಿ ಮಾಡಲು ಹೋದಾಗ ಈ ದೃಶ್ಯ ನನ್ನ ಕಣ್ಣಿಗೆ ಬಿತ್ತು. ನಾನು ಕೆಳಗಡೆ ಕೂತು ಅವರ ಪ್ರಾಥಮಿಕ ವಿಷಯಗಳನ್ನು ಬರೆಯುತ್ತಿದ್ದಾಗ ಅವರಿಗೆ ಸಹಿಸಿಕೊಳ್ಳಲಾರದೆ ಪಕ್ಕದ ಮನೆಯಲ್ಲಿ ಕೂರಿಸಿ ಬರೆಸಿದರು.

ಮಂಟೇಸ್ವಾಮಿ ಕಥೆಯನ್ನು ತನ್ನ ಹನ್ನೆರಡು ವರ್ಷ ವಯಸ್ಸಿನಿಂದಲೇ ಕಲಿತ್ತಿರುತ್ತಾರೆ. ಇವರ ವಿದ್ಯಾಗುರುಗಳಾದ ತೋಪಯ್ಯನವರ ಹತ್ತಿರ ಕಲಿತುಕೊಂಡ ಕಥೆಗಳು ಇಂತಿವೆ. ಮಂಟೇಸ್ವಾಮಿ ಕಥೆ, ಮಾದೇಶ್ವರನ ಕಥೆ, ಶಂಕಮ್ಮನ ಕಥೆ, ಬಾಲ್ನಾಗಮ್ಮನ ಕಥೆ, ಅರ್ಜುನ ಜೋಗಿಯ ಹಾಡು, ನಿಂಗರಾಜಮ್ಮನ ಕಥೆಗಳು.

ಇವರು ಮಂಟೇಸ್ವಾಮಿ ಕಥೆಯನ್ನು ಸತ್ತ ಹೆಣದ ಮುಂದೆ ಭಯಭೀತಿ ಇಲ್ಲದೆ ಹಾಡುತ್ತಾರೆ. ಹೇಗಾದರೂ ಮಾಡಿ ಬೆಳಕು ಹರಿಸಬೇಕು ಇದೇ ಮುಖ್ಯ ಉದ್ದೇಶ ಆಗಿರುತ್ತದೆ. ಅಳುವವರು ಶವದ ಮುಂದೆ ಅಳುತ್ತಿರುತ್ತಾರೆ ಅದನ್ನು ಲೆಕ್ಕಿಸದೆ ತನ್ನ ಪಾಡಿಗೆ ತಾನು ಹಾಡುತ್ತಿರುತ್ತಾರೆ, ಕೇಳುವವರು ಕಥೆಯನ್ನು ಕೇಳುತ್ತಾ ನಿದ್ರೆಯನ್ನು ದೂಡುತ್ತಿರುತ್ತಾರೆ ಸತ್ತ ಮನೆಯವರು ಮಧ್ಯೆ ಮಧ್ಯೆ ಕಪ್ಪು ಟೀ ಕೊಡುತ್ತಿರುತ್ತಾರೆ.

ಕಥೆ ಮಾಡುವುದಕ್ಕೆ ಒಪ್ಪಿಕೊಂಡ ಮೇಲೆ ಅವತ್ತಿನ ಸಂಜೆ ಕಥೆ ಮಾಡಿಸುವವರ ಮನೆ ಸೇರುತ್ತಾರೆ. ಕೆಲವರು ಮುಂಗಡವಾಗಿ ಇಂಥ ಕಥೆಯೇ ಮಾಡಬೇಕು ಎಂದು ಹೇಳಿರುತ್ತಾರೆ. ಇನ್ನೂ ಕೆಲವರು ಕಲಾವಿದರು ಕಥೆ ಮಾಡಲು ಸಜ್ಜು ಮಾಡುತ್ತಿರುವಾಗ

ಜನಗಳ ಗುಂಪಿನಲ್ಲಿ ಗುಜು ಗುಜು ಮಾತು ಶುರವಾಗಿರುತ್ತದೆ. ಆಗ ಕಲಾವಿದರನ್ನು ಕುರಿತು ನಿಮಗೆ ಯಾವ ಯಾವ ಕಥೆ ಗೊತ್ತು ಎಂದು ಪ್ರೇಕ್ಷಕರು ಕೇಳುತ್ತಾರೆ. ಆಗ ಕಲಾವಿದ ತಂಡ ತಮಗೆ ಗೊತ್ತಿರುವ ಕಥೆಗಳ ಪಟ್ಟಿಯನ್ನು ಜನರ ಮುಂದಿಡುತ್ತಾನೆ. ಊರಿನ ಹಿರಿಯರು ಏನ್ರಪ್ಪ ಮಾತು ಎಂದು ಮಹಾ ಜನರನ್ನು ಕುರಿತು ಕೇಳುತ್ತಾರೆ. ಆಗ ಒಬ್ಬ ನಿಂತ್ಕೊಂಡು ಮಾದೇಶ್ವರನ ಕಥೆ ಮಾಡ್ಸಿ ಎಂದರೆ ಮತ್ತೆ ಕೆಲವರು ಮಂಟೇಸ್ವಾಮಿ ಕಥೆ ಮಾಡ್ಸಿ ಎಂದರೆ ಇನ್ನೂ ಕೆಲವರು ಬಿಳಿಗಿರಿ ರಂಗಸ್ವಾಮಿ ಕಥೆ ಮಾಡ್ಸಿ ಎಂದು ಕಿರುಚಾಡುತ್ತಿರುತ್ತಾರೆ. ಆಗ ಒಬ್ಬ ಹಿರಿಯರು ಎದ್ದು ನಿಂತ್ಕೊಂಡು ನೋಡ್ರಪ್ಪ ಮಂಟೇಸ್ವಾಮಿ ಕಥೆ ಕೇಳಲು ಇಚ್ಚಿಸುವವರು ಕೈಮೇಲಕೆತ್ತಿ ಎಂದು ಹೇಳುತ್ತಾರೆ ಹೀಗೆ ಯಾವ ಕಥೆ ಕೇಳಲು ಹೆಚ್ಚಿನ ಸಂಖ್ಯೆಯಲ್ಲಿ ಕೈ ಎತ್ತಿರುತ್ತಾರೋ ಅವರ ಅಪೇಕ್ಷೆಯ ಕಥೆಯನ್ನು ಮಾಡಿ ಎಂದು ಹಿರಿಯರು ಹೇಳುತ್ತಾರೆ. ಆಮೇಲೆ ಕಲಾವಿದರು ಒಂದೆಡೆ ಒಪ್ಪವಾಗಿ ಕೂತು ಹಾಡಲು ಶುರುಮಾಡುತ್ತಾರೆ.

ಪ್ರದರ್ಶನ ನೀಡಿರುವ ಕಥೆ ಇಂಪಾದರೆ ಅಂದರೆ ಇಷ್ಟವಾದರೆ ಬೇರೆ ಬೇರೆ ಕಡೆಯಿಂದ ಬಂದಿರುವ ಜನ ಮುಂದಿನ ವಾರ ನಮ್ಮೂರಿಗೆ ಕಥೆ ಮಾಡಲು ಬನ್ನಿ ಎಂದು ಮುಂಗಡ ಹಣವನ್ನು ಕೊಟ್ಟು ಮಾತಿನ ಒಪ್ಪಂದ ಮಾಡಿಕೊಳ್ಳುತ್ತಾರೆ. ಸಾಮಾನ್ಯವಾಗಿ ಕಲಾವಿದರಿಗೆ ಎಲ್ಲಿ ಕಥೆ ಮಾಡಿದರೂ ಹಾಡಲು ಸಹಾಯವಾಗುವಂತೆ ಮೈಕ್ ಹಾಕಿ ಕೊಡುತ್ತಾರೆ. ಇದರಿಂದ ಸ್ವಲ್ಪ ಮಟ್ಟಿಗೆ ಗಂಟಲಿಗೆ ದಣಿವಾಗುತ್ತದೆ ಇಲ್ಲದಿದ್ದರೆ ಕಿರುಚಿ ಕಿರುಚಿ ಸುಸ್ತು ಆಗಬೇಕಾಗುತ್ತದೆ. ಸತ್ತವರ ಮುಂದೆ ಕಥೆ ಮಾಡುವಾಗ ಮೈಕ್ ಹಾಕಿಕೊಡುವುದಿಲ್ಲ ಆಗ ನಾವು ಹಾಗೆಯೇ ಹಾಡು ಹೇಳಬೇಕಾಗುತ್ತದೆ ಎನ್ನುತ್ತಾರೆ.

ಶ್ರೀ ಉಳ್ಳಂಬಳ್ಳಿ [illegible]ಾದೇವ – (೬೫ ವರ್ಷ ವಯಸ್ಸು)

ಭಾರತ ಪವಿತ್ರ ವ[illegible]ೇಶ. ಈ ಕಾರಣದಿಂದಲೇ ಪಾಶ್ಚಿಮಾತ್ಯರು ಇಲ್ಲಿಗೆ ಬಂದು ಕ[illegible]ೃತ್ಯ [illegible] ವಿಚಾರಗಳಿಗೆ ಮಾರು ಹೋಗಿದ್ದಾರೆ. ಕರ್ನಾಟಕ ರಾಜ್ಯದಲ್ಲಿ [illegible]ಾದೇಶ್ವರ ಹಾಗೂ ಮಂಟೇಸ್ವಾಮಿ ಮುಂತಾದ ಶರಣರ ಕ್ಷೇತ್ರಗಳು ಧಾರ್ಮಿಕ ಕ್ಷೇತ್ರಗಳಾಗಿ ಪ್ರಸಿದ್ಧಿ ಪಡೆದಿವೆ. ಜಾನಪದ ದೈವಗಳಾಗಿ ಜನಮನವನ್ನು ಸೂರೆಗೊಂಡಿವೆ. ತಮ್ಮ ಧಾರ್ಮಿಕ ಮತ್ತು ಸಾಮಾಜಿಕ ಮೌಲ್ಯಗಳ ಮೂಲಕ ಪವಾಡ ಪುರುಷರೆನಿಸಿಯೂ ಜನರ ಭಕ್ತಿಗೆ, ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ತಮ್ಮ ಸ್ವಾಮಿಯ ಬಗ್ಗೆ ಎಷ್ಟು ಹಾಡಿದರೂ ಹೊಗಳಿದರೂ ಸಮಾಧಾನವಿಲ್ಲ. ತಮ್ಮ ಕಷ್ಟವನ್ನು ಹೋಗಲಾಡಿಸಿ, ಬದುಕಿನಲ್ಲಿ ಶಾಂತಿ-ಶಿಸ್ತನ್ನು ಕರುಣಿಸಿ ಒಂದು ಒಳ್ಳೆಯ ಸಂಸ್ಕೃತಿಯನ್ನು ನಿರ್ಮಿಸಲು ಬಂದ "ಸಾಂಸ್ಕೃತಿಕ ವೀರರು" ಎಂಬ ಭಾವನೆ ಜನಮನದಲ್ಲಿ ನಾಟಿದೆ.

ಶಿಷ್ಟರನ್ನು ರಕ್ಷಿಸಿ ದುಷ್ಟರನ್ನು ಶಿಕ್ಷಿಸುವುದರ ಮೂಲಕ ಜನರ ಪ್ರೀತಿಯನ್ನು ಗೆದ್ದುಕೊಂಡ ಈ ಅವತಾರ ಪುರುಷರು ಭಕ್ತರ ಅಚಲ ನಂಬಿಕೆಗೆ ಪಾತ್ರರಾದರು. ಹೀಗೆ ಅವರು ನೆಲೆಸಿದ ಕ್ಷೇತ್ರ ಪವಿತ್ರ ಕ್ಷೇ[illegible]ಾಯಿತು. ಇಂಥ ಪುಣ್ಯ ಕಥೆಯನ್ನು

ನೀಲಗಾರರು ಜನರಿಗೆ ತಲುಪಿಸುವುದರ ಜೊತೆಗೆ ಅರಿವನ್ನು ಮೂಡಿಸಿ ಉತ್ತಮ ಬಾಳು ನಡೆಸಲು ಸಹಕಾರಿ ಆಗುವುದರ ಜೊತೆಗೆ ಭಕ್ತನಾದವನು ದಾರಿ ತಪ್ಪಿ ನಡೆಯದಂತೆ ಎಚ್ಚರಿಸಿ ಸನ್ಮಾರ್ಗದತ್ತ ಕರೆದೊಯ್ಯುವುದೇ ಕಾವ್ಯದ ಮುಖ್ಯ ಗುರಿಯಾಗಿದೆ.

ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲ್ಲೂಕಿನ ಮಾರೇಹಳ್ಳಿ ಗ್ರಾಮದ ನಿವಾಸಿ ಉಳ್ಳಂಬಳ್ಳಿ ಮಾದೇವ. ಇವರಿಗೆ ೬೫ ವರ್ಷ ವಯಸ್ಸು. ತಂದೆ ಮಾದಯ್ಯನವರು ಕೂಡ ಕಥೆ ಮಾಡುತ್ತಿದ್ದರು. ಚಿಕ್ಕಂದಿನಲ್ಲಿರುವಾಗ ಕೆಲವು ಕಥೆಗಳನ್ನು ಕಲಿತ್ತಿದ್ದಾರೆ. ತಂದೆ ತಾಯಿಯವರು ಕಾಲವಾದ ಮೇಲೆ ಜೀವನೋಪಾಯಕ್ಕೆ ಮಾರೇಹಳ್ಳಿಗೆ ಬಂದು ನೆಲೆಗೊಂಡರು. ಆಗ ಒಬ್ಬ ತಬ್ಬಲಿ ರೀತಿಯಲ್ಲಿ ಅಡ್ಡಾಡುತ್ತಿದ್ದರು. ಆಗ ಅದೇ ಊರಿನ ಸೊತ್ತಮ್ಮ ಎಂಬುವವರು ಆಶ್ರಯವನ್ನು ನೀಡಿದರು ಅವರ ಮನೆಯಲ್ಲಿಯೇ ಊಟ ಮಾಡಿಕೊಂಡು ಕುಂತ್ತೂರುಕಾಳಶೆಟ್ಟರು ಮತ್ತು ಉಳ್ಳಂಬಳ್ಳಿಯವರುಗಳು ಇಬ್ಬರು ಕಾರಾಪುರದ ಪುಟ್ಟಮಾದಯ್ಯ ಅವರ ಹತ್ತಿರ ಕಥೆ ಕಲಿಯುವುದಕ್ಕೆ ಸೇರಿದರು. ಅವರ ಮೊದಲ ಶಿಷ್ಯರುಗಳು ಹೌದು.

ಸೊತ್ತಮ್ಮ ಎಂಬುವರೆ ಉಳ್ಳಂಬಳ್ಳಿಗೆ ಮದುವೆ ಮಾಡಿಸಿ ಒಂದು ಬಾಡಿಗೆ ಮನೆಯನ್ನು ಹಿಡಿದು ವಾಸಕ್ಕೆ ಅನುವು ಮಾಡಿಕೊಟ್ಟರು. ಈಗಲೂ ಬಾಡಿಗೆ ಮನೆಯಲ್ಲಿಯೇ ಜೀವಿಸುತ್ತಿದ್ದಾರೆ. ಚಿಕ್ಕಂದಿನಿಂದ ಕಥೆ ಕಲಿತು ಹಾಡುವುದೆ ಅದನ್ನು ಹಾಡಿಕೊಂಡೇ ಅದನ್ನೊಂದು ವೃತ್ತಿಯನ್ನಾಗಿಯೇ ರೂಢಿಸಿಕೊಂಡರು. ಇವರಿಗೆ ಇಬ್ಬರು ಮಕ್ಕಳು ಒಬ್ಬ ಕೂಲಿ ಮಾಡುತ್ತಿದ್ದಾನೆ. ಇನ್ನೊಬ್ಬ ಹುಡುಗ ಪಿ ಯು ಸಿ ಓದುತ್ತಿದ್ದಾನೆ. ಹೆಂಡ್ತಿ ಕೂಲಿ ಮಾಡುತ್ತಿದ್ದಾರೆ. ನಾಯಕ ಜಾತಿಗೆ ಸೇರಿದವರು.

ಇವರ ಗುರುಗಳಾದ ಕಾರಾಪುರದ ಪುಟ್ಟಮಾದಯ್ಯನವರಿಂದ ಕಲಿತ ಕಥೆಗಳು ಇಂತಿವೆ. ಮಾದೇಶ್ವರನ ಕಥೆ, ಶಂಕಮ್ಮನವರಚರಿತೆ, ಧರೆಗೆದೊಡ್ಡವರ ಕಥೆ, ಕೆಂಪಾಚಾರಿಯ ಸತ್ಯ ಪರೀಕ್ಷೆ, ಸಿದ್ದಪ್ಪಾಜಿಯವರ ಪವಾಡ, ಅರ್ಜುನ ಜೋಗಿ ಹಾಡು, ನಂಜುಂಡೇಶ್ವರನ ಕಥೆ, ಚಾಮುಂಡಿಯಮ್ಮನ ಕಥೆ, ನಾರಾಯಣ ಸ್ವಾಮಿಯ ಕಥೆ, ಪಿರಿಯಾಪಟ್ಟಣದ ಕಾಳಗ, ಮುಡುಕುತೊರೆ ಮಲ್ಲಿಕಾರ್ಜುನನ ಕಥೆ, ರಾಜ ಸತ್ಯವೃತ್ತನ ಕಥೆ, ಬಸವಣ್ಣನವರ ಕಥೆ, ಮೈದಾಳರಾಮನ ಕಥೆ, ಗಣಪತಿ ರಾಜನ ಕಥೆ, ಬಾಣಾಸುರನ ಕಥೆ ಇತ್ಯಾದಿ ಕಥೆಗಳನ್ನು ಕಲಿತ್ತಿದ್ದಾರೆ.

ನಿಜಕ್ಕೂ ಇವರು ಮಾಡುವ ಕಥೆ ಕೇಳಿದರೆ ಮೈ ಜುಮ್ಮೆನ್ನುತ್ತದೆ. ಮಳವಳ್ಳಿ ತಾಲ್ಲೂಕಿಗೆ ತುಂಬಾ ಹಿರಿಯ ಕಲಾವಿದ. ಇವರ ಹತ್ತಿರ ಕಲಿತವರೆಲ್ಲ ಒಳ್ಳೆ ದುಡ್ಡುಕಾಸು ಮಾಡ್ಕೊಂಡು ಚನ್ನಾಗಿದ್ದಾರೆ. ಇವರು ಮಾತ್ರ ಬಡತನದಲ್ಲಿ ನರಳುತ್ತಿದ್ದಾರೆ. ಇವರ ಮುಖ್ಯವಾದ ಶಿಷ್ಯರಲ್ಲಿ ಕೃಷ್ಣಾಪುರ ಮಹದೇವ ಸ್ವಾಮಿಯವರು ಒಬ್ಬರು. ಮಂಡ್ಯ ಜಿಲ್ಲೆಯ ನೀಲಗಾರರಿಗೆಲ್ಲ ಗುರು ರೂಪದ ಹಿರಿಯ ಕಲಾವಿದರು ಎಂದು ಹೇಳಿದರೆ ಅತಿಶಯೋಕ್ತಿ ಆಗಲಾರದು.

ಶ್ರೀ ಲಕ್ಷ್ಮಣ – (೪೫ ವರ್ಷ ವಯಸ್ಸು)

ರಾಮನಗರ ಜಿಲ್ಲೆಯ ಕನಕಪುರ ತಾಲ್ಲೂಕಿನ ಗಾಣಾಳು ಅಂಚೆಗೆ ಸೇರಿದ ಕೋನಮಾನ ಹಳ್ಳಿಯಲ್ಲಿ ತಂದೆ ಕಾಳಯ್ಯ ತಾಯಿ ವೆಂಕಟಮ್ಮನವರ ಪುತ್ರನಾಗಿ ಜನಿಸಿದರು. ತಿಗಳ್ಗೌಡ ಜಾತಿಗೆ ಸೇರಿದವರಾದ ಶ್ರೀ. ಲಕ್ಷ್ಮಣರವರು ಬಾಲ್ಯದಿಂದಲೂ ಬಡತನದ ಬೇಗೆಯಲ್ಲಿ ಬೆಂದು ಬಂದವರು. ಬದುಕಿನ ಕಷ್ಟ ಸುಖಗಳನೆಲ್ಲ ಕಣ್ಣಾರೆ ಕಂಡಂತವರು. ಇವರ ಮಡದಿಯ ಹೆಸರು ಸರೋಜಮ್ಮ. ಈ ದಂಪತಿಗಳಿಗೆ ಇಬ್ಬರು ಗಂಡು ಮತ್ತು ಒಬ್ಬರು ಹೆಣ್ಣು. ಎಲ್ಲಾ ಮಕ್ಕಳು ಶಾಲೆಗೆ ಹೋಗುತ್ತಿದ್ದಾರೆ.

ಜನಪದ ಸಾಹಿತ್ಯದ ಅತ್ಯಂತ ಜನಪ್ರಿಯ ಪ್ರಕಾರವೇ ಹಾಡುಗಾರಿಕೆ. ಕೂಲಿನಾಲಿ ಮಾಡುವ ಜನರು ತಮ್ಮ ಅಂದಂದಿನದಕ್ಕೆಲ್ಲಾ ಮೈಸೋತು ಮನಸೋತಾಗ ಎದೆಯೊಳಗೆ ಹೆಪ್ಪುಗಟ್ಟಿದ ನೋವು, ಸಂಕಟ, ಬೇಸರ, ವ್ಯೆಥೆಗಳನ್ನು ಹೊರಹಾಕುವುದಕ್ಕಾಗಿ ಕಂಡುಕೊಂಡ ಕಾವೇರಿಯೇ ಹಾಡುಗಾರಿಕೆ. ಆದುದರಿಂದಲೇ ಅನುದಿನದ ನೋವಿನಲ್ಲಿ ಬೆಂದವರ ಪಾಡೇ ಹಾಡಾಗಿ ಹೊರಹೊಮ್ಮಿ ಬದುಕು ನಡೆಸಲು ದಾರಿ ಹಾಕಿಕೊಟ್ಟಿದೆ ಎನ್ನಬಹುದು.

ಇವರು ತಮ್ಮ ಹನ್ನೆರಡು ವಯಸ್ಸಿನಲ್ಲಿಯೇ ಬೇರೆಯವರು ಹಾಡುವುದನ್ನು ಕೇಳಿ ಬಾಯಿಪಾಠ ಮಾಡಿಕೊಂಡು ಹಾಡುವುದನ್ನು ಕಲಿತರು ಇದರ ಜೊತೆಗೆ ಕಂಸಾಳೆ, ತಾಳ, ದಮ್ಮಡಿಗಳನ್ನು ಬಾರಿಸುವುದನ್ನು ಕಲಿತುಕೊಂಡ ತನ್ನ ಇಪ್ಪತ್ಮೂರು ವಯಸ್ಸಿನಲ್ಲಿ ಹಳ್ಳಿಗಳ ಮೇಲೆ ಭಾವಪೂರ್ಣವಾಗಿ ಸವಿಯಾದ ಕಂಠದಲ್ಲಿ ಹಾಡುವ ಶುರುಮಾಡಿದ ಶ್ರೀ ಲಕ್ಷ್ಮಣರವರ ಎದೆಯೊಳಗಿನ ಪದಗಳು ವೈವಿಧ್ಯಮಯವಾದವು.

ಮಂಟೇಸ್ವಾಮಿ ಕಾವ್ಯವನ್ನು ನಾಲ್ಕು ರಾತ್ರಿಗಳವರೆಗೆ ಹಾಡಬಲ್ಲ ಇವರು ಮಹದೇಶ್ವರ, ಬಸವಣ್ಣನವರು, ಮುಡುಕುತೊರೆ ಮಲ್ಲಪ್ಪ, ಸಾರಂಗಧರ, ಭಕ್ತಿಸಿರಿಯಾಳ, ಚೆನ್ನಿಗರಾಮನ ಕಥೆ, ಬಾಣಾಸುರ, ರಾಜಾವಿಕ್ರಮರು, ಗಂಗೆ ಗೌರಿ ಜಗಳ, ಬಾಲನಾಗಮ್ಮ , ಪಿರಿಯಾಪಟ್ಟಣ ಕಾಳಗ, ನಿಂಗರಾಜಮ್ಮನ ಕಥೆ, ಮ್ಯೆದಾಳರಾಮನ ಕಥೆ, ನೀಲವೇಣಿ ಕಥೆ, ರೇವಣಸಿದ್ದೇಶ್ವರನ ಕಥೆ, ಚೆನ್ನಪ್ಪಸ್ವಾಮಿ ಕಥೆ, ಉಗ್ರಮುನೀಶ್ವರ ಕಥೆ ಇತ್ಯಾದಿ ಇಪ್ಪತ್ತೈದಕ್ಕೂ ಹೆಚ್ಚು ಕಾವ್ಯಗಳನ್ನು ಹಾಡುವ ಪರಿಣಿತಿಯನ್ನು ಪಡೆದಿರುತ್ತಾರೆ. ಹೀಗೆ ಕಥೆಯನ್ನು ಹಾಡುತ್ತಾ ಅದನ್ನೇ ವೃತ್ತಿಯನ್ನಾಗಿ ಮಾಡಿಕೊಂಡಿರುವ ಶ್ರೀಯುತರು ಜನಪದ ಕಾವ್ಯಗಳನ್ನು ಹಾಡುವ ಹಲವಾರು ಶಿಷ್ಯರನ್ನು ತರಬೇತಿ ನೀಡಿದ್ದಾರೆ.

ಉಣ್ಣುವಾಗ ಉಡುವಾಗ ಲೋಕವೆಲ್ಲ ನೆಂಟರು ಸತ್ತಾಗ ಯಾರೂ ಇಲ್ಲ ಎಂಬುದು ಲೋಕೋಕ್ತಿ. ಆದರೆ ಸತ್ತಾಗಲೂ ಜತೆಗೆ ಹಾಡಿಸಿಕೊಳ್ಳುವ ಕಾವ್ಯವೆಂದರೆ ಅದು ಮಂಟೇಸ್ವಾಮಿ ಕಾವ್ಯ ಮಾತ್ರ ಎಂದು ಬಹಳ ಸಂತೋಷದಿಂದ ಹೇಳಿಕೊಳ್ಳುತ್ತಾರೆ. ಮರಣ ಹೊಂದಿರುವವರ ಮನೆಯವರು ನೀಲಗಾರರನ್ನು ಕರೆದು ಮಂಟೇಸ್ವಾಮಿ ಕಥೆಯನ್ನು ಮಾಡಿಸುತ್ತಾರೆ.

ಟಿ.ವಿ ಮಾಧ್ಯಮ ಬಂದು ರಾತ್ರಿ ಪ್ರದರ್ಶನಗಳ ಸಂಖ್ಯೆ ಕಡಿಮೆಯಾಗಿರುವ ಸಂದರ್ಭದಲ್ಲಿ ಕ್ಯಾಸೆಟ್‌ನಲ್ಲಾದರೂ ಜನಪದ ಕಾವ್ಯಗಳು ಜನರಿಗೆ ತಲುಪಲಿ ಎಂಬ ಉದ್ದೇಶದಿಂದ ಹಲವಾರು ಧ್ವನಿ ಸುರುಳಿಗಳನ್ನು ಹೊರತಂದಿದ್ದಾರೆ. ಅವುಗಳಲ್ಲಿ ಮುಖ್ಯವಾದದು ಸಿದ್ದಪ್ಪಾಜಿ ಪವಾಡ, ಉಗ್ರಮುನೀಶ್ವರ ಕಥೆ, ಮಾದಪ್ಪನ ಹುಟ್ಟು ಕಥೆ, ಶಂಕಮ್ಮನ ಕಥೆ, ಬೇವಿನ ಹಟ್ಟಿ ಕಾಳಮ್ಮನ ಕಥೆ, ಆಲಂಬಾಡಿ ಜುಂಜಮ್ಮನ ಕಥೆ, ಬಾಲ್ನಾಗಮ್ಮನ ಕಥೆ, ಮೈದಾಳರಾಮನ ಕಥೆ, ಅಕ್ಕನಾಗಮ್ಮನ ಕಥೆ, ರೇವುಣ ಸಿದ್ದೇಶ್ವರನ ಕಥೆ, ಮುತ್ತತ್ತಿರಾಯನ ಕಥೆ, ಮಳವಳ್ಳಿ ತಾಯಿ ಮುದ್ದಮ್ಮನ ಕಥೆ, ಗಣಪತಿರಾಜನ ಕಥೆ, ಬಂಜೆ ಹೊನ್ನಮ್ಮನ ಕಥೆ, ಲಿಂಗರಾಜಮ್ಮನ ಕಥೆ, ನೀಲವೇಣಿ ಕಥೆ, ಬಿಳಿಗಿರಿರಂಗಸ್ವಾಮಿ ಕಥೆ, ಮುಡುಕುತೊರೆ ಮಲ್ಲಿಕಾರ್ಜುನ ಕಥೆ, ಆದಿಚುಂಚನಗಿರಿ ಭೈರೇಶ್ವರನ ಕಥೆ, ಕಬ್ಬಾಳಮ್ಮನ ಕಥೆಗಳನ್ನು ಧ್ವನಿಸುರುಳಿಗೆ ಅಲವಡಿಸಿ ಹಾಡಿರುತ್ತಾರೆ. ಇದರ ಜೊತೆಗೆ ಉಪಕಥೆಗಳಾದ ಇಡ್ಲಿ ಮಾದಮ್ಮನ ಕಥೆ, ದಾಸಪ್ಪನ ಕಥೆಗಳನ್ನು ಹಾಡಿ ಜನರನ್ನು ರಂಜಿಸುತ್ತಾರೆ.

ಕಂಡಾಯದ ಬಗ್ಗೆ ಅವರ ಅಭಿಪ್ರಾಯ ಹೀಗಿದೆ – ಮಂಟೇಸ್ವಾಮಿಯವರಿಗೆ ಕಂಡಾಯ ಅಂದರೆ ಕುರುಬನಕಟ್ಟೆಯಿಂದ ಹೊನ್ನಯ್ಯ ಚೆನ್ನಯ್ಯ ಕಂಡಾಯ ತಕ್ಕೊಂಡು ಹೋಗಿ ಯಾರೂ ಗದ್ದಿಗೆ ಹೂಡಿಸುತ್ತಾರೋ ಅವರ ಮನೆಗೆ ಕಂಡಾಯದಲ್ಲಿ ಮಂಟೇಸ್ವಾಮಿ ವಾಲಾಡಿಕೊಂಡು ಬರುತ್ತಾರೆ ಎಂಬ ಪ್ರತೀತಿ ಜನಮನದಲ್ಲಿ ಇದೆ.

ಕತ್ತಲರಾಜ್ಯದ ಬಗ್ಗೆ : ಉತ್ತರ ಕಾಂಡದಲ್ಲಿ ಉದ್ಭವ ಆದಾಗ ಮಂಟೇಸ್ವಾಮಿಗೆ ಅಲ್ಲಮಾಪ್ರಭು ಎಂಬ ಹೆಸರು ಇತ್ತು. ನೀರಿನ ಮೇಲೆ ತಾವರೆ ಪುಷ್ಪದಲ್ಲಿ ವಾಸಮಾಡುತ್ತಾ ಇರುತ್ತಾರೆ. ಆಗ ಆದಿಶಕ್ತಿಯನ್ನು ಸೃಷ್ಟಿ ಮಾಡುತ್ತಾರೆ. ಆದಿಶಕ್ತಿಯಿಂದ ತ್ರಿಮೂರ್ತಿಗಳನ್ನು ಸೃಷ್ಟಿ ಮಾಡುತ್ತಾರೆ. ಮಣ್ಣಿನಲ್ಲಿ ಸೊಡ್ಲು (ದೀಪಾ) ಮಾಡಿ ಕಾವಿವಸ್ತ್ರದಿಂದ ಬತ್ತಿ ಮಾಡಿ, ಮೈನ ಬೆವರಿನಿಂದ ಹಳ್ಮರ ಸೃಷ್ಟಿ ಮಾಡಿ, ಹಳ್ಳಲ್ಲಿ ಹರಳೆಣ್ಣೆ ಅಂಗೈಯಲ್ಲಿ ಒಸಕಿ ಮಾಡುತ್ತಾರೆ. ಆಗ ಕತ್ತಲರಾಜ್ಯಕ್ಕೆ ಬೆಳಕು ತಂದು ಜ್ಯೋತಿರ್ಲಿಂಗಯ್ಯ ಎಂದು ನಾಮಕರಣವಾಗುತ್ತದೆ.

ಸತ್ತವರ ಮನೆ ಒಳಗೆ
ಹೆತ್ತವರ ಮನೆ ಒಳಗೆ
ಕುರುಬರ ಮನೆ ಒಳಗೆ
ಕುಂಬಾರರ ಮನೆ ಒಳಗೆ
ಮಡುವಾಳ ಮಾಚಪ್ಪನ ಮನೆ ಒಳಗೆ
ಹೊಲೆಯ ಹೊನ್ನಯ್ಯನ ಮನೆ ಒಳಗೆ
ಮಾದಿಗ ಹರಳಯ್ಯನ ಮನೆ ಒಳಗೆ
ಕುಲ ಹದಿನೆಂಟು ಜಾತಿಗೂ ಕೂಡ
ಭಿನ್ನ ಭೇದವಿಲ್ಲದೆ ಉರಿಯುವಂತ ಪರಂಜ್ಯೋತಿ

ಕೊನೆಗೆ ಮಂಟೇಸ್ವಾಮಿ ಎಂದು ಹೆಸರಾಯ್ತು.

ಶ್ರೀ. ಲಕ್ಷ್ಮಣರವರ ಜೊತೆ ಕಥೆ ಮಾಡುವ ಸಂಗಡಿಗರು ಉಜನಳ್ಳಿ ರಾಜಣ್ಣ, ಚಿಕ್ಕಕಲ್ಲುಬಾಳು ಗುರುರಾಜ್, ಏರೂಂಗೆರೆ ಕೆ. ಶ್ರೀರಾಮು ಇವರುಗಳು ಹಿಮ್ಮೇಳದಲ್ಲಿ ಹಾಡುತ್ತಾರೆ.

ಶ್ರೀ ಕೃಷ್ಣಾಪುರ ಎಂ. ಮಹದೇವಸ್ವಾಮಿ – (೪೯ ವರ್ಷ ವಯಸ್ಸು)

ಸುಮಧುರವಾದ ಕಂಠಮಾಧುರ್ಯ ಪಡೆದಿರುವ ಕೃಷ್ಣಪುರ ಎಂ. ಮಹದೇವಸ್ವಾಮಿ ಅವರು ಹತ್ತಾರು ರಾತ್ರಿ ಒಂದೇ ಸಮನೆ ಕಥೆ ಮಾಡುವ ತಾಕತ್ತನ್ನು ಹೊಂದಿರುತ್ತಾರೆ. ಈತನ ಬಾಲ್ಯ ಜೀವನ ತುಂಬ ಶೋಚನೀಯವಾದದ್ದು. ಮನೆಯ ಬಡತನದ ಬೇಗೆಯನ್ನು ತಾಳಲಾರದೆ ಹೊಟ್ಟೆಪಾಡಿಗೋಸ್ಕರ ಒಬ್ಬ ಗೌಡರ ಮನೆಯಲ್ಲಿ ಜೀತಕ್ಕೆ ಸೇರಿ ದುಡಿಯುತ್ತಿದ್ದರು. ಹೀಗೆ ಅವರ ದಿನನಿತ್ಯ ಕೆಲಸ ಸಾಗುತ್ತಿತ್ತು. ಒಂದು ದಿನ ಗೌಡರ ಕೊಟ್ಟಿಗೆಯಲ್ಲಿ ಸಗಣಿ ಗೋರುತ್ತಿರುವಾಗ ಪಕ್ಕದ ಮನೆಯಲ್ಲಿ ಉಳ್ಳಂಬಳ್ಳಿ ಮಾದೇವ ಎಂಬುವರು ಮಂಟೇಸ್ವಾಮಿ ಕಥೆಯನ್ನು ಸುಲಲಿತವಾಗಿ ಹಾಡುತ್ತಿದ್ದರು. ಆ ಕಥೆಗೆ ಮಾರುಹೋಗಿ ಅವರಿಂದ ಪ್ರಭಾವಿತರಾಗಿ ಅವರ ಜೊತೆಯಲ್ಲಿಯೇ ಕಥೆ ಕಲಿಯುವುದಕ್ಕೆ ಬಂದು ಚಿಟಿಕೆ, ತಂಬೂರಿ, ತಾಳ, ದಂಬ್ಡಿ, ಕಂಸಾಳೆ ಮೋಡಿಗೆ ಒಳಗಾಗಿ ಅದನ್ನೆ ತಮ್ಮ ವೃತ್ತಿಯಾಗಿಸಿಕೊಂಡು ಈಗ ದೊಡ್ಡ ಕಲಾವಿದರಾಗಿ ಬೆಳೆದಿದ್ದಾರೆ. ಇವರ ಮೊದಲ ಕಲಾ ಗುರು ಉಳ್ಳಂಬಳ್ಳಿ ಮಾದೇವುರವರು.

ಹೀಗೆ ಉಳ್ಳಂಬಳ್ಳಿ ಮಾದೇವರಿಂದ ಕಲಿತ ಕಥೆಯನ್ನು ತಮ್ಮ ಕಂಠಸಿರಿಯ ಮೂಲಕ ತಂಬೂರಿ ಮತ್ತು ಕಂಸಾಳೆಯ ಕಥೆಗಳನ್ನು ನಾಡಿನಾದ್ಯಂತ ಪ್ರಚೂರ ಪಡಿಸುತ್ತಿರುವವರು. ಇವರು ಕೃಷ್ಣಾಪುರ ಎಂಬ ಹಳ್ಳಿಯಲ್ಲಿ ಹುಟ್ಟಿ ಜೀವನೋಪಾಯಕ್ಕಾಗಿ ಮಳವಳ್ಳಿ ಟೌನ್‌ನಲ್ಲಿ ವಾಸವಾಗಿದ್ದಾರೆ. ವಿವಿಧ ಗತ್ತುಗಳಲ್ಲಿ ಹಾಡುವುದನ್ನು ಕರಗತ ಮಾಡಿಕೊಂಡು ಪ್ರಸಿದ್ಧಿಯನ್ನು ಹಳ್ಳಿಂದ ತಾಲ್ಲೂಕಿಗೆ ತಾಲ್ಲೂಕಿನಿಂದ ಜಿಲ್ಲೆಗೆ ಜಿಲ್ಲೆಯಿಂದ ನಾಡಿನ ವಿವಿಧ ಭಾಗಗಳಿಗೆ ಹಾಡು ಗಮನ ಸೆಳೆದಿದೆ. ಎಲ್ಲಕ್ಕಿಂತ ಹೆಚ್ಚಾಗಿ ಮಂಟೇಸ್ವಾಮಿ ಕಥೆ ಮಾಡುವವರು ಯಾರು ಎಂದು ಜನರಿಗೆ ಸಾಮಾನ್ಯವಾಗಿ ಕೇಳಿದರೆ ಮಾದೇವಸ್ವಾಮಿ ಹೆಸರನ್ನೇ ಹೇಳುವಷ್ಟು ಖ್ಯಾತಿಯನ್ನು ಗಳಿಸಿಕೊಂಡಿದ್ದಾರೆ.

ಹಿರಿಯರಿಂದ ಬಳುವಳಿಯಾಗಿ ಬಂದ ಈ ಕಾವ್ಯ ಧಾರೆಯನ್ನು ತಮ್ಮ ಊರಿನ ಮಕ್ಕಳಿಗೆ ದಿನನಿತ್ಯವೂ ಹೇಳಿಕೊಡುವ ಇವರ ಕಲಾಸೇವೆಗೆ ಬಡತನ ಅಡ್ಡಿಯಾಗಿಲ್ಲ.

ಇವರು ಮಾಡುವ ಕಥೆಗಳಾವುವೆಂದರೆ ಮಂಟೇಸ್ವಾಮಿ ಕಥೆ, ಮಾದೇಶ್ವರ ಕಥೆ, ಬಿಳಿಗಿರಿರಂಗಸ್ವಾಮಿ ಕಥೆ, ಬಾಲ್ನಾಗಮ್ಮನ ಕಥೆ, ಅರ್ಜುನ ಜೋಗಿ ಕಥೆ, ಪಿರಿಯಾಪಟ್ಟಣದ ಕಾಳಗ ಕಥೆ, ಮುತ್ತತ್ತಿರಾಯನ ಕಥೆ, ಮೈದಾಳರಾಮನ ಕಥೆ ಇತ್ಯಾದಿಗಳನ್ನು ಹಳೆಯ ಧಾಟಿಯಲ್ಲಿ ಹಳೆಯ ವಾದ್ಯ ಪರಿಕರಳೊಡನೆ ಅಂದರೆ ತಂಬೂರಿ, ಡಕ್ಕಿ, ತಾಳ ಇಷ್ಟನ್ನೇ ಬಳಸಿಕೊಂಡು ಪ್ರದರ್ಶನ ನೀಡುತ್ತಿದ್ದರು. ಆದರೆ ಕಾಲ ಉರುಳಿದಂತೆ

ಆಧುನಿಕತೆ ಬಂದಂತೆ ಜನರ ಆಸೆ ಆಶೋತ್ತರಗಳು ಬದಲಾವಣೆ ಆಗಿರುವ ಕಾರಣದಿಂದ ಇವರು ಈಗಿನ ಕಾಲಕ್ಕೆ ತಕ್ಕಂತೆ ಆಧುನಿಕ ಸಾಮಗ್ರಿಗಳನ್ನು ಬಳಸಿ ಕಥೆಯನ್ನು ಮಾಡುತ್ತಾ ಬರುತ್ತಿದ್ದಾರೆ. ಅವು ಯಾವುವು ಎಂದರೆ ಕಮ್ಸ್ಟ್, ಘಟಂ, ತಾಳ, ಕೀಬೋರ್ಡ್ ಬಳಸಿ ಆಕರ್ಷಿಸುವಂತೆ ಹಾಡುತ್ತಾರೆ.

ಜನವರಿ ತಿಂಗಳಿನಲ್ಲಿ ಐದು ದಿನಗಳ ಕಾಲ ನಡೆಯುವ ಚಿಕ್ಕಲ್ಲೂರು ಜಾತ್ರೆ ನಡೆಯುತ್ತದೆ. ಈ ಜಾತ್ರೆಯಲ್ಲಿ ಎತ್ತಾ ನೋಡಿದತ್ತಾ ಜನಸಾಗರದಿಂದ ಜಗಮಗಿಸುತ್ತಿರುತ್ತದೆ. ಉಳಿದ ದಿನಗಳಲ್ಲಿ ಈ ಕ್ಷೇತ್ರದಲ್ಲಿ ಜನರ ವಾಸವೇ ಇಲ್ಲದೆ ಬಿಕೋ ಎನ್ನುತ್ತಿರುತ್ತದೆ. "ಮಾನವ ಜಾತಿ ತಾನೊಂದೇ ವಲಂ" ಎಂಬ ಪಂಪನ ಮಾತು ನೆನಪಿಗೆ ಬಾರದಿಹದು. ಇಲ್ಲಿ ಬಂದಿರುವ ಸಾವಿರಾರು ಜನಸಂದಣಿಗೆ ಭೂಮಿತಾಯಿಯೇ ಹಾಸಿಗೆ. ಆಕಾಶವೇ ಹೊದಿಕೆ. ಹಗಲಲ್ಲಿ ಜನದಟ್ಟಣೆಯನ್ನು ನೋಡಿ ಸಮಯ ಹೋಗುವುದೇ ಗೊತ್ತಾಗುವುದಿಲ್ಲ. ರಾತ್ರಿ ಹೊತ್ತು ಕಥೆಯನ್ನು ಆಲಿಸಿಕೊಂಡು ಇರುವಂತೆ ಬೆಳಗಾಗಿ ಬಿಡುತ್ತದೆ. ಜಾತ್ರೆಗೆ ಬಂದಿರುವ ಜನರು ಮಹದೇವಸ್ವಾಮಿಯ ಪ್ರದರ್ಶನವನ್ನು ಆಲಿಸಲು ತಾವಾಗಿಯೇ ಮುಂದೆ ಬಂದು ನೆಲದಲ್ಲಿಯೇ ಕೂತು ಅವರಿಂದ ಕಥೆ ಮಾಡಿಸಿ ಕೇಳುತ್ತಾರೆ.

ಇವರು ಕಥೆ ಮಾಡುವಾಗ ಹಣೆ ಕಿವಿಗೆ ಬಳಿದುಕೊಂಡು ಭಸ್ಮ, ಕೊರಳಲ್ಲಿ ರುದ್ರಾಕ್ಷಿಸರ, ಬಿಳಿ ಜುಬ್ಬ, ಕೆಂಪು ಶಾಲು, ಕೈಯಲ್ಲಿ ಚಿಟಿಕೆ ತಂಬೂರಿ ತಲೆಯ ಮೇಲೆ ಕಟ್ಟಿಕೊಂಡ ಕೆಂಪು ರುಮಾಲು ಧರಿಸಿಕೊಂಡು ನಿಂತರೆ ಇವರ ಮುಖದ ಹಾವಭಾವ ಪಾದಗಳ ಗತಿಯ ಚಲನೆಯನ್ನು ಕಂಡ ಕಣ್ಣಳು ನೆಟ್ಟನೋಟದಲ್ಲಿಯೇ ನೋಡಬೇಕು ಎನಿಸುತ್ತದೆ. ಹಾಡಿನ ಬಗ್ಗೆ ಅನುದಿನವು ಚಿಂತಿಸುವ ಹಾಗೂ ಆ ಬಗ್ಗೆ ಕಾರ್ಯಪ್ರವೃತ್ತರಾಗಿರುವ ಮಹದೇವಸ್ವಾಮಿ ಅವರು ಒಬ್ಬ ಮಹಾನ್ ಸಾಧಕ ಎನ್ನಬಹುದು.

ಶ್ರೀಮತಿ ತಂಬೂರಿ ರಾಜಮ್ಮ – (೫೦ ವರ್ಷ ವಯಸ್ಸು)

ಈ ನೆಲದೊಡಲ ಸಾರವನ್ನು ಈರಿ ಬೆಳೆದ ಅನೇಕ ಮುಗ್ಧ ಜಾನಪದ ಕಲಾವಿದರಲ್ಲಿ ತಂಬೂರಿ ರಾಜಮ್ಮನವರು ಸಹ ಒಬ್ಬರು. ಜನಪದಗೀತೆ, ಕಾವ್ಯಗಳ ಹಾಡುಗಾರಿಕೆಯನ್ನೇ ತಮ್ಮ ಜೀವನದ ಉಸಿರಾಗಿಸಿಕೊಂಡವರು. ಬಾಲ್ಯದಿಂದ ಪ್ರಸ್ತುತವರೆಗೂ ಹಾಡುಗಾರಿಕೆಯ ಒಡನಾಟದಲ್ಲೇ ಬದುಕನ್ನು ಸವೆಸುತ್ತಿರುವ ಕಲಾವಿದೆ. ರಾಜಮ್ಮನವರ ಗಾನಮಾಧುರ್ಯಕ್ಕೆ ಅಕ್ಷರಸ್ಥರನ್ನೂ ಬೆರಗುಗೊಳಿಸುವಂಥದ್ದು. ಇವರ ಬದುಕಿನ ಉದ್ದಕ್ಕೂ ನೋವುಂಡು ಸಂಕಷ್ಟಗಳ ನಡುವೆ ಬೆಳೆದು ಅಪ್ರತಿಮ ಮಲಾವಿದೆ. ಹಾಸ್ಯಪ್ರಜ್ಞೆಯನ್ನು ಮೈಗೂಡಿಸಿಕೊಂಡಿರುವ ತಂಬೂರಿ ರಾಜಮ್ಮ ಜನಪದ ಗೀತಗಾಯನ ಲೋಕ ಕಂಡ ಅಭಿಜಾತ ಪ್ರತಿಭಾ ಪುತ್ಥಳಿ.

ರಾಜಮ್ಮ ಅವರ ತಂದೆ ಕೆಂಪೆಗೌಡ. ಇವರು ಮೋಡಿ, ಮಾಟ, ಮಂತ್ರ ಮಾಡುತ್ತಿದ್ದ ಒಬ್ಬ ಮೋಡಿಕಾರನ ಮಗ. "ಹುಲಿ ಹೊಟ್ಟೇಲಿ ಹುಲಿ ಹುಟ್ಟದೆ ಇಲಿ ಹುಟ್ಟದು" ಹಾಗೆ ಮೋಡಿಕಾರನ ಹೊಟ್ಟೆಯಲ್ಲಿ ಮೋಡಿಕಾರ ಮಗನೇ ಹುಟ್ಟಿದನು. ಜನಗಳು ಕೊಡುತ್ತಿದ್ದ

ಅಷ್ಟೋ ಇಷ್ಟೋ ಭಿಕ್ಷೆಲೇ ಜೀವನ ಸಾಗಿಸಿದ ಇವರಿಗೆ ನಾಲ್ಕು ಜನ ಮಡದಿಯರು. ಮೊದಲನೆಯವರು ಬೆಸ್ತರು, ಎರಡನೆಯವರು ನಾಯ್ಕಜಾತಿಯವರು, ಮೂರನೆಯವರು ಲಿಂಗಾಯ್ತರು, ಕೊನೆಯವಳೆ ರಾಜಮ್ಮನವರ ತಾಯಿ ರಮಾಬಾಯಿ.

ರಮಾಬಾಯಿಯವರ ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳು ಒಟ್ಟು ಆರು ಜನ. ಅದರಲ್ಲಿ ಕೊನೆಯ ಮಗಳು ರಾಜಮ್ಮ. ತಂದೆಯವರು ದಿನ ಕುಡಿಯುತ್ತಿದ್ದರು. ಆಗ ಅವರು ಹೇಳುವರು " ಕಲ್ತ ಚಾಳಿ ಎಲ್ಲ್ ಬಿಡೋಕಾಗುತ್ತೆ ?" ಅದ್ಯಾವಳೋ ಅಂತಿದ್ಲಂತೆ "ಕಲ್ತುದ್ ಬಿಡೆ ಕಲಕೇತಿ ಅಂದ್ರೆ , ನನ್ನ ಗಂಡುನ್ನ ಬಿಟ್ಟು ಬಿಟ್ಟೆನು ಕಲ್ತುದ್ದ ಮಾತ್ರ ಬಿಡಾಕಿಲ್ಲ" ಅಂತ. ಹಾಗೆ ಇವರ ತಂದೆಯವರು ಕುಡುದು ಕುಡುದೇ ಕೊನೆಯ ಉಸಿರು ಎಳೆದರು.

ಹಳ್ಳಿಯ ಜನರು ಮೈಸೂರು ದಸರೆಯನ್ನು ನೋಡಲು ಗುಂಪು ಗುಂಪಾಗಿ ಮೈಸೂರಿಗೆ ಬರುತ್ತಿದ್ದರು. ಈಗಲೂ ಹಾಗೆಯೇ ಜನಸಮೂಹ ಹೆಚ್ಚಿಗಿದೆ. ಹೀಗೆ ಒಂದು ಸಲ ಮೈಸೂರು ದಸರೆಯನ್ನು ನೋಡಲು ಬಂದಾಗ ಗುಂಪಿನಲ್ಲಿ ತಂದೆಯವರ ಕೈಯನ್ನು ಬಿಟ್ಟು ತಪ್ಪಿಸಿಕೊಂಡಳು. ಆಗ ಕಾವಿ ತೊಟ್ಟ ಮುದುಕಜ್ಜ ಅವರೇ ಆತ್ಮಾನಂದ ಸ್ವಾಮ್ಗೊಳ ಭೇಟಿಯಾದರು.ಆಗ ಅವರೇ ರಾಜಮ್ಮನನ್ನು ಮಠಕ್ಕೆ ಕರ್ಕೊಂಡು ಹೋಗಿ ಸಾಕಿ ಬೆಳಸಿದರು. ಮಗಳು ದೊಡ್ಡವಳಾದ ಮೇಲೆ ಮಠಕ್ಕೆ ಆಗಾಗ್ಗೆ ಬರುತ್ತಾ ಹೋಗುತ್ತಿದ್ದ ಅಟ್ಲು ಮಾದಪ್ಪನಿಗೆ ಸ್ವಾಮ್ಗೊಳೇ ಮದುವೆ ಮಾಡಿಸಿಬಿಟ್ಟರು.

ಹೊಲೆಯ ಜಾತಿಗೆ ಸೇರಿದ ಅಟ್ಲುಮಾದಪ್ಪ ಮಾದೇಶ್ವರನ ಒಕ್ಕಲು. ದೊಡ್ಡಿಂದುವಾಡಿ ಅವರ ಹುಟ್ಟೂರು. ಇವರು ಧರೆಗೆದೊಡ್ಡವರ ಕಥೆ, ಮಾದೇಶ್ವರನ ಕಥೆ, ಅರ್ಜುನ ಜೋಗಿ ಕಥೆ, ಸಾರಂಗರಾಜನ ಕಥೆ, ರೇಚಪ್ಪಾಜಿಯವರ ಕಥೆ, ಗಂಗೆಗೌರಿಯ ಕಥೆ, ಪಾರ್ವತಿಪವಾಡ, ಚಾಮುಂಡೇಶ್ವರಿ ಕಥೆ, ಬಸವಣ್ಣನ ಕಥೆ ಈ ಎಲ್ಲಾ ಕಥೆಗಳನ್ನು ತುಂಬಾ ಸ್ವಾರಸ್ಯಭರಿತವಾಗಿ ಹಾಡುವ ಧಾಟಿಯನ್ನು ಗಳಿಸಿದ್ದಾರೆ. ಇದ್ದಲ್ಲದೇ ಜಾನಪದಗೀತೆ, ಲಾವಣಿ, ತತ್ತ್ವಪದ ಇವುಗಳನ್ನು ತುಂಬ ಚೆನ್ನಾಗಿ ಹಾಡುತ್ತಿದ್ದರು. ತಾನು ಕಲಿತ ವಿದ್ಯೆಯನ್ನು ತನ್ನ ಮಡದಿಗೆ ಧಾರೆಯೆರೆದರು. ಯಾರಾದರೂ ಸತ್ತರೆ, ತಿಥಿ ಆದರೆ, ನಾಮಕರಣ ಆದರೆ, ಗುಡ್ರು ಬಿಡಿಸಿದರೆ ಕಥೆಮಾಡೋಕ್ಕೆ ಮಾದಪ್ಪನನ್ನೇ ಕರೆಯುತ್ತಿದ್ದರು. ಆಗ ಅವರ ಜೊತೆಯಲ್ಲಿ ರಾಜಮ್ಮನೂ ಕೂಡ ಹೋಗುತ್ತಿದ್ದರು. ಮಾದಪ್ಪ ತಂಬೂರಿ, ಗಗ್ಗರ, ದಂಬಡಿ ನುಡಿಸೋದ್ರಲ್ಲಿ ಎತ್ತಿದ ಕೈ ಕಂಸಾಳೆಯನ್ನು ಅಷ್ಟೇ ತುಂಬಾ ಚೆನ್ನಾಗಿ ನುಡಿಸುವವರು. ಮಾದಪ್ಪ ಸಾಯುವವರೆಗೂ ನಂಬಿದುದು ಅವರು ಕಲಿತಿದ್ದ ಕಲೆಯನ್ನು ಊರೂರ್ ಮೇಲೆ ಹೋಗಿ ಕಥೆ ಮಾಡಿಕೊಂಡು ಹಾಡೇಳಿಕೊಂಡು ಜನಗಳು ಕೊಡುತ್ತಿದ್ದ ಅಷ್ಟೋ ಇಷ್ಟೋ ಕಾಣಿಕೆಯಿಂದಲೇ ಜೀವನ ಮಾಡುತ್ತಿದ್ದರು. ಇದ್ದಕ್ಕಿದ್ದ ಹಾಗೆ ಒಂದು ದಿನ ಮಾದಪ್ಪರಿಗೆ ಲಕ್ವ ಹೊಡೆಯಿತು ಇದನ್ನು ನೋಡಿದ ರಾಜಮ್ಮನಿಗೆ ತಲೆ ಮೇಲೆ ಚಪ್ಪಡಿ ಕಲ್ಲ್ ಎಳದಂಗಾಯ್ತಂತೆ. ಹೀಗೆ ಮೂರನೆಯ ಲಕ್ವ ಹೊಡೆದ ಮೇಲೆ ಗಂಡ ಸತ್ತರು. ಇದನ್ನು ಅರಗಿಸಿಕೊಳ್ಳಲು ಸಾಧ್ಯವಾಗದ ರಾಜಮ್ಮನಿಗೆ ಬಾಳು ಒಂಟಿ ಎತ್ತಿನ ಪಾಡಾಯ್ತು. ಗಂಡ ಸತ್ತ ಮೇಲೂ

ನೋಡುವುದಕ್ಕೆ ಯಾರೂ ಇಲ್ಲ, ಹೋಗಲಿ ತಂದೆ ತಾಯಿನೂ ನೋಡನಿಲ್ಲ ಇಲ್ಲಾ ಮೈದನೂ ಸಹ ನೋಡನಿಲ್ಲ. ಆಗ ಜೀವನ ಸಾಗಿಸುವುದಕ್ಕೆ ಭಿಕ್ಷೆ ಬಿಟ್ಟರೆ ಗತಿ ಇಲ್ಲ. ಆಗ ರಾಜಮ್ಮ ಧೈರ್ಯ ಮಾಡಿ ಒಬ್ಬಳೇ ಭಿಕ್ಷೆಗೆ ತಂಬೂರಿ ಹಿಡ್ಕೊಂಡು, ಜೋಳ್ಗೆ ಹೆಗಲಿಗೆ ಕಟ್ಕೊಂಡು ಇದ್ದ ಒಬ್ಬ ಮಗನನ್ನು ಕರ್ಕೊಂಡು ಭಿಕ್ಷೆಗೆ ಹೋಗುತ್ತಿದ್ದಳು.

ದೊಡ್ಡಿಂದುವಾಡಿಯಲ್ಲಿ ಒಂದು ಲಿಂಗಾನಂದರ ಮಠ ಇದೆ. ಈ ಮಠಕ್ಕೆ ಸತ್ತಿಗಾಲದಿಂದ ಕಾಳಶೆಟ್ಟಿ ಮತ್ತು ಚೆನ್ನಶೆಟ್ಟಿ ಇವರಿಬ್ಬರು ತತ್ತ್ವಪದಗಾರರು. ಇವರ ಜೊತೆ ಉಪ್ಪಾರಶೆಟ್ಟರ ಜಾತಿಗೆ ಸೇರಿದ ಚೌಡಪ್ಪ ಎಂಬುವರು ಬರುವರು. ರಾಜಮ್ಮ ಮನೆಯಲ್ಲಿ ಗಂಡ ಇಲ್ಲದ ನೋವನ್ನು ಕಳೆಯಲು ಮಠಕ್ಕೆ ಹೋಗಿ ತತ್ತ್ವಪದಗಳನ್ನು ಕೇಳುತ್ತಿದ್ದಳು. ಹೀಗೆ ಇಬ್ಬರಿಗೂ ಪರಿಚಯ ಬೆಳೆದು ಮದುವೆಯ ಹಂತಕ್ಕೆ ಬೆಳೆದು ಇಬ್ಬರಿಗೂ ಮದುವೆಯೂ ಆಯ್ತು. ಇವರಿಬ್ಬರಿಗೆ ಹುಟ್ಟಿದ ಮಗಳೇ ರಾಣಿ.

ರಾಜಮ್ಮನ ಬಾಳಿನ ಮೊದಲನೆಯ ಗಂಡ ಕಲಿಸಿ ಕೊಟ್ಟ ಕಥೆಗಳನ್ನೆಲ್ಲಾ ತನ್ನ ಎರಡನೆಯ ಗಂಡನಿಗೆ ಹೇಳಿಕೊಟ್ಟು ಆತನು ಕಥೆ ಹೇಳುವುದರಲ್ಲಿ ಪಾರಾಂಗಿತನಾಗಿ ಮಾಡಿದಳು. ಈಗ ಅವರು ತುಂಬಾ ಸ್ವಾರಸ್ಯವಾಗಿ ಕಥೆ ಮಾಡುತ್ತಾರೆ. ಈಗ ಜೊತೆಯಲ್ಲಿಯೇ ಕಥೆ ಮಾಡುತ್ತಾ ಇದ್ದಾರೆ. ಇಬ್ಬರು ಕಥೆ ಮಾಡುವುದಕ್ಕೆ ಹೋಗುತ್ತಾರೆ.

"ಕಲೆಯನ್ನು ನಂಬಿ ಕೆಟ್ಟವರಿಲ್ಲ ಕಲೆ ಸಾಯೋವರೆಗೆ ಅನ್ನ ನೀಡುತ್ತದೆ" ಎಂದು ಮಾದಪ್ಪನವರು ಆಗಾಗ್ಗ ಹೇಳುತ್ತಿರುವ ನುಡಿ ಈಗ ನಿಜ ಅನ್ನಿಸಿದೆ ಎನ್ನುತ್ತಾರೆ. ಜೀವನ ಎಂದರೆ ಏನು ಎಂಬುದು ಅರಿವಾದದ್ದೆ ಈ ಊರುಗಳನ್ನು ತಿರುಗಿ ಭಿಕ್ಷೆ ಮಾಡಿದುದರಿಂದಲೇ. ಯಾವುದೇ ಊರಿಗೆ ಹೋದರೂ ಅನ್ನಕ್ಕೆ ಮಾತ್ರ ಮೋಸ ಇಲ್ಲ. ಗಂಡ ಮಾದಪ್ಪ ಹೇಳುವ ಮಾತು ಮತ್ತೆ ಮತ್ತೆ ನೆನಪಿಗೆ ಬರುತ್ತದೆ ಅದು ಏನೆಂದರೆ "ಮನುಷ್ಯನಿಗೆ ತೆಂಗಿನ ಮರ ಹೇಳ್ತದಂತೆ. ನನ್ನ ನೀನು ಬರಿ ಎರಡು ವರ್ಷ ಸಾಕು, ನಾನು ನಿನ್ನ, ನಿನ್ನ ಮಕ್ಕಳನ್ನ ಸಾಯೋವರೆಗೆ ಸಾಕುತ್ತೀನಿ ಅಂತ. ಹಾಗೆ ಈ ಕಲೆಯನ್ನು ನಂಬಿದವರಿಗೆ ಮಾತ್ರ ಸಾಯೋವರೆಗೆ ಅನ್ನ ಕೊಡುತ್ತದೆ.

ರಾಜಮ್ಮನವರು ಭಾಗವಹಿಸಿದ ಮೊದಲ ಸಮಾರಂಭ: ಮೈಸೂರು ಮಹಾರಾಣಿ ಕಾಲೇಜಿನಲ್ಲಿ ೧೯೭೪ ರಲ್ಲಿ "ಜಿಲ್ಲಾ ಜನಪದ ಕಲಾ ಮಹೋತ್ಸವ" ದಲ್ಲಿ ತನ್ನ ಹೆಸರಿನ ಸರದಿ ಬಂದಾಗ ಮನದಲ್ಲಿ ಮಾದೇಶ್ವರನ ನೆನಕೊಂಡು ಧೈರ್ಯತಂದುಕೊಂಡು ಹಾಡು ಹಾಡುವುದಕ್ಕೆ ಶುರುಮಾಡಿದರು.

ಮುದ್ದು ಮುದ್ದಾದಗಿರಿಗೆ
ಮುದ್ದು ಮಾದಪ್ಪನಗಿರಿಗೆ
ಎದ್ದು ಬಂದಾರೆ ನೋಡಿರೋ
ಪರುಸೆ ಬಂದಾರೆ ನೋಡಿರೋ

ಈ ಹಾಡಿನಿಂದ ಜನರ ಚಪ್ಪಾಳೆ ಗಿಟ್ಟಿಸಿಕೊಂಡು ಆದ ಮೇಲೆ ಇನ್ನೂ ಚೆನ್ನಾಗಿ

ಹಾಡುವುದಕ್ಕೆ ಹುರುಪು ತುಂಬಿತು ಆ ಕಾರ್ಯಕ್ರಮ. ನನ್ನ ಜೀವನದಲ್ಲಿ ಯಾವಾಗಲೂ ಮರೆಯದ ಘಟನೆ ಹಚ್ಚ ಹಸಿರಾಗಿ ಉಳಿದಿದೆ ಎನ್ನುತ್ತಾರೆ.

ಪ್ರತಿಯೊಬ್ಬ ಕಲಾವಿದರ ನಿಜ ಬದುಕಿನ ಪ್ರಾಪಂಚಿಕ ಬವಣೆ, ಇದು ನಿಜ ಮನುಷ್ಯನಾದವನ ಅಂತಃಕರಣವನ್ನು ಕಲಕುವ ಜಾನಪದ ಕಲಾವಿದೆಯರ ಬಾಳಿನ ವ್ಯೆಥೆ. ತನ್ನ ಉಧ್ವಸ್ಥ ಸ್ಥಿತಿಯಲ್ಲೂ ಕೂಡ ತಾನು ನಂಬಿದ ಕಲೆಯನ್ನು ಉಸಿರಾಗಿ ಅದನ್ನೇ ಬದುಕ್ಕಾಗಿ ಸ್ವೀಕರಿಸಿದ ಜಂಗಮ ಸ್ವರೂಪಿ ರಾಜಮ್ಮ.

ಶ್ರೀ. ಮೈಸೂರು ಗುರುರಾಜ್ – (೪೭ ವರ್ಷ ವಯಸ್ಸು)

ತಂದೆಯವರು ಮಳವಳ್ಳಿ ದಿವಂಗತ ಗುರುಬಸವಯ್ಯ ತಾಯಿ ಚಾಮರಾಜನಗರ ತಾಲ್ಲೂಕಿನ ರಾಮಸಮುದ್ರದ ಮನೆಯಮ್ಮ ಅವರು. ಈ ದಂಪತಿಗಳಿಗೆ ಒಟ್ಟು ಒಂಭತ್ತು ಮಕ್ಕಳು ಇವರಲ್ಲಿ ಗುರುರಾಜ್ ಅವರು ಆರನೆಯವರು. ಇವರು ಚಿಕ್ಕವರಾಗಿದ್ದಾಗ ತಂದೆಯವರು ಹಾಡುತ್ತಿದ್ದ ಕಾವ್ಯವನ್ನು ಕಿವಿಗುಟ್ಟು ಕೇಳುತ್ತಿದ್ದರು ಅಷ್ಟೇ. ತಂದೆಯವರ ಜೊತೆಯಲ್ಲಿ ಹಿಮ್ಮೇಳಕ್ಕೂ ಹೋಗುತ್ತಿರಲಿಲ್ಲ. ಮನೆಯಲ್ಲಿ ಕುಳಿತು ತನ್ನ ಪಾಡಿಗೆ ತಾನೇ ಸೊಲ್ಲು ಹಾಕಿಕೊಂಡು ಹಾಡುತ್ತಿದ್ದರು. ಚಿಕ್ಕವನಿಂದ ದೊಡ್ಡವನು ಆದಾಗ ತಂದೆಯವರ ಜೊತೆಯಲ್ಲಿ ಹಾಡುತ್ತಿದ್ದರು.

ಒಂದು ದಿನ ಚಿಕ್ಕ ಹುಡುಗ ಅಂದರೆ ಹದಿಮೂರು ವರ್ಷ ವಯಸ್ಸು ಇರಬಹುದು ಸಹಪಾಟಿಗಳ ಜೊತೆ ಆಟ ಆಡುತ್ತಿದ್ದರು. ಆ ಸಮಯದಲ್ಲಿ ಜೀಶಂಪ ಅವರು ಆಕಾಶವಾಣಿಯಲ್ಲಿ ಹಾಡಿರುವುದನ್ನು ಕೇಳಿ ಮನೆಗೆ ಆಗಮಿಸಿದರು ಆಗ ಇವರಿಂದ ಸಾರಂಗದಾರ ಗಣಪತಿರಾಜನ ಕಥೆಯನ್ನು ಹಾಡಿಸಿ ಕೇಳಿ ತುಂಬಾ ಸಂತೋಷಪಟ್ಟರು. ದುಡ್ಡು ಕೊಟ್ಟು ಸಹಾಯ ಮಾಡಿದರು. ಅವರು ಹೀಗೆ ಪ್ರತಿಭೆ ಇರುವವರನ್ನು ಹುಡುಕುತ್ತಿದ್ದರು. ಇವರ ತಂದೆಯವರ ಹತ್ತಿರ ನಾಳೆ ಇವನ್ನೊಬ್ಬ ದೊಡ್ಡ ಕಲಾವಿದನಾಗುತ್ತಾನೆ ಎಂದು ಭವಿಷ್ಯ ನುಡಿದರು. ಅದಾದ ಸ್ವಲ್ಪ ದಿನದಲ್ಲಿಯೇ ಇವರ ತಂದೆಯವರು ದಿವಂಗತರಾದರು.

ಮಂಟೇಸ್ವಾಮಿ ಎಂದು ಪರಂಜ್ಯೋತಿಗೆ ನಾಮಕರಣ ಆದ ಸ್ಥಳ ಆದಿಹೊನ್ನಾಯ್ಕನ ಹಳ್ಳಿಯಲ್ಲಿ ಎಂದು ಇವರು ಹೇಳುತ್ತಾರೆ. ಮುದ್ದಯ್ಯ ಮತ್ತು ಮುದ್ದಮ್ಮ ಸಿದ್ದಪ್ಪಾಜಿಯವರ ತಂದೆ ತಾಯಿಗಳು ಎಂದು ಹೇಳುತ್ತಾರೆ. ಮಳವಳ್ಳಿ ಮಾದೇವ ಸ್ವಾಮಿಯವರ ಕಥೆಯಲ್ಲಿ ಬರುವಂತೆ ಮುದ್ದೋಜಿ ಮತ್ತು ಮುದ್ದಮ್ಮ ತಪ್ಪು ಎಂದು ಹೇಳಿ ಓಜಿ ಎಂದರೆ ಆಚಾರರು ಎಂದು ಅರ್ಥ ಹೇಳುತ್ತಾರೆ.

ನಿಡುಘಟ್ಟದ ಕಥೆ : ಹುಟ್ಟಿದ ಸ್ಥಳ ಮತ್ತು ವಾಸಮಾಡಿದ ಸ್ಥಳದಲ್ಲಿಯೇ ದೇವಸ್ಥಾನ ಕಟ್ಟಿದ್ದಾರೆ. ಅಮೇರಿಕದಲ್ಲಿ ವಾಸವಾಗಿರುವ ಶ್ರೀ ಸಿದ್ದೇಗೌಡರು ಈ ದೇವಸ್ಥಾನವನ್ನು ಜೀರ್ಣೋದ್ದಾರ ಮಾಡಿಸಿದ್ದಾರೆ.

ಸಾಹಿತ್ಯ ಸಮಾಜವನ್ನು ತಿದ್ದುತ್ತದೆ. ಆದ್ದರಿಂದಲೇ "ಧರ್ಮಗುರು ಮಂಟೇಲಿಂಗನ ಭಿಕ್ಷಾ" ಎಂದರು ಭಿಕ್ಷೆ ನಡೆಯುತ್ತಿದೆ. ಇಷ್ಟ ಇಲ್ಲದವನು ಕೂಡ ಸ್ವಲ್ಪ ಭಿಕ್ಷೆ ಕೊಟ್ಟು ಕಳುಹಿಸುತ್ತಾರೆ. ಈ ಸತ್ಯದ ಮೇಲೆ ಇವರ ಜೀವನ ಸಾಗುತ್ತಿದೆ.

ಕಪ್ಪುಧೂಳ್ತ : ತಂದದ್ದು ರಾಚಪ್ಪಾಜಿ, ಎಲ್ಲಿಂದ ಎಂದರೆ ವಿಜಯನಗರದ ಗಾರುಡಿಗರ ರಣಮೋಡಿ ಗೆದ್ದು "ಘನಗಾರುಡಿಗರ ಗಂಡ" ಎಂದು ಕರೆಸಿಕೊಂಡಿದ್ದಾರೆ. ಅಂದರೆ ವಿಜಯನಗರದಿಂದ ಕಪ್ಪು ದೂಳ್ತ ತಂದಿದುದರಿಂದಲೇ ಘನಗಾರುಡಿಗರ ಗಂಡ ಎಂಬ ಬಿರುದು ಬಂದಿರಬಹುದು. ಇದನ್ನು ಗಮನಿಸಿದಾಗ ವಿಜಯನಗರದಿಂದ ಕಪ್ಪು ದೂಳ್ತ ತಂದಿರಬಹುದು ಎಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಗಾರುಡಿಗರ ಮನೆಯ ದೇವತಿ "ಮಲೆಯಾಳದೇವತೆ" ಇವಳು ಮಂತ್ರವಾದಿಗಳ ದೇವತಿಯಾಗಿದ್ದಳು.

ತಂದೆಯವರು ಅಸ್ತಂಗತರಾಗುವುದಕ್ಕೂ ಬಡತನದ ಬೇಗೆ ಕಿತ್ತು ತಿನ್ನುವುದಕ್ಕೂ ಒಂದೇ ಆಯ್ತು. ಆಗ ವಿಧಿ ಇಲ್ಲದೆ ತಂಬೂರಿ ಹೆಗಲಿಗೆ ಹಾಕಿಕೊಂಡು ಮನೆ ಮನೆ ಭಿಕ್ಷೆ ಮಾಡುವುದಕ್ಕೆ ಹೋಗುತ್ತಿದ್ದರು. ಅಷ್ಟೋ ಇಷ್ಟೋ ಬಿಡಿಕಾಸಿನಿಂದ ಮನೆಯನ್ನು ಕಷ್ಟದಿಂದ ನಿಭಾಯಿಸಿದರು.

ಹಾಡಿನ ಮೋಡಿಗೆ ಪ್ರೇಕ್ಷಕರನ್ನು ತಮ್ಮ ಬಳಿಗೆ ಹಾಕಿಕೊಳ್ಳುತ್ತಿದ್ದರು. ಹೀಗೆ ಹಂತ ಹಂತವಾಗಿ ಕಥೆ ಕಲಿತು ಈಗ ತಮ್ಮದೇ ಆದ ತಂಡವನ್ನು ಕಟ್ಟಿಕೊಂಡು ಕಥೆ ಮಾಡುತ್ತಿದ್ದಾರೆ. ತಮ್ಮ ತಂದೆಯವರ ವೃತ್ತಿಯನ್ನೇ ತಾನು ಕೂಡ ಮುಂದುವರಿಸಿಕೊಂಡು ಬರುತ್ತಿದ್ದಾರೆ. ಇವರ ಹಿಮ್ಮೇಳದವರು ಶ್ರೀ ಸಿದ್ದರಾಜು, ಶ್ರೀ ಜಿ. ರಾಜು, ಶ್ರೀ ಸಿ. ಬಸವರಾಜು, ಶ್ರೀ ಎಸ್. ಜಗದೀಶ್, ಶ್ರೀ ಮಾದಪ್ಪ, ಬದನಾಳು ಸಿದ್ದಪ್ಪ. ಶ್ರೀ ಎಂ. ಪ್ರದೀಪ್ ಕುಮಾರ್ ಮುಂತಾದವರು.

ಇವರು ಮಂಟೇಸ್ವಾಮಿ ಪರಂಪರೆಯ ನೀಲಗಾರರ ಸಂಘ ೨೦೦೦ ಇಸ್ವಿಯಲ್ಲಿ ಹುಟ್ಟು ಹಾಕಿದ್ದಾರೆ. ಈ ಸಂಘದ ವತಿಯಿಂದ ಕಥೆ ಕಲಿಯುವಂತ ಯುವಕರಿಗೆ ಹೇಳಿಕೊಡುತ್ತಿದ್ದಾರೆ. ಈಗ ಸುಮಾರ ೫೦ ಮಕ್ಕಳು ಕಥೆ ಕಲಿಯುತ್ತಿದ್ದಾರೆ. ಇಲ್ಲಿ ತಮಗೆ ಗೊತ್ತಿರುವ ಮಂಟೇಸ್ವಾಮಿ ಕಾವ್ಯ, ಮೈದಾಳ ರಾಮಯ್ಯ ಕಥೆ, ಚೆನ್ನಿಗರಾಮನ ಕಥೆ, ಗಣಪತಿ ರಾಜನ ಕಥೆ, ಚಾಮುಂಡೇಶ್ವರಿ ಕಥೆ, ನಂಜುಂಡೇಶ್ವನ ಕಥೆ, ಬಿಳಿಗಿರಂಗಸ್ವಾಮಿಯ ಕಥೆ, ಮೇಲುಕೋಟೆ ಚೆಲುವನಾರಾಯಣ ಗಂಗೆ ಗೌರಿ ಕಥೆ, ನೀಲವೇಣಿ ಕಥೆ, ಕಾಡುಸಿದ್ದಮ್ಮ, ಅರ್ಜುನ ಜೋಗಿ ಕಥೆ, ಸಾರಂಗದಾರನ ಕಥೆ, ಪಿರಿಯಾಪಟ್ಟಣದ ಕಾಳಗ, ನಿಂಗರಾಜಮ್ಮನ ಕಥೆ, ಮಾದೇಶ್ವನ ಕಥೆಯಲ್ಲಿ ಹುಟ್ಟಿ ಬೆಳೆದ ಸಾಲು, ಜುಂಜಪ್ಪನ ಸಾಲು, ಬೇವಿನಹಟ್ಟಿ ಕಾಳಮ್ಮನ ಸಾಲು, ಶಂಕಮ್ಮನ ಸಾಲು ಇತ್ಯಾದಿ. ಮುಡುಕುತೊರೆ ಮಲ್ಲಿಕಾರ್ಜುನನ ಕಥೆ, ಶನೀಶ್ವರನ ಕಥೆ, ಐಯ್ಯಪ್ಪನ ಕಥೆ, ಭಕ್ತ ಪುರೂರವನ ಕಥೆ ಬಾಲನಾಗಮ್ಮನ ಕಥೆ ಇತ್ಯಾದಿ ಕಥೆಗಳನ್ನು ಹೇಳಿಕೊಡುತ್ತಿದ್ದಾರೆ.

ಈ ಮೇಲಿನ ಎಲ್ಲಾ ಕಥೆಗಳನ್ನು ನೀಲಾಜಾಲವಾಗಿ ಹಾಡುವ ಅಪ್ರತಿಮ ಕಲಾವಿದ ಶ್ರೀ ಗುರುರಾಜ್‌ರವರು. ಅವರು ಹೇಳುವ ಹಾಗೆ ನಮ್ಮ ಬಡತನವೇ ನನ್ನನ್ನು ಕಲಾವಿದರನ್ನಾಗಿ ಮಾಡುವುದಕ್ಕೆ ಕಾರಣ ಆಯ್ತು ಎನ್ನುತ್ತಾರೆ. ಕಲಿತ ಕಥೆಯನ್ನು ಜನರ ಮುನ್ನ ಪ್ರಸ್ತುತಪಡಿಸಿ ಅವರಿಂದ ಶಭಾಷ್‌ಗಿರಿ ಬಂದಾಗ ಆಗುವಂತ ಸಂತೋಷ ಅಷ್ಟಿಷ್ಟಲ್ಲ. ಇದೇ ನನ್ನ ಜೀವನದಲ್ಲಿ ಮಹತ್ಸಾಧನೆ ಎಂದು ತಿಳಿದು ಕೊಂಡು ಕಲೆಯನ್ನು ಗೌರವಿಸಿ ಬೆಳೆಸುತ್ತಿದ್ದಾರೆ. ಆರಾಧಿಸುತ್ತಿದ್ದಾರೆ. ಇದರಿಂದ ಅವರು ೧೦೦ ಕ್ಕೂ ಹೆಚ್ಚು ಧ್ವನಿ ಸುರುಳಿಯನ್ನು ಮತ್ತು ಸಿ.ಡಿ.ಗಳಲ್ಲಿ ಅಭಿನಯಿಸಿ ಹೊರತಂದಿದ್ದಾರೆ.

ತಮಗೆ ಇಪ್ಪತ್ತಾರು ವರ್ಷದಿಂದಲೇ ಮೈಸೂರು ಆಕಾಶವಾಣಿಯಲ್ಲಿ ಕಥೆ ಮಾಡಿಕೊಂಡಿರುತ್ತಾರೆ. ೨೦೦೦ ನೇ ಇಸ್ವಿಯಲ್ಲಿ "ಬಿ" ಹೈ ಶ್ರೇಣಿಯಲ್ಲಿ ಉತ್ತೀರ್ಣಗೊಂಡಿದ್ದಾರೆ. ೨೦೦೩ ರಲ್ಲಿ "ಎ" ಗ್ರೇಡ್‌ನ್ನು ಪಡೆದುಕೊಂಡಿದ್ದಾರೆ. ದೂರದರ್ಶನದಲ್ಲೂ ತಮ್ಮ ಪ್ರದರ್ಶನವನ್ನು ನೀಡಿದ್ದಾರೆ. ಆಕಾಶವಾಣಿ ಜಾನಪದ ಕಾರ್ಯಕ್ರಮಗಳಿಗೆ ಮುಖ್ಯ ತೀರ್ಪುಗಾರರಾಗಿ ಆಗಾಗ ಹೋಗುತ್ತಿರುತ್ತಾರೆ.

ಕಲಾವಿದನಾಗುವುದಕ್ಕೆ ಮುಖ್ಯ ಕಾರಣ ತಾಯಿಯವರು. ಇವರು ಚಿಕ್ಕವನಿದ್ದಾಗ ನಿಮ್ಮ ತಂದೆಯವರು ಎಷ್ಟು ಉತ್ತಮವಾಗಿ ಕಥೆ ಮಾಡಿ ಜನಮನ್ನಣೆಯನ್ನು ಪಡೆದುಕೊಂಡಿದ್ದರು ಹಾಗೆಯೇ ನೀನೂ ಕೂಡ ಒಬ್ಬ ಉತ್ತಮ ಕಲಾವಿದನೆಂಬ ಹೆಗ್ಗಳಿಕೆಗೆ ಪಾತ್ರನಾಗಬೇಕೆಂದು ಆಗಾಗ ಹೇಳುತ್ತಿದ್ದರಂತೆ. ಇದನ್ನು ಮನದಲ್ಲಿಟ್ಟುಕೊಂಡು ಕಥೆಯನ್ನು ಉದಾಸೀನ ಮಾಡದೇ ಕಲಿತು ಈಗ ಒಂದು ನೆಲೆಯಲ್ಲಿ ಗುರುತಿಸಿಕೊಂಡಿದ್ದಾರೆ. ಇದಕ್ಕೆಲ್ಲ ಪ್ರೋತ್ಸಾಹ ಮತ್ತು ಪ್ರೇರಣೆ ತಾಯಿಯವರೇ ಎಂದು ಮುಕ್ತಕಂಠದಿಂದ ಹೇಳುತ್ತಾರೆ. ಹೀಗೆ ತಾಯಿಯ ಆಸೆಗಳನ್ನು ನನ್ನ ಹಾಡಿನ ಮುಖಾಂತರ ಫಲ ಕಂಡರು ಎನ್ನಬಹುದು ಎನ್ನುತ್ತಾರೆ. ಆದ್ದರಿಂದ ಇವರ ಕಲಾಸೇವೆಗೆ ತಾಯಿಯವರ ಸ್ಫೂರ್ತಿ ಮತ್ತು ಅಣ್ಣನವರಾದ ಮಂಟೇಲಿಂಗಯ್ಯನವರ ಸಹಾಯ ಮರೆಯುವುದಕ್ಕೆ ಸಾಧ್ಯವಿಲ್ಲ.

ಕಾವ್ಯದ ಮೂಲ ಧಾಟಿಯ ವಾದ್ಯ ಪರಿಕರಗಳು ಯಾವುವೆಂದರೆ – ತಂಬೂರಿ, ಡಕ್ಕಿ , ತಾಳ, ಗಗ್ರ , ಕಂಚಿ, ಘಟಂ ಈ ಪರಿಕರಗಳನ್ನು ನೀಲಗಾರ ಕಲಾವಿದರು ಮಂಟೇಸ್ವಾಮಿ ಕಾವ್ಯವನ್ನು ಪ್ರಸ್ತುತಪಡಿಸುವಾಗ ಬಳಸುತ್ತಾರೆ. ಈಗ ಕಾವ್ಯ ಮಾಡುವಾಗ ಆಧುನಿಕ ಮಾದರಿಯ ಒಂದೆರಡು ಪರಿಕರಗಳನ್ನು ಬಳಸಿ ಹಾಡುತ್ತಾರೆ.

ಶ್ರೀಯುತರು ಒಂದು ತಿಂಗಳಿಗೆ ಕಡಿಮೆ ಎಂದರೆ ಇಪ್ಪತ್ತು ಕಥೆಗಳನ್ನು ಪ್ರದರ್ಶಿಸುತ್ತಾರೆ. ಇದು ಇಲ್ಲದೆ ಕರ್ನಾಟಕದಾದ್ಯಂತ ಮುಖ್ಯವಾಗಿ ಧಾರವಾಡ, ಗೋಕಾಕ್, ಬೆಂಗಳೂರು, ಕೇರಳದಗಡಿ ಭಾಗಗಳಲ್ಲಿ, ತಮಿಳುನಾಡಿನ ಗಡಿ ಭಾಗಗಳಲ್ಲಿ ಕಥಾ ಪ್ರದರ್ಶನವನ್ನು ನೀಡಿದ್ದಾರೆ. ಇವರು ನೀಡುವ ಕಥಾ ಪ್ರದರ್ಶನ ಸನ್ನಿವೇಶಕ್ಕೆ ತಕ್ಕಂತೆ ಹಾವ ಭಾವಗಳನ್ನು ಸೃಷ್ಟಿ ಮಾಡಿಕೊಳ್ಳುತ್ತಾರೆ. ಆಯಾ ಪಾತ್ರದಲ್ಲಿ ಇವರು ತಲ್ಲೀನರಾಗಿ

ಬಿಡುತ್ತಾರೆ ಅಂದರೆ ರಾಜನ ಪಾತ್ರ ಬಂದರೆ ರಾಜನ ಹಾಗೆ ತಮ್ಮ ಭಾವವನ್ನು ವರ್ತಿಸುತ್ತಾರೆ. ಬಡವನದೋ ಭಿಕ್ಷುಕನದೋ ಪಾತ್ರ ಬಂದರೆ ಆ ಪಾತ್ರದಂತೆಯೇ ಸೊಗಸಾಗಿ ನಟಿಸುತ್ತಾರೆ. ಇದನ್ನು ಕಂಡು ಪ್ರೇಕ್ಷಕ ಸಮೂಹ ಆನಂದ ಸಾಗರದಲ್ಲಿ ತೇಲುತ್ತಾರೆ.

ಜೊತೆಗೆ ಗೌರವಿಸುತ್ತಾರೆ. ಇದರಿಂದ ಪ್ರಾಪಂಚಿಕ ಸುಖಕ್ಕಿಂತ ಈ ಕಲಾ ರಂಗದಲ್ಲಿ ಸಿಗುವ ಆನಂದ ಅಪಾರವಾದುದು. ಈ ಆನಂದಕೋಸ್ಕರವಾಗಿಯೇ ನೀಲಗಾರ ಕಲಾವಿದರು ಈ ಹಾಡುಗಾರಿಕೆಯ ವೃತ್ತಿಯನ್ನು ಮೈಗೂಡಿಸಿಕೊಂಡು ಬರುತ್ತಿದ್ದಾರೆ. ಈ ಕಲೆ ಒಂದಿದ್ದರೆ ಸಾಕು ಬೇರೆ ಯಾವುದು ಬೇಡ ಎನ್ನುತ್ತಾರೆ. ಸಾಮಾನ್ಯವಾಗಿ ಈ ಕಲೆಯನ್ನು ಹೆಚ್ಚಿಗೆ ಮೈಗೂಡಿಸಿ ಕೊಂಡವರು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ಅವರಿಗೆ ಅಂಟುವ ಕಲೆ ಬೇರೆ ಯಾರಿಗೂ ಅಂಟುವುದಿಲ್ಲ ಎಂದು ಹೇಳುತ್ತಾರೆ. ಯಾರತ್ತಿರ ಕಲೆ ಇರುತ್ತದೋ ಅವರಿಗೆ ರೋಗ ರುಜಿನಗಳು ಕೂಡ ಬರುವುದಿಲ್ಲ ಎಂದು ಆ ಜನಾಂಗದವರೇ ಹೇಳಿದ ಮಾತಿದು.

ಇವರು ಹಳ್ಳಿಯ ಮೇಲೆ ಕಥೆ ಮಾಡುವುದಕ್ಕೆ ಮೊದಲೇ ಹೇಳುತ್ತಾರೆ ನನ್ನನ್ನು ನೀವು ಕರೆಸಿರುವುದು ಕಥೆ ಕೇಳಿ ಆನಂದಿಸುವುದಕ್ಕೆ ಆದ್ದರಿಂದ ನಿಮಗೆ ಕಥೆ ಯಾವ ಭಾಗದಲ್ಲಿ ಅರ್ಥ ಆಗುವುದಿಲ್ಲ ಅಥವಾ ಎಲ್ಲಿ ಅನುಮಾನ ಬಂತು ಆ ತಕ್ಷಣ ಕೇಳಿ ಎಂದು ಹೇಳಿಯೇ ಕಥೆ ಶುರುಮಾಡುವುದು. ಇಡೀ ರಾತ್ರಿ ಪ್ರೇಕ್ಷಕರು ಕಥೆಯನ್ನು ಆಲಿಸುತ್ತಿರುತ್ತಾರೆ ಮತ್ತು ಅನುಮಾನಗಳಿದ್ದಲ್ಲಿ ಪ್ರಶ್ನೆಗಳನ್ನು ಕೇಳುತ್ತಾರೆ ಅವರಿಗೆ ಅರ್ಥಆಗುವ ರೀತಿಯಲ್ಲಿ ಕಥೆಯ ಹಂದರವನ್ನು ವಿಸ್ತರಿಸಿ ಮುಂದೆ ಹೋಗುತ್ತಾರೆ.

ಉದಾ : ಕಬ್ಬಣ ಭಿಕ್ಷೆಗೆ ಹಲಗೂರಿಗೆ ಸಿದ್ದಪ್ಪಾಜಿಯವರು ಹೋಗಲ್ಲ ಎಂದರು. ಆದರೆ ಮಂಟೇಸ್ವಾಮಿಯವರು ಹೋಗು ಎನ್ನುತ್ತಾರೆ. ಇಲ್ಲಿನ ಮುಖ್ಯ ಪ್ರಶ್ನೆ ಏನೆಂದರೆ ಮಂಟೇಸ್ವಾಮಿ ಪವಾಡ ಪುರುಷನಾದ ಮೇಲೆ ಏಕೆ ತನಗೆ ಬೇಕಾದ ಪಾತಾಲಭಾವಿಯನ್ನು ತೋಡಿಕೊಳ್ಳಬಾರದು ಎಂದು ಕೇಳಿದರು?

ಗುರುರಾಜ್‌ರವರ ಉತ್ತರ : ಮಂಟೇಸ್ವಾಮಿಯವರು ನಾಡಿನ ಜನತೆಯ ಹಿತಕ್ಕಾಗಿ ಕಬ್ಬಿಣ ಕ್ರಾಂತಿಯ ಮೂಲಕ ರೈತರಿಗೆ ಒಳ್ಳೆಯದು ಮಾಡಬೇಕೆಂದು ಹಲಗೂರಿಗೆ ಸಿದ್ದಪ್ಪಾಜಿಯವರನ್ನು ಕಳಿಸುತ್ತಾರೆ ಎಂದು ಹೇಳಿದ್ದಾರೆ.

ಆದಿಕರ್ನಾಟಕಕ್ಕೆ ಸೇರಿದವರಾದ ಇವರು ವೃತ್ತಿಗಾಯಕ ನೀಲಗಾರರು. ಇವರ ಹೆಂಡತಿ ರಾಧಮ್ಮ, ಮಗಳು ಜಿ. ಕಲಾವತಿ ಎಂಟನೆಯ ತರಗತಿ ಓದುತ್ತಿದ್ದಾಳೆ, ಮಗ ಪ್ರಥ್ವಿರಾಜ್ ಐದನೆಯ ತರಗತಿ ಓದುತ್ತಿದ್ದಾನೆ.

ಇವರು ಮೂರನೆಯ ತರಗತಿಯವರೆಗೆ ಓದಿದ್ದಾರೆ ಈಗೀಗ ಸ್ವತಃ ಓದುವುದನ್ನು ಕಲಿತು ಕೊಂಡಿದ್ದಾರೆ. ಸೋಮವಾರ ಶುಕ್ರವಾರ ಭಿಕ್ಷೆಗೆ ಹೋಗುತ್ತಾರೆ. ಇವರ ವಿದ್ಯಾಗುರು ಶ್ರೀ ಮಂಟಯ್ಯರವರು. ನೀಲಗಾರರ ವೇಷಭೂಷಣ ತಲೆಗೆ ಒಂದು ಕೆಂಪು ಪೇಟ,

ಬಿಳಿ ಶರ್ಟ್, ಕಪ್ಪು ಕೋಟು, ಬಿಳಿ ಹಾರೋ ಕಚ್ಚೆ, ಹೆಗಲಲ್ಲಿ ಕಾವಿವಸ್ತ್ರ , ಕೊರಳಲ್ಲಿ ರುದ್ರಾಕ್ಷಿ ನಾಗರ ಎಡೆಯ ತಂಬೂರಿ ಹೊತ್ತಿರುತ್ತಾರೆ.

ಅರ್ಜುನ ಜೋಗಿ ಕಥೆ ಮಾಡುವಾಗ ತ್ರಿಭಾಷೆಯಲ್ಲಿ (ಕನ್ನಡ, ತಮಿಳು, ತೆಲುಗು)ಹಾಡಿ ಜನರನ್ನು ರಂಜಿಸುತ್ತಾರೆ. ಒಟ್ಟಾರೆ ಜನಪದ ಇಲ್ಲದಿದ್ದರೆ ಜೀವನವೇ ಇಲ್ಲ.

ಇವರ ತಂಡದಲ್ಲಿ ಎಂಟು ಜನ ಕಲಾವಿದರು ಇದ್ದಾರೆ. ಅರ್ಜುನ ಎಲ್ಲಾ ಭಾಷೆಯ ಜನರು ಬೀದಿಯಲ್ಲಿ ಬರುತ್ತಿರಬೇಕಾದರೆ ಆಯಾಯ ಭಾಷೆಯಲ್ಲಿಯೇ ಮಾತನಾಡುತ್ತಾರೆ. ಅರ್ಜುನ ಜೋಗಿಯಾಗಿ ೧೨ ವರ್ಷ ನಾಡು ನಾಡು ತಿರುಗಿ ಸಂಚಾರ ಮಾಡುತ್ತಾನೆ.

ಮಂಟೇಸ್ವಾಮಿ ಪರಂಪರೆಯ ಹುಟ್ಟು ನೀಲಗಾರರು ಯಾರ ಎಂಜಲನ್ನು ತಿನ್ನಬಾರದು. ಮನೆಯ ಹಿರಿಮಗನಿಗೆ ನೀಲಗಾರ ದೀಕ್ಷೆಯನ್ನು ಕೊಡುತ್ತಾರೆ. ಮಾದೇಶ್ವರನಿಗೆ ಗುಡ್ಡನ ಬಿಡುವಾಗ ರುದ್ರಾಕ್ಷಿ ಮನಿಯನ್ನು ಅಡ್ಡ ಅಡ್ಡಲಾಗಿ ದಾರಕ್ಕೆ ಪೋಣಿಸಿ ಕಟ್ಟುತ್ತಾರೆ ಆದ್ದರಿಂದಲೇ ರುದ್ರಾಕ್ಷಿ ಗುಂಡು ಗುಂಡಕ್ಕೆ ಕಾಣುವುದರಿಂದ ಮಾದೇಶ್ವರನ ದೀಕ್ಷೆ ಪಡೆದವರನ್ನು ಗುಡ್ಡರು ಎಂದು ಕರೆಯುತ್ತಾರೆ. ಹಾಗೆಯೇ ಮಂಟೇಸ್ವಾಮಿ ನೀಲಗಾರ ದೀಕ್ಷೆಯನ್ನು ಪಡೆಯುವಾಗ ರುದ್ರಾಕ್ಷಿ ಮನಿಯನ್ನು ನೀಲ ನೀಲವಾಗಿ ದಾರಕ್ಕೆ ಪೋಣಿಸಿ ಕಟ್ಟುವುದರಿಂದ ಅವರನ್ನು ನೀಲಗಾರರು ಎಂದು ಕರೆಯುತ್ತಾರೆ ಎಂದು ಪರಂಪರೆಯ ಬಗ್ಗೆ ಮಾಹಿತಿ ನೀಡಿರುತ್ತಾರೆ. ಈ ಎರಡು ಪರಂಪರೆಯು ಹರನ ಮಹಿಮೆಯನ್ನು ಕೊಂಡಾಡುವುದರಿಂದ ಸ್ವಲ್ಪ ಮಟ್ಟಿಗೆ ಏರು ಪೇರು ಮಾಡಿಕೊಂಡಿರುವುದಕ್ಕೆ ಸಾಧ್ಯವಿದೆ.

ಸಿದ್ದರಾಜಸ್ವಾಮಿ (೪೫ ವರ್ಷ ವಯಸ್ಸು)

ಚಾಮರಾಜನಗರ ಜಿಲ್ಲೆ ಕೊಳ್ಳೇಗಾಲ ತಾಲ್ಲೂಕು ಸಿದ್ದಯ್ಯನಪುರದ ನಿವಾಸಿಯಾದ ತಂದೆ ಬಿ. ಮಲ್ಲಯ್ಯ ತಾಯಿ ನಂಜಮ್ಮ ಎಂಬ ಬಡದಂಪತಿಗಳ ಮಗನಾಗಿ ಸಿದ್ದರಾಜಸ್ವಾಮಿ ಎಂಬ ಹೆಸರಿನಿಂದ ಜನಿಸಿದರು. ಆತನಿಗೆ ಸಿದ್ದಮ್ಮ ಎಂಬ ಮಡದಿ ಇಬ್ಬರು ಮಕ್ಕಳು ಈಗಿರುವುದು ಒಬ್ಬಳೆ ಮಗಳು ಜೀವನೋಪಾಯಕ್ಕಾಗಿ ಅಷ್ಟೂ ಇಷ್ಟೂ ಇದ್ದ ಭೂಮಿ ಮಗಳ ಮದುವೆಯಲ್ಲಿ ಕರಗಿ ಹೋಯ್ತು. ಬಲಗೈ ಪಂಗಡಕ್ಕೆ ಸೇರಿದವರಾದ ಇವರಿಗೆ ಕೂಲಿನೇ ಜೀವನ. ಈತ ಹವ್ಯಾಸಿಗಾಯಕ ಸೋಮವಾರ ಮತ್ತು ಶುಕ್ರವಾರದ ಭಿಕ್ಷೆಗೆ ಎಷ್ಟು ಬೇಕೋ ಅಷ್ಟನ್ನು ಮಾತ್ರ ಕಲಿತುಕೊಂಡು ಕುರುಬನ ಕಟ್ಟೆಗೆ ಬಂದು ಭಿಕ್ಷೆಗಾಗಿ ಹಾಡುವುದನ್ನು ರೂಢಿಯಾಗಿದೆ.

ಧರೆಗೆದೊಡ್ಡವರ ಕಥೆಯನ್ನು ಹಾದಿ ಮತ್ತು ಅಂತ್ಯ ಭಾಗ ಹಾಡದೆ ಕಾವ್ಯದ ಮಧ್ಯ ಭಾಗವನ್ನು ಅಂದರೆ ಕೆಂಪಾಚಾರಿಯನ್ನು ಸಿದ್ದಪಾಜಿಯಾಗಿ ಮಾಡುವ ಪ್ರಸಂಗದ ಕಥೆಯನ್ನು ಮಾತ್ರ ಹಾಡುತ್ತಾನೆ. ಇವರಿಗೆ ಕಿತ್ತು ತಿನ್ನುವ ಬಡತನದಿಂದ ಶಾಲೆಯ ಮುಖ ಕಾಣದಾಗಿದೆ. ಧರೆಗೆದೊಡ್ಡವರ ಕಥೆ ಕಲಿತದು ತಮ್ಮ ಮತಿಯ ಮೇಲೆ

ಮಾತ್ರಾ ಎನ್ನುತ್ತಾರೆ. ಒಟ್ಟಿನಲ್ಲಿ ತನಗೆ ಗೊತ್ತಿರುವ ಕಥೆಯನ್ನು ವಿನಮ್ರದಿಂದ ಭಿಕ್ಷೆ ಬೇಡಲು ಬಳಸಿಕೊಳ್ಳುತ್ತಿದ್ದಾರೆ.

ಶ್ರೀ. ಅಂಕಳ್ಳಿ ಸಿದ್ದಯ್ಯ – (೫೨ ವರ್ಷ ವಯಸ್ಸು)

ಹುಟ್ಟು ಅಂಥ ಕಲಾವಿದರಾದ ಶ್ರೀ. ಅಂಕಳ್ಳಿ ಸಿದ್ದಯ್ಯ ಮಂಟೇಸ್ವಾಮಿ ಕಾವ್ಯವನ್ನೇ ಊರೂರು ಮೇಲೆ ಹಾಡಿಕೊಂಡು ಜೀವನ ಸಾಗಿಸುತ್ತಿರುವ ಬಡಕಲಾವಿದ. ಉತ್ತಮ ಕಂಠಸಿರಿ ಹೊಂದಿರುವ ಇವರಿಗೆ ಪುಟ್ಟಸಿದ್ದಮ್ಮ ಎಂಬ ಮಡದಿ. ಮಕ್ಕಳು ಒಟ್ಟು ಮೂರು ಜನ. ಮೂರುಜನ ಮಕ್ಕಳಿಗೂ ಕಣ್ಣುಗಳಿವೆ, ಅವಿದ್ಯಾವಂತರಾಗಿ ಎಲ್ಲರೂ ಕೂಲಿ ಜೀವನವನ್ನೇ ಆಶ್ರಯಿಸಿದ್ದಾರೆ.

ಈ ಕಲಾವಿದರ ಬದುಕು ನಿಜಕ್ಕೂ ತುಂಬ ಶೋಚನೀಯವಾದದ್ದು ವಾಸಕ್ಕೆ ಒಳ್ಳೆಯ ಮನೆ ಬೇಡ ಸಾಧಾರಣವಾಗಿಯೂ ಇಲ್ಲ. ಮೂರು ಜನ ಮಕ್ಕಳನ್ನು ಕಟ್ಟಿಕೊಂಡು ಅಂಥ ಗಂಡ ಮತ್ತು ಹೆಂಡತಿ ಪಡುವ ಪಾಡು ನಮ್ಮ ಕಣ್ಣಿಂದ ನೋಡುವುದಕ್ಕೆ ಆಗುವುದಿಲ್ಲ. ಇಂತಹ ಕಷ್ಟಗಳು ಸಾವಿರ ಇದ್ದರೂ ನಮ್ಮನ್ನು ಸಂತೋಷದಿಂದ ಮನೆಗೆ ಬರಮಾಡಿಕೊಂಡು ಹರಕಲು ಪರಕಲು ಮಂದಿಲಿಗೆ ಹಾಸಿ ಕೂರಿಸಿದಾಗ ನಮಗಾಗುವ ಸಂತೋಷಕ್ಕೆ ಎಣೆ ಇಲ್ಲ. ಭೂಮಿ ಆಕಾಶದಷ್ಟು ವಿಶಾಲವಾದ ಇವರ ಮನಸನ್ನು ಪ್ರತ್ಯಕ್ಷವಾಗಿ ನೋಡಿದವರಿಗೆ ಮನವರಿಕೆ ಆಗುತ್ತದೆ. ಇವರು ಆದಿಜಾಂಬವರು ಅಂದರೆ ಎಡಗೈ ಪಂಗಡಕ್ಕೆ ಸೇರಿದವರಾಗಿರುತ್ತಾರೆ. ಅಂಥ ಕಲಾವಿದರಾದುದ್ದರಿಂದ ಭಿಕ್ಷೆ ಮತ್ತು ಕಥೆ ಮಾಡುವುದು ಇವೆರಡೇ ಜೀವನಕ್ಕೆ ದಾರಿ. ಇದರ ಜೊತೆಗೆ ಹೆಂಡ್ತಿ ಮಾಡಿ ತಂದ ಕೂಲಿ ಕಂಬಳದಿಂದ ಕಷ್ಟದ ಬಂಡಿ ಹೇಗೋ ಉರುಳುತ್ತಿದೆ.ಚಿಕ್ಕ ಮಕ್ಕಳು ಮನೆಯ ಸುತ್ತ ಮಣ್ಣಿನ ಮೈದಾನದಲ್ಲಿ ಆಟ ಆಡುತ್ತಾ ಹಸಿವಾದರೆ ಕೆಲವು ಸಂದರ್ಭದಲ್ಲಿ ಮಣ್ಣು ಅಹಾರ ಆಗುವುದು ಉಂಟು. ಹೀಗೆ ಬಡತನದ ಕಷ್ಟದ ಪುಟಗಳನ್ನು ಬಿಚ್ಚಿಡುತ್ತಾ ಹೋದರೆ ಅದೊಂದು ನಿರಂತರ ಪ್ರಕ್ರಿಯೆ.

ಗುಂಡ್ಲುಪೇಟೆ ಕೆ.ಬಿ.ರಾಚಯ್ಯ ಮಂಟೇಸ್ವಾಮಿ ಕಥೆ ಮಾಡುವುದರಲ್ಲಿ ತುಂಬ ಹೆಸರು ಮಾಡಿದ್ದಾರೆ. ಇವರು ಈಗಿಲ್ಲ ಅವರ ಪರಂಪರೆಯನ್ನು ಆರ್.ಸಿದ್ದರಾಜುರವರು ಮುಂದುವರಿಸಿಕೊಂಡು ಹೋಗುತ್ತಿದ್ದಾರೆ. ಇವರ ಜೊತೆ ಮೂವತ್ತು ವರ್ಷಗಳ ಕಾಲ ಊರೂರ ಮೇಲೆ ಸುತ್ತಿ ಕಲಿತ್ತಿರುವ ಕಥೆಗಳು ಮಂಟೇಸ್ವಾಮಿ ಕಥೆ, ಮಹದೇಶ್ವರನಕಥೆ, ನಂಜುಂಡೇಶ್ವರನ ಕಥೆ, ಬಾಲ್ನಾಗಮ್ಮನ ಕಥೆ, ಮೈದಾಳರಾಮನ ಕಥೆ, ಬಸವಣ್ಣನವರ ಕಥೆ, ಬಿಳಿಗಿರಿ ರಂಗಸ್ವಾಮಿ ಕಥೆ ಇಷ್ಟು ಕಥೆಗಳನ್ನು ಮಾಡುತ್ತಾರೆ.

೪. ಶಬ್ದರೂಪಗಳು

೧. ಅಡಗಲ್ಲು	–	ಕಬ್ಬಿಣ ಬಡಿಯಲು ಸಹಾಯಕವಾದ ಗಟ್ಟಿ
೨. ಅಕ್ಷಿಪಕ್ಷಿ	–	ಅಕ್ಕಿಪಕ್ಕಿ
೩. ಅಸ್ತಾಂಗ	–	ಸೂರ್ಯ ಮುಳುಗುವುದು
೪. ಆಗಣೆ	–	ಆಜ್ಞೆ
೫. ಅಂಗಾಲ ಜಡೆ	–	ನೀಳ ಕೇಶ
೬. ಆಕಾರರೂಪ	–	ವಿಕಾರರೂಪ
೭. ಅಟ್ಟುಗುಂಡು	–	ಓಡಿಸಿಕೊಂಡು
೮. ಅಳ್ಳಿಕಡ್ಡಿ	–	ಅರಳುಕಡ್ಡಿ
೯. ಇದ್ಯೆಕಾರ	–	ಮಾಟಮಂತ್ರ
೧೦.ಇಜ್ಜಲುಮನೆ	–	ಇದ್ದಿಲು ತುಂಬಿದ ಮನೆ
೧೧.ಈಬತ್ತಿ	–	ವಿಭೂತಿ
೧೨.ಈಜಿ ಬಂದಂತೆ	–	ಜಾರಿ ಬಂದಂತೆ
೧೩.ಉಳುಮೆ ಮನೆ	–	ಪಾಳುಬಿದ್ದ ದೇವಾಲಯ
೧೪.ಉಪ್ಪೆಸರು	–	ಹಸಿಕಾರದ ಸಾರು
೧೫.ಉಗನಿ ಹಂಬು	–	ಒಂದು ಬಗೆಯ ಬಳ್ಳಿ
೧೬.ಉಬ್ಬೆ ಒಲೆ	–	ಬಟ್ಟೆ ಬೇಯಿಸುವ ಒಲೆ
೧೭.ಉರಿಗದ್ದಿಗೆ	–	ಪವಿತ್ರಪೀಠ
೧೮.ಉಳ್ಳುಸೇವೆ	–	ಉರುಳು ಸೇವೆ
೧೯.ಉಲ್ಪೆ	–	ಕಾಣಿಕೆ
೨೦.ಊರಂಕ	–	ಊರ ಮುಂದೆ
೨೧.ಎಕ್ಕತ್ತು	–	ಕುತ್ತಿಗೆ
೨೨.ಎಲ್ಕ	–	ಎಲ್ಲ

೨೩.ಎಳೆತ	–	ಹೊಡೆತ
೨೪.ಎಳೆಗುದ್ಲಿ	–	ಸಣ್ಣ ಗುದ್ಲಿ
೨೫.ಐಲಾಟ	–	ಹುಚ್ಚುತನ
೨೬.ಐಲ	–	ಹುಚ್ಚು
೨೭.ಒಕ್ಕಳ	–	ಹತ್ತು ಸೇರು
೨೮.ಕಂಡಾಯ	–	ಮಂಟೇಸ್ವಾಮಿ ಹಿಡಿದಿದ್ದ ಆಯುಧ
೨೯.ಕಟ್ಟ	–	ಕಷ್ಟ
೩೦.ಕಸ್ಲಿ	–	ಬೆಂಕಿ ಹಚ್ಚಿ
೩೧.ಕಂತೆಬೊಂತೆ	–	ಜೋಳಿಗೆ
೩೨.ಕರೆ	–	ಕೆರೆ
೩೩.ಕರವ	–	ಕರೆವ
೩೪.ಕಾಲಗ್ನಾನ	–	ಕಾಲಜ್ಞಾನ
೩೫.ಕ್ವಾಣ	–	ಕೋಣ
೩೬.ಕುಂಡ್ಸಿ	–	ಕೂರಿಸಿ
೩೭.ಕುರುಗಳು	–	ಕುರಿಗಳು
೩೮.ಕೂಚುಮಾಡಿ	–	ಶಬ್ದ ಮಾಡಿ
೩೯.ಕಪ್ಪು ಧೂಳ್ತ	–	ಮಹಿಮಾಹಿಮರಿತವಾದ ಧೂಳ್ತ
೪೦.ಕಳ್ಳು	–	ಕರುಳು
೪೧.ಕಳಗು	–	ಕಳಹು
೪೨.ಗಲಗು	–	ಸದ್ದು
೪೩.ಗಳಗು	–	ಪಕ್ಷಿಗಳ ಸದ್ದು
೪೪.ಗ್ವಾಡೆ	–	ಗೋಡೆ
೪೫.ಗುಡ್ಡ	–	ಶಿಶುಮಗ
೪೬.ಗುಳಿ	–	ಕುಳಿ
೪೭.ಫಳಿನಿಲ್ಲ	–	ತಿಳಿನಿಲ್ಲ
೪೮.ಚಕ್ಕಳ	–	ಚರ್ಮ

೪೯.ಚಂದ್ರ ಶಾಲೆ	–	ತಾಳ ತಂಬೂರಿ ಇಡುವ ಸ್ಥಳ
೫೦.ಚಕಮಕಿ	–	ಕಲ್ಲು ತಾಕಿದಾಗ ಉಂಟಾಗುವ ಬೆಂಕಿ
೫೧.ಚಣ	–	ಕ್ಷಣ
೫೨.ಚೆಮ್ಮಾಳಿಗೆ	–	ಚಪ್ಪಲಿ
೫೩.ಜಲದಿ	–	ನೀರು
೫೪.ಜಲುಮ	–	ಜನ್ಮ
೫೫.ಜಿನ	–	ದಿನ
೫೬.ಜಾಗಿರುಕೊಡುವುದು	–	ಜಮೀನು ಕೊಡುವುದು
೫೭.ಜಾಂಬವ	–	ಕರಡಿ
೫೮.ಜೋಳಿಗೆ	–	ಮೂರು ಪಾದದ ಚೀಲ
೫೯.ಡಿಕ್ಕಿ	–	ಚರ್ಮವಾದ್ಯ
೬೦.ತಂಬಡಿ	–	ಪೂಜಾರಿ
೬೧.ತೋತ್ರ	–	ಸ್ತೋತ್ರ
೬೨.ತಬಸು	–	ತಪಸ್ಸು
೬೩.ತಾಮ್ರದ ಚಪ್ಪೋಡು	–	ತಾಮ್ರದ ಶಾಸನ
೬೪.ತಿಷ್ಣೆ	–	ಸೃಷ್ಟಿ
೬೫.ತುರಿಗೆಂಡ	–	ದೊಡ್ಡ ಬೆಂಕಿಕೆಂಡ
೬೬.ತುರುವೆ ಕೆಂಡ	–	ಉರಿಬೆಂಕಿ ಕೆಂಡ
೬೭.ತ್ರಿಷ್ಣೆ	–	ಸೃಷ್ಟಿ
೬೮.ದಬಕ	–	ಹಾರೆ
೬೯.ದಾಳ	–	ಬಾವುಟ
೭೦.ದುಂಡುಡುಗ	–	ಸೀರೆಯನ್ನು ಮುಂದುಗಡೆ ನೆರಿ ಹಾಕುವುದು
೭೧.ನಡ್ಡಟ್ಟಿ	–	ಅಂಗಳ
೭೨.ನೊರನೊರನೇ	–	ಹಲ್ಲು ಕಚ್ಚುವುದು
೭೩.ನಾದಸಪ್ತ	–	ಶಬ್ದ

೭೪.ನಿಶಾನಿ – ಬಾವುಟ

೭೫.ನೀಲಿಗ್ಯಾನ – ಅಮಲು

೭೬.ಬಸಟ್ಟಿಸಿದ್ದ – ಸಪ್ತ್ರಾಯಪಟ್ಟದ ಏಳುಜನ ಸಿದ್ದರಲ್ಲಿ ಒಬ್ಬ

೭೭.ಪಾರದವರು – ಪಹರೆಯವರು

೭೮.ಪೈಲ್‌ಗಳು – ಭಿಕ್ಷುಕರು

೭೯.ಬಿಜಗೈ – ಆಗಮಿಸುವುದು

೮೦.ಬಗಲು – ಕಂಕಳು

೮೧.ಬೆರಳಿ – ಬೆಳ್ಳಿ

೮೨.ಬರಗ – ಹುಲಿ

೮೩.ಭರ್ಗ – ಗಂಡು ಹುಲಿ

೮೪.ಮರಗೆಸ – ಮರಗೆಲಸ

೮೫.ಮರಖಗುಡ್ಡೆ – ಮರದ ಮೇಲೆ ಒಣಗಿಸುವುದು

೮೬.ಮೂಡಚಾರಿ – ಮೂಡಲ ದಿಕ್ಕು

೮೭.ಯಮಸಳಿ – ದಿಢೀರ್ ಜ್ವರ

೮೮.ರಾವಳ – ರಾವಣ

೮೯.ವ್ಯಾಳ್ಯ – ಸಮಯ

೯೦.ಶೇಷ – ಎಂಜಲು

೯೧.ಸೀತಾಳ – ಚಪ್ಪರ

೯೨.ಸತ್ತಿಗ – ಕೊಡೆ

೯೩.ಸೂಲು – ಉಸಿರು

೯೪.ಸಾಸ – ಸಾಹಸ

೯೫.ಸಂದೆ – ಸಂಜೆ

೯೬.ಹಾಲುಸಾಗ್ರ – ಶ್ರೀಮಂತಿಕೆ

೯೭.ಹಂತಿ – ಪಂಕ್ತಿ

೯೮.ಹೆಗ್ಗುಲುಮೆ – ದೊಡ್ಡ ಕುಲುಮೆ

೫. ಶಬ್ದಸೂಚಿ

ಆತುಮದಲ್ಲಿ
ಅರಳಿಕಟ್ಟೆ ಜಗಲಿ
ಅಂಬಿಗರ ಚೌಡಯ್ಯ
ಆದಿಕಲ್ಯಾಣ
ಇಜ್ಜಲುಮನೆ
ಈಬತ್ತಿ
ಎಕ್ಕದಹಾಲು
ಉಡುದಾರ
ಉರಿಗದ್ದಿಗೆ
ಉರ್ಸಿಂಗೀಕೊರಡು
ಉಲ್ಲೆಚರ್ಮ
ಉಕ್ಕಿನ ಕುದುರೆ
ಎಳನೀರು
ಐಲು
ಒಕ್ಕಲು
ಕಂಡುಗ
ಕಂತೆಬೊಂತೆ
ಕಜ್ಜಿಕೀವು
ಕಪ್ಪಡಿ
ಕರಿಕಂಬಳಿ
ಕಲ್ಯಾಣಪಟ್ಟಣ
ಕಲ್ಲುಬಸವ
ಕಾಳಿಕಾದೇವಿ
ಕಾಳಿಕಂಕಾಳಿ
ಕಿವುಡು ಮಾರಿ
ಕುರುಬರ ಬೀರಪ್ಪ
ಕುರಿದೊಡ್ಡಿ
ಕೆಂಪ

ಅಲ್ಲಮಪ್ರಭು
ಅಡಗಲ್ಲು
ಅಂಡ
ಆದಿಶಕ್ತಿ
ಇರುಳು ಕತ್ತಲ ರಾಜ್ಯ
ಈಡಿಗರ ಕ್ಯಾತಪ್ಪ
ಎಳ್ಳುಂಡೆ
ಉತ್ತೆದೇಸ
ಉರಿಹಸ್ತ
ಹುಲಿಚರ್ಮ
ಉಗನಿಅಂಬು
ಎಲಗುದ್ದಲಿ
ಎಟ್ಟು
ಐಷಾರಾಮಿ ಮುದ್ದಮ್ಮ
ಒಕ್ಕಲಿಗರ ಮುದ್ದಯ್ಯ
ಕಂಡಾಯ
ಕಜ್ಜಾಯ
ಕಟುಗರ ಸಂಗಯ್ಯ
ಕಪ್ಪಧೂಳ್ತ
ಕಲಿಪುರುಷ
ಕಾಮಜೇನು
ಕಲ್ಯಾಣಿಕೊಳ
ಕಾರ್ತಿಕ ಸೋಮವಾರ
ಕಾಲಗ್ನಾನ
ಕಿಡುಗಣ್ಣರಾಚಪ್ಪಾಜಿ
ಕುಂಟುಮಾರಿ
ಕುರುಬನಕಟ್ಟೆ
ಕೆಂಪಣ್ಣ

ಕೆಂಪಾಚಾರಿ
ಕ್ವಾರಣ್ಯ
ಘನನೀಲಿ
ಚಿಕ್ಕಲ್ಲೂರು
ಜಾಗಟೆ
ಡಂಗೂರ
ತಲಕಾಡು ಮಾಲಂಗಿಮಡು
ತುರುಕರಪೀರಯ್ಯ
ದಾಸ
ದೇವಮಾನ್ರು
ನಾಗಬೆತ್ತ
ನಿಡುಘಟ್ಟ
ಪರಂಜ್ಯೋತಿ
ಪಾವರ್ತಿ
ಪೀಕದಾನಿ
ಬಸವಣ್ಣ
ಬ್ರಹ್ಮದೇವ
ಭೂಮಿತಾಯಿ
ಮಲೆಯಾಳ ದೇವತೆ
ಮಾದಿಗರ ಚೆನ್ನಯ್ಯ
ಮಿರ್ಲೆ
ಮುದ್ದಮ್ಮ
ಮೋಡಿ ಆಟ
ರಣಮೋಡಿ
ರಾಜಬೊಪ್ಪೇಗೌಡನಪುರ
ಶನಿಪರಮಾತ್ಮ
ಸಿದ್ದರು
ಸುರಪಾನದಗಡಿಗೆ
ಹಲಗೂರು
ಹೊನ್ನಾಯ್ಕನಹಳ್ಳಿ

ಕೊಡೆಕಲ್ಲು
ಕೊರವಂಜಿ
ಚಂದ್ರಶಾಲೆ
ಚೆನ್ನಾಜಮ್ಮ
ಜೋಳಿಗೆ
ಡಮರುಗ
ತಾಮ್ರದ ಚಪ್ಪೋಡು
ತೋಪಿನದೊಡ್ಡಮ್ಮ
ಧರೆಗೆದೊಡ್ಡವರು
ದೊಡ್ಡಮ್ಮತಾಯಿ
ನಾಗರಾವು
ನೀಲಲೋಚನೆ
ಪರಸಾದ
ಪಾತಾಳಬಾವಿ
ಫಲಾರದಯ್ಯ
ಬಸವಾಚಾರಿ
ಭಂಗಿಸೊಪ್ಪು
ಮಲ್ಲಿಗೆ ಮಾದೇವಮ್ಮ
ಮಳವಳ್ಳಿ ಏಳಿಗೆ
ಮಾಚಪ್ಪ
ಮುತ್ತತ್ತಿರಾಯ
ಮೂಗುಮಾರಿ
ಮೋಡಿಗಾರರು
ರಾಚಪ್ಪಾಜಿ
ವೀರಭದ್ರಸ್ವಾಮಿ
ಸಾಲಿಗ್ರಾಮ
ಸುಂಕದಮಾರಮ್ಮ
ಹರಳಯ್ಯ
ಹೊಂಬಾಳೆ
ಹೊನ್ನುತ್ತ

೬. ಅರ್ಥಸೂಚಿ

೧. ಅಕ್ಷಿಪಕಿ	–	ಅಕ್ಕಿಪಕ್ಕಿ
೨. ಅಳ್ಸಿ	–	ಕೆಡಿಸಿ
೩. ಅವಸಾಂಗವಾಗಿ	–	ಸಮೃದ್ಧಿಯಾಗಿ
೪. ಉಳುಮೆಮನೆ	–	ಪಾಳುಬಿದ್ದ ದೇವಾಲಯ
೫. ಜಾಂಬವ	–	ಕರಡಿ
೬. ಬೆಂಕಿಕಸ್ಸಿ	–	ಬೆಂಕಿಹಚ್ಚಿ
೭. ಕರೆ	–	ಕೆರೆ
೮. ಕುಂಡ್ಸಿ	–	ಕೂತು
೯. ಕುರುಗಳು	–	ಕುರಿಗಳು
೧೦.ಕಲಭಾರೆ	–	ಬಂಡೆಗಾತ್ರದಷ್ಟು
೧೧.ಗಳಗು	–	ಪಕ್ಷಿಗಳ ಸದ್ದು
೧೨.ಘಳಿನಿಲ್ಲ	–	ತಿಳಿಯಲಿಲ್ಲ
೧೩.ತಮೆಯ	–	ಕೊಪ್ಪರಿಕೆ ಒಳಗೆ
೧೪.ತುಮ್ಮತುಮ್ಮನೆ	–	ಜಿಗಿದು ಜಿಗಿದು ಕುಣಿಯುವುದು
೧೫.ತಿಷ್ಣೆ	–	ಸೃಷ್ಟಿ
೧೬.ದೊಂಬೆ	–	ನವಿಲುಗರಿ
೧೭.ನೊರನೊರನೆ	–	ಹಲ್ಲು ಕಚ್ಚುವುದು
೧೮.ನಿಲ್ಲಿಗೆ ತಂದು	–	ಪಕ್ಕಕ್ಕೆ ತಂದು
೧೯.ಪೈಗಳು	–	ಭಿಕ್ಷುಕರು
೨೦.ಬ್ರಮೋಕ್ಷ	–	ಶಿಕ್ಷೆಯಾಗುವವನು
೨೧.ಮರಖಿಗುಡ್ಡೆ	–	ಮರದ ರಂಭೆ
೨೨.ಮರಗೆಲಸ	–	ಮರದ ಮೇಲೆ ಚಿತ್ತಾರ ಬಿಡಿಸುವ ಕೆಲಸ
೨೩.ಮಲ್ಲೋದವಂತೆ	–	ಚನ್ನಾಗಿ ಕಾದಿರುವುದು
೨೪.ರಾಡಬಾಗಿಲು	–	ಊರ ಮುಂದಿನ ಬಾಗಿಲು
೨೫.ಸೋಸೆ	–	ಸೊಸೆ

೭. ಪರಾಮರ್ಶನ ಗ್ರಂಥಗಳು

೧. ಜೀ. ಶಂ. ಪರಮಶಿವಯ್ಯ – ೧೯೭೧ ಜನಪದ ಕಾವ್ಯಕಥೆಗಳು

೨. ಜೀ.ಶಂ. ಪರಮಶಿವಯ್ಯ – ೧೯೭೩ ಶ್ರೀಮಂಟೇಸ್ವಾಮಿಕಾವ್ಯ

೩. ಜೀ.ಶಂ. ಪರಮಶಿವಯ್ಯ – ೧೯೭೯ ದಕ್ಷಿಣಕರ್ನಾಟಕ ಜಾನಪದ ಕಾವ್ಯಪ್ರಕಾರ (ಸಂಶೋಧನಾಗ್ರಂಥ)

೪. ಟಿ.ಎಂ. ಪರಶಿವಮೂರ್ತಿ – ೧೯೮೦ ಧರೆಗೆದೊಡ್ಡವರ ಕಾವ್ಯ

೫. ಎಚ್.ಎಸ್.ಶಿವಪ್ರಕಾಶ್ – ೧೯೯೫ ಮಂಟೇಸ್ವಾಮಿ ಕಥಾಪ್ರಸಂಗ (ನಾಟಕ)

೬. ವೆಂಕಟೇಶ ಇಂದ್ವಾಡಿ – ೧೯೯೬ ಧರೆಗೆದೊಡ್ಡವರ ಕತೆ

೭ ಹಿ.ಚಿ.ಬೋರಲಿಂಗಯ್ಯ – ೧೯೯೭ ಮಂಟೇಸ್ವಾಮಿ

೮. ಎಂ.ಎನ್. ಮಂಜುಳಾದೇವಿ – ೧೯೯೭ ಧರೆಗೆದೊಡ್ಡವರು ಮಂಟೇಸ್ವಾಮಿ

೯. ಡಿ. ಆರ್. ನಾಗರಾಜ್ – ೧೯೯೯ ಅಲ್ಲಮ ಮತ್ತು ಶೈವಪ್ರತಿಭೆ

೧೦. ಶಿವಾನಂದ ವಿರಕ್ತಿಮಠ – ೨೦೦೦ ವಚನಸ್ವರ ವಚನ (ಮಂಟೇಸ್ವಾಮಿ ಕಾಲಜ್ಞಾನ ವಚನ)

೧೧. ವೀರಸಂಗ್ಯನ – ನಂದಿ ಆಗಮಲೀಲೆ

೧೨. ವೆಂಕಟೇಶ ಇಂದ್ವಾಡಿ – ಸಾಂಸ್ಕೃತಿಕ ಪದಗಾರ – ನೀಲಗಾರರು (ಕನ್ನಡ ವಿಶ್ವವಿದ್ಯಾನಿಲಯ, ಹಂಪಿ ಪ್ರಸಾರಾಂಗ)

೧೩. ಸಂ:ವೆಂಕಟೇಶ ಇಂದ್ವಾಡಿ – ೨೦೦೪ ಮಂಟೇಸ್ವಾಮಿ ಕಾವ್ಯ ಸಾಂಸ್ಕೃತಿಕ ಮುಖಾಮುಖಿ

೧೪. ತಮ್ಮಪ್ಪಮೂರ್ತಿ – ಧರೆಗೆದೊಡ್ಡವರು (ಮೊದಲ ಮುದ್ರಣ)

೧೫. ಮಹಾದೇವು ಶಂಕನಪುರ – ಮಂಟೇಸ್ವಾಮಿ ಮೂಮೆಂಟ್

೧೬. ಮಹಾದೇವು ಶಂಕನಪುರ – ಚಿಕ್ಕಲ್ಲೂರು

೧೭. ವೆಂಕಟೇಶ ಇಂದ್ವಾಡಿ – ೧೯೯೯ ಮಂಟೇಸ್ವಾಮಿ ಪರಂಪರೆ

ಸಂದರ್ಶಿಸಿದ ಕ್ಷೇತ್ರಗಳು

ಕ್ರ. ಸಂ.	ಕ್ಷೇತ್ರಕಾರ್ಯ ಕೈಗೊಂಡ ಅವಧಿ	ಕ್ಷೇತ್ರಕಾರ್ಯ ಕೈಗೊಂಡ ಪ್ರದೇಶ	ಸಂದರ್ಶನ ಮತ್ತು ಮಾಹಿತಿದಾರರ	ಒಟ್ಟು ಸಂದರ್ಶಿಸಿದ ಕ್ಷೇತ್ರಗಳ ವಿವರ	ದಕ ಧ್ವನಿಮುದ್ರಿಸಿ ಕೊಂಡ ಒಟ್ಟು ಪಠ್ಯಗಳು ಮತ್ತು ಅವುಗಳ ಗಾತ್ರ	ಪಡೆದು ಕೊಂಡಿರುವ ಒಟ್ಟು ಛಾಯಾ ಚಿತ್ರಗಳು	ಆಡಿಯೋ ವೀಡಿಯೋ ಮಾಡಿ ಕೊಂಡಿರುವ ಪಠ್ಯಗಳ ಸಂಖ್ಯೆ ಮತ್ತು ಅವುಗಳ ಗಾತ್ರ	ಈಗಾಗಲೇ ಸಿದ್ಧವಾಗಿರುವ ನೀಲಗಾರರ ಜೀವನಚರಿತ್ರೆ
೧.	ಸೆಪ್ಟಂಬರ್ ತಿಂಗಳು (೧–೯–೦೬ ೩೦–೯–೦೬ (ಒಂದು ತಿಂಗಳು ಮಾತ್ರ)	ಚಾಮರಾಜ–ನಗರ ಜಿಲ್ಲೆಯ ಕೊಳ್ಳೇಗಾಲ ಮತ್ತು ಯಳಂದೂರು ತಾಲ್ಲೂಕು.	ಹದಿಮೂರು ಜನ ನೀಲಗಾರರು (೧೩)	೧.ಕುರುಬನಕಟ್ಟೆ ಶ್ರೀಕ್ಷೇತ್ರ ೨.ಚಿಕ್ಕಲ್ಲೂರುಸಿದ್ದಪ್ಪಾಜಿ ಶ್ರೀಕ್ಷೇತ್ರ ೩.ಕುಂತೂರು ಗ್ರಾಮ ೪.ಸಿದ್ದಯ್ಯನಪುರ ಗ್ರಾಮ ೫.ತಿಮ್ಮರಾಜಪುರ ಗ್ರಾಮ ೬.ಕೊಳ್ಳೇಗಾಲ ಮೋಳೆ ೭.ಮಾಂಬಳ್ಳಿ ಗ್ರಾಮ ೮.ಕುಂತೂರುಮೋಳೆ ೯.ಚಿಲಕವಾಡಿ ಗ್ರಾಮ ೧೦.ಉತ್ತೂರು ಗ್ರಾಮ ೧೧.ದೊಡ್ಡಿಂದುವಾಡಿ – ಗ್ರಾಮ ೧೨.ಯಳಂದೂರು ೧೩.ಕೃಷ್ಣಾಪುರ ಗ್ರಾಮ ೧೪.ಮಲ್ಲಿಗಹಳ್ಳಿ	ಕುಂತೂರು ಕಾಳ ಶೆಟ್ಟರು ಹಾಡಿರುವ ಮಂಟೇಸ್ವಾಮಿ ಕಥೆಯ ಆದಿಭಾಗವನ್ನು ಒಂದು ಧ್ವನಿಸುರುಳಿಯಲ್ಲಿ ಮುದ್ರಿಸಿಕೊಳ್ಳಲಾಗಿದೆ.	ಹದಿಮೂರು (೧೩)	ಆಡಿಯೋ ಮಾಡಿಕೊ–ಂಡಿರುವ ಪಠ್ಯ ಸಂ ೩ ಗಾತ್ರ ೨೦೦ ಪುಟಗಳು	ಪ್ರಾಥಮಿಕ ಮಾಹಿತಿಯ ಆಧಾರದ ಮೇಲೆ ಹದಿಮೂರು ಜನ ನೀಲಗಾರ ಕಲಾವಿದರ ಜೀವನ ಚರಿತ್ರೆಯನ್ನು ಸಿದ್ಧಗೊಳಿ–ಸಲಾಗಿದೆ.

೨.	ಜನವರಿ ತಿಂಗಳು ೧-೧-೦೭ ೨೧-೧-೦೭ (ಒಂದು ತಿಂಗಳು ಮಾತ್ರ)	ಚಾಮರಾಜ ನಗರ ಜಿಲ್ಲೆಯ ಗುಂಡ್ಲುಪೇಟೆ ಮತ್ತು ಚಾಮರಾಜ ನಗರ ತಾಲ್ಲೂಕು	ಹತ್ತೊಂಭತ್ತು ಜನ ನೀಲಗಾರರು (೧೯)	೧.ದೊಡ್ಡಮೋಳೆ ಗ್ರಾಮ ೨.ಮಲೆಯೂರು ಗ್ರಾಮ ೩.ಯರಗನಹಳ್ಳಿ ೪.ಹೊಂಗನೂರು ಗ್ರಾಮ ೫.ಕಾಲನುಂಡಿ ಗ್ರಾಮ ೬.ಅಮಚವಾಡಿ ಗ್ರಾಮ ೭.ಬಂಡಿಗೆರೆಗ್ರಾಮ ೮.ಚಾಮರಾಜನಗರ ೯.ರಾಮಸಮುದ್ರ ಟೌನ್ ೧೦.ದೊಡ್ಡರಾಯ ಪೇಟೆ ೧೧.ಕಬ್ಬೇಪುರ ಗ್ರಾಮ ೧೨.ದೇವರಹಳ್ಳಿ ೧೩.ಗುಂಡ್ಲುಪೇಟೆ ೧೪.ಯರಿಯೂರು ೧೫.ಆಲತ್ತೂರು ಗ್ರಾಮ ೧೬.ಮೂಡುಗುರು ೧೭.ತೆರಕನಾಂಬಿ	ಕಬ್ಬೇಪುರ ಶ್ರೀ ಸಿದ್ಧರಾಜು ರವರು ಹಾಡಿರುವ ಮಂಟೇಸ್ವಾಮಿ ಕಾವ್ಯದ ಪೂರ್ಣ ಭಾಗವನ್ನು ಒಟ್ಟು ಹತ್ತು ಧ್ವನಿಸುರುಳಿಯಲ್ಲಿ ಮುದ್ರಿಸಿ ಕೊಳ್ಳಲಾಗಿದೆ.	ಹತ್ತೊಂಭತ್ತು (೧೯)	ಆಡಿಯೋ ಮಾಡಿಕೊ-ಂಡಿರುವ ಪಠ್ಯ ಸಂಖ್ಯೆ – ೩ ಗಾತ್ರ ೧೫೦ ಪುಟಗಳು	ಪ್ರಾಥಮಿಕ ಮಾಹಿತಿಯ ಆಧಾರದಮೇಲೆ ಹತ್ತೊಂಭತ್ತು ಜನ ನೀಲಗಾರ ಕಲಾವಿದರ ಜೀವನ ಚರಿತ್ರೆಯನ್ನು ಸಿದ್ಧಗೊಳಿಸ ಲಾಗಿದೆ.
೩.	ಏಪ್ರಿಲ್ ತಿಂಗಳು ೧೬-೪-೦೭ ೩೧-೫-೦೭	ಚಾಮರಾಜ ನಗರ ಮತ್ತು ಮಂಡ್ಯ ಜಿಲ್ಲೆಗಳ ಮುಖ್ಯ ನೆಲೆಗಳಲ್ಲಿ	ಹತ್ತು ಜನ ನೀಲಗಾರ (೧೦)	೧.ದೊಡ್ಡಿಂದುವಾಡಿ ೨.ಹನೂರು ೩.ರಾಮಾಪುರ ೪.ಮಹದೇಶ್ವರ ಬೆಟ್ಟ ೫.ಯಳಂದೂರು	ಉಳ್ಳಂಬಳ್ಳಿ ಮಹದೇವು ಅವರು ಹಾಡಿರುವ ಮಂಟೇಸ್ವಾಮಿ ಕಾವ್ಯದ ಆದಿ	ಹತ್ತು (೧೦)	ಆಡಿಯೋ ಮಾಡಿಕೊಂಡಿರುವ ಪಠ್ಯ ಸಂ ೪ ಗಾತ್ರ	ಪ್ರಾಥಮಿಕ ಮಾಹಿತಿಯ ಆಧಾರದಮೇಲೆ ಹತ್ತು ಜನ ನೀಲಗಾರ


	(ಒಂದುವರೆ ತಿಂಗಳು			೬.ಹೊಂಗನೂರು ೭.ಕೆಂಪನಪಾಳ್ಯ ೮.ಯೆರಿಯೂರು ೯.ಮಳವಳ್ಳಿ ೧೦.ಗೌಡಗೆರೆ ೧೧.ಕೀರ್ತಿನಗರ ೧೨.ಮಂಡ್ಯ ೧೩.ಅಮಚವಾಡಿ ೧೪.ಹೊನ್ನಾಯಕನ ಹಳ್ಳಿ ೧೫.ನಿಡುಘಟ್ಟ	ಭಾಗವನ್ನು ಒಟ್ಟು ಐದು ಧ್ವನಿಸುರುಳಿಯಲ್ಲಿ ಮುದ್ರಿಸಿಕೊಳ್ಳಲಾಗಿದೆ.		೧೨೦ ಪುಟಗಳು	ಕಲಾವಿದರ ಜೀವನ ಚರಿತ್ರೆಯನ್ನು ಸಿದ್ಧಗೊಳಿಸ ಲಾಗಿದೆ.
೪.	ಆಗಸ್ಟ್ ೧೬-೦೭ ರಿಂದ ಸೆಪ್ಟೆಂಬರ್ ೨೧-೦೭ರ ವರೆಗೆ	ಬೆಂಗಳೂರು ಗ್ರಾಮಾಂತರ ಮತ್ತು ಮಂಡ್ಯ ಜಿಲ್ಲೆಗಳಲ್ಲಿನ ಮುಖ್ಯ ನೆಲೆಗಳಲ್ಲಿ	ಹನ್ನೆರಡು ಜನ ಕಲಾವಿದರು (೧೨)	೧.ಗಾಣಾಳು ಗ್ರಾಮ ೨.ಕೋನಮಾನ ಹಳ್ಳಿ ೩.ಚೋರಮಾರನ ಹಳ್ಳಿ ೪.ಶಿವನ ಹಳ್ಳಿ ೫.ಕೆ.ಎಮ್.ದೊಡ್ಡಿ ೬.ಗೌಡಗೆರೆ ಗ್ರಾಮ ೭.ಕೀರ್ತಿನಗರ ೮.ಮಾರೇಹಳ್ಳಿ ೯.ಅಪ್ಪಗೆರೆ ೧೦.ಅಂಕಳ್ಳಿ ಗ್ರಾಮ ೧೧.ಮಳವಳ್ಳಿ	ಕೃಷ್ಣಾಪುರ ಎಂ.ಮಹದೇವ ಸ್ವಾಮಿ ಅವರು ಹಾಡಿರುವ ಸಿದ್ದಪ್ಪಾಜಿ ಪಾವಾಡ ಕಥಾ ಭಾಗವನ್ನು ಅಂದರೆ ಒಟ್ಟು ಐದು ಧ್ವನಿಸುರುಳಿಯಲ್ಲಿ ಮುದ್ರಿಸಿಕೊಳ್ಳಲಾಗಿದೆ.	ಹನ್ನೆರಡು ಜನ ನೀಲಗಾರ ಕಲಾವಿದರು (೧೨)	ಆಡಿಯೋ ಮಾಡಿ ಕೊಂಡಿರುವ ಪಠ್ಯ ಸಂ ೩ ಗಾತ್ರ ೧೦೦ ಪುಟಗಳು.	ಪ್ರಾಥಮಿಕ ಮಾಹಿತಿಯ ಆಧಾರದಮೇಲೆ ಹನ್ನೆರಡು ಜನ ನೀಲಗಾರ ಕಲಾವಿದರ ಜೀವನಚರಿತ್ರೆಯ -ನ್ನು ಸಿದ್ಧಗೊಳಿಸ- ಲಾಗಿದೆ

೫.	ಜನವರಿ ಒಂದು ತಿಂಗಳು ೧.೧.೦೮ ೨೧.೧.೦೮	ಮೈಸೂರು ಜಿಲ್ಲೆಯ ಮುಖ್ಯ ನೆಲೆಗಳಲ್ಲಿ	೧.ಬನ್ನೂರು ೨.ಕೆಸರೆ ೩.ಟಿ.ನರಸೀಪುರ ೪.ಕೆಸರೆ ೫.ಮಾದಿಗಳ್ಳಿ ೬.ಮೂಗೂರು ೭.ಹೊಸಹಳ್ಳಿ ೮.ಬಸವನಹಳ್ಳಿ	೧.ಕೆಂಪಮ್ಮ ೨.ಗುರುರಾಜೆ ೩.ಮಂಟಯ್ಯ ೪.ಕುಂಬಾರ ನಾರಾಯಣ ೫.ಪಾರ್ವತಮ್ಮ ೬.ಸಿದ್ದಮ್ಮ ೭.ಸರೋಜಮ್ಮ ೮.ಗುರುಸಿದ್ದಯ್ಯ	ಎಂಟು ಜನ ನೀಲಗಾರ ಕಲಾವಿದರು (೮)	ಆಡಿಯೋ ಮಾಡಿ ಕೊಂಡಿರುವ ಪಠ್ಯ ಸಂ ೫ ಗಾತ್ರ ೨೦೦ ಪುಟಗಳು.	ಪ್ರಾಥಮಿಕ ಮಾಹಿತಿಯ ಆಧಾರದ ಮೇಲೆ ಎಂಟು ಜನ ನೀಲಗಾರ ಕಲಾವಿದರ ಜೀವನಚರಿತ್ರೆಯ –ನ್ನು ಸಿದ್ಧಗೊಳಿಸ –ಲಾಗಿದೆ
೬	ಜನವರಿ ೧.೧.೦೯ ೩೧.೧.೦೯ ಒಂದು ತಿಂಗಳು ಮಾತ್ರ	ಮಂಟೇಸ್ವಾಮಿ ಪರಂಪರೆಯ ಮುಖ್ಯ ನೆಲೆಗಳಲ್ಲಿ	ಮಂಡ್ಯ ಚಾಮರಾಜನಗರ ಮೈಸೂರು ರಾಮನಗರ ಬೆಂಗಳೂರು ಗ್ರಾಮಾಂತರ ಇತ್ಯಾದಿ	ಒಟ್ಟು ೯೫ ಛಾಯಾ ಚಿತ್ರಗಳು	ಸ್ಥಳನಾಮಗಳ ಬಗ್ಗೆ ಮಾಹಿತಿ ದೊರಕಿಸಿಕೊಳ್ಳ ಲಾಯಿತು.	ಛಾಯಾಚಿತ್ರ ಗಳನ್ನು ಅನುಕೂಲಕ್ಕಾಗಿ ಜತನಪಡಿಸ –ಲಾಗಿದೆ.	ಯೋಜನೆಯ


ಛಾಯಾ ಚಿತ್ರಗಳು



ಕುರುಬನ ಕಟ್ಟೆ ಲಿಂಗಯ್ಯ ಚೆನ್ನಯ್ಯ ಗದ್ದುಗೆ




ಚಿಕ್ಕಲ್ಲೂರಿನ ಚಂದ್ರಮಂಡಲದ ಕಟ್ಟೆ




ನೀಲಗಾರ ದೀಕ್ಷೆ



ಕೃಷ್ಣಾಪುರ ಎಂ. ಮಹದೇವಸ್ವಾಮಿ



ಬೊಪ್ಪೇಗೌಡನ ಪುರದ ಮಂಟೇಸ್ವಾಮಿ ಮಠದ ರಾಜಪ್ರಭುಸ್ವಾಮಿ ಶ್ರೀ ಜ್ಞಾನೇಶು
ಚನ್ನರಾಜೇಅರಸ್ ಮಹಾಸ್ವಾಮಿಗಳು



ಹಲಗೂರು ಪವಾಡ



ಬನ್ನೂರು ಕೆಂಪಮ್ಮ ಮತ್ತು ತಂಡ




ಇಂದ್ವಾಡಿ ರಾಜಮ್ಮ (ನೀಲಗಾರ್ತಿ)



ಕೆಬ್ಬೇಪುರ ಸಿದ್ದರಾಜು



ಗೌಡಗೆರೆ ಶಿವಮಾದಯ್ಯ ಮತ್ತು ತಂಡ



ಉಳ್ಳಬಂಳ್ಳಿ ಮಹದೇವು ಮತ್ತು ತಂಡ



ಪೂರಿಗಾಲಿ ಮಾದೇವಸ್ವಾಮಿ ಮತ್ತು ತಂಡ




ಇಂದ್ವಾಡಿ ಬಸವಯ್ಯ



ಶಿವಪುರ ಬಸವಯ್ಯ




ಮಣಿ ನಾಯಕ್ ಮತ್ತು ಲಕ್ಷ್ಮಣ್‌ನಾಯಕ್



ಅಂಧ ಕಲಾವಿದ ಅಂಕಳ್ಳಿ ಸಿದ್ದಯ್ಯ



ಗಾಣಾಳು ಲಕ್ಷ್ಮಣ್ (ರಾಮನಗರ)



ಕುರುಬನ ಕಟ್ಟೆಯ ಮುಖ್ಯದ್ವಾರದಲ್ಲಿ ನೀಲಗಾರ ಕಲಾವಿದರು



ಮಳವಳ್ಳಿ ಗುರುಬಸವಯ್ಯ



ಗಾಣಾಳು ಪುಟ್ಟಮಾದಯ್ಯ

ನಮ್ಮ ಪ್ರಕಟಣೆಗಳು

ಕ್ರ.ಸಂ.	ಕೃತಿಯ ಹೆಸರು ಲೇಖಕ/ ಸಂಪಾದಕರ ಹೆಸರು	ಬೆಲೆ
೧.	ಇಂದಿನ ಕನಸು ನಾಳಿನ ನನಸು *ಸಂ : ಪ್ರೊ. ಅಂಬಳಿಕೆ ಹಿರಿಯಣ್ಣ*	೧೦೦.೦೦
೨.	ಜಾನಪದ ವರ್ಷ–೨೦೧೧ *ಸಂ : ಡಾ. ಎಸ್.ಪಿ. ಪದ್ಮಪ್ರಸಾದ್*	೧೦೦.೦೦
೩.	ಜಾನಪದ ವಸ್ತುಕೋಶ *ಸಂ : ಪ್ರೊ. ಸ.ಚಿ. ರಮೇಶ*	೧೪೦.೦೦
೪.	ಕೇರಳದ ಜನಪದವೀರ ತಚ್ಚೋಳಿ ಒದೇನನ್ *ಡಾ. ಕೆ. ಕಮಲಾಕ್ಷ*	೧೪೦.೦೦
೫.	ಕಾಡುಗೊಲ್ಲರ ಕೋಲಾಟದ ಪದಗಳು *ಸಂ : ಮೋಹನಕುಮಾರ ಎನ್.*	೮೦.೦೦
೬.	ತುಳುನಾಡಿನ ಜನಪದ ಕತೆಗಳು *ಸಂ : ಡಾ. ಪಾಲ್ತಾಡಿ ರಾಮಕೃಷ್ಣ ಆಚಾರ್*	೧೦೦.೦೦
೭	ಕರ್ನಾಟಕ ಸಂಶೋಧನ ಜಾನಪದ *ಸಂ : ಪ್ರೊ.ಎ.ವಿ. ನಾವಡ*	೯೫೦.೦೦
೮.	ಮಲೆನಾಡ ನುಡಿಕೋಶ *ಸಂ : ವೇಣಾಕ್ಷಿ ಎಸ್.ಡಿ.*	೧೫೦.೦೦
೯.	ಬುರ್ರಕಥಾ ಜಯಮ್ಮ *ಡಾ. ಕೆ. ಪ್ರೇಮಕುಮಾರ*	೪೦.೦೦
೧೦.	ಗೊಂಬೇಗೌಡರ ರಾಮನಗೌಡರು *ಡಾ. ಚಂದ್ರಪ್ಪ ಸೊಬಟಿ*	೮೦.೦೦
೧೧.	ನಮ್ಮ ಪರಿಸರದ ಲಂಬಾಣಿಗರು *ಡಾ. ಮಲ್ಲಿಕಾರ್ಜುನ ಕುಂಬಾರ*	೬೦.೦೦
೧೨.	ಕಾಡುಗೊಲ್ಲರ ಬೆಡಗಿನ ಪದಗಳು *ಸಂ : ಶ್ವೇತಾ ಎಂ.ಬಿ., ಶ್ರೀ ಮೋಹನಕುಮಾರ್ ಎನ್.*	೬೦.೦೦
೧೩.	ಹುಮಾಯೂನ್ ಹರಲಾಪುರ *ಡಾ. ವೃಷಭಕುಮಾರ*	೬೦.೦೦
೧೪.	ಅಪ್ಪಗೆರೆ ತಿಮ್ಮರಾಜು *ಶ್ವೇತಾ ಎಂ.ಬಿ.*	೮೦.೦೦
೧೫.	ನೆಲದ ನೆನಪು *ಡಾ. ಜಯಪ್ರಕಾಶ್ ಶೆಟ್ಟಿ ಹೆಚ್, ಡಾ. ಚಿಕ್ಕಮಗಳೂರು ಗಣೇಶ*	೨೦೦.೦೦

೧೬. ನಮ್ಮ ಗಿಡಮರಬಳ್ಳಿಗಳು
ಶಾಂತಿ ನಾಯಕ ೪೦.೦೦

೧೭. ದೇಶೀಯ ಕೃಷಿ ಹತೋಟಿ ಮತ್ತು ಸಂರಕ್ಷಣಾ ಕ್ರಮಗಳು
ಸಂ : ಪ್ರೊ. ಪ್ರಕಾಶ ಕಮ್ಮರಡಿ ೧೦೦.೦೦

೧೮. ಜಾನಪದ ವರ್ಷ–೨೦೧೨
ಸಂ : ಡಾ. ಕೆ.ವಿ. ಮುದ್ದವೀರಪ್ಪ ೧೨೦.೦೦

೧೯. ದಕ್ಷಿಣ ಭಾರತೀಯ ದೇಶೀ ಕೃಷಿವಿಜ್ಞಾನ ಕೋಶ (ಎರಡು ಸಂಪುಟಗಳು ಸೇರಿ)
ಪ್ರ.ಸಂ : ಪ್ರೊ. ಅಂಬಳಿಕೆ ಹಿರಿಯಣ್ಣ ೧೦೦೦.೦೦
ಕಾ.ನಿ.ಸಂ : ಪ್ರೊ. ಆರ್ವಿಯಸ್ ಸುಂದರಂ,
ಸಂ : ಪ್ರೊ. ಸ.ಚಿ. ರಮೇಶ

೨೦. ವಿಸ್ತೃತ ಜಾನಪದ ಗ್ರಂಥಸೂಚಿ (ಎರಡು ಸಂಪುಟಗಳು ಸೇರಿ)
ಪ್ರ.ಸಂ : ಪ್ರೊ. ಅಂಬಳಿಕೆ ಹಿರಿಯಣ್ಣ ೭೦೦.೦೦
ಸಂ : ಶ್ರೀ ಕ್ಯಾತನಹಳ್ಳಿ ರಾಮಣ್ಣ, ಶ್ರೀ ಟಿ.ಎಸ್. ರಾಜಪ್ಪ

೨೧. ಮೂಲತಾನದ ನಾಗಬ್ರಹ್ಮ ಮತ್ತು ಪರಿವಾರ ದೈವಗಳ ಪಾಡ್ದನ
ಸಂ : ಡಾ. ಇಂದಿರಾ ಹೆಗ್ಗಡೆ ೧೫೦.೦೦

೨೨. ಉತ್ತರ ಕನ್ನಡ ಕರಾವಳಿಯ ಜನಪದ ಕತೆಗಳು
ಸಂ : ಶಾಂತಿ ನಾಯಕ ೧೨೦.೦೦

೨೩. **Manteswamy Epic Tradition of South Karnataka**
Prof. Ambalike Hiriyanna ೨೮೦.೦೦

೨೪. **Dakshinatya Abhinaya Siddhanta**
Dr. Guru Rao Bapat ೧೦೦.೦೦

೨೫. ನಾಡವರ ಜಾನಪದ ತವನಿಧಿ
: ಪ್ರೊ. ಎನ್.ಆರ್. ನಾಯಕ ೨೬೦.೦೦

೨೬. **The Bayalatas of North Karnataka**
Dr. Basavaraja Malashetty
Translated by: Dr. Parvathi G. Aithal ೧೩೦.೦೦

೨೭. ತಾತ್ಯಾ–ಬಾಪು ಅವರ ಲಾವಣಿಗಳು
ಸಂ : ಡಾ. ಹರಿಲಾಲ ಪವಾರ ೮೦.೦೦

೨೮. ಪೂಜಾರಿ ಶಿವಣ್ಣ ಹೇಳಿದ ಜುಂಜಪ್ಪ ಮಹಾಕಾವ್ಯ
ಸಂ : ಡಾ. ತೀ.ನಂ. ಶಂಕರನಾರಾಯಣ, ಡಾ. ಎಂ.ಎನ್. ವೆಂಕಟೇಶ್ ೧೭೦.೦೦

೨೯. ಬೆಳಗಲ್ಲು ವೀರಣ್ಣ
ಡಾ. ಎಂ.ಎನ್. ವೆಂಕಟೇಶ್ ೭೦.೦೦

೩೦. ಮಂಜಮ್ಮ ಜೋಗತಿ
ಡಾ. ಚಂದ್ರಪ್ಪ ಸೊಬಟಿ ೮೦.೦೦

೩೧. ಡಾ. ಪಿ.ಕೆ. ರಾಜಶೇಖರ
ಸಂಗಮೇಶ ಎಸ್. ಗಣಿ ೧೨೦.೦೦

೩೨. ಜಾನಪದ ಅಧ್ಯಯನ
ಅಲನ್ ಡಂಡೆಸ್ ೩೦೦.೦೦

೩೩. ದಕ್ಷಿಣ ಕರ್ನಾಟಕದ ಮಂಟೇಸ್ವಾಮಿ ಕಾವ್ಯ ಪರಂಪರೆ ೨೦೦.೦೦

೩೪. ಜಾನಪದ ಜಗಲಿ (ಸಂಶೋಧನಾ ಅರ್ಧವಾರ್ಷಿಕ ಪತ್ರಿಕೆ)
ಸಂಚಿಕೆ–೧, ೨, ೩ & ೪
ಬಿಡಿ ಪ್ರತಿಗೆ ೫೦.೦೦

ಒಂದು ದೇಶದ ಸಂಸ್ಕೃತಿಯನ್ನು ಸಮಗ್ರವಾಗಿ ಅರ್ಥಮಾಡಿಕೊಳ್ಳಬೇಕೆಂದರೆ ಪ್ರತಿಸಂಸ್ಕೃತಿ ಮತ್ತು ಪರ್ಯಾಯ ಸಂಸ್ಕೃತಿ ನೆಲೆಯ ಅಧ್ಯಯನ, ಸಂಶೋಧನೆಗಳು ಅಗತ್ಯವಾಗಿ ನಡೆಯಬೇಕಾಗಿದೆ. ಸಾಹಿತ್ಯದ ಅಧ್ಯಯನ ಕ್ಷೇತ್ರದಲ್ಲಿ ಶಿಷ್ಟ ಮಹಾಕಾವ್ಯಗಳನ್ನು ಮಾತ್ರ ಲಕ್ಷಿಸಿ ಅಧ್ಯಯನಗಳನ್ನು ನಡೆಸಿರುವುದು ಏಕಮುಖಿ ಕ್ರಮ ಎಂಬುದು ಈಗ ಸರ್ವರಿಗೂ ಮನವರಿಕೆ ಆಗಿದೆ. ಆದರೆ ಪ್ರಸಕ್ತ ದಿನಗಳಲ್ಲಿ ಈ ಏಕಮುಖಿ ಅಧ್ಯಯನದ ಪರಿಕಲ್ಪನೆಯು ಹಿಂದೆ ಸರಿದು, ಪ್ರಯೋಜನಾತ್ಮಕವಾಗಿರುವ ಸಂಸ್ಕೃತಿ ಅಧ್ಯಯನದ ಮಾದರಿಗಳು ಮುನ್ನೆಲೆಗೆ ಬಂದಿವೆ. ಈ ಹಿನ್ನೆಲೆಯಲ್ಲಿ ನೆಲಮೂಲಜ್ಞಾನ, ಪರಂಪರೆ, ಅನನ್ಯತೆಗಳನ್ನು ತನ್ನ ಒಡಲಲ್ಲಿರಿಸಿಕೊಂಡಿರುವ ಜನಪದ ಮಹಾಕಾವ್ಯಗಳು ಸಂಸ್ಕೃತಿಯ ಸಮಗ್ರತೆಯನ್ನು ಅರಿತುಕೊಳ್ಳಲು ಇರುವ ಮೂಲ ಆಕರಗಳು ಎಂಬ ನಿಲುವಿಗೆ ಬರಲಾಗಿದೆ. ಸಂಸ್ಕೃತಿಯನ್ನು ಶೋಧಿಸುವ ಮಾರ್ಗಕೃತಿಗಳಾಗಿ ಜನಪದ ಮಹಾಕಾವ್ಯಗಳು ಮುಖ್ಯವೆನಿಸುತ್ತವೆ. ಇವುಗಳ ಸಾಲಿನಲ್ಲಿ ಮಂಟೇಸ್ವಾಮಿ ಕಾವ್ಯ ಮಹತ್ವದ್ದು ಎನಿಸುತ್ತದೆ. ಮಂಟೇಸ್ವಾಮಿ ಕಾವ್ಯದ ವಿಶಿಷ್ಟತೆಯನ್ನು, ಸಾಂಸ್ಕೃತಿಕ ಅನನ್ಯತೆಯನ್ನು ಗುರುತಿಸುವ, ಶೋಧಿಸುವ ಅಧ್ಯಯನಗಳು ಕರ್ನಾಟಕದಲ್ಲಿ ಈವರೆಗೆ ಸಾಕಷ್ಟು ನಡೆದಿವೆ. ಆದರೂ ಮಂಟೇಸ್ವಾಮಿ ಪರಂಪರೆಯನ್ನು ಆಮೂಲಾಗ್ರವಾಗಿ ಕಂಡರಿಸುವ ಪ್ರಯತ್ನಗಳು ನಡೆದಿರುವುದು ವಿರಳ. ಈ ಕಾವ್ಯಪರಂಪರೆಯನ್ನು ಬಹುಮುಖೀ ದಾಖಲೀಕರಣ, ಪಠ್ಯೀಕರಣ ಮತ್ತು ವಿಶ್ಲೇಷಣೆಗೆ ಒಳಪಡಿಸುವ ಹಾಗೂ ಭಾಷಾಂತರಿಸುವ ಮಾದರಿ ಅಧ್ಯಯನಗಳು ಈವರೆವಿಗೂ ನಡೆಯದಿರುವುದು ಜಾನಪದ ಕ್ಷೇತ್ರದ ಬಹುದೊಡ್ಡ ಕೊರತೆಯೇ ಆಗಿದೆ. ಈ ನಿಟ್ಟಿನಲ್ಲಿ ಮಂಟೇಸ್ವಾಮಿ ಕಾವ್ಯ ಸಂಪ್ರದಾಯದ ಪಠ್ಯಗಳು, ಶಬ್ದರೂಪ, ಶಬ್ದಸೂಚಿ, ಅರ್ಥಸೂಚಿ ಮುಂತಾದ ಕವಲುಗಳಲ್ಲಿ ಹರಡಿಕೊಂಡಿರುವ ಇಲ್ಲಿಯ ಬರವಣಿಗೆ ಈ ಕೊರತೆಯನ್ನು ತುಂಬಿಕೊಡುವ ಪ್ರಯತ್ನ ಮಾಡಿದೆ. ಆ ಮೂಲಕ ಮಂಟೇಸ್ವಾಮಿ ಪರಂಪರೆಯನ್ನು ಜೊತೆಗೆ ಕನ್ನಡದ ಸಾಂಸ್ಕೃತಿಕ ಅನನ್ಯತೆಯನ್ನೂ ದಾಖಲಿಸುವ ಮಹತ್ವದ ಪ್ರಯತ್ನ ಇಲ್ಲಿ ಯಶಕಂಡಿದೆ. ಅಲ್ಲದೆ, ನಮ್ಮ ನಾಡಿನ ಜನಪದ ಸಂಸ್ಕೃತಿಯ ಬಹುತ್ವವನ್ನು ಪುನರ್‌ನಿರ್ವಚಿಸುವ ಯತ್ನವೂ ಈ ಮೂಲಕ ನಡೆದಿರುವುದು ಗಮನಾರ್ಹ.

ಪ್ರೊ. ಅಂಬಳಿಕೆ ಹಿರಿಯಣ್ಣ
ಕುಲಪತಿ

ISBN 978-93-83149-32-2

ವಿಸ್ತರಣೆ ಹಾಗೂ ಸಲಹಾ ಕೇಂದ್ರ
ಕರ್ನಾಟಕ ಜಾನಪದ ವಿಶ್ವವಿದ್ಯಾಲಯ

₹ : ೨೦೦/-

Printed at : Raja Printers, Bangalore-27, Ph.: 22234066